# THE BOOK WAS DRENCHED

UNIVERSAL LIBRARY
OU_198674
UNIVERSAL LIBRARY

**OSMANIA UNIVERSITY LIBRARY**

Call No. K923.5 P46K Accession No. K2443

Author కందుకూరి, వి. లి.

Title పీరకురాము భాష్యం -- ఉపదేశ జీవిత చరిత్రము - 1915

This book should be returned on or before the date last marked below.

# ಅರ್ಪಣಪತ್ರಿಕೆಯು.

ಶ್ರೀಮಂತ

ರಾಜಶ್ರೀ ಪರಶುರಾಮರಾವ ಭಾವೂಸಾಹೇಬ

ಪಟವರ್ಧನ ಸರಕಾರ ಜಮಖಂಡಿ

ಇವರ ಚರಣಕಮಲಗಳಿಗೆ-

ಶ್ರೀಮಂತರಲ್ಲಿ ವಾಸವಾಗಿರುವ ಅಸಂಖ್ಯ ಸದ್ಗುಣಗಳಿಗೆ

ಲುಬ್ಧನಾದ ನನ್ನಿಂದ ಕೃತಜ್ಞತಾಪೂರ್ವಕವಾಗಿ

ಶ್ರೀಮಂತರ ಅನುಜ್ಞೆಯಿಂದ

ಈ ಚರಿತ್ರೆಯು

ಅತ್ಯಂತ ಪ್ರೇಮಬುದ್ಧಿಯಿಂದ

ಸಮರ್ಪಿಸಲ್ಪಟ್ಟಿರುತ್ತದೆ.

ವಿಧೇಯ ಚರಿತ್ರ-ಲೇಖಕ.

ಶ್ರೀರಾಮ.

# ಪ್ರಸ್ತಾವನೆಯು.

ಇತಿಹಾಸ' ಇದು ಆಗಿಹೋದ ಸಂಗತಿಗಳನ್ನು ಪ್ರತ್ಯಕ್ಷವಾಗಿ ತೋರಿಸುವ ಕನ್ನಡಿಯಂತಿರುವದು. ಇತಿಹಾಸದ ಸಹಾಯದಿಂದ ಸಾವಿರಾರು ವರ್ಷಗಳ ಹಿಂದೆ ಸಂಘಟಿಸಿದ ಅನೇಕ ಮಹತ್ಕೃತ್ಯಗಳ ಯಥಾರ್ಥ ಜ್ಞಾನವು ಆಗುವದಲ್ಲದೆ, ಆಗಿನ ಕಾಲದ ಸರ್ವಸಾಧಾರಣ ಜನರ ಸ್ಥಿತಿಗತಿಯೂ, ದೇಶದ ಸ್ವಾಭಾವಿಕ ಪರಿಸ್ಥಿತಿಯೂ ಗೊತ್ತಾಗಿ, ತತ್ಕಾಲಿನ ಸಾಧುಸಂತ, ವಿದ್ವಾಂಸ, ವೀರಶಿರೋಮಣಿ ಇತ್ಯಾದಿ ಮಹಾಪುರುಷರ ಪ್ರಚೀತಿಯು ಆಗುವದು. ಈ ಪ್ರಕಾರ ಇತಿಹಾಸಾವಲೋಕನೆಯಿಂದ ಗತಕಾಲದ ಯಥಾರ್ಥಸ್ವರೂಪವು ತಿಳಿದು, ಅದರ ಬೆಂಬಲದಿಂದ ವರ್ತಮಾನಸ್ಥಿತಿಯನ್ನು ಸುಧಾರಿಸಿಕೊಂಡು ಭಾವೀ ಉತ್ಕರ್ಷದ ಅಸ್ತಿವಾರವನ್ನು ಸ್ಥಿರಗೊಳಿಸಲು ಅನುಕೂಲವಾಗಿರುವದು. ಈ ನಮ್ಮ ಆರ್ಯಭೂಮಿಯಾದ ಭಾರತ ದೇಶದ ಇತಿಹಾಸದ ಪ್ರಾರಂಭವು ಸಾವಿರಾರು ವರ್ಷಗಳ ಹಿಂದೆ ಆಗಿರುವದೆಂದು ಸರ್ವರೂ ಒಪ್ಪತಕ್ಕ ಮಾತಾಗಿರುವದು. ಈ ನಮ್ಮ ದೇಶದ ಇತಿಹಾಸದಲ್ಲಿ ಸ್ಥೂಲಮಾನದಿಂದ ೧ ವೇದಕಾಲ, ೨ ಪುರಾಣಕಾಲ, ೩ ಬುದ್ಧಕಾಲ, ೪ ಮುಸಲ್ಮಾನರಕಾಲ, ೫ ಮಹಾರಾಷ್ಟ್ರಕಾಲ, ೬ ಆಂಗ್ಲಕಾಲ ಎಂಬ ಭಾಗಗಳನ್ನು ಮಾಡಬಹುದು. ಈ ಮೇರೆಗೆ ವಿಂಗಡಿಸಲ್ಪಟ್ಟಿರುವ ಆಯಾ ಕಾಲಗಳ ಮರ್ಯಾದೆಯಲ್ಲಿ ಭಗವದಿಚ್ಛಾನುಸಾರವಾಗಿ ಕಾಲಕ್ಕೆ ತಕ್ಕ ಮಹನೀಯರು ಉದಯರಾಗಿ ತಮ್ಮ ಭಾವೀ ಪ್ರಜೆರ ಮೇಲೆ ಅನೇಕಾನೇಕ ಉಪಕಾರಗಳನ್ನು ಮಾಡಿ ಚಿರಕೀರ್ತಿಯನ್ನು ಪಡೆದು ಅಮರರಾಗಿರುವರು.

ಅದರಂತೆ ೫ನೆಯದಾದ ಮಹಾರಾಷ್ಟ್ರರ ಕಾಲದಲ್ಲಿ ಶ್ರೀರಾಮದಾಸ, ತುಕಾರಾಮ ಮುಂತಾದ ಸಾಧುಸಜ್ಜನರೂ, ರಾಮಶಾಸ್ತ್ರಿ ಇತ್ಯಾದಿ ವಿದ್ವಜ್ಜನರೂ, ಶಿವಾಜಿ, ಬಾಜಿರಾವ ಒಲ್ಲಾಳೆ ಮೊದಲಾದ ವೀರಪುರುಷರೂ ಆಗಿಹೋದರು. ಅವರು ಸ್ವಾರ್ಥವನ್ನು ಲೆಕ್ಕಿಸದೆ, ಕೇವಲ ಪರೋಪಕಾರದ ಸಲುವಾಗಿ ತಮ್ಮ ತನು-ಮನ-ಧನಗಳನ್ನು ಸಮರ್ಪಿಸಿ ಲೋಕಮಾನ್ಯತೆಯನ್ನು ಹೊಂದಿರುವರು. ಈ ಕಾಲದ ಅಂತ್ಯಭಾಗದಲ್ಲಿಯಂತೂ ಅಸಂಖ್ಯ ಪರಾಕ್ರಮಿ ಪುರುಷರು ಉದಯರಾಗಿ ಮಹಾರಾಷ್ಟ್ರರ ವರ್ಚಸ್ಸನ್ನು ದಿಗಂತದಲ್ಲಿ ಹಬ್ಬಿಸಿ ಪ್ರಖ್ಯಾತಿಯನ್ನು ಪಡೆದಿರುವರು. ಇಂಥ ಶೂರಾ

ಗ್ರೇಸರರಲ್ಲಿ ಒಬ್ಬರಾದ ಶ್ರೀಮಂತ ಪರಶುರಾಮಪಂತ ಭಾವೂಸಾಹೇಬ ಪಟವರ್ಧನ ಇವರ ಸಾಗ್ರ್ರಚರಿತ್ರೆಯನ್ನು ಕನ್ನಡದಿಂದ ಒರೆದು ಉದಾರಹೃದಯರಾದ ವಾಚಕರ ಮುಂದೆ ಇರಿಸಿರುವೆನು.

ಈ ಜಗದ್ವಿಖ್ಯಾತ ಪುರುಷನ ಕುಲವೃತ್ತಾಂತ ಇತ್ಯಾದಿ ವಿಷಯಗಳು ಮುಖ್ಯ ಚರಿತ್ರೆಯಲ್ಲಿ ಯಥಾಸಾಂಗವಾಗಿ ವರ್ಣಿಸಲ್ಪಟ್ಟಿರುವದರಿಂದ ಅವುಗಳ ಬಗ್ಗೆ ಈ ಪ್ರಸ್ತಾವನೆಯಲ್ಲಿ ಉಲ್ಲೇಖಿಸುವ ಗೊಡವಿಗೆ ಹೋಗಿರುವದಿಲ್ಲ. ಈ ಮಹಾಭಾಗನ ಪವಿತ್ರ ಚರಿತ್ರೆಯನ್ನು ಮೊದಲು ಮ॥ ರಾ॥ ರಾ॥ ಭಿಕಾಜಿ ಧೊಂಡದೇವ ನಿಗುಡಕರ ಎಂಬುವ ಸದ್ಗೃಹಸ್ಥರು ಮರಾಠಿಯಲ್ಲಿ ಬರೆದಿರುವರು. ಅವರು ಬರೆದ ಆ ಪ್ರಶಸ್ತ ಪುಸ್ತಕವನ್ನೇ ಆದರ್ಶರೂಪವಾಗಿಟ್ಟುಕೊಂಡು ಈ ಕನ್ನಡ ಪರಿವರ್ತನೆಯನ್ನು ಮಾಡಿರುವೆನು. ಆದರೂ ಮ॥ ರಾ॥ ರಾ॥ ಸಹಸ್ರಬುದ್ಧೆ ಎಂಬುವವರು ಬರೆದ ಚರಿತ್ರೆಯನ್ನೂ, ಪೇಶವೆ ಇತಿಹಾಸ, ಹಂಟರ್ಸ್, ಕಿಂಕಲೇರ ಮೊದಲಾದ ಆಂಗ್ಲೇತಿಹಾಸಕಾರರ ಉದ್ಗ್ರಂಥಗಳನ್ನೂ ಓದಿ ಅವುಗಳಿಂದ ದೊರೆತ ಉಪಯುಕ್ತವಾದ ಹೆಚ್ಚಿನ ವಿಷಯಗಳನ್ನು ಅಲ್ಲಲ್ಲಿ ಸೇರಿಸಿರುವೆನು. ಮಹಾರಾಷ್ಟ್ರ ಭಾಷೆಯ ಶಬ್ದಶ: ಭಾಷಾಂತರ ಮಾಡದೆ, ಕನ್ನಡಭಾಷಾಶೈಲಿಗನುಸರಿಸಿ ಈ ಚರಿತ್ರೆಯನ್ನು ಬರೆದು ಪ್ರಸಿದ್ಧಗೊಳಿಸುವದರಲ್ಲಿ ಬಂದದೆ. ಈ ಪುಸ್ತಕವು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ ಮಂಜೂರಾಗಿದ್ದು ಈ ಬಗ್ಗೆ ಮುಂಬೈ ಇಲಾಖೆಯ ವಿದ್ಯಾಖಾತೆಯವರು ಪ್ರತಿವರ್ಷ ಕೊಡುತ್ತಿರುವ ಗ್ರ್ಯಾಂಟಿನಲ್ಲಿ ೫೦ ರೂಪಾಯಿಗಳ ಇನಾಮು ಉತ್ತೇಜನಾರ್ಥವಾಗಿ ಸಿಕ್ಕಿರುವದು. ಇದಲ್ಲದೆ ಜಮಖಂಡಿ ಸಂಸ್ಥಾನದ ಪ್ರಸ್ತುತ ರಾಜಕರ್ತರಾದ **ಶ್ರೀಮಂತ ಪರಶುರಾಮರಾವ** ಭಾವುಸಾಹೇಬ ಇವರು ಪರಮ ಪ್ರೇಮಪುರಸ್ಸರವಾಗಿ ಈ ಗ್ರಂಥದ ಸಮರ್ಪಣೆಯನ್ನು ಅಂಗೀಕರಿಸಿ ಅತ್ಯಂತ ಉದಾರಬುದ್ಧಿಯಿಂದ ೨೦೦ ರೂಪಾಯಿಗಳ ಬಹುಮಾನವನ್ನು ಕೊಟ್ಟಿರುವರು. ಈ ಪ್ರಕಾರ ಧಾರವಾಡದ ಕ. ವಿ. ವ. ಸಂಘದ ಸಹಾಯದಿಂದ ಮುಂಬೈ ವಿದ್ಯಾಖಾತೆಯ ಮಹದಾಶ್ರಯವನ್ನು ಪಡೆದು ಶ್ರೀಮಂತ ಜಮಖಂಡೀಕರರ ವರದಹಸ್ತದಿಂದ ಪ್ರಸಿದ್ಧವಾದ ಈ ಪುಸ್ತಕವು ಲೋಕಾಶ್ರಯವನ್ನು ಹೊಂದಿ ಅವರ ಪ್ರೀತಿಪಾತ್ರವಾದರೆ ಗ್ರಂಥಕರ್ತನ ಪ್ರಯತ್ನವು ಸಫಲವಾದಂತಾಗುವದು. ಈ ಪುಸ್ತಕವನ್ನು ಬರೆಯುವ ಬಗ್ಗೆ ನನ್ನನ್ನು ಪ್ರೋತ್ಸಾಹಗೊಳಿಸಿದ ಮ॥ ರಾ॥ ರಾ॥ ತಮ್ಮಾಜಿ ನಾರಾಯಣ

ಅಪ್ಪೂನಭಾವಿ ಮತ್ತು ಸ್ವಾಮಿರಾವ ರಾಮಚಂದ್ರ ನೆಗಳೂರ ಇವರಿಗೂ, ಹಾಗೂ ಇದನ್ನು ಮುದ್ರಿಸಿ ಪ್ರಸಿದ್ಧಗೊಳಿಸುವ ಮಹತ್ಕಾರ್ಯದಲ್ಲಿ ಕೆಲಮಟ್ಟಿಗೆ ಧನರೂಪದಿಂದ ನೆರವಾದ ನರಗುಂದದ ಉದಾರ ಮನಸ್ಸಿನ ಸಭ್ಯಗೃಹಸ್ಥರಾದ ಮ॥ ರಾ॥ ರಾ॥ ಗುರುಪಾದಪ್ಪ ದೊಡ್ಡಪ್ಪ ಹಸಬಿ ಮತ್ತು ವೆಂಕಪ್ಪ ಎಲ್ಲಪ್ಪ ಆನಿಗುಂದಿ ಇವರಿಬ್ಬರಿಗೂ, ಮತ್ತು ಜಮಖಂಡಿ ಸಂಸ್ಥಾನದ ಉದಾರಾಶ್ರಯವನ್ನು ಒದಗಿಸಿಕೊಟ್ಟ ಮ॥ ರಾ॥ ರಾ॥ ಕ್ರಿಷ್ಣಾಜಿ ಬಳವಂತ ಮೋಘೆ ಇವರಿಗೂ ನಾನು ತುಂಬಾ ಕೃತಜ್ಞನಾಗಿರುವೆನು. ಇವರಲ್ಲಿ ಮಿ. ನೆಗಳೂರ ಇವರು ಪರಲೋಕವಾಸಿಗಳಾಗಿರುವದರಿಂದ ಅವರ ಆತ್ಮವು ಚಿರಸುಖವನ್ನು ಹೊಂದಲೆಂತಲೂ, ಉಳಿದ ಉಪಕಾರ ಕರ್ತರು ಆಯುರಾರೋಗ್ಯಾಭಿವೃದ್ಧಿಯನ್ನು ಪಡೆಯಲೆಂತಲೂ ನಾನು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಮೇಲೆ ಹೇಳಿದ ಆರು ಕಾಲಗಳಲ್ಲಿ ಈಗ ೬ನೆಯದಾದ ಆಂಗ್ಲ-ಕಾಲವು ನಡೆಯುತ್ತಿರುವದು. ಈ ದಯಾಘನರಾದ ಆಂಗ್ಲರ ಯೋಗದಿಂದ ನಮ್ಮ ದೇಶದಲ್ಲಿ ಸುಖ–ಸಾಮ್ರಾಜ್ಯವು ಸ್ಥಿರವಾಗಿರುವದು; ವಿತ್ತ--ಜೀವಿತಗಳ ಸುರಕ್ಷಿತೆಯು ಅಪೂರ್ವವಾಗಿರುವದು. ಸುಖಸಾಧನದ ಮಾರ್ಗಗಳು ಅಸಂಖ್ಯವಾಗಿದ್ದು ಸರ್ವತ್ರ ಸಮಾಧಾನ--ಶಾಂತತೆಗಳು ನೆಲಗೊಂಡದರಿಂದ ಈ ನಮ್ಮ ಮಾತೃಭೂಮಿಯು ಸುಧಾರಣೆಯ ಅಂತಿಮ ಶಿಖರವನ್ನು ಮುಟ್ಟುತ್ತಿರುವದು. ಹೀಗೆ ಆಂಗ್ಲಸಾಮ್ರಾಜ್ಯದ ಪ್ರಭಾವದಿಂದ ನಮಗಾದ ಕಲ್ಯಾಣಕೃತ್ಯಗಳ ಗಣನೆಯನ್ನು ಮಾಡುವದು ನನಗಂತೂ ದುಸ್ತರವೇ ಸೈ. ಅವುಗಳ ಯಥಾರ್ಥ ವರ್ಣನೆಯನ್ನು ಮಾಡಲು ಒಂದು ಸ್ವತಂತ್ರ ಗ್ರಂಥವೇ ಬೇಕು. ಈ ಮೇರೆಗೆ ನಮ್ಮ ಹಿತಕ್ಕಾಗಿಯೇ ದೇವರ ಕೃಪೆಯಿಂದ ಸಂಸ್ಥಾಪಿತವಾದ ಆಂಗ್ಲ ಪ್ರಭುತ್ವವು ಉತ್ತರೋತ್ತರ ವಿಸ್ತೃತೆಯನ್ನು ಹೊಂದಲೆಂತಲೂ ಸಾಂಪ್ರತ ಬಾದಶಹರಾದ ಪರಮಪೂಜ್ಯ ಜಾರ್ಜಮಹಾರಾಜರವರ ಆಯುರಾರೋಗ್ಯಗಳು ಅಭಿವೃದ್ಧಿಗೊಳ್ಳಲೆಂತಲೂ, ಹಾಗೂ ಪ್ರಸ್ತುತ ಮಹಾಯುದ್ಧದಲ್ಲಿ ವಿಜಯಲಕ್ಷ್ಮಿಯು ಘನವಂತರಾದ ಬ್ರಿಟಿಶರನ್ನು ವರಿಸಲೆಂತಲೂ, ಮತ್ತು ದಯಾಶೀಲರಾದ ಆಂಗ್ಲೇಯರ ರಾಜಛತ್ರವನ್ನು ಆಶ್ರಯಿಸಿದ ಜಮಖಂಡಿ ಸಂಸ್ಥಾನವು ಚಿರಸ್ಥಾಯಿಯಾಗಲೆಂತಲೂ, ಅಲ್ಲಿಯ ಈಗಿನ ಒಡೆಯರಾದ ಶ್ರೀಮಂತ ಪರಶುರಾಮರಾವ ಇವರು ಸುಖಸಂತೋಷದಿಂದ ಬಹುದಿವಸ ರಾಜ್ಯವಾಳಲೆಂತಲೂ ಮತ್ತು ಕೇವಲ

ಭಾಷಾಸೇವೆಗಾಗಿ ಹೊರಟ ಕ. ವಿ. ವ. ಸಂಘವು ಊರ್ಜಿತಾವಸ್ಥೆಯನ್ನು ಹೊಂದಲೆಂತಲೂ ಶ್ರೀಸೀತಾಪತಿ ರಾಮಚಂದ್ರನ ಪಾದಾರವಿಂದಗಳನ್ನು ಮನಸಾ ಸ್ಮರಿಸಿ ಈ ಪ್ರಸ್ತಾವನೆಯನ್ನು ಮುಗಿಸುವೆನು.

ಸಜ್ಜನರೇ, ಈ ಪುಸ್ತಕವು ಶ್ರೀಮಹಾವೀರ ಮುದ್ರಣಾಲಯದಲ್ಲಿ ಮುದ್ರಿತವಾಗಿದ್ದು, ಮುದ್ರಣದೋಷ, ಹಸ್ತದೋಷಗಳಿಂದ ಅಲ್ಲಲ್ಲಿ ಹಲಕೆಲವು ತಪ್ಪುಗಳಾಗಿರುವವು; ಮೇಲಾಗಿ ಇದೇ ನನ್ನ ಪ್ರಥಮ ಪ್ರಯತ್ನವು. ಆದ್ದರಿಂದ ಕೆಲವೆಡೆಗಳಲ್ಲಿ ಕಂಡುಬರುವ ತಪ್ಪುತಡೆಗಳನ್ನು ಮನ್ನಿಸಿ ಪುಸ್ತಕದ ಸಾರವನ್ನು ಮಾತ್ರ 'ಹಂಸಕ್ಷೀರ' ನ್ಯಾಯದಂತೆ ಪರಿಗ್ರಹಿಸಬೇಕೆಂದು ಬಿನ್ನವಿಸುವದೇ ಪಾಮರನಾದ ನನ್ನ ಕೊನೆಯ ಪ್ರಾರ್ಥನೆಯು.

ನರಗುಂದ,
ತಾರೀಖು ೧ನೇ ಜುಲಾಯಿ ೧೯೧೫.

ಸಜ್ಜನ ವಿಧೇಯನಾದ,
ಗ್ರಂಥಕರ್ತ.

# ಶ್ರೀಮಂತ ಪರಶುರಾಮಪಂತ ಭಾವು ಪಟವರ್ಧನ ಇವರ ಚರಿತ್ರೆ.

## ೧ ನೇ ಅಧ್ಯಾಯಃ

### ಕುಲವೃತ್ತಾಂತ; ಭಾವೂನ ಜನನ.

ಈ ನಮ್ಮ ಪವಿತ್ರ ಭಾರತಭೂಮಿಯು ತನ್ನ ಅತುಲ ಧನ ಸಂಪತ್ತು, ಅದ್ವಿತೀಯ ಸೃಷ್ಟಿಸೌಂದರ್ಯ ಮೊದಲಾದವುಗಳ ಬಗ್ಗೆ ಪ್ರಾಚೀನಕಾಲದಿಂದ ಪ್ರಖ್ಯಾತಿಯನ್ನು ಹೊಂದಿರುವಂತೆ, ಅದು ಭಾರತೀಯರ ಅಸಾಧಾರಣ-ಬುದ್ಧಿಚಾತುರ್ಯ, ಅಲೌಕಿಕ-ಜ್ಞಾನವೈಭವ, ಅಪ್ರತಿಮ-ಧೈರ್ಯ, ಅಪರಮಿತ-ಪರಾಕ್ರಮ, ಅಸದೃಶ-ಶೌರ್ಯ ಮುಂತಾದ ಸದ್ಗುಣಗಳ ಬಗ್ಗೆ ಸಹ ಬಹು ವಿಖ್ಯಾತಿಯನ್ನು ಹೊಂದಿರುವದು. ಅರಿಸ್ಟಾಟಲನಂಥ ತತ್ವಜ್ಞಾನಿಗಳು, ಗ್ಯಾಲಿಲೋಯನನಿಗೆ ಸರಿಯಾದ ಜ್ಯೋತಿಷ್ಯಶಾಸ್ತ್ರಪ್ರವೀಣರೂ, ನ್ಯೂಟನನಂಥ ಗಣಿತಜ್ಞರೂ, ನೆಲಸನ್-ಬೋನಾಪಾರ್ಟರಿಗೆ ಸರಿಯಾದ ಮಹಾವೀರರೂ, ಪಿಟ್ಟ, ಗ್ಲ್ಯಾಡಸ್ಟನರಂಥ ರಾಜಕಾರ್ಯಧುರೀಣರೂ, ಆದ ಅನೇಕ ಪುರುಷಶ್ರೇಷ್ಠರು ಈ ನಮ್ಮ ಆರ್ಯಭೂಮಿಯಲ್ಲಿ ಆಗಿ ಹೋಗಿರುವರು. ಆ ನರೋತ್ತಮರು ತಮ್ಮ ಸತ್ಕೃತ್ಯ, ಸದ್ವರ್ತನ ಮತ್ತು ಪರಾಕ್ರಮ ಇವೇ ಮೊದಲಾದ ಗುಣಗಳ ಸಹಾಯದಿಂದ ತಮ್ಮ ಮಾತೃಭೂಮಿಯನ್ನು ಊರ್ಜಿತಾವಸ್ಥೆಗೆ ತಂದು, ತಾವು ಅಜರಾಮರವಾದ ಕೀರ್ತಿಯನ್ನು ಹೊಂದಿರುವರು ಇಂದಿಗೆ ಸುಮಾರು ಎರಡನೂರು ವರ್ಷಗಳ ಹಿಂದೆ, ಶ್ರೀಶಿವಛತ್ರಪತಿಯವರಿಂದ ಸ್ಥಾಪಿಸಲ್ಪಟ್ಟ ಹಿಂದೂ ಸಾಮ್ರಾಜ್ಯವು ರಾಜಕ್ರಾಂತಿ, ಪರಚಕ್ರ ಮುಂತಾದ ಎಡರುಗಳನ್ನು ದಾಟಿ, ಕಾಲಕ್ರಮದಿಂದ ಅದು ಶಾಹೂಮಹಾರಾಜರವರ ಆಳಿಕೆಯಲ್ಲಿ ಶ್ರೀವರ್ಧನ ಕುಲೋತ್ಪನ್ನರಾದ ಪೇಶವೆಯರ ಮಹದಾಶ್ರಯವನ್ನು ಹೊಂದಿತು. ಪೇಶ

ವೆಯರ ಕಾಲಕೀರ್ದಿಯಲ್ಲಿ ಮಹಾರಾಷ್ಟ್ರ-ಸಾಮ್ರಾಜ್ಯವು, ಅವರ ಕರ್ತೃತ್ವ ಶಕ್ತಿ, ಬುದ್ಧಿಸಾಮರ್ಥ್ಯ, ಭುಜಬಲಪರಾಕ್ರಮ ಮುಂತಾದವುಗಳ ಯೋಗ ದಿಂದ ಒಳ್ಳೇ ಅಭ್ಯುದಯವನ್ನು ಹೊಂದಿ, ಭರತಖಂಡದ ಪ್ರಮುಖ ರಾಷ್ಟ್ರಗಳಲ್ಲಿ ಅಗ್ರಗಣ್ಯತೆಯನ್ನು ಹೊಂದಿತ್ತು. ಆಗ್ಗೆ ಹಿಂದೂಸಾಮ್ರಾಜ್ಯದ ಮುಖ್ಯ ಚಾಲಕರಾದ ಪೇಶವೆಯರು ಪರರಾಯರೊಡನೆ ರಾಜನೀತಿಯಿಂದ ನಡೆದು, ಅವರು ತಲೆಯುತ್ತಿ ಗೊಂದಲವೆಬ್ಬಿಸುವದಕ್ಕೆ ಆಸ್ಪದಕೊಡಗೆ, ಪ್ರಜೆಗಳಿಗೆ ಸೌಖ್ಯವಾಗುವಂತೆ ಕೈಲಾದಷ್ಟು ಪ್ರಯತ್ನಿಸುತ್ತ, ರಾಜ್ಯಶಕಟವನ್ನು ನಡೆಸುತ್ತಿದ್ದರು. ಈ ಅವಧಿಯಲ್ಲಿ ಬುದ್ಧಿವೈಭವಸಂಪನ್ನರೂ, ರಾಜಕಾರ್ಯ ಧುರಂಧರರೂ, ಧೈರ್ಯಶಾಲಿಗಳೂ, ಪರಾಕ್ರಮಿಗಳೂ ಆದ ಅಸಂಖ್ಯ ಪುರುಷರು ಮಹಾರಾಷ್ಟ್ರದೇಶದಲ್ಲಿ ಹುಟ್ಟಿ ಮೇಲಾದ ಹೆಚ್ಚಳವನ್ನು ಹೊಂದಿದರು; ಇಂಥ ಮಹನೀಯರು ಉದಯರಾದುದರಿಂದ ಮಹಾರಾಷ್ಟ್ರರ ವರ್ಚಸ್ಸು ಸ್ವಲ್ಪಾವಧಿಯಲ್ಲಿ ಎಲ್ಲ ಕಡೆಗೂ ಪಸರಿಸಿ, ದೊಡ್ಡ ದೊಡ್ಡ ಪ್ರಾಂತಗಳು ಅವರ ಕೈವಶವಾದವು; ಅವರ ಯಶೋದುಂದುಭಿಯು ದೇಶಾಂತರಗಳಲ್ಲಿಯೂ, ದ್ವೀಪಾಂತರಗಳಲ್ಲಿಯೂ ಮೊಳಗತೊಡಗಿತು; ಇದೇ ಮಹಾರಾಷ್ಟ್ರರ ಸಂಪೂರ್ಣ ವೈಭವದ ಕಾಲವು. ಆಗ್ಗೆ ಮಹಾರಾಷ್ಟ್ರದೇಶದಲ್ಲಿ ಇದ್ದ ಶೂರ ಸರದಾರರಲ್ಲಿ ಪರಶುರಾಮಪಂತ ಭಾವು ಪಟವರ್ಧನನು ಅಗ್ರಗಣ್ಯನು. ಇಂಥ ಲೋಕೈಕವೀರಪುರುಷನ ನಿರ್ಮಲ ಚರಿತ್ರೆಯನ್ನು ಯಥಾಸತ್ಯವಾಗಿ ಹೇಳಲುಪಕ್ರಮಿಸುತ್ತೇವೆ.

ಪರಶುರಾಮಭಾವು ಶಕೆ ೧೬೬೨ ಶ್ರಾವಣ ಶುದ್ಧ ಅಷ್ಟಮಿ ದಿವಸ ಪುಣೆಯಲ್ಲಿ ಜನ್ಮಹೊಂದಿದನು. ಭಾವೂನ ಮುಂದಿನ ಚರಿತ್ರೆಯನ್ನು ಬರೆಯುವ ಮೊದಲು ಆತನ ಪವಿತ್ರ ಕುಲವೃತ್ತಾಂತವನ್ನು ಇಲ್ಲಿ ಹೇಳುವದು ಅತ್ಯವಶ್ಯಕವಾದದ್ದು.

ರತ್ನಾಗಿರಿಯಿಂದ ಸುಮಾರು ಎರಡು ಹರದಾರಿಯ ಮೇಲೆ ಕೊತವಡೆ ಎಂಬದೊಂದು ಚಿಕ್ಕ ಗ್ರಾಮವಿರುವದು; ಅಲ್ಲಿ ಸದಾಚಾರಸಂಪನ್ನನೂ, ಕರ್ಮನಿಷ್ಠನೂ ಆದ ಒಬ್ಬ ಚಿತ್ಪಾವನಕುಲದ ಬ್ರಾಹ್ಮಣನು ಇರುತ್ತಿದ್ದನು; ಅವನ ಹೆಸರು ಹರಿಭಟ್ಟ. ಈತನೇ ಇತಿಹಾಸಪ್ರಸಿದ್ಧವಾದ ಪಟವರ್ಧನ ಮನೆತನದ ಮೂಲಪುರುಷನು; ಈತನೇ ನಮ್ಮ ಚರಿತ್ರನಾಯಕನ ಅಜ್ಜನು. ಈತನ ವಂಶವೇ ಮುಂದೆ ಹರಿವಂಶವೆಂಬ ಪ್ರಖ್ಯಾತಿಯನ್ನು ಹೊಂದಿತು.

ಆತನ ವಂಶಜರಾದ ಪಟವರ್ಧನಪುರುಷರು ಈಗ ಜಮಖಂಡಿ, ಮಿರಜ, ಸಾಂಗಲಿ, ಕುರುಂದವಾಡ ಇತ್ಯಾದಿ ಸಂಸ್ಥಾನಗಳ ಒಡೆಯರಾಗಿ ಕೃಪಾಮೂರ್ತಿಗಳಾದ ಆಂಗ್ಲಪ್ರಭುತ್ವಕ್ಕೆ ಅಂಕಿತರೆನಿಸಿ, ಪ್ರಜಾರಂಜಕರಾಗಿ ತಮ್ಮ ತಮ್ಮ ಚಿಕ್ಕ ರಾಜ್ಯಗಳನ್ನಾಳುತ್ತಿರುವರು.

ಶೆಂಡೆಮನೆತನದ ಲಕ್ಷ್ಮೀಬಾಯಿ ಎಂಬ ಸಾಧ್ವಿಯು ಈ ಹರಿಭಟ್ಟರ ಹೆಂಡತಿಯು. ಈ ದಂಪತಿಗಳು ಕರ್ಮನಿಷ್ಠರಿದ್ದರು. ಇವರು ತಮ್ಮ ಆಯುಷ್ಯವನ್ನು ಈಶ್ವರೋಪಾಸನೆಯಲ್ಲಿಯೂ, ವೈದಿಕ ಕರ್ಮಗಳನ್ನು ಆಚರಿಸುವದರಲ್ಲಿಯೂ, ಪುರಾಣ ಪುಣ್ಯಕಥೆಗಳನ್ನು ಓದುವದರಲ್ಲಿಯೂ, ಕೇಳುವದರಲ್ಲಿಯೂ ಕಳೆಯುತ್ತಿದ್ದರು. ಅದೇ ಗ್ರಾಮದಲ್ಲಿ ಅವರಿಗೆ ಸಲ್ಪ ಪಿತ್ರಾರ್ಜಿತ ಆಸ್ತಿಯೂ ಇತ್ತು. ಅದರ ಉತ್ಪನ್ನದಿಂದಲೂ, ಯಾಚಕವೃತ್ತಿಯಿಂದಲೂ ಅವರು ತಮ್ಮ ಚರಿತಾರ್ಥವನ್ನು ಸಾಗಿಸಿಕೊಂಡು, ಬಡವರಾದರೂ ಸರ್ವಕಾಲವೂ ಸಂತುಷ್ಟರಾಗಿ ಕಾಲಹರಣ ಮಾಡುತ್ತಿದ್ದರು. ಈ ಹರಿಭಟ್ಟರಿಗೆ ಕೇಶವಭಟ್ಟ ಮತ್ತು ವಿಠ್ಠಲಭಟ್ಟರೆಂಬ ಇಬ್ಬರು ಒಡಹುಟ್ಟಿದವರಿದ್ದರು. ಅವರ ಉಪಜೀವನಕ್ರಮವಾದರೂ ಮೇಲೆ ಹೇಳಿದ ಹಿರಿಯರು ಮಾಡಿಟ್ಟ ಅಲ್ಪಸ್ವಲ್ಪ ಆಸ್ತಿಯನ್ನೇ ಅವಲಂಬಿಸಿತ್ತು. ಅದರಿಂದ ಹರಿಭಟ್ಟರ ಈ ಸಮಾಧಾನವೃತ್ತಿಯು ಬಹುದಿವಸ ನಿಲ್ಲಲಿಲ್ಲ. ಸುಖದುಃಖ ಮಿಶ್ರಿತವಾದ ಈ ಸಂಸಾರದಲ್ಲಿ ಪ್ರತಿಒಬ್ಬ ಮನುಷ್ಯನಿಗೆ ಒಮ್ಮೆ ಸುಖವು, ಒಮ್ಮೆ ದುಃಖವು, ಒಮ್ಮೆ ಸಂತುಷ್ಟಿಯು, ಒಮ್ಮೆ ಅಸಂತುಷ್ಟಿಯು, ಒಮ್ಮೆ ಐಶ್ವರ್ಯವು, ಒಮ್ಮೆ ಬಡತನವು ಇರತಕ್ಕವೇ. ಹರಿಭಟ್ಟರ ಪ್ರಪಂಚವು ದಿನೇ ದಿನೇ ವಿಸ್ತಾರವಾದುದರಿಂದಲೂ, ಕೊತವಡೆಯಂಥ ಸಣ್ಣ ಗ್ರಾಮದಲ್ಲಿ ಹೆಚ್ಚು ಉತ್ಪನ್ನವನ್ನು ಮಾಡಿಕೊಳ್ಳುವ ಸಾಧನಗಳು ಇಲ್ಲದ್ದರಿಂದಲೂ, ಉಪಜೀವನಕ್ರಮವು ಕಠಿಣವೆನಿಸಿ, ಅವರು ಪೂರ್ಣವಾಗಿ ದಾರಿದ್ರ್ಯದುಃಖವನ್ನು ಅನುಭವಿಸಲಾರಂಭಿಸಿದರು. ಹರಿಭಟ್ಟರೂ, ಅವರ ಇಬ್ಬರು ಸಹೋದರರೂ ವೇದವಿದ್ಯೆಯಲ್ಲಿ ಪಾರಂಗತರಿದ್ದರೂ, ಕೊಂಕಣದಂಥ ನಿರ್ಧನದೇಶದಲ್ಲಿ ವಿಶೇಷವಾಗಿ ರತ್ನಾಗಿರಿಯಂಥ ಕಂಗಾಲಪ್ರದೇಶದಲ್ಲಿ ಅವರ ವೈದಿಕವಿದ್ಯೆಯ ಬೆಳಕು ಬಿದ್ದು, ಅವರ ಉಪಜೀವನಕ್ಕೆ ತಕ್ಕ ಧನಸಹಾಯವು ಹ್ಯಾಗೆ ದೊರೆಯಬೇಕು? ಅವರ ಹೆಂಡರುಮಕ್ಕಳು ಎರಡೆರಡು ಮೂರು ಮೂರು ದಿವಸ ಉಪವಾಸ ಕಳೆಯಹತ್ತಿದರು. ಚಿಕ್ಕ ಮಕ್ಕಳು ಸಹ ಅರಹೊಟ್ಟೆ ಊಟ

ಮಾಡುವ ಹೊತ್ತು ಬಂತು. ದಾರಿದ್ರ್ಯ-ದುಃಖವು ಬಲು ಕಠಿಣವಾದದ್ದು. ಇದರಿಂದ ಮನುಷ್ಯನು ಆಡಬಾರದ ಜನರ ಕೂಡ ತಲೆಬೊಗ್ಗಿಸಿಕೊಂಡು ಮಾತಾಡಬೇಕಾಗುವದು; ಬೇಡಬಾರದ ಜನರ ಬಳಿಗೆ ಹೋಗಿ ಕೈಯೊಡ್ಡಿ ಬೇಡಬೇಕಾಗುವದು; ಮಾಡಬಾರದ ಕೆಲಸಗಳನ್ನು ಮೈಬೊಗ್ಗಿಸಿ ಮಾಡಬೇಕಾಗುವದು. ಬಡತನದಿಂದ ಬಳಲುವ ಮನುಷ್ಯನನ್ನು ಆತನ ಆಪ್ತೇಷ್ಟರು ಸಹ ನೋಡಲಿಚ್ಛಿಸುವದಿಲ್ಲ. ಆತನ ಗೆಳೆಯರಂತೂ ಅವನು ಹಾದಿಯಲ್ಲಿ ಬಂದು ಮುಂದೆ ನಿಂತರೂ, ಅವನನ್ನು ಮಾತಾಡಿಸುವದಿಲ್ಲ. ಅವನಲ್ಲಿ ಪೂರ್ವ ಪುಣ್ಯಫಲದಿಂದ ಇದ್ದ ವಿದ್ಯೆಗೂ ಯಾರೂ ಮಾನಕೊಡುವದಿಲ್ಲ. ಹೀಗೆ ಬಡವನಾದವನು ಸೋಸುವ ಎಡರುಗಳು ಅಸಂಖ್ಯವಾಗಿವೆ. ಬಡತನವು ಎಲ್ಲ ವಿಪತ್ತುಗಳ ತವರಮನೆಯಂದರೂ ಸಲ್ಲುವದು. ಆದದರಿಂದ ಕೆಲವು ಅನುಭವಿಕರಾದ ಕವಿರಾಜರು ಬಡತನವು ಆರನೆ ಮಹಾಪಾತಕವೆಂತಲೂ, ಬಡತನದ ಬಾಳಿಕೆಗಿಂತ ಸಾವು ಲೇಸೆಂತಲೂ, ಹೇಳಿರುವ ಮಾತು ಸತ್ಯವೇ ಸೈ.

ಹರಿಭಟ್ಟರು ಇಂಥ ಕಷ್ಟದೆಸೆಯಲ್ಲಿರಲು, "ದುರ್ಭಿಕ್ಷದಲ್ಲಿ ಅಧಿಕಮಾಸ" ಎಂಬ ಗಾದಿಯಂತೆ, ಅವರ ಇಬ್ಬರು ಮಕ್ಕಳು ಉಪನಯನಕ್ಕೆ ಆದರು. ಇದು ಮೊದಲೇ ಬಹಳ ಪ್ರಯಾಸಪಟ್ಟು ಎರಡು ಹುಡುಗರ ಮುಂಜಿಯನ್ನು ಮಾಡಿದ್ದರು. ಈ ಎರಡು ಹುಡುಗರ ಉಪನಯನದ ಚಿಂತೆಯಿಂದ ಹರಿಭಟ್ಟರು ಬಹಳ ಕಳವಳಗೊಂಡರು; ಅನೇಕರನ್ನು ಕೇಳಿದರು; ಎಲ್ಲರು ನಕಾರ ಭಾಗಿಸಿದರು. ಎಲ್ಲಿಯೂ ಹಣವು ಸಿಗಲಿಲ್ಲ. ಕಡೆಗೆ ಅವರು ತಮ್ಮ ಮನೆಯ ಪುರೋಹಿತನಾದ ವಝೆ ಎಂಬವನ ಬಳಿಗೆ ಹೋಗಿ ಧನಸಹಾಯವನ್ನು ಕೇಳಿದರು. ಆದರೆ ಅವನು ಏನೂ ಹಚ್ಚಿಕೊಳ್ಳದೆ ತನ್ನಿಂದ ಸಹಾಯಮಾಡುವದಾಗದೆಂದು ಖಂಡಿತವಾಗಿ ಹೇಳಿದನು. ಆಗ ಹರಿಭಟ್ಟರಿಗೆ ಕಡು ಖೇದವಾಯಿತು. ಅವರು ಸಹಾಯವನ್ನು ಬೇಡಲಿಕ್ಕೆ ಹೋದಹೋದಲ್ಲಿ ಮಾನಹಾನಿಯೂ ತೇಜೋಭಂಗವೂ ಆಯಿತಲ್ಲದೆ ಯಾರೂ ಸಹಾಯವನ್ನು, ಮಾಡಲಿಲ್ಲ. ಹಾಯ! ಹಾಯ! ಬಡತನದ ಕಷ್ಟವನ್ನು ಬಣ್ಣಿಸಲಳವಲ್ಲ.

ಹರಿಭಟ್ಟರಿಗೆ ಒಬ್ಬ ಅಕ್ಕಾಬಾಯಿಯೆಂಬ ಒಡಹುಟ್ಟಿದವಳಿದ್ದಳು. ಆಕೆಯನ್ನು ಘುದರಗಡಕ್ಕೆ ಕೊಟ್ಟಿತ್ತು. ಆಕೆಗೆ ಹರಿಭಟ್ಟರ ಕಷ್ಟದೆಶೆಯ

ಸುದ್ದಿಯು ಹತ್ತಲು, ಅವಳು ಅವರ ದುಃಖನಿವಾರಣೆಯ ಆಲೋಚನೆಯನ್ನು ಮಾಡತೊಡಗಿದಳು. ಅವಳ ಮನೆಯಲ್ಲಿ ಭಿಕ್ಷುಕವೃತ್ತಿಯಿಂದ ಉಪಜೀವಿಸುವ ದಾಂಡೇಕರ ಬಾಳಂಭಟ್ಟನೆಂಬುವ ಒಬ್ಬ ಗೃಹಸ್ಥನು ಇರುತ್ತಿದ್ದನು. ಅವನು ವಿಪುಲ ಧನಸಂಚಯವನ್ನು ಮಾಡಿಕೊಂಡಿದ್ದನು; ಆತನು ಸ್ನಾನಸಂಧ್ಯಾನಿಷ್ಠನೂ ಶುಚಿರ್ಭೂತನೂ, ವೇದವೇದಾಂಗ ಪರಾಯಣನೂ ಆಗಿದ್ದನು. ಇದಲ್ಲದೆ ಅವನು ಬಹಳ ಉದಾರನಿದ್ದು ಪರೋಪಕಾರಿಯಾಗಿದ್ದನು. ಅಕ್ಕಾಬಾಯಿಯು ಆತನಿಗೆ ಹರಿಭಟ್ಟರ ದೈನ್ಯಸ್ಥಿತಿಯನ್ನು ತಿಳಿಸಲು, ಆತನಿಗೆ ಕನಿಕರ ಹುಟ್ಟಿ ಧನಸಹಾಯವನ್ನು ಮಾಡಲೊಪ್ಪಿದನು. ಆತನು ಅಕ್ಕಾಬಾಯಿಯೊಡನೆ ಕೊತವಡೆಗೆ ಬಂದು ಸ್ವಂತ ಖರ್ಚಿನಿಂದ ಆ ಹುಡುಗರ ಉಪನಯನ ಕಾರ್ಯವನ್ನು ಸಾಂಗಗೊಳಿಸಿದನು.

"ಹೇಗಾದರೂ ಆಗಲಿ, ಮಕ್ಕಳ ವ್ರತಬಂಧವು ಆಯಿತು." ಎಂದು ಹರಿಭಟ್ಟರಿಗೆ ಸಂತೋಷವಾದರೂ ಚರಿತಾರ್ಥದ ಚಿಂತೆಯು ತಪ್ಪಲಿಲ್ಲ. "ನಿತ್ಯ ಸತ್ತವರಿಗೆ ಅತ್ತವರಿಲ್ಲ. ಹುಟ್ಟ ದರಿದ್ರರಿಗೆ ಕೊಟ್ಟವರಿಲ್ಲ" ಎಂಬ ಗಾದೆಯು ಪುನಃ ಪುನಃ ಅವರಿಗೆ ನೆನವಾಗಹತ್ತಿತು. ದರಿದ್ರರು ವಿದ್ಯಾವಂತರಿದ್ದರೂ ಅವರು ಸೋಸಬೇಕಾದ ಕಷ್ಟನಷ್ಟಗಳ ಅನುಭವವು ಅವರಿಗೆ ಸಂಪೂರ್ಣ ಗೊತ್ತಾಯಿತು.

ಈ ಜಗತ್ತಿನಲ್ಲಿ ಒಮ್ಮೊಮ್ಮೆ ಅತ್ಯಲ್ಪ ಸಂಗತಿಗಳಿಂದ ಸಹ ಬಹು ದೊಡ್ಡ ಕಾರ್ಯಗಳು ಆಗುತ್ತಿರುವವು. ಅತ್ಯಂತ ಸೂಕ್ಷ್ಮವಾದ ಒಂದು ಆಲದ ಬೀಜದಿಂದ ದೊಡ್ಡ ಮರವಾಗಿ ಅದು ಜನರಿಗೆ ಉಪಯೋಗವಾಗುವದುಂಟು. ಮಲತಾಯಿಯು ಮತ್ಸರಗೊಂಡು ಕಾಲಿನಿಂದ ಒದ್ದದ್ದೇ ನಿಮಿತ್ಯವಾಗಿ, ಬಾಲಕನಾದ ಧ್ರುವರಾಯನು ನಾರದರನ್ನು ಕಂಡುಕೊಂಡು, ಅವರ ಸದುಪದೇಶಪ್ರಭಾವದಿಂದ ಜಗಚ್ಚಾಲಕನಾದ ಭಗವಂತನಲ್ಲಿ ಅಚಲಭಕ್ತಿಯುಳ್ಳವನಾಗಿ, ಆ ಮಹಾಮಹಿಮನಾದ ದೇವರನ್ನು ಪ್ರತ್ಯಕ್ಷ ನೋಡಿ ಆತನ ಕೃಪಾಪ್ರಸಾದದಿಂದ ಅಚಲವಾದ ಧ್ರುವಪದವಿಯನ್ನು ಹೊಂದಿದನು. ಸಿದ್ಧಿಯ ನವಾಬನ ಕಾಟದಿಂದ ಬೇಸತ್ತ ಬಡಕುಲಕರ್ಣಿಯಾದ ಬಾಳಾಜಿ ವಿಶ್ವನಾಥನು ಪ್ರಖ್ಯಾತ ಪೇಶವೆ ಪದವಿಯನ್ನು ಹೊಂದಿದನು. ಶಾಗಿರ್ತಿಯಾದ ರಾಮನು ಯಜಮಾನನ ತಿರಸ್ಕಾರದಿಂದ ಪ್ರಸಿದ್ಧ ರಾಮಶಾಸ್ತ್ರಿಯಾದನು. ಹೀಗೆ ಅನೇಕ ಉದಾಹರಣೆಗಳುಂಟು. ಆದ್ದರಿಂದ "ಕಾಲಾನುಕಾಲಕ್ಕೆ ತಾಂ।

ಬಡವಂ ಬಲ್ಲಿದನಾಗನೆ" ಎಂದು ಸಾರಿರುವ ಕವಿವಚನವು ಯಥಾರ್ಥವಾದದ್ದೇ ಸರಿ. ಪಟವರ್ಧನ ಪುರುಷರ ಚರಿತ್ರೆಯಾದರೂ ಮೇಲಿನ ಕವಿಯ ಉಕ್ತಿಗೆ ದೃಷ್ಟಾಂತವಾಗಿರುವದು.

ಬಡತನದ ಕೋಟಲೆಯು ಬಹಳವಾದುದರಿಂದ, ಮತ್ತು ಪ್ರಪಂಚವು ವಿಸ್ತಾರವಾಗುತ್ತ ನಡೆದುದರಿಂದ ಹರಿಭಟ್ಟರು ತೊಳಲಿಬಳಲಿ ಕಡೆಗೆ ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿದರು. "ಸಂಸಾರದಲ್ಲಿ ದಾರಿದ್ರ್ಯದಿಂದಾಗುವ ದುಃಖಗಳನ್ನು ನೀಗಿ ಸುಖಿಯಾಗಲಿಕ್ಕೆ ಈಶ್ವರೋಪಾಸನೆಯ ಹೊರ್ತು ಗತ್ಯಂತರವಿಲ್ಲ; ಅದರಿಂದ ಎಲ್ಲಿಯಾದರೂ ಹೋಗಿ ದೇವತಾಸೇವೆಯನ್ನು ಮಾಡಿ ದೇವರ ಅನುಗ್ರಹವನ್ನು ಸಂಪಾದಿಸಬೇಕು." ಎಂಬ ಭಾವಿಕತನವು ಹರಿಭಟ್ಟರಲ್ಲಿ ಹುಟ್ಟಿತು. ಮುಂದೆ ಅದನ್ನೇ ದೃಢಸಂಕಲ್ಪ ಮಾಡಿಕೊಂಡು, ಅವರು ಮನೆಯನ್ನು ಬಿಟ್ಟು ಹೊರಟು, ಅಲ್ಲಿ ಸಮೀಪದಲ್ಲಿರುವ (ಕೊತವಡೆಯಿಂದ ೨-೩ ಹರದಾರಿಯ ಅಂತರದ ಮೇಲಿರುವ) ಪುಳೆ* ಎಂಬಲ್ಲಿಯ ಶ್ರೀಗಣಪತಿಯ ಜಾಗೃತಸ್ಥಾನಕ್ಕೆ ಹೋಗಿ, ಅಲ್ಲಿ ಅವರು ಏಕನಿಷ್ಠೆಯಿಂದ ವಿಘ್ನೇಶ್ವರನ ಉಪಾಸನೆಯನ್ನು ಮಾಡಹತ್ತಿದರು. ಈ ಮೇರೆಗೆ ಒಂದು ತಪದ (ಹನ್ನೆರಡು ವರ್ಷ) ವರೆಗೆ ಅಚಲವಾದ ಭಕ್ತಿಯಿಂದ ಅವರು ಭಕ್ಷ್ಯಪದಾರ್ಥಗಳನ್ನು ಬಿಟ್ಟುಕೊಟ್ಟು, ಕೇವಲ ದೂರ್ವಾರಸವನ್ನೇ ಕುಡಿದು, ಅತ್ಯುಗ್ರ ತಪಶ್ಚರ್ಯವನ್ನು ಮಾಡಿ, ಮಂಗಲಮೂರ್ತಿಯನ್ನು ಆರಾಧಿಸಿದರು. ಹನ್ನೆರಡು ವರ್ಷಗಳು ಮುಗಿಯುತ್ತ ಬರಲು, ಒಂದಾನೊಂದು ದಿವಸ ಹರಿಭಟ್ಟರ ಸ್ವಪ್ನದಲ್ಲಿ ಶ್ರೀಗಣಪತಿಯು ಮೂರ್ತಿಯು ಪ್ರತ್ಯಕ್ಷ ಕಾಣಿಸಿಕೊಂಡು, "ಭಕ್ತಶ್ರೇಷ್ಠನೆ, ನಿನ್ನ ಏಕನಿಷ್ಠೆಗೂ, ಅಚಲವಾದ ಸದ್ಭಕ್ತಿಗೂ ನಾನು ಮೆಚ್ಚಿದೆನು. ನಿನ್ನ ಉತ್ಕರ್ಷಕಾಲವು ಸಮೀಪಿಸಿರುವದು. ಇನ್ನು ನೀನು ಉಪವಾಸದಿಂದ ದೇಹವನ್ನು ಸವಿಸದೆ ದೇಶಕ್ಕೆ ಹೋಗು. ಘಟ್ಟವನ್ನು ಏರಿ ಹೋದ ಕೂಡಲೆ ಸಕೃದ್ದರ್ಶನಕ್ಕೆ ನಿನ್ನ ದೃಷ್ಟಿಗೆ ಬೀಳುವ ಮನುಷ್ಯನೇ ನಿನ್ನ ಯಜಮಾನನೆಂದು ತಿಳಿ. ಅವನಿಂದಲೇ ನಿನ್ನ ಉದ್ಧಾರವಾಗುವದು. ನಿನ್ನ ಬಡತನವು ಹಿಂಗುವದು. ಇಷ್ಟೇ ಅಲ್ಲ,

* ಇದು ಹರಿಭಟ್ಟರ ಹೆಂಡತಿಯಾದ ಲಕ್ಷ್ಮೀಬಾಯಿಯ ತವರಮನೆಯವರು ಇರುತ್ತಿದ್ದ ಗ್ರಾಮವು.

ಮುಂದೆ ನಿನ್ನ ವಂಶಜರ ಯಶಶ್ಚಂದ್ರನು ದಿಗಂತದಲ್ಲಿ ಪೂರ್ಣ ವೈಭವದಿಂದ ಪ್ರಕಾಶಿಸಲು ಅವನೇ ಕಾರಣನಾಗುವನು. ಎಂದು ಆಶೀರ್ವಚನಗಳನ್ನು ನುಡಿದು, ಅಂತರ್ಧಾನವಾಗುವಷ್ಟರಲ್ಲಿ ಹರಿಭಟ್ಟರಿಗೆ ಎಚ್ಚರವಾಯಿತು.

ಆ ಶುಭಸೂಚಕ ದೃಷ್ಟಾಂತದಿಂದ ಸಂತೋಷಭರಿತರಾದ ಹರಿಭಟ್ಟರು ಬೆಳಗ್ಗೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಶ್ರೀಗಜಾನನನ ಸ್ವಪ್ನದಲ್ಲಿ ದರ್ಶನಕೊಟ್ಟದ್ದನ್ನೂ, ಆ ಮಂಗಲಮೂರ್ತಿಯು ಕೊಟ್ಟ ಆಶೀರ್ವಾದವನ್ನೂ, ಆಶ್ವಾಸವನ್ನೂ ನೆರೆನಂಬಿ, ತಮ್ಮ ತಪಶ್ಚರ್ಯವನ್ನು ಮುಗಿಸಿಕೊಂಡು, ಶ್ರೀಗಣಪತಿಯ ಅನುಜ್ಞೆಯನ್ನು ಹೊಂದಿ ಸ್ವಗ್ರಾಮಕ್ಕೆ ತೆರಳಿದರು. ಬರುತ್ತ ಮಾರ್ಗದಲ್ಲಿ ಸ್ವಪ್ನದಲ್ಲಿ ಕಂಡ ವಿಘ್ನೇಶ್ವರನ ದಿವ್ಯತರವಾದ ಮೂರ್ತಿ, ಆ ಮಂಗಲಮೂರ್ತಿಯ ಆಶ್ವಾಸನಯುಕ್ತವಾದ ಆಶೀರ್ವಚನ ಮತ್ತು ತಾವು ಮಾಡಿದ ಉಗ್ರತಪಸ್ಸು ಇವೆಲ್ಲವನ್ನು ಪುನ: ಪುನಃ ಸ್ಮರಣೆಗೆ ತರುತ್ತ ಈಹೊತ್ತಿನವರೆಗೆ ದೇಹವನ್ನು ಸವಿಸಿ ಘೋರ ತಪಶ್ಚರ್ಯವನ್ನು ಮಾಡಿದ್ದು ಇಂದಿಗೆ ಸಾರ್ಥಕವಾಯಿತು, ಎಂದು ಹರುಷಪಡುತ್ತ, ಹರುಷವೇಗದಿಂದ ಮನೆಗೆ ಬಂದು, ಸಾದ್ಯಂತ ವೃತ್ತಾಂತವನ್ನು ತಮ್ಮ ಪತ್ನಿಯಾದ ಲಕ್ಷ್ಮೀಬಾಯಿಗೆ ತಿಳಿಯಪಡಿಸಿದರು; ಅದನ್ನು ಕೇಳಿ ಕುಟುಂಬದ ಜನರೆಲ್ಲರು ಆನಂದಪರವಶರಾದರು. ಮುಂದೆ ಹರಿಭಟ್ಟರು ಬೇಗನೆ ದೇಶಕ್ಕೆ ಹೋಗುವ ಸಿದ್ಧತೆಯನ್ನು ಮಾಡತೊಡಗಿದರು.

ತರುವಾಯ ಪ್ರಯಾಣಕ್ಕೆ ಶುಭ ಮುಹೂರ್ತವನ್ನು ನೋಡಿಕೊಂಡು ಪ್ರಸ್ಥಾನವನ್ನು ತೆಗೆದಿಟ್ಟು, ಹರಿಭಟ್ಟರು ಮನೆಯಿಂದ ಹೊರಬಿದ್ದರು. ಸ್ವಕೀಯ ಜನರನ್ನು ಬಿಟ್ಟು, ಸಂಸಾರದ ಸರ್ವಭಾರವನ್ನು ಅವರ ಮೇಲೆ ಹಾಕಿ, ಮನೆಯಿಂದ ಹೊರಡುವದು ಬಹಳ ಕಷ್ಟವೆನಿಸುತ್ತದೆ. ಸ್ವಜನರೂ, ಪರಿಚಿತರೂ ಮತ್ತು ತನ್ನನ್ನು ಮನಃಪೂರ್ವಕವಾಗಿ ಪ್ರೀತಿಸುವ ಹೆಂಡರು ಮಕ್ಕಳೂ ಮುಂತಾದ ಆಪ್ತಕೋಟಿಯ-ವಿಯೋಗಸಮಯವು ಪ್ರಾಪ್ತವಾಗಲು, ಮನುಷ್ಯನ ಅಂತಃಕರಣವು ಸದ್ಗದಿತವಾಗುವದು. ಒಮ್ಮೊಮ್ಮೆ ದು:ಖವು ಅಸಾಧ್ಯವೆನಿಸಿ ಅಶ್ರುಧಾರೆಯು ಸುರಿಯುವದು. ಇದರ ಅನುಭವವವು ಎಲ್ಲರಿಗೂ ಇದ್ದದ್ದೇ. ಕುಟುಂಬದ ಜನರನ್ನೂ, ಚಿಕ್ಕ ಚಿಕ್ಕ ಮಕ್ಕಳನ್ನೂ ಬಿಟ್ಟು ಹೊರಡುವದೆಂದರೆ ಹರಿಭಟ್ಟರ ಜೀವದಸುತ್ತ ಬಂತು. ಆದರೆ ಅವರು ತಮ್ಮ ಭಾವೀ ಉತ್ಕರ್ಷ-ಕಾಲದ ಮೇಲೆ ದೃಷ್ಟಿಯನ್ನಿಟ್ಟು,

ಆ ಆಶೆಯ ಯೋಗದಿಂದ ಯಾವತ್ತು ದುಃಖವನ್ನು ಬತ್ತಿಟ್ಟಗಿಟ್ಟು, ಹೆಗಲ ಮೇಲೆ ಹಸಬಿಯನ್ನು ಹಾಕಿಕೊಂಡು ಮನೆಯಿಂದ ಹೊರಟು ನಡೆದರು.

ಆಶೆಯು ನೈಸರ್ಗಿಕವಾದ ಪ್ರವರ್ತಕ ಗುಣಗಳಲ್ಲೊಂದಾಗಿರುವದು. ಅದರ ಯೋಗದಿಂದ ಅಘಟಿತಕಾರ್ಯಗಳು ಸುಲಭ ಸಾಧ್ಯವಾಗುವವು. ಅದು ಮಾನುಷ-ಪ್ರಯತ್ನಮಂದಿರದ ಅಸ್ತಿವಾರವು. ಅದರ ಪ್ರಭಾವ ದಿಂದಲೆ ಸರ್ವ ಸೃಷ್ಟಿಕ್ರಮವು ನಡೆದಿರುವದು. ವಿಚಾರಮಾಡಿರಿ, ಮನು ಷ್ಯನು ಮಹತ್ಸಂಕಟದಲ್ಲಿ ಸಿಕ್ಕು ಬದ್ಧಾಡುತ್ತಿರಲು, ಆತನಲ್ಲಿ ಧೈರ್ಯವನ್ನು ಹುಟ್ಟಿಸಿ, ಆ ಸಂಕಟವನ್ನು ಸಹಿಸಿಕೊಂಡು ಆ ಪ್ರಸಂಗದೊಳಗಿಂದ ಪಾರಾಗುವಂತೆ ಆ ಮನುಷ್ಯನನ್ನು ಸಮರ್ಥನನ್ನು ಮಾಡುವ ಆಶೆಯಂಥ ಉತ್ತಮ ಸಾಧನವು ಅದಾವದಿರುವದು? ಆಶೆಯೊಂದಿರದಿದ್ದರೆ ಸಂಸಾರ ಚಕ್ರವು ಇಂದೇ ತಟಸ್ಥವಾಗುವದು; ಜಗತ್ತಿನ ಎಲ್ಲ ವ್ಯವಹಾರವು ನಿಂತು ಹೋಗುವದು. ಅದೊಂದು ಇರದಿರಲು, ನೀನು ನನ್ನವನು, ನಾನು ನಿನ್ನವನು. ಇದು ನನ್ನದು, ಈತನು ನನ್ನ ಯಜಮಾನನು. ನಾನು ಮುಂದೆ ಬರಬೇಕು, ನನ್ನ ಯಜಮಾನನು ಅಭಿವೃದ್ಧಿಯನ್ನು ಹೊಂದಲಿ ಇತ್ಯಾದಿ ಮಾನವಪ್ರಗತಿಗವಶ್ಯವಾದ ಸದ್ವಿಚಾರಗಳು ವಿಲುಪ್ತವಾಗುವವು, ಈ ಸದ್ವಿಚಾರಗಳು ಇಲ್ಲದಂತಾಗಲು, ಸತತಪ್ರಯತ್ನ, ಕರ್ತವ್ಯತತ್ಪರತೆ. ಮುಂತಾದ ಸದ್ಗುಣಗಳು ಎಲ್ಲಿಂದ ಹುಟ್ಟಬೇಕು? ವ್ಯಾಪಾರದ ಮಹತ್ವವನ್ನರಿತ ಉದಾರಚರಿತರಾದ ಇಂಗ್ಲೀಷರಲ್ಲಿ ಸ್ವದೇಶದ ವ್ಯಾಪಾರವನ್ನು ಬೆಳಿಸಿ, ಐಶ್ವರ್ಯವನ್ನು ಹೆಚಿಸಬೇಕೆಂಬ ಆಶೆಯು ಇದ್ದದರಿಂದಲೇ ಅವರು ತಮ್ಮ ಚಿಕ್ಕ ನಡುಗಡ್ಡೆಯನ್ನು ಬಿಟ್ಟು ಅನೇಕಾನೇಕ ದೂರ ದೂರ ದೇಶಗಳಿಗೆ ಹೋಗಿ ವ್ಯಾಪಾರ ಮಾಡುತ್ತ ಅಲ್ಲಿ ತಮ್ಮ ಅದ್ವಿತೀಯ ಸಾಹಸ ಮತ್ತು ಅಶ್ರಾಂತಪರಿಶ್ರಮಗಳ ಯೋಗದಿಂದ ಆಯಾ ದೇಶಗಳ ಪ್ರಭುತ್ವವನ್ನು ಪಡೆ ದಿರುವರು. ಹೀಗೆ ಆಶೆಯಲ್ಲಿ ವಿಶ್ವಾಸವಿಟ್ಟು ಅದಕ್ಕೆ ತಕ್ಕ ಸತ್ಪ್ರಯತ್ನಗಳನ್ನು ಮಾಡಿ, ಊರ್ಜಿತಾವಸ್ಥೆಯನ್ನು ಹೊಂದಿದ ಮಹಾಪುರುಷರ ಮತ್ತು ರಾಷ್ಟ್ರ ಗಳ ದೃಷ್ಟಾಂತಗಳು ಅಸಂಖ್ಯವುಂಟು. ಸತ್ಪ್ರಯತ್ನದಿಂದ ಕೂಡಿದ ಆಶೆಯು ಸದ್ಗುಣವೆಂದೆನಿಸಿ ಸರ್ವ ಸ್ತುತ್ಯವೂ, ಸರ್ವ ಗ್ರಾಹ್ಯವೂ ಆಗಿರುವದು. ಇನ್ನು ಈ ಆಶಾಪ್ರವಾಹವು ದುರ್ವಿಚಾರಸರಣಿಯಲ್ಲಿ ಹರಿಯಹತ್ತಿದರೆ, ಅದು ‘ ದುರಾಶಾ ’ ಎಂಬ ಹೆಸರನ್ನು ಹೊಂದಿ ದುರ್ಗುಣವೆನಿಸುವದು. ಅದರ

ಯೋಗದಿಂದ ಮಾಡುವ ಪ್ರಯತ್ನಗಳೂ ಕುಹಕಪ್ರಯತ್ನಗಳೆನಿಸಿ, ಪರಿಣಾಮವೂ ಕೆಟ್ಟದಾಗಿ ಕಡೆಗೆ ಆ ಮನುಷ್ಯನು ದುಷ್ಟನೂ, ದುರಾಚಾರಿಯೂ, ದುರ್ಮಾರ್ಗಪ್ರವರ್ತಕನೂ, ಎಂದೆನಿಸಿ ದುರ್ಜನಮಾಲಿಕೆಯಲ್ಲಿ ಸೇರುವನು. ಬಾಂಧವರನ್ನು ಮುಣುಗಿಸಬೇಕೆಂಬ ದುರಾಶೆಯಿಂದ ಕೌರವರ ಹಾಡು ಏನು ಆಯಿತು? ಪರಸತಿಯರ ದುರಾಶೆಯಿಂದ ರಾವಣ, ಕೀಚಕರು ಏನಾದರು? ಔರಂಗಜೇಬನಲ್ಲಿದ್ದ ಸ್ವಧರ್ಮ-ಪ್ರಸಾರದ ದುರಾಶೆಯಿಂದ ಮೊಗಲಸಾಮ್ರಾಜ್ಯವು ಹೇಳಹೆಸರಿಲ್ಲದಾಯಿತು. ಇಡೀ ಯುರೋಪಖಂಡಕ್ಕೆ ತಾನೇ ಏಕಚಕ್ರೇಶ್ವರನಾಗಬೇಕೆಂಬ ದುರಾಶೆಯಿಂದ ಲೋಕೈಕವೀರನೆನಿಸಿದ ನೇಪೋಲಿಯನ್ನನು ಕಡೆಗೆ ಶತ್ರುವಶವಾಗಿ ಕಾರಾಗೃಹವಾಸವನ್ನು ಹೊಂದಿ ಅಲ್ಲಿಯೇ ನವಿದು ಕಾಲವಾದನು. ಇರಲಿ. "ದೇಶಕ್ಕೆ ಹೋದಬಳಿಕ ತನಗೆ ಯಾವನಾದರು ಐಶ್ವರ್ಯವಂತನೂ, ಸದ್ಗುಣಸಂಪನ್ನನೂ, ಆದ ಯಜಮಾನನು ಸಿಕ್ಕಾನು; ಮತ್ತು ಆತನ ಆಶ್ರಯದಿಂದ ತನ್ನ ದೈನ್ಯಾವಸ್ಥೆಯು ದೂರವಾದೀತು" ಎಂಬ ಆಶೆಯು ಹರಿಭಟ್ಟರ ಹೃದಯಭೂಮಿಯಲ್ಲಿ ಅಂಕುರಿಸಿತು. ಆ ಆಶೆಯ ಪ್ರೇರಣೆಯಿಂದ ಅವರು ತ್ವರಿತಗತಿಯಿಂದ ಮಾರ್ಗಕ್ರಮಣ ಮಾಡಹತ್ತಿದರು. ಹಾದಿಯಲ್ಲಿ ಕಲ್ಲುಮುಳ್ಳುಗಳನ್ನು ತುಳಿಯುತ್ತ ಪಯಣಗತಿಯಿಂದ ಅವರು ಘಟ್ಟದಮೇಲೆ ಬಂದರು. ಆಗ ಹರಿಭಟ್ಟರು ಶ್ರೀಗಣಪತಿಯ ಆಶೀರ್ವಚನವನ್ನು ಸ್ಮರಿಸುತ್ತ ಅತ್ತಿತ್ತ ನೋಡುವಷ್ಟರಲ್ಲಿ ೭।೮ ವರುಷದ ಸುಕುಮಾರನೊಬ್ಬನು ಅವರ ದೃಷ್ಟಿಗೆ ಬಿದ್ದನು. ಆ ಹುಡುಗನ ಮೋರೆಯು ಬಿಸಲಿನಿಂದ ಕೆಂಪಗಾಗಿತ್ತು; ಮೈಯಲ್ಲ ಬೆವಿತು ಹೋಗಿತ್ತು. ಆತನು ಮಾರ್ಗಾಯಾಸದಿಂದ ಒಂದು ಗಿಡದ ನೆರಳಿಗೆ 'ಹುಶ್' ಎಂದು ಕುಳಿತುಕೊಂಡಿದ್ದನು. ಅವನ ಬಳಿಯಲ್ಲಿಯೇ ಒಬ್ಬ ತರುಣ ವಿಧವೆಯು ನಿಟ್ಟುಸಿರು ಬಿಡುತ್ತ ಕೂತಿದ್ದಳು. ಘಟ್ಟವನ್ನು ಏರಿಬಂದ ಕೂಡಲೆ, ಎಲ್ಲಕ್ಕೂ ಮೊದಲು ಇಂಥ ಅನಾಥ ಬಾಲಕನು ಹರಿಭಟ್ಟರ ದೃಷ್ಟಿಗೆ ಬಿದ್ದದರಿಂದ ಅವರ ಉತ್ಸಾಹವು ಕುಗ್ಗಿತು. ಭಾವೀ ಆಶೆಯು ನಷ್ಟವಾಯಿತು. "ಈ ದಿಕ್ಕಿಲ್ಲದ ಹುಡುಗನು ನನ್ನ ದೈನ್ಯವನ್ನು ಎಂತು ಕಳೆಯುವನು. ೧೨ ವರುಷ ಮಾಡಿದ ತಪಶ್ಚರ್ಯವು ವ್ಯರ್ಥವಾಯಿತು. ನನ್ನ ಬಡತನವು ಹಿಂಗದು. ಅದ್ಯ ಆಜನ್ಮ ನನ್ನ ಬೆನ್ನು ಹತ್ತಿದ್ದೇ." ಎಂದು ಮನಸ್ಸಿನಲ್ಲಿ ನೊಂದುಕೊಂಡು

ಉಸುರುಗರೆದನು. ಆಗ ಅವರಿಬ್ಬರ ಬಳಿಗೆ ಹೋಗಿ ವಿಚಾರಿಸಲಾಗಿ, ಅವರು ಕೊಂಕಣದೊಳಗಿನ ವ್ಹಾಪಣಗಾಂವದವರೆಂತಲೂ, ಆ ಹುಡುಗನ ಮುಂಜಿಯ ವ್ಯವಸ್ಥೆಯಗೋಸ್ಕರ ದೇಶಕ್ಕೆ ಹೊರಟಿರುವರೆಂತಲೂ ಹರಿಭಟ್ಟರಿಗೆ ಗೊತ್ತಾಯಿತು. ಆಗ್ಗೆ ಅವರು ಮನಸ್ಸಿನಲ್ಲಿ ಏನು ವಿಚಾರ ಮಾಡಿರಬಹುದೆಂಬದನ್ನು ವಾಚಕರೇ ಊಹಿಸಲಿ. ಆ ಕಾಲಕ್ಕೆ "ಇವರಿಬ್ಬರನ್ನು ಯಜಮಾನರನ್ನು ಮಾಡಿಕೊಂಡು, ಅವರನ್ನು ಕೂಡಿಕೊಂಡು ಯಾಚನೆಮಾಡಬೇಕೇ! ಅಥವಾ ಮುಂದಿನ ಆಶೆಯನ್ನು ಬಿಟ್ಟು ತಿರುಗಿ ಮನೆಗೆ ಹೋಗಬೇಕೆ!" ಎಂಬ ವಿಚಾರವು ಹರಿಭಟ್ಟರ ಮುಂದೆ ಬಂದು ನಿಂತಿತು. ಅವರು ವಿಚಾರಮಾಡಿ, ಕಡು ಕಳವಳಗೊಂಡರು. ಕಡೆಗೆ ಅವರು "ಏನು ಆಗುವದು ಆಗಲಿ. ಶ್ರೀಗಜಾನನಲ್ಲಿ ಭಕ್ತಿಯನ್ನಿಟ್ಟು, ಆತನ ಆಜ್ಞೆಯಂತೆ ಆಚರಿಸಬೇಕು" ಎಂದು ನಿಶ್ಚೈಸಿದರು. ಸ್ವಲ್ಪ ಹೊತ್ತಿನ ಮೇಲೆ ಹರಿಭಟ್ಟರು ಆ ಹುಡುಗನ ಕಾಂತಿಯುಕ್ತವಾದ ಕಣ್ಣುಗಳನ್ನೂ ಪ್ರಫುಲ್ಲಿತವಾದ ಮುಖಮುದ್ರೆಯನ್ನೂ ಸುಂದರವಾದ ಮೈಕಟ್ಟನ್ನೂ ಕಂಡು, ಇವನು ಮುಂದೆ ಒಳ್ಳೇ ಭಾಗ್ಯಶಾಲಿಯಾಗಬಹುದೆಂದು ತರ್ಕಿಸಿ, ನಿರಾಶೆಯಿಂದ ಮನಸ್ಸಿನಲ್ಲಿ ಪುನಃ ಆಶೆಗೆ ಆಶ್ರಯಕೊಟ್ಟರು. ಆ ಬಾಲಕನ ದಿವ್ಯ ಸಾಮುದ್ರಿಕ ಲಕ್ಷಣಗಳಿಂದ ಅವನಲ್ಲಿ ರಾಜಚಿನ್ಹಗಳುಂಟೆಂದು ಹರಿಭಟ್ಟರಿಗೆ ಮನವರಿಕೆಯಾಯಿತು. ಆಗ ಅವರು "ಪ್ರಭುಲೀಲೆಯು ಅಗಾಧವಾದದ್ದು, ಈ ಅನಾಥಬಾಲಕನೇ ಒಂದುವೇಳೆ ನನ್ನ ಉತ್ಕರ್ಷಕ್ಕೆ ಕಾರಣವಾಗಬಹುದು," ಎಂದು ಸಮಾಧಾನಗೊಂಡು, ಅವರಿಬ್ಬರನ್ನು ಕುರಿತು "ನೀವು ನನ್ನ ಯಜಮಾನರು; ನಾನಾದರೂ ನಿಮ್ಮಂತೆಯೇ ಮತ್ತೊಂದು ಉದ್ದೇಶದಿಂದ ಹೊರಟಿರುವೆನು. ನಾವು ಒಬ್ಬರಿಗೊಬ್ಬರು ಜೋಡಾಗಿ ಹೋಗೋಣ;" ಎಂದು ಹೇಳಿ ಅವರಿಬ್ಬರನ್ನು ಕೂಡಿಕೊಂಡು ಆ ಹುಡುಗನ ಉಪನಯನದಗೋಸ್ಕರ ಯಾಚನೆಮಾಡುವ ಉದ್ದೇಶದಿಂದ ಅಲ್ಲಿಂದ ಹೊರಟರು.

ಅವರು ಅಲ್ಲಲ್ಲಿ ಅಡ್ಡಾಡಿ ಕಡೆಗೆ ಈಚಲಕರಂಜಿಗೆ ಬಂದರು. ಆ ಕಾಲಕ್ಕೆ ಅಲ್ಲಿ ಸಂತಾಜಿ ಘೋರಪಡೆ ಎಂಬ ಒಬ್ಬ ಮರಾಠಾ ಸರದಾರನಿದ್ದನು. ಹರಿಭಟ್ಟರು ಆ ಹುಡುಗನನ್ನು ಸಂಗಡ ಕರಕೊಂಡು ಆ ಸರದಾರನ ಬಳಿಗೆ ಹೋಗಿ, ಆಶ್ರಯವನ್ನು ಕೊಡುವ ವಿಷಯವಾಗಿ ಯಥೋಚಿತ ವಿನಯಪೂ

ರ್ವಕವಾಗಿ ಹೇಳಿಕೊಂಡರು; ಆತನು ಆ ಉಭಯತರ ವೃತ್ತಾಂತವನ್ನು ಕೇಳಿ ಕನಿಕರವನ್ನು ಹೊಂದಿದ್ದಲ್ಲದೆ, ಹರಿಭಟ್ಟರ ವೇದವೇದಾಂಗ ಪಾರಂಗತೆ, ಕರ್ಮನಿಷ್ಠೆ ಮತ್ತು ಶುಚಿರ್ಭೂತತನಗಳನ್ನು ನೋಡಿ ತಲ್ಲೀನನಾದನು. ಅವರ ವಿಷಯವಾಗಿ ಪೂಜ್ಯಬುದ್ಧಿಯು ಆ ಸರದಾರನಲ್ಲಿ ಉತ್ಪನ್ನವಾದ್ದರಿಂದ ಆತನು ಕೂಡಲೆ ಹರಿಭಟ್ಟರ ಬಿನ್ನಹಕ್ಕೊಪ್ಪಿ, ಯೋಗ್ಯ ಆಶ್ರಯವಿತ್ತು, ಆ ಹುಡುಗನ ಉಪನಯನವನ್ನು ಮಾಡಿದನು. ಹೀಗೆ ಆ ತ್ರಿವರ್ಗರು ಘೋರಪಡೆ ಸರದಾರನ ಆಶ್ರಯವನ್ನು ಹೊಂದಿ ಕಾಲಕ್ರಮೇಣ ಮಾಡತೊಡಗಿದರು. ಆ ಹುಡುಗನ ಹೆಸರು ನಾರಾಯಣ; ತಂದೆಯ ಹೆಸರು ಮಹಾದೇವ, ಆ ವಿಧವೆಯು ಆ ಹುಡುಗನ ತಾಯಿಯು; ಆಕೆಯ ಹೆಸರು ಗಂಗಾಬಾಯಿಯು.

ನಾರಾಯಣನು ಬಳ್ಳೇ ಚುರಕಬುದ್ಧಿಯವನಿದ್ದನು. ಆತನು ಚಿಕ್ಕವನಾದರೂ ಬಹಳ ಉತ್ಸಾಹಿಯೂ, ವಿನಯಶಾಲಿಯೂ, ಮನವಲಿಸಿಕೊಳ್ಳುವ ಗುಣವುಳ್ಳವನೂ ಆಗಿದ್ದನು. ಘೋರಪಡೆ ಸರದಾರನು ಆ ಹುಡುಗನಿಗೆ ದರಬಾರಕ್ಕೆ ಬರಹೋಗಲು ಅಪ್ಪಣೆ ಕೊಟ್ಟಿದ್ದನು. ಆತನು ಅದರಂತೆ ಆಗಾಗ್ಗೆ ದರಬಾರಕ್ಕೆ ಬರುತ್ತಿದ್ದನು. ಆ ಸರದಾರನಿಗೆ ಸಂತಾನವಿದ್ದಿಲ್ಲ; ಅದರಿಂದ ಅವನು ನಾರಾಯಣನನ್ನು ಬಹಳ ಪ್ರೀತಿಸಹತ್ತಿದನು. ನಾರಾಯಣನಿಲ್ಲದೆ ಆತನಿಗೆ ಹೊತ್ತುಹೋಗದಂತಾಯಿತು. ಆದ್ದರಿಂದ ವ್ರತಬಂಧದ ಕೆಲಸ ತೀರಿದರೂ ಸಂತಾಜಿಯು ಅವರಿಗೆ ಹೋಗಲಿಕ್ಕೆ ಅಪ್ಪಣೆ ಕೊಡಲಿಲ್ಲ. ಬರಬರುತ್ತ ಆ ಸರದಾರನು ನಾರಾಯಣನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಪ್ರೇಮ ಮಾಡತೊಡಗಿದನು. ಆ ಸರದಾರನ ಬಳಿಯಲ್ಲಿ ಒಂದು ದೊಡ್ಡ ದಂಡು ಇತ್ತು. ನಾರಾಯಣನು ಅಲ್ಲಿಯ ಸ್ವಾರರ ಮತ್ತು ಶಿಪಾಯಿಜನರ ಪರಿಚಯವನ್ನು ಮಾಡಿಕೊಂಡು, ಕುದುರೆಯ ಪರಾಟ, ಗುರಿಹೊಡಿಯೋಣ, ಕತ್ತಿಭಾಲೆಯ ಉಪಯೋಗ ಇವೇ ಮೊದಲಾದ ಸರದಾರರಿಗೆ ಅಗತ್ಯವಾದ ವಿದ್ಯೆಗಳನ್ನು ಕಲಿತುಕೊಂಡು ಯುದ್ಧವಿದ್ಯೆಯಲ್ಲಿ ಬಳ್ಳೇ ಧುರೀಣನಾದನು.

ನಾರಾಯಣನಲ್ಲಿರುವ ಗುಣಗಳು ಆಗಾಗ್ಗೆ ಆ ಘೋರಪಡೆ ಸರದಾರನ ದೃಷ್ಟಿಗೆ ಬೀಳುತ್ತಿದ್ದವು. ಆತನ ಪರಿವಾರದ ಜನರು ಆ ಹುಡುಗನ ಸೌಜನ್ಯ, ಶೌರ್ಯ, ಕಾರ್ಯದಕ್ಷತೆ ಮೊದಲಾದವುಗಳನ್ನು ಆ ಸರದಾರನ

ಮುಂದೆ ಪ್ರಶಂಸೆ ಮಾಡುತ್ತಿದ್ದರು. ಅದರಿಂದ ಅವನು ನಾರಾಯಣನನ್ನು ಹೊಟ್ಟೆಯ ಮಗನಂತೆ ನಡೆಸಿಕೊಳ್ಳುತ್ತಿದ್ದನು. ಹೀಗೆ ಕಾಲಕ್ರಮಣವಾಗುತ್ತಿರಲು, ಧರ್ಮಕರ್ಮಸಂಯೋಗದಿಂದ ಆ ಘೋರಪಡೆ ಸಂಸ್ಥಾನದಲ್ಲಿ ಬಂಡಾಯವೆದ್ದಿತು. ಆಗ್ಗೆ ನಾರಾಯಣನ ಧೈರ್ಯ, ಶೌರ್ಯಗಳನ್ನು ಕಂಡು ಅದರ ಪ್ರತೀಕಾರಕ್ಕಾಗಿ ಸಂತಾಜಿಯು ಆತನನ್ನು ಕಳುಹಿದನು. ನಾರಾಯಣನು ಆ ಕೆಲಸವನ್ನು ಸಂತೋಷದಿಂದ ಅಂಗೀಕರಿಸಿ ಬಂಡಾಯವನ್ನು ಮುರಿದು, ಯಶಸ್ವಿಯಾದನು. ಅಂದಿನಿಂದ ಆ ಸರದಾರನೂ ಆತನ ಪರಿವಾರದವರೂ ನಾರಾಯಣನನ್ನು ಮೊದಲಿಗಿಂತ ಹೆಚ್ಚು ಪ್ರೀತಿಸಹತ್ತಿದರು. ಒಂದಾನೊಂದು ದಿವಸ ಸಂತಾಜಿ ಸರದಾರನು ಊಟಕ್ಕೆ ಕುಳಿತಕಾಲಕ್ಕೆ ನಾರಾಯಣನು ಯಾವದೋ ಒಂದು ಕೆಲಸದ ನಿಮಿತ್ಯದಿಂದ ಅಕಲ್ಪಿತವಾಗಿ ಆತನ ಅರಮನೆಗೆ ಹೋದನು. ಅವನನ್ನು ಕಂಡು ಸರದಾರನು "ನಾರಾಯಣಾ, ನೀನು ನನ್ನ ಮಗನೆಂದು ಅನಿಸಿಕೊಳ್ಳುತ್ತಿಯಲ್ಲವೇ? ಹಾಗಿದ್ದರೆ ಬಾ, ನನ್ನ ತಾಟಿನಲ್ಲಿ ಊಟಮಾಡಬಾ" ಎಂದು ಅಂದನು. ಕೂಡಲೆ ನಾರಾಯಣನು ಅಂಗಿಯ ತೋಳುಗಳನ್ನು ಮೇಲಕ್ಕೆ ಏರಿಸಿ, ಊಟಕ್ಕೆ ಸಿದ್ಧನಾದನು. ನಾರಾಯಣನ ಮನೋ-ನಿರ್ಧಾರವನ್ನು ಕಂಡು, ಸರದಾರನು ಆತನ ಸ್ವಾಮಿನಿಷ್ಠೆಯು ಅನುಪಮವಾದದ್ದೆಂದು ಬಗೆದು, ಊಟದ ಬಗ್ಗೆ ವಿಶೇಷ ಆಗ್ರಹಮಾಡಲಿಲ್ಲ.

ಈ ಮೇರೆಗೆ ನಾರಾಯಣನು ಘೋರಪಡೆ ಸರದಾರನ ಸಂಪೂರ್ಣ ಪ್ರೇಮಕ್ಕೆ ಪಾತ್ರನಾದನು. ಸರದಾರನು ಮುದುಕನಾಗಿದ್ದನು. ಅದರಿಂದ ಮುಂದೆ ತುಸು ದಿವಸಗಳಲ್ಲಿ ಆ ಸರದಾರನು ಸದ್ಗುಣಿಯೂ, ಪರಾಕ್ರಮಿಯೂ, ಆದ ನಾರಾಯಣನಿಗೆ ತನ್ನ ದಂಡಿನ ಸರ್ವಾಧಿಕಾರವನ್ನು ಕೊಟ್ಟನು. ಮತ್ತು ತನ್ನ ಪಶ್ಚಾತ್ ನಾರೋಮಹಾದೇವ ವ್ಹಾಪಣಕರ ಇವನೇ ಈಚಲಕರಂಜಿಯ ಅಧಿಕಾರಿಯೆಂದು ದರಬಾರದಲ್ಲಿ ಹೇಳಿದನು. ಹರಿಭಟ್ಟರು ಈಚಲಕರಂಜಿಕರ ಘೋರಪಡೆಯವರ ಕುಲಪುರೋಹಿತರಾದರು. ಹೀಗೆ ಮರಾಠಾ ಸರದಾರನಾದ ಸಂತಾಜಿಯ ಸಂಸ್ಥಾನವು ಬ್ರಾಹ್ಮಣ ಸರದಾರನ ಸ್ವಾಧೀನವಾಯಿತು.

ಪ್ರಿಯ ವಾಚಕರೇ, ಯಾವ ಅನಾಥ ಬಾಲಕನನ್ನು ನೋಡಿ, ಹರಿಭಟ್ಟರು ಎಲ್ಲಕ್ಕೂ ಮೊದಲು ನಿರಾಶೆಯುಳ್ಳವರಾಗಿದರೊ, ಅದೇ ಬಾಲಕನು

ಈಗ ಒಬ್ಬ ಶೂರ ಸರದಾರನಾಗಿ ಹರಿಭಟ್ಟರ ದುಃಖನಿವಾರಣೆಯನ್ನು ಮಾಡಲು ಶಕ್ತನಾದನು. ದೈವಗತಿಯು ಅಗಮ್ಯವಾದದ್ದು.

ಹರಿಭಟ್ಟರ ವಿದ್ಯೆ, ಕರ್ಮನಿಷ್ಠೆ, ಧಾರ್ಮಿಕತನ ಮತ್ತು ಅವರು ತನಗೆ ಮಾಡಿದ ಚಿರಸ್ಮರಣೀಯವಾದ ಉಪಕಾರಗಳನ್ನ ಮನಗಂಡು ನಾರೋಮಹಾದೇವನು ಅವರೊಡನೆ ಬಹು ನಯಭಯದಿಂದ ನಡೆದುಕೊಳ್ಳುತ್ತಿದ್ದನು. ದಿನದಿನಕ್ಕೆ ಅವರ ಸುಖಸಾಗರವು ಉಕ್ಕತೊಡಗಿತು. ಆಗ ಹರಿಭಟ್ಟರು ಕೊತವಡೆಯಿಂದ ಕುಟುಂಬದ ಜನರನ್ನು ಕರೆಸಿಕೊಂಡು ಎಲ್ಲರೊಡಗೊಂಡು ಸುಖದಿಂದ ಕಾಲಕ್ರಮಣವನ್ನು ಮಾಡತೊಡಗಿದರು.

ಮುಂದೆ ನಾರಾಯಣರಾಯನು ದೊಡ್ಡವನಾದ ಬಳಿಕ ಸಾತಾರೆ, ಕೊಲ್ಹಾಪುರಗಳ ಅರಸರಿಗೆ ಸಹಾಯ ಮಾಡಿ, ಅವರಿಂದ ಜಹಗೀರಗಳನ್ನು ಇನಾಮುಗಳನ್ನು ಸಂಪಾದಿಸಿದನು. ದೊಡ್ಡ ಮನೆತನದ ಕನ್ಯೆಯೊಡನೆ ಆತನ ಲಗ್ನವಾಯಿತು. ಆತನ ಹೆಂಡತಿಯ ಹೆಸರು ಲಕ್ಷ್ಮೀಬಾಯಿಯು. ಈ ದಂಪತಿಗಳು ಬಹು ದಿವಸ ಸುಖದಿಂದ ಸಂಸಾರ ಮಾಡಿದರು. ಅವರು ಪರಸ್ಪರ ಪ್ರೀತಿಪಾತ್ರರಿದ್ದರು. ಅವರ ವೈಭವದಲ್ಲಿ ಯಾವ ಕೊರತೆಯೂ ಇದ್ದಿಲ್ಲ. ಆದರೆ ಅವರಿಗೆ ಇನ್ನು ವರೆಗೆ ಸಂತಾನವಾಗಲಿಲ್ಲವೆಂಬ ಕೊರತೆಯು ಮಾತ್ರ ಇತ್ತು. ಆಗ "**अपुत्रस्य गतिर्नास्ति**" ಎಂಬ ವಚನಕ್ಕನುಸರಿಸಿ ಲಕ್ಷ್ಮೀಬಾಯಿಯು ಮಕ್ಕಳಿಲ್ಲೆಂಬ ಚಿಂತೆಯಿಂದ ಬಳಲತೊಡಗಿದಳು. ಆಗ್ಗೆ ಆಕೆಯ ದುಗುಡವನ್ನು ತಿಳಿದು, ನಾರಾಯಣರಾಯನ ಸಮ್ಮತಿಯಿಂದ ಹರಿಭಟ್ಟರು ಆಕೆಯನ್ನು ಶ್ರೀತಿರುಪತಿಗೆ ಕರಕೊಂಡು ಹೋದರು. ಅಲ್ಲಿ ಅವರಿಬ್ಬರು ಶ್ರೀವೆಂಕಟಪತಿಯ ಆರಾಧನೆಯನ್ನು ಭಕ್ತಿಭಾವದಿಂದ ಮಾಡುತ್ತ ಅಲ್ಲಿಯೇ ಕೆಲವು ದಿವಸವಿದ್ದು ಮರಳಿ ಈಚಲಕರಂಜಿಗೆ ಬಂದರು. ಕೆಲವು ಕಾಲದ ಮೇಲೆ ಶ್ರೀವೆಂಕಟರಮಣನ ಅನುಗ್ರಹದಿಂದ ಲಕ್ಷ್ಮೀಬಾಯಿಯು ಒಂದು ಪುತ್ರರತ್ನವನ್ನು ಪ್ರಸವಿಸಿದಳು. ಆ ಕೂಸಿಗೆ ವೆಂಕಟರಾಯನೆಂತಲೇ ಹೆಸರಿಟ್ಟರು. ವೆಂಕಟರಾಯನೂ ತಂದೆಯಂತೆ ಸುಶೀಲನೂ, ಶೂರನೂ, ವಿವೇಕಿಯೂ, ಆಗಿ ಮುಂದೆ ಒಳ್ಳೇ ಹೆಸರು ಹೊಂದಿದನು.

ನಾರೋಮಹಾದೇವ ಈಚಲಕರಂಜಿಕರನ ಮಹದಾಶ್ರಯವು ದೊರೆತದರಿಂದ, ಹರಿಭಟ್ಟರ ಕಷ್ಟದೆಶೆಯು ಇಲ್ಲದಂತಾಯಿತು. ಉತ್ಕರ್ಷಗಳು ಆಗಹತ್ತಿದವೆಂದರೆ ಒಂದರಹಿಂದೊಂದು ಆಗುವವು. ಕೊತವಡೆಯಲ್ಲಿದ್ದಾಗ್ಗೆ ಹರಿಭಟ್ಟರ ಪ್ರಪಂಚವು ಸಾಗುವದೇ ಪರಮ ಪ್ರಯಾಸವೆನಿಸುತ್ತಿತ್ತು. ಅದೇ ಅವರು ಈಚಲಕರಂಜಿಗೆ ಬಂದ ಬಳಿಕ ಎಲ್ಲವೂ ಅನುಕೂಲವಾಗಿ, ಅವರು ಸೌಖ್ಯದಿಂದ ಕಾಲಕಳೆಯಹತ್ತಿದರು. ನಾರೋಮಹಾದೇವನ ಆಶ್ರಯಯೋಗದಿಂದ ಹರಿಭಟ್ಟರಿಗೆ ಪಂತಪ್ರತಿನಿಧಿಯಾದ ಬಾಳಾಜಿ ವಿಶ್ವನಾಥನ ಪರಿಚಯವಾಯಿತು; ಮತ್ತು ಅವರು ಪುಣೆ, ಸಾತಾರೆ ಮೊದಲಾದ ಸ್ಥಳಗಳಿಗೆ ಹೋಗಲಾರಂಭಿಸಿದರು. ಈ ಸಂಧಿಗೆ ಬಾಳಾಜಿ ವಿಶ್ವನಾಥನ ಮಗಳು ಅನುಬಾಯಿಯು ಮದುವಿಗೆ ಆಗಿದ್ದಳು. ಆಕೆಯನ್ನು ನಾರೋಮಹಾದೇವನ ಚಿರಂಜೀವನಾದ ವೆಂಕಟರಾಯನಿಗೆ ಕೊಡಬೇಕೆಂದು ಬಾಜೀರಾವ ಬಲ್ಲಾಳನು ನಿಶ್ಚೈಸಿದನು. ಈ ಲಗ್ನಕಾರ್ಯಭಾಗದಲ್ಲಿ ಹರಿಭಟ್ಟರು ಉಭಯಪಕ್ಷದ ಮಧ್ಯಸ್ಥಿಕೆಯನ್ನು ವಹಿಸಿದ್ದರು. ಮುಂದೆ ಆ ಶ್ರೀಮಂತ ವಧು-ವರರ ವಿವಾಹವು ಬಹು ಸಂಭ್ರಮದಿಂದ ಯಥಾಸಾಂಗವಾಯಿತು. ಈ ಪ್ರಕಾರ ಹರಿಭಟ್ಟರು ಪೇಶವೆಯರ ಪರಿಚಯವನ್ನು ಮಾಡಿಕೊಂಡದರಿಂದ, ಮುಂದೆ ಅವರ ಮಕ್ಕಳಿಗೆ ಪೇಶವೆ ದರಬಾರದಲ್ಲಿ ಸೇರಲಿಕ್ಕೆ ಅನುವು ಸಿಕ್ಕಿತು.

ಹರಿಭಟ್ಟರ ಸಹಧರ್ಮಿಣಿಯಾದ ಲಕ್ಷ್ಮೀಬಾಯಿಯು ಒಳ್ಳೇ ಪತಿನಿಷ್ಠಳು. ಆ ದಂಪತಿಗಳ ಹೊಟ್ಟೆಯಲ್ಲಿ ೧ ಕೃಷ್ಣಭಟ್ಟ, ೨ ಬಾಳಂಭಟ್ಟ, ೩ ತ್ರ್ಯಂಬಕಭಟ್ಟ, ೪ ಮಹಾದೇವಭಟ್ಟ, ೫ ಗೋವಿಂದಭಟ್ಟ, ೬ ರಾಮಚಂದ್ರಪಂತ, ೭ ಭಾಸ್ಕರಪಂತ ಈ ಪ್ರಕಾರ ಏಳು ಮಂದಿ ಗಂಡುಮಕ್ಕಳಿದ್ದರು. ಇವರಲ್ಲಿ ಮಹಾದೇವನು ಚಿಕ್ಕಂದಿನಲ್ಲಿ ಉಪನಯನವಾದ ಕೂಡಲೆ ತೀರಿಕೊಂಡನು. ಉಳಿದವರಲ್ಲಿ ತ್ರ್ಯಂಬಕಹರಿ, ಗೋವಿಂದಹರಿ, ರಾಮಚಂದ್ರಹರಿ ಈ ಮೂವರು ಅಲೌಕಿಕ ತೇಜಸ್ವಿಗಳಾಗಿದ್ದರು. ಅವರು ಚಿಕ್ಕವರಿರುವಾಗ್ಗೆ ಆಟನೋಟಗಳಲ್ಲಿ ತೋರಿಸುವ ದೊಡ್ಡಿಸ್ತನದಿಂದಲೂ, ವಿಲಕ್ಷಣ ಧೈರ್ಯದಿಂದಲೂ, ಪೌರುಷದ ಆಟಗಳಿಂದಲೂ, ಮುಂದೆ ಅವರು ಒಳ್ಳೇ ಧೈರ್ಯಶಾಲಿಗಳೂ, ಪಟುಭಟರೂ ಆಗುವರೆಂದು ಜನರು ಮಾತಾಡಹತ್ತಿದರು. ಮುಂದೆ ಅವರ ಆ ಭವಿಷ್ಯವು ಸತ್ಯವಾಗಿ ಆ ಮೂವರು ಹೆಸ

ರಿಗೆ ಬಂದರು. ಕೊಂಕಣದಿಂದ ದೇಶಕ್ಕೆ ಬಂದು ಬಾಳಾಜಿ ವಿಶ್ವನಾಥನು
ಸ್ಥಾಪಿಸಿದ ಪೇಶವೆ ಮನೆತನವನ್ನು ಬಾಜೀರಾವ ಬಲ್ಲಾಳನೂ, ಮತ್ತು
ತಾರ್ತರಿಯಿಂದ ಹಿಂದೂದೇಶಕ್ಕೆ ಬಂದು ಬಾಬರನು ನೆಲೆಗೊಳಿಸಿದ ಮೊಗಲ
ಸಾಮ್ರಾಜ್ಯವನ್ನು ಅಕಬರ ಬಾದಶಹನೂ ಮುಂದಕ್ಕೆ ತಂದಂತೆ, ಹರಿಭಟ್ಟ
ರಿಂದುದಿತವಾದ ಪಟವರ್ಧನ ಮನೆತನವನ್ನು ಮುಂದಕ್ಕೆ ತಂದವರು
ಇವರೇ ಮೂವರು. ಮುಂದೆ ಇವರ ವಂಶಜರೇ ತಮ್ಮ ಪ್ರಾಣವನ್ನು
ಸ್ವಾಮಿಕಾರ್ಯಕ್ಕಾಗಿ ಧಾರಾತೀರ್ಥದಲ್ಲಿ ಅರ್ಪಣೆಮಾಡಿ ಇತಿಹಾಸಖ್ಯಾತ
ರಾದರು. ಪಂತಪ್ರತಿನಿಧಿಗಳು ಇದೇ ಮೂವರ ವಂಶಜರ ಶೌರ್ಯಸಾಹಸ
ಗಳಿಗೆ ಮೆಚ್ಚಿ, ಅವರಿಗೆ ಸರದಾರರೆಂಬ ಪೌರುಷದ ಬಿರುದು ಕೊಟ್ಟರು.
ಇವರಲ್ಲಿ ಕಡೆಯವನಾದ ರಾಮಚಂದ್ರಹರಿಯೇ ಪ್ರೌಢಪ್ರತಾಪಿಯಾದ
ಪರಶುರಾಮಭಾವೂನ ತಂದೆಯು. ಮುಂದೆ ಈ ಮೂವರು ತಮ್ಮ
ಪರಾಕ್ರಮ ಪ್ರಭಾವದಿಂದ ದೊಡ್ಡ ದೊಡ್ಡ ಜಹಗೀರಗಳನ್ನು ಗಳಿಸಿದರು.
ಮಿಕ್ಕ ಬಂಧುಗಳಾದರೂ ದೇಶಕಲ್ಯಾಣದ ಸಲುವಾಗಿ ತಮ್ಮ ಶೌರ್ಯಸಾಹ
ಸಗಳ ಬಲದಿಂದ ಅನೇಕ ಮಹತ್ಕೃತ್ಯಗಳನ್ನು ಮಾಡಿ ಹೆಸರು ಹೊಂದಿ
ದರು. ಅದೆಲ್ಲ ಸಾದ್ಯಂತ ವರ್ಣಿಸುವದು ನಮ್ಮ ಪ್ರಸ್ತುತಕಾರ್ಯವಲ್ಲ.
ಆದುದರಿಂದ ಅವರೆಲ್ಲರನ್ನು ಬಿಟ್ಟು ನಮ್ಮ ಕಥಾನಾಯಕನಾದ ಪರಶು
ರಾಮಭಾವೂನ ತಂದೆಯಾದ ರಾಮಚಂದ್ರಹರಿಯು ರಾಜದರಬಾರದಲ್ಲಿ
ಹ್ಯಾಗೆ ಪ್ರವೇಶಮಾಡಿದನು? ಆತನ ಉತ್ತರೋತ್ತರವು ಯಾವ ಪ್ರಕಾರ
ಆಯಿತು? ಇವೇ ಮೊದಲಾದ ವಿಷಯಗಳನ್ನು ಯಥಾತಥ್ಯವಾಗಿ ಇಲ್ಲಿ
ವರ್ಣಿಸುವೆವು.

ಪೇಶವೆ ಮತ್ತು ಘೋರಪಡೆ ಸರದಾರರ ನಡುವೆ ಮೇಲೆ ಹೇಳಿದಂತೆ
ಶರೀರಸಂಬಂಧವಾದ ತರುವಾಯ, ಅನೂಬಾಯಿಯು ಈಚಲಕರಂಜಿಗೆ
ಅತ್ತೆಯ ಮನೆಗೆ ಬರಹೋಗುವದು ನಡೆಯಿತು. ಮುಂದೆ ತ್ರ್ಯಂಬಕಹ
ರಿಯು ಅಕ್ಕಲಕೋಟೆಗೆ ಹೋಗಿ ಅಲ್ಲಿಯ ಭೋಸಲೆ ಸರದಾರನ ಆಶ್ರಯ
ವನ್ನು ಹೊಂದಿದನು. ಅದನ್ನು ನೋಡಿ, ಗೋವಿಂದಹರಿ, ರಾಮಚಂದ್ರಹರಿ
ಇವರಿಬ್ಬರು ತಾವೂ ರಾಜಾಶ್ರಯವನ್ನು ಪಡೆಯಬೇಕೆಂದು ಇಚ್ಛಿಸಿದರು.
ಅಷ್ಟರಲ್ಲಿ ಅನುಬಾಯಿಯು ಅತ್ತೆಯ ಮನೆಯಿಂದ ತವರಮನೆಗೆ (ಪುಣೆಗೆ)
ಹೊರಡಬೇಕಾಗಿತ್ತು. ಆಗ ಈ ಬಂಧುದ್ವಯರು ಆಕೆಯ ಸಂಗಡ ಪುಣೆಗೆ

ಹೋಗಬೇಕೆಂದು ಕುತೂಹಲಗೊಂಡರು. ಹರಿಭಟ್ಟರು ಮಕ್ಕಳ ಮನೋಗತವನ್ನು ಕಂಡುಹಿಡಿದು, ಘೋರಪಡೆ ಸರದಾರನ ಮಖಾಂತರ ಅನುಬಾಯಿಗೆ ಆ ಬಗ್ಗೆ ಹೇಳಿಸಿದರು. ಆಕೆಯ ಅನುಮೋದನವು ಸಿಗುತ್ತಲೆ, ಅವರಿಬ್ಬರು ಹರುಷಗೊಂಡು, ಅವಳೊಡನೆ ಪುಣೆಗೆ ಹೊರಟರು. ಆಗ್ಗೆ ಪುಣೆಯಲ್ಲಿ ಬಾಜೀರಾವ ಬಲ್ಲಾಳನ ಕಾಲಕೀರ್ದಿಯು; ಅನುಬಾಯಿಯ ಆಶ್ರಯ ಯೋಗದಿಂದ ಆ ಸಹೋದರರಿಬ್ಬರಿಗೆ ಬಾಜೀರಾಯನ ಸಂಘಟನವು ಅನಾಯಾಸವಾಗಿ ಅನುಕೂಲಿಸಿತು. ಆತನು ಪ್ರಥಮತಃ ಅವರನ್ನು ಖಾಸಗಿ ಚಾಕರಿಯಲ್ಲಿ ನೇಮಿಸಿಕೊಂಡನು. ಬಾಜೀರಾವ ಬಲ್ಲಾಳನ ಕಾಲವೆಂದರೆ, ಶೂರರು ತಮ್ಮ ಶೌರ್ಯವನ್ನೂ, ಪೌರುಷವನ್ನೂ ತೋರ್ಪಡಿಸುವ ಕಾಲವು. ದೇಶದಲ್ಲಿ ಎಲ್ಲ ಕಡೆಗೂ ಯಾವಾಗಲೂ ಯುದ್ಧಗಳು ನಡೆಯುತ್ತಿದ್ದವು. ಅದರಿಂದ ಆಗ್ಗೆ ಶೂರ ಮತ್ತು ಧೀರಪುರುಷರ ತೇಜವು ವಿಶೇಷವಾಗಿತ್ತು. ಈ ಸಹೋದರರ ಸೌಜನ್ಯ, ಕಾರ್ಯತತ್ಪರತೆ ಇತ್ಯಾದಿ ಗುಣಗಳನ್ನು ಕಂಡು ಪೇಶವೆ ಬಾಜೀರಾಯನು ಸುಪ್ರಸನ್ನನಾಗಿ ಅವರ ಕೈ ಹಿಡಿದನು. ಪೇಶವೆ ದರಬಾರದಲ್ಲಿ ಇಂದ್ರೋಜಿ ಕದಮನೆಂಬುವನೊಬ್ಬ ಮರಾಠಾ ಸರದಾರನಿದ್ದನು. ಬಾಜೀರಾಯನು ಆ ಒಡಹುಟ್ಟಿದವರಿಬ್ಬರನ್ನು ಆ ಸರದಾರನ ಕೈಕೆಳಗೆ ಫಡಣವೀಸರನ್ನಾಗಿ ನೇಮಿಸಿದನು. ಗೋವಿಂದಹರಿಯು ತನ್ನ ಕೆಲಸವನ್ನು ಚನ್ನಾಗಿ ಮಾಡುತ್ತ ಕದಮನ ಪ್ರೇಮವನ್ನು ಸಂಪಾದಿಸಿದನು. ಆ ಸರದಾರನು ಬಾಜೀರಾಯನ ದೇಹರಕ್ಷಣೆಗಾಗಿ ಯಾವಾಗಲೂ ಆತನೊಡನೆ ದಂಡು ಸಹಿತ ಹೋಗುತ್ತಿದ್ದನು. ಅದರಿಂದ ಆ ಸಹೋದರರ ಶೌರ್ಯ ಮತ್ತು ಕರ್ತೃತ್ವಶಕ್ತಿ ಮುಂತಾದ ಪೌರುಷಗುಣಗಳು ಪೇಶವೆಯ ಮತ್ತು ಆತನ ತಮ್ಮನಾದ ಚಿಮಣಾಜಿಯ ದೃಷ್ಟಿಗೆ ಮೇಲಿಂದ ಮೇಲೆ ಬೀಳುತ್ತಿದ್ದವು. ಗೋವಿಂದಹರಿಯು ರಣಭೂಮಿಯಲ್ಲಿ ಜೀವದಾಶೆದೊರೆದು ಕಲಿತನದಿಂದ ಯುದ್ಧಮಾಡುವದನ್ನು ಕಂಡು ಆತನ ವಿಷಯವಾಗಿ ಕದಮನಲ್ಲಿ ದಿನದಿನಕ್ಕೆ ಪ್ರೀತಿ ವಿಶ್ವಾಸಗಳು ಬೆಳೆಯಹತ್ತಿದವು. ಆ ಸರದಾರನಿಗೆ ಸಂತಾನವಿದ್ದಿಲ್ಲ. ಅದರಿಂದ ಅವನು ತನ್ನ ಪಶ್ಚಾತ್ ತನ್ನ ಸರದಾರ ಪದವಿಯನ್ನು ಗೋವಿಂದಹರಿಗೇ ಕೊಡಬೇಕೆಂದು ಶ್ರೀಮಂತರಿಗೆ ಬಿನ್ನವಿಸಿದನು. ಮುಂದೆ ಸ್ವಲ್ಪ ದಿವಸಗಳಲ್ಲಿ ಶೂರನಾದ ಕದಮಸರದಾರನು ಕಾಲವಾದನು; ಅದರಿಂದ ಆತನ ಕೆಲಸವು ಗೋವಿಂದಹರಿಗೆ ದೊರೆಯಿತು.

ಹಿಂದೆ ಸಂತಾಜಿ ಘೋರಪಡೆಯ ಸರದಾರನ ಪದವಿಯು ನಾರೋಮಹಾದೇವನಿಗೆ ಸಿಕ್ಕಂತೆ, ಈಗ ಇಂದ್ರೋಜಿ ಕದಮನ ಅಧಿಕಾರವು ಗೋವಿಂದ ಹರಿಗೆ ಸಿಕ್ಕಿತು. ಹೀಗೆ ಆ ಕಾಲಕ್ಕೆ ಬ್ರಾಹ್ಮಣರು ಸರದಾರರ ಉದ್ಯೋಗದಲ್ಲಿ ಪಟಾಯಿತರಾಗಿ ಮೇಲಾದ ಹೆಚ್ಚಳವನ್ನು ಹೊಂದಿ ಬರಬರುತ್ತ ಪೇಶವೆ ಸಾಮ್ರಾಜ್ಯದ ಅಸ್ತಿತ್ವಕ್ಕೆ ಕಾರಣೀಭೂತರಾದರು.

ರಾಮಚಂದ್ರಹರಿಯ ಪರಾಕ್ರಮವನ್ನು ನೋಡಿ ಚಿಮಣಾಜಿಯು ಬಹು ಸಂತುಷ್ಟನಾಗಿ, ಆತನನ್ನು ತನ್ನ ಸ್ವಂತ ಸ್ವಾರರ ಪಥಕದಲ್ಲಿ ತೆಗೆದುಕೊಂಡನು.

ಮುಂದೆ ಬಾಜೀರಾಯನು ಸೈನ್ಯಸಹಿತ ಉತ್ತರಹಿಂದುಸ್ತಾನಕ್ಕೆ ಹೋದನು. ಜಯಪುರದ ಅರಸನಾದ ಸವಾಯಿಜಯಸಿಂಗನಿಗೂ ಪಂತಪ್ರತಿನಿಧಿಗೂ ಕಡುನಿಕರದ ಕಾಳಗವೆಸಗಿತು. ಆ ಯುದ್ಧದಲ್ಲಿ ರಾಮಚಂದ್ರಹರಿಯು ಬಹು ಪರಾಕ್ರಮದಿಂದ ಶತ್ರುಗಳೊಡನೆ ಹೋರಾಡಿ, ತನ್ನ ಅಲೌಕಿಕ ಸಾಮರ್ಥ್ಯವನ್ನು ತೋರಿಸಿದನು. ಅದನ್ನು ಪೇಶವೆ ಬಾಜೀರಾಯನು ಕಣ್ಣುಟ್ಟ ನೋಡಿ ಬೆರಗಾಗಿ ಬೊಟ್ಟು ಕಚ್ಚಿದನು. ಇದಲ್ಲದೆ ಪೇಶವೆಯು ಆತನಿಗೆ ಬಹು ಬೆಲೆಯ ವಸ್ತ್ರ ಮೊದಲಾದ ಉಚಿತಗಳನ್ನು ಮೆಚ್ಚುಗೊಟ್ಟು, ಬಹಳ ವಿಧದಿಂದ ಸತ್ಕರಿಸಿದನು. ಆ ಕಾಲಕ್ಕೆ ರಾಮಚಂದ್ರಹರಿಯು ತೋರಿಸಿದ ಧೈರ್ಯ, ಸಾಹಸಗಳು ಅವರ್ಣನೀಯವಾದವುಗಳು. ಆ ಬಗ್ಗೆ ವರ್ತಿಸಿದ ಒಂದು ಆಖ್ಯಾಯಿಕೆಯನ್ನು ಇಲ್ಲಿ ವರ್ಣಿಸುವದು ಅನಾವಶ್ಯಕವೆನಿಸದು. ಸವಾಯಿಜಯಸಿಂಗನು ಬಾಜೀರಾಯನೊಡನೆ ಒಪ್ಪಂದ ಮಾಡಿಕೊಂಡನು. ಬಳಿಕ ಪೇಶವೆಯು ತನ್ನ ಪ್ರಧಾನ, ಸರದಾರರರಿಂದ ಕೂಡಿಕೊಂಡು ಆ ರಜಪೂತರಾಜನ ಸಂದರ್ಶನಕ್ಕೆ ಹೊರಟನು. ಆಗ್ಗೆ ಬಾಜೀರಾಯನಿಗೆ ಚಮತ್ಕಾರವನ್ನು ತೋರಿಸಬೇಕೆಂದು, ರಾಜಾ ಜಯಸಿಂಗನ ಬಿಡಾರದ ಎದುರಿಗೆ ಶೃಂಗರಿಸಿದ ಆನೆಗಳನ್ನು ಸಾಲ್ಗೊಳಿಸಿ ನಿಲ್ಲಿಸಿದ್ದರು. ಅವುಗಳಲ್ಲಿ ಒಂದು ಆನೆಯು ಮದೋನ್ಮತ್ತವಾಗಿ ಯಾರಿಗೂ ಮಣಿಯದಂತಾಯಿತು. ಮಾವುತನ ವಿಶ್ವಪ್ರಯತ್ನಗಳು ವ್ಯರ್ಥವಾದವು. "ಈ ಆನೆಯನ್ನು ಹಿಡಿದು ಇದನ್ನು ಪ್ರತಿಬಂಧಿಸುವ ಎದೆಯು ಯಾರಿಗಾದರೂ ಇರುತ್ತದೆಯೋ" ಎಂಬ ಗೊಂದಲವು ಎರಡೂ ದಂಡಿನಲ್ಲಿ ಎದ್ದಿತು. ಆದರೆ

ಮುಂದೆ ಬಂದು ಆ ಪಶುವನ್ನು ತಡೆಯುವ ಎದೆಯು ಯಾರಿಗೂ ಆಗಲಿಲ್ಲ. ಕಡೆಗೆ ರಾಮಚಂದ್ರಹರಿಯು ಧೈರ್ಯದಿಂದ ಮುಂದರಿದು ಬಂದು ಆ ಕಾರ್ಯವನ್ನು ಅಂಗೀಕರಿಸಿ, ತನ್ನ ಕುದುರೆಯನ್ನೇರಿಕೊಂಡು, ಭಾಲೆ ಬರ್ಚಿ ಇತ್ಯಾದಿ ಆಯುಧಸಮೇತನಾಗಿ ಆ ಆನೆಯ ಕೂಡ ಯುದ್ಧಕ್ಕೆ ಸಿದ್ಧನಾದನು. ತನ್ನ ತೀಕ್ಷ್ಣವಾದ ಆಯುಧಪ್ರಹಾರದಿಂದ ಅರಕ್ಷಣದಲ್ಲಿ ಆತನು ಆದರ ಸೊಕ್ಕನ್ನು ಮುರಿದು, ಹಣ್ಣುಮಾಡಿ, ಅದನ್ನು ಅದರ ಸ್ಥಳದಲ್ಲಿ ಕಟ್ಟಿದನು. ರಾಮಚಂದ್ರಹರಿಯು ಆಗಿನ ಪ್ರಸಂಗದಲ್ಲಿ ತೋರಿಸಿದ ಧೈರ್ಯ ಸಾಹಸಗಳನ್ನು ಕಂಡು ಜನರೆಲ್ಲರು ಆಶ್ಚರ್ಯಚಕಿತರಾಗಿ ಆತನನ್ನು ಶಾನೆ ಶ್ಲಾಘಿಸಿದರು.

ಇಸವಿ ಸನ್ನ ೧೭೩೫ ರಲ್ಲಿ ಕೊಂಕಣದೊಳಗೆ ಜಂಜೀರೆಯ ಸಿದ್ದಿಯ ನವಾಬನು ಬಹು ಪುಂಡತನವನ್ನು ನಡೆಸಿ ಅಜಿಂಕ್ಯನಾಗಿದ್ದನು. ಅದರಿಂದ ಆತನ ಪಾರುಪತ್ಯವನ್ನು ಮಾಡುವದು ಅವಶ್ಯವಾಗಿತ್ತು. ಈ ಮಹತ್ವದ ಕಾರ್ಯಕ್ಕೆ ಶಾಹೂರಾಜನು ಶ್ರೀಮಂತ ಬಾಜೀರಾವ ಬಲ್ಲಾಳನನ್ನೂ, ಆತನ ಸಹೋದರನಾದ ಚಿಮಣಾಜಿಯನ್ನೂ ನೇಮಿಸಿದನು. ಆ ಸಿದ್ದಿಯ ಸರದಾರನು ರೇವದಂಡವೆಂಬ ದುರ್ಗಮವಾದ ದುರ್ಗದ ಆಶ್ರಯವನ್ನು ಹೊಂದಿ, ಅಲ್ಲಿ ತನ್ನ ಸೈನ್ಯಸಹಿತ ನಿಂತುಕೊಂಡಿದ್ದನು. ಆ ಕಿಲ್ಲೆಯನ್ನು ಚಿಮಣಾಜಿಯು ಮುತ್ತಿದನು. ಅನೇಕ ದಿವಸಗಳು ಗತಿಸಿದವು. ಸಿದ್ದಿಯ ಸರದಾರನು ವಶವಾಗಲಿಲ್ಲ. ಅದರಿಂದ ಚಿಮಣಾಜಿಯು ಕೋಟೆಯನ್ನು ಹಲ್ಲಾಮಾಡಿ ಹಿಡಕೊಳ್ಳಬೇಕೆಂದು ನಿರ್ಧರಿಸಿದನು. ಕಿಲ್ಲೆಯನ್ನು ಹಲ್ಲಾಮಾಡುವದರಲ್ಲಿ ರಾಮಚಂದ್ರಹರಿಯು ತನ್ನ ಅತುಲವಾದ ಸಾಹಸವನ್ನು ತೋರಿಸಿದನು. ಕೋಟೆಯು ಬಿಚ್ಚಿದ ಕೂಡಲೆ ತುಮುಲಯುದ್ಧವು ಪ್ರಾರಂಭವಾಯಿತು. ಆ ದಾರುಣವಾದ ಕಾಳಗದಲ್ಲಿ ರಾಮಚಂದ್ರಹರಿಯು ಬಹಳ ಶೌರ್ಯದಿಂದ ಹೋರಾಡಿ, ಅಜಯನಾದ ಸಿದ್ದಿಯ ಸರದಾರನನ್ನು ಗೆದ್ದು, ರೇವದಂಡಾ ದುರ್ಗವನ್ನು ಕೈವಶಮಾಡಿಕೊಂಡನು. ಆ ಯುದ್ಧದಲ್ಲಿ ಆತನ ಬಲಗೈಗೆ ಗುಂಡು ತಗಲಿ ದೊಡ್ಡ ಗಾಯವಾಯಿತು.

೧೭೩೭ನೆಯ ಇಸವಿಯಲ್ಲಿ ಪೋರ್ತುಗೀಜಜನರು ಕೊಂಕಣಪ್ರಾಂತದಲ್ಲಿ ಅಲ್ಲಿಯ ಹಿಂದೂಜನರನ್ನು ಧರ್ಮಭ್ರಷ್ಟರನ್ನು ಮಾಡುವದಕ್ಕೂ,

ಮಹಾರಾಷ್ಟ್ರ ರಾಜ್ಯದ ಪ್ರಜಾಜನರಿಗೆ ದುರ್ನಿವಾರವಾದ ಪೀಡೆಗಳನ್ನು ಕೊಡುವದಕ್ಕೆ ಪ್ರಾರಂಭಮಾಡಿದರು. ಆ ಫಿರಂಗಿಜನರ ಶಾಸನಮಾಡುವ ಸಲುವಾಗಿ ಬಾಜೀರಾಯನು ದೊಡ್ಡ ದಂಡಿನೊಡನೆ ತಾನೇ ಸ್ವತಃ ಕೊಂಕಣಕ್ಕೆ ಬಂದು ಪೋರ್ತುಗೀಜರನ್ನು ಹತ್ತೆಸರಿಗೆ ತಂದನು. ಇಷ್ಟರಲ್ಲಿ ಇರಾಣದ ಬಾದಶಹನಾದ ನಾದಿರಶಹನು ಉತ್ತರಹಿಂದುಸ್ಥಾನವನ್ನು ಒಳಸುಗ್ಗಿ ಕೊಲೆಸುಲಿಗೆಗಳನ್ನು ಮಾಡಲುಪಕ್ರಮಿಸಿರುವನೆಂಬ ಸುದ್ದಿಯು ಬಂದುದರಿಂದ ಬಾಜೀರಾಯನು ಕೊಂಕಣದ ಕಾರ್ಯಭಾಗವನ್ನು ಶೂರಶಾರ್ದೂಲನಾದ ಚಿಮಣಾಜಿ, ಶಿಂದೆ, ಭೋಸಲೆ ಮುಂತಾದ ವೀರಪುರುಷರಿಗೊಪ್ಪಿಸಿ ತಾನು ಉತ್ತರಹಿಂದುಸ್ಥಾನಕ್ಕೆ ಹೋದನು. ಕೊಂಕಣದಲ್ಲಿ ಚಿಮಣಾಜಿ ಪೋರ್ತುಗೀಜರ ನಡುವೆ ಅನೇಕ ಸ್ಥಳಗಳಲ್ಲಿ ಕಾಳಗಗಳು ಆದವು; ಅವೆಲ್ಲವುಗಳಲ್ಲಿ ರಾಮಚಂದ್ರಹರಿಯು ಬಹು ಪರಾಕ್ರಮವನ್ನು ಪ್ರಕಟಮಾಡಿದನು. ಅದರಿಂದ ಚಿಮಣಾಜಿಯಲ್ಲಿ ಆತನ ವರ್ಚಸ್ಸು ಮುಂಚಿಗಿಂತ ಹೆಚ್ಚು ಬೆಳೆಯಿತು. ಆತನು ರಾಮಚಂದ್ರಹರಿಯ ಅಭಿಪ್ರಾಯ ತಕ್ಕೊಂಡು ಯುದ್ಧ ಮಾಡಹತ್ತಿದನು.

ಇತ್ತ ಪೋರ್ತುಗೀಜರು ವಸಯಿ ಕಿಲ್ಲೆಯನ್ನು ಹೊಕ್ಕು ಕೂತುಕೊಂಡರು. ಚಿಮಣಾಜಿಯು ಆ ಕೋಟೆಯನ್ನು ಮುತ್ತಿದನು. ಅದು ಬಲವಾದ ದುರ್ಗವು; ಪೋರ್ತುಗೀಜರಂತೂ ಯುದ್ಧಕಲಾಕುಶಲರು; ಇದಲ್ಲದೆ ಅವರ ಶಸ್ತ್ರಾಸ್ತ್ರಗಳು ಉತ್ತಮತರದವಿದ್ದವು. ಆದದರಿಂದ ಮುತ್ತಿಗೆಹಾಕಿ ಬಹುಕಾಲವಾದರೂ ಮಹಾರಾಷ್ಟ್ರರ ಉಪಾಯವು ಸಾಗಲಿಲ್ಲ. ಕಡೆಗೆ ಕಿಲ್ಲೆಯನ್ನು ಹಲ್ಲಾಮಾಡುವ ವಿಚಾರವು ನಿರ್ಧರವಾಯಿತು. ಶತ್ರುಗಳ ಶಸ್ತ್ರಪ್ರಹರವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಚಿಮಣಾಜಿಯು ಅಲ್ಲಲ್ಲಿ ಮೋರ್ಚೆಗಳನ್ನು ಕಟ್ಟಿಸಿದನು; ಮತ್ತು ಸುರಂಗಮಾರ್ಗವನ್ನು ಮಾಡಿಸಿ ಅದರೊಳಗಿಂದ ಹೋಗುವ ಯತ್ನ ನಡಿಸಿದನು. ಹೀಗೆ ಮರಾಠಾ ಸೈನಿಕರು ಕೈಲಾದಷ್ಟು ಪ್ರಯತ್ನ ಮಾಡಿದರು. ಆದರೆ ಫಿರಂಗಿಜನರು ಬಹಳ ಸಾವಧರಿದ್ದು ಕಾರ್ಯದಕ್ಷರಿದ್ದುದರಿಂದ ಅವರ ಆಟವು ಸಾಗಲಿಲ್ಲ. ಸುರಂಗದ ಹೊಡತಕ್ಕೆ ಕಿಲ್ಲೆಯ ಗೋಡೆಗೆ ತೂತುಬೀಳುತ್ತಲೆ ಪೋರ್ತುಗೀಜರು ಅದನ್ನು ಉತ್ತರಕ್ಷಣದಲ್ಲಿ ಮುಚ್ಚಿ ಬಿಡುತ್ತಿದ್ದರು. ಆದದರಿಂದ ಪೇಶವೆಯರಿಗೆ ವಿಜಯದಾಶೆಯು ದುರ್ಲಭವೆನಿಸಿತು. “ದೈವಪರೀಕ್ಷೆಯು ಒಮ್ಮೆ ಆಗಿಹೋಗಲಿ.”

ಎಂದು ಪೆಟ್ಟಿನಮೇಲೆಪೆಟ್ಟು ಐದು ಸುರಂಗಗಳನ್ನು ಹೊಡೆದು ಕೂಡಲೆ ಸರ ಬತ್ತಿಯನ್ನು ಕೊಟ್ಟು ಕೋಟೆಗೆ ತೂತು ಕೆಡವಿದರು. ಗೋಡೆಗೆ ತೂತು ಬೀಳುವದೊಂದೇ ತಡ; ಕೂಡಲೆ ಒಬ್ಬರ ಹಿಂದೊಬ್ಬರು " ಹರಹರ ಮಹಾ ದೇವ " ಎಂದು ವೀರಘೋಷವನ್ನು ಮಾಡುತ್ತ ಕಿಲ್ಲೆಯನ್ನು ಹೊಕ್ಕರು. ಒಳಗಿನ ಜನರು ಅವರನ್ನು ಪರಾಕ್ರಮದಿಂದ ಪ್ರತಿಬಂಧಿಸಿದರು. ಆಗ್ಗೆ ಜೀವದ ಆಶೆಯನ್ನು ಬಿಟ್ಟು ಮರಾಠಾ-ಜನರು ಆವೇಶಭರದಿಂದ ಅವರೊ ಡನೆ ಕಾದಿದರು. ಅಂಥ ದಾರುಣವಾದ ಪ್ರಸಂಗದಲ್ಲಿ ರಾಮಚಂದ್ರಹರಿಯು ನಿಸ್ಸೀಮಪರಾಕ್ರಮವನ್ನು ತೋರಿಸಿದನು. ಶತ್ರುಜನರು ಮೇಲಿಂದ ಪ್ರಾಣ ವಿಘಾತಕವಾದ ತೋಫು-ಬಾಣ-ಗುಂಡುಗಳನ್ನು ಬಿಡುತ್ತಿದ್ದರು. ಅವುಗಳ ಹೊಡತದಿಂದ ಒಬ್ಬರಹಿಂದೊಬ್ಬರು ಶೂರಶಿಪಾಯಿಜನರು ಹತವೀರ್ಯರಾಗಿ ನೆಲಕ್ಕುರುಳುತ್ತಿದ್ದರು; ಪ್ರಸಂಗಪರ್ಯಾವಸಾನವು ಹ್ಯಾಗೆ ಆಗುವದೋ ಎಂದು ಎಲ್ಲರು ಚಿಂತಿತಮನಸ್ಕರಾಗಿದ್ದರು. ಇಂಥ ಹೃದಯದ್ರಾವಕ ರಣ ರಂಗದಲ್ಲಿ ರಾಮಚಂದ್ರಹರಿಯು ಎಲ್ಲರಕಿಂತ ಮುಂದೆ ಬಂದು, ವೈರಿಗಳ ವಿಷಮಯವಾದ ಬಾಣಗಳ ಪ್ರಹಾರವನ್ನು ಪರಿಗಣಿಸದೆ, ಸಾಹಸದಿಂದ ಕಿಲ್ಲೆಯಮೇಲೆ ಸಾಗಿ ಹೋಗಿ, ಪೇಶವೆಯರ ವಿಜಯಸೂಚಕವಾದ ಭಗವಾ ಪತಾಕೆಯನ್ನು ಕೋಟೆಯ ತುದಿಯಲ್ಲಿ ನಿಲ್ಲಿಸಿದನು.

ಆತನ ಅಲೌಕಿಕ ಪರಾಕ್ರಮವನ್ನು ಕಣ್ಣಾರೆ ಕಂಡು ಎಲ್ಲ ಮರಾಠಾ ಸರದಾರರು ಆಶ್ಚರ್ಯಚಕಿತರಾದರು. ವಸಯಿಕೋಟೆಯ ಘನಘೋರ ಸಂಗ್ರಾಮದಲ್ಲಿ ಕಲಿತನದಿಂದ ಕಾದಿ, ಕಿಲ್ಲೆಯನ್ನು ಕೈವಶ ಮಾಡಿಕೊಂಡ ಯಾವತ್ತು ಶ್ರೇಯಸ್ಸು ರಾಮಚಂದ್ರಹರಿ ಇವನದೇ ಎಂದು ಹೇಳಿದರೆ ಅತಿ ಶಯೋಕ್ತಿಯಾಗದು. ಚಿಮಾಜಿಯಂತೂ ಆತನ ಪರಾಕ್ರಮಗುಣಕ್ಕೆ ಮೆಚ್ಚಿ ತನ್ನ ೨೪೦೦ ಸ್ವಾರರ ಪಥಕವನ್ನು ಆತನ ಸ್ವಾಧೀನ ಮಾಡಿ, ಆತ ನಿಗೆ ಸರದಾರನ ಪದವಿಯನ್ನು ಕೊಟ್ಟು ಸನ್ಮಾನಿಸಿದನು. ಈಮೇರೆಗೆ ಚಿಮ ಣಾಜಿಯ ದೇಹರಕ್ಷಕ ಸ್ವಾರನಾದ ರಾಮಚಂದ್ರಹರಿಯು ತನ್ನ ಪರಾಕ್ರಮ ಬಲದಿಂದ ಪೋರ್ತುಗೀಜರೊಡನೆ ನಡೆದ ಕಡುನಿಕರದ ಕಾಳಗದಲ್ಲಿ ಅಪೂ ರ್ವವಿಜಯವನ್ನು ಪಡೆದು, ಸರದಾರರ ಮಾಲಿಕೆಯಲ್ಲಿ ಮುಕುಟಮಣಿಯಾಗಿ ಹೊಳೆಯಹತ್ತಿದನು. ನೋಡರಿ! ದೈವಗತಿಯು ಅಗಾಧವಾದದ್ದು.

ಮುಂದೆ ಈ ವೀರಾಗ್ರಣಿಯ ಉತ್ಕರ್ಷವು ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಿತು. ಚಿಮಣಾಜಿಯು ಆತನನ್ನು ಅಧಿಕಾಧಿಕವಾಗಿ ಪ್ರೀತಿಸಹತ್ತಿದನು. ಈ ಮೇರೆಗೆ ತೇಜಸ್ವಿಯಾದ ರಾಮಚಂದ್ರಹರಿಯ ಪರಾಕ್ರಮಕೀರ್ತಿಯು ಶ್ರೀಮನ್ಮಹಾರಾಜ ಶಾಹುಛತ್ರಪತಿಯವರ ಕಿವಿವರೆಗೆ ಹೋಯಿತು. ವಸಯಿ ಕಾಳಗದ ಕಾರ್ಯಭಾಗವನ್ನು ಮುಗಿಸಿಕೊಂಡು ರಾಮಚಂದ್ರಹರಿಯು ಪುಣೆಗೆ ಬಂದನು. ಅಲ್ಲಿ ಅವನು ಇಷ್ಟಜನರೊಡಗೊಂಡು ಕೆಲವು ದಿವಸಗಳನ್ನು ಸಂಸಾರಸುಖದಲ್ಲಿ ಕಳೆದನು. ಅಷ್ಟರಲ್ಲಿ ಆತನ ಪತ್ನಿಯಾದ ಜಾನಕಿಬಾಯಿಯು ಗರ್ಭಿಣಿಯಾಗಿ ಶಕೆ ೧೬೬೨ ಶ್ರಾವಣಶುದ್ಧ ೮ ದಿವಸ ಸುಮುಹೂರ್ತದಲ್ಲಿ ಪುತ್ರರತ್ನವನ್ನು ಪ್ರಸವಿಸಿದಳು. (ಇಸವಿ ಸನ್ನ ೧೭೪೦). ಮಗನು ಹುಟ್ಟಿದರೆ ತಂದೆತಾಯಿಗಳಿಗೆ ಆನಂದವಾಗುವದು ಸಹಜವದೆ. ಅದರೊಳಗೆ ಸೌಭಾಗ್ಯದೆಶೆಯಲ್ಲಿ ಪುತ್ರಸಂತಾನವಾದುದರಿಂದ ಆ ಪಟವರ್ಧನ ದಂಪತಿಗಳಿಗಾದ ಆನಂದವನ್ನು ಹೇಳಲಳವಲ್ಲ. ಅವರು ನಾನಾಬಗೆಯ ಉತ್ಸವವನ್ನು ಮಾಡಿ ಆ ಹುಡುಗನಿಗೆ "ಪರಶುರಾಮ" ನೆಂಬ ಹೆಸರು ಇಟ್ಟರು. ಈತನೇ ಮುಂದೆ ಘನಪರಾಕ್ರಮಿಯಾಗಿ ತನ್ನ ಅಲೌಕಿಕಸಾಹಸ, ಅತರ್ಕಪ್ರತಾಪಗಳ ಯೋಗದಿಂದ ಇಡೀ ಭರತಖಂಡದಲ್ಲಿ ಪೇಶವೆಯರ ಪ್ರತಿಷ್ಠೆಯನ್ನು ಬೆಳೆಸಿ, ಶತ್ರುಸಂಕುಲವನ್ನು ಗದಗದನೆ ನಡುಗಿಸಿ, ಯವನರಾಜನನ್ನು ಹಣಿದು, ಹಿಂದೂಜನರ ಮೇಲೆ ಅನಂತಾನಂತ ಉಪಕಾರಗಳನ್ನು ಮಾಡಿ, ಪ್ರತ್ಯಕ್ಷ 'ಪರುಶುರಾಮನ' ಅವತಾರವೆಂದು ಹೆಸರುಪಡೆದು, "ಅಳಿಯುವದು ಕಾಯವು, ಉಳಿಯುದಲ್ಲದೆ ಕೀರ್ತಿ" ಎಂಬ ದಾಸೋಕ್ತಿಯಂತೆ ಅಶಾಶ್ವಿತವಾದ ಮಾನುಷ-ಶರೀರದಿಂದ ಮುಕ್ತನಾಗಿದ್ದರೂ ಚಿರಕಾಲ ಕೀರ್ತಿಯನ್ನು ಹೊಂದಿದನು. ಈ ಪಟವರ್ಧನ ಬಾಲಕನೇ ನಮ್ಮ ಪ್ರಸ್ತುತ ಚರಿತ್ರ ನಾಯಕನು.

---

# ೨ನೆಯ ಅಧ್ಯಾಯ.

## ಭಾವೂನ ಬಾಲ್ಯವೂ, ವಿದ್ಯಾಭ್ಯಾಸವೂ.

ಇಸವಿಸನ್ನ ೧೭೪೦ನೆಯ ಎಪ್ರೈಲತಿಂಗಳಲ್ಲಿ ಪೇಶವೆ ಕುಲದೀಪಕನೂ, ಪರಮಪರಾಕ್ರಮಿಯೂ ಆದ ಶ್ರೀಮಂತ ಬಾಜೀರಾವ ಬಲ್ಲಾಳನು ದೈವಾಧೀನನಾದುದರಿಂದ ದಿಲ್ಲೀ ಬಾದಶಹ, ನಿಜಾಮ ಇತ್ಯಾದಿ ರಾಜ-ರಾಜೇಶ್ವರರ ಓಲಗಗಳಲ್ಲಿ ಮಹಾರಾಷ್ಟ್ರರ ಗೌರವವು ಕಡಿಮೆಯಾಗಹತ್ತಿತು. ಆದದರಿಂದ ನೂತನ ಪೇಶವೆಯಾದ ಬಾಳಾಜಿಬಾಜೀರಾಯನು ಚಿಗಪ್ಪನಾದ ಚಿಮಣಾಜಿಯನ್ನು ಕೂಡಿಕೊಂಡು ದೊಡ್ಡದಂಡಿನೊಡನೆ ಮಾಳವಾಪ್ರಾಂತದಮೇಲೆ ದೌಡುಮಾಡಿದನು. ಆ ದಂಡಿನಲ್ಲಿ ರಾಮಚಂದ್ರಹರಿಯೂ ಇದ್ದನು. ಮುಂದೆ ತುಸುದಿವಸಗಳಲ್ಲಿ ಭ್ರಾತೃಶೋಕದಿಂದ ಚಿಮಣಾಜಿಯು ಕಾಲವಾದನು. ಆದ್ದರಿಂದ ರಾಮಚಂದ್ರಹರಿಯ ಪುರಸ್ಕರ್ತರು ಇಲ್ಲದಂತಾಯಿತು. ಆದರೂ ಬಾಳಾಜಿಬಾಜೀರಾಯನು ಆತನನ್ನು ಯಥಾಯೋಗ್ಯ ಪ್ರೀತಿಸಹತ್ತಿದನು. ನಾನಾಸಾಹೇಬನು ತಾನು ಹೋದಹೋದಲ್ಲಿ ರಾಮಚಂದ್ರಹರಿಯನ್ನು ಸಂಗಡ ಕರಕೊಂಡು ಹೋಗಲಾರಂಭಿಸಿದನು. ಬಂಗಾಲದ ಮೇಲೆ ನಾನಾಸಾಹೇಬನು ಮಾಡಿದ ದಾಳಿಯ ಪ್ರಸಂಗದಲ್ಲಿ ರಾಮಚಂದ್ರಹರಿಯು ಪೇಶ್ವೆನಿಗೆ ಬಹಳ ಉಪಯೋಗವಾದನು. ಅಷ್ಟರಲ್ಲಿ ದಕ್ಷಿಣನಾಡಿನ ರಾಜಕರಣದ ಪ್ರಸಂಗವು ಒದಗಿದದರಿಂದ ಪೇಶವೆಯು ಮರಳಿ ಬರಬೇಕಾಯಿತು.

ದಕ್ಷಿಣದೇಶದ ರಾಜ್ಯಕಾರ್ಯವನ್ನು ಸಾಂಗಗೊಳಿಸಿ, ರಾಜ್ಯವ್ಯವಸ್ಥೆಯನ್ನು ಸರಿಪಡಿಸಿಕೊಂಡು, ಬಾಳಾಜಿಬಾಜೀರಾಯನು ಸ್ವಲ್ಪ ದಿನಗಳವರೆಗೆ ವಿಶ್ರಾಂತಿಗೋಸ್ಕರ ಪುಣೆಯಲ್ಲಿ ನಿಂತುಕೊಂಡನು. ಅಷ್ಟರಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಪುನಃ ಬಂಡಿನ ಚಿನ್ಹಗಳು ತೋರಿದವು. ಅಫಗಾಣ ಸರದಾರ ವೀರನಾದ ಅಹ್ಮದಶಾ ಅಬ್ದಾಲಿಯು ವಾಯುವ್ಯ ಭಾಗದ ಪ್ರಜೆಗಳನ್ನು ಪೀಡಿಸತೊಡಗಿದನು. ಪಂಜಾಬದಲ್ಲಿರುತ್ತಿದ್ದ ದಿಲ್ಲಿಯ ಬಾದಶಹನ ಸಾಮಂತ ಸರದಾರರು ಆ ಅಬ್ದಾಲಿಯೆಂಬುವ ಹೆಬ್ಬುಲಿಯನ್ನು ಕೂಡಿಕೊಂಡರು.

ಆ ಹೆಬ್ಬುಲಿಯು ಅಲ್ಲಲ್ಲಿ ಕೊಲೆಸುಲಿಗೆಗಳನ್ನು ಮಾಡುತ್ತ, ಉತ್ತರಹಿಂದುಸ್ಥಾನದಲ್ಲಿ ನಿರ್ಭಯದಿಂದ ಸಂಚರಿಸಹತ್ತಿತು. ಅದನ್ನು ಕೆಣಕಿ ಎದುರಿಸುವ ಎದೆಯು ಯಾರಿಗೂ ಆಗದೆ ಅಲ್ಲಿಯ ಎಲ್ಲ ಹಿಂದೂರಾಜರು ಹೊದರುಗಳನ್ನು ಸೇರುವ ಮೊಲಗಳಂತೆ ಕೋಟೆಕೊತ್ತಳಗಳನ್ನು ಸೇರಿಕೊಂಡರು. ಈ ಮೇರೆಗೆ ಭಯಂಕರ ಬಂಡಾಯವು ಉಪಸ್ಥಿತವಾಗಲು, ಉತ್ತರಹಿಂದುಸ್ಥಾನದ ಶೋಚನೀಯ ಸ್ಥಿತಿಯನ್ನು ದುರ್ಲಕ್ಷಿಸುವದೂ, ಆ ಅಫಗಾಣ ಹೆಬ್ಬುಲಿಯ ಉಬ್ಬನ್ನು ಹೆಚ್ಚುಗೊಡುವದೂ, ಸ್ವಕೀಯರಾದ ಹಿಂದೂಜನರ ಅನಿವಾರವಾದ ಕಷ್ಟನಷ್ಟಗಳು ಬೆಳೆಯಲಿಕ್ಕೆ ಆಸ್ಪದ ಕೊಡುವದೂ ಪ್ರಶಸ್ತವಲ್ಲವೆಂದು ನೆನಿಸಿ, ಶ್ರೀಮಂತ ಬಾಳಾಜಿಬಾಜೀರಾವ ಪೇಶ್ವೆಯು ದೊಡ್ಡ ದಂಡಿನೊಡನೆ ಉತ್ತರಹಿಂದುಸ್ತಾನಕ್ಕೆ ಹೋದನು. ಆತನು ಬುಂದೇಲಖಂಡದ ರಾಜನನ್ನು ತನ್ನಕಡೆಗೆ ಮಾಡಿಕೊಂಡನು. ಮುಂದೆ ತುಸು ದಿವಸಗಳಲ್ಲಿ ತನ್ನ ಪರಾಕ್ರಮ, ಬುದ್ಧಿಸಾಮರ್ಥ್ಯಗಳಿಂದ ದಿಲ್ಲಿಯ ರಾಜ್ಯದಲ್ಲಿ ಎದ್ದ ದಂಗೆಗಳನ್ನು ಮುರಿದು ಅಬ್ದಾಲಿಯನ್ನು ಹಿಂದಕ್ಕಟ್ಟಿಬಿಟ್ಟನು. ಈ ದಾಳಿಯಲ್ಲಿ ರಾಮಚಂದ್ರಹರಿಯು, ಪೇಶವೆಯು ತನಗೆ ಒಪ್ಪಿಸಿಕೊಟ್ಟ ದಂಡಿನ ವ್ಯವಸ್ಥೆಯ ಕೆಲಸವನ್ನು ಬಹು ಜಾಗ್ರತೆಯಿಂದಲೂ, ಏಕನಿಷ್ಠೆಯಿಂದಲೂ ಮಾಡಿದ್ದರಿಂದ ನಾನಾಸಾಹೇಬನು ಸಂತುಷ್ಟನಾಗಿ ರಾಮಚಂದ್ರಹರಿಯು ಸ್ವತಂತ್ರ ಯುದ್ಧವನ್ನು ಮಾಡುವದಕ್ಕೆ ಸಹ ಸಮರ್ಥನಿರುವನೆಂದು ಮನಗಂಡನು. ತರುವಾಯ ಬಾಳಾಜಿ ಬಾಜೀರಾಯನು ಆತನ ಸ್ವಾಧೀನಕ್ಕೆ ದಂಡಿನ ದೊಡ್ಡ ಭಾಗವನ್ನು ಕೊಟ್ಟು, ಆತನಿಗೆ ಗೆದ್ದ ಪ್ರದೇಶಗಳಲ್ಲಿ ಅಂತರ್ವೇದಿತ ವ್ಯವಸ್ಥೆಯನ್ನು ಮಾಡಿ ಹಿಂದಿನಿಂದ ಬರುವಂತೆ ಅಪ್ಪಣೆಯನ್ನಿತ್ತು, ತಾನು ಮಿತಪರಿವಾರದೊಂದಿಗೆ ದಕ್ಷಿಣಕ್ಕೆ ಹೊರಟು ಬಂದನು. ಹೀಗೆ ರಾಮಚಂದ್ರಹರಿಯ ಅಭ್ಯುದಯವು ಹೆಚ್ಚುತ್ತಿರಲು, ಒಮ್ಮಿಂದೊಮ್ಮೆ ಒಂದು ಭಯಂಕರ ಪ್ರಸಂಗವು ಒದಗಿತು. ಪೇಶವೆಯ ಅಪ್ಪಣೆಯಂತೆ ಅಂತರ್ವೇದಿತ ವ್ಯವಸ್ಥೆಯನ್ನು ಸರಿಗೊಳಿಸುತ್ತ ಆತನು ಸೈನ್ಯಸಹಿತ ಬ್ರಹ್ಮಾವರ್ತದ ಹತ್ತರಿರುವ ಶಿವರಾಜಪುರವೆಂಬಲ್ಲಿಗೆ ಬಂದು ಅಲ್ಲಿ ತಳವೂರಿದನು. ಅಲ್ಲಿಯೇ ಆತನಿಗೆ ಒಮ್ಮಿಂದೊಮ್ಮೆ ಉದರರೋಗವು ತಗಲಿ ಅದು ಪ್ರಬಲವಾಗುತ್ತ ಕಡೆಗೆ ಅದರಿಂದಲೇ ರಾಮಚಂದ್ರಹರಿಯು ಶಕೆ ೧೬೭೧ ಆಶ್ವಿನ

ಶುದ್ಧ ಸಪ್ತಮಿ ದಿವಸ ಮರಣಹೊಂದಿದನು. ಅದರಿಂದ ಆ ಕಾಲದ ಒಂದು ಶೂರರತ್ನವು ಇಲ್ಲದಂತಾಯಿತು.

ರಾಮಚಂದ್ರಹರಿಯು ತೀರಿಕೊಂಡಾಗ ನಮ್ಮ ಕಥಾನಾಯಕನಾದ ಪರಶುರಾಮನು ಹತ್ತುವರುಷದ ಬಾಲಕನಿದ್ದನು. ಆತನ ಮರಣವಾರ್ತೆಯನ್ನು ಕೇಳಿ ಆತನ ಧರ್ಮಪತ್ನಿಯಾದ ಜಾನಕಿಬಾಯಿಯು ಪತಿವಿಯೋಗದ ಅಸಾಧ್ಯ ದುಃಖದಿಂದ ನೆಲದ ಮೇಲೆ ಬಿದ್ದು ಹೊರಳಾಡಹತ್ತಿ "ಅಯ್ಯೋ ವಿಧಿಯೇ, ಏನು ಮಾಡಿಬಿಟ್ಟೆ, ನನ್ನ ಮುದ್ದುಮಗನಾದ ಪರಶುರಾಮನು ಇನ್ನೂ ಚಿಕ್ಕವನು. ಅನಾಥರಾದ ನಮ್ಮನ್ನು ಯಾರು ನೋಡುವರು? ಇನ್ನು ನಾವು ಹ್ಯಾಗೆ ಕಾಲಹರಣ ಮಾಡಬೇಕು? ಈವರೆಗೆ ಮಾಡಿದ ಸುಖಮಯ ಸಂಸಾರವು ಸ್ವಪ್ನದಂತೆ ಆಗಿಹೋಯಿತಲ್ಲ." ಎಂದು ಬಗೆಬಗೆಯಿಂದ ಹಲುಬಿ ಹಂಬಲಿಸಿದಳು. ಅವಳ ಅಳವನ್ನು ಹೇಳಲಳವಲ್ಲ; ಅದು ಏನು ಮಾಡಿದರೂ ನಿಲ್ಲದು. ಆಕೆಯ ಹೃದಯಭೇದಕ ರೋದನದಿಂದ ಅದಮನೆಯಲ್ಲ ಕಂಪಿಸಿತು. ಭಾವುಬಾಲಕನಾದರೂ, ಅವನಿಗೆ ಒಳಿತು ಕೇಡುಗಳ ತಿಳುವಳಿಕೆಯಿದ್ದುದರಿಂದ ಆತನೂ ದೊಡ್ಡ ಧ್ವನಿಯನ್ನು ತೆಗೆದು ಅಳಹತ್ತಿದನು. ಈ ಸಂಕಟಸಮಯದಲ್ಲಿ ಪುರುಷೋತ್ತಮರಾಯನು ಅವರನ್ನು ಸಮಾಧಾನಪಡಿಸಿದನು. ಆತನು ಜಾನಕಿಬಾಯಿಯನ್ನು ಕುರಿತು "ಕಕ್ಕಿಯೇ, ಧೈರ್ಯತಾಳು, ವಿವೇಕವನ್ನು ತಂದುಕೋ. ಹೀಗೆ ಅಳುವದರಿಂದ ಏನು ಪ್ರಯೋಜನವುಂಟು. ನೀನು ತಿಳಿದವಳು. ನೀನೇ ಹೀಗೆ ಅಳುತ್ತ ಕೂತರೆ ಈ ಸುಕುಮಾರನ ಅವಸ್ಥೆಯು ಏನು ಆಗುವದೆಂಬುದನ್ನು ವಿಚಾರಮಾಡು. ನನ್ನನ್ನು ರಾಮಚಂದ್ರರಾಯರು ಜೋಪಾನಮಾಡಿದಂತೆ ನಾನು ಈ ಬಾಲಕನಾದ ಪರಶುರಾಮನನ್ನು ಜೋಕೆಮಾಡುವೆನು. ಆಡಿದ ಮಾತಿಗೆ ನಾನು ಎಂದೂ ತಪ್ಪಲಾರೆನು." ಎಂದು ಹೇಳಿ ಅತ್ತು ಗೋಳಿಟ್ಟ ಶೋಕವಿಹ್ವಲರಾದ ಅವರಿಬ್ಬರನ್ನು ಸಂತೈಸಿದನು.

ವಾಚಕರೇ, ಈ ಪುರುಷೋತ್ತಮರಾಯರು ಯಾರು? ಆತನು ಇಷ್ಟು ಕನಿಕರಬಟ್ಟು ಮಗನನ್ನು ಮುಂದಿಟ್ಟುಕೊಂಡು ಹಲುಬಿ ಹಂಬಲಿಸುವ ಜಾನಕಿಬಾಯಿಯನ್ನು ಯಾಕೆ ಸಮಾಧಾನಗೊಳಿಸಿದನು? ಮುಂತಾದ ಸಂಗತಿಗಳು ನಿಮಗೆ ಮುಂದೆ ಕ್ರಮಶಃ ಗೊತ್ತಾಗುವವು.

ಬಾಲ್ಯದಲ್ಲಿ ಪಿತೃ-ವಿಯೋಗವು ದೊಡ್ಡ ದುರ್ಭಾಗ್ಯವು. ತಂದೆಯೆಂದರೆ ಮಗನ ಪುರಸ್ಕರ್ತನೂ, ಶಿಕ್ಷಕನೂ ಆಗಿರುವನು. ಪಿತೃ-ಸಮಾಗಮದಿಂದ ಮಕ್ಕಳಿಗೆ ಜ್ಞಾನವೂ, ಸದುಪದೇಶವೂ, ಅನುಭವವೂ, ನೀತಿಗಳೂ, ಲಭಿಸುವವು. ಮಕ್ಕಳ ವಿದ್ಯಾಭ್ಯಾಸ, ಸನ್ಮಾರ್ಗಪ್ರವರ್ತನ ಮತ್ತು ಅವರ ಆಚಾರವಿಚಾರಗಳ ಬಗ್ಗೆ ತಂದೆಗಿರುವಷ್ಟು ಚಿಂತೆಯೂ, ಎಚ್ಚರವೂ ಹೆರವರಿಗಿರುವದಿಲ್ಲವೆಂಬುವದು ಸಹಜವದೆ. ಹೀಗೆ ಮಕ್ಕಳ ಕಲ್ಯಾಣಕರ್ತನೂ, ಕುಟುಂಬ-ಚಾಲಕನೂ ಆದ ಪಿತನ ವಿಯೋಗವು ಚಿಕ್ಕತನದಲ್ಲಿ ಆಗಲು, ಕುಟುಂಬದಲ್ಲಿ ಅವ್ಯವಸ್ಥೆಯು ಹುಟ್ಟಿ ಅದರ ದುಷ್ಟಪರಿಣಾಮವು ಅನುಭವಕ್ಕೆ ಬಾರದೆ ಹೋಗದು. ಈ ಬಗೆಯ ದುರ್ಭಾಗ್ಯಜನಿತವಾದ ಅವ್ಯವಸ್ಥೆಯ ಯೋಗದಿಂದ ಉತ್ಕರ್ಷವನ್ನು ಹೊಂದತಕ್ಕ ಎಷ್ಟೋ ಹುಡುಗರು ವಿದ್ಯೆಬುದ್ಧಿಗಳನ್ನು ಕಲಿಯದೆ ಉಡಾಳರೂ, ಹುಂಬರೂ, ಕೆಟ್ಟ ನಡೆನುಡಿಯವರೂ ಆಗುವರು; ಹೀಗಾಗುವದರಿಂದ ಅವರ ಮುಂದಿನ ಹೆಚ್ಚಳದ ಮಾರ್ಗವು ತಪ್ಪಿಹೋಗುವದು. ಭಾವು ಚಿಕ್ಕವನಿರುವಾಗ್ಗೆ ಆತನ ತಂದೆಯು ಯಾವಾಗಲೂ ಎಲ್ಲಾದರೂ ಯುದ್ಧಪ್ರಸಂಗಗಳಲ್ಲಿ ತೊಡಗಿರುತ್ತಿದ್ದನು. ಮುಂದೆ ಸ್ವಲ್ಪ ದಿವಸಗಳಲ್ಲಿ ಆತನ ಅಂತವೇ ಆಗಿಹೋಯಿತು. ಅಂದ ಬಳಿಕ ಪರಶುರಾಮನ ವಿದ್ಯಾಭ್ಯಾಸ, ಯುದ್ಧಕಲಾಶಿಕ್ಷಣ ಮೊದಲಾದವುಗಳು ವಸ್ತುತಃ ನಿಂತುಹೋಗತಕ್ಕವೇ ಸರಿ. ಆದರೆ ಸುದೈವದಿಂದ ಹಾಗೆ ಆಗಲಿಲ್ಲ. ಪಟವರ್ಧನ ಕುಟುಂಬದ ಎಲ್ಲ ಪುರುಷರು ಒಕ್ಕಟ್ಟಿನಿಂದಲೂ, ಪರಸ್ಪರ ಪ್ರೇಮಭಾವದಿಂದಲೂ ಇದ್ದರು. ಭೇದಾಭೇದ ಬುದ್ಧಿಯು ಎಳ್ಳಷ್ಟಾದರೂ ಇದ್ದಿಲ್ಲ. ರಾಮಚಂದ್ರಹರಿಯು ಪೇಶವೆಯರ ಸಂಗಡ, ಕಾಳಗಕ್ಕೆ ಹೋಗುತ್ತಿದ್ದರೂ, ಆತನ ಬಾಂಧವಜನರು ಬಾಲಕನಾದ ಭಾವೂನ ವಿದ್ಯಾಭ್ಯಾಸದ ಕಡೆಗೆ ಸಾಕಷ್ಟು ಲಕ್ಷಕೊಡುತ್ತಿದ್ದರು. ಮುಂದೆ ರಾಮಚಂದ್ರಹರಿಯು ತೀರಿದ ಮೇಲೆ ಸಹ ಅವರು ಅದರಂತೆ ಭಾವೂನ ಶಿಕ್ಷಣಕ್ರಮವನ್ನು ನಡೆಸಿದರು. ಹೀಗಾದದರಿಂದ ವಾಚನ, ಲೇಖನ, ಜಮಾಖರ್ಚು ಇವೇ ಮೊದಲಾದ ಆಗಿನ ಕಾಲದ ವಿದ್ಯೆಯ ಮುಖ್ಯಾಂಗಗಳಲ್ಲಿ ಭಾವು ಸ್ವಲ್ಪ ಕಾಲದಲ್ಲಿ ಪ್ರವೀಣನಾದನು. ಖಾಸಗಿವಾಲೆ ಎಂಬುವವನು ಭಾವೂನ ಸೋದರಮಾವನು. ಅವನು ಪುಣೆಯಲ್ಲಿರುತ್ತಿದ್ದನು. ಅದರಿಂದ ಭಾವು ಕೆಲವು ದಿವಸ ಆತನೊಡನೆ ಇರಲು ಅನುಕೂಲವಿತ್ತು. ಖಾಸಗಿವಾಲೆಯು

ಪೇಶ್ವೆದರಬಾರದ ಪರಮಪ್ರತಿಷ್ಠಿತ ಸರದಾರರಲ್ಲಿ ಒಬ್ಬನಾಗಿದ್ದನು. ಆತನ ಮನೆಯಲ್ಲಿ ದರಬಾರದ ಕೆಲಸವು ನಡೆಯುತ್ತಿತ್ತು. ಅವನ ಕೈಕೆಳಗೆ ಅನೇಕ ಕಾರಕೂನಜನರಿದ್ದರು. ತನ್ನ ಸೋದರಮಾವನು ಆ ಕಾರಕೂನಜನರು ಮಾಡುವ ಕೆಲಸಗಳ ಮೇಲ್ವಿಚಾರಣೆಯನ್ನು ಮಾಡಲು ಹೋಗುತ್ತಿರುವಾಗ್ಗೆ ಭಾವು ಆತನ ಕೂಡ ಹೋಗುತ್ತಿದ್ದನು. ಅದರಿಂದ ಆತನಿಗೆ ಜಮಾಖರ್ಚು, ಜಬಾಬು ಬರಿಯೋಣ ಇತ್ಯಾದಿ ದರಬಾರದ ಕೆಲಸಗಳ ತಿಳುವಳಿಕೆಯು ಆಯಿತು.

ರಾಮಚಂದ್ರಹರಿಯು ಮರಣಹೊಂದಿದ ಬಳಿಕ ಭಾವು ಚಿಕ್ಕವನಿದ್ದುದರಿಂದ ಆತನ ಸೇನಾಪತಿಯ ಕೆಲಸವನ್ನು ಬಾವೂನ ವತಿಯಿಂದ ಆತನ ಚಿಕ್ಕನ ಮಗನಾದ ಪುರುಷೋತ್ತಮರಾಯನು ಸಾಗಿಸಹತ್ತಿದನು. ಈ ಪುರುಷೋತ್ತಮರಾಯನು ಹರಿಭಟ್ಟನ ಚೊಚ್ಚಲ ಮಗನಾದ ಕೃಷ್ಣಭಟ್ಟನ ಮರುಚಲಮಗನು. ರಾಮಚಂದ್ರಹರಿಗೆ ಬಹುಕಾಲ ಸಂತಾನವಿದ್ದಿಲ್ಲ. ಅದರಿಂದ ಆತನು ಪುರುಷೋತ್ತಮರಾಯನನ್ನು ತನ್ನ ಹೊಟ್ಟೆಯ ಮಗನಂತೆ ಪ್ರೀತಿಸುತ್ತಿದ್ದನು; ತಾನು ಯುದ್ಧಕ್ಕೆ ಹೋದರೆ ಆತನನ್ನು ಸಂಗಡ ಕರಕೊಂಡು ಹೋಗುತ್ತಿದ್ದನು. ಈ ಪ್ರಕಾರ ಸಮರಭೂಮಿಯ ಸಹವಾಸವು ಆಗಾಗ್ಗೆ ಸಂಘಟಿಸುತ್ತ ಬಂದದರಿಂದ, ಸೇನಾಪತಿಗೆ ಅವಶ್ಯವಾದ ಶೌರ್ಯ, ಧೈರ್ಯ ಇತ್ಯಾದಿ ಪೌರುಷಗುಣಗಳು ಪುರುಷೋತ್ತಮರಾಯನಲ್ಲಿ ಮೂರ್ತಿಮಂತಾಗಿದ್ದವು; ಶ್ರೀಮಂತ ನಾನಾಸಾಹೇಬರ ಕಿವಿವರೆಗೆ ಆತನ ಪರಾಕ್ರಮದ ಕೀರ್ತಿಯು ಹೋಗಿತ್ತು. ಆದಕಾರಣ ದರಬಾರದೊಳಗಿನ ಯಾವತ್ತು ದೊಡ್ಡ ದೊಡ್ಡ ಅಧಿಕಾರಸ್ಥರ ಪರಿಚಯವು ಆತನಿಗೆ ತಕ್ಕಷ್ಟು ಆಗಿತ್ತು. ತನ್ನ ಉದಯವು ರಾಮಚಂದ್ರಹರಿಯ ಮಹದಾಶ್ರಯದಿಂದ ಆಗಿರುವದೆಂದು ಭಾವಿಸಿ ಪುರುಷೋತ್ತಮರಾಯನು ಆತನನ್ನೂ ಆತನ ಪತ್ನಿಯಾದ ಜಾನಕಿಬಾಯಿಯನ್ನೂ ತನ್ನ ಜನಕ-ಜನನಿಯರಂತೆ ನೆನಿಸಿ ಅವರೊಡನೆ ಬಹು ನಯಭಯದಿಂದಲೂ, ದಾಕ್ಷಿಣ್ಯದಿಂದಲೂ ನಡೆದುಕೊಳ್ಳುತ್ತಿದ್ದನು. ರಾಮಚಂದ್ರಹರಿಯ ಮರಣದಕಾಲಕ್ಕೆ ಪುರುಷೋತ್ತಮರಾಯನು ಆತನ ಬಳಿಯಲ್ಲಿಯೇ ಇದ್ದನು. ಆಗ ಅವನಾದರೂ ಬಹಳ ದೊಡ್ಡವನಿದ್ದಿಲ್ಲ. ರಾಮಚಂದ್ರಹರಿಯ ಪ್ರಾಣೋತ್ಕ್ರಮಣವಾಗುವ ಸಮಯದಲ್ಲಿ ಪುರುಷೋತ್ತಮರಾಯನು "ಅಪ್ಪಾ, ನಿಮ್ಮ ಮನಸ್ಸಿನಲ್ಲಿ ಏನು

ಇರುವದು" ಎಂದು ಭಕ್ತಿಯುಕ್ತನಾಗಿ ಕೇಳಲು, ಅದಕ್ಕೆ ರಾಮಚಂದ್ರರಾಯನು "ಮಗನೇ ಏನು ಹೇಳಲಿ, ನಿನ್ನನ್ನು ಜೋಕೆಗೈದು ಪರಶುರಾಮನಿಗೆ ಮಾತ್ರ ತೊಂದರೆಯನ್ನುಂಟು ಮಾಡಿದೆನು. ನೀನು ಅವನೊಡನೆ ಜಗಳ ಹೂಡಿ ಪಾಲು ಬೇಡುವಿ" ಎಂದು ಅಂದನು. ಆಗ ಆತನು "ಅಪ್ಪಾ ದೇವರು ನನ್ನ ಈ ರಟ್ಟೆಗಳಿಗೆ ಹೆಚ್ಚು ಶಕ್ತಿಯನ್ನು ಕೊಡಲಿ, ಪಾಲು ಬೇಡುವದು ದುರ್ಬಲರ ಮಾತು; ನಾನೇನು ಹೇಡಿಯಲ್ಲ. ಸುಕುಮಾರನಾದ ಪರಶುರಾಮನೊಡನೆ ಜಗಳವಾಡುವದಿಲ್ಲ. ಪಾಲು ಬೇಡುವದಿಲ್ಲ. ಇಷ್ಟೇ ಅಲ್ಲ, ನಾನು ಆಜನ್ಮ ಆತನನ್ನು ಜೋಪಾನ ಮಾಡುವೆನು" ಎಂದು ಹೇಳಿ ಆತನ ಕೈಮೇಲೆ ಕೈಹಾಕಿದನು. ಆಗ ರಾಮಚಂದ್ರರಾಯನು "ಬಾಳಾ ಪುರುಷೋತ್ತಮಾ, ನಿನ್ನ ಧೈರ್ಯವನ್ನೂ, ಪೌರುಷವನ್ನೂ, ಕೃತಜ್ಞತೆಯನ್ನೂ ಕಂಡು ನನಗೆ ಬಹಳ ಸಂತೋಷವಾಗಿರುವದು. ನೀನು ಮಾತ್ರ ಆಡಿದ ನುಡಿಯನ್ನು ಮರೆಯದೆ ಅದರಂತೆ ಮಾಡಿ ನಿನ್ನ ಹೆಸರನ್ನು ಸಾರ್ಥಕಗೊಳಿಸು. ನಾನು ಇನ್ನು ಸುಖದಿಂದ ಪ್ರಾಣಬಿಡುವೆನು" ಎಂದು ಹೇಳಿದನು. ಮುಂದೆ ಸ್ವಲ್ಪ ಹೊತ್ತಿನ ಮೇಲೆ ರಾಮಚಂದ್ರಹರಿಯ ದೇಹಾವಸಾನವಾಯಿತು.

ಪುರುಷೋತ್ತಮರಾಯನು ಮುಂದೆ ಆಡಿದ ಮಾತಿಗೆ ತಪ್ಪಿ ನಡೆಯಲಿಲ್ಲ. ಆತನು ಪರಶುರಾಮನನ್ನು ಒಳ್ಳೇ ಪ್ರೇಮದಿಂದ ನಡೆಸಿಕೊಂಡನು. ಮತ್ತು ತನ್ನ ಕಡೆಗೆ ಇದ್ದ ರಾಮಚಂದ್ರಹರಿಯ ಪಥಕವನ್ನು ಭಾವು ದೊಡ್ಡವನಾದ ಬಳಿಕ ಒಳ್ಳೇ ಸಂತೋಷದಿಂದ ಆತನ ಸ್ವಾಧೀನ ಪಡಿಸಿದನು. ಯುದ್ಧಪ್ರಸಂಗಗಳು ಬರಲು, ಆತನು ಪರಶುರಾಮನನ್ನು ಕೂಡಿಕೊಂಡು ಹೋಗಿ ಜಯಪಡೆಯುತ್ತಿದ್ದನು.

ರಾಮಚಂದ್ರಹರಿಯು ಸ್ವರ್ಗಸ್ಥನಾದ ಮೇಲೆ ಆತನ ಮಗನು ಸಣ್ಣವನು; ಆತನ ಸೇನಾಪತಿಯ ಕೆಲಸವನ್ನು ಯಾರು ಸಾಗಿಸಬೇಕು? ಶ್ರೀಮಂತರ ಸೇವೆಯನ್ನು ಯಾರು ಮಾಡಬೇಕು? ಎಂಬ ವಿಚಾರವು ಹೊರಟಿತು. ಆಗಿನಕಾಲಕ್ಕೆ ಪೇಶವೆ ಸರಕಾರಕ್ಕೆ ಜನಸಹಾಯವು ಬಹು ಅವಶ್ಯವಿತ್ತು. ಕಾರಣ ಪರಶುರಾಮನು ಚಿಕ್ಕವನೆಂಬುವ ನೆವದಿಂದ ಆತನ ಪಥಕವು ಎರಡನೆಯ ಸರದಾರರ ಪಾಲಾಗತಕ್ಕದ್ದೇ. ಆದರೆ ಪುರುಷೋತ್ತಮರಾಯನಂಥ ಅಸಹಾಯ ಶೂರ ಸರದಾರನು ಪಟವರ್ಧನ ಮನೆತನ

ದಲ್ಲಿದ್ದುದರಿಂದ ಪೇಶವೆ ಸರಕಾರದವರು ಆತನು ಸಮ್ಮತಿಸಿದರಿಂದಲೂ, ಮಂತ್ರಿಮಂಡಲದವರ ಒಪ್ಪಿಗೆಯು ದೊರೆತದರಿಂದಲೂ ರಾಮಚಂದ್ರಹರಿಯ ಪಥಕವನ್ನು ಪುರುಷೋತ್ತಮರಾಯನ ಸ್ವಾಧೀನವಮಾಡಿದರು. ಪುರುಷೋತ್ತಮರಾಯನ ಸ್ವಭಾವವು ಬಹಳ ಸರಳ. ಅದರಿಂದ ಆತನು ಭಾವು ಚಿಕ್ಕವನಿದ್ದರೂ ಸೇನಾಧಿಪತ್ಯವನ್ನು ಆತನ ಹೆಸರಿನಿಂದ ಸಾಗಿಸುವೆನೆಂದು ಶ್ರೀಮಂತರಿಗೆ ಸೂಚಿಸಿದನು. ಇದೇ ಬಂಧುಪ್ರೀತಿಯ ಲಕ್ಷಣವು.

ಪೇಶವೆ ನಾನಾಸಾಹೇಬನ ಕಾಲಕೀರ್ದಿಯಿಂದ ಪುರುಷೋತ್ತಮರಾಯನು ಅನೇಕ ಕಾಳಗಗಳನ್ನು ಮಾಡಿ ಹೆಸರಾದನು. ಅವನು ಪರಶುರಾಮನ ವಿದ್ಯಾಭ್ಯಾಸದ ಕಡೆಗೆ ವಿಶೇಷ ಲಕ್ಷ್ಯಗೊಟ್ಟು ಆತನಿಗೆ ಯುದ್ಧಕೌಶಲ್ಯವನ್ನು ಬಹು ಪರಿಶ್ರಮದಿಂದ ಕಲಿಸಿ ಆತನನ್ನು ಸಿದುಬರಹದಲ್ಲಿಯೂ, ಯುದ್ಧವಿದ್ಯೆಯಲ್ಲಿಯೂ ಒಳ್ಳೇ ನಿಷ್ಣಾತನನ್ನು ಮಾಡಿದನು. ಪುರುಷೋತ್ತಮರಾಯನು ವ್ಯವಹಾರಚತುರನಿದ್ದು ಸ್ವತ: ಕಡು ಜಾಣನಾದ ಕಾರಕೂನನಾಗಿದ್ದನು; ಆತನು ಜಮಾಖರ್ಚು, ತಸಲ್ಮಾತ, ಅಮಾನತ, ಜವಾಬು ಬರಿಯೋಣ, ಜಮಾಬಂದಿ ಇತ್ಯಾದಿ ದರಬಾರದ ಎಲ್ಲ ಕೆಲಸಗಳಲ್ಲಿ ಬಹು ನಿಪುಣನಿದ್ದನು. ಆದ್ದರಿಂದ ಅವನು ಮೇಲಿನ ಎಲ್ಲ ಕೆಲಸಗಳ ಗುಟ್ಟನ್ನು ಭಾವುಗೆ ಸಂಪೂರ್ಣವಾಗಿ ತಿಳಿಸಿಕೊಟ್ಟು, ಯಾವತ್ತೂ ರಾಜಕೀಯ ವ್ಯವಹಾರದ ಮರ್ಮವನ್ನು ಚನ್ನಾಗಿ ಬೋಧಿಸಿದ್ದನು. ದಂಡಿನ ಲೆಕ್ಕಪತ್ರ ಮುಂತಾದ ಸಣ್ಣ ಪುಟ್ಟ ಲೇಖನ ಕೆಲಸಗಳನ್ನು ಪರಶುರಾಮನ ಕೈಯಿಂದಲೆ ಮಾಡಿಸುತ್ತಿದ್ದನು. ದಂಡಿನ ವ್ಯವಸ್ಥೆ, ದಂಡು ನಡಿಸೋಣ, ಅದಕ್ಕೆ ಅನ್ನ-ನೀರುಗಳನ್ನು ಪೂರೈಸುವಿಕೆ ಮೊದಲಾದ ಆಹವ-ಸಾಮುಗ್ರಿಯ ಇಂಗಿತವನ್ನು ಚನ್ನಾಗಿ ತಿಳಿಸಿ ಹೇಳುತ್ತಿದ್ದನು. ಇದಲ್ಲದೆ ಸೈನ್ಯದ ಸಂಬಂಧದ ಕಾಗದಪತ್ರಗಳನ್ನು ಭಾವುಗೆ ತಿಳಿಸಿ ಇಲ್ಲವೆ ಆತನ ಕಡೆಯಿಂದಲೇ ಬರೆಯಿಸಿ ಸರಕಾರಕ್ಕೆ ಕಳಿಸಿಕೊಡುತ್ತಿದ್ದನು.

ಸರ್ವಕಾಲವೂ ಪುರುಷೋತ್ತಮರಾಯನ ಸಮಾಗಮದಲ್ಲಿರುವ ಪರಶುರಾಮನು ಅವನು ಮಾಡುವ ಕೆಲಸಗಳಿಂದಲೂ, ಅವನು ಆಗಾಗ್ಗೆ ಹೇಳುವ ಉಪದೇಶಗಳಿಂದಲೂ, ಎಲ್ಲ ಸಂಗತಿಗಳನ್ನು ಬಹುಬೇಗ ಕಲಿತುಕೊಂಡು ಜಾಣನೆನಿಸಿಕೊಂಡನು.

ಈ ಪ್ರಕಾರ ಭಾವುವಿನ ವಿದ್ಯಾಭ್ಯಾಸಕ್ರಮವು ಮುಗಿದು ಅವನು ಸಕಲ ಕಲೆಗಳಲ್ಲಿ ಅಂದರೆ ಆಗಿನಕಾಲಕ್ಕೆ ಮುಖ್ಯವೆನಿಸಿದ ‘ ಕಾರಕೂನನ ’ ಉದ್ಯೋಗದಲ್ಲಿ ಪ್ರವೀಣನೆನಿಸಿದನು. ಅವನು ಸ್ವತಃ ಬರೆದ ಪತ್ರಗಳು ಕೆಲವು ಇರುವವು. ಅವನ್ನು ನೋಡಿದರೆ ಆತನ ಅಕ್ಷರಗಳು ಅತ್ಯುತ್ತಮ ವಾದವೆಂದೂ, ಆತನ ಬರಹಮಾರ್ಗವು ಮನೋಹರವೂ ಶ್ಲಾಘನೀಯವೂ ಆದುದೆಂದೂ ಅವಗತವಾಗುವದು. ಅವನು ಮಾಡಿದ ದೊಡ್ಡ ದೊಡ್ಡ ದಾಳಿ ಗಳ ವಿಷಯವಾಗಿ ಆತನು ಬರೆದ ಪತ್ರಗಳು ಉಪಲಬ್ಧವಾಗಿರುವದಿಲ್ಲ. ಆದರೆ ಉತ್ತರಕರ್ನಾಟಕದ ರಾಜಧಾನಿಯೆನಿಸಿದ ಬಲವಾದ ಧಾರವಾಡದ ಕಿಲ್ಲೆಗೆ ಮುತ್ತಿಗೆಯನ್ನು ಹಾಕಿದಾಗ್ಗೆ ಆತನು ಅಜಮಾಸು ೨೫-೩೦ ಪತ್ರ ಗಳನ್ನು ಬರೆದಿರುವನು. ಇದರಮೇಲಿಂದ ಆತನಲ್ಲಿ ಲೇಖನಾಭಿರುಚಿಯು ಇದ್ದುದಲ್ಲದೆ ಅವನು ಬರೆಯಲಿಕ್ಕೆ ಬೇಸರಗೊಳ್ಳುತ್ತಿದ್ದಿಲ್ಲವೆಂಬದು ವ್ಯಕ್ತ ವಾಗುತ್ತದೆ.

ಭಾವು ಯುದ್ಧವಿದ್ಯೆಯಲ್ಲಿ ಜಾತ್ಯಾ ಆಸಕ್ತನಿದ್ದು ಅದರಲ್ಲಿ ಬುದ್ಧಿವಂತ ನೆಂದೆನಿಸಿಕೊಳ್ಳಬೇಕೆಂಬ ಲವಲವಿಕೆಯು ಮೊದಲಿನಿಂದ ಆತನಲ್ಲಿ ಇದ್ದೇ ಇತ್ತು. ತಂದೆಯ ಪರಾಕ್ರಮವನ್ನು ತನ್ನ ತಾಯಿಯ ಬಾಯಿಂದಲೂ, ವೃದ್ಧಜನರ ಮುಖದಿಂದಲೂ ಕೇಳಿ ತಾನೂ ತಂದೆಯಂತೆ ಸರದಾರನಾಗಿ ರಣರಂಗದಲ್ಲಿ ಕಲಿತನದಿಂದ ಹೋರಾಡಿ, ಜಯಶೀಲನಾಗಿ, ಹೆಸರು ಹೊಂದಬೇಕೆಂದು ಚಿಕ್ಕಂದಿನಲ್ಲಿಯೇ ನಿರ್ಧಾರಮಾಡಿಕೊಂಡನು. ಶಿಲೇದಾರ ಜನರ ಉದ್ಯೋಗದಲ್ಲಿ ಅವನಿಗೆ ವಿಶೇಷ ಲಕ್ಷವಿತ್ತು. ಪುರುಷೋತ್ತಮರಾ ಯನ ಸಂಗಡ ಇರುವಾಗ್ಗೆ ಅವನಿಗೆ ಆ ಜನರ ಉದ್ಯೋಗ-ಮಾರ್ಗವನ್ನು ಅರಿತುಕೊಳ್ಳಲು ಬಳ್ಳೇ ಅನುಕೂಲವಾಗಿತ್ತು. ಪುರುಷೋತ್ತಮರಾಯನು ಹೆಸರಾದ ಶಿಲೇದಾರನಿದ್ದು, ರಾಮಚಂದ್ರಹರಿಯ ಸಮಾಗಮದಯೋಗ ದಿಂದ ಅನೇಕ ಹೌದುಗಳನ್ನು ಮಾಡಿದ್ದರಿಂದ ಆತನು ಯುದ್ಧವಿದ್ಯೆಯಲ್ಲಿ ಬುದ್ಧಿವಂತನಿದ್ದನು. ಆದರಿಂದ ಯುದ್ಧಕಲಾವಿಶಾರದನಾದ ಪುರುಷೋತ್ತ ಮರಾಯನು ಪರಶುರಾಮನಿಗೆ ತಾನು ಹೊಂದಿದ ಶಿಕ್ಷಣವನ್ನು ಕೊಡಬೇ ಕೆಂದು ಯೋಚಿಸಿ, ಆ ಶಿಕ್ಷಣದ ಸರ್ವ ಭಾರವನ್ನು ತಾನೇ ಹೊತ್ತು, ಕುದು ರೆಯ ಏರಾಟ, ಭಾಲೆಬರ್ಚಿಗಳ ಯೋಜನೆ, ಕತ್ತಿಡಾಲುಗಳನ್ನು ತಿರುವುೋ ಣ, ಗುರಿಹೊಡಿಯೋಣ, ಸಿಪಾಸಿಗಳನ್ನು ಸಿಲ್ಲಿಸೋಣ, ಇತ್ಯಾದಿ ಆವಹ

ಉಪಕರಣಗಳ ಮಾರ್ಮಿಕಜ್ಞಾನವನ್ನು ಆತನು ಭಾವೂಗೆ ಮಾಡಿಕೊಟ್ಟನು. ಭಾವು ತನಗೆ ಮೊದಲೇ ಪ್ರೀತ್ಯಾಸ್ಪದವೆನಿಸಿದ ಯುದ್ಧ-ವಿದ್ಯೆಯನ್ನು ಬಹು ಆಸಕ್ತಿಯಿಂದ ಕಲಿತನು. ಅವನ ಸ್ವಾಭಾವಿಕವಾದ ಶೌರ್ಯಾಂಕುರವು ಪುರುಷೋತ್ತಮರಾಯನ ಶಿಕ್ಷಣರೂಪವಾದ ವಿಪುಲಜಲಸಿಂಚನದಿಂದ ಆತನು ೧೪ ವರುಷದವನಾಗುವಷ್ಟರಲ್ಲಿಯೇ ದೊಡ್ಡ ಮರವಾಗಿ ಬೆಳೆದು ಅದು ವಿಜಯರೂಪವಾದ ಸುಪಕ್ವಫಲಗಳನ್ನೀಯಲು ಸಮರ್ಥವೆನಿಸಿ ಅದರ ಕೀರ್ತಿಯ ಛಾಯೆಯು ಶ್ರೀಮಂತ ನಾನಾಸಾಹೇಬರ ಸನ್ನಿಧಿಯನ್ನು ಸಾರಿತು. ಪುರುಷೋತ್ತಮರಾಯನ ಪಥಕದಲ್ಲಿ ನಲಗೆ, ಫಾಂಡರೆ ಮೊದಲಾದ ಶೂರಶಿಲೇದಾರರಿದ್ದರು. ಅವರೆಲ್ಲರ ಎದುರಿಗೆ ಭಾವುವಿನ ಯುದ್ಧಚಾತುರ್ಯವನ್ನು ತೋರಿಸಿ ಅದರಲ್ಲಿ ಕಂಡುಬರುವ ವ್ಯಂಗಗಳನ್ನು ಪುರುಷೋತ್ತಮರಾಯನು ತಿಳಿಸಿ ಹೇಳಿ ಅವನನ್ನು ಸುಧಾರಿಸುತ್ತಿದ್ದನು. ಪುರುಷೋತ್ತಮರಾಯನು ಹೇಳಿದಂತೆ ಪರಶುರಾಮನು ದೃಢಮನಸ್ಸಿನಿಂದ ಅಭ್ಯಾಸಮಾಡಿ ಸ್ವಲ್ಪಕಾಲದಲ್ಲಿ ಯುದ್ಧಕಲೆಯಲ್ಲಿ ಒಳ್ಳೇ ಧುರೀಣನೆನಿಸಿದನು. ಆತನ ಮಾರ್ಮಿಕಜ್ಞಾನವನ್ನು ಕಂಡು ದೊಡ್ಡ ದೊಡ್ಡ ಶಿಲೇದಾರರು ಬೆರಗಾಗುತ್ತಿದ್ದರು. ಅವನು ಭಾವು "ಕುದುರೆಗಳ ಪರಾಟದಲ್ಲಿಯೂ, ಗುರಿ ಹೊಡಿಯುವದರಲ್ಲಿಯೂ, ಭಾಲೆಯನ್ನು ಒಗೆಯುವದರಲ್ಲಿಯೂ, ಕಡುಕುಶಲನೆಂ"ದು ಹೊಗಳುತ್ತ ಅವನು 'ತಂದೆಯಂತೆ ಮಗ' ಎಂಬ ಸಾಮತಿಯು ಸಾರ್ಥಕ್ಯವನ್ನು ಹೊಂದಿ "ಶೂರಸರದಾರನು" ಆಗುವನೆಂದು ಅನ್ನುತ್ತಿದರು.

ಇನ್ನು ಶ್ರೀಮಂತರ ಒಡ್ಡೋಲಗದ ನಡೆನುಡಿಗಳ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆಸಹ ಭಾವೂಗೆ ಬಲು ಅನುಕೂಲವಿತ್ತು. ಆತನ ಸೋದರಮಾವನಾದ ಬಾಸಗಿವಾಲೆ ಮತ್ತು ದೊಡ್ಡಪ್ಪನಾದ ಗೋವಿಂದಹರಿ ಇವರಿಬ್ಬರ ಗೌರವವು ಪೇಶವೆ ದರಬಾರದಲ್ಲಿ ಚನ್ನಾಗಿ ಇತ್ತು. ಅವರಿಬ್ಬರು ಪರಶುರಾಮನ ಹಿತಚಿಂತಕರಾದುದರಿಂದ ಅವನನ್ನು ಕರಕೊಂಡು ದರಬಾರಕ್ಕೆ ಹೋಗುತ್ತಿದ್ದರು. ಪುರುಷೋತ್ತಮರಾಯನಂತೂ ಭಾವು ಇಲ್ಲದೆ ಶ್ರೀಮಂತರ ಬಳಿಗೆ ಎಂದೂ ಹೋಗುತ್ತಿದ್ದಿಲ್ಲ. ಇವೆಲ್ಲ ಕಾರಣಗಳಿಂದ ಭಾವುವಿಗೆ ದರಬಾರದ ಚಿಕ್ಕ ದೊಡ್ಡ ಉದ್ಯೋಗಸ್ಥರ ಪರಿಚಯವಾದದ್ದಲ್ಲದೆ, ಆತನು ಸ್ವತಃ ಶ್ರೀಮಂತರ ಗುರತನ್ನು ಮಾಡಿಕೊಂಡನು.

ರಾಮಚಂದ್ರಹರಿಯ ಪರಕ್ರಾಮದ ಅಭಿಮಾನವು ಅವರೆಲ್ಲರಲ್ಲಿ ಸಂಪೂರ್ಣವಿತ್ತು. ಅದರಿಂದ ಅವರು ಪರಶುರಾಮನನ್ನು ಕಂಡು ಹಿರಿಹಿರಿ ಹಿಗ್ಗುತ್ತಿದ್ದರು. ಆತನ ಅನುಪಮ ಕುಶಾಗ್ರತೆ, ಸೌಜನ್ಯ, ಗಾಂಭೀರ್ಯ ಲಕ್ಷಣಗಳನ್ನು ನೋಡಿ ಅವನು ತಂದೆಯಂತೆ ಶೌರ್ಯ, ಸಾಹಸಗಳನ್ನು ಪ್ರಕಟಗೊಳಿಸಿ, ಹೆಸರುಹೊಂದಲೆಂದು ಎಲ್ಲರೂ ಅವನನ್ನು ಹರಸುತ್ತಿದ್ದರು. ಹೀಗೆ ಪರಶುರಾಮನು ಮೇಲಿಂದಮೇಲೆ ಪೇಶವೆ ದರಬಾರಕ್ಕೆ ಹೋಗಿ ಬರಹತ್ತಿದರಿಂದ, ಅವನು ಅಲ್ಲಿಯ ನಡೆನುಡಿಗಳನ್ನು ಅರಿತುಕೊಂಡು, ವ್ಯವಹಾರಚತುರನೂ, ಯುದ್ಧವಿದ್ಯಾನಿಪುಣನೂ, ಓದಬರಹದಲ್ಲಿ ಬಲ್ಲಿದನೂ, ಕರ್ತವ್ಯದಕ್ಷನೂ ಎಂದೆನಿಸಿಕೊಂಡು ತನ್ನ ಭಾವೀ ಉತ್ಕರ್ಷಕಾಲವನ್ನು ನಿರೀಕ್ಷಿಸತೊಡಗಿದನು.

---

## ೩ನೆಯ ಅಧ್ಯಾಯ.

### ಪ್ರಥಮ-ಪರಾಕ್ರಮ.

ಪರಶುರಾಮನಿಗೆ ಇನ್ನೂ ೧೪ ವರುಷಗಳು ತುಂಬಿದ್ದಿಲ್ಲ; ಅಷ್ಟರಲ್ಲಿಯೇ ಆತನು ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ, ತನ್ನ ವಿದ್ಯಾಭ್ಯಾಸಕ್ರಮವನ್ನು ಮುಗಿಸಿ, ಕಾರಕೂನನ ದರಬಾರದ ಕೆಲಸದಲ್ಲಿಯೂ, ಸರದಾರನ ಯುದ್ಧವಿದ್ಯೆಯಲ್ಲಿಯೂ ನಿಪುಣನಾದನು. ಆ ಮೇಲೆ ತಾನು ಒಂದಾವರ್ತಿ ದೌಡಿನ ಸಂಗಡ ಹೋಗಿ, ಸಂಗ್ರಾಮಕುಶಲತೆಯನ್ನು ಕಣ್ಣಾರೆ ನೋಡಬೇಕೆಂದು ಭಾವು ಅಪೇಕ್ಷಿಸಿದನು. ಇದೇ ಸಂಧಿಗೆ ಶ್ರೀಮಂತ ಬಾಳಾಜಿಬಾಜೀರಾಯನು ಕರ್ನಾಟಕಪ್ರಾಂತಕ್ಕೆ ದಾಳಿಯನ್ನಿಡುವ ಆಲೋಚನೆಯಲ್ಲಿದ್ದನು. ಪೇಶ್ವೇನ ಸಂಗಡ ಪಟವರ್ಧನ ಪ್ರಭೃತಿಗಳು ತಮ್ಮ ತಮ್ಮ ಪಥಕಗಳೊಂದಿಗೆ ಹೊರಡಬೇಕೆಂದು ನಿಶ್ಚಯವಾಯಿತು. ಅದನ್ನು ಕೇಳಿ ಭಾವು ತನ್ನ ಸೇನಾಭಾಗದ ಕೂಡ ತಾನೂ ಹೊರಡುವದನ್ನು ನಿಶ್ಚೈಸಿ, ಅದರ

ಪ್ರಸ್ತಾಪವನ್ನು ಪುರುಷೋತ್ತಮರಾಯನ ಬಳಿಯಲ್ಲಿ ತೆಗೆದನು; ಮತ್ತು ತನ್ನನ್ನು ಸಂಗಡ ಕರಕೊಂಡು ಹೋಗಬೇಕೆಂದು ಹಟಹಿಡಿದನು. ಅದಕ್ಕೆ ಪುರುಷೋತ್ತಮರಾಯನು "ಬಾಳಾ, ಪರಶುರಾಮಾ, ನೀನು ಇನ್ನೂ ಚಿಕ್ಕವನು. ಪ್ರವಾಸದ ಕೆಲಸವು; ಮೇಲಾಗಿ ಸಂಗ್ರಾಮನಿಮಿತ್ಯವಾದ ಪ್ರವಾಸವು. ಅದು ಬಹು ಪ್ರಯಾಸಕರವಾದದ್ದು. '**संग्रामवार्ता रम्य**' ಎಂಬಂತೆ ಕಾಳಗದ ಸುದ್ದಿಯು ಕೇಳಲಿಕ್ಕೆ ಮಾತ್ರ ಬಲು ಸೊಗಸು. 'ನಾ' 'ನೀ' ಅನ್ನುವ ಸರದಾರರು ಸಹ ಯುದ್ಧವೆಂದರೆ ಬೇಸರಿಯುವರು. ಆದ್ದರಿಂದ ನೀನು ದೊಡ್ಡವನಾಗುವವರೆಗೆ ಈ ನಿನ್ನ ಹಟವನ್ನು ಬಿಟ್ಟುಬಿಡು. ಸರದಾರರ ಕುಟುಂಬದಲ್ಲಿಯೇ ಹುಟ್ಟಿರುವಿ. ಪೇಶವೆಯ ಆಡಳತೆಯಲ್ಲಿ ಕಾಳಗಪ್ರಸಂಗಗಳಿಗೆ ಕಡಿಮೆ ಇಲ್ಲ. ಆದದರಿಂದ ಸಂಗ್ರಾಮಸಹವಾಸದ ನಿನ್ನ ಆಶೆಯು ಪೂರ್ಣವಾಗಲು ಬಹಳ ದಿವಸಗಳು ಹತ್ತವು." ಎಂದು ಬಗೆ ಬಗೆಯಿಂದ ಬುದ್ಧೀ ಹೇಳಿದನು. ಆದರೆ ಯುದ್ಧಾಪೇಕ್ಷಿತನಾದ ಆ ವೀರಬಾಲಕನು ಅದಕ್ಕೆ ಒಡಂಬಡಲಿಲ್ಲ. ಆತನ ಮಾತುಶ್ರೀಯು ಸಹ ಬಹುರೀತಿಯಿಂದ ಹೇಳಿ ನೋಡಿದಳು. ಏನು ಮಾಡಿದರೂ ಭಾವೂನ ಮನಸ್ಸು ತಿರುಗಲಿಲ್ಲ. ಕಡೆಗೆ ಆತನ ಹಟಮಾರಿತನದ ಪ್ರಸಕ್ತಿಯು ಶ್ರೀಮಂತರ ಕಿವಿಗಳಿಗೆ ಮುಟ್ಟಿತು. ಭಾವೂನ ಚಂಡಿತನವನ್ನು ಕಂಡು ಪೇಶ್ವೇನಿಗೆ ಬಹು ಆಶ್ಚರ್ಯವೆನಿಸಿತು. ಶೂರನ ಹೊಟ್ಟೆಯಿಂದ ಹುಟ್ಟಿದ ಈ ಹುಡುಗನಲ್ಲಿ ವಿಲಕ್ಷಣ ಶೂರಗುಣಗಳು ಅಂತರ್ಭೂತವಾಗಿರುವವು. ಸಿಂಹದ ಮರಿಯಲ್ಲಿ ಸಿಂಹದ ಅಕ್ಷಯಗಾಂಭೀರ್ಯ, ಅಚಲಧೈರ್ಯ ಮುಂತಾದವುಗಳ ಪ್ರತಿಬಿಂಬವು ಮೂಡಿರುವದಲ್ಲದೆ, ಅನ್ಯವಶ್ಯ ಪಶುಗಳಲ್ಲಿರುವ ಹೇಡಿತನ ಕ್ರೂರತನ, ಕುಹಕತನ ಮೊದಲಾದವುಗಳ ನೆರಳು ಸಹ ಅದರ ಮೇಲೆ ಬೀಳದು. ಈ ವೀರಬಾಲನು ತನ್ನ ಪರಾಕ್ರಮಬಲದಿಂದ ಜಯಜಯಕಾರವನ್ನು ಪಡೆಯುತ್ತ, ತನ್ನ ಮನೆತನದ ಕೀರ್ತಿಯನ್ನು ಹೆಚ್ಚಿಸುವನೆಂದು ಎಲ್ಲರೂ ಅನ್ನಲಾರಂಭಿಸಿದರು. "ದಂಡಿನೊಡನೆ ಯುದ್ಧಕ್ಕೆ ಬರಬೇಕೆಂದು ಪರಶುರಾಮನ ಆಗ್ರಹವು ಬಹಳವಿದ್ದರೆ ಆತನನ್ನು ಕರಕೊಂಡು ಬಾ" ಎಂದು ಪೇಶ್ವೆಯು ಪುರುಷೋತ್ತಮರಾಯನಿಗೆ ಆಜ್ಞಾಪಿಸಿದನು. ಮುಂದೆ ಯುದ್ಧಸಾಮುಗ್ರಿಗಳ ಜೋಡಣೆಯಾಗುತ್ತಲೆ, ಭಾವು ಪುರುಷೋತ್ತಮರಾಯನೊಡನೆ ಹೊರಟನು.

ಸವಣೂರ ಯುದ್ಧದಲ್ಲಿ ಭಾವು ಯುದ್ಧಕಲೆಯ ಆರಂಭದ ಪಾಠವನ್ನು ಕಲಿತನೆಂದು ಹೇಳಬಹುದು. ಆದಾಗ್ಯೂ ಆ ಪ್ರಸಂಗದಲ್ಲಿ ಅವನು ವಿಲಕ್ಷಣ ಶೌರ್ಯ, ಅಪ್ರತಿಮ ಸಾಹಸಗಳನ್ನು ತೋರಿಸಿ ಪ್ರಖ್ಯಾತಿಯನ್ನು ಹೊಂದಿದನು. ಈ ಸವಣೂರ ಕಾಳಗದ ಮೂಲಕಾರಣವೇನಂದರೆ:—.

ಮುಜಫರಜಂಗನೆಂಬುವನೊಬ್ಬನು ಪೇಶವೆಯರ ಆಶ್ರಯದಲ್ಲಿದ್ದನು. ಆತನು ಪುಣೆಯಲ್ಲಿ ಶ್ರೀಮಂತರ ಅಪ್ಪಣೆಯನ್ನು ಮೀರಿ, ಇಲ್ಲದ ಪುಂಡಾಟಿಕೆಯನ್ನು ಮಾಡಿ, ಅಲ್ಲಿಂದ ಸವನೂರಿಗೆ ಓಡಿಹೋಗಿ ಅಲ್ಲಿಯ ನವಾಬನ ಬೆನ್ನು ಬಿದ್ದನು. ನವಾಬನು ಆತನಿಗೆ ಆಶ್ರಯವಿತ್ತು, ಪೇಶವೆಯರ ಆಜ್ಞೆಯಾದರೂ ಆ ಪುಂಡುಗಾರನನ್ನು ಅವರ ಸ್ವಾಧೀನ ಮಾಡಲಿಲ್ಲ. ಅದರಿಂದ ಪೇಶವೆ-ನವಾಬರ ನಡುವೆ ಈ ಯುದ್ಧವು ಉಪಸ್ಥಿತವಾಯಿತು. ಪಯಣ ಕ್ರಮದಿಂದ ಪೇಶವೆಯರ ಅದ್ಭುತ ಸೇನಾಸಮೂಹವು ಸವನೂರ ಸಮೀಪಕ್ಕೆ ಬಂದು ಅಲ್ಲಿ ತಳವೂರಿತು. ತೋಫು ಗುಂಡುಗಳ ಹೊಡತವು ಪ್ರಾರಂಭವಾಯಿತು. ಮರಾಠಾ ಸೈನಿಕರು ಕೋಟೆಯನ್ನು ಮುತ್ತಿದರು. ನವಾಬನಿಗೆ ಗುತ್ತಿಕರ ಘೋರಪಡೆಸರದಾರನ ಬೆಂಬಲವಿದ್ದುದರಿಂದ ಆತನು ಬೆದರಲಿಲ್ಲ. ಮುತ್ತಿಗೆಯು ಒಂದೇಸಮನೆ ಮೂರುತಿಂಗಳ ನಡೆಯಿತು. ಆದರೂ ಆ ಭದ್ರವಾದ ಕಿಲ್ಲೆಯು ಕೈವಶವಾಗಲಿಲ್ಲ. ಆಗ್ಗೆ ಕಿಲ್ಲೆಗೆ ಲಗ್ಗೆ ಏರಿ ಅದನ್ನು ಹಸ್ತಗತಮಾಡಿಕೊಳ್ಳುವದು ಒಳ್ಳೇದೆಂದು ನಿರ್ಣಯವಾಯಿತು. ಕೂಡಲೆ ಉಭಯ ಸೈನ್ಯಗಳ ನಡುವೆ ಕಿಡಿಕಿಡಿಯಾದ ಕಾಳಗವೆಸಗಿತು. ಅದರಲ್ಲಿ ಪಟವರ್ಧನ ಸರದಾರರು ತಮ್ಮ ಜೋಡಿಲ್ಲದ ಪರಾಕ್ರಮವನ್ನು ತೋರ್ಪಡಿಸಿದರು. ಅವರು ತಮ್ಮ ಸೇನಾಭಾಗದ ಸಮೇತರಾಗಿ ಮುಂಭಾಗದಲ್ಲಿ ನಿಂತು ಆವೇಶಭರದಿಂದ ಯುದ್ಧಮಾಡಿದರು. ಆದದರಿಂದ ಅವರು ವೈರಿಜನರ ತೋಫುಗುಂಡುಗಳ ಹೊಡತಕ್ಕೆ ಗುರಿಯಾಗಿ ಕೆಲವರು ತಾಳಲ ಸದಳವಾದ ಗಾಯಗಳನ್ನು ಹೊಂದಿದರು. ಗೋಪಾಳರಾವ ಗೋವಿಂದ ಮಿರಜಕರನಿಗೆ ಆತನ ಬಲಭುಜದ ಮೇಲೆ ಒಂದು, ಕಾಲಮೇಲೆ ಒಂದು ಈ ಪ್ರಕಾರ ಎರಡು ಗಾಯಗಳಾದವು; ಉಳಿದ ಪಟವರ್ಧನ ಬಂಧುಗಳೂ ಪೆಟ್ಟುತಿಂದು ಬಲಗುಂದಿ ಕಳವಳಗೊಂಡರು. ಭಾವೂನ ಪಥಕದ ಜನರು ತಮ್ಮ ನಿಸ್ಸೀಮಪರಾಕ್ರಮವನ್ನು ತೋರಿಸಿದರು. ಪರಶುರಾಮಭಾವು, ಪುರುಷೋತ್ತಮರಾವ ದಾಜಿ ಈ ವೀರಮಣಿಗಳು ದಂಡಿನ ಮುಂಬದಿಯಲ್ಲಿ

ನಿಂತುಕೊಂಡು, ಸಾಹಸದಿಂದ ಯುದ್ಧ ಮಾಡುತ್ತಿದ್ದರು. ಶ್ರೀಮಂತ ಪೇಶ್ವೆಯು ದಂಡಿನ ಹಿಂಭಾಗದಲ್ಲಿ ನಿಂತು ಯುದ್ಧದ ಚಮತ್ಕಾರವನ್ನು ವಿಶೇಷವಾಗಿ ಭಾವೂನ ಆಹವಕೌಶಲ್ಯವನ್ನು ನೋಡುತ್ತಿದ್ದರು. ತಮ್ಮ ಬಾಹುಪರಾಕ್ರಮವನ್ನು ಶ್ರೀಮಂತರಿಗೆ ತೋರಿಸುವ ಉತ್ತಮ ಸಂಧಿಯು ಇದೇ ಎಂದು ಬಗೆದು, ಭಾವು ಪುರುಷೋತ್ತಮರಾಯರು ಹೆಚ್ಚು ಸ್ಫೂರ್ತಿಗೊಂಡು ವೈರಿಗಳ ಬಲಿಷ್ಠ ಸೇನಾಭಾಗದ ಮೇಲೆ ತ್ವೇಷದಿಂದ ಸಾಗಿಹೋದರು. ಅವರಿಬ್ಬರ ಕ್ರೂರವಾದ ಶಸ್ತ್ರಾಸ್ತ್ರಗಳ ಪ್ರಹಾರವನ್ನು ಅರಿಗಳು ಸ್ವಲ್ಪಕಾಲ ಬಹು ಧೈರ್ಯದಿಂದ ಸಹನ ಮಾಡಿಕೊಂಡು, ಅವರು ಆ ಉಭಯ ಬಂಟರನ್ನು ಹಿಮ್ಮೆಟ್ಟಿಸುವದಕ್ಕೆ ವಿಶ್ವಪ್ರಯತ್ನ ಮಾಡಲಾರಂಭಿಸಿದರು. ಯುದ್ಧವು ಬಲುನಿಕರದಿಂದ ಸಾಗಿತು. ಉಭಯ ದಳದ ಕಲಿಗಳು ಜೀವದ ಹಂಗುದೊರೆದು ಕಾದತೊಡಗಿದರು. ಅಷ್ಟರಲ್ಲಿ ಶತ್ರುಪಕ್ಷದ ಒಂದು ಬಾಣವು 'ಸೂ' 'ಸೂ' ಎಂದು ಸಪ್ಪಳಮಾಡುತ್ತ ಬಂದದ್ದೇ ಪುರುಷೋತ್ತಮರಾಯನ ಭುಜಕ್ಕೆ ಬಳ್ಳೇ ಜೋರಿನಿಂದ ಬಡೆಯಿತು. ಆದರೂ ಆಗಿನ ಪ್ರಸಂಗದಲ್ಲಿ ಅದರ ಕಡೆಗೆ ಲಕ್ಷ್ಯಕೊಡದೆ ಆ ರಣಧೀರನೂ, ಭಾವೂ ಇವರಿಬ್ಬರು ಬಹಳ ಧೈರ್ಯದಿಂದಲೂ, ಪರಮಪರಾಕ್ರಮದಿಂದಲೂ, ಶಾನೆ ಆವೇಶದಿಂದಲೂ ಹೋರಾಡಿ ಶತ್ರುಸಮೂಹವನ್ನು ಸಂಹರಿಸಿದರು. ಎಲ್ಲ ಮರಾಠಾಸರದಾರರು ಆಶ್ಚರ್ಯಚಕಿತರಾಗಿ ಅವರಿಬ್ಬರ ಯುದ್ಧನಿಪುಣತೆಯನ್ನು ನೋಡಹತ್ತಿದರು. ಆ ಉಭಯತರ ಅತುಲಧೈರ್ಯ, ಅಕ್ಷಯಪರಾಕ್ರಮಗಳನ್ನು ಕಂಡು 'ವಾಹವ್ಯಾ' 'ಶಾಬಾಸ' ಎಂಬ ವಿಜಯಘೋಷವು ಪೇಶವೆಯರ ದಂಡಿನಲ್ಲಿ ಪ್ರಾರಂಭವಾಯಿತು. ನವಾಬನ ದಂಡಿನ ಜನರು ಸೋತು ಶರಣು ಬಂದರು. ಮಹಾರಾಷ್ಟ್ರರು ವಿಜಯಶಾಲಿಗಳಾಗಿ ಆನಂದದಿಂದ ತಮ್ಮ ಪಾಳಯವನ್ನು ಸೇರಿಕೊಂಡರು.

ಹಿಂದೆ ಹೇಳಿದಂತೆ ಸವಣೂರ ಯುದ್ಧದಲ್ಲಿ ತೋರಿಸಿದ ಪರಾಕ್ರಮವೇ ಭಾವೂನ ಪ್ರಥಮ ಪರಾಕ್ರಮವು. ಆತನು ಆ ಯುದ್ಧದಲ್ಲಿ ಪ್ರಕಟಮಾಡಿದ ಎಣೆಯಿಲ್ಲದ ಶೌರ್ಯ, ಸರಿಯಿಲ್ಲದ ಯುದ್ಧಚಾತುರ್ಯ, ಸಮವಿಲ್ಲದ ಧೈರ್ಯ, ಜೋಡಿಲ್ಲದ ಗಾಂಭೀರ್ಯಗಳನ್ನು ಕಣ್ಣುಟ್ಟಿ ನೋಡಿ, ದೊಡ್ಡ ದೊಡ್ಡ ಸರದಾರರೂ, ಶೂರಪುರುಷರೂ ಬೆರಗಾಗಿ ಬೊಟ್ಟು ಕಚ್ಚಿದರು; "ವಯಸ್ಸು ನೋಡಿದರೆ ಹದಿನಾಲ್ಕುವರುಷ ಮಾತ್ರ; ತಾಯಿಯ

ತೊಡೆಯಮೇಲೆ ಆಡುವ ಹುಡುಗನು ದೊಡ್ಡ ಅನುಭವಿಕ ಆಹವವೀರನಂತೆ ವೈರಿಗಳೊಡನೆ ಹೋರಾಡಿದನು." ಎಂಬ ಆಶ್ಚರ್ಯವಿಚಾರದಲ್ಲಿ ಅವರೆಲ್ಲರು ಮಗ್ನರಾಗಿ ಹೋದರು. ಕೆಲವರು ಪುರಾಣಪ್ರಸಿದ್ಧನಾದ ಅಭಿಮನ್ಯುವಿನನ್ನು ಸ್ಮರಿಸಿ, ಪರಶುರಾಮನು 'ಅಭಿನವ ಅಭಿಮನ್ಯುವೇ ಸರಿ' ಎಂದು ಶ್ಲಾಘಿಸಿದರು. ಶ್ರೀಮಂತ ಬಾಳಾಜಿಬಾಜಿರಾಯನಿಗಾದ ಆನಂದಾಶ್ಚರ್ಯಗಳನ್ನು ಬಣ್ಣಿಸಲಾಸಲ್ಲ. ಅಂದಿನ ಕಾಳಗದ ಗೆಲವಿಗೆ ತುಂಗವಿಕ್ರಮನಾದ ಭಾವೂನೇ ಕಾರಣೀಭೂತನೆಂದು ಪೇಶವೆಯು ಆ ಬಾಲಸರದಾರನನ್ನು ಬಗೆಬಗೆಯಿಂದ ಹೊಗಳಿ ಆತನಿಗೆ ಬಹುಬೆಲೆಯ ವಸ್ತ್ರಭೂಷಣಗಳನ್ನು ಮೆಚ್ಚು ಕೊಟ್ಟು ಸನ್ಮಾನಿಸಿದರು. ಮತ್ತು ಭಾವುವಿನ ಅದ್ವಿತೀಯ ಪರಾಕ್ರಮದ ಉಚಿತವೆಂದು ಕೋರೆಗಾಂವ ತಾಲೂಕಿನೊಳಗಿನ ಜುನ್ನರಗ್ರಾಮವನ್ನು ಇನಾಮು ಹಾಕಿಕೊಟ್ಟನು. ಅದು ಅವನ ವಂಶಜರ ಕಡೆಗೆ ಇನ್ನೂ ಇರುವದು. ಪುರುಷೋತ್ತಮರಾಯನ ಅಪ್ರತಿಮ ಪರಾಕ್ರಮಕ್ಕೆ ಮೆಚ್ಚಿ ಪೇಶವೆಯು ಆತನಿಗೆ ಪಲ್ಲಕ್ಕಿಯನ್ನೂ, ಮೂರುವರೆಸಾವಿರ ರೂಪಾಯಿಗಳ ನಗದ ನೇಮಣೂಕವನ್ನೂ ಕೊಟ್ಟದ್ದಲ್ಲದೆ, *ಮಂಗಳವೇಡೆಯ ಗ್ರಾಮವನ್ನು ಉಂಬಳಿ ಹಾಕಿ ಕೊಟ್ಟನು.

ಪರಾಕ್ರಮಿಗಳೂ, ಸದ್ಗುಣಿಗಳೂ ಆದ ಪುರುಷರನ್ನು ಅವರವರ ಕರ್ತೃತ್ವಶಕ್ತಿಗನುಸರಿಸಿ ಸನ್ಮಾನಿಸಿ ಅವರ ಗೌರವರನ್ನು ಕಾಪಾಡುವದು ದೊಡ್ಡಸ್ಥಿಕೆಯ ಪುರುಷರಲ್ಲಿ ಇರತಕ್ಕ ಗುಣಗಳಲ್ಲಿ ಒಂದಾಗಿರುವದು. ಸನ್ಮಾನ-ಪ್ರದಾನ ಪ್ರತಿಷ್ಠಾಪಾಲನ ಇವೆರಡು ಪ್ರಭು-ಪ್ರೀತಿಯ ದ್ಯೋತಕಗಳು; ಅವುಗಳ ಯೋಗದಿಂದ ಎಲ್ಲರೂ ವಶವಾಗುವರು. ಅವುಗಳ ಅಭಿಲಾಷೆಯಿಂದ ಸರದಾರರಲ್ಲಿ ರಾಜಭಕ್ತಿಯು ಹುಟ್ಟಿ ಅವರು ತಮ್ಮ ಪ್ರಾಣದಾಶೆಯನ್ನು ಬಿಟ್ಟು ಕಲಿತನದಿಂದ ಕಾದಲು ಸಿದ್ಧರಾಗುವರು. ಮನುಷ್ಯನು ಕೈಕೊಂಡ ಕೆಲಸದಲ್ಲಿ ಸಮಯೋಚಿತ ಉತ್ತೇಜನವನ್ನು ಕೊಡುವದರಿಂದ ಆತನಲ್ಲಿ ಆವೇಶ, ದಿಟ್ಟತನ, ಹಂಬಿಕೆ ಇವೇ ಮೊದಲಾದ ಕಾರ್ಯಸಿದ್ಧಿಯ ಸಾಧನಗಳು ಉತ್ಪನ್ನವಾಗುವಂತೆ ಅನ್ಯ ಉಪಾಯಗಳಿಂದ ಅವು ಹುಟ್ಟಲಾರವು. ಸೂಜ್ಞನಾದ ಸ್ವಾಮಿಯು ಈ ನೀತಿತತ್ವವನ್ನು ತಿಳಿದು ಹೊತ್ತು

* ಇದು ಭೀಮಾನದಿಯ ದಂಡೆಯ ಮೇಲೆ ಪಂಢರಪುರದ ಬಳಿಯಲ್ಲಿ ಇರುವದು.

ಬಂದಾಗ ತನ್ನ ಕೈಕೆಳಗಿನ ಜನರಿಗೆ ಉತ್ತೇಜನವನ್ನು ಕೊಡುತ್ತ, ಅವರ ಕೈಯಿಂದಲೇ ಅಘಟಿತಕಾರ್ಯಗಳನ್ನು ನೆರವೇರಿಕೊಂಡು ತಾನು ಅವರೆಲ್ಲರ ಪ್ರೀತಿಪಾತ್ರನೆನಿಸುವನು.

ಇಂಥ ಮೇಲಾದ ಸದ್ಗುಣವು ಶ್ರೀಮಂತ ಬಾಳಾಜಿ ಬಾಜೀರಾಯನಲ್ಲಿ ಸಂಪೂರ್ಣವಿತ್ತು. ಆದ್ದರಿಂದ ಅವನು ಸವಣೂರ ಯುದ್ಧದಲ್ಲಿ ಆಳ್ತನವನ್ನು ತೋರಿಸಿದ ಪ್ರಮುಖ ಸರದಾರರನ್ನು ಮೇಲೆ ಹೇಳಿದಂತೆ ಮನ್ನಿಸಿ ಕೃತಾರ್ಥನಾದನು.

ಪೇಶ್ವೆಯು ಮೆಚ್ಚುಕೊಟ್ಟ ಸಂಭಾವನೆಯ ಯೋಗದಿಂದ ಭಾವೂನ ಸನ್ಮಾನವಾದದ್ದಲ್ಲದೆ, ಯಾವನು ಮಹಾರಾಷ್ಟ್ರದೇಶದ ಹಿತದ ಸಲುವಾಗಿ ತನ್ನ ತನುಮನವಚನಗಳಿಂದ ಪ್ರಯತ್ನ ಮಾಡುವನೋ ಆತನ ಸತ್ಕೃತ್ಯಕ್ಕೆ ಯೋಗ್ಯ ಸನ್ಮಾನವು ಪ್ರತಿಫಲವಾಗಿ ಶ್ರೀಮಂತ ಸರಕಾರದಿಂದ ದೊರಕುವದೆಂಬ ಸೂಚನೆಯು ಒಡೆದು ಕಾಣತೊಡಗಿತು. ನಾನಾಸಾಹೇಬನ ಈ ಉದಾರಸ್ವಭಾವದ ಪ್ರಶಂಸನೆಯನ್ನು ಎಷ್ಟು ಮಾಡಿದರೂ ಸ್ವಲ್ಪೇ ಅದೆ.

ಮನುಷ್ಯನು ಯಾವದಾದರೊಂದು ಕೆಲಸವನ್ನು ಕೈಕೊಂಡನೆಂದರೆ ಆತನು ಅದರ ಆರಂಭದ ಕಡೆಗೆ ವಿಶೇಷ ಲಕ್ಷ್ಯಗೊಡುವನು. ಯಾವಕಾರ್ಯವು ಪ್ರಾರಂಭದಲ್ಲಿ ಯಶಸ್ಕರವಾಗಿ ಪರಿಣಮಿಸುವದೋ ಅದನ್ನು ಅಧಿಕಾಧಿಕ ಆಸಕ್ತಿಯಿಂದಲೂ, ಪರಿಶ್ರಮದಿಂದಲೂ ಮಾಡಬೇಕೆಂಬುವ ಕುತೂಹಲವು ಉತ್ಪನ್ನವಾಗುವದು ಸ್ವಾಭಾವಿಕವಾದದ್ದು. ಯಾಕಂದರೆ ಜಗತ್ತಿನಲ್ಲಿ ಸಕಲಕಾರ್ಯಗಳ ಪ್ರಾರಂಭವು ಕಠಿಣವಾದದ್ದು. ಅದು ಉತ್ತಮ ರೀತಿಯಿಂದ ನೆರವೇರಿತೆಂದರೆ ಮುಂದಿನ ಕಾರ್ಯಭಾಗವು ಸುಲಭವಾಗಿ ಸಾಗುವದು. ಉತ್ತಮ ರೀತಿಯಿಂದ ಆರಂಭಿಸಲ್ಪಟ್ಟ ಕೆಲಸವು ಅರ್ಧವಾದಂತೆ (Well begun is half done) ಎಂದು ಹೇಳುವ ಆಂಗ್ಲಭಾಷೆಯ ಗಾದೆಯಾದರೂ ಮೇಲಿನ ತತ್ವವನ್ನೇ ಬೋಧಿಸುವದು. ಆದರೆ "**प्रथमग्रासे मक्षिकापातः**" ಎಂಬ ರೂಢಿಯ ಮಾತಿನಂತೆ ಸ್ವೀಕೃತಕಾರ್ಯದ ಪ್ರಥಮಾರಂಭದಲ್ಲಿಯೇ ಜಯವು ಸಿಗದಿದ್ದರೆ ಮನುಷ್ಯರ ಉತ್ತೇಜನವು ಕಡಿಮೆಯಾಗುವದು. ಅದರಿಂದ ಬಲವು ಕುಗ್ಗುವದು. ನಿರ್ಬಲನಾಗಲು ಕಾರ್ಯತತ್ಪರತೆಯು ಲೋಪವಾಗುವದು. ಹೀಗಾಗುವದರಿಂದ ಮನುಷ್ಯನು ಉನ್ನತಿ

ಯನ್ನು ಹೊಂದುವದರ ಬದಲು, ಅವನತಿಯ ಮಾರ್ಗವನ್ನು ಹಿಡಿಯುವನು. ಇದೇ ನೈತಿಕತತ್ವವನ್ನು ಮನದಂದು, "ಮೊದಲಿನ ಕದನದಲ್ಲಿ ಗೆಲವು ಸಿಕ್ಕಿತು. ಶ್ರೀಮಂತ ಪೇಶ್ವೆಯರು ನನ್ನನ್ನು ಚನ್ನಾಗಿ ಸತ್ಕರಿಸಿದರು" ಎಂದು ಪರಶುರಾಮಭಾವು ಯೋಚಿಸಿ, ಹೆಚ್ಚು ಹರ್ಷಗೊಂಡು ತಾನು ಸ್ವೀಕರಿಸಿದ ಸರದಾರರ ಉದ್ಯೋಗವನ್ನು ಅಧಿಕ ಉತ್ಸುಕತೆಯಿಂದ ಸಾಗಿಸಬೇಕೆಂಬುವ ಆಶಾಂಕುರವು ಆತನಲ್ಲಿ ಉತ್ಪನ್ನವಾಯಿತು. ಸವನೂರ ಸಂಗ್ರಾಮದಲ್ಲಿ ಯಶಸ್ವಿಯಾಗಿ ಎಲ್ಲ ಜನರ ಹೊಗಳಿಕೆಯನ್ನು ಪಡೆದಂತೆ, ಮುಂದೆ ಅವನು ಯುದ್ಧಮಾಡಿದೆಡೆಗಳಲ್ಲಿ ತಾದೃಶವಾದ ವಿಜಯವನ್ನು ಸಂಪಾದಿಸಿ, ಜನಶ್ಲಾಘನೆಯನ್ನೂ, ಪ್ರಭುಪ್ರೀತಿಯನ್ನೂ ಹೊಂದಿ, ಅಖಂಡ ಕೀರ್ತಿಯನ್ನು ಪಡೆದನು. ಸ್ವಾಮಿಕಾರ್ಯ, ಲೋಕಕಲ್ಯಾಣಗಳ ನಿಮಿತ್ಯದಿಂದ ಸ್ವೀಕರಿಸದ ಸಕಲ ಕಾರ್ಯಗಳನ್ನು ಆತನು ಬಹು ದಕ್ಷತೆಯಿಂದಲೂ, ನಿಷ್ಠೆಯಿಂದಲೂ, ಸಿದ್ಧಿಗೊಯ್ದು ಸ್ವಾಮಿಭಕ್ತನೂ, ದೇಶಭಕ್ತನೂ ಎಂದು ಹೆಸರುಗೊಂಡನು. ಈ ಪ್ರಕಾರ ಪರಮ ಪ್ರತಾಪಿಯೆಂದೆನಿಸಿದ ಪರಶುರಾಮಭಾವು ಪೇಶ್ವೆಯು ಉಚಿತಕೊಟ್ಟ ವಸ್ತ್ರಾಲಂಕಾರಗಳನ್ನು ಧರಿಸಿಕೊಂಡು, ಬಹಳ ನಯಭಯದಿಂದ ಶ್ರೀಮಂತನ ಬಳಿಗೆ ಬಂದು, ಸ್ವಾಮಿಯ ಚರಣಸರೋಜಗಳಲ್ಲಿ ತನ್ನ ಮಸ್ತಕವನ್ನಿಟ್ಟು ಕೃತಜ್ಞತೆಯನ್ನು ಪ್ರಕಟಗೊಳಿಸಿದನು. ಆಗ ಪೇಶ್ವೆಯು ಪರಮ ಸಂತುಷ್ಟನಾಗಿ 'ಶೂರ' 'ವೀರ' ಎಂದು ಆಶೀರ್ವದಿಸಿ ತನ್ನ ವರದ ಹಸ್ತಗಳನ್ನು ಆತನ ತಲೆಯಮೇಲಿಟ್ಟು ಆ ಬಾಲವೀರನನ್ನು ಮೇಲಕ್ಕೆಬ್ಬಿಸಿ ಪ್ರೀತಿಪುರಸ್ಸರವಾಗಿ ಮುಂಡಾಡಿದನು. ಮುಂದೆ ಆ ಪಟವರ್ಧನ ಬಾಲಕನು ತನ್ನ ಬಾಹುಬಲದ ಪರಾಕ್ರಮದಿಂದ ಪೇಶ್ವೆಯು 'ಶೂರ' 'ವೀರ' ಎಂದು ಹರಸಿದ ಆಶೀರ್ವಚನವನ್ನು ಸಾರ್ಥಕ ಮಾಡಿಕೊಳ್ಳದೆ ಬಿಡಲಿಲ್ಲ. ಮುಂದಿನ ಚರಿತ್ರೆಯು ಅತ್ಯಂತ ಮನೋಹರವಿದ್ದು, ಅದು ಮುಂದಿನ ಅಧ್ಯಾಯಗಳಲ್ಲಿ ಕ್ರಮದಿಂದ ವರ್ಣಿಸಲ್ಪಟ್ಟಿರುವದು.

# ೪ನೆಯ ಅಧ್ಯಾಯ.

## ಪರಶುರಾಮಭಾವು ಇತ್ಯಾದಿ ಪಟವರ್ಧನ ಬಾಂಧವ ಸರದಾರರು ಮಾಡಿದ ಯುದ್ಧಗಳು.

ಇಸವಿಸನ್ನ ೧೭೬೦-೬೧ರಿಂದ ಪರಶುರಾಮಭಾವೂನ ಪ್ರಭುಸೇವೆಯ ಮಹತ್ಕಾರ್ಯಗಳು ವಿಶೇಷವಾಗಿ ಪ್ರಾರಂಭವಾದವು. ಈ ವರ್ಷದಿಂದಲೇ ಪೇಶವೆ ಇತಿಹಾಸದಲ್ಲಿ ಬೇರೆ ಪಟವರ್ಧನ ಸರದಾರರ ಸಂಗಡ ಈ ವೀರಾಗ್ರಣಿಯ ಹೆಸರು ಅಲ್ಲಲ್ಲಿ ದೃಷ್ಟಿಗೆ ಬೀಳುವದು. ೧೭೬೦ನೇ ಇಸವಿಯಲ್ಲಿ ಪೇಶವೆ ನಿಜಾಮರ ವೈಮನಸು ಹುಟ್ಟಿ, ಅವರಿಬ್ಬರನಡುವೆ ಉದಯಗಿರಿಯಂಬಲ್ಲಿ ಘನಘೋರ ಸಂಗ್ರಾಮವೆಸಗಿತು; ಅದರಲ್ಲಿ ವೀರನಾಯಕನಾದ ಸದಾಶಿವರಾವಭಾವು ಪೇಶವೆ ಸೈನ್ಯದ ಅಧಿನಾಯಕನಿದ್ದು, ಅವನು ನಿಜಾಮನನ್ನು ಸೋಲಿಸಿ ಹಣ್ಣುಮಾಡಿ ಬಿಟ್ಟನು. ಆಗ್ಗೆ ನಿಜಾಮನು ದೌಲತ್ಾಬಾದ, ಔರಂಗಬಾದ ಇವೆರಡು ಕೋಟೆಗಳನ್ನೂ, ಅವುಗಳ ಸುತ್ತುಮುತ್ತಿನ ೬೨ಲಕ್ಷ ರೂಪಾಯಿಗಳ ಹುಟ್ಟುವಳಿಯ ಪ್ರದೇಶಗಳನ್ನೂ ಪೇಶವೆ ಸರಕಾರಕ್ಕೆ ಕೊಡುವೆನೆಂದು ಅವರೊಡನೆ ಒಡಂಬಡಿಕೆಯನ್ನು ಮಾಡಿಕೊಂಡನು. ಒಪ್ಪಂದದಲ್ಲಿ ಗೊತ್ತಾದ ಕಿಲ್ಲೆಗಳನ್ನೂ ಸೀಮೆಗಳನ್ನೂ ತಮ್ಮ ಸ್ವಾಧೀನಕ್ಕೆ ತಕ್ಕೊಂಡು, ಅಲ್ಲಿ ಯೋಗ್ಯ ವ್ಯವಸ್ಥೆಯನ್ನು ನೆಲೆಗೊಳಿಸುವದಕ್ಕೆ ತಕ್ಕ ಸರದಾರರನ್ನು ಸೋಲಿಸಿ, ಪೇಶವೆಯು ಮಿಕ್ಕ ಮಾರ್ಬಲದೊಡನೆ ಪುಣೆಗೆ ಮರಳಿ ಬಂದನು. ದೌಲತ್ಾಬಾದದ ಹೊರ್ತು ಎಲ್ಲ ಕಿಲ್ಲೆಗಳೂ, ಪ್ರಾಂತಗಳೂ ಪೇಶವೆಯರ ವಶಕ್ಕೆ ಬಂದವು; ಆದರೆ ಅಲ್ಲಿಯ ಕಿಲ್ಲೇದಾರನು ಆ ದುರ್ಗಗಳನ್ನು ಶ್ರೀಮಂತಸರಕಾರಕ್ಕೆ ಒಪ್ಪಿಸಲಿಲ್ಲ. ಸಾಮೋಪಚಾರಗಳಿಂದ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ನಾಲ್ಕನೆಯ ಉಪಾಯವನ್ನು ಕೈಕೊಳ್ಳುವ ಪ್ರಸಂಗವು ಬಂದದರಿಂದ, ಆ ಮಹತ್ಕಾರ್ಯ ನಿರ್ವಾಹಕ್ಕೆ ಯಾರನ್ನು ಕಳುಹಬೇಕೆಂಬ ವಿಚಾರವು ಹೊರಟಿತು. ಪಟವರ್ಧನಸರದಾರರು ಅನೇಕ ಕಾಳಗಗಳಲ್ಲಿ ಅಸದೃಶ ಶೌರ್ಯಸಾಹಸಗಳನ್ನು ತೋರಿಸುತ್ತ ಬಂದಿದ್ದರು; ಅವರ ಭುಜಬಲಪರಾಕ್ರಮವನ್ನು ಪೇಶವೆಯು

ಕಣ್ಮುಟ್ಟ ನೋಡಿ ಮನಗಂಡಿದ್ದನು. ಆದದರಿಂದ ಆ ಕಾರ್ಯಭಾಗವು ಅವರ ಪಾಲಿಗೇ ಬಂತು. ಆಗ ಪೇಶವೆಯು ಗೋಪಾಳರಾಯನ ವಶಕ್ಕೆ ದೊಡ್ಡದಂಡು ಕೊಟ್ಟು ಕಳುಹಿದನು. ಆತನೊಡನೆ ಪರಶುರಾಮಭಾವು ಮತ್ತು ನೀಲಕಂಠತ್ರ್ಯಂಬಕ ಇವರಿಬ್ಬರು ತಮ್ಮ ಪಥಕಗಳೊಂದಿಗೆ ಹೊರಟರು. ಪಯಣಗತಿಯಿಂದ ಪೇಶವೆಯರ ಪ್ರಚಂಡ ದಂಡು ದೌಲತ್ತಾಬಾದದ ಸಮೀಪಕ್ಕೆ ಬಂದು ಬೀಡುಬಿಟ್ಟಿತು. ಗೋಪಾಳರಾಯನು ಕಿಲ್ಲೇಗಾರನನ್ನು ಒಳ್ಳೇಮಾತಿನಿಂದ ಕೇಳಿ ನೋಡಿದನು. ಆದರೆ ಆ ಉದ್ದಾಮತನದ ಸರದಾರನು ಅದಕ್ಕೆ ಒಪ್ಪಲಿಲ್ಲ. ಕೂಡಲೆ ಪಟವರ್ಧನ ಸರದಾರರು ಆ ಕೋಟೆಯನ್ನು ಮುತ್ತಿದರು; ಅದರ ಸುತ್ತುಮುತ್ತು ಮೋರ್ಚೆಗಳನ್ನು ಕಟ್ಟಿಸಿ, ಅವುಗಳ ಕಾವಲಿಗೆ ಶೂರ ಸಿಪಾಯಿಜನರನ್ನು ನೇಮಿಸಿ, ಅನ್ನ, ಹುಲ್ಲು ಮುಂತಾದ ಸಮಸ್ತ ಸಾಮಗ್ರಿಗಳು ಒಳಗೆ ಹೋಗದಂತೆ ಕಟ್ಟುಮಾಡಿದರು; ಇಷ್ಟಕ್ಕೆ ಆ ಶೂರರು ಬಿಡದೆ, ಐದುಸಾವಿರ ದಂಡಿನೊಡನೆ ಕಿಲ್ಲೆಗೆ ಲಗ್ಗೆ ಹತ್ತಿ ಅದನ್ನು ಹಿಡಿದುಕೊಂಡರು. ಆಗ್ಗೆ ಕಿಲ್ಲೇದಾರರು ಮೆತ್ತಗಾಗಿ "ಶ್ರೀಮಂತರಿಗೆ ಶರಣು ಬಂದಿರುವೆನು; ಕಾಳಗವನ್ನು ನಿಲ್ಲಿಸಿ ಜೀವದಾನವನ್ನು ಕೊಡಬೇಕು" ಎಂದು ಅಂಗಲಾಚಿ ಬೇಡಿಕೊಂಡದರಿಂದ ವಿಜೇತರಾದ ಪಟವರ್ಧನ ಸರದಾರರು ಅವನ ಮಾತಿಗೊಪ್ಪಿ, ದಂಡಿನೊಡನೆ ರಾಜಧಾನಿಗೆ ಬಂದು ಸೇರಿದರು.

ಇದಾದ ಸ್ವಲ್ಪ ದಿವಸಗಳಲ್ಲಿಯೇ ಅಫಗಾಣ ಬಾದಶಹನಾದ ಅಹ್ಮದಶಹಾ ಅಬ್ದಾಲಿಯು ಉತ್ತರಹಿಂದುಸ್ತಾನವನ್ನು ಒಳನುಗ್ಗಿ ಕೊಲೆಸುಲಿಗೆಗಳನ್ನು ಮಾಡಲುಪಕ್ರಮಿಸಿದ ಕಡು ಕೆಟ್ಟ ಸುದ್ದಿಯು ಪೇಶವೆಯರಿಗೆ ಹತ್ತಿದ್ದರಿಂದ ನಾಲ್ಕು ಕಡೆಗೂ ಯುದ್ಧಸೌರಣೆಯು ನಡೆಯಿತು. ಆ ಅಬ್ದಾಲಿಯು ಇಸವಿ ಸನ್ನ ೧೭೬೦ ರಲ್ಲಿ ದೊಡ್ಡ ದಂಡಿನೊಡನೆ ಬಂದು, ದಿಲ್ಲಿಯನ್ನು ಕೈವಶಮಾಡಿಕೊಂಡು ಅಲ್ಲಿ ತನ್ನ ಅಮಲು ಕೂಡ್ರಿಸಿದನು. ಅಷ್ಟಕ್ಕೆ ಅವನು ತೃಪ್ತಿಗೊಳ್ಳದೆ ಶಿಂದೇಹೋಳಕರರ ಸೀಮೆಗಳಲ್ಲಿ ತನ್ನ ಹಾವಳಿಯನ್ನು ಆರಂಭಿಸಿದನು. ಈ ತುಂಟುತನವನ್ನು ಪೇಶವೆಯರು ಸಹನಮಾಡುವರೇ! ಕೂಡಲೆ ಪೇಶವೆ ಸರಕಾರದವರು ಶಿಂದೆ, ಹೋಳಕರ, ಗಾಯಿಕವಾಡ, ಭೋಸಲೆ ಮುಂತಾದ ಪ್ರಮುಖ ಸರದಾರರ ಸಹಾಯದಿಂದ ಅದ್ಭುತಸೈನ್ಯವನ್ನು ಕೂಡಿಸಿ, ಕಾಳಗದ ಜೋಡಣೆಯನ್ನು ಮಾಡಿಕೊಂಡರು.

ಆ ಸೈನ್ಯಮಹಾಸಾಗರದ ಸರ್ವಾಧಿಪತ್ಯವನ್ನು ಪರಮ ಪ್ರತಾಪಿಯಾದ ಸದಾಶಿವರಾವಭಾವು ಸ್ವತಃ ಸ್ವೀಕರಿಸಿದನು. ಪರಶುರಾಮಭಾವು ಇತ್ಯಾದಿ ಪಟವರ್ಧನ ಬಂಧುಸರದಾರರು ತಮ್ಮ ತಮ್ಮ ದಳದೊಂದಿಗೆ ಪುಣೆಗೆ ಬಂದು ಕೂಡಿದರು. ಮುಂದೆ ರಾಜಧಾನಿಯ ರಕ್ಷಣೆಗೆ ಯಾರನ್ನು ನೇಮಿಸ ಬೇಕೆಂಬ ಬಗ್ಗೆ ಚರ್ಚೆನಡೆದು, ಕಡೆಗೆ ಪಟವರ್ಧನ ವೀರರು ತಮ್ಮ ಸೈನ್ಯ ಸಮೇತ ಪುಣೆಯಲ್ಲಿ ನಿಂತುಕೊಂಡು ಆ ನಗರವನ್ನು ಸಂರಕ್ಷಿಸಬೇಕೆಂದು ನಿಶ್ಚಿತವಾಯಿತು. ಆದದರಿಂದ ಚಿರಪ್ರಸಿದ್ಧವಾದ ಘನಘೋರ ಪಾಣೀಪತ್ತದ ರಣಕಂದನಕ್ಕೆ ಭಾವು ಮೊದಲಾದ ಪಟವರ್ಧನ ಸರದಾರರು ಹೋಗದೆ ಪುಣೆಯಲ್ಲಿಯೇ ನಿಂತರು. ಮುಂದೆ ಸದಾಶಿವರಾಯನ ಪತ್ರದಂತೆ ಶ್ರೀಮಂತ ನಾನಾಸಾಹೇಬ ಪೇಶವೆಯು ಆತನ ಬೆಂಬಲಕ್ಕಾಗಿ ಸೈನ್ಯಸಂಗತನಾಗಿ ನರ್ಮದೆಯವರೆಗೆ ಹೋದನು. ಅದರಲ್ಲಿ ಪರಶುರಾಮಭಾವು ಇದ್ದನು.

ಅತ್ತ ಸದಾಶಿವರಾಯನು ಶಿಂದೇ ಹೋಳಕರ ಇತ್ಯಾದಿ ರಣಶೂರರ ಸಹಾಯದಿಂದ ಅಫಗಾಣರೊಡನೆ ಅಸೀಮ ಪರಾಕ್ರಮದಿಂದ ಹೋರಾಡಿ, ದಿಲ್ಲಿಯನ್ನು ಹಿಡಿದುಕೊಂಡನು; ಕುಂಜಪುರವು ಆತನ ಕರಗತವಾಯಿತು. ದತ್ತಾಜಿ ಶಿಂದೆಯ ಕೊಲೆಗೈದ ಕುತುಶಹನನ್ನು ಸೆರೆಹಿಡದು ಆತನನ್ನು ತಾನು ಮೊದಲೇ ಮಾಡಿದ ಪ್ರತಿಜ್ಞೆಯಂತೆ ಕೊಲ್ಲಿಸಿ ಸೇಡು ತೀರಿಸಿಕೊಂಡ ನು. ಹೀಗೆ ಆ ವೀರನು ಅಫಗಾಣರ ಸೊಕ್ಕನ್ನು ಚನ್ನಾಗಿ ಮುರಿದು, ಅವ ರನ್ನು ಮೆತ್ತಗೆ ಮಾಡಿಬಿಟ್ಟನು. ಅಬ್ದಾಲಿಯು ಸಂಧಾನ ಪ್ರಸಕ್ತಿಗಳನ್ನು ನಡೆಸಿದನು. ಈ ಪ್ರಕಾರ ಎಲ್ಲ ಕಡೆಯಿಂದಲೂ ಸದಾಶಿವರಾಯನಿಗೆ ಜಯ ವು ದೊರೆಯಿತು. ಆದರೆ ದೈವಗತಿಯು ಬಹಳ ವಿಚಿತ್ರವಾದದ್ದು, ಅದರಿಂದ ಪಾನಿಪತ್ತಕಾಳಗದ ಪರ್ಯಾವಸಾನವು ತೀರ ವಿಪರೀತವಾಗಿ ಪರಿಣಮಿ ಸಿತು. ಶ್ರೀಮಂತ ವಿಶ್ವಾಸರಾಯನು ಸಮರಭೂಮಿಯಲ್ಲಿ ಪಲ್ಲಕ್ಕಿಯಲ್ಲಿ ಕೂತು ಹೋಗುತ್ತಿರುವದನ್ನು ಕಂಡು, ಶತ್ರುಪಕ್ಷದವನೊಬ್ಬನು ಆತನಿಗೆ ಗುರಿಯಿಟ್ಟು ಗುಂಡುಹೊಡಿದನು. ಆ ಪೆಟ್ಟನಿಂದ ಬಹಳ ನೋವು ಉಂಟಾಗಿ ಕಡೆಗೆ ಅದರಲ್ಲಿಯೇ ಆ ಯುವರಾಜ ಪೇಶವೆಯ ಪ್ರಾಣೋತ್ಕ್ರಮಣವಾ ಯಿತು. ಬಳಿಕ ಸದಾಶಿವರಾವಭಾವು ಜೀವದ ಹಂಗುದೊರೆದು ಶತ್ರುಸಂಕು ಲವನ್ನು ಹೊಕ್ಕು ಬಹು ಪರಾಕ್ರಮದಿಂದ ಕಾದಿ ರಣಭೂಮಿಯಲ್ಲಿ ಮಡಿದು ವೀರಸ್ವರ್ಗವನ್ನು ಹೊಂದಿದನು. ಜನಕೋಜಿಯು ಹಾಡಾದರೂ ಹೀಗೇ

ಆಯಿತು. ಈ ಮೇರೆಗೆ ಅಂತ್ಯದವರೆಗೆ ವಿಜಯದಾಶೆ ತೋರಿಸಿದ ಪಾಸಿಪತ್ತದ ಯುದ್ಧವು ಕಡೆಗೆ ಪೇಶವೆಯರನ್ನು ಮೋಸಗೊಳಿಸಿತು. ಈ ಹೃದಯಭೇದಕ ಸುದ್ದಿಯು ಶ್ರೀಮಂತ ಬಾಳಾಜಿಬಾಜೀರಾವ ಪೇಶವೆಯಿಗೆ ಹತ್ತುತ್ತಲೇ ಆತನು ಶೋಕವಿಹ್ವಲನಾಗಿ, ನರ್ಮದೆಯವರೆಗೆ ಬಂದಿದ್ದರೂ ಮುಂದೆ ಹೋಗುವದಕ್ಕೆ ಹವಣಿಸದೆ ದಂಡಿನೊಡನೆ ಪುಣೆಗೆ ಬಂದನು. ಮುಂದೆ ಕೆಲವು ದಿವಸಗಳಲ್ಲಿಯೇ ಆತನು ಪುತ್ರಶೋಕದಿಂದ ನವೆದು ಕಾಲವಾದನು. ಪಟವರ್ಧನ ಸರದಾರರ ಮೇಲೆ, ವಿಶೇಷವಾಗಿ ಪರಶುರಾಮಭಾವೂನ ಮೇಲೆ ಶ್ರೀಮಂತ ಬಾಳಾಜಿಬಾಜೀರಾಯನ ಪ್ರೇಮವು ಬಹಳವಿತ್ತು. ಶ್ರೀಮಂತ ನಾನಾಸಾಹೇಬನ ತರುವಾಯ ಯುದ್ಧಕೌಶಲ್ಯದ ವಿಷಯವಾಗಿಯೂ, ಶೌರ್ಯಸಾಹಸಗಳ ವಿಷಯವಾಗಿಯೂ, ರಾಜನೀತಿಯ ವಿಷಯವಾಗಿಯೂ ಇತಿಹಾಸ ಪ್ರಸಿದ್ಧನಾದ ದೊಡ್ಡ ಮಾಧವರಾಯನು ೧೭೬೧ನೆಯ ಇಸವಿಯಲ್ಲಿ ಪೇಶವೆ ಪಟ್ಟದ ಮೇಲೆ ಕುಳಿತು, ಪ್ರಜಾಜನಹಿತೈಷಿಯಾಗಿಯೂ, ಕೀರ್ತಿಯನ್ನು ಕಾಮಿಸುವವರಾಗಿಯೂ, ಶತ್ರುಭಯಂಕರನಾಗಿಯೂ, ದಯಾಪರನಾಗಿಯೂ, ವಿಚಕ್ಷಣನಾಗಿಯೂ, ಇಂಗಿತಜ್ಞನಾಗಿಯೂ, ನ್ಯಾಯಾನ್ಯಾಯಗಳನ್ನು ಬಲ್ಲವನಾಗಿಯೂ ರಾಜ್ಯಕಾರಭಾರ ಮಾಡಹತ್ತಿದನು. ಮಾಧವರಾಯನಾದರೂ ತಂದೆಯಂತೆ, ಪರಶುರಾಮಭಾವೂನನ್ನು ಪ್ರೀತಿಸತೊಡಗಿದನು. ಇಸವಿ ಸನ್ನ ೧೭೬೧ರ ವರೆಗೆ ಪಟವರ್ಧನ ಸರದಾರರ ಕಡೆಗೆ ಇರುವ ದಂಡಿನ ಜನರಿಗೆ ನಗದಪಗಾರವು ಸಿಗುತ್ತಿತ್ತು. ಮಾಧವರಾಯನು ಅದನ್ನು ನಿಲ್ಲಿಸಿ, ಇಸವಿಸನ್ನ ೧೭೬೩ ರಲ್ಲಿ ದಂಡಿನ ವೆಚ್ಚಕ್ಕಾಗಿ ಅವರಿಗೆ ೨೫ ಲಕ್ಷ ರೂಪಾಯಿಗಳ ಉತ್ಪನ್ನ ಬರುವ ಸರಂಜಾಮು ಹಚ್ಚಿಕೊಟ್ಟು ಮಿರಜಿಯ ಕೋಟೆಯನ್ನು ಅವರಿಗೆ ಕೊಟ್ಟನು. ಆಗ್ಗೆ ಪಟವರ್ಧನ ಸರದಾರರೆಲ್ಲರು ಒಕ್ಕಟ್ಟಿನಿಂದಿದ್ದರು. ಆದದರಿಂದ ಅವರಲ್ಲಿ ಪ್ರಮುಖರಾದ ಗೋವಿಂದಹರಿ, ಪರಶುರಾಮರಾಮಚಂದ್ರ ಮತ್ತು ನೀಲಕಂಠತ್ರ್ಯಂಬಕ ಈ ತ್ರಿವರ್ಗರ ಹೆಸರಲೆ ಸರಂಜಾಮಿನ ಸನದು ಇಸವಿಸನ್ನ ೧೭೬೪ ರಲ್ಲಿ ಕೊಡಲ್ಪಟ್ಟಿತು. ಆದರೂ ಅವರವರ ದಂಡು, ಹಾಗೂ ಸರಂಜಾಮಿನ ಗ್ರಾಮಗಳು ಬೇರೆ ಬೇರೆ ಇದ್ದವು. ಇದಲ್ಲದೆ ಅವರು ಬೇರೆ ಕೆಲವು ಸಣ್ಣ ಪುಟ್ಟ ಸ್ಥಳಗಳನ್ನೂ ಜಕಾತಿ ಮುಂತಾದ ಉತ್ಪನ್ನವನ್ನೂ ಪೇಶವೆಯಿಂದ ಪಡೆದರು. ಇಸವಿಸನ್ನ ೧೭೬೫ ರಲ್ಲಿ ೮೦೦೦ ಸಾವಿರ ಸ್ವಾರ

ರನ್ನು ಇಡುವದಕ್ಕಾಗಿ ಮತ್ತೆ ೨೫ ಲಕ್ಷ ಉತ್ಪನ್ನವುಳ್ಳ ಸೀಮೆಯು ಸರಂಜಾಮು ಹಾಕಿಕೊಡಲ್ಪಟ್ಟಿತು. ಅದರಲ್ಲಿ ೨೪೦೦ ಜನ ರಾಹುತರನ್ನು ಪರಶುರಾಮಭಾವು ಒಬ್ಬನೇ ಇಡಬೇಕೆಂತಲೂ, ಉಳಿದ ರಾಹುತರನ್ನು ಬೇರೆ ಪಟವರ್ಧನ ಸರದಾರರೆಲ್ಲರು ಕೂಡಿ ಇಡಬೇಕೆಂತಲೂ ಪೇಶವೆಯರು ನಿರ್ಣಯಿಸಿದರು. ಪಟವರ್ಧನರ ಈ ಎಲ್ಲ ಸೀಮೆಗಳು ಒತ್ತೊಟ್ಟಿಗೆ ಇರದೆ, ಪೃಥ್ವಿಯ ದಕ್ಷಿಣದಿಕ್ಕಿನಲ್ಲಿ ಹರಿದುಹಚ್ಚಿದಂತೆ ಅಲ್ಲೊಂದು ಇಲ್ಲೊಂದು ಇದ್ದವು. ಕೆಲವು ಊರುಗಳು ಪಂಢರಪುರದ ಉತ್ತರಕ್ಕೆ ಇದ್ದವು; ಕೆಲವು ತುಂಗಭದ್ರೆಯ ಸಮೀಪವಾಗಿ ದಕ್ಷಿಣಕ್ಕೆ ಇದ್ದವು.

ಈ ಎಲ್ಲ ಪ್ರದೇಶಗಳಲ್ಲಿ ಮಿರಜಿಯ ಸುತ್ತುಮುತ್ತಿನ ಸೀಮೆಯೂ, ಕೊಲ್ಹಾಪೂರದ ಪೂರ್ವಮೇರೆಯ ಮೇಲಿನ ಸೀಮೆಯೂ ಬಹಳ ಬೆಳೆಯುಳ್ಳದ್ದು. ಇದೇ ಪ್ರದೇಶದಲ್ಲಿ ಪಟವರ್ಧನ ಸರದಾರರು ತಮ್ಮ ಮುಖ್ಯ ವಸತಿಸ್ಥಾನಗಳನ್ನು ಮಾಡಿಕೊಂಡರು.

ರಾಜನೀತಿ ಸಂಗತನಾದ ಶ್ರೀಮಂತ ಮಾಧವರಾವ ಪೇಶವೆಯು ಪಟವರ್ಧನ ಸರದಾರರಿಗೆ ದಕ್ಷಿಣಮಹಾರಾಷ್ಟ್ರದಲ್ಲಿ ಇಷ್ಟೊಂದು ದೊಡ್ಡ ಪ್ರಾಂತದಲ್ಲಿ ಜಹಗೀರ ಹಾಕಿಕೊಡಲಿಕ್ಕೆ ಅತ್ಯಂತ ಮಹತ್ವವಾದದ್ದೊಂದು ರಾಜಕೀಯ ಕಾರಣವಿತ್ತು. ಅದು ಯಾವದೆಂದರೆ:—

ಆ ಕಾಲಕ್ಕೆ ಕೊಲ್ಹಾಪೂರ, ಮೈಸೂರ ಈ ಎರಡು ದೇಶಗಳ ಅರಸರು ಪೇಶವೆಯ ರಾಜ್ಯಕ್ಕೆ ಬಹಳ ತೊಂದರೆ ಕೊಡುತ್ತಿದ್ದರು. ಕೊಲ್ಹಾಪುರದಲ್ಲಿ ಶ್ರೀಶಿವಛತ್ರಪತಿಯ ವಂಶಜನಾದ ಒಬ್ಬ ಅರಸನು ಸ್ವತಂತ್ರನಾಗಿ ಆಳುತ್ತಿದ್ದನು. ಅವನು ಶ್ರೀಮಂತ ಸರಕಾರದ ಅಧಿಕಾರವನ್ನು ಒಪ್ಪದೆ, ಅಂತರಂಗದಲ್ಲಿ ಪೇಶವೆಯ ಶತ್ರುಗಳಿಗೆ ಸಹಾಯಮಾಡುತ್ತಿದ್ದನು; ಇಷ್ಟೇ ಅಲ್ಲ, ಹೊತ್ತುಬಂದರೆ ಪೇಶವೆಯ ಕೂಡ ಯುದ್ಧಕ್ಕೆ ನಿಲ್ಲಲಿಕ್ಕೆ ಸಹ ಅವನು ಹಿಂದುಮುಂದೆ ನೋಡುತ್ತಿದ್ದಿಲ್ಲ. ಅದೇ ಪ್ರಕಾರ ಮೈಸೂರ ಹೈದರಖಾನನೆಂಬುವ ಸರದಾರನು ಒಳ್ಳೇ ಪ್ರಬಲನಾಗಿ ತನ್ನ ಪ್ರಚಂಡಸೇನೆಯಿಂದ ಸುತ್ತುಮುತ್ತಿನ ಸೀಮೆಗಳಲ್ಲೆಲ್ಲ ಕೊಳ್ಳೆಯಿಟ್ಟು, ಹಾಳುಮಾಡಿ ಸರಹದ್ದಿನ ಸಂಸ್ಥಾನಗಳನ್ನೂ, ಕಿಲ್ಲೇದಾರರನ್ನೂ ಹಣ್ಣುಮಾಡಿ ಬಿಟ್ಟಿದ್ದನು. ಅವನು ಬೇರೆ ಸಂಸ್ಥಾನಿಕರ ರಾಜ್ಯಗಳ ಮೇಲೆ ಕಾರಣವಿಲ್ಲದೆ ದಾಳಿಮಾಡಿ ಹಲವು

ಪ್ರಾಂತಗಳನ್ನು ಗೆದ್ದು ತನ್ನ ರಾಜ್ಯದ ಮೇರೆಯನ್ನು ಬಹಳ ಬೆಳಿಸಿದ್ದನು. ಹೀಗೆ ಹೈದರ, ಕರವೀರಕರರ ಉಪಪವಗಳಿಂದ ದಕ್ಷಿಣದಿಶೆಯ ಪೇಶವೆ ರಾಜ್ಯವು ಅಸಂಖ್ಯ ಸಂಕಟಗಳಿಗೆ ಗುರಿಯಾಗಿತ್ತು.

ಈ ಪ್ರಬಲವಾದ ಇಬ್ಬರು ವೈರಿಗಳ ತೋಳತಿಂಡಿಯನ್ನು ತೀರಿಸಿ, ಅವರನ್ನು ಸದೆಬಡಿಯುವ ಸಂಪೂರ್ಣ ಸಾಮರ್ಥ್ಯವು ಗಂಡುಗಲಿಗಳಾದ ಪಟವರ್ಧನ ಸರದಾರರಿಗೇ ಉಂಟೆಂದು ಪೇಶವೆಯಿಗೆ ಪೂರ್ಣ ನಂಬಿಗೆಯಿತ್ತು. ಅದರಿಂದಲೇ ಪೇಶವೆಯು ಆ ಶತ್ರುಗಳ ಸೀಮೆಗಳಿಗೆ ಸಮೀಪವಾಗಿ ಪಟವರ್ಧನಸರದಾರರನ್ನು ಸ್ಥಾಪಿಸಿ, ಅವರಿಗೆ ಮೇಲೆ ಹೇಳಿದಂತೆ ಸರಂಜಾಮು ಹಚ್ಚಿಕೊಟ್ಟನು. ಹೀಗಾದದರಿಂದ ಪೇಶವೆಯ ರಾಜ್ಯದ ದಕ್ಷಿಣಮೇರೆಯು ಸುರಕ್ಷಿತವಾದದ್ದಲ್ಲದೆ, ಅಲ್ಲಿಂದ, ಗೋಪಾಳರಾವಗೋವಿಂದ, ಪರಶುರಾಮಭಾವು, ನೀಲಕಂಠತ್ರ್ಯಂಬಕ ಇವರೇ ಮೊದಲಾದ ಪುರುಷಸಿಂಹಗಳು ಹೈದರಕೊಲ್ಹಾಪುರಕರರೆಂಬ ತೋಳಗಳಮೇಲೆ ಏರಿ ಹೋಗಹತ್ತಿದವು. ಪರಶುರಾಮಭಾವುವಿನ ಕಡೆಗೆ ಇದ್ದ ಸರಂಜಾಮಿನ ಪ್ರದೇಶಗಳು ಯಾವವೆಂದರೆ:—ತಾಸಗಾಂವಿ, ಚಿಂಚಣಿ, ಜಮಖಂಡಿ, ಯಾದವಾಡ, ಗೋಕಾಕ ಮತ್ತು ಕುಂದಗೋಳ ಇತ್ಯಾದಿ; ಇವುಗಳಲ್ಲಿ ತಾಸಗಾಂವಿಯು ಆತನ ಪ್ರೀತಿಯ ವಸತಿಸ್ಥಳವೂ, ರಾಜಧಾನಿಯೂ ಆಗಿತ್ತು.

ಇಲ್ಲಿ ನಾವು ನಮ್ಮ ವಾಚಕವರ್ಗಕ್ಕೆ ಒಂದು ಸಂಗತಿಯನ್ನು ಅರಹುತ್ತೇವೆ. ಈ ಚರಿತ್ರದ ಮುಖ್ಯನಾಯಕನಾದ ಪರಶುರಾಮಭಾವು ಪಟವರ್ಧನನಿಗೂ, ಉಳಿದ ಪಟವರ್ಧನಸರದಾರರಿಗೂ ಅತಿ ನಿಕಟಸಂಬಂಧವಿದ್ದದರಿಂದ ಈ ಚರಿತ್ರದಲ್ಲಿ ಕೆಲಕೆಲವು ಕಡೆಗೆ ಪ್ರಾಯಶಃ ಎಲ್ಲ ಪಟವರ್ಧನ ಸರದಾರರ ಉಲ್ಲೇಖವು ಮಾಡಲ್ಪಡುವದು. ಯಾಕಂದರೆ ಯುದ್ಧಕ್ಕೆ ಹೊರಡಬೇಕೆಂದು ಶ್ರೀಮಂತರ ಆಜ್ಞಾಪತ್ರವು ಬಂದಕೂಡಲೇ, ಈ ಏಕನಿಷ್ಠ ಸ್ವಾಮಿಭಕ್ತರಾದ ಪಟವರ್ಧನ ಸರದಾರರಿಗೆ ವೀರಾವೇಶವು ಹುಟ್ಟಿ, ಎಲ್ಲರೂ ಒಟ್ಟುಗೂಡಿ ಪೇಶವೆಯರ ಜತೆಯಲ್ಲಿ ಕಾಳಗಕ್ಕೆ ಹೊರಡುತ್ತಿದ್ದರು; ಮತ್ತು ಜೀವದ ಹಂಗುದೊರೆದು ಸಮರಭೂಮಿಯಲ್ಲಿ ವೈರಿಗಳೊಡನೆ ಕಲಿತನದಿಂದ ಕಾದುತ್ತಿದ್ದರು. ಆದದರಿಂದ ಕರ್ಣಾಟಕ ವೀರಚೂಡಾಮಣಿಯಾದ ಬುಕ್ಕರಾಯನ ಹೆಸರು ಹೊರಟಕೂಡಲೆ, ಅವನೊಡನೆ ಹರಿಹರರಾವ

ಮುಂತಾದವರು ಹ್ಯಾಗೆ ಬರತಕ್ಕವರೋ, ಮತ್ತು ಬಾವುಗೋಖಲೆಯ ಹೆಸರು ಹೊರಡುತ್ತಲೇ ಅವನ ಸಂಗಡ ಅಪ್ಪಾಸಾಹೇಬ, ದಾದಾಸಾಹೇಬ ಇವರು ಹ್ಯಾಗೆ ಬರತಕ್ಕವರೋ ಅದೇಪ್ರಕಾರ ರಣಶೂರ ಪರಶುರಾಮ ಭಾವು ಪಟವರ್ಧನನ ಸಂಗಡ, ಗೋಪಾಳಗೋವಿಂದ, ವಾಮನಗೋವಿಂದ, ನೀಲಕಂಠತ್ರ್ಯಂಬಕ ಇತ್ಯಾದಿ ವೀರವಿಭ್ರಮರ ಹೆಸರು ಬರುವದು ಸ್ವಾಭಾವಿಕವೇ.

ಪೂರ್ವೋಕ್ತ ಸರಂಜಾಮು ಸಿಕ್ಕಂದಿನಿಂದ ಪಟವರ್ಧನಸರದಾರರು ಮುಂಚಿಗಿಂತ ಹೆಚ್ಚು ಸ್ವತಂತ್ರರಾದರು; ಮತ್ತು ಅವರು ಶ್ರೀಮಂತಸರಕಾರದ ನಿರಂತರ ಸರದಾರವರ್ಗದಲ್ಲಿ ಎಣಿಸಲ್ಪಟ್ಟರು. ಬರುಬರುತ್ತ ಅವರ ಗೌರವವು ಪೇಶವೆ ದರಬಾರದಲ್ಲಿ ಹೆಚ್ಚುತ್ತ ನಡೆದದರಿಂದ ರಾಜ್ಯಕಾರಭಾರದ ಹೆಚ್ಚುಕಡಿಮೆಯಲ್ಲಿ ಅವರ ಸಹಾಯವು ಅವಶ್ಯವಾಗಿ ಬೇಕಾಗಹತ್ತಿತು.

ಶ್ರೀಮಂತ ಮಾಧವರಾವ ಬಲ್ಲಾಳನು ಪೇಶವೆಯಾದಬಳಿಕ ಕೆಲವು ಕಾಲ ಯಾವತ್ತು ಕಾರಭಾರವನ್ನು ಆತನ ಚಿಗಪ್ಪನಾದ * ರಘುನಾಥರಾಯನು ಸಾಗಿಸುತ್ತಿದ್ದನು. ಮುಂದೆ ಅವರಿಬ್ಬರಲ್ಲಿ ಕಲಹವು ಪ್ರಾರಂಭವಾದುದರಿಂದ ಮಾಧವರಾಯನು ತಾನೇ ಸ್ವತಂತ್ರನಾಗಿ ಕಾರಭಾರವನ್ನು ಸಾಗಿಸಬೇಕೆಂದು ಬಯಸಲಾರಂಭಿಸಿದನು. ಆದ್ದರಿಂದ ಆ ಜಾಣನು ಪಟುಭಟರೂ, ಸ್ವಾಮಿಭಕ್ತರೂ ಆದ ಪಟವರ್ಧನಸರದಾರರನ್ನು ತನ್ನಕಡೆಗೆ ಮಾಡಿಕೊಂಡನು. ಈ ಸಂಗತಿಯು ರಾಘೋಬಾದಾದಾ ಪೇಶವೆಯ ಕಿವಿವರೆಗೆ ಹೋಯಿತು. ಕೂಡಲೆ ಅವನು ಪಟವರ್ಧನರಮೇಲೆ ಸಿಟ್ಟಾಗಿ ಅವರನ್ನು ಎಡಗಂಣಿನಿಂದ ನೋಡತೊಡಗಿದನು. ಬರುಬರುತ್ತ ಅವನ ಈ ದ್ವೇಷಭಾವವು ಹೆಚ್ಚಿತು. ಆಗ್ಗೆ ಎಲ್ಲ ಪಟವರ್ಧನರು ಮಿರಜಿಯಲ್ಲಿರುತ್ತಿದ್ದರು. ದಾದಾಸಾಹೇಬನು ದೊಡ್ಡ ದಂಡಿನೊಡನೆ ಬಂದು ಆ ಸ್ಥಳವನ್ನು ಮುತ್ತಿದನು. ಶ್ರೀಮಂತರ ಸಂಗಡ ಕಲಹವು ಸರಿಯಲ್ಲವೆಂದೆಣಿಸಿ ಆ ಸ್ವಾಮಿಭಕ್ತಿಪರಾಯಣರು ಆ

---

* ಈ ರಘುನಾಥರಾಯನು ಒಳ್ಳೇ ಹೆಸರಾದ ಕಲಿಯಾಗಿದ್ದನು. ಅವನು ದಂಡಿನೊಡನೆ ಹೊರಟನೆಂದರೆ ಒಮ್ಮೊಮ್ಮೆ ದಿನಕ್ಕೆ ೩೫–೪೦ ಹರದಾರಿಗಳವರೆಗೆ ಪ್ರವಾಸ ಮಾಡುತ್ತಿದ್ದನು. ಅದರಿಂದ ಅವನಿಗೆ ‘ ರಾಘೋಬಾ ಭರಾರಿ ’ ಎಂದು ಕರೆಯುತ್ತಿದರು.

ಕೋಟೆಯನ್ನು ರಘುನಾಥರಾಯನ ಸ್ವಾಧೀನಮಾಡಿದರು. ಬಳಿಕ ಗೋವಿಂದ ಹರಿಯು ಎಲ್ಲ ಕುಟುಂಬ ಸಹಿತ ಮಂಗಳವೇಡೆಗೆ ಬಂದನು. ಅಲ್ಲಿ ಆತನ ಹಿರಿಯ ಅಣ್ಣನಾದ ಕೃಷ್ಣಭಟ್ಟರು ಇರುತ್ತಿದ್ದರು. ಆದರೆ ಗೋವಿಂದಹರಿಯ ಶೂರಪುತ್ರನಾದ ಗೋಪಾಳರಾಯನು ತಂದೆಯೊಡನೆ ಹೋಗದೆ ಹೈದರಾಬಾದಕ್ಕೆ ಹೋದನು. ಅಲ್ಲಿ ಆತನು ಸುಮ್ಮನೆ ಕೂಡದೆ ನಿಜಾಮನನ್ನು ತನ್ನ ಕಡೆಗೆ ಮಾಡಿಕೊಂಡು, ಮಿರಜ ಕಿಲ್ಲೆಯನ್ನು ಮರಳಿ ತಕ್ಕೊಳ್ಳುವ ಯತ್ನ ನಡೆಸಿದನು. ನಿಜಾಮನು ಕಾಳಗದ ಸಿದ್ಧತೆಯನ್ನು ಚನ್ನಾಗಿ ಮಾಡಿಕೊಂಡು ಯುದ್ಧಕ್ಕೆ ಎದುರಾದನು. ಪೇಶವೆ ನಿಜಾಮರ ದಂಡುಗಳು ರಾಕ್ಷಸಭುವನವೆಂಬಲ್ಲಿ ಪರಸ್ಪರ ಭೆಟ್ಟಿಯಾಗಲು, ಅಲ್ಲಿಯೇ ಒಂದು ದೊಡ್ಡ ಕಾಳಗವಾಯಿತು. ಉಭಯ ದಳದ ಜನರು ಕಲಿತನದಿಂದ ಕಾದಿದರು. ಆ ಯುದ್ಧದಲ್ಲಿ ನಿಜಾಮನ ಪ್ರಖ್ಯಾತ ಪ್ರಧಾನನಾದ ವಿಠ್ಠಲಸುಂದರನು ಮರಣಹೊಂದಿದನು. ಆ ಯುದ್ಧದ ಕೊನೆಯ ಪರಿಣಾಮವು ಭಯಂಕರವಾಗುವದೆಂದು ಮಾಧವರಾವ ಪೇಶವೆಯಿಗೆ ಹೊಳೆದದರಿಂದ ಆತನು ನಿಜಾಮನನ್ನು ಕೂಡಿದ ಗೋಪಾಳರಾಯನನ್ನು ಕರೆಸಿಕೊಂಡನು. ಆಮೇಲೆ ರಘುನಾಥರಾವ ಗೋಪಾಳರಾವ ಮತ್ತು ತಾನು ಈ ತ್ರಿವರ್ಗರು ವಿಹಿತಾವಿಹಿತ ವಿಚಾರಮಾಡಿಕೊಂಡು ನಿಜಾಮನೊಡನೆ ಒಪ್ಪಂದ ಮಾಡಿಕೊಂಡರು. ಹೀಗಾಗಿ ಕಾಳಗದ ಕೆಲಸವು ಅಷ್ಟಕ್ಕೆ ನಿಂತು ಶಾಂತತೆಯು ನೆಲಗೊಂಡಿತು. ಆ ಹಾಳಿಯಲ್ಲಿ ಭಾವು ಮೊದಲಾದ ಪಟವರ್ಧನರು ಒಳ್ಳೇ ಸಹಾಯ ಮಾಡಿದ್ದರಿಂದ ಪೇಶವೆಯು ಅವರನ್ನು ಚನ್ನಾಗಿ ಸನ್ಮಾನಿಸಿದನು.

ಹಿಂದೆ ಹೇಳಿದಂತೆ ಹೈದರಅಲ್ಲಿಯು ಮೈಸೂರ ಹಿಂದೂ ಅರಸನನ್ನು ಪಟ್ಟದಿಂದ ತಳ್ಳಿ, ತಾನೇ ಆ ಸಂಸ್ಥಾನದ ಒಡೆಯನಾಗಿ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಒಳ್ಳೇ ದೊಂಬಿಯನ್ನು ಎಬ್ಬಿಸಿದನು. ಇಸವಿಸನ್ನ ೧೭೬೪ರಲ್ಲಿ ಅವನ ಉರವಣಿಗೆಯು ಮಿತಿಮೀರಿತು. ಅವನು ಕರ್ನಾಟಕವನ್ನು ಒಳನುಗ್ಗಿ ಬಂದು, ಎಷ್ಟೋ ಪಾಳ್ಯಗಾರರಿಗೂ, ಸಂಸ್ಥಾನಿಕರಿಗೂ ಒತ್ತಾಯ ಮಾಡಿ ಕಪ್ಪತಕ್ಕೊಂಡನು; ಎಷ್ಟೋ ಸಂಸ್ಥಾನಿಕರ ಸೀಮೆಗಳನ್ನು ಸುಲಿದು ಹಾಳು ಮಾಡಿದನು; ಬೇರೆ ಕೆಲವರ ಪ್ರಾಂತಗಳನ್ನು ಆಕ್ರಮಿಸಿಕೊಂಡನು. ಪ್ರಜೆಗಳಂತೂ ಆತನ ಅಳತೆಗೆಟ್ಟ ಕಾಟವನ್ನು ತಾಳಲಾರದೆ, ದೇವರಿಗೆ ಮರೆಹೊಕ್ಕು, ದೇವರೇ, ಈ ಯಮಸ್ವರೂಪಿಯಾದ ಹೈದರಖಾನನಿಂದ

ನಮ್ಮನ್ನು ಮುಕ್ತಮಾಡೆಂದು ಬೇಡಿಕೊಳ್ಳಹತ್ತಿದರು. ಅವನು ತನ್ನ ರಾಜ್ಯದ ಮೇರೆಯನ್ನು ಬೆಳಿಸುತ್ತ ಉತ್ತರಕ್ಕೆ ತನ್ನ ಅಧಿಕಾರವನ್ನು ನೆಲಗೊಳಿಸುತ್ತ, ಬೇದನೂರ ಸಂಸ್ಥಾನದ ಮೇಲೆ ದಾಳೀಮಾಡಿ ಅದನ್ನು ತಕ್ಕೊಂಡು ಸವನೂರ ಸಂಸ್ಥಾನದ ಬಳಿಗೆ ಬಂದಿಳಿದನು. ಹೈದರನು ಅಸಂಖ್ಯ ದಂಡಿನೊಡನೆ ಮುತ್ತಿ ಹಣ್ಣಿಗೆ ತಂದದರಿಂದ ಅಲ್ಲಿಯ ನವಾಬನು ಆ ಸುಲ್ತಾನನ ಉಪಟಳವನ್ನು ಸಹಿಸುವ ಶಕ್ತಿಯಿಲ್ಲದೆ, ಆತನ ಕೈಯಲ್ಲಿ ಸಿಕ್ಕು ಒದ್ದಾಡಹತ್ತಿದನು; ಮತ್ತು ತನ್ನನ್ನು ಆ ದುಷ್ಕರ ಸಂಕಟದೊಳಗಿಂದ ಬಿಡಿಸಿ, ಹೈದರನಿಗೆ ತಕ್ಕ ಶಾಸನವನ್ನು ಮಾಡುವ ಸಾಮರ್ಥ್ಯವು ಪೇಶವೆಯ ಹೊರತು ಮತ್ತೊಬ್ಬರಲ್ಲಿ ಇಲ್ಲವೆಂದು ಆಲೋಚಿಸಿ, ಆತನು ಬಹು ದೈನ್ಯವೃತ್ತಿಯಿಂದ ದೊಡ್ಡ ಮಾಧವರಾಯನಿಗೆ ಒಂದು ಪತ್ರ ಬರೆದನು. ಆ ಪತ್ರದಲ್ಲಿ ನವಾಬರು ತನ್ನ ಮೇಲೆ ಬಂದ ಸಂಕಟವನ್ನೂ, ಹೈದರನ ಅನ್ಯಾಯದ ಹಾಗು ಬಲುಮೆಯ ವರ್ತನವನ್ನೂ ಹೃದಯಂಗಮವಾಗಿ ವರ್ಣಿಸಿದ್ದನು.

ಆ ಪತ್ರವನ್ನು ಓದಿ ಪೇಶವೆ ಮಾಧವರಾಯನಿಗೆ ಒಳ್ಳೇ ಸಿಟ್ಟುಬಂತು. ಆತನು ಸ್ವಾಭಾವಿಕವಾಗಿಯೇ ಸಿಟ್ಟಿನ ಸ್ವಭಾವದವನು. ಅದರಲ್ಲಿ ಹೈದರನ ಈ ಅನ್ಯಾಯ, ಈ ಬಲಾತ್ಕಾರ, ಈ ದೊಂಬೆ, ಇವೆಲ್ಲವುಗಳನ್ನು ಕೇಳಿ ಇದಕ್ಕೆ ತಕ್ಕ ಪಾರುಪತ್ಯವನ್ನು ಅವನಿಗೆ ಮಾಡಬೇಕೆಂದು ಪೇಶವೆಯು ಸಂಕಲ್ಪಮಾಡಿಕೊಂಡು, ಪಟವರ್ಧನ, ರಾಸ್ತೆ, ಮೋರೋಬಲ್ಲಾಳ ಆನಂದರಾವ ಭಿಕಾಜಿ ಇವರೇ ಮೊದಲಾದ ಸರದಾರರಿಗೆ ಯುದ್ಧಕ್ಕೆ ಹೊರಡುವದಕ್ಕಾಗಿ ಆಜ್ಞಾಪತ್ರಗಳನ್ನು ಬರೆಯಿಸಿದನು. ಎಲ್ಲ ಸರದಾರರು ಹೈದರನ ಮೇಲೆ ದಂಡೆತ್ತಿ ಹೊರಡುವ ಸಿದ್ಧತೆಯನ್ನು ಮಾಡತೊಡಗಿದರು.

ಪೇಶವೆಯ ಆಜ್ಞಾಪತ್ರವು ತಲುಪುತ್ತಲೇ ಗೋಪಾಳರಾವ ಗೋವಿಂದನು ತಡಮಾಡದೆ ಭಾವು ಮೊದಲಾದ ಅಣ್ಣತಮ್ಮಂದಿರನ್ನು ಕೂಡಿಕೊಂಡು ಒಮ್ಮಿಂದೊಮ್ಮೆ ಕರ್ನಾಟಕಪ್ರಾಂತದಲ್ಲಿ ಬಂದು ತಳವೂರಿದನು. ಈ ದಂಡಿಗೆ ತ್ರ್ಯಂಬಕರಾವ ಮಾಮಾ, ಆನಂದರಾವ ರಾಸ್ತೆ, ಇವರ ದಂಡುಗಳೂ ಬಂದು ಕೂಡಿದವು. ಒಟ್ಟಿಗೆ ೪೦ ಸಾವಿರ ಸೈನ್ಯವು ಕೂಡಿತು. ಇದಲ್ಲದೆ ಹೈದರನ ಮೇಲೆ ಹಲ್ಲು ತಿನ್ನುತ್ತಿದ್ದ ಎಷ್ಟೋ ಸಂಸ್ಥಾನಿಕರ ದಂಡುಗಳು ಅವನ ಮಗ್ಗಲು ಮುರಿಯಬೇಕೆಂದು ಜಪ್ಪಿಸಿಕೊಂಡು ಕುಳಿತಿದವು. ಪಟವ

ರ್ಧನ ಸರದಾರರಂಥ ಮುಂದಾಳು ದೊರೆಯಲು, ಆ ದಂಡುಗಳು ಸಹ ಒಳ್ಳೇ ಆನಂದದಿಂದ ಅವರ ದಂಡಿಗೆ ಬಂದು ಕೂಡಿಕೊಂಡವು.

ಹಿಂದಿನಿಂದ ಶ್ರೀಮಂತ ಮಾಧವರಾವ ಬಲ್ಲಾಳನು ಸ್ವತ: ೨೦ಸಾವಿರ ರಾಹುತರು, ೧೫ ಸಾವಿರ ಕಾಲಾಳುಗಳೊಡಗೊಂಡು ಕರ್ನಾಟಕಕ್ಕೆ ಬಂದು ತಲ್ಪಿದನು. ಈ ಪ್ರಚಂಡ ದಂಡಯಾತ್ರೆಯ ಸಂಬಂಧದಿಂದ ಪುಣೆಯಲ್ಲಿ ರಘುನಾಥರಾಯನಿಗೂ ಮಾಧವರಾಯನಿಗೂ ಸ್ವಲ್ಪ ತೊಡಕು ಹುಟ್ಟಿದ್ದರಿಂದ ಆತನಿಗೆ ಪಟವರ್ಧನ ಸರದಾರರನ್ನು ಕೂಡಿಕೊಳ್ಳಲಿಕ್ಕೆ ತಡವಾಯಿತು. ಅಷ್ಟರಲ್ಲಿ ಗೋಪಾಳರಾವ ಗೋವಿಂದ, ಪರಶುರಾಮಭಾವು ಇವರೇ ಮೊದಲಾದ ಸರದಾರರು ಕೃಷ್ಣಾನದಿಯನ್ನು ದಾಟಿ ಹೋಗುತ್ತಿರಲು ಫಜಲ್ ಡಲ್ಲಾಖಾನನೆಂಬ ಹೈದರನ ಸರದಾರನು ಅವರ ಮೇಲೆ ಸಾಗಿಬಂದನು. ಶ್ರೀಮಂತರ ಸೈನ್ಯವು ಇನ್ನೂ ಬಂದು ಕೂಡಿದ್ದಿಲ್ಲೆಂಬ ಕಾರಣದಿಂದ ಪಟವರ್ಧನರ ದಂಡು ಸ್ವಲ್ಪ ಹಿಂಜರಿದಂತೆ ತೋರಿಸಿಕೊಂಡಿತು. ಆದರೆ ಹಿಂದಿನಿಂದ ಶ್ರೀಮಂತರ ಸೈನ್ಯದ ನೆರವು ಸಿಕ್ಕಕೂಡಲೆ ಪಟವರ್ಧನರ ಶೂರಸೈನ್ಯವು ಒಮ್ಮೆಲೆ ಮುಸಲ್ಮಾನರ ಮೇಲೆ ಸಾಗಿಹೋಯಿತು. ಉಭಯ ಸೈನ್ಯಗಳಿಗೂ ನಿಕರದ ಕಾಳಗವಾಯಿತು. ಮಹಾರಾಷ್ಟ್ರ ವೀರರು ಖಾನನ ದಂಡಾಳುಗಳನ್ನು ಹೊಟ್ಟು ಹಾರಿಸಿದಂತೆ ಹಾರಿಸಿದರು. ಅವರಲ್ಲಿ ಅಸಂಖ್ಯ ಜನರು ಅಯ್ಯೋ ದೇವರೇ ಎಂಥ ಹೊತ್ತು ತಂದಿ ಸಾಕು! ಸಾಕು! ಈ ಯುದ್ಧವೂ, ಈ ಖಾನನ ಚಾಕರಿಯೂ ಸಾಕು! ಎಂದು ಒದರುತ್ತ ದಿಕ್ಕಾಪಾಲಾಗಿ ಓಡಹತ್ತಿದರು.

ಮುಂದೆ ಪಟವರ್ಧನರಾಸ್ತೆ ಸರದಾರರ ದಂಡುಗಳು ಪ್ರವಾಸಕ್ರಮದಿಂದ ಹಾನಗಲ್ಲಿನ ಬಳಿಯಲ್ಲಿ ತಳವೂರಿರಲು, ಹೈದರನು ಸ್ವತ: ೨೦ಸಾವಿರ ರಾಹುತರನ್ನು ೪೦ ಸಾವಿರ ಕಾಲಾಳುಗಳನ್ನು ತಕ್ಕೊಂಡು ತುಂಗಾನದಿಯನ್ನು ದಾಟಿ ಹರಿಹರದ ಬಳಿಯಲ್ಲಿ ಬಂದಿಳಿದಿರುವನೆಂಬ ಸುದ್ದಿಯು ಅವನಿಗೆ ಹತ್ತಿತು. ಆಗ ಅವರು ಭರದಿಂದ ಸರ್ಪಸಂಕುಲವನ್ನು ಮುತ್ತುವ ಗರುಡನಂತೆ, ಹೈದರಅಲ್ಲಿಯ ಸೈನ್ಯದಮೇಲೆ ಎರಗಿದರು. ಮಹಾರಾಷ್ಟ್ರರ ಪ್ರಚಂಡಸೈನ್ಯವು ತನ್ನಮೇಲೆ ಏರಿಬಂದದ್ದನ್ನು ಕಂಡು ಹೈದರನು ರಟ್ಟೀಹಳ್ಳಿಗೆ ಹೋಗಿ ಅಲ್ಲಿಂದ ಆಲೂರ ಹಾದೀ ಹಿಡಿದನು. ಆಗ್ಗೆ ಶ್ರೀಮಂತರ ದಂಡು

ಸೊಂಡೂರಲ್ಲಿ ಇತ್ತು. ಆ ದಂಡಿಗೂ ಹೈದರನ ದಂಡಿಗೂ ೩೦ ಹರದಾರಿಯ ಅಂತರವಿತ್ತು. ಅಲ್ಲಿಂದ ಹೈದರನ ಸೈನ್ಯವು ಮಾರ್ಗಕ್ರಮಣ ಮಾಡುತ್ತ ಸವನೂರ ಹತ್ತರ ವರ್ಧಾನದಿಯ ಸಮೀಪಕ್ಕೆ ಬಂದು ಇಳಕೊಂಡಿತು. ಹೈದರನ ಜನರಿಂದ ಸವನೂರ ನವಾಬನ ಪ್ರಜೆಗಳಿಗೆ ಪುನಃ ಬಹಳ ತೊಂದರೆಯಾಗಹತ್ತಿತು. ಆಗ ನವಾಬನು ತನ್ನ ದಿವಾಣನಾದ ಖಂಡೇರಾಯನನ್ನು ಹೈದರಅಲ್ಲಿಯ ಕಡೆಗೆ ಕಳಿಸಿ ಕಪ್ಪ ಕೊಟ್ಟು ಒಪ್ಪಂದ ಮಾಡಿಕೊಳ್ಳುವ ಆಲೋಚನೆಯನ್ನು ಮಾಡಿದನು. ಆದರೆ ಪಟವರ್ಧನಸರದಾರರಿಗೆ ಈ ವರ್ತಮಾನವು ಹತ್ತಿದಕೂಡಲೆ ಅವರು ಸವನೂರ ನವಾಬನಿಗೆ "ನೀವು ನಿಮ್ಮ ದಿವಾಣನನ್ನು ತಿರುಗಿ ಕರೆಯಿಸಿಕೊಳ್ಳಿರಿ; ಸದ್ಯಕ್ಕೆ ಕಪ್ಪ ಕೊಡುವ ಮಾತು ಆಡಬೇಡರಿ. ಈ ಎರಡು ಸಂಗತಿಗಳು ನಿಮ್ಮಿಂದ ಆಗದಿದ್ದರೆ, ಹೈದರನ ಪಾರುಪತ್ಯವಿಷ್ಟೇ ಏಕೆ? ನೀವು ಸಹ ನಿಮ್ಮ ಇಡೀ ಸಂಸ್ಥಾನಕ್ಕೆ ಎರಗಾಗುವ ಹೊತ್ತು ಬಂದೀತು" ಎಂದು ಖಂಡಿತವಾಗಿ ತಿಳಿಯಪಡಿಸಿದರು. ಪಟವರ್ಧನ ಸರದಾರರ ಈ ದಪೋರ್ಯನ್ನು ಕೇಳಿ ನವಾಬರು ಒಪ್ಪಂದದ ಮಾತನ್ನು ಅಷ್ಟಕ್ಕೆ ನಿಲ್ಲಿಸಿದನು. ಪಟವರ್ಧನರ ಸೈನ್ಯವೂ, ಮಹಾರಾಷ್ಟ್ರಸೈನ್ಯವೂ ಸವನೂರ ಕಡೆಗೇ ಬರುವ ಸುದ್ದಿಯನ್ನು ಕೇಳಿ ಹೈದರನಾದರೂ ಎದೆಗುಂದಿ ನವಾಬನಿಗೂ, ಆತನ ಪ್ರಜಾಜನರಿಗೂ ಉಪದ್ರವ ಕೊಡುವದನ್ನು ಬಿಟ್ಟು ಸುಮ್ಮನಿದ್ದನು.

ಇತ್ತ ಗೋಪಾಳರಾವಗೋವಿಂದ, ಪರಶುರಾಮಭಾವು ಮೊದಲಾದ ಸರದಾರರು ಚಿಕ್ಕಬಾಳಾಪೂರ, ನಂದಗಡ, ದೊಡ್ಡ ಬಾಳಾಪೂರ ಚನ್ನರಾಯನಗಡ ಮುಂತಾದ ಸ್ಥಳಗಳನ್ನು ಹಿಡಿದುಕೊಂಡು ಚಿಕ್ಕಬಾಳಾಪೂರ ಮೇಲಿಂದ ಹಾಯ್ದು ಕೈವಾರಕ್ಕೆ ಬಂದು ಮುಟ್ಟಿದರು.

ಈ ಪ್ರಕಾರ ಪಟವರ್ಧನ ಸರದಾರರು ಮುಸಲ್ಮಾನರನ್ನು ಮೂಲಿಗೊತ್ತುತ್ತ ನಡೆದಿರಲು, ಅವರಿಗೆ ಹೈದರನ ಸರದಾರರಾದ ಚಂದ್ರೋಜಿಜಾಧವ, ಬಾಳಾಜಿಪಂತ ಇವರು ಗಂಟುಬಿದ್ದರು. ಬಳಿಕ ಏಲೂರ ಎಂಬಲ್ಲಿ ಗೋಪಾಳರಾಯನು ಅವರ ಮೇಲೆ ಶಸ್ತ್ರಹಿಡಿದನು. ಕೂಡಲೆ ಅಲ್ಲಿ ಭಯಂಕರವಾದ ಯುದ್ಧವಾಯಿತು. ಅದರಲ್ಲಿ ಪರಶುರಾಮಭಾವು ಬಹಳ ಕಲಿತನದಿಂದ ಕಾದಿದನು. ವೈರಿಗಳ ೩೦೦೦ ಸಾವಿರ ಜನರು ರಣಭೂಮಿಯಲ್ಲಿ

ಬಿದ್ದು ಹತರಾದರು. ಅಸಂಖ್ಯ ಜನರು ಗಾಯಹೊಂದಿ ನೆಲಹಿಡಿದರು. ಹತಶೇಷರಾದ ಜನರು ಓಡಿಹೋಗಿ ತಮ್ಮ ಒಡೆಯನಿಗೆ ತಮ್ಮ ಪರಾಭವದ ಸುದ್ದಿಯನ್ನು ಹೇಳಿದರು. ಶತ್ರುಪಕ್ಷದ ಅಸಂಖ್ಯ ಯುದ್ಧೋಪಯೋಗದ ಸಾಮುಗ್ರಿಗಳು ಪಟವರ್ಧನ ಸರದಾರರ ಕೈವಶವಾದವಲ್ಲದೆ, ಅವರ ಕೈಯಲ್ಲಿ ಆ ಇಬ್ಬರು ಸರದಾರರು ಸೆರೆಸಿಕ್ಕರು. ಈ ಯುದ್ಧದಲ್ಲಿ ತ್ರ್ಯಂಬಕರಾವ ಮಾಮಾ ಇವನು ಗೋಪಾಳರಾವ, ಪರಶುರಾಮಭಾವು ಇತ್ಯಾದಿ ಪಟವರ್ಧನ ಸರದಾರರ ಪರಾಕ್ರಮವನ್ನು ಬಹಳ ಕೊಂಡಾಡಿದನು.

ಈ ಮೇರೆಗೆ ಪಟವರ್ಧನ ಸರದಾರನು ಹೈದರಅಲ್ಲಿಯ ಸೈನ್ಯವನ್ನು ಆಗಾಗ್ಗೆ ಗಾಸಿಮಾಡುತ್ತಿರುವಷ್ಟರಲ್ಲಿ, ಅವನು ಸವನೂರಿಗೆ ಏಳು ಹರದಾರಿಯ ಅಂತರದ ಮೇಲೆ ಬಂದು ತಳವೂರಿದನು. ಅದರಿಂದ ಶ್ರೀಮಂತರ ಸೈನ್ಯಕ್ಕೂ ಹೈದರನ ಸೈನ್ಯಕ್ಕೂ ಅಲ್ಲಿ ಗಂಟುಬಿತ್ತು. ಬಳಿಕ ಕೂಡಲೆ ಪೇಶವೆ ಸೈನ್ಯದ ಮೇಲಾಧಿಕಾರಿಯಾದ ಮಾಮಾ ತ್ರ್ಯಂಬಕರಾಯನು, ಗೋಪಾಳರಾವ, ಪರಶುರಾಮಭಾವು ಮೊದಲಾದ ಸರದಾರರಿಗೆ ಬೇಗನೆ ಬಂದು ಕೂಡಿಕೊಳ್ಳಬೇಕೆಂದು ಪತ್ರಬರೆದನು. ಪಟವರ್ಧನರ ಸೈನ್ಯವು ಶ್ರೀಮಂತರ ಸೈನ್ಯಕ್ಕೆ ಬಂದು ಕೂಡಿಕೊಳ್ಳಲು, ಮಹಾರಾಷ್ಟ್ರಸೈನ್ಯದ ಬಲವು ಇಮ್ಮಡಿಯಾಯಿತು. ಬಳಿಕ ಪೇಶವೆ-ಹೈದರಖಾನನ ದಂಡುಗಳಿಗೂ ನಿಕರದ ಕಾಳಗಗಳು ಪ್ರಾರಂಭವಾದವು.

ಹೈದರಅಲ್ಲಿಯಾದರೂ ಸಾಮಾನ್ಯವೀರನೇ? ಕಲಿತನದಿಂದ ಹೆಸರಾಗಿದ್ದನು. ಅವನ ಹತ್ತಿರ ೨೦ ಸಾವಿರ ರಾಹುತರೂ, ೪೦ ಸಾವಿರ ಕಾಲಾಳುಗಳೂ ಇದ್ದರು. ಅವರಲ್ಲಿ ಇಪ್ಪತ್ತು ಸಾವಿರ ಜನರು ಯುದ್ಧಕಲೆಯಲ್ಲಿ ಒಳ್ಳೇ ನಿಪುಣರಾಗಿದ್ದರು. ಹೈದರನು ಇಲ್ಲಿಯತನಕ ಪೇಶವೆಯ ದಂಡಿಗೆ ಎದುರಾಗಿ ಯುದ್ಧವನ್ನು ಮಾಡಿದ್ದಿಲ್ಲ. ನರಿಯಂತೆ ತಪ್ಪಿಸಿಕೊಂಡು ಓಡ್ಯಾಡುತ್ತಿದ್ದನು. ಆದರೆ ಈ ಕಾಲಕ್ಕೆ ಮಹಾರಾಷ್ಟ್ರಸೈನ್ಯವೂ, ಮುಸಲ್ಮಾನರ ಸೈನ್ಯವೂ ಒಂದಕ್ಕೊಂದು ಎದುರಾಗಿ ಎರಡೂ ಪಕ್ಷದ ದಂಡಾಳುಗಳು ಜೀವದ ಮೇಲೆ ಉದಾರರಾಗಿ ಪರಸ್ಪರರ ಮೇಲೆ ಸಾಗಿಹೋದರು. ಒಮ್ಮೇಲೆ ಘನಸಂಗ್ರಾಮಕ್ಕೇ ಆರಂಭವಾಯಿತು. ಆಕಾಶಕ್ಕೆ ಕೆಂಧೂಳು ಅಡರಿತು. ಹೊಗೆಯಿಂದ ನಾಲ್ಕೂ ದಿಕ್ಕುಗಳು ತುಂಬಿದವು; ತುಬಾಕಿಯ

ಗುಂಡುಗಳಿಂದ ರಣಭೂಮಿಯು ಗದ್ದರಿಸಿತು. ಕತ್ತಲು ಕವಿದು ಯಾರಿಗೆ ಯಾರೂ ಕಾಣದಂತಾದರು. ಎರಡೂ ಸೈನ್ಯಗಳು ಒಂದರೊಳಗೊಂದು ಕಲಕಮಲಕಾದಂತೆ ತೋರಿ ಶಸ್ತ್ರಾಸ್ತ್ರಗಳ ಆಘಾತ, ವೀರಭಟರ ರಣ ಗರ್ಜನೆ, ಇವೆಲ್ಲವುಗಳಿಂದ ನಭೋಮಂಡಲವು ದುಮಿದುಮಿಸಿತು. ಒಂದೆಡೆ ಯಿಂದ ಪೇಶವೆಯ ಸರದಾರರೂ ಮತ್ತೊಂದೆಡೆಯಿಂದ ಹೈದರನ ಕಡೆಯ ಸರದಾರರೂ ಪರಸ್ಪರರ ಸೈನ್ಯವನ್ನು ಹೊಕ್ಕು ಕೈಗೆ ಸಿಕ್ಕವರ ರುಂಡುಗಳ ಚೆಂಡಾಡಹತ್ತಿದರು. ಶ್ರೀಮಂತ ಮಾಧವರಾಯನು ಕುದುರೆಯ ಮೇಲೆ ಕುಳಿತು ತನ್ನ ಸೈನಿಕರಿಗೆ ಉತ್ತೇಜನವನ್ನು ಕೊಡುತ್ತ ಮಿಂಚಿನಂತೆ ಹೊಳೆ ಯುತ್ತಿದ್ದನು. ಅದರಂತೆ ಹೈದರನೂ ತನ್ನ ದಂಡಾಳುಗಳನ್ನು ಹುರುಪು ಗೊಳಿಸುತ್ತ ಇತ್ತಿಂದ ಅತ್ತ, ಅತ್ತಿಂದ ಇತ್ತ, ಕುದುರೆಯನ್ನು ಭರದಿಂದ ಓಡಿಸಿಯಾಡುತ್ತಿದ್ದನು. ಪಟವರ್ಧನ ಸರದಾರರು ‘ ಹರಹರ ಮಹಾದೇವ ’ ಎಂದು ಗಂಭೀರ ರಣಗರ್ಜನೆಯನ್ನು ಮಾಡುತ್ತ, ಮದೋನ್ಮತ್ತವಾದ ಕಾಡಾನೆಗಳು ಸರೋವರವನ್ನು ಹೊಕ್ಕು ಕಮಲಗಳನ್ನು ಈಡಾಡುವಂತೆ ಯೂ, ಕುರಿಯ ಗುಂಪನ್ನು ಹೊಕ್ಕ ತೋಳದಂತೆಯೂ, ಶತ್ರುಸೈನ್ಯವನ್ನು ಹೊಕ್ಕು ಕೈಗೆ ಸಿಕ್ಕ ಜನರ ತಲೆಗಳನ್ನು ಕಡಿಕಡಿದು ಧರೆಗುರುಳಿಸುತ್ತಿ ದ್ದರು. ನಡುನಡುವೆ ಗೋಪಾಳರಾಯನು ತನ್ನ ಬಂಧುಸರದಾರರನ್ನು ಕುರಿತು “ ಹೊಡೆಯರಿ, ಕೊಲ್ಲರಿ, ಏನು ನೋಡುವಿರಿ ? ಒಂದೊಂದೇ ಹೆಜ್ಜೆ ಯಂತೆ ಮುಂದಕ್ಕೆ ಸಾಗರಿ. ” ಎಂದು ವೀರಧ್ವನಿಯಿಂದ ಮಾತಾಡುತ್ತಿದ್ದನು. ಪರಶುರಾಮಭಾವು ಕೆರಳಿದ ಹುಲಿಯಂತೆ ವೈರಿಗಳ ಮೇಲೆ ಸಾಗಿಹೋಗಿ ಅಸಂಖ್ಯ ಯವನರನ್ನು ಯಮನಗರಿಗಟ್ಟಿಕೊಟ್ಟನು. ಆತನ ವೀರಖಡ್ಗವು ಶತ್ರುಸೈನಿಕರ ರಕ್ತತೀರ್ಥದಲ್ಲಿ ಸ್ನಾನಮಾಡಿ, ರಕ್ತವನ್ನೇ ಕುಡಿದು ಮದ ವೇರಿತು. ಆತನು ರಣಭೂಮಿಯಲ್ಲಿ ತೋರಿಸುವ ಯುದ್ಧಕೌಶಲ್ಯವನ್ನು ಕಂಡು ಗೋಪಾಳರಾಯನು ಆಶ್ಚರ್ಯಚಕಿತನಾಗಿ—“ ಶಾಬಾಸ, ಪರಶು ರಾಮಾ ಶಾಬಾಸ. ” ಎಂದು ಉದ್ಗಾರಗಳನ್ನು ತೆಗೆದನು. ಆಹೊತ್ತಿನ ದಿವಸ ಎಲ್ಲ ಪಟವರ್ಧನ ವೀರರು ಜೀವದ ಹಂಗುದೊರೆದು ಕಾದಿದರು. ಹೈದರನ ಕಡೆಯ ಜನರಾದರೂ ಚನ್ನಾಗಿ ಹೋರಿದರು. ಆದರೆ ಮಹಾ ರಾಷ್ಟ್ರರ ಪರಾಕ್ರಮಕ್ಕೆ ಅವರು ಈಡಾಗಲಿಲ್ಲ. ಕಡೆಗೆ ಹೈದರನು ಒಡಂಬ ಡಿಕೆಯ ಸಂಧಾನವನ್ನು ಹಚ್ಚಿದನು. ಆಗ ಶ್ರೀಮಂತ ಪೇಶವೆಯು ಆತ

ನೊಡನೆ *ಒಪ್ಪಂದವನ್ನು ಮಾಡಿಕೊಂಡು, ಅವನಿಂದ ಯುದ್ಧದ ವೆಚ್ಚ ವನ್ನು ತೆಗೆದುಕೊಂಡನು; ಸವನೂರ ನವಾಬನ ಸಂಗಡ ನರಸಿಂಹರಾವ ಘಾಯಗುಡೆ ಎಂಬ ಸರದಾರನನ್ನು ಕೊಟ್ಟು, ಅವನನ್ನು ಪುನಃ ಗಾದಿಯ ಮೇಲೆ ಕುಳ್ಳಿರಿಸಿ, ವ್ಯವಸ್ಥೆಯ ಸಲುವಾಗಿ ಕೆಲವು ದಂಡು ಇಟ್ಟು, ಮಾಧವ ರಾಯನು ಪುಣೆಗೆ ದಯಮಾಡಿಸಿದನು; ಪಟವರ್ಧನ ಸರದಾರರು ತಮ್ಮ ತಮ್ಮ ಸ್ಥಳಗಳಿಗೆ ಹೋದರು.

ಈ ಪ್ರಕಾರ ಪಟವರ್ಧನ ಸರದಾರರು ಹೈದರನಿಗೆ ತಮ್ಮ ಕೈಚಳಕ ವನ್ನು ತೋರಿಸಿ ಅವನ ತೋಳತಂತಿಯನ್ನು ಕಳೆದಬಳಿಕ ಅವರು ನಿಜಾಮು ಭೋಸಲೆಯರ ಪಾರುಪತ್ಯವನ್ನು ಮಾಡಿದ ಕಥಾನಕವನ್ನು ಕ್ರಮವಾಗಿ ಇಲ್ಲಿ ವರ್ಣಿಸುವೆವು.

---

* ಶ್ರೀಮಂತ ಮಾಧವರಾಯನು ಹೈದರನ ಕೂಡ ಮಾಡಿದ ಈ ಯುದ್ಧದಲ್ಲಿ ಸ್ವಂತ ಪರಾಕ್ರಮದಿಂದ ಹೈದರನನ್ನು ಸೋಲಿಸಿ ಜಯಪಡೆದಾಗ್ಯೂ ರಾಜ್ಯದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿಯೂ, ಗೃಹಕಲಾಪಕ್ಕೆ ಆಸ್ಪದ ದೊರೆಯ ಬಾರದೆಂತಲೂ, ತನ್ನ ಕಕ್ಕನಾದ ರಘುನಾಥರಾಯನನ್ನು ಕರೆಸಿಕೊಂಡು ಅವನ ಮುಖಾಂತರವಾಗಿ ಹೈದರನೊಡನೆ ಒಡಂಬಡಿಕೆಯನ್ನು ಮಾಡಿಕೊಂಡನು. ಈ ಕಾಲಕ್ಕೆ ತನಗೆ ಅರ್ಧರಾಜ್ಯವು ದೊರೆಯಬೇಕೆಂಬ ದುಷ್ಟ ಬುದ್ಧಿಯು ರಾಘೋ ಬನ ಮನಸಿನಲ್ಲಿ ಹುಟ್ಟಿತ್ತು; ಅವನು ಮನಸಾ ಪೇಶವೆಯ ದ್ವೇಷಸಾಧನದಲ್ಲಿದ್ದನು. ಆದರೆ ದೊಡ್ಡ ಮಾಧವರಾಯನ ಈ ದೊಡ್ಡಸ್ತನದ ವರ್ತನದಿಂದ, ಅವನ ನಿರಭಿ ಮಾನತನವೂ, ಸಮಯಸೂಚಕತೆಯೂ, ಉತ್ತಮಪ್ರಕಾರದ ರಾಜ್ಯಕಾರಸ್ಥಾನವೂ ಅಭಿವ್ಯಕ್ತವಾಗುವವು.

ಹೈದರನ ಕೂಡ ಆದ ಒಡಂಬಡಿಕೆಯಲ್ಲಿ ಮುಖ್ಯವಾಗಿ ಮೂರು ಕಲಮು ಗಳಿದ್ದವುಃ—

೧ ಹೈದರಲ್ಲಿಯು ಪೇಶವೆಯಿಗೆ ೩೨ ಲಕ್ಷ ರೂಪಾಯಿಗಳನ್ನು ಕೊಡತಕ್ಕದ್ದು.

೨ ಹೈದರನು ತಾನು ತೆಗೆದುಕೊಂಡ ಘೋರಪಡೆಯವರ ಸೀಮೆಯನ್ನು ಬಿಟ್ಟು ಕೊಡಬೇಕು.

೩ ಸವನೂರ ನವಾಬನನ್ನು ಯಾವ ಬಗೆಯಿಂದಲೂ ಪೀಡಿಸದೆ ಆತನ ಕಡೆ ಯಿಂದ ಕಪ್ಪ ಮುಂತಾದ್ದೇನೂ ತೆಗೆದುಕೊಳ್ಳಬಾರದು.

ಇಸವಿಸನ್ನ ೧೭೬೭।೬೮ ರಲ್ಲಿ ಗೋಪಾಳರಾಯನು ಪರಶುರಾಮ ಭಾವು ಮುಂತಾದ ಬಾಂಧವಸರದಾರರೊಡಗೊಂಡು ಶ್ರೀಮಂತರ ಆಜ್ಞೆಯಂತೆ ನಿಜಾಮನ ಮೇಲೆ ದಂಡೆತ್ತಿ ಹೋದನು. ಆ ಕಾಲಕ್ಕೆ ಪಟವರ್ಧನ ಪುರುಷರಲ್ಲಿ ಗೋಪಾಳರಾಯನೇ ಮುಖ್ಯನಾಗಿದ್ದನು. ಆತನು ಯುದ್ಧಕ್ಕೆ ಹೊರಟನೆಂದರೆ, ಭಾವು ನೀಲಕಂಠ ತ್ರ್ಯಂಬಕ ಮುಂತಾದವರು ತಮ್ಮ ತಮ್ಮ ದಳಗಳೊಂದಿಗೆ ಆತನ ಬೆಂಬಲಕ್ಕಾಗಿ ಹೊರಡುತ್ತಿದ್ದರು. ಅವರಲ್ಲಿ ಪರಸ್ಪರ ಬಂಧುಪ್ರೇಮವು ಅಧಿಕವಾಗಿತ್ತು; ಇದಲ್ಲದೆ ದಂಡಿನ ವೆಚ್ಚ ಇತ್ಯಾದಿ ವಿಷಯಗಳಲ್ಲಿ ಅವರು ಏಕತ್ರ ವಿಚಾರದಿಂದ ನಡೆಯುತ್ತಿದ್ದರು. ಅವರು ಒಬ್ಬರಿಗೊಬ್ಬರು ಜೀವಕ್ಕೆ ಜೀವವನ್ನು ಕೊಡಲು ಸಹ ಸಿದ್ಧರಿದ್ದರು. ಅವರು ಶ್ರೀಮಂತರ ಆಜ್ಞೆಯನ್ನು ಶಿರಸಾವಹಿಸಿ ಸ್ವಾಮಿಕಾರ್ಯವನ್ನು ಕಡೆಮುಟ್ಟಿಸುವದೇ ತಮ್ಮ ಆದ್ಯಕರ್ತವ್ಯಕರ್ಮವೆಂದು ತಿಳಿಯುತ್ತಿದ್ದರು. ಹೀಗೆ ಸ್ವಾಮಿಕಾರ್ಯ-ತತ್ಪರರೂ, ಬಂಧುಪ್ರೀತಿಯಿಂದ ಕೂಡಿದವರೂ ಆದ ಪಟವರ್ಧನ ಸರದಾರರು ನಿಜಾಮನ ಮೇಲೆ ದಾಳೀ ಮಾಡಿ ತಮ್ಮನ್ನು ಎದುರಿಸಿದ ದಂಡುಗಳನ್ನು ಪಲ್ಲೆಹೆಚ್ಚಿದಂತೆ ನುಚ್ಚುನುಚ್ಚು ಮಾಡಿ, ನಿಜಾಮನ ಸೊಕ್ಕನ್ನು ತೆಗ್ಗಿಸಿದರು; ಮತ್ತು ಅವರು ಹಾಗೆಯೇ ಹೈದರನ ಸೀಮೆಯನ್ನು ಹೊಕ್ಕು ಅರ್ಕಾಟದವರೆಗೆ ಹೋಗಿ ಸರ್ವತ್ರ ಶ್ರೀಮಂತ ಸರಕಾರದ ಅಮಲು ಕೂಡ್ರಿಸಿ, ಅವರ ಪ್ರಭುತ್ವವನ್ನು ಹೈದರ-ನಿಜಾಮರು ಒಪ್ಪುವಂತೆ ಮಾಡಿ ದಿಗ್ವಿಜಯವನ್ನು ಪಡೆದು ಕೃತಾರ್ಥರೆನಿಸಿದರು. ಈ ದಾಳಿಯನ್ನು ಮುಗಿಸಿಕೊಂಡು ಜಯಶೀಲರಾದ ಗೋಪಾಳರಾವ ಭಾವು ಇತ್ಯಾದಿ ಪಟವರ್ಧನ ಸರದಾರರು ಪುಣೆಗೆ ಮರಳಿಬಂದು, ದಂಡಯಾತ್ರೆಯ ಸಮಾಚಾರವನ್ನು ಶ್ರೀಮಂತರಿಗೆ ತಿಳಿಸಿ ಅವರನ್ನು ಸಂತೋಷಗೊಳಿಸಿದರು.

ಶ್ರೀಮಂತ ಮಾಧವರಾವ ಪೇಶವೆಯು ಹಿರೇ ಬಾಜೀರಾಯನಂತೆ ಶೂರನಿದ್ದು ಕೈಕೆಳಗಿನ ಜನರ ಗುಣಪರೀಕ್ಷೆಯನ್ನು ಬಹಳ ಚನ್ನಾಗಿ ವಿಮರ್ಶಿಸುತ್ತಿದ್ದನು. ಅದರಿಂದ ಅವನ ಕಾಲಕ್ಕೆ ಶಿಂದೆ, ಭೋಸಲೆ ಪಟವರ್ಧನ, ಗೋಖಲೆ ಮೊದಲಾದ ವೀರಾಗ್ರಣಿಗಳು ಹೆಸರು ಪಡೆದರು. ಸದ್ಗುಣಿಗಳಿಗೆ ಆಶ್ರಯಕೊಡುವ ಒಡೆಯನಿದ್ದರೆ, ಆ ಗುಣವಂತರೂ, ಗುಣಗ್ರಾಹಕರೂ ಉತ್ಕರ್ಷವನ್ನು ಹೊಂದುವರು. ಇಂಥ ಪ್ರಸಂಗವು

ಪ್ರೌಢಪ್ರತಾಪಶಾಲಿಯಾದ ಶ್ರೀಶಿವಛತ್ರಪತಿಯ ತರುವಾಯ ಪೇಶವೆಯರ ಕಾಲಕ್ಕೆ ಒದಗಿತ್ತು. ಪೇಶವಾಯಿಯಲ್ಲಿ ಶ್ರೀವರ್ಧನಕುಲಪ್ರದೀಪನಾದ ಬಾಜೀರಾವ ಬಲ್ಲಾಳನ ಮೊದಲ್ಗೊಂಡು ಕಟ್ಟಕಡೆಯ ಕುಲಕಂಟಕ ಬಾಜೀರಾಯನವರೆಗೆ ಹೋದ ಕಾಲವು ಭಾರತೀಯರ ಪೌರುಷ, ಪ್ರತಿಷ್ಠೆಗಳ ಪರ್ವಕಾಲವೆಂದು ಹೇಳಬಹುದು.

ಹೈದರನಕೂಡ ನಡೆದ ಕಾಳಗದಲ್ಲಿ ಪಟವರ್ಧನ ಸರದಾರರು ತೋರಿಸಿದ ಅಸದೃಶ ಶೌರ್ಯ-ಸಾಹಸಗಳನ್ನು ಕಂಡು, ಮತ್ತು ಅವರು ನಿಜಾಮನ ಮೇಲೆ ದಾಳೀ ಮಾಡಿ ಅಲ್ಲಲ್ಲಿ ಪೇಶವಾಯಿಯ ಧರ್ಮಕೂಡ್ರಿಸಿ ಜಯಶೀಲರಾಗಿ ಬಂದುದನ್ನು ನೋಡಿ, ಶ್ರೀಮಂತ ಮಾಧವರಾಯನು ಅವರ ಮೇಲೆ ಸುಪ್ರಸನ್ನನಾಗಿ ಅವರಿಗೆ ಅಸಂಖ್ಯ ಸೈನ್ಯದ ಒಡೆತನವನ್ನೂ, ದಂಡಿನ ವೆಚ್ಚದ ಸಲುವಾಗಿಯೂ, ಸ್ವಂತ ತೈನಾತಿಗೂ ಅನೇಕಾನೇಕ ಜಹಗೀರಗಳನ್ನು ಕೊಟ್ಟು ಅವರನ್ನು ಸನ್ಮಾನಿಸಿದನು. ಈ ಪ್ರಕಾರ ಪರಶುರಾಮಭಾವು ಮೊದಲಾದ ಪಟವರ್ಧನ ಪುರುಷರು ಅಸಂಖ್ಯನಾಡುಗಳ ಒಡೆಯರಾಗಿ ಆಗಿನ ಕಾಲಕ್ಕೆ ಪ್ರತಿಷ್ಠಿತ ಸರದಾರರಲ್ಲಿ ಅಗ್ರಗಣ್ಯತೆಯನ್ನು ಹೊಂದಿದರು.

ಇಸವಿ ಸನ್ನ ೧೭೭೫ನೇ ವರ್ಷ ನಾಗಪುರದ ಸೇನಾಸಾಹೇಬ ಸುಭೇದಾರ ಜಾನೋಜಿರಾವ ಭೋಸಲೆ ಇವನಿಗೂ ಪೇಶವೆಗೂ ಯಾವದೋ ಒಂದು ಕಾರಣದಿಂದ ಮನಸ್ತಾಪವು ಹುಟ್ಟಿತು. ಈ ದ್ವೇಷವು ಮುಂದೆ ಹೆಚ್ಚೆಚ್ಚಾಗುತ್ತ ಪರೋತ್ಕರ್ಷಾಸಹಿಷ್ಣುವಾದ ಜಾನೋಜಿರಾಯನು ಶ್ರೀಮಂತರಿಗೆ ರಣರಂಗದಲ್ಲಿ ತನ್ನ ಕೈತೋರಿಸಿ ಅವರ ಉಚ್ಛ್ರಾಯವನ್ನು ನಿಲ್ಲಿಸಬೇಕೆಂಬ ದುಷ್ಟ ಮನಸಿನಿಂದ ಯುದ್ಧಸಿದ್ಧತೆಯನ್ನು ಮಾಡಿಕೊಂಡು ಪೇಶವೆಯ ರಾಜಧಾನಿಯ ಮೇಲೆ ಸಾಗಿಬಂದನು. ಮತ್ತು ಪುಣೆಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಕೊಲೆಸುಲಿಗೆಗಳನ್ನು ಮಾಡಹತ್ತಿದನು.

ಭೋಸಲೆಯ ಈ ಕೃತಘ್ನತನವನ್ನೂ, ಉದ್ದಾಮತನವನ್ನೂ, ರಾಜದ್ರೋಹವನ್ನೂ ಕಂಡು ಪೇಶವೆಯು ಅವನ ಮೇಲೆ ಬಹಳ ಸಿಟ್ಟಾಗಿ ಅವನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಕೊಡುವದಕ್ಕಾಗಿ ೩೦ ಸಾವಿರ ರಾಹುತರನ್ನೂ

ಅಸಂಖ್ಯ ಜೋದರನ್ನೂ ಕೊಟ್ಟು ಪಟವರ್ಧನ ಸರದಾರಮಂಡಲವನ್ನು ನಾಗಪೂರಕರನ ಸೈನ್ಯದ ಮೇಲೆ ಕಳುಹಿದನು. ಈ ಯುದ್ಧದಲ್ಲಿ ಪೇಶವೆಯು ಸ್ವತಃ ದಂಡಿನೊಡನೆ ಭೋಸಲೆಯ ರಾಜ್ಯವನ್ನು ತಕ್ಕೊಳ್ಳುತ್ತ ನಡೆದಿದ್ದನು.

ಇತ್ತ ಒಡೆಯನ ಅಪ್ಪಣೆಯಾದಕೂಡಲೆ ಗೋಪಾಳರಾವ, ಪರಶುರಾಮಭಾವು, ಗಂಗಾಧರಗೋವಿಂದ, ನೀಲಕಂಠತ್ರ್ಯಂಬಕ ಇವರೇ ಮೊದಲಾದ ಪಟವರ್ಧನ ಪಟುಭಟರು ಸೈನ್ಯದೊಂದಿಗೆ ಯುದ್ಧಕ್ಕೆ ಸಿದ್ಧರಾದರು. ಅಷ್ಟರಲ್ಲಿ ಅವರಿಗೆ ನಿಜಾಮನ ದಿವಾಣನಾದ ರುಕ್ನುಉದ್ದೌಲಾ ಎಂಬವನು ಬಂದು ಕೂಡಿಕೊಂಡನು. ಇವನು ಈ ಕಾಲಕ್ಕೆ ಪೇಶವೆಸರದಾರರ ನೆರವಿಗೆ ಬಂದ ಕಾರಣವೇನಂದರೆ:—ಕೆಲವು ದಿವಸಗಳ ಪೂರ್ವದಲ್ಲಿ ಭೋಸಲೆ ನಿಜಾಮರ ನಡುವೆ "ಯುದ್ಧಪ್ರಸಂಗದಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು ಒಡಂಬಡಿಕೆಯಾಗಿತ್ತು." ಜಾನೋಜಿಯು ಒಂದು ಪ್ರಸಂಗದಲ್ಲಿ ಆ ಒಡಂಬಡಿಕೆಯನ್ನು ಮುರಿದು ನಿಜಾಮನಿಗೆ ಸಹಾಯ ಮಾಡದೆ, ಅವನನ್ನು ತೊಂದರೆಯಲ್ಲಿ ಹಾಕಿದನು. ಅದರಿಂದ ನಿಜಾಮನು ಆತನ ಮೇಲೆ ಸಿಟ್ಟಾಗಿ ಸಮರಾಗ್ನಿಯಲ್ಲಿ ಅವನ ಆಹುತಿಯು ಎಂದಾದೀತೆಂದು ಹಾದೀ ನೋಡುತ್ತ ಕುಳಿತಿದ್ದನು. ಈ ಕಾಲಕ್ಕೆ ಅನಾಯಾಸವಾಗಿ ಅಂಥ ಸಮಯವು ಒದಗಿ ಬಂದದರಿಂದಲೂ, ಪೇಶವೆ ನಿಜಾಮರಲ್ಲಿ ಸ್ನೇಹಭಾವವು ಇದ್ದದರಿಂದಲೂ, ಭೋಸಲೆಗೆ ಕೈತೋರಿಸುವ ಉತ್ತಮ ಸಮಯವು ಇದೇ ಎಂದು ತಿಳಿದು, ನಿಜಾಮನು ತನ್ನ ದಿವಾಣನನ್ನು ದಂಡಿನೊಡನೆ ಪೇಶವೆ ಸರದಾರರಿಗೆ ನೆರವಾಗಲಿಕ್ಕೆ ಕಳಿಸಿದನು.

ಈ ಮೇರೆಗೆ ಪಟವರ್ಧನರ ಸೈನ್ಯವೂ, ನಿಜಾಮನ ಸೈನ್ಯವೂ ಒಟ್ಟಾಗಿ ಭೋಸಲೆಯ ಸೈನ್ಯದ ಮೇಲೆ ಹೊರಟಿತು. ಆ ಕಾಲದ ಪಟವರ್ಧನ ಸರದಾರರ ಧೈರ್ಯವನ್ನೂ, ಉತ್ಸಾಹವನ್ನೂ ವರ್ಣಿಸಲಳವಲ್ಲ. ಈ ವೃತ್ತಾಂತವನ್ನು ಪೇಶವೆ ದರಬಾರದಲ್ಲಿರುವ ಭೋಸಲೆಯ ವಕೀಲನು ಜಾನೋಜಿಗೆ ತಿಳಿಸಲು, ಆತನ ಎದೆಯೊಡೆದು ನೀರಾಯಿತು. ಪಟವರ್ಧನ ಸರದಾರರ ಸಿಂಹಗರ್ಜನೆಯನ್ನಷ್ಟೇ ಕೇಳಿ ಭೋಸಲೆಯು ಈ ಅವಸ್ಥೆಯನ್ನು ಹೊಂದಿ ಶತ್ರುಗಳಿಗೆ ಬೆನ್ನುತೋರಿಸಿ ನಾಗಪುರದ ಕಡೆಗೆ ಓಡಹತ್ತಿದನು.

ಇತ್ತ ಪಟವರ್ಧನರ ದಂಡು ಭೋಸಲೆಯ ಚಾಂದಾಕಿಲ್ಲೆಯನ್ನು ತೆಕ್ಕೊಂಡು ದಂಡಿನಮೇಲೆ ತೋಫುಗುಂಡುಗಳ ಮಳೆಸುರಿಸುತ್ತ, ದಿನಾಲು ೨೫ ಹರದಾರಿಯವರೆಗೆ ಹಾದೀನಡೆಯುತ್ತ ಜಾನೋಜಿಯ ಬೆನ್ನುಹತ್ತಿತು.

ಆಗ ಭೋಸಲೆಗಾದ ಅವಸ್ಥೆಯನ್ನು ಬಣ್ಣಿಸಲಳವಲ್ಲ. ಪಟವರ್ಧನ ಸರದಾರರು ಅವನ ಸೈನ್ಯವನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಓಡಿಸಲು, ಆತನ ದಂಡಿನ ಜನರು ದಿಕ್ಕೆಟ್ಟು ಅಡವೀ ಬಿದ್ದರು. ಶತ್ರುಸೈನ್ಯದೊಳಗಿನ ಎಷ್ಟೋ ಆನೆಗಳ ಕಣ್ಣುಗಳು ಒಡೆದು ಅವು ‘ ಕಿರ್ ಕಿರ್ ’ ಎಂದು ಒದರುತ್ತ ಓಡುತ್ತಿದ್ದವು. ಅಸಂಖ್ಯ ಕುದುರೆಗಳು ಕಾಲುಮುರಿದು ನಡೆಯಲಾರದೆ ಅಲ್ಲಲ್ಲಿಗೆ ಗುಂಪುಗುಂಪಾಗಿ ಬಿದ್ದಿದ್ದವು. ಅನೇಕ ಕ್ಷತವಿಕ್ಷತರಾದ ಸೈನಿಕರು ಪ್ರಾಣಸಂಕಟದಿಂದ ನರಳುತ್ತಿದ್ದರು. ರಕ್ತದ ಕಾವಲಿಯು ಹರಿಯುತ್ತಿತ್ತು. ರಣಹದ್ದುಗಳ ಭೋಜನಸಮಾರಂಭವು ನಡೆದಿತ್ತು. ಸಿಪಾಯಿ ಜನರ ಪರ್ವತಪ್ರಾಯಪ್ರೇತಗಳ ರಾಶಿಯಿಂದ ಚಂದ್ರಪುರದ ಸುತ್ತುಮುತ್ತಲಿನ ಪ್ರದೇಶವು ರುದ್ರಭೂಮಿಯಂತೆ ಬಳ್ಳೇ ಭಯಂಕರವಾಗಿ ಕಾಣುತ್ತಿತ್ತು.

ಈ ಮೇರೆಗೆ ಸ್ವಪರ ಬಲಗಳ ವಿಚಾರಮಾಡದೆ ಬಲಿಷ್ಠರ ಕೂಡ ಸ್ಪರ್ಧೆಯನ್ನು ಮಾಡುವದರಿಂದಲೂ, ಪ್ರಸಂಗದಲ್ಲಿ ಎದೆ ಒಡಕೊಳ್ಳುವದರಿಂದಲೂ, ಜಾನೋಜಿಯು ಸೈನ್ಯದೊಂದಿಗೆ ನುಗ್ಗುನುರಿಯಾಗಿ ಕೃತಕರ್ಮದ ವಿಷಯವಾಗಿ ಪಶ್ಚಾತ್ತಾಪ ಪಡತೊಡಗಿದನು.

ತನ್ನ ಎಲ್ಲ ಸೈನ್ಯವು ಗತಪ್ರಾಣವಾಗಿ ಬಿದ್ದುಕೊಂಡರೂ, ಪಟವರ್ಧನ ಸರದಾರರು ಇನ್ನೂ ಬೆನ್ನಬಿಡಲೊಲ್ಲರು. ಇನ್ನೇನು ಮಾಡಲೆಂದು ಜಾನೋಜಿಯು ಒಂದು ಗಳಿಗೆ ಯೋಚಿಸಿ, ತನ್ನ ಕುದುರೆಯನ್ನು ಗೋದಾವರಿಯ ದಂಡೆಗುಂಟ ಓಡಿಸಹತ್ತಿದನು. ಇತ್ತ ಗೋಪಾಳರಾಯನು ಎಲ್ಲ ಅಣ್ಣತಮ್ಮಂದಿರಿಗೂ ರುಕ್ಮಾಂಗದನಿಗೂ ಸೈನ್ಯಸಹಿತ ಅಲ್ಲಿಯೇ ಇರಹೇಳಿ, ಜಾನೋಜಿಯನ್ನು ಹಿಡಿಯಬೇಕೆಂದು ತನ್ನ ಕುದುರೆಯನ್ನು ಅವನ ಹಿಂದೆ ಓಡಿಸಿದನು.

ಜಾನೋಜಿಯು ಪ್ರಾಣರಕ್ಷಣೆಯ ಸಲುವಾಗಿ ಮೊಲದ ಹಾಗೆ ಮುಂದೆ ಮುಂದೆ ಓಡುತ್ತಿದ್ದನು; ಗೋಪಾಳರಾಯನು ಸಿಂಹದಂತೆ ಗರ್ಜನೆಯನ್ನು

ಮಾಡುತ್ತ ಅವನ ಬೆನ್ನು ಹತ್ತಿ ಓಡುತ್ತಿದ್ದನು. ಆ ಅಪೂರ್ವ ನೋಟವನ್ನು ಉಭಯ ಸೈನಿಕರು ಚಿತ್ರಗಳಂತೆ ಸ್ವಲ್ಪ ಹೊತ್ತು ಸುಮ್ಮನೆ ನಿಂತು ನೋಡುತ್ತಿದ್ದರು; ಗೋಪಾಳರಾಯನ ಆಗಿನ ವಾಯುವೇಗವನ್ನೂ ಶೌರ್ಯವನ್ನೂ ಪ್ರೋತ್ಸಾಹವನ್ನೂ ಭೈರವಮೂರ್ತಿಯನ್ನೂ ಕಂಡು ಅವರೆಲ್ಲರು ಅತ್ಯಂತ ಆಶ್ಚರ್ಯಬಟ್ಟರು.

ಈ ಪ್ರಕಾರ ಅವರಿಬ್ಬರು ಧರ್ಮಪುರಿಯ ಮೇಲಿಂದ ಹಾಯ್ದು, ಯಲಗಡ ಪರಗಣೆಯೊಳಗಿಂದ ಹೋಗುತ್ತಿರುವಾಗ ಜಾನೋಜಿಯು ಮುಂದುಗಾಣದೆ ಒಂದು ದಟ್ಟಾದ ಅಡವಿಯನ್ನು ಸೇರಿಕೊಂಡು ಒಪ್ಪಂದದ ಸಂಧಾನವನ್ನು ಹಚ್ಚಿದನು. ಆಗ ಗೋಪಾಳರಾವ, ಪರಶುರಾಮಭಾವು ಮೊದಲಾದವರು ಶ್ರೀಮಂತ ಮಾಧವರಾಯನ ಆಲೋಚನೆಯನ್ನು ತಕ್ಕೊಂಡು, ಪೇಶವೆಗೆ ಅನುಕೂಲವಾಗುವಂತೆ ಜಾನೋಜಿಯ ಕೂಡ *ಒಡಂಬಡಿಕೆಯನ್ನು ಮಾಡಿಕೊಂಡು ತಿರುಗಿಬಂದರು. ಅತ್ತ ಭೋಸಲೆಯು ನಾಗಪೂರಕ್ಕೆ ಹೋದನು.

ವಾಚಕರೇ, ರಾಜದ್ರೋಹಿಯಾದ ಜಾನೋಜಿಭೋಸಲೆಯ ಹಾಡು ಏನಾಯಿತೆಂಬದನ್ನು ನೋಡಿದಿರಾ! ಮನುಷ್ಯನು ರಾಜದ್ರೋಹಿಯಾಗುವದ

---

* ಈ ಒಪ್ಪಂದದ ಮುಖ್ಯ ಕಲಮುಗಳು ಯಾವವೆಂದರೆ:—

೧ ಮೊದಲು ಭೋಸಲೆಯ ಕಡೆಗೆ ೮ ಲಕ್ಷದ ಸೀಮೆಯು ಇತ್ತು; ಅದನ್ನು ಪೇಶವೆಯು ತೆಗೆದುಕೊಳ್ಳಬೇಕು.

೨ ಅಕ್ಕಲಕೋಟೆಯ ಸಂಸ್ಥಾನದ ಫತ್ತೆಸಿಂಗ ಭೋಸಲೆಯ ಜಪ್ತಮಾಡಲ್ಪಟ್ಟ ಸೀಮೆಯ ವಸೂಲನ್ನು ಪೇಶವೆಯು ತಕ್ಕೊಳ್ಳಬೇಕು.

೩ ಪೇಶವೆಯ ದರಬಾರದಿಂದ ಯಾರಾದರೂ ಸಿಟ್ಟಾಗಿ ಬಂದರೆ ಭೋಸಲೆಯು ಅವರಿಗೆ ಆಶ್ರಯವನ್ನು ಕೊಡಬಾರದು.

೪ ಇಂಗ್ಲೀಷ, ರೋಹಿಲ, ದಿಲ್ಲಿಯ ಬಾದಶಹ, ಅಯೋಧ್ಯೆಯ ನವಾಬ, ದಕ್ಷಿಣದ ಸುಭೇದಾರ ಇವರಲ್ಲಿ ಯಾರೊಡನೆಯೂ ಭೋಸಲೆಯು ರಾಜಕರಣಗಳ ವಿಷಯವಾಗಿ ವಿಚಾರಮಾಡಬಾರದು.

೫ ಪ್ರತಿ ಅಯ್ದು ವರ್ಷಕ್ಕೊಮ್ಮೆ ಭೋಸಲೆಯು ೫೦೦೦೦ ರೂಪಾಯಿಗಳನ್ನು ಶ್ರೀಮಂತ ಸರಕಾರಕ್ಕೆ ಕೊಡುತ್ತ ಹೋಗಬೇಕು.

ರಿಂದ ಅವನು ಸುಖ, ಸಮಾಧಾನ ಸ್ವಾತಂತ್ರ್ಯಗಳಿಗೆ ಎರವಾಗಬೇಕಾಗುವದು. ವಿಚಾರಮಾಡಿ ನೋಡಿದರೆ ದೇಶದ ಸುಖದುಃಖಗಳಿಗೆ ರಾಜನೇ ಕಾರಣನು. ಆದ್ದರಿಂದ ಮನುಷ್ಯನು ರಾಜನಿಷ್ಠೆಯನ್ನು ತಾಳಿ ಸುಖದುಃಖಗಳ ಪರಿವೆಯಿಲ್ಲದೆ, ಸ್ವಾಮಿಕಾರ್ಯದ ಸಲುವಾಗಿ ತನ್ನ ಜಡದೇಹವನ್ನು ಸವಿಸುತ್ತ ಹೋದರೆ ಆತನು ಪ್ರಭುಕಾರ್ಯವನ್ನು ನೆರವೇರಿಸಿಕೊಂಡು ದೇಶಹಿತವನ್ನು ಸಹ ಸಾಧಿಸಿಕೊಳ್ಳುವನು. ರಾಜನಿಷ್ಠೆ-ದೇಶಹಿತ ಇವುಗಳಲ್ಲಿ ಭೇದವು ಆತನಿಗೆ ತೋರುವದಿಲ್ಲ. ಕೈಹಿಡಿದು ಜಗ್ಗಿದರೆ ಮೈಯು ಅದರೊಡನೆ ಬರುವಂತೆ ರಾಜನಿಷ್ಠೆಯಿಂದ ನಡೆಯುತ್ತ ಹೋದರೆ ದೇಶಕಲ್ಯಾಣವು ತಾನೇ ಆಗುವದು. ರಾಜಭಕ್ತನು ಕನಸುಮನಸ್ಸಿನಲ್ಲಿ ಕೂಡ ಅರಸನಿಗೆ ಕೇಡುಬಗೆಯದೆ, ಎಂಥ ಸಂಕಟಗಳು ಬಂದರೂ ಸಹಿಸಿಕೊಂಡು ತನ್ನ ಪ್ರಾಣವನ್ನಾದರೂ ಕೊಟ್ಟು ಪ್ರಭುಕಲ್ಯಾಣವನ್ನು ಸಾಧಿಸುವನು. ಈ ಸ್ಥಿತಿಯು ದೇಶದೊಳಗಿನ ಜನರಿಗೆ ಒದಗಬೇಕಾದರೆ, ರಾಜನೆಂದರೆ ಯಾರು? ರಾಜಾ-ಪ್ರಜರ ಸಂಬಂಧವೇನು? ಆ ಸಂಬಂಧವನ್ನು ಕಾಯ್ದುಕೊಳ್ಳುವ ಉಪಾಯಗಳು ಯಾವು? ರಾಜಹಿತವು ಅರ್ಥಾತ್ ದೇಶಹಿತದ ಸಾಧನಗಳು ಯಾವು? ರಾಜನಿಲ್ಲದಿದ್ದರೆ ಅನರ್ಥಗಳು ಎಂತು ಒದಗುವವು? ರಾಜನಿಷ್ಠೆಯ ಮಹತ್ವವೇನು? ರಾಜನಿಷ್ಠೆಯೇ ದೇಶದ ಸುಖ-ಶಾಂತಿಗಳಿಗೆ ಕಾರಣವು ಹ್ಯಾಗೆ? "**नाविष्णुः पृथ्वीपतिः**" "ಅರಸನು ಶ್ರೀಮದ್ವಿಷ್ಣುಸ್ವರೂಪವು." ಎಂಬ ಗೀತಾವಚನದ ತಾತ್ಪರ್ಯವೇನು? ಇತ್ಯಾದಿ ಸಂಗತಿಗಳ ಯಥಾರ್ಥಜ್ಞಾನವು ಅವರಿಗೆ ಆಗಲಿಕ್ಕೆಬೇಕು; ಅಂದರೆ ಪ್ರಜೆಗಳಲ್ಲಿ ಕ್ಷಮಾ, ಸಮಾಧಾನ, ದಯಾ, ಆತ್ಮಸಂಯಮನ, ಸ್ವಾವಲಂಬನ ಇತ್ಯಾದಿ ಸದ್ಗುಣಗಳು ತಲೆದೋರಿ, ದೇಶದಲ್ಲಿ ಸುಖಶಾಂತಿಗಳು ನೆಲಗೊಂಡು, ಆ ದೇಶದ ಅರಸನು ಪ್ರಜಾಹಿತೈಷಿಯಾಗುವನಲ್ಲದೆ, ಆತನ ಪ್ರಜರು ರಾಜನಿಷ್ಠರಾಗಿ ಪ್ರಭುಸೇವೆಗಾಗಿ ತಮ್ಮ ಸರ್ವಸ್ವವನ್ನು ವೆಚ್ಚಮಾಡುವದಕ್ಕೆ ಸಿದ್ಧರಾಗುವರು. ಆಂಗ್ಲವೀರಶಿರೋಮಣಿ ನೆಲ್ಸನ್ನ, ಕ್ಲೈವ ಮೊದಲಾದವರೂ, ಬಸಂತಸಿಂಗ, ಪ್ರತಾಪಶಿಂಗ, ರಾಣಾಭೀಮದೇವ ಇತ್ಯಾದಿ ರಜಪೂತವೀರರೂ, ಬಾಜೀದೇಶಪಾಂಡೆ, ತಾನಾಜಿ ಮೊದಲಾದ ಮಹಾರಾಷ್ಟ್ರವೀರರೂ ಶ್ರೀಮಂತ ಬಾಜೀರಾವ ಬಲ್ಲಾಳ, ಸದಾಶಿವರಾವಭಾವು ಇತ್ಯಾದಿ ಪೇಶವೆಕುಲೋತ್ತಮರೂ, ಮಲೀಕಅಂಬರ, ಅಬ್ದುಲಫಜಲ್ ಮುಂತಾದ ಮುಸಲ್ಮಾ

ನರೂ, ಎಚ್ಚಮ್ಮನಾಯಿಕ, ದೊಡ್ಡಯ್ಯ ಇವರೇ ಮೊದಲಾದ ಕರ್ನಾಟಕ *ವೀರರೂ ಇವರೆಲ್ಲರೂ ಇಂಥ ರಾಜನಿಷ್ಠರೂ, ದೇಶವತ್ಸಲರೂ ಆಗಿದ್ದರು. ಅದರಿಂದಲೇ ಅವರವರ ಕಾಲಕ್ಕೆ ಆ ಆ ದೇಶಗಳು ಒಳ್ಳೇ ಹೆಚ್ಚಳವನ್ನು ಹೊಂದಿದ್ದವು. ಆದಕಾರಣ ರಾಜನಿಷ್ಠೆಯನ್ನೇ ಮೇಲುಪಂಕ್ತಿಯಾಗಿಟ್ಟುಕೊಂಡು, ರಾಜ್ಯವಾಳುವ ಪ್ರಭುಗಳೊಡನೆ ಭಕ್ತಿವಿಶ್ವಾಸಗಳಿಂದ ನಡೆಕೊಂಡರೆ, ದೇಶಕಲ್ಯಾಣವು ಸಹಜವಾಗಿ ಆಗುವದು. ಗರ್ಭಿಣಿಯನ್ನು ಪೋಷಿಸುವದರಿಂದ ಗರ್ಭಸ್ಥಶಿಶುವಿನ ಸಂಗೋಪನೆಯು ಆಗುವಂತೆ, ರಾಜನಿಷ್ಠೆಯಿಂದ ವರ್ತಿಸುವದರಿಂದ ಅದರಲ್ಲಿ ಅಂತರ್ಭೂತವಾದ ದೇಶಹಿತವಾದರೂ ನಮಗೆ ಗೊತ್ತಿಲ್ಲದೆ ಸಾಧಿಸುವದು. ಈ ಸರ್ವಮಾನ್ಯ ತತ್ವವನ್ನು ಪೂರಾ ನೆನಪಿನಲ್ಲಿಟ್ಟುಕೊಂಡು, ಅರಸನು ದೇವಾಂಶಸಂಭೂತನೆಂಬುವ ಆರ್ಯವಾಕ್ಯವನ್ನು ನೆರೆನಂಬಿ, ಮತ್ತು ರಾಜದ್ರೋಹವು ಸಕಲಪಾಪಗಳಲ್ಲಿ ಹೆಚ್ಚಿನದೆಂಬದನ್ನು ತಿಳಿದು, ಪ್ರಜೆಗಳಾದವರು ತಮ್ಮ ದೇಶದೊಡೆಯರ ಕೂಡ ಬಹುಭಕ್ತಿಯಿಂದಲೂ, ಸಂಪೂರ್ಣ ವಿಶ್ವಾಸದಿಂದಲೂ ನಡೆದುಕೊಳ್ಳತಕ್ಕದ್ದು. ಪಟವರ್ಧನ ಪುರುಷರಾದರೂ ರಾಜನಿಷ್ಠೆಯನ್ನು ಬಿಡದೆ ದೇಶಹಿತವನ್ನು ಸಾಧಿಸಿ ಸ್ವಾಮಿಭಕ್ತರೂ, ದೇಶವತ್ಸಲರೂ ಎಂದೆನಿಸಿಕೊಂಡು ಇತಿಹಾಸಪ್ರಸಿದ್ಧರಾದರು. ಇರಲಿ.

---

* ಎಚ್ಚಮ್ಮನಾಯಕನು 'ಎಂದೂ ಮರೆಯಕೂಡದ' ಸಾಮ್ರಾಜ್ಯವೆಂದು ಹೆಸರು ಹೊಂದಿದ ನಾಮಶೇಷವಾದ ವಿಜಯನಗರದ ರಾಜರ ಸರದಾರರಲ್ಲೊಬ್ಬನು. ಅವನು ಆ ಸಾಮ್ರಾಜ್ಯದ ಅಂತ್ಯಭಾಗದಲ್ಲಿ ಆಗಿಹೋದನು. ಅವನಕಾಲಕ್ಕೆ ವೆಂಕಟರಸನೆಂಬುವವನು ಅಲ್ಲಿಯ ರಾಜನಾಗಿದ್ದನು. ಅವನು ಮುಪ್ಪಿನಿಂದ ಸಾಯಲು ಆವನ ತರುವಾಯ ಚಿಕ್ಕರಾಯನೆಂಬುವವನು ಪಟ್ಟಕ್ಕೆ ಬಂದನು. ಈತನು ಯೋಗ್ಯವಾರಸರದಾರನು. ಆದರೆ ಜಗರಾಯ ಮುಂತಾದ ಸರದಾರರು ಆತನನ್ನು ಪಟ್ಟದಿಂದ ತಳ್ಳಿ ಮತ್ತೊಬ್ಬನನ್ನು ಸಿಂಹಾಸನದ ಮೇಲೆ ಕೂಡ್ರಿಸಿದರು. ಇದು ಸ್ವಾಮಿಭಕ್ತನಾದ ಎಚ್ಚಮ್ಮನಾಯಕನಿಗೆ ಸರಿಬರಲಿಲ್ಲ. ಆದರಿಂದ ಅವನು ದೊಡ್ಡ ದಂಡು ಕೂಡಿಸಿ ಅನೇಕ ಉಪಾಯಗಳನ್ನು ಕೈಕೊಂಡು, ತನ್ನ ವಿರೋಧಿಗಳಾದ ಜಗರಾಯ ಮೊದಲಾದವರನ್ನು ಸೋಲಿಸಿ ಚಿಕ್ಕರಾಯನ ಮಗನಿಗೆ ಪಟ್ಟಗಟ್ಟಿ (ಯಾಕಂದರೆ ಚಿಕ್ಕರಾಯನನ್ನು ಜಗರಾಯ, ತಿಮ್ಮನಾಯಕ ಮುಂತಾದ ರಾಜದ್ರೋಹಿಗಳು ಕೊಲ್ಲಿಸಿದ್ದರು) ಅವನೇ ವಿಜಯನಗರದ ರಾಜ್ಯದ ನ್ಯಾಯವಾದ ಅರಸನೆಂದು ಸಾರಿದನು.

ಮೇಲೆ ಹೇಳಿದಂತೆ ಘೋಸಲೆಯು ಸೊಕ್ಕು ಮುರಿದ ಸ್ವಲ್ಪ ದಿವಸಗಳಲ್ಲಿಯೇ ಪಟವರ್ಧನಸರದಾರರಿಗೆ ಹೈದರನ ಕೂಡ ಪುನಃ ಹೋರಾಡುವ ಪ್ರಸಂಗವು ಒದಗಿತು. ಹೈದರನು ಒಳ್ಳೇ ಅಭಿಮಾನಶಾಲಿಯೂ, ಮಹತ್ವಾಕಾಂಕ್ಷಿಯೂ, ಶೂರನೂ ಆಗಿದ್ದನು. ಆದರೆ ಅವನಿಗೆ ಯಾರಮೇಲೆಯೂ ವಿಶ್ವಾಸವಿದ್ದಿಲ್ಲ. ಆದ್ದರಿಂದ ಅವನು ಪೇಶವೆಯ ಸಂಗಡ ಈ ಮೊದಲೇ (೧೭೬೮ರಲ್ಲಿ) ಮಾಡಿದ ಒಪ್ಪಂದವನ್ನು ಮುರಿದು, ಪುನಃ ತನ್ನ ಜುಲುಮೆ, ಅನ್ಯಾಯ, ಅನರ್ಥಗಳ ಕಾಯಕವನ್ನು ಆರಂಭಮಾಡಿದನು. ಪೇಶವೆಗೆ ತಾನು ಕೊಟ್ಟ ಸೀಮೆಯನ್ನು ತಿರುಗಿ ಸಂಪಾದಿಸಲಿಕ್ಕೆ ಹೈದರನು ಭಗೀರಥ ಪ್ರಯತ್ನಗಳನ್ನು ಮಾಡಹತ್ತಿದನು; ಪೇಶವೆಯ ಸಾಮಂತ ಸಂಸ್ಥಾನಿಕರ ರಾಜ್ಯಗಳಲ್ಲಿ ಭಯಂಕರವಾದ ಕೊಲೆಸುಲಿಗೆಗಳನ್ನು ನಡೆಸಿದನು. ಹಿಂದಿನ ದಾಳಿಯಲ್ಲಿ ದೊಡ್ಡ ಮಾಧವರಾಯನು ಸವಣೂರ ನವಾಬನಿಗೆ ಸಹಾಯ ಮಾಡಿ ಹೈದರನ ಮಾನಖಂಡನೆಯನ್ನು ಚನ್ನಾಗಿ ಮಾಡಿದ್ದನು. ಅದು ಹೈದ

---

ಈ ದೊಡ್ಡಯ್ಯನು ಮೈಸೂರ ಸಂಸ್ಥಾನದ ರಾಜರಲ್ಲಿ ಶ್ರೇಷ್ಠರಾದ ಚಿಕ್ಕದೇವರಾಜ ಒಡೆಯರವರ ಕಾಲದಲ್ಲಿ ಇದ್ದನು. ಈತನ ತಂದೆಯಾದ ಕೊಮಾರಯ್ಯನು ಆಗ್ಗೆ ಮುಖ್ಯ ದಳಪತಿಯಾಗಿದ್ದನು. ಆ ಕಾಲಕ್ಕೆ ಒಮ್ಮೆ ಮಹಾರಾಷ್ಟ್ರರು ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದರು. ಆಗ ಧೊರೆಗಳು ರಾಜಧಾನಿಯ ರಕ್ಷಣೆಯನ್ನು ತಮ್ಮ ದಳವಾಯಿಗೊಪ್ಪಿಸಿದರು. ಅವನು ಮತ್ತೊಂದು ಕಾರ್ಯಗೌರವದಲ್ಲಿ ತೊಡಕಿಗೊಂಡದರಿಂದ ಆ ಕೆಲಸಕ್ಕೆ ತನ್ನ ಮಗನಾದ ದೊಡ್ಡಯ್ಯನನ್ನು ನೇಮಿಸಿದನು. ಆ ಶೂರನು ಕೂಡಲೆ ಕೆಲವು ದಂಡು ತಕ್ಕೊಂಡು ಹೊರಟು ಬಂದು ಉಪಾಯಾಂತರದಿಂದ ಮಹಾರಾಷ್ಟ್ರರನ್ನು ಸೋಲಿಸಿ ಸ್ವಾಮಿಕಾರ್ಯವನ್ನು ಸಾಂಗಗೊಳಿಸಿದನು. ಅವನು ರಾತ್ರಿಯಲ್ಲಿ ಎತ್ತುಗಳ ಕೋಡುಗಳಿಗೆ ಪಂಜು ಕಟ್ಟಿಸಿ ಅವುಗಳನ್ನು ಮಹಾರಾಷ್ಟ್ರರ ಪಾಳಯಕ್ಕೆ ಅಭಿಮುಖವಾಗಿ ಹೊರಡಿಸಿದನು. ಶತ್ರುಗಳು ಆ ಎತ್ತು ಬರುವ ದಿಕ್ಕಿನಿಂದಲೇ ಮೈಸೂರವರ ದಂಡು ಬರುವದೆಂದು ತಿಳಿದು ಮುಂದಿನ ಉದ್ಯೋಗದಲ್ಲಿದ್ದರು. ಅಷ್ಟರಲ್ಲಿ ದೊಡ್ಡಯ್ಯನು ಬೇರೊಂದು ಕಡೆಯಿಂದ ಸೈನ್ಯದೊಡನೆ ಸಾಗಿ ಬಂದು ಅವರ ಮೇಲೆ ಬಿದ್ದನು. ಕೂಡಲೆ ಕಡುಕದನವೆಸಗಿ, ಮರಾಠಾ ದಂಡಿನವರು ಸೋತು ದಿಕ್ಕಾಪಾಲಾದರು. ದಂಡಿನ ಮುಖ್ಯಸ್ಥರಾದ ಘಾಟಿಗೆ ಸರದಾರರು ಸಂಹೃತರಾದರು. ಹೀಗೆ ದೊಡ್ಡಯ್ಯನು ಹಂಚಿಕೆಯಿಂದ ರಾಜಕಾರ್ಯವನ್ನು ಕಡೆಗಾಣಿಸಿ ರಾಜಧಾನಿಯನ್ನು ರಕ್ಷಿಸಿಕೊಂಡು ಜನರಿಗೊದಗಿದ ಕಾಟವನ್ನು ತಪ್ಪಿಸಿದನು.

ರನ ಮನಸಿಗೆ ಬಹಳ ಹತ್ತಿತ್ತು. ಅದರ ಸೇಡು ಯಾವಾಗ್ಗೆ ತೀರಿಸಿಕೊಂಡೇನೆಂದು ಅವನ ಮನಸಿನಲ್ಲಿ ಕಟಿಯುತ್ತಿತ್ತು. ಇ. ಸ. ೧೭೭೦ರ ಸುಮಾರಕ್ಕೆ ಈ ಹೈದರನೆಂಬುವ ಅಬ್ಬರದ ಹುಲಿಯು ಸವನೂರ ಸಂಸ್ಥಾನದ ಸುತ್ತುಮುತ್ತು ಸುಳಿದಾಡಹತ್ತಿತು; ಮತ್ತು ಆ ಪ್ರಾಂತದಲ್ಲಿ ಸಾವಕಾಶವಾಗಿ ಹೈದರನ ದಂಡು ಒಟ್ಟುಗೂಡತೊಡಗಿತು. ಅವನೂ ಅವನ ಅನುಚರರೂ ಸವನೂರ ನವಾಬನನ್ನು ಮತ್ತೆ ಪೀಡಿಸಹತ್ತಿದರು; ಇದಲ್ಲದೆ ಅವನು ಗುತ್ತಿಯನ್ನು ಹಿಡಕೊಳ್ಳುವ ಹವಣಿಕೆಯಿಂದ ದಂಡಿನೊಡನೆ ಹೋಗಿ ಅದನ್ನು ಮುತ್ತಿದನು. ಅಲ್ಲಿಯ ಘೋರಪಡೆಯ ಸರದಾರನು ಮೂರು ಮೂರುವರೆ ತಿಂಗಳಗಳವರೆಗೆ ಆ ಕಿಲ್ಲೆಯನ್ನು ಕಾಯ್ದುಕೊಂಡು ಹೈದರನಿಗೆ ಹಣಿಯಲಿಲ್ಲ. ಆದರೆ ಮುಂದೆ ಬರುಬರುತ್ತ ಅನ್ನಹುಲ್ಲುನೀರು ಮೊದಲಾದ ಸಾಮಗ್ರಿಗಳ ಕೊರತೆಯಾದುದರಿಂದಲೂ, ಶ್ರೀಮಂತ ಸರಕಾರದಿಂದ ನೆರವು ಸಿಗದ್ದರಿಂದಲೂ ಆ ಸರದಾರನು ನಿರುಪಾಯನಾಗಿ ಕೋಟೆಯನ್ನು ಬಿಟ್ಟುಕೊಟ್ಟು ಅಲ್ಲಿಂದ ಹೊರಟುಹೋದನು. ಈ ಪ್ರಕಾರ ಹೈದರನು ಮದವೇರಿದ ಕಾಡಾನೆಯಂತೆ ಕಾರಣವಿಲ್ಲದೆ ಬಂಡಾಯ ಹೂಡಿದ್ದರಿಂದ ಪೇಶವೆಯು ಆತನೊಡನೆ ಪುನಃ ಶಸ್ತ್ರಹಿಡಿಯುವ ಹೊತ್ತು ಬಂತು.

ಕೂಡಲೆ ಶ್ರೀಮಂತ ಸರಕಾರದವರು ಮಾಮಾ ತ್ರ್ಯಂಬಕರಾಯನಿಗೆ ಸೇನಾನೀತ್ವವನ್ನು ಒಪ್ಪಿಸಿ, ಅವನ ವಶಕ್ಕೆ ಹುಜೂರಸೈನ್ಯವನ್ನು ಕೊಟ್ಟು ಹೈದರನೊಡನೆ ಯುದ್ಧಕ್ಕೆ ಕಳಿಸಿದರು. ಆನಂದರಾವ ರಾಸ್ತೆ, ಪರಶುರಾಮಭಾವು, ಮುಂತಾದ ಪಟವರ್ಧನ ಸರದಾರರು ಆತನ ಬೆಂಬಲಕ್ಕೆ ನಿಯಮಿಸಲ್ಪಟ್ಟರು. ಸರಕಾರದ ಅಪ್ಪಣೆಯಂತೆ ಗೋಪಾಳರಾವಗೋವಿಂದ, ಪರಶುರಾಮರಾಮಚಂದ್ರ, ನೀಲಕಂಠತ್ರ್ಯಂಬಕ ಈ ತ್ರಿವರ್ಗ ಪಟವರ್ಧನ ವೀರರು ತಮ್ಮ ತಮ್ಮ ಪಥಕಗಳೊಂದಿಗೆ ಸೇನಾಪತಿಯನ್ನು ಬಂದು ಕೂಡಿದರು.

ಈ ಮೇರೆಗೆ ಪೇಶವೆಯರ ಪ್ರಚಂಡಸೈನ್ಯವು ಪುಣೆಯಿಂದ ಹೊರಟು ಕೊಪ್ಪಳ, ಸೊಂಡೂರ, ಶಿವರುದ್ರ ಇತ್ಯಾದಿ ಪಟ್ಟಣಗಳಮೇಲಿಂದ ಹಾಯ್ದು ಸವನೂರಿಗೆ ಬಂದು ತಲ್ಪಿತು. ಇಷ್ಟರಲ್ಲಿ ಹೈದರನು ಸವನೂರ ನವಾಬನನ್ನು ಹಣ್ಣಿಗೆ ತಂದಿದ್ದನು; ನವಾಬನು ಸುಲ್ತಾನನೊಡನೆ ಒಪ್ಪಂದಕ್ಕೆ

ಸಿದ್ಧನಾಗಿದ್ದನು. ಆಗ ಮಹಾರಾಷ್ಟ್ರ ಸರದಾರರು ಆತನಿಗೆ ಸಾಕಷ್ಟು ಧೈರ್ಯ ಹೇಳಿ ಹೈದರನ ವಶವಾಗದಂತೆ ವ್ಯವಸ್ಥೆಯನ್ನು ಮಾಡಿ, ಹೈದರನ ಜನರನ್ನು ಹಿಂದಕ್ಕಟ್ಟಿಕೊಟ್ಟರು; ಮತ್ತು ನವಾಬನ ಸಹಾಯಕ್ಕೆ ಕೆಲವು ದಂಡನ್ನು ಸವನೂರಲ್ಲಿಟ್ಟು ಅವರು ಮಿಕ್ಕ ದಳದೊಂದಿಗೆ ಚಿಕ್ಕಬಾಳಾ ಪೂರ, ಶಿರಹಂಸ ಮೊದಲಾದ ಕೋಟೆಗಳಕಡೆಗೆ ಸಾಗಿದರು. ಇಷ್ಟರಲ್ಲಿ ಶ್ರೀಮಂತ ಮಾಧವರಾವ ಪೇಶವೆಯು ೩೫೦೦೦ ಸಾವಿರ ದಂಡಿನೊಡನೆ ಪುಣೆ ಯಿಂದ ಹೊರಟು ಬಂದು ತನ್ನ ಸರದಾರರನ್ನು ಕೂಡಿಕೊಂಡನು.

ಮುಂದೆ ಬಾಳಾಪೂರ, ಕೊಲ್ಹಾರ, ಮಾನವಗಳ, ನಂದಿದುರ್ಗ, ಬೆಂಗಳೂರ ಮುಂತಾದ ದುರ್ಗಮವಾದ ದುರ್ಗಗಳು ಒಂದರ ಹಿಂದೊಂದು ಪೇಶವೆಯರ ವಶವಾದವು. ದೊಡ್ಡ ಬಾಳಾಪೂರಕಿಲ್ಲೆಯು ಬಹಳ ದುರ್ಘಟ ವಾದದ್ದು. ಅದನ್ನು ರಣಧುರೀಣರಾದ ಪಟವರ್ಧನ ಸರದಾರರು ಬಹಳ ಸಾಹಸಮಾಡಿ ತೆಗೆದುಕೊಂಡರು. ಇದರ ಹೊರತು ೧೫-೧೬ ಭದ್ರವಾದ ಕಿಲ್ಲೆಗಳೂ, ೨೫-೩೦ ಸಣ್ಣ ಪುಟ್ಟ ಕೊತ್ತಳಗಳೂ ಮಹಾರಾಷ್ಟ್ರರ ಹಸ್ತಗ ತವಾದವು.

ಇಷ್ಟಾದ ಬಳಿಕ ಹೈದರಖಾನನು “ಮರಾಠಾ ಸರದಾರರು ಜಾತ್ಯಾ ಶೂರರು. ಅವರ ಪರಾಕ್ರಮದ ಮುಂದೆ ನನ್ನ ಆಟವು ಸಾಗದು. ನನ್ನ ರಾಜ್ಯದ ಪಶ್ಚಿಮದಿಕ್ಕಿಗಿರುವ ನಿಬಿಡವಾದ ಅಡವಿಯನ್ನು ಸೇರಿಕೊಂಡರೆ ಅವರ ಕಾಟವಾದರೂ ತಪ್ಪೀತು” ಎಂದು ಆಲೋಚಿಸಿ ತನ್ನ ಸೈನ್ಯಸಹಿತ ಆ ಅಡವಿಯ ಹಾದೀಹಿಡಿದು ನಡೆದನು. ಈ ವರ್ತಮಾನವು ಹತ್ತಿದಕೂ ಡಲೆ ಮಾಧವರಾವ ಪೇಶವೆಯು ಆತನನ್ನು ಬೆನ್ನಟ್ಟುವದಕ್ಕಾಗಿ ರಾಸ್ತೆ ಮತ್ತು ಪಟವರ್ಧನ ಸರದಾರರಿಗೆ ಅಪ್ಪಣೆಕೊಟ್ಟು ತಾನು ಬಾಳಾಪೂರದ ಕಡೆಗೆ ತಿರುಗಿದನು ಮರಾಠಾ ದಂಡಿನ ಒಂದು ಭಾಗವು ತನ್ನ ಬೆನ್ನುಹತ್ತಿ ಬರು ತ್ತಿರುವದನ್ನು ತಿಳಿದು, ಹೈದರನು ಅದರ ಮೇಲೆ ಒಮ್ಮಿಂದೊಮ್ಮೆ ಬಿದ್ದು ಹಿಂದಕ್ಕಟ್ಟಿಕೊಡಬೇಕೆಂದು ಯೋಚಿಸಿದನು. ಅದರಂತೆ ಚಿನಾದುರ್ಗದ ಬಳಿಯಲ್ಲಿರುವ ಬುದ್ಧೀಬಿಹಾಳ ಎಂಬಲ್ಲಿ ರಾಸ್ತೆ ಮತ್ತು ಪಟವರ್ಧನ ಸರ ದಾರರು ಸೈನ್ಯದೊಂದಿಗೆ ಇಳಕೊಂಡಿರುವರೆಂಬ ಸುದ್ದಿಯು ಹತ್ತುತ್ತಲೆ, ಹೈದರನು ತನ್ನ ದಂಡಿನೊಡನೆ ಬಹು ತ್ವರಿತಗತಿಯಿಂದ ಪಯಣಮಾಡುತ್ತ

ಅಲ್ಲಿಗೆ ಬಂದು ಪಾಳಯ ಊರಿದನು. ಇದು ಮಹಾರಾಷ್ಟ್ರ ಸರದಾರರಿಗೆ ಗೊತ್ತೇ ಆಗಲಿಲ್ಲ. ಹೈದರನ ಜನರು ಮಧ್ಯರಾತ್ರಿಯ ಸುಮಾರಕ್ಕೆ ಅವರ ಮೇಲೆ ಒಮ್ಮಿಂದೊಮ್ಮೆ ಏರಿಹೋಗಿ, ತೋಫುಗುಂಡುಗಳ ಮಳೆಗರೆಯಲಾರಂಭಿಸಿದರು. ಆಗ್ಗೆ ಪೇಶವೆಸೈನ್ಯದಲ್ಲಿ ಯುದ್ಧಸಿದ್ಧತೆಯೇ ಇದ್ದಿಲ್ಲ. ಪ್ರಮುಖಸರದಾರರ ಕುದುರೆಗಳ ಮೇಲೆ ಕೆಲಕೆಲವು ಸಾಮಾನಗಳಿದ್ದವು. ಗಾಢನಿದ್ರೆಯ ಸಮಯವಾದುದರಿಂದ ರಾಹುತರೂ, ಶಿಪಾಯರೂ ಎಲ್ಲರೂ ಮಲಗಿದ್ದರು. ಒಮ್ಮೆಲೆ ತೋಫುಗಳ ಹೊಡತವು ಪ್ರಾರಂಭವಾದ್ದರಿಂದ ಅವರ ದಂಡಿನಲ್ಲಿ ಎಲ್ಲ ಕಡೆಗೂ ಗೊಂದಲವೆದ್ದಿತು. ಆಗ ರಾಸ್ತೆ ಮತ್ತು ಪಟವರ್ಧನ ಸರದಾರರು ಅಶ್ವರೂಢರಾಗಿ ಕೆಲವು ರಾಹುತರನ್ನು ಎಬ್ಬಿಸಿ ಅವರಿಗೆ ಎಲ್ಲರೂ ಯುದ್ಧಕ್ಕೆ ಸಿದ್ಧರಾಗುವಂತೆ ರಣಭೇರಿಯನ್ನು ಹೊಡಿಸಲಪ್ಪಣೆಕೊಟ್ಟರು. ಆಗ್ಗೆ ಸ್ವಾರರೂ, ಸಿಪಾಯಿ ಜನರೂ ಕಲೆಯಲಾರಂಭಿಸಿದರು. ಮರಾಠಾ ದಂಡಿನ ಜನರು ಎಚ್ಚರಾದುದನ್ನು ಕಂಡು ವೈರಿಜನರು ತೋಫುಗುಂಡುಗಳ ಹೊಡತವನ್ನು ಒಳ್ಳೇ ಜೋರಿನಿಂದ ನಡೆಸಿದರು. ಸೈನ್ಯಾಗ್ರಭಾಗದಲ್ಲಿ ನಿಂತ ಸರದಾರರ ಮೇಲೆ ತೋಫುಗಳ ಮಳೆಯು ಸುರದಂತಾಯಿತು. ಆದರೂ ಅವರು ಬೆದರದೆ ಅಲ್ಲಿಯೇ ನಿಂತುಕೊಂಡರು. ಪರಶುರಾಮಭಾವು ಮುಂಭಾಗದಲ್ಲಿಯೇ ಇದ್ದನು. ಅವನ ಕುದುರೆಗೆ ಗುಂಡು ತಗಲಿ ಅದು ಭೂಮಿಗೊರಗಿತು. ಇದೇ ಪ್ರಕಾರ ಆತನ ಮೂರು ಕುದುರೆಗಳು ಒಂದರ ಹಿಂದೊಂದು ಗುಂಡಿಗೆ ಗುರಿಯಾಗಿ ಪ್ರಾಣಬಿಟ್ಟವು. ಆದರೂ ಆ ಧೈರ್ಯಶಾಲಿಯು ಹೆದರಿ ಕದಲಲಿಲ್ಲ. ಆತನು "ಸಂರಕ್ಷಣಕರ್ತನು ದೇವರು ಇರಲು, ಕೊಲ್ಲುವವರು ಯಾರು?" ಎಂದು ಮನಸಾಚಿಂತಿಸಿ ಎದೆಯೊಡೆಯದೆ ಶತ್ರುಗಭಿಮುಖನಾಗಿ ಸಾಹಸದಿಂದ ಕಾದುತ್ತಿದ್ದನು; ಇದಲ್ಲದೆ ವೈರಿಗಳಿಗೆ ಬೆನ್ನು ತೋರಿಸಬಾರದೆಂಬುವ ಕ್ಷಾತ್ರಧರ್ಮದ ಮೇಲೆ ದೃಷ್ಟಿಯನ್ನಿಟ್ಟು, ಧೈರ್ಯಬಿಟ್ಟು ಹಿಮ್ಮೇಡಾದ ತನ್ನ ಜನರನ್ನು ಉದ್ದೇಶಿಸಿ, "ರಣಶೂರರೇ, ಕಲಿತನದಿಂದ ಕಾದರಿ; ದೇವರು ಗೆಲವು ಕೊಡುವನು; ಧೈರ್ಯಹಿಡಿಯರಿ; ಧೈರ್ಯಹಿಡಿಯರಿ" ಎಂಬ ವೀರಾವೇಶ ಭಾಷಣದಿಂದ ಅವರನ್ನು ಹುರುಪುಗೊಳಿಸುತ್ತ ಆ ಪುರುಷಸಿಂಹನು ಶತ್ರುಗಳು ಎಡಬಿಡದೆ ಬಿಡುವ ಶರವೃಷ್ಟಿಯ ಮಧ್ಯದಲ್ಲಿ ಸಿಂಹನಾದವನ್ನು ಮಾಡುತ್ತ ಅಚಲನಾಗಿ ನಿಂತುಕೊಂಡಿದ್ದನು.

ಅಹಹ! ಈತನು ಎಂಥ ಧೈರ್ಯಶಾಲಿಯು? ಈತನ ಶೌರ್ಯಸಾಗರವು ಎಷ್ಟು ಆಳವಾದದ್ದು? ತನ್ನ ಸೈನ್ಯದ ಜನರು ಒಬ್ಬರಹಿಂದೊಬ್ಬರು ರಣಭೂಮಿಯಲ್ಲಿ ಪತನವಾಗುತ್ತಿರುವರು; ಅನೇಕುದುರೆನಿಶಾನಿಗಳು ಪರ್ವತಪ್ರಾಯವಾಗಿ ಸುಟ್ಟುಬಿದ್ದಿರುವವು; ಎಲ್ಲಿನೋಡಿದರೂ ಅಕ್ರೋಶ-ಆಕ್ರಂದನಗಳ ಧ್ವನಿಯು ಕೇಳಬರುತ್ತಿತ್ತು. ಶಸ್ತ್ರಾಸ್ತ್ರಪ್ರಹಾರದಿಂದ ತನ್ನ ಮೈಗೆಲ್ಲ ಗಾಯಗಳಾಗಿರುವವು. ಇಂಥ ಹೃದಯದ್ರಾವಕ ಭೀಷಣಪ್ರಸಂಗದಲ್ಲಿ ಪ್ರೌಢಪ್ರತಾಪಿ ಪರಶುರಾಮಭಾವೂನ ಬಾಯಿಂದ "ಕಲಿತನದಿಂದ ಕಾದಿರಿ, ದೇವರು ಗೆಲವು ಕೊಡುವನು" ಇತ್ಯಾದಿ ವೀರಾಗ್ರೇಸರಿಗನುರೂಪವಾದ ವೀರವಾಣಿಯು ಹೊರಬಿದ್ದು ಸ್ವಪಕ್ಷದ ಮತ್ತು ಪರಪಕ್ಷದ ಜನರನ್ನು ದಂಗುಬಡಿಸಿತು. ಧನ್ಯನು? ಈ ಪಟವರ್ಧನವೀರನೇ ಧನ್ಯನು! ಈ ಪರಮಪರಾಕ್ರಮಿಯನ್ನು ಹೆತ್ತವಳು ವೀರಮಾತೆಯಲ್ಲದೆ ಸರ್ವಸಾಧಾರಣ ಸ್ತ್ರೀಯಲ್ಲ. ಪರಶುರಾಮಭಾವುವಿನ ಈ ಸಾಹಸ ಪ್ರಕರ್ಣವನ್ನು ಓದಲು, ಪ್ರಖ್ಯಾತ ಜಾನ ಕ್ರಾಕನ ನೆನಪು ಆಗದೇ ಇರದು. ಇಂಥ ರಣಶೂರ ಸ್ವಾಮಿಸೇವಕರನ್ನುದ್ದೇಶಿಸಿ, ಒಬ್ಬ ಕವಿಯು **स्वसुखनिरभिलाषाः खिद्यते स्वामिहेतोः** ಎಂದು ಅಂದಿರುವನು.

ಭಾವೂನ ಬಳಿಯಲ್ಲಿಯೇ ಆತನ ಕಕ್ಕನ ಮಗನಾದ ಮಾಧವರಾವ ಮಂಗಳವೇಡೇಕರನಿದ್ದನು. ಆತನ ಕುದುರೆಗೂ ಗುಂಡು ಬಡಿದು ಅದು ನೆಲಕ್ಕೊರಗಿತು. ಈ ಮೇರೆಗೆ ಸೂರ್ಯೋದಯವಾಗುವವರೆಗೆ ಸಕಲ ಸರದಾರರು ಸಾವರಿಸಿಕೊಂಡು ತಮ್ಮ ತಮ್ಮ ಸ್ಥಳಗಳಲ್ಲಿ ಧೈರ್ಯದಿಂದ ನಿಂತುಕೊಂಡಿದ್ದರು. ಬಳಿಕ ಅಲ್ಲಿಯೇ ಎಡಭಾಗದಲ್ಲಿರುವ ಒಂದು ಕೊಳ್ಳದ ಆಶ್ರಯವನ್ನು ಅವರೆಲ್ಲರು ಹಿಡಕೊಂಡು ನಿಂತರು. ಸೂರ್ಯೋದಯವಾದ ಮೇಲಂತೂ ಶತ್ರುಜನರ ಪ್ರೋತ್ಸಾಹವು ಮಿತಿಮೀರಿತು; ಅವರ ಕಡೆಯಿಂದ ತೋಫುಗುಂಡುಗಳು ತೆರಪಿಲ್ಲದೆ ಬರತೊಡಗಿದವು. ಆಗ ಪಟವರ್ಧನ ಸರದಾರರು ಏಕತ್ರರಾಗಿ ಸಾಗಿಹೋಗಿ ಅವರ ಮೇಲೆ ಬೀಳಬೇಕೆಂದು ಎರಡು ಮೂರು ಸಾರೆ ಯೋಚಿಸಿದರು; ಆದರೆ ವೈರಿಗಳ ಪ್ರಖರವಾದ ತೋಫುಗುಂಡುಗಳ ಹೊಡತದ ಮುಂದೆ ಅವರ ಆಟವು ನಿಂತಿತು; ಕುದುರೆಗಳು ಮುಂದೆ ಹೆಜ್ಜೆಯನ್ನಿಡದಂತಾದವು. ಕಾಲಾಳುಗಳೂ, ಕುದುರೆಯ ಸ್ವಾರರೂ ಧೈರ್ಯಬಿಟ್ಟರು. ಆದರೂ ಆ ಪ್ರಮುಖ ಸರದಾರರು "**धैर्यं सर्वत्रसाधनं**"

ಎಂಬ ಆಯೋರ್ಕ್ತಿಯನ್ನು ನಂಬಿ ಸಾವರಿಸಿಕೊಂಡು ನಿಂತಲ್ಲೆ ನಿಂತರು; ಮತ್ತು ತಮ್ಮ ಬುಣುಗನ್ನು ಬಿಡಾರಕ್ಕೆ ಕಳಿಸಿಕೊಟ್ಟರು. ಹೈದರನು ಮೂರನೆಯ ಪ್ರಹರಪರ್ಯಂತ ಯುದ್ಧಮಾಡಿದನು; ಆದರೂ ಪಟವರ್ಧನರು ಮಣಿಯಲಿಲ್ಲ. ಕಡೆಗೆ ಅವನು ಬೇಸತ್ತು ಮರಾಠಾ ಸರದಾರರ ದಂಡು ಇಳಕೊಂಡ ಸ್ಥಳವನ್ನು ಸುಲಕೊಂಡು ಕಡಲೂರ ಕಡೆಗೆ ಹೋದನು. ಶತ್ರುಭಯವು ದೂರವಾದ್ದರಿಂದ, ಪಟವರ್ಧನ ಸರದಾರರು ತಮ್ಮ ಛಾವಣಿಗೆ ಮರಳಿ ಬಂದರು. ಅಂದಿನ ಕಡುನಿಕರದ ಕಾಳಗದಲ್ಲಿ ಪರಶುರಾಮಭಾವೂನ ಪಥಕದ ಜನರು ಬಹು ಶೌರ್ಯದಿಂದ ಕಾದಿದರು; ಮಾಧವರಾವ ಪಟವರ್ಧನನಿಗೆ ಗುಂಡು ತಗಲಿ ಅವನು ಮರಣಹೊಂದಿದನು. ಆತನ ಶೌರ್ಯಸಾಹಸಗಳಿಗೆ ಮೆಚ್ಚಿ ಶ್ರೀಮಂತ ಪೇಶವೆಯು ಅವನ ಕುಟುಂಬದವರಿಗೆ ನಾಂದೇರಿ ಗ್ರಾಮವನ್ನು ಉಂಬಳಿ ಹಾಕಿಕೊಟ್ಟನು. ಹೈದರಖಾನನು ಸಕಲ ಪಟವರ್ಧನ ಸರದಾರರನ್ನು ರಣದೇವತೆಗೆ ಒಮ್ಮೆಲೆ ಬಲಿಕೊಡಬೇಕೆಂದು ಬಳ್ಳೇ ಹುರುಪಿನಿಂದ ಹೋರಿದನು. ಆದರೆ ಆತನ ಮನೋಬಯಕೆಯು ಈಡೇರದೆ, ಮಾಧವರಾಯನೊಬ್ಬನೇ ಆತನು ಹೂಡಿದ ಅಗಾಧ ರಣಕುಂಡಕ್ಕೆ ಆಹುತಿಯಾಗಿ ಮಿಕ್ಕವರು ಬಂದ ಸಂಕಟದಿಂದ ಪಾರುಬಿದ್ದದ್ದು ಪರಮ ಆಶ್ಚರ್ಯಕರವೇ ಸರಿ.

ಹೈದರಅಲ್ಲಿಯು ಕಡಲೂರ ಕಡೆಗೆ ಹೋದ ಬಳಿಕ ಪಟವರ್ಧನ ಪೇಶವೆಯರ ದಂಡುಗಳು ಕೂಡಿದವು. ಆಗ ಅವರ ವೀರಶ್ರೀಯು ಹೆಚ್ಚಿದರಿಂದ ಅವರು ಯುದ್ಧದ ಕೆಲಸವನ್ನು ಬಳ್ಳೇ ಕಸವಿನಿಂದ ನಡೆಸಿದರು. ತ್ರ್ಯಂಬಕರಾವ ಮಾಮಾ, ಆನಂದರಾವ ರಾಸ್ತೆ, ಪರಶುರಾಮಭಾವು ಇತ್ಯಾದಿ ಪ್ರಮುಖವೀರರು ಸಮರೋತ್ಸಾಹದಿಂದ ಮುಂದಿನ ಕಾರ್ಯಭಾಗದಲ್ಲಿ ನಿಮಗ್ನರಾದರು. ಅವರು ರಾಜನೀತಿಯನ್ನು ಅರಿಯದ ಹುಂಬನೂ ವಿಶ್ವಾಸಘಾತಕಿಯೂ ಆದ ಹೈದರನಿಗೆ ಬಹುದಿವಸ ನೆನಪುಳಿಯುವಂಥ ಶಾಸನವನ್ನು ವಿಧಿಸಬೇಕೆಂದು ಕಂಕಣಬದ್ಧರಾದರು. ಇಷ್ಟರಲ್ಲಿ ತನ್ನ ಪ್ರಕೃತಿಯು ಅಸ್ವಸ್ಥವಾದ್ದರಿಂದ ಪೇಶವೆಯು ಯುದ್ಧದ ಎಲ್ಲ ಭಾರವನ್ನು ಸೇನಾಪತಿ ತ್ರಂಬಕರಾವ ಮಾಮಾ, ಆನಂದರಾವ ರಾಸ್ತೆ ಮತ್ತು ಪರಶುರಾಮಪಂತ ಪಟವರ್ಧನ ಇವರೇ ಮೊದಲಾದವರಿಗೆ ಒಪ್ಪಿಸಿ ತಾನು ರಾಜಧಾನಿಗೆ ತೆರಳಿದನು.

ಇತ್ತ ಹೈದರಅಲ್ಲಿಯು "ಸೇನಾಪತಿ ಮಾಮಾ ಇತ್ಯಾದಿ ಪೇಶವೆ ಸರದಾರರು ಗುಡಪಲ್ಲಿ ಎಂಬಲ್ಲಿ ಇರುವರು; ಅವರ ಕೆಲವು ಸೈನಿಕರು ರಾಮದುರ್ಗ ಮತ್ತು ನೀಲಗಡ ಕಡೆಗೆ ಹೋಗಿರುವರು. ಚಿಕ್ಕಬಾಳಾಪುರದಲ್ಲಿ ಪೇಶವೆಯು ನೇಮಿಸಿದ ಜಾನೋಜಿ ಧುಳಪಸರದಾರನು ಇರುವನು. ಅದರಿಂದ ಈಗ ಚಿಕ್ಕಬಾಳಾಪುರ ಕೋಟೆಯನ್ನು ಹಿಡಕೊಳ್ಳುವದು ಸುಲಭಸಾಧ್ಯವು." ಮುಂತಾಗಿ ವಿಚಾರಮಾಡಿಕೊಂಡು ದಂಡಿನೊಡನೆ ಸಾಗಿಬಂದು ಚಿಕ್ಕಬಾಳಾಪುರವನ್ನು ಮುತ್ತಿದನು. ಜಾನೋಜಿಯ ಬಳಿಯಲ್ಲಿ ಸೈನ್ಯವು ಬಹಳವಿದ್ದಿಲ್ಲ; ಅದರಿಂದ ಅವನು ಹೈದರನ ದಾಳಿಯ ಸಮಾಚಾರವು ಗೊತ್ತಾದ ಕೂಡಲೆ ಪೇಶವೆ ಸರದಾರರಿಗೆ ತನ್ನ ನೆರವಿಗೆ ಬರಬೇಕೆಂದು ವಿಜ್ಞಾಪನಾ-ಪತ್ರಗಳನ್ನು ಬರೆದನು. ಆದದರಿಂದ ಎಲ್ಲ ಸರದಾರರು ಚಿಕ್ಕಬಾಳಾಪುರದ ಹಾದೀ ಹಿಡಿದರು. ಈ ಪ್ರಸಂಗದಲ್ಲಿ ಪಟವರ್ಧನ ಸರದಾರರು ಬಹು ಚಪಲತೆಯನ್ನು ತೋರಿಸಿ, ಮಿಕ್ಕ ಸರದಾರರನ್ನು ಹಿಂದೆಹಾಕಿ, ಗೋಪಾಳರಾವ, ಪರಶುರಾಮಭಾವು ಮತ್ತು ನೀಲಕಂಠರಾವ ಈ ತ್ರಿವರ್ಗ ಬಂಧುವೀರರು ಮುಂದೆ ಬಂದು, ಚಿಕ್ಕಬಾಳಾಪುರದ ಬಳಿಯಲ್ಲಿ ಬೀಡು ಬಿಟ್ಟರು. ಅವರೊಡನೆ ೭೦೦-೮೦೦, ಸ್ವಾರರು ಮಾತ್ರ ಇದ್ದರು. ಆದರೂ ಅವರು ಬಳ್ಳೇ ಧೈರ್ಯದಿಂದ ಹೈದರನ ದಂಡಿನ ಮೇಲೆ ಸಾಗಿಹೋಗಿ ಅದನ್ನು ಹಲ್ಲಾಮಾಡಿದರು; ಮತ್ತು ಅವನ ದಂಡಿನ ಅನ್ನಸಾಮಗ್ರಿಯನ್ನು ಸುಲಿದರು. ಶತ್ರುಪಕ್ಷದ ೪೦೦-೫೦೦ ಜನರು ಮೃತರಾದರು. ಪಟವರ್ಧನ ಸರದಾರರು ಆತನ ಸಕಲ ಸಂಗ್ರಾಮ ಸಾಮಗ್ರಿಗಳನ್ನು ಸುಲಿದು ತಮ್ಮ ಹಸ್ತಗತಮಾಡಿಕೊಂಡರು. ಈ ಯುದ್ಧದಲ್ಲಿ ಪಟವರ್ಧನರ ಕಡೆಯ ೫೦ ಜನರು ಮಾತ್ರ ಹತರಾದರು; ಇದಲ್ಲದೆ ಕುಮಠೇಕರ ಯಶವಂತರಾಯನೆಂಬುವ ಸರದಾರನು ರಣಭೂಮಿಯಲ್ಲಿ ಬಿದ್ದು ಸತ್ತನು. ಇದರ ಹೊರ್ತು ಹೆಚ್ಚಿನ ನಷ್ಟವಾಗಲಿಲ್ಲ.

ತರುವಾಯ ಸರ್ವಾಧಿಪತಿಯಾದ ತ್ರ್ಯಂಬಕರಾಯನು ಹೈದರನ ಮೇಲೆ ಬೀಳಬೇಕೆಂದು ದಂಡಿನೊಡನೆ ಹೊರಟನು. ಪಟವರ್ಧನ ಸರದಾರರು ದೊಡ್ಡಬಾಳಾಪುರದ ಮಾರ್ಗಹಿಡಿದು ನಡೆದರು. ತ್ರ್ಯಂಬಕರಾಯನು ಗುರುಮಕೊಂಡ ಕೋಟೆಯ ಸುತ್ತುಮುತ್ತು ಮೋರ್ಚೆಗಳನ್ನು ಕಟ್ಟಿಸಿ, ಅದನ್ನು ಮುತ್ತಿಕೊಂಡು ಕಾಳಗಕ್ಕೆ ಅಣಿಯಾದನು. ಆ ಕೋಟೆಯು ಬಲು

ಬಲವಾದದ್ದು. ಅದರ ಸುತ್ತಲೂ ಎರಡು ಕಂದಕಗಳೂ ಎರಡು ಗೋಡೆಗಳೂ ಮತ್ತು ಎರಡೂ ಭಾಗಕ್ಕೂ ಭದ್ರವಾದ ಬುರುಜುಗಳೂ ಇದ್ದವು. ಆದ್ದರಿಂದ ಮೂರು ತಿಂಗಳುಗಳವರೆಗೆ ಯುದ್ಧವು ಮಂದವಾಗಿ ಸಾಗಿತು. ಅತ್ತ ಪಟವರ್ಧನ ಸರದಾರರು ಹೈದರನ ಬೆನ್ನುಹತ್ತಿದ್ದರು. ಆದಕಾರಣ ಗುರುಮಕೊಂಡ ಕಿಲ್ಲೆಯ ರಕ್ಷಣೆಗಾಗಿ ಸಹಾಯಿಕ ಸೈನ್ಯವನ್ನು ಕಳಿಸಿಕೊಡಲಿಕ್ಕೆ ಆತನಿಗೆ ಆಸ್ಪದವಿದ್ದಿಲ್ಲ. ತ್ರ್ಯಂಬಕರಾಯನು ಬಹಳ ಸಾಹಸದಿಂದ ಮುತ್ತಿಗೆಯನ್ನು ನಡೆಸಿದರಿಂದ ಅಲ್ಲಿಯ ಕಿಲ್ಲೇದಾರನು ಹಣ್ಣಿಗೆ ಬಂದು ಉಪಾಯವಿಲ್ಲದೆ ಆತನಿಗೆ ಶರಣುಬಂದನು. ಕೂಡಲೆ ಜಯಶೀಲರಾದ ಪೇಶವೆ ಸೈನಿಕರು ತಮ್ಮ ವಿಜಯಧ್ವಜವನ್ನು ಕೋಟೆಯ ಮೇಲೆ ನಿಲ್ಲಿಸಿದರು.

ಇಲ್ಲಿಯವರೆಗೆ ಪೇಶವೆ ಸರದಾರರು ಹೈದರನೊಬ್ಬನ ಕೂಡ ಕಾದುತ್ತಿದ್ದರು. ತಂದೆಯ ಒದ್ದಾಟವನ್ನು ಕೇಳಿ ಆತನ ರಣಧುರಂಧರ ಮಗ ಟೀಪುಸುಲ್ತಾನನು ಹೈದರನನ್ನು ಬಂದುಕೂಡಿದನು. ಆಗ ಪಟವರ್ಧನ, ರಾಸ್ತೆ, ಮಾಮಾ, ಮೊದಲಾದ ರಣವಿಕ್ರಮರಾದ ಪೇಶವೆ ಸರದಾರರು ಒಟ್ಟುಗೂಡಿ ಅವರಿಬ್ಬರೊಡನೆ ಯುಕ್ತಿ-ಪ್ರಯುಕ್ತಿಯಿಂದ ಕಾದಾಡತೊಡಗಿದರು. ಪಟವರ್ಧನರು ರಾಜಾಪೂರ ಇತ್ಯಾದಿ ಕೋಟೆಗಳನ್ನು ಒಂದರಹಿಂದೊಂದು ಶಳಕೊಂಡು, ಪೇಶವೆ ಸಾಮ್ರಾಜ್ಯಕ್ಕೆ ಕೊಡಸಿದರು; ಗೆದ್ದ ಪ್ರದೇಶಗಳಲ್ಲಿ ಶ್ರೀಮಂತ ಸರಕಾರದ ಅಮಲು ಕೂಡ್ರಿಸತೊಡಗಿದರು.

ಇದೇ ಸುಮಾರಕ್ಕೆ ಗೋಪಾಳರಾವ ಗೋವಿಂದ ಈತನ ಪ್ರಕೃತಿಯು ಕೆಟ್ಟಿತು. ಆದ್ದರಿಂದ ಅವನು ತನ್ನ ಸೇನಾಭಾಗವನ್ನು ತನ್ನ ಸಹಜಾತರಾದ ವಾಮನರಾವ ಮತ್ತು ಗಂಗಾಧರರಾವ ಇವರಿಬ್ಬರ ಸ್ವಾಧೀನಮಾಡಿ ತಾನು ಮಿರಜಿಗೆ ಹೋದನು. ಅಲ್ಲಿ ಆತನಿಗೆ ಉದರರೋಗವು ಹುಟ್ಟಿ ಅದರಿಂದಲೇ ಆತನು ಇಸವಿಸನ್ನ ೧೭೭೧ರಲ್ಲಿ ಮಾಘ ಶುದ್ಧ ೧೩ ದಿವಸ ತೀರಿಕೊಂಡನು. ಗೋಪಾಳರಾಯನ ಸಂಗಡ ಇದ್ದು ಭಾವು ಅಸಂಖ್ಯ ಸಂಗ್ರಾಮಗಳನ್ನು ಮಾಡಿದ್ದನು. ಆತನ ಮರಣದಿಂದ ಭಾವುಗೆ ಬಹು ದುಃಖವೆನಿಸಿತು. ಅವರಿಬ್ಬರು ಕಕ್ಕನಮಕ್ಕಳಾದರೂ ಅವರೀರ್ವರ ಪರಸ್ಪರ ಪ್ರೇಮವು ಒಡಹುಟ್ಟಿದ ಅಣ್ಣತಮ್ಮಂದಿರಕಿಂತಲೂ ಅಧಿಕವಾಗಿತ್ತು. ಗೋಪಾಳರಾಯನು

ಕಾಲವಾದ ಕೆಲವು ತಿಂಗಳುಗಳಲ್ಲಿ ಆತನ ತಂದೆಯಾದ ಗೋವಿಂದಹರಿಯು ಪುತ್ರಶೋಕದಿಂದ ನವಿದು ಮರಣಹೊಂದಿದನು. ಆತನ ಪತಿವ್ರತೆಯಾದ ಹೆಂಡತಿಯು ಆತನೊಡನೆ ಸಹಗಮನಮಾಡಿ ಉಜ್ವಲ ಪತಿನಿಷ್ಠೆಯನ್ನು ಪ್ರಕಟಿಸಿದಳು.

ಪಟವರ್ಧನ ಕುಲತಾರಕರಾದ ಗೋವಿಂದಹರಿ, ಗೋಪಾಳ ಗೋವಿಂದ ಇವರಿಬ್ಬರ ಮೃತ್ಯುವಿನಿಂದ ಪರಶುರಾಮಭಾವು ಮೊದಲಾದ ಪಟವರ್ಧನ ಸರದಾರರಿಗೆ ಆದ ದುಃಖವನ್ನು ಬಣ್ಣಿಸಲಳವಲ್ಲ. ಆದರೆ ಪಟವರ್ಧನ ಪುರುಷರು ಕೇವಲ ಶೋಕಾಕುಲರಾಗಿ ಮುಂಗಾಣದೆ ಕೈಮುಚ್ಚಿಕೊಂಡು ಕೂಡ್ರುವ ಹೇಡಿಗಳಲ್ಲ. ಅವರು ಮಹಾ ಧೈರ್ಯಶಾಲಿಗಳು. ಅದರಿಂದ ಪರಶುರಾಮಭಾವು, ವಾಮನರಾವ, ನೀಲಕಂಠರಾವ ಇತ್ಯಾದಿ ಬಂಧುಸರದಾರರು ವಿವೇಕವನ್ನು ತಂದುಕೊಂಡು, ಆ ವಿವೇಕರೂಪ ಜಲವೃಷ್ಟಿಯಿಂದ ಅಪರಿಹಾರ್ಯ, ಅಸಹ್ಯ ಮತ್ತು ಅತರ್ಕ್ಯವಾದ ಪಿತ-ಭ್ರಾತೃಶೋಕಾಗ್ನಿಯನ್ನು ನಂದಿಸಿ ಸಮಾಧಾನವನ್ನು ಹೊಂದಿದರು. ಪುಣೆಯಿಂದ ಮಾಧವರಾವ ಪೇಶವೆಯು ಗಂಡುಗಲಿ ಗೋಪಾಳರಾಯನ ಮರಣದ ವೃತ್ತಾಂತವನ್ನು ಕೇಳಿ ದುಃಖಪ್ರದರ್ಶಿತ ಪತ್ರವನ್ನು ಬರೆದು, ಪಟವರ್ಧನರೆಲ್ಲರಿಗೆ ಧೈರ್ಯಹೇಳಿ ಅವರನ್ನು ಸಲೆ ಸಂತರಿಸಿದನು. ಅದರಿಂದ ಆ ವೀರಮಣಿಗಳು ಪುನಃ ಧೈರ್ಯತಾಳಿ ವೈರಿಯನ್ನು ಮೆತ್ತಗೆ ಮಾಡುವದಕ್ಕಾಗಿ ಮತ್ತೆ ಸೊಂಟಕಟ್ಟಿದರು.

ಮುಂದಿನ ಸಂಗ್ರಾಮ-ಸಮಾಚಾರವನ್ನು ಕಥನಮಾಡುವ ಮೊದಲು, ಗೋಪಾಳರಾಯನ ಮರಣದಿಂದ ನಮ್ಮ ಚರಿತ್ರನಾಯಕನ ಸ್ಥಿತಿಗತಿಯಲ್ಲಿ ಯಾವ ಯಾವ ಅದಲುಬದಲುಗಳಾದವು? ಎಂಬ ಬಗ್ಗೆ ಇಲ್ಲಿ ಸ್ವಲ್ಪದರಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಿಕ್ಕಿಲ್ಲ.

ಇಲ್ಲಿಯವರೆಗೆ ಗೋಪಾಳಗೋವಿಂದ, ಪರಶುರಾಮರಾಮಚಂದ್ರ ಈ ಉಭಯ ಯುದ್ಧಶಾಲಿಗಳು ತಮ್ಮ ಭುಜಬಲದ ಜೋರಿನಿಂದ ಮಾಡಿದ ಪರಾಕ್ರಮಕೃತ್ಯಗಳನ್ನು ಹಿಂದೆ ಹೇಳಿರುವೆವು. ಗೋವಿಂದಹರಿಯು ವಯೋವೃದ್ಧನಾದ ಬಳಿಕ ಆತನ ಶೂರಪುತ್ರನಾದ ಗೋಪಾಳರಾಯನೂ, ಪರಶುರಾಮಭಾವೂ ಇವರಿಬ್ಬರೇ ಪಟವರ್ಧನರಲ್ಲಿ ಮುಂದಾಳುಗಳೆನಿಸಿ ಅನೇಕಾ

ನೇಕ ಮಹತ್ಕೃತ್ಯಗಳನ್ನು ಮಾಡಿ ಬೆಳಕಿಗೆ ಬಂದರು. ಆದರೆ ಇಸವಿ ಸನ್ನ ೧೭೭೧ರಲ್ಲಿ ಈ ಉಭಯ ಪಿತ-ಪುತ್ರರು (ಗೋವಿಂದಹರಿ-ಗೋಪಾಳ ಗೋವಿಂದ) ಇಹಲೋಕಯಾತ್ರೆಯನ್ನು ಮುಗಿಸಲು, ಅವರ ಹಿಂದೆ ವಯಸ್ಸು, ಪರಾಕ್ರಮ, ಮಾನ, ಕರ್ತೃತ್ವಶಕ್ತಿ ಇತ್ಯಾದಿ ವಿಚಾರದೃಷ್ಟಿಯಿಂದ ನೋಡುತ್ತಿರಲಿಕ್ಕೆ, ನಮ್ಮ ಕಥೆಯೊಡೆಯನೇ ಪಟವರ್ಧನ ಕುಲದ ಪ್ರಮು ಖತ್ವವನ್ನು ವಹಿಸಲರ್ಹನಾಗಿದ್ದನು. ಅದರಂತೆ ಅವನು ಗೋಪಾಳರಾಯನ ತರುವಾಯ ತನ್ನ ಶೌರ್ಯಪ್ರಭಾವದಿಂದ ಮುಂದೆ ಬಂದು, ಪಟವರ್ಧನ ಪುರುಷರಲ್ಲಿ ಅಗ್ರಗಣ್ಯತೆಯನ್ನು ಹೊಂದಿದನು. ಮುಂದೆ ಪೇಶವೆ ಮನೆತನ ದಲ್ಲಿ ಕಲಹಾಗ್ನಿಯು ಹುಟ್ಟಿ, ಅದರ ಯೋಗದಿಂದ ಅಸಂಖ್ಯ ಅನರ್ಥಗಳು ಉದ್ಭವಿಸಿ ಇಡೀ ಹಿಂದುಸ್ಥಾನದಲ್ಲಿ ಅನೇಕಾನೇಕ ಅದಲುಬದಲುಗಳಾದವು. ಇವೆಲ್ಲರಲ್ಲಿ ಪರಶುರಾಮಭಾವು ಪ್ರಧಾನಪಾತ್ರವನ್ನು ಅಂಗೀಕರಿಸಿದ್ದಲ್ಲದೆ, ತುಸುಕಾಲ ರಾಜ್ಯಸೂತ್ರವನ್ನು ಸಹ ಕೈಕೊಂಡನು. ಆದದರಿಂದ ಮುಂದಿನ ಕಥಾಭಾಗವು ಅತ್ಯಂತ ಮನೋಹರವಿದ್ದು, ಪೇಶವಾಯಿಯಲ್ಲಿ ಒಮ್ಮಿಂದೊ ಮ್ಮೆ ಉದ್ಭವಿಸಿದ ಗೃಹಕಲಹ, ರಾಜಕ್ರಾಂತಿ ಇತ್ಯಾದಿ ಬಿಕ್ಕಟ್ಟಿನ ಪ್ರಸಂಗ ಗಳಲ್ಲಿ ಪರಶುರಾಮಭಾವು ತೋರಿಸಿದ ಶೌರ್ಯ, ಸೌಜನ್ಯ, ಸತ್ಯಪ್ರೀತಿ, ಜಾಣತನ, ಸ್ವಾಮಿಭಕ್ತಿ ಮುಂತಾದ ವಿಷಯಗಳ ಸುರಸಕಥಾಪೀಯೂ ಷವು ವಾಚಕವರ್ಗಕ್ಕೆ ಮುಂದಿನ ಅಧ್ಯಾಯಗಳಲ್ಲಿ ಕ್ರಮಶಃ ಲಭ್ಯವಾಗು ವದು. ಇಲ್ಲಿ ಇಷ್ಟೇ ಹೇಳಿ ಮೈಸೂರ ಮರಾಠಾಯುದ್ಧವನ್ನು ಯಥಾಮತಿ ವರ್ಣಿಸುವೆವು.

ಹಿಂದೆ ಹೇಳಿದಂತೆ ಪೇಶವೆ ಸರದಾರರು ಹೈದರನ ಸೀಮೆಯಲ್ಲಿ ದಾಳಿ ಯನ್ನಿಟ್ಟು, ವಿಜಯಶಾಲಿಗಳಾಗುತ್ತ ನಡೆದಿರಲು, ಇತ್ತ ಥೇವೂರಲ್ಲಿ ಶ್ರೀಮಂತ ಮಾಧವರಾಯನು ರಾಜಯಕ್ಷ್ಮರೋಗದಿಂದ ಕೊರಗಹತ್ತಿದನು. ಅದರಿಂದ ಮತ್ತು ಹೈದರನೊಡನೆ ಹೂಡಿದ ಕಾಳಗವು ಬಹುದಿವಸ ಮಂದವಾಗಿ ಸಾಗಿ ದ್ದರಿಂದ ತ್ರ್ಯಂಬಕರಾವಮಾಮಾ ಮತ್ತು ಪರಶುರಾಮಭಾವು ಇವರಿಬ್ಬರು ವಿಚಾರಮಾಡಿ ಮೈಸೂರಕರನ ರಾಜಧಾನಿಯ ಮೇಲೆ ಸಾಗಿಹೋಗುವ ದನ್ನು ನಿರ್ಧರಿಸಿದರು. ಆ ಪ್ರಕಾರ ಆನಂದರಾವ ರಾಸ್ತೆ, ನೀಲಕಂಠರಾವ, ವಾಮನರಾವ, ಗಂಗಾಧರರಾವ, ರಘುನಾಥರಾವ, ಮುರಾರರಾವ ಘೋರ ಪಡೆ, ಜಾನೋಜಿರಾವ ಧುಳಪ ಇತ್ಯಾದಿ ಮಹಾಮಹಾ ವೀರರೊಡಗೊಂಡು

ಪೇಶವೆ ಸೇನಾಸಮುದ್ರದೊಡನೆ ಮಾಮಾ ಮತ್ತು ಪರಶುರಾಮಭಾವು ಇವರು ಶ್ರೀರಂಗಪಟ್ಟಣದ ಹಾದೀ ಹಿಡಿದರು. ಅತ್ತಕಡೆಯಿಂದ ಹೈದರಖಾನನು ದೊಡ್ಡ ದಂಡಿನೊಡನೆ ಅವರನ್ನು ಎದುರಿಸಬೇಕೆಂದು ಹೊರಟು ಬಂದನು. ಮೋತಿತಲಾವ* ಎಂಬಲ್ಲಿ ಉಭಯ ದಂಡುಗಳು ಭೆಟ್ಟಿಯಾದವು. ಆ ಕಾಲಕ್ಕೆ ಮಹಾರಾಷ್ಟ್ರ ದಂಡಿನಲ್ಲಿ ತ್ರ್ಯಂಬಕರಾವ ಮಾಮಾ, ಆನಂದರಾವ ರಾಸ್ತೆ, ಧುಳಪ ಪರಶುರಾಮಭಾವು ಇತ್ಯಾದಿ ಪಟವರ್ಧನಸರದಾರರು ಇಂತಿಷ್ಟು ಶೂರಜನರಿದ್ದರು. ಅವರು ತಮ್ಮ ದಂಡಿನಲ್ಲಿ ಬೇರೆ ಬೇರೆ ಪಂಗಡಗಳನ್ನು ವಿಂಗಡಿಸಿಕೊಂಡು, ಒಂದು ಪಂಗಡದ ಆಧಿಪತ್ಯವನ್ನು ಮಾಮಾ, ಮತ್ತೊಂದು ಪಥಕದ ದಂಡನಾಯಕತ್ವವನ್ನು ಪರಶುರಾಮಭಾವು, ಮೂರನೇಭಾಗದ ಸೇನಾನೀತ್ವವನ್ನು ಕೃಷ್ಣರಾವ ಬಳವಂತ ಈ ಪ್ರಕಾರ ತುಂಗವಿಕ್ರಮ ಸರದಾರರು ವಹಿಸಿಕೊಂಡು ಹೈದರನನ್ನು ಮುತ್ತಿದರು. ಮುಂದೆ, ಹಿಂದೆ ಹಾಗೂ ಎರಡೂ ಪಾರ್ಶ್ವದಿಂದಲೂ ಒಂದೇಸವನೆ ತೋಫುಗುಂಡುಗಳ ಮಳೆಯು ಸುರಿಯಲಾರಂಭಿಸಿತು. ಹೀಗೆ ನಾಲ್ಕುದಿವಸಗಳವರೆಗೆ ಪೇಶವೆ ಸರದಾರರು ಆರ್ಯವಿರೋಧಿಯಾದ ಹೈದರನೊಡನೆ ಶೌರ್ಯದಿಂದ ಹೋರಾಡಿದರು. ಖಾನನು ಕಾದಿ ಕಂಗೆಟ್ಟು ಪುನಃ ರಾಜಧಾನಿಯ ಹಾದೀ ಹಿಡಿದನು. ಆದರೆ ಪಟವರ್ಧನ ವೀರರು ಅವನ ಸೈನ್ಯವನ್ನು ಬಹಳ ಬಲವಾಗಿ ಮುತ್ತಿದರಿಂದ ಅವನ ಸರ್ವ ಉಪಾಯಗಳು ವ್ಯರ್ಥವಾದವು. ಕಟ್ಟಕಡೆಗೆ ಹೈದರನು ತನ್ನ ಮಗ ಟೀಪುವಿನೊಡಗೊಂಡು ೨೫ ಸ್ವಾರರನ್ನು ಕೂಡಿಕೊಂಡು, ತನ್ನ ಎಲ್ಲ ದಂಡನ್ನು ಹಿಂದೆ ಬಿಟ್ಟು ರಾತ್ರಿಯಲ್ಲಿ ನುಸಳಿಕೊಂಡು

---

* ಒಮ್ಮೆ ಹೈದರಾಬಾದದ ನಿಜಾಮಉಲ್ಮಲಕನು ನಾಜರಜಂಗನೆಂಬ ತನ್ನ ಮಗನನ್ನು ಮೈಸೂರ ಸಂಸ್ಥಾನದ ಮೇಲೆ ದಂಡುಸಹಿತ ಕಳಿಸಿದ್ದನು. ಆಗ ಆ ಸಂಸ್ಥಾನದ ಮುಖ್ಯ ದಳವಾಯಿಯು ದೇವರಾಜಯ್ಯನೆಂಬುವಾತನಿದ್ದನು. ಅವನು ಯುದ್ಧದ ಗೊಡವಿಗೆ ಹೋಗದೆ ನಾಜರಜಂಗನೊಡನೆ ಒಪ್ಪಂದ ಮಾಡಿಕೊಂಡನು. ಆಗ್ಗೆ ನಾಜರಜಂಗನು ತೊಣ್ಣಾರಕೆರೆಯ ಬಳಿಯಲ್ಲಿ ಇಳಿದುಕೊಂಡು ತೆಪ್ಪವಾಡುತ್ತ, ಕೆಲವು ದಿನಗಳನ್ನು ವಿನೋದವಾಗಿ ಕಳೆದನು; ಮತ್ತು ಆ ಕೆರೆಯ ನೀರು ಬಹಳ ನಿರ್ಮಲವಾಗಿದ್ದುದರಿಂದ ಅದಕ್ಕೆ 'ಮೋತಿತಲಾವ' ಎಂಬ ಹೆಸರು ಕೊಟ್ಟನು. ಅಂದಿನಿಂದ ಆ ಕೆರೆಯು 'ಮೋತಿತಲಾವ' ಎಂಬ ಹೆಸರಿನಿಂದ ರೂಢಿಯಾಗಿರುವದು.

ಪಲಾಯನ ಹೇಳಿದನು. ದಳಪತಿಯು ಇಲ್ಲದ ದಳದ ದುರ್ದೆಶೆಯನ್ನು ಕೇಳು ವದೇನು? ಮರಾಠಾಸೈನಿಕರು ಶತ್ರುಗಳ ದಂಡನ್ನು ಒಮ್ಮೆಲೆ ಹಲ್ಲಾಮಾಡಿ ಸುಲಿದುಬಿಟ್ಟರು. ಹೈದರನ ಎಲ್ಲ ತೋಫಖಾನೆ, ಆನೆ, ನಿಶಾನೆ, ಖಜಾನೆ, ಕುದುರೆ, ಜವಾಹಿರ ಇತ್ಯಾದಿ ಸಕಲ ಸಂಗ್ರಾಮ ಸಾಹಿತ್ಯಗಳು ಮರಾಠಾ ಸರದಾರರ ಕೈವಶವಾದವು. ಹೈದರನ ಕಡೆಯ ಸಾವಿರಾರು ಜೋದರರೂ ೧೫೦೦ ರಾಹುತರೂ ರಣಭೂಮಿಯಲ್ಲಿ ಬಿದ್ದು ಹತರಾದರು. ಪೇಶವೆಸರದಾರರ ನಿಗ್ರಹಕ್ಕಾಗಿ ಖಾನನು ತಂದ ದೊಡ್ಡ ದೊಡ್ಡ ದಂಡುಗಳು ನುಚ್ಚು ನುರಿಯಾದವು. ಪರಶುರಾಮಭಾವು ತನ್ನ ಬಿಲ್ಲಾಳ್ತನದ ಕೊನೆಯನ್ನು ಪ್ರಕಟಿಸಿ, ಹೈದರನನ್ನು 'ತ್ರಾಹಿ' 'ತ್ರಾಹಿ' ಮಾಡಿಬಿಟ್ಟನು. ಆತನ ಅನುಭವ ದರ್ಶಕ ಮತ್ತು ಧೈರ್ಯವರ್ಧಕ ಭಾಷಣದಿಂದ ಆತನ ಸೈನಿಕರು ಒಳ್ಳೇ ಹುರುಪುಗೊಂಡು, 'ಹರಹರಮಹಾದೇವ' ಎಂದು ವೀರಗರ್ಜನೆಯನ್ನು ಮಾಡುತ್ತ ಶತ್ರುಗಳ ಮೇಲೆ ಬಿದ್ದು ಬಹಳ ಸಾಹಸದಿಂದ ಕಾದಿದರು. ಸೇನಾಪತಿಯಾದ ಭಾವೂಸಾಹೇಬನ ಪಟುಭಟತ್ವವನ್ನೂ, ಉಳಿದ ಪಟವರ್ಧನಸರದಾರರ ರಣಪಾಂಡಿತ್ಯವನ್ನೂ ಕಂಡು ಸರ್ವಾಧಿಪತಿಯಾದ ಮಾಮಾನು ಆಶ್ಚರ್ಯಚಕಿತನಾದುದಲ್ಲದೆ ಯವನ ಭೂಪತಿಯಾದ ಹೈದರ ಬಹದ್ದೂರನು ಕೂಡ ಅವರ ಅಪರಮಿತ ಭುಜಬಲವನ್ನು ಕಣ್ಣಾರೆ ಕಂಡು ಬೆರಳು ಕಚ್ಚಿದನು. ಕೃಷ್ಣರಾವ ಧಾಯಗುಡೆ, ಆನಂದರಾವ ರಾಸ್ತೆ ಇತ್ಯಾದಿ ಎಲ್ಲ ಪೇಶವೆಸರದಾರರು ಸಹ ತಮ್ಮ ಕರ್ತವ್ಯಕರ್ಮವನ್ನು ಉತ್ತಮರೀತಿಯಿಂದ ಮಾಡಿ ಹೈದರನಂಥ ಪ್ರಬಲವೈರಿಯನ್ನು ಜರ್ಜರಮಾಡಿ ಯುದ್ಧಭೂಮಿಯಿಂದ ಓಡಿಸಿಬಿಟ್ಟರು. ಈ ಕಾಳಗದಲ್ಲಿ ನೀಲಕಂಠತ್ರ್ಯಂಬಕ ಪಟವರ್ಧನನು ಹಗೆಗಳ ಮೇಲೆ ಸಾಗಿ ಹೋಗಿ ಕಲಿತನದಿಂದ ಕಾದುತ್ತಿರುವ ಸಮಯದಲ್ಲಿ ಅವನ ಎದೆಗೆ ಒಂದು ಗುಂಡು ತಾಕಿ ಮರಣಹೊಂದಿದನು. ಈತನು ಭಾವೂನ ಕಕ್ಕನ ಮಗನು. ಆತನು ಗೋಪಾಳರಾಯನ ಮರಣದಿಂದಾದ ದುಃಖವನ್ನು ಇನ್ನೂ ಮರೆತಿದ್ದಿಲ್ಲ. ಅಷ್ಟರಲ್ಲಿ ಈ ಎರಡನೆಯ ಅನಿಷ್ಟಕಾರಕ ಕಷ್ಟವು ಪ್ರಾಪ್ತವಾದದರಿಂದ ಪರಶುರಾಮಪಂತನ ಚಿತ್ತವು ಅತ್ಯಂತ ಉದ್ವಿಗ್ನವಾಯಿತು. ಆತನ ದುಃಖಕ್ಕೆ ಅಂತ್ಯವಿಲ್ಲದಾಯಿತು. ಅವನು ಶೋಕ ಸಾಗರದಲ್ಲಿ ಮುಳುಗಿಹೋದ್ದರಿಂದ ಅವನ ಯುದ್ಧಕೌಶಲ್ಯವು ಕುಂಠಿತವಾಗಿ ಅವನ ಮುಖದಲ್ಲಿ ಉದಾಶೀನತೆಯು ತಲೆದೋರಿ ಬಹಳ ನಿತ್ರಾಣನಾದನು.

ಈ ಎಲ್ಲ ವರ್ತಮಾನವನ್ನು ಭಾವು ಗೋವಿಂದಹರಿಗೆ ಪತ್ರದ್ವಾರದಿಂದ ತಿಳಿಸಿದನು. ಆತನು ಅನೇಕ ಪ್ರಕಾರದಿಂದ ಭಾವೂನನ್ನು ಸಂತೈಸಿದನು. †

ಮೇಲೆ ಹೇಳಿದಂತೆ ಮೋತಿತಲಾವಕಾಳಗದಲ್ಲಿ ಜಯಹೊಂದಿದ ಬಳಿಕ ಸಕಲ ಸರದಾರರು ಶ್ರೀರಂಗಪಟ್ಟಣದ ಮೇಲೆ ಸಾಗಿಹೋಗಿ ಕಾವೇರಿನದಿಯ ಉತ್ತರದಂಡೆಯ ಮೇಲೆ ಇಳಕೊಂಡರು. ಆಗ ಹೈದರನು ಒಪ್ಪಂದದ ಪ್ರಸ್ತಾಪವನ್ನು ನಡೆಸಿದನು. ಹೈದರನು ಹಗೆಗಗಳ ಕೂಡ ಹೆಣಗಾಡುವ ಎದೆಯಿಲ್ಲದೆ ನರಿಯಂತೆ ಓಡಿಹೋಗಿ ತಮಗೆ ಶರಣು ಬಂದು ಒಪ್ಪಂದದ ಪ್ರಸಕ್ತಿಯನ್ನು ತೆಗೆಯಲು ಮರಾಠಾಸರದಾರರು ಶರಣು ಬಂದವರ ಮೇಲೆ ಶಸ್ತ್ರಹಿಡಿಯುವದು ರಾಜನೀತಿಗೆ ವಿರೋಧವಾದದ್ದೆಂದು ಬಗೆದು, ಆತನ ದೈನ್ಯದ ಬಿನ್ನಪವನ್ನು ಮಾನ್ಯಮಾಡಿದರು. ಆದರೆ ಹೈದರನು ರಣವೀರನಾದರೂ, ಮಹಾ ವಿಶ್ವಾಸಘಾತಕಿಯು "**वचस्येकं मनस्येकं**" ಎಂಬಂತೆ ಆತನ ವರ್ತನವಿತ್ತು. ಆಡಿದಂತೆ ಮಾಡುವದನ್ನು ಅವನು ಎಂದೂ ಅರಿಯನು. ಕೃತ್ರಿಮ, ಕೌಪಿಲ್ಯ ಮತ್ತು ಕಾಪಟ್ಯ ಈ ಕುಹಕಗುಣತ್ರಯ ಮಂಡಿತನಾದ ಹೈದರನಿಗೆ ನುಡಿಯಂತೆ ನಡೆದು ಜನಮೆಚ್ಚಿಕೆಯನ್ನು ಹೊಂದಬೇಕೆಂದು ತಿಳಿಯುವ ಬಗೆ ಯಾವದು? ಆದ್ದರಿಂದ ಅವನು ಸಂಧಾನವಚನಕ್ಕೆ ಅರದಾಳಹಚ್ಚಿ, "**स्वभाव एवात्र तथातिरिच्यते । यथाप्रकृत्या मधुरंगवांपयः ॥**" ಎಂಬ ವಚನದಂತೆ, ಸಂವತ್ಸರ ಪ್ರತಿಪದೆಯ ದಿವಸ ಮತ್ತೆ ಶಸ್ತ್ರಹಿಡಿದನು. ಆ ದಿವಸ ರಾತ್ರಿ ಪೇಶವೆ ಸರದಾರರು ಉಂಡು ಮಾತಾಡುತ್ತ ಕುಳಿತಿದ್ದರು. ಆಗ ಒಮ್ಮಿಂದೊಮ್ಮೆ ಹೈದರನ ಕಡೆಯ ಜನರು ತೋಫುಗುಂಡುಗಳ ಹೊಡತವನ್ನು ಪ್ರಾರಂಭಿಸಿದರು. ಖಾನನ ಈ ಕೃತ್ರಿಮತನವನ್ನು ಕಂಡು ಪೇಶವೆಸರದಾರರು ಬಹಳ ಸಿಟ್ಟಗೆದ್ದರು. ಅವರು ಯುದ್ಧಸಿದ್ಧತೆಯನ್ನು ಮಾಡಿಕೊಂಡು ಎಡಗಡೆಯ ಪಕ್ಕದಿಂದ ಕೋಟೆಯ ಮೇಲೆ ತೋಫುಗಳನ್ನು ಬಿಡತೊಡಗಿದರು. ತೋಫಿನ ಹೊಡತಕ್ಕೆ ಕೋಟೆಯ ಗೋಡೆಗಳ ಕಲ್ಲುಗಳು ಸಡಲಿ ಬೀಳಲಾರಂಭಿಸಿದವು. ಪಟ್ಟಣದೊಳಗಿನ ಮಾರ್ಗಗಳು ಕಟ್ಟಾಗಿ, ಮನುಷ್ಯರು ಅಡ್ಡಾಡದಂತಾದರು. ಪಟ

† ಈ ನೀಲಕಂಠರಾಯನ ಉತ್ತರಕ್ರಿಯುಗಳನ್ನು ಪಟವರ್ಧನರು ಕಾವೇರಿತೀರದಲ್ಲಿ ಮಾಡಿದರು.

ವರ್ಧನ ರಾಸ್ತೆ ಇತ್ಯಾದಿ ಸರದಾರರು ಕಾವೇರಿಯ ಹಿಂಬದಿಯ ಮಾರ್ಗವನ್ನು ಪ್ರತಿಬಂಧಿಸಿದರು. ಪರಶುರಾಮಭಾವು, ರಾಸ್ತೆ ಮತ್ತು ಮಾಮಾ ಈ ಮೂರ್ತಿತ್ರಯರು ಒಳ್ಳೇ ಚಟುವಟಿಕೆಯಿಂದಲೂ, ಸಾಹಸದಿಂದಲೂ, ಮುತ್ತಿಗೆಯನ್ನು ನಡೆಸಿ ಒಳಗೆ ಹೋಗುವ ಧಾನ್ಯ ಹುಲ್ಲು ಮುಂತಾದ ಸಮಸ್ತ ಸಾಮಗ್ರಿಗಳನ್ನು ಕಟ್ಟುಮಾಡಿದರು. ಹೀಗೆ ಆ ರಣಧೀರರು ಮೈಸೂರಿನ ಕೊಬ್ಬಿದ ಮಹಿಷನನ್ನು ಬಲಿಕೊಡಬೇಕೆಂದು ಭಯಂಕರವಾದ ರಣಯಜ್ಞಕುಂಡವನ್ನು ರಚಿಸಿದರು. ಹೈದರನು ವೈರಿಗಳ ಕಲಿತನವನ್ನು ಕಂಡು ಗಾಬರಿಗೊಂಡನು; ಪೊಂಡಿಚೇರಿಯಲ್ಲಿರುವ ಫ್ರೆಂಚರಿಗೆ ತನ್ನ ಸಹಾಯಕ್ಕೆ ದಂಡು ಕಳಿಸಬೇಕೆಂತಲೂ, ತಾನು ಅವರಿಗೆ ಬೇಡಿದ್ದು ಕೊಡುವೆನೆಂತಲೂ ಪತ್ರ ಬರೆದನು. ಚೈತ್ರವದ್ಯ ಪ್ರತಿಪದೆಯಿಂದ ಮತ್ತೆ ತುಮುಲ ಕಾಳಗವು ಪ್ರಾರಂಭವಾಯಿತು. ಒಂದೂಕಾಲ ತಿಂಗಳವರೆಗೆ ಮುತ್ತಿಗೆಯು ಯಥಾಪ್ರಕಾರ ಸಾಗಿತು. ತೋಫುಗುಂಡುಗಳ ಹೊಡತವು ಎಡಬಿಡದೆ ನಡದೇ ಇತ್ತು. ಆದರೂ ಆ ಬಲವಾದ ಕಿಲ್ಲೆಯು ಮಹಾರಾಷ್ಟ್ರರ ವಶವಾಗಲಿಲ್ಲ. ಆಗ ಮಾಮಾತ್ರ್ಯಂಬಕರಾಯನು ಮುತ್ತಿಗೆಯ ಕ್ರಮವನ್ನು ಮೊದಲಿನಂತೆ ಸಾಗಿಸುತ್ತ, ಸುತ್ತುಮುತ್ತಲಿನ ಸೀಮೆಗಳಲ್ಲಿ ಕಂದಾಯವನ್ನು ಎತ್ತತೊಡಗಿದನು. ಈ ಮುತ್ತಿಗೆಯಲ್ಲಿ ಭಾವು ತನ್ನ ಅದ್ವಿತೀಯ ರಣಕೌಶಲ್ಯವನ್ನು ಪ್ರಕಟಿಸಿದನು. ಹೈದರನ ಅಪದಂಬಿಗೆಯ ನಡೆನುಡಿಗಳನ್ನು ಕಂಡು ಆತನ ಕೋಪಾಗ್ನಿಯು ಹೆಚ್ಚು ಪ್ರಜ್ವಲಿಸಿತು. ಆತನು ಪ್ರಳಯಕಾಲದ ಯಮನಂತೆ ತೋರಿದನು. ಆಗಿನ ಆತನ ಲೋಕಾತೀತವಾದ ಸಮರಸ್ಫೂರ್ತಿಯನ್ನೂ, ತುದಿಮೊದಲಿಲ್ಲದ ಸಿಟ್ಟನ್ನೂ, ಉಗ್ರತರ ನೃಸಿಂಹಸ್ವರೂಪವನ್ನೂ ನೋಡಿದರೆ ಹೈದರನಿಗೆ ತಕ್ಕ ಪ್ರಾಯಶ್ಚಿತ್ತವು ದೊರಕುವದೆಂದು ಭಾಸವಾಗುತ್ತಿತ್ತು. ಮೇಘಾಚ್ಛಾದಿತವಾದ ವಿಶಾಲ ಆಕಾಶಮಂಡಲದಲ್ಲಿ ಚಕಮಕನೆ ಹೊಳೆಯುವ ಮಿಂಚಿನಂತೆ ನಮ್ಮ ಚರಿತ್ರನಾಯಕನು ಯೋಧರಿಂದ ತುಂಬಿದ ಸಂಗ್ರಾಮಭೂಮಿಯಲ್ಲಿ ಪ್ರಕಾಶಿಸುತ್ತ, ತನ್ನ ಸೈನಿಕರೆಲ್ಲರಿಗೆ ಸಮಯೋಚಿತ ಉತ್ತೇಜನವನ್ನು ಕೊಡುತ್ತ, ಅತ್ಯಂತ ಚಾತುರ್ಯದಿಂದ ಕಾದಿ ಹಗೆಗಳನ್ನು ಹಣ್ಣಿಗೆ ತಂದನು. ಆತನು ಕಾಳಗವು ಒಳ್ಳೇ ಭರದಿಂದ ನಡೆದಿರಲು, ತನ್ನ ಬಾಂಧವಸರದಾರರನ್ನು ಕುರಿತು, “ಗೆಳೆಯರೆ, ಧೈರ್ಯವನ್ನು ಬಿಡದೆ ಒಮ್ಮೆಲೆ ಎಲ್ಲರೂ ಹಗೆಗಳನ್ನು ಮುತ್ತಿರಿ.

ಕಿಲ್ಲೆಯು ಬೇಗನೆ ವಶವಾಗುವದು. ಗುಲಾಮನಾದ ಹೈದರನನ್ನು ನಿರ್ನಾಮ ಮಾಡಿಬಿಡುವ ಸುಪ್ರಸಂಗವು ಇದೇ. ಇಲ್ಲಿಯವರೆಗೆ ನಾವು ಕೈಕಾದದ್ದೇ ತಪ್ಪು. ಮುಂದರೆಯರಿ. ಕೋಟೆಗೆ ಲಗ್ಗ ಹತ್ತರಿ" ಎಂದು ಸಾರಿಹೇಳುತ್ತ ಅವರನ್ನು ಹುರಿದುಂಬಿಸುವನು. ನಡುನಡುವೆ ಮಿಕ್ಕ ಪಟವರ್ಧನ ಸರದಾ ರರನ್ನು ಉದ್ದೇಶಿಸಿ, "ವಾಹವ್ವಾ, ವಾಮನರಾವ, ಶಾಬಾಸ ಕೊನೇರರಾವ, ನಿಮ್ಮ ಪರಾಕ್ರಮಕ್ಕೆ ಎಣೆಯಿಲ್ಲ." ಎಂದು ಅವರನ್ನು ಪ್ರೋತ್ಸಾಹಿಸುತ್ತಿದ್ದನು. ಹೀಗೆ ಆ ರಣಧುರಂಧರನು ಒಂದೇಸವನೆ ೪೦-೪೫ ದಿವಸಗಳವರೆಗೆ ಆ ಬಲವಾದ ಕಿಲ್ಲೆಯನ್ನು ಕೈವಶಮಾಡಿಕೊಳ್ಳಬೇಕೆಂದು ಅಪೂರ್ವ ಕಲಿತನದಿಂದ ಕಾದಿ ಹೈದರನನ್ನು ಕೈಕಾಲುಗೆಡಸಿದನು.

ಮೊಟ್ಟಮೊದಲು ಹೈದರ ಟೀಪುಸುಲ್ತಾನರಾದರೂ ಬಹಳ ಶೌರ್ಯ ದಿಂದ ಹೋರಿದರು. ಆದರೆ ಪೇಶವೆಯರ ಪರಮಪರಾಕ್ರಮಿಗಳೂ, ಆಹವ ಅನುಭವಿಕರೂ ಆದ ಸೇನಾಪತಿಗಳು ರಾಜಧಾನಿಯನ್ನು ಅತ್ಯಂತ ನಿಕಟ ತನದಿಂದ ಮುತ್ತಿದ್ದರಿಂದ ಆತನ ಕಡೆಯ ಸಾವಿರಾರು ಶೂರ ಸರದಾರರು ಹತರಾದರು. ದಂಡೆಲ್ಲ ನಿರ್ವಿಣ್ಣವಾಯಿತು. ಸರದಾರ, ಶಿಲೇದಾರರು ತ್ರಸ್ಥರಾಗಿ ಹೋದರು. ಇನ್ನು ಭಾವು ತನ್ನ ಕಯ್ಖಡ್ಗದಿಂದ ತಮಗೇ ಎಲ್ಲ ಕಂಠ ಸ್ನಾನ ಮಾಡಿಸುವನೆಂದು ಆ ತಂದೆಮಕ್ಕಳು ಚಿಂತಿಸಿದರು. ಅವನ ಸೈನ್ಯ ವೆಲ್ಲ ಚಲ್ಲಾಪಿಲ್ಲಿಯಾಯಿತು. ಹೈದರನು ಒಂದುಕಡೆ, ಶೂರಶಾರ್ದೂಲನಾದ ಟೀಪು ಮತ್ತೊಂದುಕಡೆ, ಆತನ ದಂಡಿನ ಜನರು ಒತ್ತಟ್ಟಗೆ. ಹೀಗಾಗಿ ಮೈಸೂರಕರನು ಹಗೆಗಳ ಹುಲಬೆಗೆ ಬಹಳ ಹೈರಾಣನಾದನು. ಅದರಿಂದ ಅವನು ಪುನಃ ಸಂಧಾನಪ್ರಸಕ್ತಿಯನ್ನು ತೆಗೆದನು. ಅಷ್ಟರಲ್ಲಿ ಶ್ರೀಮಂತ ದೊಡ್ಡಮಾಧವರಾಯನ ಪ್ರಕೃತಿಯು ಬಹು ಅಸ್ವಸ್ಥವಾಗಿರುವದೆಂಬ ಬಗ್ಗೆ ರಾಜಧಾನಿಯಿಂದ ಪತ್ರವೂ ಬಂತು. ಇಂಥ ದುರ್ಧರ ಪ್ರಸಂಗದಲ್ಲಿ ಆಗ್ರಹ ಹಿಡಿಯುವದು ಹಿತಕರವಾಗದೆಂದು ವಿಚಾರಿಸಿ, ತಮ್ಮ ಕೃಪಾನಿಧಿಯೂ, ಶೂರನೂ, ಮರ್ಮಜ್ಞನೂ ಆದ ಸ್ವಾಮಿಯ ಅಂತ್ಯ ದರ್ಶನಾಪೇಕ್ಷಿತರಾಗಿ ಪೇಶವೆ ಸರದಾರರು ಹೈದರನ ಸಂಧಾನಪ್ರಸಕ್ತಿಗೆ ಒಪ್ಪಿಕೊಂಡರು.

ಆ ಪ್ರಕಾರ ಹೈದರ-ಪೇಶವೆಯರ ನಡುವೆ ಒಪ್ಪಂದವಾದ* ಬಳಿಕ ಮರಾಠಾ ಸರದಾರರು ಪುಣೆಯ ಹಾದೀ ಹಿಡಿದರು. ಮುಂದೆ ಸ್ವಲ್ಪ ದಿನಗಳಲ್ಲಿ ರಾಜಕಾರ್ಯಚತುರನೂ, ನ್ಯಾಯಿಯೂ, ಕೃಪಾಶೀಲನೂ, ಶೂರನೂ ಆದ ಶ್ರೀಮಂತ ಮಾಧವರಾವ ಬಲ್ಲಾಳ ಪೇಶವೆಯು ಇಸವಿ ಸನ್ನ ೧೭೭೨ನೇ ನವಂಬರ ತಿಂಗಳ ೧೮ನೇ ತಾರಿಖಿನ ದಿವಸ ಥೇವೂರಲ್ಲಿ ಶ್ರೀಗಣಪತಿಯ ಸನ್ನಿಧಾನದಲ್ಲಿ ಸ್ವರ್ಗಸ್ಥನಾದನು. ಆತನ ಪ್ರಿಯಪತ್ನಿಯಾದ ರಮಾಬಾಯಿಯು ಆತನೊಡನೆ ಸಹಗಮನಮಾಡಿದಳು.†

ಹೈದರನ ಮೇಲೆ ಮಾಡಿದ ಈ ದಾಳಿಯು ಸುಮಾರು ಎರಡುವರುಷ ನಡೆದದರಿಂದ ಎಲ್ಲ ಸರದಾರರು ಬೇಸತ್ತು ಹೋಗಿದ್ದರು. ಶಿಪಾಯರೂ ರಾಹುತರೂ ತಿರುಗಿ ಹೋಗುವೆವೆಂದು ಗುಣಗುಟ್ಟತೊಡಗಿದರು. ಯುದ್ಧಕ್ಕೆ ಹೊರಡುವಾಗ್ಗೆ ಇದ್ದ ಅವರ ಆವೇಶವೂ, ವೀರಶ್ರೀಯೂ, ಈಗ ಇದ್ದಿಲ್ಲ.

* ಈ ಒಡಂಬಡಿಕೆಯ ಮುಖ್ಯ ಶರ್ತಗಳು:—

೧ ಶ್ರೀ ಶಿವಛತ್ರಪತಿಯ ಕಾಲಕ್ಕೆ ಮಹಾರಾಷ್ಟ್ರರ ಕಡೆಗೆ ಕರ್ನಾಟಕದ ಯಾವ ಯಾವ ಪ್ರಾಂತಗಳಿದ್ದವೋ ಅವೆಲ್ಲ ಹೈದರನು ಶ್ರೀಮಂತರಿಗೆ ಒಪ್ಪಿಸಬೇಕು.

೨ ಮದಗಿರಿ ಮತ್ತು ಗುರಮಕೊಂಡ ಇವೆರಡು ಕಿಲ್ಲೆಗಳು ಪೇಶವೆಯರ ವಶದಲ್ಲಿರಬೇಕು.

೩ ದಾಳಿಯ ವೆಚ್ಚಕ್ಕಾಗಿ ಹೈದರನು ೩೬ ಲಕ್ಷ ರೋಖ ರೂಪಾಯಿಗಳನು ಕೊಡಬೇಕು.

೪ ಮುಂದೆ ಪ್ರತಿವರುಷ ೧೪ ಲಕ್ಷ ಕಪ್ಪವನ್ನು ತಪ್ಪದೆ ಸಲ್ಲಿಸಬೇಕು.

೫ ಪೇಶವೆಯ ಸಾಮಂತ ಸಂಸ್ಥಾನಿಕನಾದ ಸವನೂರ ನವಾಬನನ್ನು ಸುಲ್ತಾನನು ಪೀಡಿಸಬಾರದು.

† ಈ ಪೇಶವೆ ದಂಪತಿಗಳು ಪರಸ್ಪರಪ್ರೀತಿಪಾತ್ರರಿದ್ದರು. ಮಾಧವರಾಯನ ಅಂತ್ಯಕಾಲದ ಭಾಷಣ, ರಮಾಬಾಯಿಯು ಮಾಡಿದ ಶೋಕ, ಆಕೆಯ ಮನೋಧೈರ್ಯ, ಸಮಯೋಚಿತ ವಿವೇಕ ಮತ್ತು ಕೊನೆಗೆ ಆ ಸತಿತಿಲಕಳು ಮಾಡಿದ ಸಹಗಮನ ಇತ್ಯಾದಿ ಸಂಗತಿಗಳು ಅತ್ಯಂತ ಚಿತ್ತವೇಧಕವಾಗಿರುವವು. ಅವೆಲ್ಲವುಗಳನ್ನು ಯಥಾತಥ್ಯ ವರ್ಣಿಸುವದು ಒಂದುವೇಳೆ ಕೆಲವಂಶದಿಂದ ಸರಿಯೆನಿಸಬಹುದು. ಆದರೆ ನಮ್ಮ ಚರಿತ್ರನಾಯಕನು ಶ್ರೀಮಂತ ದೊಡ್ಡ ಮಾಧವರಾಯನಿರದ್ದರಿಂದ ಆ ಕಥಾಭಾಗವನ್ನು ಇಲ್ಲಿ ಹೇಳಿದರೆ ವಿಷಯಾಂತರವಾಗುವದೆಂಬ ಅಂಜಿಕೆಯುಂಟು.

ಕಾಳಗದಲ್ಲಿ ಶತ್ರುಗಳ ಬಾಣಗುಂಡುಗಳ, ಕತ್ತಿಡಾಲುಗಳ ಹೊಡತಕ್ಕೆ ಗುರಿಯಾಗಿ ಅವರ ಅಸಂಖ್ಯ ಜತೆಯ ಜನರು ಮರಣಹೊಂದಿದ್ದರು. ಇದಲ್ಲದೆ ಎಷ್ಟೋ ಸೋಬತಿಯ ಜನರು ಪ್ರವಾಸದ ಆಯಾಸದಿಂದ ತೀರಿಕೊಂಡಿದ್ದರು. ಯುದ್ಧವು ದೀರ್ಘಕಾಲ ನಡೆದುದರಿಂದ, ತಮ್ಮ ಹೆಂಡರು ಮಕ್ಕಳನ್ನು ನೋಡುವೆವ್ರೋ, ಅಥವಾ ಇಲ್ಲವ್ರೋ ಎಂದು ಅವರು ಚಿಂತಿಸಲಾರಂಭಿಸಿದರು. ಕಾವೇರಿನದಿಯ ಒಂದು ಪಾರ್ಶ್ವದ ಸೈನ್ಯದ ವ್ಯವಸ್ಥೆಯ ಕಾರ್ಯಭಾಗವು ಭಾವೂನ ಪಾಲಿಗೆ ಬಂದಿತ್ತು. ಆತನು ರಾತ್ರಿಯಲ್ಲ ನಿದ್ದೆ ಇಲ್ಲದೆ, ಅನ್ನನೀರುಗಳ ಪರಿವೆ ಇಲ್ಲದೆ, ಕಾಳಗದಲ್ಲಿ ಕಾದಿ ಬಲು ಬೇಸತ್ತಿದ್ದನು; ಹೀಗಾದದರಿಂದ ಅವನ ಪ್ರಕೃತಿಯು ಕ್ಷೀಣವಾಗಿತ್ತು. ಇದಲ್ಲದೆ ತನ್ನ ಪ್ರಾಣಕ್ಕೆ ಪ್ರಾಣಕೊಡುವ ರಣಶೂರರಾದ ಅವನ ಕಕ್ಕನ ಮಕ್ಕಳು ಕಲಿತನದಿಂದ ಕಾದಿ ದೈವಾಧೀನರಾದದರಿಂದ ಆತನು ಚಿಂತಿತಮನಸ್ಕನಾಗಿದ್ದನು. ಅವರ ಚಿತ್ತಕ್ಕೆ ಸ್ವಲ್ಪಾದರೂ ಸಮಾಧಾನವಿದ್ದಿಲ್ಲ. ಆತನ ಸ್ವಾರಜನರು ತಿರುಗಿ ಹೋಗುತ್ತೇವೆಂದು ಗಂಟುಬಿದ್ದರು. ಕಡೆಗೆ ಭಾವು ಬಹಳ ಬೇಸತ್ತು ಸೇನಾಪತಿ ತ್ರ್ಯಂಬಕರಾಯನಿಗೆ ತನಗೆ ಅಪ್ಪಣೆಕೊಡಬೇಕೆಂದು ಬಿನ್ನವಿಸಿದನು. ಆದರೆ ಪಟವರ್ಧನ ಸರದಾರರ ಸಕಾಲಿಕ ಸಹಾಯವನ್ನೂ, ಅವರ ಲೋಕಾತೀತವಾದ ರಣ-ಸಾಹಸವನ್ನೂ ಆತನು ಮೊದಲಿನಿಂದ ಅರಿತವನಾದ್ದರಿಂದ ಸೇನಾಪತಿಯು ಸಂಗ್ರಾಮಸಿಂಹನಾದ ಭಾವುನನ್ನು ಬಿಡಲಿಲ್ಲ. ಆಗ ಈ ಗೋಳಾಟವೂ, ಈ ಪ್ರಭುಸೇವೆಯೂ ಬೇಡವೆಂದು ಪರಶುರಾಮಪಂತನಿಗೆ ಅನಿಸಿತು. ಅವನು ತನ್ನ ಕಕ್ಕನಾದ ಗೋವಿಂದಹರಿಗೆ ಇದೆಲ್ಲವನ್ನು ಪತ್ರ ಬರೆದು ತಿಳಿಸಿದನು. ಅದಕ್ಕೆ ಗೋವಿಂದಹರಿಯು ವಿಚಾರ ಪರಿಪ್ಲುತವಾದ ಉಪದೇಶಪರ ಉತ್ತರವನ್ನು ಬರೆದು ಭಾವುನನ್ನು ಸಮಾಧಾನ ಮಾಡಿದನು; ಮತ್ತು ಈ ವಿಷಯವಾಗಿ ಶ್ರೀಮಂತರಿಗೆ ಪತ್ರ ಬರೆದು ಎಲ್ಲರಿಗೂ ಮರಳಿ ಬರುವದಕ್ಕೆ ಬೇಗ ಅಪ್ಪಣೆಯನ್ನು ಕೊಡಿಸುವೆನೆಂದು ಸಹ ತಿಳಿಸಿದನು.

ಗೋವಿಂದಹರಿಯು ಶ್ರೀಮಂತರಿಗೆ ಬರೆದ ಪತ್ರಕ್ಕೆ, ಮಾಧವರಾವ ಪೇಶವೆಯು ಬರೆದ ಉತ್ತರದ ತಾತ್ಪರ್ಯವು:—ಗಂಡುಗಲಿಯಾದ ಗೋಪಾಳರಾಯನು ಮರಣಹೊಂದಿದನು. ಆತನ ಮರಣದಿಂದ ಪೇಶವಾಯಿಗೆ ಎಂದೂ ತುಂಬಬಾರದಂಥ ಹಾನಿಯಾಗಿರುವದು. ಈಶ್ವರೇಚ್ಛೆಗೆ ಉಪಾ

ಯವಿಲ್ಲ. ಆತನ ತರುವಾಯ ಪರಶುರಾಮಭಾವು, ವಾಮನರಾವ ಇವರು ಬಳ್ಳೇ ಸಾಹಸದಿಂದ ವೈರಿಗಳೊಡನೆ ಯುದ್ಧಮಾಡುತ್ತಿರುವರು. ನೀಲ ಕಂಠರಾಯನೂ ಪರಾಕ್ರಮದಿಂದ ಹೋರಾಡಿ ಕಡೆಗೆ ರಣಭೂಮಿಯಲ್ಲಿ ಬಿದ್ದು ಮಡಿದನು. ಸಾಂಪ್ರತಕ್ಕೆ ಪಟವರ್ಧನ ಸೈನ್ಯದ ಸರ್ವಭಾಗವು ಇವ ರಿಬ್ಬರ ಪರಾಕ್ರಮವನ್ನೂ, ಯುದ್ಧಚಾತುರ್ಯವನ್ನೂ ದೃಢನಿಶ್ಚಯವನ್ನೂ ಪೂರಾ ಅವಲಂಬಿಸಿರುವದು. ಸೇನಾಪತಿ ತ್ರ್ಯಂಬಕರಾವ ಇತ್ಯಾದಿ ಸರದಾ ರರು ಹೈದರನ ರಾಜಧಾನಿಗೆ ಮುತ್ತಿಗೆ ಹಾಕಿ ಅವನನ್ನು ಹಣ್ಣಿಗೆ ತಂದಿರು ವರು. ತೋಫುಗುಂಡುಗಳ ಹೊಡತವು ತೆರಪಿಲ್ಲದೆ ಸಾಗಿರುವದು. ನಗರ ದೊಳಗಿನ ಬೀದಿಗಳು ಕಟ್ಟಾಗಿರುವವು. ಈ ಪ್ರಕಾರ ನಮ್ಮ ಸರದಾರರು ಸಾಹಸದಿಂದ ಯುದ್ಧವನ್ನು ನಡೆಸುತ್ತಿದ್ದದರಿಂದ, ಈ ಕಾಳಗದ ಕೊನೆಯು ಪರಿಣಾಮವು ಬೇಗನೆ ಆಗುವದು. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ನಾಮಾಂಕಿತ ಪಟವರ್ಧನ ಸರದಾರವೀರರನ್ನು ತಿರುಗಿ ಕರೆಸಿಕೊಳ್ಳುವ ಬಗೆಯಾವದು? ಕಾಳಗದ ಕೆಲಸವು ತೀರಿದ ಬಳಿಕ ನಿಮ್ಮ ಪತ್ರದಂತೆ ಎಲ್ಲ ವ್ಯವಸ್ಥೆಯನ್ನು ಮಾಡುವೆವು. ಇತ್ಯಾದಿ ಶ್ರೀಮಂತರ ಈ ಆಜ್ಞಾಪತ್ರದ ಮೇಲಿಂದ ಪೇಶವೆ ಸರಕಾರದವರು ತಮ್ಮ ಸರದಾರರನ್ನು ಹ್ಯಾಗೆ ಮನ್ನಿಸು ತ್ತಿದ್ದರೆಂಬುವದೂ, ಆಗ್ಗೆ ಪಟವರ್ಧನರ ಪರಾಕ್ರಮವು ಎಷ್ಟು ಏಳ್ಗೆಯನ್ನು ಹೊಂದಿತ್ತೆಂಬದೂ ತಿಳಿದುಬರುತ್ತದೆ; ಮತ್ತು ಆಗ್ಗೆ ನಮ್ಮ ಚರಿತ್ರನಾಯ ಕನಾದ ಪರಶುರಾಮಭಾವೂನ ಶೌರ್ಯ, ಸಾಹಸ ಇತ್ಯಾದಿ ಗುಣಗಳ ಅಭಿ ವೃದ್ಧಿಯು ಬಿದಿಗೆಯ ಚಂದ್ರನಂತೆ ಆಗುತ್ತ ನಡೆದಿತ್ತು ಎಂಬ ಸಂಗತಿಯೂ ದರೂ ಸಹಜವಾಗಿ ಅಭಿವ್ಯಕ್ತವಾಗುವದು.

ಈ ಪ್ರಕಾರ ಬಾಳಾಜಿಬಾಜೀರಾಯನ ಕಾಲಕಿರ್ದಿಯಲ್ಲಿ ಉದಯ ವಾದ ಪರಶುರಾಮಭಾವೂನ ಪ್ರಥಮ ಪರಾಕ್ರಮವು ಉತ್ತರೋತ್ತರವನ್ನು ಹೊಂದುತ್ತ ಶ್ರೀಮಂತ ಮಾಧವರಾವ ಬಲ್ಲಾಳನ ಕಾಲಕಿರ್ದಿಯಲ್ಲಿ ಆ ಪರಾ ಕ್ರಮದ ಪ್ರಕಾಶಪುಂಜವು ಮೈಸೂರಸೀಮೆಯ ನಿಬಿಡತರ ಅಡವಿಗಳನ್ನು ಬೆಳಗಿಸಿ ಹೈದರನೆಂಬ ಹೊನ್ನೀಹುಳದ ಬೆಳಕನ್ನು ಕುಂದಿಸಿಬಿಟ್ಟಿತು. ಮಾಧವರಾಯನ ತರುವಾಯ ಆತನ ತಮ್ಮನಾದ ನಾರಾಯಣರಾಯನು ಪೇಶವೆಪದಕ್ಕೆ ಅಧಿಕಾರಿಯಾದನು. ಆತನಾದರೂ ಭಾವೂನನ್ನು ಚನ್ನಾಗಿ ಪ್ರೀತಿಸುತ್ತಿದ್ದನು. ಅವನು ಭಾವೂಗೆ ಚಿಕ್ಕೋಡಿ, ಮನೋಳಿ ಪರಗಣೆಗ

ಳನ್ನು ಸರಂಜಾಮು ಹಾಕಿಕೊಟ್ಟು ಹೊಸ ಸನದು ಮಾಡಿಕೊಟ್ಟನು. ಮುಂದೆ ತುಸು ದಿವಸಗಳಲ್ಲಿ ಈ ನವೀನ ಪೇಶವೆಯ ಕೊಲೆಯಾಯಿತು. ಅದರ ವರ್ಣನೆಯು ಮುಂದಿನ ಅಧ್ಯಾಯದಲ್ಲಿ ಮಾಡಲ್ಪಟ್ಟಿರುವದು.

---

## ೬ ನೇ ಅಧ್ಯಾಯ.

### ರಘುನಾಥರಾಯನ ನಿಗ್ರಹವು.

ಇಸವಿ ಸನ್ನ ೧೭೭೩ ರ ಅಗಸ್ಟ ತಿಂಗಳಲ್ಲಿ ಶ್ರೀಮಂತ ನಾರಾಯಣರಾವ ಪೇಶವೆ ಇವರ ಕೊಲೆಯು ಪುಣೆಯಲ್ಲಿ ಆಯಿತು. ರಾಜ್ಯಲೋಭದ ದುರ್ನಿವಾರವಾದ ಆಶಾಪಾಶರಾದ ರಘುನಾಥರಾಯನೂ, ಮತ್ತು ಆತನ ಹೆಂಡತಿಯಾದ ಆನಂದಿಬಾಯಿಯೂ, ಕೊಲೆಗಡಕರಿಂದ ಈ ಅಘೋರ ಕೃತಿಯನ್ನು ಕಡುಕಟಕತನದಿಂದ ಕೊನೆಗಾಣಿಸಿದರು. ಅವರ ಈ ನೀಚ ಕೃತ್ಯದಿಂದ ಅವರ ಇಷ್ಟಕಾರ್ಯವಾದರೂ ಸಫಲವಾಗಲಿಲ್ಲ. ಆದರೆ ಸುಯಂತ್ರಿತವಾಗಿ ಸಾಗಿಬಂದ ಪೇಶವೆ ಸಾಮ್ರಾಜ್ಯದ ಮೇಲೆ ಅಘಟಿತ ಪ್ರಸಂಗವು ಮಾತ್ರ ಒದಗಿತು. ದೇಶದಲ್ಲಿ ಬಂಡುಗಳು ಎದ್ದವು, ಸರದಾರರು ತಮ್ಮತಮ್ಮೊಳಗೆ ಕಡಿದಾಡತೊಡಗಿದರು. ಪೇಶವಾಯಿಯಲ್ಲಿ ಯಾದವೀ ಕಲಹವು ಪ್ರಾರಂಭವಾಯಿತು. ಕೊಲೆಸುಲಿಗೆಗಳು ನಡೆದವು. ಪ್ರಜೆಗಳು ಸುಖಶಾಂತಿಗಳಿಗೆ ಎರವಾದರು. ಪರರಾಜರು ಎದ್ದು ಕೂತರು. ಯಾರಿಗೆ ಮಹಾರಾಷ್ಟ್ರಾಧಿಪತ್ಯದ ಭೀತಿಯು ಇತ್ತೋ, ಯಾರು ಪೇಶವೆಸರಕಾರದ ಅನ್ನವನ್ನುಂಡು ಅವರ ಪ್ರತಾಪಕ್ಕೆ ಬೆದರಿ ತಲೆವಾಗಿ ನಡಕೊಳ್ಳುತ್ತಿದ್ದರೋ ಅವರೆಲ್ಲರು ಜಾಗೃತರಾಗಿ, ಕಾರಭಾರದಲ್ಲಿ ಕೈಹಾಕಿ ಗೊಂದಲವೆಬ್ಬಿಸ ತೊಡಗಿದರು. ಈ ಪ್ರಕಾರ ಒಂದಲ್ಲ, ಎರಡಲ್ಲ, ಅನೇಕ ಅರಿಷ್ಟಗಳು ಉದ್ಭವಿಸಿ, ಎಲ್ಲಕಡೆಗೂ ರಾಜಕ್ರಾಂತಿಯು ಉಪಸ್ಥಿತವಾಯಿತು. ಇರಲಿ, ಇವೆಲ್ಲ ಸಂಗತಿಗಳನ್ನು ಸಾದ್ಯಂತ ವಿವರಿಸುವದು ನಮ್ಮ ಕಾರ್ಯಭಾಗ ವಲ್ಲ; ಆದರೆ ಇಂಥ ಬಿಕ್ಕಟ್ಟಿನ ಸಮಯದಲ್ಲಿ ನಮ್ಮ ಚರಿತ್ರನಾಯಕನು ಹ್ಯಾಗೆ ವರ್ತಿಸಿದನೆಂಬುದನ್ನು ಮಾತ್ರ ಕ್ರಮಶಃ ಹೇಳುತ್ತ ಹೋಗುವೆವು.

ಪೇಶವೆ ನಾರಾಯಣರಾಯರ ಕೊಲೆಯಾದ ತರುವಾಯ ರಘುನಾಥರಾಯನು ಪೇಶವೆಪದಕ್ಕೆ ಬಂದನು. ಆದರೆ ರಾಜಕಾರ್ಯಚಾಲಕರಾದ ಪ್ರಧಾನರಿಗೂ ಆತನಿಗೂ ಮೊದಲಿನಿಂದ ವೈಮನಸ್ಸು ಇದ್ದೇ ಇತ್ತು. ಅವರು ರಘುನಾಥರಾಯನ ಕೈಯಲ್ಲಿ ಕೆಲಸಮಾಡಬಾರದೆಂದು ಉದ್ಯೋಗ ನಡಸಿದರು. ಈ ಮಸಲತ್ತಿಗೆ ಅತಿಜಾಣನೆಂದು ಇತಿಹಾಸಪ್ರಸಿದ್ಧನಾದ ಬಾಳಾಜಿ ಜನಾರ್ಧನ ಉರ್ಫ ನಾನಾಫಡಣವೀಸನೇ ಮುಖ್ಯನು. ರಘುನಾಥರಾಯನ ಸೈನ್ಯವು ದೊಡ್ಡದಿದ್ದದ್ದಲ್ಲದೆ ಆತನು ಮಹಾ ಶೂರನಾಗಿದ್ದನು. ಆದದರಿಂದ ಸರದಾರರ ಸಹಾಯವಿಲ್ಲದೆ ತನ್ನ ಮನೀಷೆಯು ಈಡೇರದೆಂದು ತಿಳಿದು ನಾನಾನು ಕೆಲವು ಸರದಾರರನ್ನು ತನ್ನ ಕಡೆಗೆ ಮಾಡಿಕೊಂಡನು. ಭಾವು ಮುಂತಾದ ಪಟವರ್ಧನಸರದಾರರು ನಾನಾನ ಸ್ನೇಹಿಗಳು. ಅದರಿಂದ ಅವರೆಲ್ಲರು ಆ ಮಸಲತ್ತಿನಲ್ಲಿ ಕೂಡಿಕೊಂಡರು. ರಘುನಾಥರಾಯನನ್ನು ಚನ್ನಾಗಿ ನಿಗ್ರಹಿಸಬೇಕೆಂದು ಅವರೆಲ್ಲರು ನಿಶ್ಚಯಮಾಡಿ ಉದ್ಯೋಗ ನಡೆಸಿದರು; ನಾನಾನು ತನ್ನ ಒಳಸಂಚನ್ನು ಬಹಳ ಗುಪ್ತರೀತಿಯಿಂದ ನಡೆಸಿದ್ದನು. ಆತನು ರಘುನಾಥರಾಯನಿಗೆ ಅನುಮಾನವು ಹುಟ್ಟದಂತೆ ತೋರುಗಾಣಿಕೆಯಲ್ಲಿ ಆತನೊಡನೆ ಎಲ್ಲರೂ ನಯಭಯದಿಂದ ವರ್ತಿಸತಕ್ಕದ್ದೆಂದು ಎಲ್ಲ ಸಂಚುಗಾರರಿಗೆ ಸೂಚಿಸಿದ್ದನು.

ತನ್ನ ದುಷ್ಟಕೃತ್ಯದಿಂದ ಪ್ರಜಾಪ್ರೇಮವು ಕಡಿಮೆಯಾಗಿ ಅವರು ಕಲುಷಿತಮನಸ್ಕರಾಗಿರುವರು; ಕಾರಣ ದಿಗ್ವಿಜಯಕ್ಕೆ ಹೊರಟು ಎಲ್ಲರ ಮೇಲೆ ತನ್ನ ವರ್ಚಸ್ಸು ಕೂಡ್ರಿಸಿಬರುವ ಇಚ್ಛೆಯಿಂದ ರಘುನಾಥರಾಯನು ನಿಜಾಮನ ಮೇಲೆ ದಾಳೀ ಮಾಡುವ ಉದ್ಯೋಗಕ್ಕೆ ಹತ್ತಿದನು. ಪೂರ್ವಪರಿಪಾಠದಂತೆ ತಮ್ಮ ತಮ್ಮ ದಂಡಿನೊಡನೆ ಬರಬೇಕೆಂದು ಎಲ್ಲ ಮಾಂಡಲಿಕಸರದಾರರಿಗೆ ಪತ್ರಗಳು ಕಳಿಸಲ್ಪಟ್ಟವು. ಭಾವು ಮುಂತಾದ ಪಟವರ್ಧನ ಸರದಾರರಿಗೂ ಪತ್ರಗಳು ಬಂದವು. ಅದರಲ್ಲಿ “ ದಂಡು ಕೂಡಿಸುವ ಯತ್ನ ಮಾಡರಿ. ಹುಜೂರ ಸೈನ್ಯವು ಹೊರಟಿತೆಂದರೆ ಎಲ್ಲರೂ ಹೊರಟು ಬರಬೇಕು. ಈಗ ೩೦೦ ಸ್ವಾರರೊಡನೆ ಯಾರಾದರೊಬ್ಬರು ರಾಜಧಾನಿಗೆ ಬಂದು ಶ್ರೀಮಂತರನ್ನು ಕಾಣಬೇಕು.” ಇತ್ಯಾದಿ ಸಂಗತಿಯು ಲಿಖಿತವಾಗಿತ್ತು. ಇತ್ತ ನಾನಾಫಡಣವೀಸನು “ ಅವಸರ ಮಾಡಬಾರದು, ಈಗ ಭಾವೂನ ಸಂಗಡ ಕೆಲ ಸ್ವಾರರನ್ನು ಕೊಟ್ಟು ಕಳುಹರಿ ”

ಎಂದು ಗೌಪ್ಯವಾಗಿ ಹೇಳಿಕಳುಹಿಸಿದ್ದನು. ಆ ಮೇರೆಗೆ ಭಾವು ಪುಣೆಗೆ ಬಂದು ಮುಟ್ಟಿದನು.

ನಾನಾ, ಸಖಾರಾಮಬಾಪು ಮುಂತಾದ ಪ್ರಧಾನರು, ಫಡಕೆ, ಭಾವು ಇತ್ಯಾದಿ ಸರದಾರ, ಶಿಲೇದಾರರನ್ನು ಕೂಡಿಕೊಂಡು ರಾಘೋಬನು ನಿಜಾಮನಮೇಲೆ ಸಾಗಿನಡೆದನು. ನವಂಬರ ತಿಂಗಳಲ್ಲಿ ಪೇಶವೆ-ನಿಜಾಮರ ದಂಡುಗಳು ಬೇದರದ ಹತ್ತರ ಪರಸ್ಪರ ಭೆಟ್ಟಿಯಾದವು. ಅಲ್ಲಿ ಒಂದು ಚಿಕ್ಕ ಕಾಳಗವೆಸಗಿತು. ಅದರಲ್ಲಿಯೇ ನಿಜಾಮನು ಸೋತು ಹಣ್ಣಿಗೆ ಬಂದು ಒಪ್ಪಂದ ಮಾಡಿಕೊಂಡನು; ಅದರಲ್ಲಿ ಆತನು ೫೦ ಲಕ್ಷ ಪ್ರಾಪ್ತಿಯ ಪ್ರಾಂತವನ್ನು ಪೇಶವೆಯನಿಗೆ ಕೊಡಬೇಕೆಂದು ಗೊತ್ತಾಯಿತು.

ಬೇದರದ ಒಪ್ಪಂದವಾದ ಬಳಿಕ ರಘುನಾಥರಾಯನು ಕಲಬುರ್ಗಿಯಲ್ಲಿ ಕೆಲವು ದಿವಸಗಳನ್ನು ಕಳೆದನು. ಇಷ್ಟರಲ್ಲಿ ಔರಂಗಾಬಾದದ ಕಡೆಗೆ ಸಾಬಾಜಿ ಭೋಸಲೆಯು ಬಂಡಾಯಹೂಡಿದ ಸುದ್ದಿಯು ಹತ್ತಿದರಿಂದ ರಘುನಾಥರಾಯನು ಆತನ ಪಾರುಪತ್ಯಕ್ಕಾಗಿ ಪೇಠೆ ತ್ರ್ಯಂಬಕರಾಯನನ್ನು ದಂಡುಕೊಟ್ಟು ಕಳಿಸಿದನು. ರಾಘೋಬನ ಸಂಗಡ ಇದ್ದ ಆತನ ವಿರುದ್ಧ ಪ್ರಧಾನರು ಇಂಥ ಸಂಧಿಯನ್ನು ನಿರೀಕ್ಷಿಸುತ್ತಿದ್ದರು; ಆತನ ಹಿತಚಿಂತಕ ಸರದಾರರು ಆತನ ಸಂಗಡ ಇರುವತನಕ ತಮ್ಮ ಬೇಳೆಯು ಬೇಯದೆಂದು ಅವರು ಪೂರಾ ಅರಿತಿದ್ದರು. ಸಾಬಾಜಿಯನ್ನು ದಂಡಿಸುವದಕ್ಕಾಗಿ ರಘುನಾಥರಾಯನ ಕೆಲವು ದಂಡು ಹೋದಬಳಿಕ ಆತನ ಬಳಿಯಲ್ಲಿ ಉಳಿದ ದಂಡು ತೀರಾ ಸಣ್ಣದಿತ್ತು. ಅದರಿಂದ ಅವರು ಆತನ ಮೇಲೆ ತಿರಿಗಿಬೀಳುವ ಸಮಯವು ಇದೇ ಎಂದು ಭಾವಿಸಿದರು. ಮುಂದೆ ರಘುನಾಥರಾಯನು ಹೈದರನ ರಾಜ್ಯವನ್ನು ಒಳನುಗ್ಗಿದನು. ಕರ್ನಾಟಕಪ್ರಾಂತದಲ್ಲಿ ತನ್ನ ದರ್ಪು ಕೂಡ್ರಿಸಬೇಕೆಂಬುವದೇ ಆತನ ಮನಸ್ಸಿನ ಉದ್ದೇಶವು. ಹೀಗೆ ರಘುನಾಥರಾಯನು ರಣಕಂದನ-ವಿಚಾರದಲ್ಲಿ ತೊಡಕಿದರಿಂದ ಆತನ ಹಿತಶತ್ರುಗಳಾದ ನಾನಾ ಮುಂತಾದವರಿಗೆ ಆದ ಆನಂದವನ್ನು ಹೇಳಲಾಸಲ್ಲ. ತಮ್ಮ ಅಂತರಂಗ ಉದ್ದೇಶವು ಈಡೇರುವ ಸುಲಭ ಮಾರ್ಗವು ಅನುಕೂಲಿಸಿದ್ದನ್ನು ಕಂಡು, ನಾನಾ, ಬಾಪು ಇವರಿಬ್ಬರು ಏನೊಂದು ನೆವ ಹೇಳಿ ಪುಣೆಗೆ ಬಂದರು. ಮುಂದೆ ಗಣಪತರಾವ ರಾಸ್ತೆ, ಬಾಜೀರಾವ ಬಾರಾಮತಿಕರ, ಮೋರೋಬಾ ಫಡಣವೀಸ ಇತ್ಯಾದಿ ಒಳಸಂಚುಗಾರರು

ಒಂದಿಲ್ಲೊಂದು ನೆವತೆಗೆದು ಒಬ್ಬರಹಿಂದೊಬ್ಬರು ರಾಜಧಾನಿಗೆ ಬಂದು ಸೇರಿದರು.

ಪ್ರಮುಖ ಪ್ರಧಾನರು ಮರಳಿ ಹೋಗಹತ್ತಿದರಿಂದ ಅವರು ಸುಮ್ಮನೆ ಕೂಡ್ರದೆ ಒಂದಿಲ್ಲೊಂದು ಬಗೆಯ ರಾಜ್ಯಕಾರಸ್ಥಾನವನ್ನು ರಚಿಸದೆ ಬಿಡ ರೆಂದು ರಘುನಾಥರಾಯನ ಹಿತಚಿಂತಕರು ತರ್ಕಿಸಿದರು. ಕೆಲವರು ಅಹ್ಮದನಗರ ಕಿಲ್ಲೆಯಲ್ಲಿ ಸೆರೆಯಾಳಾಗಿರುವ ಸದೋಬನನ್ನು ಮುಕ್ತಮಾಡಿ, ಆತನನ್ನು ಪೇಶವೆ ಗಾದಿಯಮೇಲೆ ಕೂಡ್ರಿಸುವರೆಂತಲೂ, ಮತ್ತೆ ಕೆಲವರು ಸಾತಾರೆಯ ಛತ್ರಪತಿಯನ್ನು ಬಿಡುಗಡೆ ಮಾಡುವರೆಂತಲೂ, ತಮ್ಮ ಮನ ಬಂದ ಹಾಗೆ ಮಾತಾಡತೊಡಗಿದರು.

ಇತ್ತ ಪುಣೆಗೆ ಬಂದ ಪ್ರಧಾನಜನರು ತಮ್ಮ ಒಳಸಂಚನ್ನು ಪೂರ್ಣ ಮಾಡಿಕೊಂಡು ಅದನ್ನು ಕಡೆಗಾಣಿಸಿಬಿಟ್ಟರು. ಅದು ಹ್ಯಾಗಂದರೆಃ—ಆಗ್ಗೆ ಶ್ರೀಮಂತ ನಾರಾಯಣರಾಯರ ಧರ್ಮಪತ್ನಿಯಾದ ಗಂಗಾಬಾಯಿಯು ಗರ್ಭಿ ಣಿಯಿದ್ದಳು; ಆಕೆಯನ್ನು ಒಯ್ದು ಪುರಂಧರಗಡದಲ್ಲಿ ಭದ್ರವಾಗಿಟ್ಟು, ಕಾವ ಲಿಗೆ ಪಟವರ್ಧನಸರದಾರರನ್ನು ನೇಮಿಸಿದರು. ಗಂಗಾಬಾಯಿಯ ಹೆಸರಿ ನಿಂದ ರಾಜಕಾರಭಾರವನ್ನು ಪ್ರಾರಂಭಮಾಡಿ, ರಘುನಾಥರಾಯನ ಪಕ್ಷದ ಜನರನ್ನು ಸೆರೆಹಿಡಿದರು. ಇದಲ್ಲದೆ ಭೋಸಲೆ ನಿಜಾಮರಿಗೆ ತಮ್ಮ ಬೆನ್ನು ಗಟ್ಟಬೇಕೆಂದು ಪತ್ರಮುಖದಿಂದ ತಿಳಿಸತೊಡಗಿದ್ದರು. ಇತ್ತ ರಘುನಾಥ ರಾಯನೊಡನೆ ಇದ್ದ ಭಾವು ಮೊದಲಾದ ಸರದಾರರು ಮುಸಲತ್ತಿನಲ್ಲಿ ಮಾತುಕಥೆಯಾದ ಪ್ರಕಾರ ರಾಜಧಾನಿಯ ಸಮಾಚಾರವು ಕೃಷ್ಣದಾವ ಬಳವಂತನ ವಿದ್ಯಮಾನ ತಿಳಿಯುತ್ತಲೆ, ಪೇಶವೆಯನ ಮೇಲೆ ತಿರಿಗಿ ಬೀಳು ವದಕ್ಕೆ ಸಿದ್ಧರಿದ್ದರು. ರಘುನಾಥರಾಯನ ಕೆಲ ಹಿತಚಿಂತಕರು ಈ ಗುಪ್ತ ವೃತ್ತಾಂತವನ್ನು ಆತನಿಗೆ ತಿಳಿಸಿ ಸೂಚಿಸಿದ್ದು—“ ನಿಮ್ಮ ಸರದಾರರೆಲ್ಲರು ಒಡದಿರುವರು. ಸಾವಧರಾಗಿರುವದು ವಿಹಿತವು; ಪ್ರತಿನಿಧಿಗಳ ಮೇಲೆ ಲಕ್ಷ್ಯ ವಿಡಬೇಕು. ” ಆಗ ಆ ಬ್ರಹ್ಮಘ್ನನು ವಿಚಾರಮಾಡತೊಡಗಿದನು. ‘ ಯಾರ ನ್ನು ನಂಬಬೇಕು, ಯಾರನ್ನು ನಂಬಬಾರದು, ಮಿತ್ರನು ಯಾರು, ವೈರಿ ಯು ಯಾರು ’ ಎಂಬದು ತಿಳಿಯದಾಯಿತು. ಈ ಪ್ರಕಾರ ಆತನು ವ್ಯಗ್ರ ಚಿತ್ತನಾಗಿ ಪ್ರತಿನಿಧಿಯನ್ನು ಕರೆಸಿ ಆತನಿಗೆ ಅಂದದ್ದು:—“ ನಿನ್ನ ಬಳಿಯ ಲ್ಲಿ ೩೦೦ ಸ್ವಾರರು ಮಾತ್ರ ಇರುವ ನೇಮವುಂಟು. ಹೀಗಿದ್ದರೂ, ನೀನು

೪೦೦೦ ಸ್ವಾರರನ್ನು ಇಟ್ಟುಕೊಂಡಿರುವಿ. ಇದರ ಅರ್ಥವೇನು ? ” ಪ್ರತಿನಿಧಿಯು ಆ ಪ್ರಶ್ನೆಗೆ ನಿರುತ್ತರನಾದನು. ಕೂಡಲೆ ರಘುನಾಥರಾಯನು ಮುರಾರರಾವ ಘೋರಪಡೆ ಸೇನಾಪತಿಯನ್ನು ಕರೆದು, ಪ್ರತಿನಿಧಿಯ ಪಾಳಯವನ್ನು ಸುಲಿಯಬೇಕೆಂದು ಆಜ್ಞಾಪಿಸಿದನು. ಆಗ ಸೇನಾಪತಿಯು “ ಸರಕಾರದ ಶತ್ರುಗಳಿದ್ದರೆ ಹೇಳರಿ, ಅವರನ್ನು ಕಾದಿ ಸೋಲಿಸಿಬರುವೆನು; ಆದರೆ ಗೃಹಕಲಹದಲ್ಲಿ ಕೈಹಾಕಿ ಕತ್ತಿಯನ್ನು ಎತ್ತಲಾರೆನು ” ಎಂದು ಸ್ಪಷ್ಟವಾಗಿ ಹೇಳಿದನು. ಆಮೇಲೆ ರಘುನಾಥರಾಯನು ಪರಶುರಾಮಭಾವು, ವಾಮನರಾವ ಇತ್ಯಾದಿ ಸರದಾರರಿಗೂ ಅದರಂತೆ ಆಪ್ಪಣೆ ಮಾಡಿದನು. ಅವರೂ ಸೇನಾಪತಿಯ ಕಿತ್ತೆಯನ್ನು ತೀಡಿದರು. ಆಗ ಮಾತ್ರ ಸಂಗಡವಿರುವ ಸರದಾರರು ಒಡೆದಿರುವರೆಂದು ಮನಗಂಡು, ರಘುನಾಥರಾಯನು ಪುಣೆಯ ಹಾದೀ ಹಿಡಿದನು.

ವಾಚಕರೇ ಕಾಲಗತಿಯು ವಿಚಿತ್ರವಾದದ್ದು. ಅದನ್ನು ಕಂಡುಹಿಡಿಯುವ ಪ್ರಜ್ಞೆಯು ಯಾರಿಗೂ ಇಲ್ಲ. ಪೇಶವೆ ಕುಲದೀಪಕನಾದ ಮಾಧರಾವ ಬಲ್ಲಾಳನ ಕಾಲಕಿರ್ದಿಯಲ್ಲಿ ಯಾವ ಗಂಡುಗಲಿಯಾದ ಪರಶುರಾಮಭಾವು ಶತ್ರುಗಳೊಡನೆ ಕಲಿತನದಿಂದ ಕಾದುತ್ತಿದ್ದನೋ ಆತನೇ ಈಗ ಪೇಶವೆಯರ ಒಳಜಗಳದಲ್ಲಿ ಸಿಕ್ಕು, ರಘುನಾಥರಾಯನೊಡನೆ ಸಂಚರಿಸಬೇಕಾಯಿತು. ಯಾವ ಪಟವರ್ಧನ ಪಟುಭಟರು ಹೈದರ, ಟೀಪೂ ಮುಂತಾದ ಪ್ರಚಂಡವೈರಿಗಳ ಚಂಡನೀಡಾಡಲು ಸಮರ್ಥರೋ ಅವರು ಈಗ ಯಃಕಶ್ಚಿತ ಕಾವಲುಗಾರರಂತೆ ಪುರಂಧರದಲ್ಲಿ ಗಂಗಾಬಾಯಿಯ ಮೇಲೆ ಪಹರೆ ಮಾಡಬೇಕಾಯಿತು. ಯಾವ ಶ್ರೀವರ್ಧನಕರನ ವಂಶಜರ ಪ್ರತಾಪರವಿಯ ಪರಾಕ್ರಮಕ್ಕೆ ಇಡೀ ಭರತಖಂಡವು ಬೆದರಿ ಹೋಗುತ್ತಿತ್ತೋ ಅವರ ಮನೆಯಲ್ಲಿ ಬಹುದಿವಸ ನೆಲೆಗೊಂಡ ಸುಖ-ಶಾಂತಿ-ಒಕ್ಕಟ್ಟುಗಳು ವಿಲುಪ್ತವಾಗಿ, ಪೇಶವೆ ಮತ್ತು ಪೇಶವಾಯಿಯ ಮುಂದಿನ ಎಲ್ಲ ಭಾರವು ಪರಶುರಾಮಭಾವು, ಹರಿಪಂತ ಫಡಕೆ ಮುಂತಾದ ಸರದಾರರ ಬಾಹುಬಲದಮೇಲೆಯೂ ನಾನಾ ಮೊದಲಾದ ಪ್ರಧಾನರ ಬುದ್ಧಿಬಲದಮೇಲೆಯೂ ಅವಲಂಬಿಸಿತು!!!

ಪೂರ್ವೋಕ್ತ ಪ್ರಶ್ನೋತ್ತರಗಳಾದ ಬಳಿಕ ಕೆಲವು ಸರದಾರರು ರಘುನಾಥರಾಯನ ಬಳಿಯಲ್ಲಿ ನಿಂತುಕೊಂಡರು. ಭಾವು ಮುಂತಾದವರು ಅವನ

ಛಾವಣಿಯನ್ನು ಬಿಟ್ಟು ಹೊರಟರು. ರಘುನಾಥರಾಯನೊಡನೆ ಯುದ್ಧ ಮಾಡುವ ಉದ್ದೇಶದಿಂದ ಮೂರು ದಂಡು ಬರುತ್ತವೆಂಬ ಸೂಚನೆಯು ಭಾವೂಗೆ ಈ ಮೊದಲೇ ಬಂದಿತ್ತು. ಅವುಗಳಲ್ಲಿ ಒಂದು ದಂಡು ಬಂದರೆ ಸಾಕು! ಅದರ ಸಹಾಯದಿಂದ ರಘುನಾಥರಾಯನ ಮೇಲೆ ಬೀಳಬೇಕೆಂದು ಹೊಂಚುಹಾಕಹತ್ತಿದನು. ರಾಘೋಬನ ಛಾವಣಿಯನ್ನು ಬಿಟ್ಟು ಬಂದು ಆತನು ಒಂದು ಮಜಲಿನ ಹಾದೀ ನಡೆದು ಅಲ್ಲಿ ಬೀಡುಬಿಟ್ಟನು. ರಾಜಧಾನಿಯಿಂದ ಹೊರಟುಬಂದ ತ್ರ್ಯಂಬಕರಾವಮಾಮಾ ಮತ್ತು ಭಾವು ಇವರಿಬ್ಬರು ಸಂಗೋಳಿಯಲ್ಲಿ ಭೆಟ್ಟಿಯಾದರು. ಆಗ್ಗೆ ರಘುನಾಥರಾಯನು ದಂಡು ಸಹಿತ ಪಂಢರಪುರದಲ್ಲಿ ಇದ್ದನು. ವೈರಿಯು ಹತ್ತರವಿದ್ದುದರಿಂದ ಮಾಮಾನ ದಂಡಿನ ಜನರಿಗೆ ವಿಶ್ರಾಂತಿಯು ದೊರಕಲಿಲ್ಲ. ಆದರೂ ಆತನು ರಘುನಾಥರಾಯನೊಡನೆ ಕಾಳಗಕ್ಕೆ ಅಣಿಯಾಗಬೇಕೆಂದು ಯೋಚಿಸಿದನು. ಅತ್ತ ರಘುನಾಥರಾಯನಾದರೂ ನಿತ್ಯದಂತೆ ಪಯಣಮಾಡಲಿಲ್ಲ. ಇದನ್ನು ತಿಳಿದು ಮಾಮಾಸಾಹೇಬನು ಅಂದೇ ಯುದ್ಧಮಾಡುವದನ್ನು ನಿಶ್ಚೈಸಿ, ಭಾವೂ ಇತ್ಯಾದಿ ಸರದಾರರಿಗೆ ಆಹವ-ಸನ್ನದ್ಧರಾಗಬೇಕೆಂದು ಆಜ್ಞಾಪಿಸಿದನು. ಆಗ ಮಾಮಾನ ದಂಡು ಕಾಸೇಗಾಂವದಲ್ಲಿ ಇತ್ತು. ಆ ದಿವಸ ಪಟವರ್ಧನ ಸರದಾರರು ೧೦|೧೨ ಹರದಾರಿಯ ಹಾದೀ ನಡೆದುಬಂದದರಿಂದ ಅವರ ಕುದುರೆಗಳು, ಕಾಲಾಳುಗಳು ಮತ್ತು ಸ್ವಾರರು ದಣಿದು ಬೇಸತ್ತಿದ್ದರು. ಅದರಿಂದ “ ಯುದ್ಧವನ್ನು ಈವತ್ತಿನದಿವಸ ಮಾಡದೆ ಮರುದಿವಸ ಮಾಡಬೇಕು, ಅಂದರೆ ಸೈನ್ಯದ ಜನರು ವಿಶ್ರಾಂತಿಯನ್ನು ಹೊಂದಿ ಯುದ್ಧಜಾಗ್ರತರಾಗುವರು ” ಎಂದು ಭಾವು ಮಾಮಾನಿಗೆ ಬಿನ್ನವಿಸಿದನು. ಆದರೆ ಅದಕ್ಕೆ ಮಾಮಾನು ಒಡಂಬಡದೆ ಯುದ್ಧವನ್ನು ಹೂಡಿದನು. ರಘುನಾಥರಾಯನು ತೋಫಖಾನೆ ಸಹಿತ ದಂಡಿನೊಂದಿಗೆ ಕಾಳಗಕ್ಕೆದುರಾದನು. ಆದ್ದರಿಂದ ಕೂಡಲೆ ತುಮುಲಯುದ್ಧವು ಪ್ರಾರಂಭವಾಯಿತು. ರಘುನಾಥರಾಯನು ತನ್ನ ದಂಡಿನಲ್ಲಿ ಮೂರುಭಾಗಗಳನ್ನು ಮಾಡಿ, ಎರಡು ಟೋಳಿಗಳನ್ನು ಎರಡೂ ಪಕ್ಕರಕ್ಷಣೆಗೆ ನೇಮಿಸಿ, ಮೂರನೇ ಟೋಳಿಯ ದಳಪತಿಯ ಕೆಲಸವನ್ನು ತಾನೇ ಕೈಕೊಂಡನು. ಇತ್ತ ಮಾಮಾ ತಾನೂ ತನ್ನ ದಂಡಿನಲ್ಲಿ ಮೂರು ಭಾಗ ಮಾಡಿ, ಒಂದು ಭಾಗವನ್ನು ಭಾವು ಮೊದಲಾದ ಪಟವರ್ಧನರ ಸ್ವಾಧೀನಕ್ಕೆ ಕೊಟ್ಟನು; ಎರಡನೆಯ ತುಕಡಿಯನ್ನು ರಾಸ್ತೆ ಮತ್ತು ನಾರೋ

ಶಂಕರ ಇತ್ಯಾದಿ ಸರದಾರರ ವಶಕ್ಕೆ ಕೊಟ್ಟು, ಮೂರನೆ ಟೋಳಿಯ ಸೇನಾಧಿಪತ್ಯವನ್ನು ತಾನೇ ವಹಿಸಿ ಯುದ್ಧಸಿದ್ಧತೆಯನ್ನು ಮಾಡಿದನು. ಬಳಿಕ ಭಾವು ಶತ್ರು-ಸಮೂಹವನ್ನು ಮುತ್ತಿದನು. ಭಾವು ರಘುನಾಥರಾಯರ ಯುದ್ಧವು ಪ್ರಾರಂಭವಾಯಿತು. ಆಗ ಮಾಮಾನು ಭಾವೂನ ಬೆಂಬಲಕ್ಕೆ ಸೈನ್ಯಸಹಿತ ಬಂದು ಕಾದಹತ್ತಿದನು. ರಘುನಾಥರಾಯನ ಹುಜೂರಸೈನ್ಯದ ಪರಾಕ್ರಮವು ಹಿಮ್ಮೆಟ್ಟಿತು; ದಂಡಾಳುಗಳು ಕಾಲ್ದೆಗೆಯತೊಡಗಿದರು. ಅಷ್ಟರಲ್ಲಿ ರಘುನಾಥರಾಯನು ತನ್ನ ದಂಡನ್ನು ಸಾವರಿಸಿಕೊಂಡು ಮತ್ತೆ ಯುದ್ಧ-ಸನ್ನದ್ಧನಾದನು. ಕೂಡಲೆ ಮಾಮಾ-ರಾಘೋಬರ ನಡುವೆ ಕಾಳಗ ನೆಸಗಿತು. ಭಾವು ಆತನ ಬೆಂಬಲಕ್ಕೆ ಬರುವಷ್ಟರಲ್ಲಿ ಮಾಮಾನ ಸೈನ್ಯವು ಹಿಮ್ಮೇಡಾಗಿತ್ತು. ಸೈನ್ಯದ ಜನರು ಧೈರ್ಯಗೆಟ್ಟುಹೋಗಿದ್ದರು. ಮುಖ್ಯ ಸೇನಾನಾಯಕನಾದ ಮಾಮಾ ರಣಭೂಮಿಯಲ್ಲಿ ಬಿದ್ದು ಪಂಚತ್ವವನ್ನೈದಿದನು. ಅದರಿಂದ ಹಾಹಾಕಾರವೆದ್ದು ದಂಡಿನ ಜನರು ದಿಗಿಲುಗೊಂಡರು. ಅವರಲ್ಲಿ ಯಾವನೋ ಒಬ್ಬನು ಒಡೆದಿದ್ದನೆಂದು ಜನವಾರ್ತೆಯುಂಟು. ಮುಂದೆ ಯುದ್ಧದ ಯಾವತ್ತು ಭಾರವು ಭಾವು ಇತ್ಯಾದಿ ಪಟವರ್ಧನ ಸರದಾರರ ಮೇಲೆ ಬಿತ್ತು. ಮಹಮ್ಮದಯುಸಫನು ಗಾರ್ದಿಜನರ ಮುಖ್ಯಸ್ಥನು. ಆತನು ರಘುನಾಥರಾಯನ ಪಕ್ಷದವನು. ಅವನು ಸುಮೇರಶಿಂಗ ಮೊದಲಾದವರನ್ನು ಕೂಡಿಕೊಂಡು ಶ್ರೀಮಂತ ನಾರಾಯಣರವರ ಕೊಲೆಮಾಡಿದ್ದನು. ಇಷ್ಟಕಾರ್ಯವು ಸಫಲವಾದುದರಿಂದ ರಘುನಾಥರಾಯನು ಆತನಿಗೆ ಸರದಾರನ ಪದವಿಯನ್ನು ಕೊಟ್ಟಿದ್ದನು. ಅದೇ ನೀಚ ಯುಸಫನು ಉನ್ಮತ್ತನಾಗಿ ಭಾವೂನ ಕೂಡ ಯುದ್ಧಕ್ಕೆದುರಾದನು. ಅವನನ್ನು ನೋಡಿದ ಮಾತ್ರವೇ ಭಾವು ಕಡುಕೋಪಗೊಂಡನು. ಆತನನ್ನು ಅಲ್ಲಿಂದಲ್ಲೆ, ಕೊಲ್ಲಬೇಕೆಂದು ಭಾವು ಹಲ್ಲುಕಡೆದನು; ಕೂಡಲೆ ಆತನು ಯುಸಫನ ಮೇಲೆ ಸಾಗಿ ಹೋಗಲು, ಅವರಿಬ್ಬರ ನಡುವೆ ಭಯಂಕರವಾದ ಕಾಳಗವು ಪ್ರಾರಂಭವಾಯಿತು. ಭಾವು ತನ್ನ ಖಡ್ಗದಿಂದ ಆ ಕೊಲೆಗಡಕನನ್ನು ಗಾಯಗೊಳಿಸಿದನು, ಇಷ್ಟರಲ್ಲಿ ರಾಘೋಬನು ದೊಡ್ಡದಂಡಿನೊಡನೆ ಭಾವೂನ ಮೇಲೆ ಏರಿ ಬಂದನು. ಅಂಥ ಅದ್ಭುತಸೈನ್ಯದ ಮುಂದೆ ತನ್ನ ತುಸುಜನರ ಆಟವು ಸಾಗದೆಂದು ಬಗೆದು, ಭಾವು ಹಿಂದಕ್ಕೆ ಸರೆದನು. ಊರಬಳಿಯಲ್ಲಿ ದಟ್ಟವಾದ ಗಿಡದ ಗುಂಪು ಇತ್ತು. ಅಲ್ಲಿ ಮಿಕ್ಕ ಪಟವರ್ಧನಸರದಾರರು ಇಳಕೊಂಡಿ

ದ್ದರು. ಅವರನ್ನು ಭಾವು ಕೂಡಿಕೊಂಡತರುವಾಯ, ವೈರಿಗಳ ಕಾಟವು ಕಡಿಮೆಯಾಯಿತು. ರಘುನಾಥರಾಯನು ಆತನನ್ನು ಬೆಂಬಳಿಸುವ ಭರಕ್ಕೆ ಬೀಳದೆ ದಂಡುಸಹಿತ ತನ್ನ ಬಿಡಾರಕ್ಕೆ ಬಂದನು. ಉಭಯಬಲದ ಅಸಂಖ್ಯ ಜನರು ಸಮರಾಂಗಣದಲ್ಲಿ ಬಿದ್ದು ಪ್ರಾಣದೊರೆದರು. *

ಕಾಸೇಗಾಂವ ಕಾಳಗದ ಅಲ್ಪ ಗೆಲವಿನಿಂದ ರಘುನಾಥರಾಯನ ಧೈರ್ಯಗುಂದಿದ ದಂಡಿನ ಜನರಲ್ಲಿ ನವೀನಸ್ಫುರಣವು ಹುಟ್ಟಿತು. ಅವನ ದಂಡಿನಲ್ಲಿ ಹೊಸ ಹೊಸ ಜನರು ಬಂದು ತುಂಬಿದರು. ನಿಜಾಮನು ಸಹ ಆ ಬ್ರಹ್ಮಘ್ನನ ಪಕ್ಷಗಟ್ಟುವನೆಂಬಂತೆ ತೋರಿತು. ಇದೆಲ್ಲವನ್ನು ತಿಳಿದು ಅವನ ಪ್ರತಿಪಕ್ಷದ ಪ್ರಧಾನರು ತೀರಾ ಆಶೆದೊರೆದು, ತಮ್ಮ ಒಳಸಂಚು ಕೆಡುವದೆಂದು ಭಯಗ್ರಸ್ತರಾದರು. ಈ ವೃತ್ತಾಂತವನ್ನು ಕೇಳಿದ ಕೂಡಲೆ

* ಕಾಸೇಗಾಂವ ಕಾಳಗದ ಒಗ್ಗೆ ಜನಕೇಳಿಕೆಯಲ್ಲಿರುವ ಒಂದು ಚಮತ್ಕಾರಕ ಸಂಗತಿಯನ್ನು ಇಲ್ಲಿ ಕೊಡುವೆವು.

ರಘುನಾಥರಾಯನು ಪಂಢರಪುರದ ಹಾದೀಹಿಡಿದು ನಡೆದಿರಲು, ಮಾಮಾ ಭಾವು ಇತ್ಯಾದಿ ಶೂರಸರದಾರರು ಆತನ ಬೆನ್ನುಹತ್ತಿದರು. ಇದಲ್ಲದೆ ಸಂಗಡವಿದ್ದ ಕೆಲವು ಸರದಾರರಲ್ಲಿ ಆತನಿಗೆ ನಂಬಿಗೆ ಇದ್ದಿಲ್ಲ. ಆದ್ದರಿಂದ ಆತನು ಜಯದ ಆಶೆಯನ್ನು ತೊರೆದು ಉದಾಸನಾಗಿದ್ದನು. ಇದೇಕಾಲಕ್ಕೆ 'ಬಡಿಬಯಾ' ಎಂಬುವ ಭಗವದ್ಭಕ್ತಳು ಪಂಢರಪುರದಲ್ಲಿ ನಿವರ್ಾಣಳಾಗಿದ್ದಳು. ಆಕೆಯ ಮೇಲೆ ಅಲ್ಲಿಯ ಜನರ ವಿಶ್ವಾಸವು ಬಹಳ. ಇದನ್ನು ತಿಳಿದು ರಘುನಾಥರಾಯನ ಹಿತಚಿಂತಕರು ಆಕೆಯನ್ನು ಕರೆಸಿ, "ಯುದ್ಧದಲ್ಲಿ ಯಶವು ಸಿಗುವದೋ ಇಲ್ಲವೋ" ಎಂದು ಕೇಳಿದರು. ಅದಕ್ಕೆ ಆ ಭಕ್ತಳು "ಇಂದೇ ಯುದ್ಧಮಾಡಿದರೆ, ನಿಶ್ಚಯವಾಗಿ ಗೆಲವಾಗುವದು" ಎಂದು ಹೇಳಿದಳು. ಅದನ್ನು ಕೇಳುತ್ತಲೆ, ರಘುನಾಥರಾಯನೂ, ಆತನ ಸೈನಿಕರೂ ಪರಮ ಹರುಷಿತರಾಗಿ, ಅಂದೇ ಯುದ್ಧನಿಶ್ಚಯವನ್ನು ಮಾಡಿಕೊಂಡು ಶತ್ರುಗಳನ್ನು ಮುತ್ತಿದರು. ಅಂದಿನ ಕಾಳಗದಲ್ಲಿ 'ಬಡಿಬಯಾ'ಳು ಗಜಾರೂಢಳಾಗಿ ಸೈನ್ಯಾಗ್ರಭಾಗದಲ್ಲಿ ನಿಂತು "ಏನು ನೋಡುವಿರಿ, ಮುಂದೆ ಸಾಗಿರಿ, ಈಹೊತ್ತು ಗ್ರಹಬಲವಿರುವದು" ಎಂದು ಸೈನ್ಯದಜನರಿಗೆ ಸಾರಿಹೇಳುತ್ತಿದ್ದಳು. ಅವಳ ಸ್ಫೂರ್ತಿದಾಯಕ ಮಾತುಗಳಿಂದ ರಘುನಾಥರಾಯನ ದಂಡಿನ ಜನರಲ್ಲಿ ಹೊಸಹುರುಪು ಹುಟ್ಟಿ, ಅವರು ಹಗೆಗಳ ಕೂಡ ಹಲ್ಲಣದ ಹಂಗುದೊರೆದು ಹೋರಾಡಿದರು. ಆ ಯುದ್ಧದಲ್ಲಿ ಬಡಿಬಯಾ ಇವಳು ಹಿಂದುಸ್ಥಾನದ "ಜೋನಆಫ ಆರ್ಕ"ಳಂತೆ ತೋರಿದಳು.

ಹರೀಪಂತ ಫಡಕೆ, ಪರಶುರಾಮಭಾವು ಈ ಉಭಯ ರಾಜಕಾರ್ಯ ಧುರಂಧರರು ನಿಜಾಮನ ಪ್ರೀತಿಪಾತ್ರಪ್ರಧಾನನಾದ ರುಕ್ನುದ್ದವಲಾ ಎಂಬುವನ ವಿದ್ಯಮಾನ ಆತನೊಡನೆ ಸಂಧಾನಮಾಡಿಕೊಂಡರು. "ಇಬ್ಬರ ಜಗಳ-ಮತ್ತೊಬ್ಬನ ಆದಾಯ" ಎಂಬಂತೆ ಆಗ್ಗೆ ನಿಜಾಮುಅಲ್ಲಿಯು ತನ್ನ ಕಾಯಕವನ್ನು ನಡಿಸಿದ್ದನು.

ಮುಂದೆ ರಘುನಾಥರಾಯನು ಪುಣೆಗೆ ಹೋಗದೆ ಶಿಂದೇ-ಹೋಳಕರರ ಬೆನ್ನುಬೀಳುವ ಆಶೆಯಿಂದ ಬರ್ಹಾಣಪುರದ ಹಾದೀ ಹಿಡಿದನು. ಅದರಿಂದ ಪುಣೆಯಲ್ಲಿಯ ಪ್ರಧಾನಜನರು ಸ್ವಲ್ಪ ಧೀರರಾದರು. ಇದೇ ಸಮಯಕ್ಕೆ ಗಂಗಾಬಾಯಿಯು ಶಕೆ ೧೬೯೬ ವೈಶಾಖ ಶುದ್ಧ ಸಪ್ತಮಿ ದಿವಸ ಪುರಂಧರದಲ್ಲಿ ಪುತ್ರರತ್ನವನ್ನು ಪ್ರಸೂತಳಾದಳು. ಈತನೇ ಸವಾಯಿಮಾಧವರಾಯನು. ಕುರುಡನಿಗೆ ಕಣ್ಣು ಬರಲು ಆತನು ಆನಂದವನ್ನು ಹೊಂದುವಂತೆ, ತಮ್ಮ ಮನೋಬಯಕೆಯಂತೆ ಗಂಗಾಬಾಯಿಯು ಗಂಡು ಹಡೆದದರಿಂದ ಮಂತ್ರಿಮಂಡಲದವರು ಅತ್ಯಂತ ಆನಂದಭರಿತರಾದರು. ಸವಾಯಿಮಾಧವರಾಯನು ೪೫ ದಿವಸದವನಾಗುತ್ತಲೆ, ನಾನಾನು ಸಾತಾರೆಯ ಮಹಾರಾಜರ ಕಡೆಯಿಂದ ಪೇಶವೆಪದದ ವಸ್ತ್ರಗಳನ್ನು ತರಿಸಿಕೊಂಡು, ಆತನ ಹೆಸರಿನಿಂದ ಕಾರಭಾರವನ್ನು ಪ್ರಾರಂಭಮಾಡಿದನು; ಪೇಶವೆ ಗಾದಿಗೆ ರಘುನಾಥರಾಯನ ಹಕ್ಕು ಯಾವತರದ್ದು ಇಲ್ಲವೆಂದು ಸಕಲ ಸರದಾರ, ಶಿಲೇದಾರ ಮತ್ತು ಸಂಸ್ಥಾನಿಕರಿಗೆ ಪತ್ರಗಳು ಕಳಿಸಲ್ಪಟ್ಟವು.

ಇತ್ತ ಹರಿಪಂತ, ಭಾವು, ನಿಜಾಮ, ಭೋಸಲೆ ಮುಂತಾದ ರಣವಿಕ್ರಮರು, ಓಡುತ್ತಿರುವ ಆನೆಯನ್ನು ಬೆನ್ನಟ್ಟುವ ಸಿಂಹನಂತೆ, ರಘುನಾಥರಾಯನ ಬೆನ್ನುಹತ್ತಿದ್ದರು.

ಗಾರ್ದಿಜನರ ಮುಖಂಡನಾದ ಮಹಮ್ಮದಯುಸಫನು ರಘುನಾಥರಾಯನ ಪದರಿನ ಒಬ್ಬ ಸರದಾರನೆಂದು ಹಿಂದೆ ಹೇಳಿದ್ದೇವೆ. ಆತನ ನೀಚತನದ ಬಗ್ಗೆ ಭಾವು ಮೊದಲಿನಿಂದ ಕಣ್ಣು ಇಟ್ಟಿದ್ದನು. ಅದರ ಸೇಡು ತೀರಿಸಿಕೊಳ್ಳುವದಕ್ಕಾಗಿ ಆತನು ಕಾಸೇಗಾಂವ ಕಾಳಗದಲ್ಲಿ ವಿಶ್ವಪ್ರಯತ್ನ ಮಾಡಿದನು; ಅದರೆ ರಾಘೋಬನು ಆತನ ನೆರವಿಗೆ ಬಂದುದರಿಂದ ಭಾವು ಕೃತಕಾರ್ಯನಾಗಲಿಲ್ಲ. ಅದೇ ಯುಸಫನು ಬರ್ಹಾಣಪುರದ ಬಳಿಯಲ್ಲಿರುವ

ನೆಂಬ ಸುದ್ದಿಯು ಭಾವುಗೆ ಹತ್ತಿತು. ಕೂಡಲೆ ಆತನು ವಾಮನರಾವ ಗೋವಿಂದನನ್ನು ಕೂಡಿಕೊಂಡು ಆ ನರಾಧಮನಾದ ಯುಸಫನನ್ನು ಬೆನ್ನಟ್ಟಿದನು. ಕಡೆಗೆ ಯುಸಫನು ಸಿಕ್ಕನು. ಭಾವು ಅವನ ಮೇಲೆ ಸಾಗಿಹೋಗಿ ಅವನನ್ನು ಹಿಮ್ಮೋಡಮಾಡಿದನು. ಆಗ ಯುಸಫನು ಕಾದಿ ಕಂಗೆಟ್ಟು ಮುಂಗಾಣದೆ ಓಡಿಹೋಗಿ, ಸಿಂಹನ ಕೈಯಲ್ಲಿ ಸಿಕ್ಕ ಮೊಲವು ತಪ್ಪಿಸಿಕೊಂಡು ಗಿಡದ ಝುಡಪಿನೊಳಗಿರುವ ಗುದ್ದನ್ನು ಸೇರುವಂತೆ, ಬಳಿಯಲ್ಲಿರುವ ದಟ್ಟವಾದ ಅಡವಿಯನ್ನು ಸೇರಿಕೊಂಡನು. ಆ ಅಡವಿಯಲ್ಲಿ ಅಡಗಿಕೊಂಡವರನ್ನು ಹುಡುಕುವದು ಬಹು ಪ್ರಯಾಸಕರವಾದದ್ದೆಂದು ತಿಳಿದು, ಮುಂದಿನ ಕಾರ್ಯಭಾಗದ ಕಡೆಗೆ ದೃಷ್ಟಿಯನ್ನಿಟ್ಟು ಭಾವು ರಘುನಾಥರಾಯನ ಬೆನ್ನುಹತ್ತಿದನು.

ರಘುನಾಥರಾಯನು, ಶಿಂದೇಹೋಳಕರರು ತನಗೆ ಸಹಾಯಮಾಡುವರೆಂದು ತುಂಬಾ ನಂಬಿದ್ದನು; ಅದರಿಂದ ಅವನು ಅಷ್ಟೊಂದು ಧೈರ್ಯಗೆಟ್ಟದ್ದಿಲ್ಲ. ಆದರೆ ಅವರವರ ಪರಸ್ಪರ ದರ್ಶನಲಾಭವಾಗಲು, ಬಹಿರಂಗ ಆದರಸತ್ಕಾರಗಳಿಗೆ ಏನೂ ಕೊರತೆಯಿದ್ದಿಲ್ಲ. ಬೆಂಬಲದ ಮಾತು ತೆಗೆಯುತ್ತಲೇ, ಆ ಉಭಯ ಸರದಾರರು ಕಿವಿಯಮೇಲೆ ಕೈ ಇಟ್ಟುಕೊಂಡರು. ಎಲ್ಲರೂ ಗೆದ್ದ ಎತ್ತಿನ ಬಾಲವನ್ನು ಹಿಡಿಯತಕ್ಕವರು. ಮನುಷ್ಯರು ವಿಪನ್ನಾವಸ್ಥೆಯನ್ನು ಹೊಂದಲು, ಆಗ ಅವನಿಗೆ ಯಾರು ನೆರವಾಗುವರು? “ಗೂಳಿ ಬಿದ್ದರೆ ಆಳಿಗೊಂದು ಕಲ್ಲು” ಎಂಬ ಗಾದೆಯಂತೆ ಎಲ್ಲರು ಎದ್ದು ಕೂಡುವರು. ಮನುಷ್ಯನು ಉಚ್ಚಸ್ಥಿತಿಯಲ್ಲಿ ಇರುವತನಕ “ನಾನು ನಿನ್ನವನು, ನೀನು ನನ್ನವನು.” ಎಂದು ಸವಿಮಾತುಗಳನ್ನು ಆಡಿ, ತಮ್ಮ ಕಾರ್ಯಸಾಧಿಸುವ ಸ್ವಾರ್ಥಲೋಲುಪರಾದ ಜನರೇ ಬಹಳ. ಆದರೆ ಆತನಿಗೆ ವಿಪತ್ಕಾಲದಲ್ಲಿ ಸಹಾಯಮಾಡಿ ಪ್ರಸಂಗಬಂದರೆ ಆತನ ಜೀವಕ್ಕೆ ಜೀವಕೊಡಲಿಕ್ಕೆ ಸಿದ್ಧರಿರುವ ಜನರು ವಿರಳ. ಪರರಮಾತು ಒತ್ತಟ್ಟಿಗಿರಲಿ. ಪುತ್ರ-ಮಿತ್ರ-ಕಳತ್ರರು ಕೂಡ ಆಪತ್ಕಾಲದಲ್ಲಿರುವ ಮನುಷ್ಯನನ್ನು ಮುಖದಿರುವಿ ಸಹ ನೋಡಲಿಚ್ಛಿಸರು. ಸಕ್ಕರೆಗೆ ಇರುವೆಗಳು ಮುತ್ತುವಂತೆ ಜನರು, ಮನುಷ್ಯನು ಉಂಡುಟ್ಟು ಸೌಖ್ಯದಿಂದಿರುವಕಾಲದಲ್ಲಿ ಆತನ ಸುತ್ತುಮುತ್ತು ನೆರೆದು, ಆತನಿಗೆ ವಿರುದ್ಧಸ್ಥಿತಿಯು ಬಂದಕೂಡಲೆ ಬಯಲಾಗುವರು. ಇಂಥ ಸ್ವಾರ್ಥಸಾಧಕರು ಇರುವೆ ಮುಂತಾದ ಕ್ರಿಮಿಸಮಾನ

ರಲ್ಲವೇ?" ಇಂಥ ದೃಷ್ಟಾಂತಗಳು ಅಸಂಖ್ಯವಾಗಿರುವವು; ಮುಂದೆ ಆಗುತ್ತಿರುವವು. ಅದರಿಂದಲೇ ನೀತಿವಿಶಾರದರು "Prosperity brings friends; and adversity tries them" "ಅಭ್ಯುದಯಕಾಲವು ಸ್ನೇಹಿತರನ್ನು ಕೂಡಿಸುತ್ತದೆ; ಮತ್ತು ಆಪತ್ಕಾಲವು ಅವರ ಗೆಳೆತನವನ್ನು ಪರೀಕ್ಷಿಸುತ್ತದೆ." ಎಂದು ಪದೇಪದೇ ಸಾರುತ್ತ ಬಂದಿರುವರು.

सौदस्वर्णरेखाणामुच्चोवचाबिदाजुषां ॥
परोषदातिकोण्यास्तिपरोक्षानिकषोपलः ॥ १ ॥

ಮೇಲಿನ ಗೀರ್ವಾಣ-ಭಾಷಾವಚನವಾದರೂ ಅದನ್ನೇ ಬೋಧಿಸುವದು; ಬಂಗಾರದ ಬರೆಯ ಹೆಚ್ಚುಕಡಿಮೆಯನ್ನು ಪರೀಕ್ಷಿಸಿ ತಿಳಿಯಲು ಹೇಗೆ ಬರೆಗಲ್ಲು ಎಂಬುವದಿರುವದೋ, ಹಾಗೆ ಸ್ನೇಹಿತನ ಗುಣದೋಷಗಳನ್ನು ತಿಳಿಯಲು, ಪರೋಕ್ಷವಾದ ವಿಪತ್ತು ಎಂಬುದು ಇರುವದು. ಅಂದರೆ ಸಂಪತ್ಕಾಲದಲ್ಲಿ ಸಕಲರೂ ಸ್ನೇಹಿತರಾಗುವರು; ಆಪತ್ಕಾಲದಲ್ಲಿ ಯಾರೂ ಆಗರು; ಆದ್ದರಿಂದ ವಿಪತ್ಕಾಲದಲ್ಲಿ ಆದವನೇ ಸ್ನೇಹಿತನೆಂಬ ಭಾವವು. ಇರಲಿ. ಇತ್ತ ರಘುನಾಥರಾಯನು ಶಿಂದೆಹೋಳಕರರಲ್ಲಿ ಕೃಷ್ಣಮುಖನಾಗಲು, ಅವನು ಬಡೋದೆಯ ಹಾದೀ ಹಿಡಿದನು. ಅಲ್ಲಿಯೂ ಆತನ ಇಚ್ಛಿತಾರ್ಥವು ಸಾಧಿಸಲಿಲ್ಲ. ಗಾಯಕವಾಡದ ಸರದಾರನೂ ಶಿಂದೇಹೋಳಕರರ ಕಿತ್ತೆಯನ್ನು ತೀಡಿದನು. ಅದರಿಂದ ಅವನು ನಿರಾಶಿತನಾಗಿ ಅಲ್ಲಿಂದ ಹಿಂದಕ್ಕೆ ತಿರುಗಿದನು. ಸಂಪಗಾಂವಿಯ ಬಳಿಯಲ್ಲಿ ತನ್ನ ಬೆನ್ನುಹತ್ತಿ ಬರುತ್ತಿದ್ದ ಒಂದು ಚಿಕ್ಕ ದಂಡಿನ ಮೇಲೆ ಬಿದ್ದು ಆತನು ಅದನ್ನು ಹಿಮ್ಮೋಡುಮಾಡಿದನು. ಹರಿಪಂತ, ಭಾವು ಇತ್ಯಾದಿ ಸರದಾರರು ಆತನ ಬೆನ್ನುಹತ್ತಿದ್ದರು. ಬ್ರಹ್ಮಹತ್ಯಾಪಾತಕವನ್ನು ಮಾಡಿದ ಅಮರಪತಿಯನ್ನು ಶುಕ್ಲಕಾಷ್ಟವು ಬೆನ್ನುಹತ್ತಿದಂತೆ, ಪೇಶವೆ ನಾರಾಯಣರಾಯನ ಕೊಲೆಗೈದ ಬ್ರಹ್ಮಘ್ನ ರಘುನಾಥರಾಯನನ್ನು ಭಾವು ಮುಂತಾದ ವೀರಮಣಿಗಳು ಬೆನ್ನಟ್ಟಿ ಆನಿತಗೆ ಸಾಕುಸಾಕು ಮಾಡಿಕೊಟ್ಟರು. ಅವನು ಯಾವತ್ತು ಜಂಬುದ್ವೀಪದಲ್ಲಿ ಅಲೆದಾಡಿ ಹುಡುಕಿದರೂ ಒಬ್ಬನೂ ಅವನ ತಾರಕನಾಗಲಿಲ್ಲ.

ಕಟ್ಟಕಡೆಗೆ ರಘುನಾಥರಾಯನು ಪರಶುರಾಮಭಾವೂನ ಪರಶುಪ್ರಹಾರದಿಂದ ಜರ್ಜರನಾಗಿ ಸಾವಿರಾರು ಜನರನ್ನು ಕೂಡಿಕೊಂಡು ಸುರತಕ್ಕೆ ಓಡಹೋಗಿ ಅಲ್ಲಿ ದಯಾಳುಗಳಾದ ಇಂಗ್ಲೀಷರ ಮರೆಬಿದ್ದನು.

ಶ್ರೀಮಂತ ಬಾಜೀರಾವ ಬಲ್ಲಾಳನ ತಮ್ಮನಾದ ವೀರಮಣಿ ಚಿಮ ಣಾಜಿ ಅಪ್ಪಾ ಈತನು ಸಾಷ್ಟಿಯ ನಡುಗಡ್ಡೆಯನ್ನು ಹಿಡಿದುಕೊಂಡಂದಿ ನಿಂದ ಇಂಗ್ಲಿಷರು ಅದನ್ನು ತಕ್ಕೊಳ್ಳುವ ಎತ್ತುಗಡೆಯಲ್ಲಿದ್ದರು. ಪೇಶವೆ ಯರ ಮನೆಜಗಳವು ಬಲಿತು ನಾರಾಯಣರಾಯನ ಕೊಲೆಯಾದ ಕೂಡಲೆ, ಅವರು ಅದನ್ನು ಹಿಡಿದುಕೊಂಡು ಮುಂದೆ ಏನು ಮಾಡಬೇಕೆಂಬುವ ಹವ ಣಿಕೆಯಲ್ಲಿರುವಾಗ ರಘುನಾಥರಾಯನು ಶರಣುಬಂದು ತಮಗೆ ಅನುಕೂಲ ವಾದ ಒಪ್ಪಂದವನ್ನು ಮಾಡಿಕೊಂಡದರಿಂದ ತೂಕಡಿಸುವವರಿಗೆ ಹಾಸಿಕೆ ಹಾಸಿಕೊಟ್ಟಂತಾಯಿತು. ಇಂಗ್ಲೀಷರೊಡನೆ ಒಪ್ಪಂದ * ಮಾಡಿಕೊಂಡು ಅವರ ದಂಡಿನೊಡನೆ ರಘುನಾಥರಾಯನು ಬಡೋದೆಗೆ ಹೋದನು. ಹರಿ ಪಂತ, ಭಾವು ಮುಂತಾದ ಸರದಾರರು ಆತನ ಬೆನ್ನುಹತ್ತಿ ಸಾಗಿದ್ದರು. ನಾಪರಗ್ರಾಮದ ಬಳಿಯಲ್ಲಿ ಒಂದು ದೊಡ್ಡ ಕಾಳಗವಾಯಿತು. ಆ ಯುದ್ಧ ದಲ್ಲಿ ಭಾವು, ಗಂಗಾಧರರಾವ ಮತ್ತು ವಾಮನರಾವ ಈ ತ್ರಿವರ್ಗ ಪಟವ ರ್ಧನ ಪಟುಭಟರು ಸೈನ್ಯಾಗ್ರಭಾಗದಲ್ಲಿ ನಿಂತುಕೊಂಡು ಶೌರ್ಯದಿಂದ ಕಾದಿದರು. ಕಡುಗಲಿಗಳಾದ ಇಂಗ್ಲೀಷ ದಂಡಿನ ಜನರು ಅವರ ಮೇಲೆ ತೋಫುಗುಂಡಿನ ಮಳೆಗರೆದರು. ಆದರೂ ಆ ಶೂರಸರದಾರರು ಬೆದರದೆ, ಹಗೆಗಳ ಮೇಲೆ ಆವೇಶದಿಂದ ಸಾಗಿಹೋಗಿ ಅವರನ್ನು ಹಿಂದಕ್ಕೆ ಅಟ್ಟಿಕೊ ಟ್ಟರು. ನಾಪರದ ಕಾಳಗವಾದ ಬಳಿಕ ಶಿಂದೇ, ಹೋಳಕರ ಮತ್ತು ಭೋಸ ಲೆಯರು ಹೋಳುದಗೆದರು. ಹರಿಪಂತನು ಕಾರ್ಯನಿಮಿತ್ಯದಿಂದ ಪುಣೆಗೆ ಬಂದನು. ಆದರಿಂದ ಮುಂದಿನ ಯುದ್ಧದ ಎಲ್ಲ ಭಾರವು ಭಾವು ಮೊದ ಲಾದ ಪಟವರ್ಧನರ ಮೇಲೆ ಬಿತ್ತು. ಆದರೂ ಅವರು ಹೆದರದೆ ರಘುನಾಥ ರಾಯನ ಬೆನ್ನು ಬಿಡಲಿಲ್ಲ.

ಮಳೆಗಾಲವು ಮುಗಿದ ಬಳಿಕ ರಘುನಾಥರಾಯನ ಸಹಾಯಾರ್ಥ ಇನ್ನೂ ಕೆಲವು ದಂಡು ಕಳುಹಿಸಬೇಕೆಂದು ಮುಂಬೈ ಸರಕಾರದವರು

---

* ಈ ಒಪ್ಪಂದದ ಮುಖ್ಯ ಕಲಮುಗಳು ಕೆಳಗೆ ಬರೆದ ಪ್ರಕಾರ:—

೧ ರಘುನಾಥರಾಯನು ಇಂಗ್ಲೀಷರಿಗೆ ವಸಯಿ ಮತ್ತು ಸಾಷ್ಟಿಯ ನಡುಗಡ್ಡೆಗ ಳನ್ನೂ ಅವುಗಳ ಸುತ್ತುಮುತ್ತಲಿನ ಪ್ರದೇಶಗಳನ್ನೂ ಕೊಡಬೇಕು.

೨ ಇಂಗ್ಲೀಷರು ರಘುನಾಥರಾಯನಿಗೆ ಯೋಗ್ಯ ಸಹಾಯಮಾಡಿ ಆತನನ್ನು ಪೇಶವೆ ಗಾದಿಯ ಮೇಲೆ ಕೂಡ್ರಿಸಬೇಕು.

ಈ ಒಪ್ಪಂದವು ಇ. ಸ. ೧೭೭೫ರಲ್ಲಿ ಆಯಿತು.

ಸೈನ್ಯಸಿದ್ಧತೆಯನ್ನು ನಡೆಸಿದ್ದರು. ಅಷ್ಟರಲ್ಲಿ ಕಲಕತ್ತೆಯಿಂದ ಯುದ್ಧವನ್ನು ಬೇಗನೆ ನಿಲ್ಲಿಸಬೇಕೆಂಬ ಬಗ್ಗೆ ಸರ್ವಾಧಿಪತಿಯ ಹುಕುಮು ಬಂದು ತಲುಪಿತು. ಮುಂಬೈಸರಕಾರದವರು ತಿರಿಗಿ ಬರೆದರು. ಆದರೂ ವ್ಯರ್ಥ. ಆಗ ಹೊಸದಾಗಿ ಅಮಲಿನಲ್ಲಿ ಬಂದ 'ರೆಗ್ಯೂಲೇಟಿಂಗ ಆ್ಯಕ್ಟ'ದ ಅನ್ವಯ ಮುಂಬೈ ಗವ್ಹರನರನು ಕಲಕತ್ತೆಯ ಗವ್ಹರನರಜನರಲ್ಲನ ಅಂಕಿತನೆಂತಲೂ, ಅವನು ಸರ್ವಾಧಿಪತಿಯ ಅಪ್ಪಣೆಯಂತೆ ನಡೆಯಬೇಕೆಂತಲೂ, ಗೊತ್ತಾಗಿತ್ತು. ಅಂದಬಳಿಕ ತಮ್ಮ ಪ್ರಥಮ-ಅನುಶಾಸನವನ್ನೇ ತಿರಿಗಿ ತಕ್ಕೊಂಡು ಯುದ್ಧವನ್ನು ನಡೆಸುವದು ಕಲಕತ್ತೆಯ ಸರಕಾರದವರ ಮನಸ್ಸಿಗೆ ಬರಲಿಲ್ಲ. ಆಗ ಮುಂಬೈಸರಕಾರದವರು ನಿರುಪಾಯರಾಗಿ ರಘುನಾಥರಾಯನ ಪಕ್ಷವನ್ನು ಬಿಟ್ಟುಕೊಟ್ಟರು. ಮುಂದೆ ಕಲಕತ್ತೆಯಿಂದ ಇಂಗ್ಲೀಷರ ವಕೀಲನು ಬಂದಬಳಿಕ ಅವನ ಮುಖಾಂತರ, ಇಂಗ್ಲೀಷರಿಗೂ ಪೇಶ್ವೆ ಸರಕಾರದ ಪ್ರಧಾನರಿಗೂ ಪುರಂಧರದಲ್ಲಿ *ಒಪ್ಪಂದವಾಯಿತು.

ಈ ಮೇರೆಗೆ ರಘುನಾಥರಾಯನ ಅಚ್ಚು-ಮೆಚ್ಚಿನ ಗೆಳೆಯರು ಒಬ್ಬರ ಹಿಂದೊಬ್ಬರು ಆತನನ್ನು ತೊಲಗಿದರು. ಒಬ್ಬನೂ ವಿಪತ್ಕಾಲದಲ್ಲಿ ಆತನಿಗೆ ನೆರವಾಗಲಿಲ್ಲ. ಅದರಿಂದ ಪಾಪ! ರಘುನಾಥರಾಯನು, ನಿರುಪಾಯ, ನಿರಾಶಿತ ಮತ್ತು ನಿರಾಶ್ರಿತನಾಗಿ ಶತ್ರುಗಳ ಕೈವಶನಾದನು. ರಾಜ್ಯಲೋಭ, ಸ್ವಾರ್ಥಪರಾಯಣಬುದ್ಧಿ ಮೊದಲಾದ ತನ್ನ ದುರ್ಗುಣಗಳ ಯೋಗದಿಂದ ಆತನು ಮೇಲೆ ಹೇಳಿದಂತೆ ಬಗೆಬಗೆಯ ಕಷ್ಟನಷ್ಟಗಳನ್ನು ಸೋಸಬೇಕಾಯಿತು.

ಈ ಪ್ರಕಾರ ಬ್ರಹ್ಮಘ್ನನಾದ ರಘುನಾಥರಾಯನ ನಿಗ್ರಹಕಾರ್ಯವು ನಾನಾ ಇತ್ಯಾದಿ ಪ್ರಧಾನಮಂಡಲದವರ ಬುದ್ಧಿಚಾತುರ್ಯದಿಂದ ಮತ್ತು ಪರಶುರಾಮಭಾವು ಮುಂತಾದ ಶೂರ ಸರದಾರರ ಪರಾಕ್ರಮ-ಕೌಶಲ್ಯದಿಂದ ಕೈಗೂಡಿ ಅವರ ಮನೋದಯವು ಪೂರ್ಣವಾಯಿತು.

---

* ಈ ಒಪ್ಪಂದದ ಮುಖ್ಯ ಶರ್ತುಗಳು.

೧ ಇಂಗ್ಲೀಷರು ರಘುನಾಥರಾಯನ ಪಕ್ಷವನ್ನು ಪೂರಾ ಬಿಟ್ಟುಕೊಡಬೇಕು.

೨ ಪೇಶವೆ ಸರಕಾರದವರು ಅವರಿಗೆ ಸಾಷ್ಟಿಯ ನಡುಗಡ್ಡೆಯನ್ನ ಕೊಡಬೇಕು.
ಈ ಒಪ್ಪಂದವು ಇ. ಸ. ೧೭೭೬ರಲ್ಲಿ ಆಯಿತು.

# ೬ನೆಯ ಅಧ್ಯಾಯ.

## ಕೊಲ್ಹಾಪುರಕರ, ಹೈದರ ಮತ್ತು ಇಂಗ್ಲೀಷರೊಡನೆ ಭಾವು ಮಾಡಿದ ಸಂಗ್ರಾಮವರ್ಣನೆಯು.

ಪುರಂಧರದ ಒಪ್ಪಂದದಿಂದ ಪ್ರಧಾನಮಂಡಲದವರ ಚಿಂತೆಯು ಕೆಲಮಟ್ಟಿಗೆ ನಂದಿತು; ಆದರೂ ಅದು ಪೂರಾ ನಂದಲಿಲ್ಲ; ಬೂದಿಮುಚ್ಚಿದ ಕೆಂಡದಂತೆ ಒಳಗೇ ಹೊತ್ತುತ್ತಿತ್ತು. ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿದಂತೆ ರಘುನಾಥರಾಯನು ಮುಂಗಾಣದೆ ದೇಶದೇಶಗಳಲ್ಲಿ ಅಲೆದಾಡುತ್ತಿರುವಾಗ್ಗೆ, ಅವನು ಕೊಲ್ಹಾಪುರದ ಅರಸನಿಗೆ ಪೇಶವೆರಾಜ್ಯದ ಮೇಲೆ ದಾಳೀಮಾಡಲಿಕ್ಕೆ ಒಳಗಿಂದೊಳಗೆ ಪುಸಲತ್ತು ಕೊಟ್ಟಿದ್ದನು. ಇದಲ್ಲದೆ ಹೈದರನಿಗೂ ಅದರಂತೆ ಸೂಚಿಸಿದ್ದನು. ಇವರು ಮೊದಲೇ ಪೇಶವೆಯರ ಪ್ರಚಂಡವೈರಿಗಳು. ಮೇಲಾಗಿ ರಘುನಾಥರಾಯನ ಪುಸಲತ್ತು ಅನಾಯಾಸವಾಗಿ ಅವರಿಗೆ ಅನುಕೂಲಿಸಿತು. ಪೇಶವಾಯಿಯಲ್ಲಿ ಯಾದವೀಕಲಹವು ಪ್ರಾರಂಭವಾದುದರಿಂದ ಅವರಿಗೆ ಅತ್ಯಾನಂದವಾಯಿತು. ಇಂಥ ಸಮಯದಲ್ಲಿ ಕೈಲಾದಷ್ಟು ಸ್ವಾರ್ಥವನ್ನು ಸಾಧಿಸಬೇಕೆಂದು ಅವರು ಕಂಕಣಬದ್ಧರಾಗಿ "ಗಾಳಿ ಬಿಟ್ಟ ಕೈಲೆ ತೂರಿಕೊ" ಎಂಬ ಮಂತ್ರವನ್ನು ಪಠಣಮಾಡತೊಡಗಿದರು. ಸರಹದ್ದಿನ ಸುತ್ತುಮುತ್ತು ಇರುವ ಪೇಶವೆಯರ ಫಲದ್ರೂಪ ಪ್ರದೇಶಗಳಲ್ಲಿ ಅವರು ದೊಂಬೆ ಎಬ್ಬಿಸಿದರು. ಪೇಶವೆಯರ ಅಸಂಖ್ಯ ಕೋಟೆಕೊತ್ತಳಗಳನ್ನು ಕೈವಶಮಾಡಿಕೊಂಡರು; ಕೆಲಕೆಲವು ಗ್ರಾಮಗಳನ್ನು ಸುಟ್ಟು ಸೂರೆಮಾಡಿದರು. ಶ್ರೀಮಂತ ಸರಕಾರದ ಕಪ್ಪಕಂದಾಯಗಳು ಕಟ್ಟಾದವು. ಈ ಮೇರೆಗೆ ಅವರು ನಾನಾಬಗೆಯ ತೊಂದರೆಗಳನ್ನು ಉಂಟುಮಾಡುತ್ತ ಸ್ವಾರ್ಥಸಾಧನದಲ್ಲಿ ಮಗ್ನರಾಗಿದ್ದರು. ಇದೆಲ್ಲ ಪ್ರಧಾನಮಂಡಲದವರ ಕಿವಿವರೆಗೆ ಹೋಯಿತು. ಆದರೆ ರಘುನಾಥರಾಯನ ನಿಗ್ರಹಕ್ಕಾಗಿ ದೊಡ್ಡ ದಂಡಿನ ಅವಶ್ಯಕತೆಯು ಇದ್ದುದರಿಂದ ಅವರಿಗೆ ದೂರಿನ ವೈರಿಗಳ ಕಡೆಗೆ ಲಕ್ಷ್ಯಕೊಡುವದಕ್ಕೆ ಆಸ್ಪದವಾಗಲಿಲ್ಲ. ಅದರಿಂದ ರಘುನಾಥರಾಯನ ಪುಸಲತ್ತಿನಿಂದ ತಲೆಯತ್ತಿದ ಈ ಪುಂಡಹಗೆಗಳ ಕಾಟವನ್ನು ಪೇಶವಾಯಿಯು ಬಹುದಿವಸ ಅನುಭವಿಸಬೇಕಾಯಿತು.

ರಘುನಾಥರಾಯನ ವ್ಯವಸ್ಥೆಯಾಗುವಷ್ಟರಲ್ಲಿ ಒಬ್ಬ ಮೋಸಗಾರನು, ಘನಘೋರ ಪಾಣಿಪತ್ತದ ರಣಕಂದನದಲ್ಲಿ ಪೇಶವೆ ಸೈನ್ಯದ ಸರ್ವಾಧಿಪತಿಯಾದ ಸದಾಶಿವರಾವಭಾವು ಆವೇಶದಿಂದ ಶತ್ರುಸೈನ್ಯವನ್ನು ಹೊಕ್ಕು ಮಾಯವಾದನೆಂದು ಸುಳ್ಳುಸುದ್ದಿಯನ್ನು ಹುಟ್ಟಿಸಿ, ತಾನೇ ಆ ಸದಾಶಿವರಾಯನೆಂದು ಸಾರುತ್ತ ಕೊಂಕಣದಲ್ಲಿ ಬಂಡಾಯಹೂಡಿದನು. ಯಾವತ್ತು ಕೊಂಕಣಪ್ರಾಂತವು ಈ ಸುಳ್ಳು ಸದಾಶಿವರಾಯನ ಅಧೀನವಾಯಿತು. ಕೆಲವು ಕಿಲ್ಲೇದಾರರು ಅವನ ಪಕ್ಷಗಟ್ಟಿದರಿಂದ ಕೆಲವು ಕಿಲ್ಲೆಗಳೂ ಆತನ ವಶವಾದವು. ಇದರ ಪ್ರತೀಕಾರಕ್ಕೆ ಬಾಳಾಜಿಜನಾರ್ಧನ ಉರ್ಫ ನಾನಾಫಡಣವೀಸನು ಶಿಂದೇನನ್ನು ಕಳಿಸಿದ್ದನು. ಹಿಂದಿನಿಂದ ಭಾವು ಶಿಂದೇನ ಸಹಾಯಕ್ಕೆ ಕಳಿಸಲ್ಪಟ್ಟನು. ಆಗ ಆ ಮೋಸಗಾರನು ಬೋರಘಟ್ಟವನ್ನು ದಾಟಿ, ಪುಣೆಯ ಹಾದೀಹಿಡಿದು ರಾಜಮಾ ಎಂಬಲ್ಲಿ ಇಳಕೊಂಡಿದ್ದನು. ಇತ್ತ ಶಿಂದೆ, ಭಾವು ಇವರಿಬ್ಬರು ಕೂಡಿಕೊಂಡು, ಒಮ್ಮಿಂದೊಮ್ಮೆ ಆ ಸುಳ್ಳು ಸದಾಶಿವರಾಯನ ಮೇಲೆ ಬಿದ್ದು ಆತನನ್ನು ಹಣ್ಣುಮಾಡಿದರು. ಆತನು ಸೋತು ಕಂಗೆಟ್ಟನು. ಅವನ ದಂಡಿನ ಜನರು ದಶದಿಕ್ಕುಗಳನ್ನು ಮರೆಬಿದ್ದರು. ಇಂಗ್ಲೀಷರ ಆಶ್ರಯವನ್ನು ಬಯಿಸಿ ಅವನು ಮತ್ತೆ ಕೊಂಕಣವನ್ನು ಹೊಕ್ಕನು. ಧೂರ್ತರಾದ ಇಂಗ್ಲೀಷರು ಇಂಥ ಮೋಸಗಾರನಿಗೆ ಆಶ್ರಯಕೊಡುವಷ್ಟು ದಡ್ಡರಲ್ಲ. ಕಟ್ಟಕಡೆಗೆ ದುರ್ದೈವವು ಆತನ ಬೆನ್ನು ಬಿಡಲಿಲ್ಲ. ಇಂಗ್ಲೀಷರ ನೆರವು ಸಿಗದ್ದರಿಂದ ಅವನು ಕುಲಾಬಾದ ಆಂಗ್ರೆ ಸರದಾರನ ಕೈಗೆ ಸಿಕ್ಕನು. ಆ ಸರದಾರನು ಆತನನ್ನು ರಾಜಧಾನಿಗೆ ಕಳುಹಿಸಿಕೊಟ್ಟನು. ಸದಾಶಿವರಾಯನ ಧರ್ಮಪತ್ನಿಯಾದ ಪಾರ್ವತಿಬಾಯಿಯೂ ನಾನಾ ಮುಂತಾದ ಎಲ್ಲ ಜನರೂ ಆ ವಂಚಕನನ್ನು ಕಣ್ಮುಟ್ಟ ನೋಡಿದರು. ಯಾರಿಗೂ ಅವನು ಸದಾಶಿವರಾಯನೆಂದು ನಂಬಿಗೆಯು ಹುಟ್ಟಲಿಲ್ಲ. ಕಪಟವು ಪ್ರಕಟಕ್ಕೆ ಬಾರದೆ ಉಳಿಯುವದೇ? ಕಡೆಗೆ ಅವನನ್ನು ಆನೆಯಕಾಲಿಗೆ ಕಟ್ಟಿಸಿ ಎಳಸಿ ಕೊಂದರು.

ರಘುನಾಥರಾಯನ ನಿಗ್ರಹಕಾರ್ಯದಲ್ಲಿ ಎಲ್ಲ ಮರಾಠಾಸರದಾರರು ತೊಡಗಿದ ಸಂಧಿಯನ್ನು ಸಾಧಿಸಿ, ಕೊಲ್ಹಾಪುರಕರನು ಬಂಡಾಯವನ್ನು ಎಬ್ಬಿಸಿದನೆಂಬದನ್ನು ಮೇಲೆ ಹೇಳಿದ್ದೇವೆ. ಆಗ ಪರಶುರಾಮಭಾವುನ ಕಕ್ಕನ ಮಕ್ಕಳು ಆತನ ಶಾಸನವನ್ನು ಚನ್ನಾಗಿ ಮಾಡಿದ್ದರು. ಆದರೆ ಅನು

ಕೂಲಕಾಲವು ದೊರಕಿತೆಂದರೆ ಸ್ವಾರ್ಥಸಾಧಿಸಿಕೊಳ್ಳುವದು ಕೊಲ್ಹಾಪುರದ ಅರಸನ ನಿತ್ಯಕ್ರಮವಾಗಿತ್ತು. ಅದರಿಂದ ಅವನು ಪುನಃ ಬಂಡಾಯಹೂಡಿದನು. ಆಗ ಅವನ ಶಾಸನಕ್ಕೆ ಮಹದಾಜಿ ಶಿಂದೇನನ್ನು ಕಳಿಸಿಕೊಟ್ಟನು; ಆತನ ಬೆಂಬಲಕ್ಕೆ ಭಾವು ನೇಮಿಸಲ್ಪಟ್ಟನು. ಭಾವು ಶಿಂದೇನನ್ನು ಬಂದುಕೂಡುವಷ್ಟರಲ್ಲಿ ಮಹದಾಜಿಯು ಕೊಲ್ಹಾಪುರಕರನನ್ನು ಮೆತ್ತಗೆ ಮಾಡಿದ್ದನು.

ಕರವೀರಕರನ ಪಾರುಪತ್ಯವಾದ ಬಳಿಕ ಮಂತ್ರಿಮಂಡಲದವರು ಹೈದರನನ್ನು ಬಗ್ಗುಬಡೆಯಬೇಕೆಂದು ಯೋಚಿಸಿದರು. ಹೈದರನ ಉಪಟಳವು ಕೊಲ್ಹಾಪುರನಕಿಂತಲೂ ಹೆಚ್ಚಾಗಿತ್ತು. ಜನರು ಪೊಳ್ಳುಕಂಡಲ್ಲಿ ಮೊಳಕೈಯಿಂದ ಅಗಿಯುತ್ತಾರೆಂಬ ಅನುಭವದ ಮಾತು ಸುಳ್ಳಲ್ಲ. ಈ ಜಗತ್ತಿನಲ್ಲಿ ವಾಡಿಕೆಯಾಗಿ ಪುಕ್ಕರನ್ನು ಗಟ್ಟಿಗರೂ, ದರಿದ್ರರನ್ನು ಧನಿಕರೂ, ಬಲಹೀನರನ್ನು ಬಲವಂತರೂ ಹೆದರಿಸಿ ತಮಗೆ ಹ್ಯಾಗೆಬೇಕು ಹಾಗೆ ಅವರನ್ನು ಮಣಿಸುತ್ತ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವರು. ಹೈದರನಾದರೂ ಇದೇ ತತ್ವವನ್ನು ಅನುಸರಿಸಿ ಪೇಶವಾಯಿಯಲ್ಲಿ ಒಳಜಗಳದಿಂದುಂಟಾದ ಪೊಳ್ಳಿನ ಸವಲತ್ತಿನಿಂದಲೂ, ರಘುನಾಥರಾಯನ ಪುಸಲತ್ತಿನಿಂದಲೂ, ಮತ್ತೆ ತಲೆಯತ್ತಿ ಮೈಮರೆತನು. ಅವನ ರಾಜ್ಯದಮೇರೆಯು ತುಂಗಾನದಿಯ ದಕ್ಷಿಣಕ್ಕೆ ಬಹಳ ದೂರದಮೇಲೆ ಇತ್ತು. ಅವನು ಅದನ್ನು ಬೆಳಿಸುತ್ತ ಬೆಳಿಸುತ್ತ, ಕೃಷ್ಣೆಯವರೆಗೆ ಹಬ್ಬಿಸಿದನು. ಇಂಥ ಪ್ರಸಂಗದಲ್ಲಿ ಕಣ್ಣುಮುಚ್ಚಿಕೊಂಡು ಹುಚ್ಚರಂತೆ ಕೂಡ್ರುವದು ಯೋಗ್ಯವಲ್ಲವೆಂದು ಬಗೆದು, ಮಂತ್ರಿಮಂಡಲದವರು ಅವನನ್ನು ಮೆತ್ತಗೆ ಮಾಡುವ ಕೆಲಸವನ್ನು ಕೈಕೊಂಡರು. ಆಗ ಅವರು ಭಾವು ಇತ್ಯಾದಿ ಪಟವರ್ಧನಸರದಾರರಿಗೆ "ನೀವು ಹೈದರನ ಮೇಲೆ ಬೇಗ ಸಾಗಿಹೋಗಬೇಕು. ಹಿಂದಿನಿಂದ ಹುಜೂರಸೈನ್ಯವು ನಿಮ್ಮ ಬೆಂಬಲಕ್ಕೆ ಬರುವದು" ಎಂದು ಆಜ್ಞಾಪಿಸಿದರು. ಸ್ವಾಮಿಭಕ್ತರಾದ ಪಟವರ್ಧನರು ಆಜ್ಞೆಯಾಗುವದೊಂದೇತಡ; ಉತ್ತರಕ್ಷಣದಲ್ಲಿ ಪ್ರಭುಸೇವೆಗೆ ಸಿದ್ಧರಾಗುತ್ತಿದ್ದರು. ಇದೇ ರಾಜಭಕ್ತಿಯ ದ್ಯೋತಕವು. ಪೇಶವೆಸರಕಾರದ ಆಜ್ಞಾಪತ್ರಗಳು ಬಂದಕೂಡಲೆ, ಭಾವೂನ ಕಕ್ಕನ ಮಕ್ಕಳಾದ ಕೊನೇರರಾವತ್ರ್ಯಂಬಕ ಕುರುಂದವಾಡಕರ, ಮತ್ತು ಪಾಂಡುರಂಗ ಗೋವಿಂದ ಮಿರಜಕರ ಇವರಿಬ್ಬರು ಕೊಲ್ಹಾಪುರದಿಂದ ಹೊರಟುಬಂದು ಹೈದರಖಾನನ ಮೇಲೆ ಸಾಗಿನಡೆದರು. ಹೋದಹೋದಲ್ಲಿ ಶ್ರೀಮಂತಸರಕಾರದ ಅಮಲು

ಕೂಡ್ರಿಸುತ್ತ, ಕೋಟೆಕೊತ್ತಳಗಳನ್ನು ಕೈವಶಮಾಡಿಕೊಳ್ಳುತ್ತ ಈ ಸರದಾರರು ಬಂಕಾಪುರದಬಳಿಗೆ ದಂಡುಸಹಿತ ಬಂದರು. ಹೈದರನಕಡೆಯ ಕುಮದಾನಅಲ್ಲಿ ಎಂಬುವ ಶೂರ ಸರದಾರನು ೬೦೦೦ ಕಾಲಾಳು, ೫೦೦೦ ರಾಹುತರು ೯ ತೋಫುಖಾನೆ ಇಂತಿಷ್ಟು ಸೈನ್ಯಸನ್ನಾಹದೊಂದಿಗೆ ಬಂಕಾಪುರದ ಕಿಲ್ಲೆಯನ್ನು ಕಾಯ್ದುಕೊಂಡು ನಿಂತಿದ್ದನು. ಆ ಸೈನಿಕರೆಲ್ಲರು ಯುದ್ಧಕಲೆಯನ್ನು ಚನ್ನಾಗಿ ನುರಿತವರಿದ್ದರು. ಉಭಯಪಕ್ಷದ ದಂಡುಗಳು ಕುಂದಗೋಳ ತಾಲೂಕ ಸಂವಸಿ ಗ್ರಾಮದ ಮೈದಾನದಲ್ಲಿ ಪರಸ್ಪರ ಭೆಟ್ಟಿಯಾಗಲು, ಅಲ್ಲಿಯೇ ದೊಡ್ಡಕಾಳಗವಾಯಿತು. ( ೧೭೭೭ ಇಸವಿ. ) ಈ ಯುದ್ಧದಲ್ಲಿ ಪಟವರ್ಧನಸರದಾರರ ದಂಡು ಬಹಳೇ ಸ್ವಲ್ಪ ಇತ್ತು. ಆದರೂ ಅವರು ಕುಮದಾನನಕೂಡ ಶಸ್ತ್ರಹಿಡಿದು ಶೌರ್ಯದಿಂದ ಕಾದಿದರು. ಆದರೆ ಸೋಲುಗೆಲವುಗಳು ದೈವಾಧೀನವಲ್ಲವೇ? ಅಂತೇ ಆ ರಣಕಂದನದಲ್ಲಿ ಪಟವರ್ಧನರು ಪರಾಜಿತರಾದರು. ಈ ಸಂವಸಿಯ ತುಮುಲ ಕಾಳಗದಲ್ಲಿ ಕೋನೇರರಾವ, ಶ್ರೀಪತಮೋರೇಶ್ವರ, ವಾಸುದೇವಘೊಂಡದೇವ ಈ ತ್ರಿವರ್ಗ ಪಟವರ್ಧನಸರದಾರರು ಮರಣಹೊಂದಿದರು. ಪಾಂಡುರಂಗರಾಯನಿಗೆ ಬೆನ್ನಮೇಲೆ ಒಂದು, ತಲೆಗೆ ಒಂದು, ಹೀಗೆ ಎರಡು ಗಾಯಗಳಾಗಿ ಅವನೂ ಮತ್ತು ಇತರ ಕೆಲವುಜನರೂ ಶತ್ರುವಶರಾದರು. ಹೈದರನ ಜನರು ಅವರನ್ನು ಶ್ರೀರಂಗಪಟ್ಟಣಕ್ಕೆ ವೈದು ಅಲ್ಲಿ ಕಬ್ಬಿಣದ ಬಲವಾದ ಪಂಜರದೊಳಗೆ ಸೆರೆಯಿಟ್ಟರು. ಪಾಂಡುರಂಗರಾಯನು ಸೆರೆಮನೆಯಲ್ಲಿಯೇ ನವಿದು ಕಾಲವಾದನು. ( ಕಾರ್ತಿಕ ಶುದ್ಧ ೪, ಶಕೆ ೧೬೯೯ ). ಈ ಪಟವರ್ಧನಸರದಾರರು ಭಾವು ಮತ್ತು ಪೇಶವೆಸರಕಾರದ ಮಿಕ್ಕ ಸರದಾರರು ದಂಡುಸಹಿತ ಅವರ ಸಹಾಯಕ್ಕೆ ಬರುವ ಮೊದಲು ಕಾಳಗಕ್ಕೆ ಸಿಂತದರಿಂದ ಅವರ ಹಾಡು ಹೀಗೆ ಆಯಿತು. ಮುಂದೆ ತುಸುದಿವಸಗಳಲ್ಲಿ ಭಾವು ಇದರ ಸೇಡು ತೀರಿಸಿಕೊಳ್ಳದೆ ಬಿಡಲಿಲ್ಲ. ಆದರೆ ಮಾಡುವದೇನು ಸತ್ತವರು ಸತ್ತುಹೋದರು. ಪಟವರ್ಧನ ಮನೆತನದ ಈ ತರುಣ ಪುರುಷರು ಒಬ್ಬರ ಹಿಂದೊಬ್ಬರು ಮರಣಹೊಂದಿದರಿಂದ* ಅವರ ಕುಟುಂಬದಲ್ಲಿ ಆದ ಅನ

* ಹೀಗೆ ಪಟವರ್ಧನ ಮನೆತನದ ಪುರುಷರು ಕಾಳಗದಲ್ಲಿ ಮೃತರಾಗುತ್ತ ನಡೆಯಲು, ಅವರ ಕುಟುಂಬದಲ್ಲಿ ಇದ್ದ ಅಸಂಖ್ಯ ವಿಧವೆಯರ ವಿಷಯವಾಗಿ ಜನ ಕೇಳಿಕೆಯಲ್ಲಿರುವ ಒಂದು ಚಮತ್ಕಾರಿಕ ಸಂಗತಿಯನ್ನು ಇಲ್ಲಿ ಕೊಡುವೆವು.

ರ್ಥ, ಅವರವರ ತರುಣ ಸ್ತ್ರೀಯರು ಮಾಡಿದ ಪ್ರಳಾಪ ಮತ್ತು ಮನೆತನದ ಯಾವತ್ತು ಭಾರವು ಉತ್ತರವಯಸ್ಕನಾದ ಭಾವೂನ ಮೇಲೆ ಬಿದ್ದುದರಿಂದ ಆತನಿಗೆ ಅನಿಸಿದ ಕಷ್ಟ ಮತ್ತು ಆತನ ತಲೆಯಮೇಲೆ ಬಿದ್ದ ಪರ್ವತ ಪ್ರಾಯ ಜವಾಬುದಾರಿ, ಇತ್ಯಾದಿ ಸಂಗತಿಗಳ ವಿಚಾರವನ್ನು ಪಾಠಕಮಹಾ ಶಯರ ಪಾಲಿಗೊಪ್ಪಿಸಿ, ಮುಂದಿನ ಕಥಾ-ಸರಣಿಯನ್ನು ಹಿಡಿಯುವೆವು.

ಇತ್ತ ಸಂವಸಿಯ ಸಂಗ್ರಾಮವಿಜಯದಿಂದ ಹೈದರನು ಮತ್ತಿಷ್ಟ ಉಬ್ಬಿದನು. ಆತನಿಗೆ ಮುಗಿಲು ಮೂರುಬಟ್ಟು ಉಳಿಯಿತು. ಅವನು ಕೊಪ್ಪ ಳ, ಬಹದ್ದೂರಬೇಡ ಕಿಲ್ಲೆಗಳನ್ನು ಹಿಡಿದುಕೊಂಡನು. ಇಷ್ಟಕ್ಕೆ ಆತನು ಸುಮ್ಮನೆ ಕೂಡ್ರದೆ, ಇ. ಸ. ೧೭೭೮ ನೇ ಎಪ್ರೇಲ ತಿಂಗಳ ಕೊನೆಗೆ ತೋಫು

---

ಎರಡನೆ ಬಾಜೀರಾಯನ ಕುಹಕ-ಸ್ವಭಾವವು ಎಲ್ಲರಿಗೆ ಗೊತ್ತಿದ್ದ ಮಾತು. ಆತನು ಭಾವೂನ ಉತ್ಕರ್ಷವನ್ನು ಸೈರಿಸದೆ ಆತನ ಜಹಗೀರವನ್ನು ಜಪ್ತಮಾಡಲಾ ಜ್ಞಾಪಿಸಿದನು. ಮರ್ಮಜ್ಞನಾದ ಭಾವು ಆತನ ಮನೋಗತವನ್ನು ಕಂಡುಹಿಡಿದು, ಒಂದುದಿವಸ ಆತನನ್ನು ಊಟಕ್ಕೆ ಕರೆದನು. ಶ್ರೀಮಂತರಿಗೆ ತಕ್ಕ ಮೇಜವಾನಿಯು ಸಿದ್ಧವಾಗಿತ್ತು. ಭೋಜನಸಮಾರಂಭವಾದ ಬಳಿಕ ಬಾಜೀರಾಯನು ತನ್ನ ಬಿಡಾ ರಕ್ಕೆ ಹೋಗುವದಕ್ಕಾಗಿ ಎದ್ದನು. ಭಾವು ಪೇಶವೆಯನ್ನು ಕಳುಹಿಸುವದಕ್ಕೆ ತಲೆ ಬಾಗಿಲವರೆಗೆ ಬಂದನು; ಬರುವಷ್ಟರಲ್ಲಿ ಬಾಜೀರಾಯನು ಬಲಗಡೆಯ ಪಡಸಾಲೆ ಯ ಕಡೆಗೆ ನೋಡಲು, ಅಲ್ಲಿ ೧೮ ಜನ ವಿಧವೆಯರು ೧೮ ಪತ್ರಾವಳಿಗಳನ್ನು ಬಡಿಸಿ ಕೊಂಡು ಅಧೋವದನರಾಗಿ ಊಟಮಾಡುತ್ತಿರುವದನ್ನು ಕಂಡನು. ಆಗ ಆತನು ಬೆರಗಾಗಿ "ಭಾವೂಸಾಹೇಬ, ಇದು ಏನು? ಈ ವಿಧವಾಸಮೂಹವು ಎಲ್ಲಿಯದು?" ಎಂದು ವಿಚಾರಿಸಿದನು. ಕೂಡಲೆ, ಮಾತಿನ ಚತುರನಾದ ಭಾವು "ಒಡೆಯರೇ, ಪೇಶವೆ ಗಾದಿಯನ್ನು ಉಳಿಸುವದಕ್ಕಾಗಿ ಇಂತಿಷ್ಟು ಸ್ತ್ರೀಜನರ ಶೂರ ಪತಿರಾಯರು ಸಮರಭೂಮಿಯಲ್ಲಿ ಕಾದಿ ಪ್ರಾಣನೀಗಿದರು; ಇವರೆಲ್ಲರ ಜೀವಿತವು ಪಟವರ್ಧನರ ಜಹಗೀರನ್ನೇ ಅವಲಂಬಿಸಿರುತ್ತದೆ. ಹೀಗಿದ್ದರೂ, ಪಟವರ್ಧನರ ಜಹಗೀರು ಜಪ್ತ ಮಾಡುವ ಇಚ್ಛೆಯಿದ್ದರೆ, ಆ ಪ್ರಕಾರ ಮಾಡಿಬಿಡಲು ಶ್ರೀಮಂತರು ಸಮರ್ಥರೇ ಇರುವರು." ಎಂದು ಸಮಯೋಚಿತ ಮತ್ತು ಸಮರ್ಪಕವಾದ ಉತ್ತರ ಹೇಳಿದನು. ಅದನ್ನು ಕೇಳಿ ಬಾಜೀರಾಯನು ಭಾವೂನ ಜಹಗೀರನ್ನು ಜಪ್ತಮಾಡುವ ಗೊಡವೆ ಯನ್ನು ಬಿಟ್ಟನು.

ಖಾನೆಸಹಿತ ಒಂದು ದೊಡ್ಡ ದಂಡನ್ನು ಉತ್ತರಕರ್ನಾಟಕದ ರಾಜಧಾನಿಯಾದ ಧಾರವಾಡವನ್ನು ಮುತ್ತಿ ತಕ್ಕೊಳ್ಳುವದಕ್ಕಾಗಿ ಕಳುಹಿದನು.*

ಆಗ್ಗೆ ಪರಶುರಾಮಭಾವು ಕೊಲ್ಹಾಪುರದಲ್ಲಿ ಇದ್ದನು. ಸಂವಸಿಯ ಸಂಗ್ರಾಮ-ದುರ್ದಶೆಯ ಸಮಾಚಾರವು ಶ್ರೀಮಂತ ಸರಕಾರಕ್ಕೆ ತಲ್ಪಿತು. ಈ ಅಪಜಯದ ಸೇಡು ತೀರಿಸಿಕೊಂಡು ಹೈದರನನ್ನು ಮೆತ್ತಗೆ ಮಾಡಿ ಬರಬೇಕೆಂದು, ಮಂತ್ರಿಮಂಡಲದವರು ದಂಡುಕೂಡಿಸಿ, ಅದರ ದಂಡನಾಯಕತ್ವವನ್ನು ಫಡಕೆ ಹರಿಪಂತನಿಗೊಪ್ಪಿಸಿ ಕಳುಹಿಸಿದರು; ಆತನ ನೆರವಿಗಾಗಿ ಶಿಂದೆ, ಭಾವು, ರಾಸ್ತೆ ಮತ್ತು ಧಾಯಗುಡೆ ಸರದಾರರು ನೇಮಿಸಲ್ಪಟ್ಟರು. ಭಾವು ಹರಿಪಂತನನ್ನು ಮಿರಜಿಯಲ್ಲಿ ಕೂಡಿಕೊಂಡನು. ತರುವಾಯ ಅವರಿಬ್ಬರು ಕರ್ನಾಟಕವನ್ನು ಒಳನುಗ್ಗಿ, ತುಂಗಾನದಿಯ ವರೆಗೆ ಶ್ರೀಮಂತ ಸರಕಾರದ ಅಮಲು ಮೊದಲಿನಂತೆ ಕೂಡ್ರಿಸಿದರು. ಅವರಿಗೆ ಹೋದಹೋದಲ್ಲಿ ಗೆಲವು ಸಿಕ್ಕಿತು. ಹೀಗೆ ವಿಜಯಶಾಲಿಗಳಾಗಿ ಆ ಶೂರಸರದಾರರು ಹೈದರನ ಪ್ರಾಂತವನ್ನು ಪ್ರವೇಶಮಾಡಲುದ್ಯುಕ್ತರಾದರು. ಪೇಶವೆ ಸರದಾರರ ಅದ್ವಿತೀಯ ರಣೋತ್ಸಾಹ, ಅಪ್ರತಿಮಪರಾಕ್ರಮ ಮತ್ತು ಯುದ್ಧವಿದ್ಯೆಯಲ್ಲಿ ಚನ್ನಾಗಿ ನುರಿತ ಅವರ ಸೈನಿಕರ ಸಾಮರ್ಥ್ಯಗಳನ್ನು ಕಂಡು ಹೈದರನು ಅಂಜಿದನು; ಕಡೆಗೆ ಅವನು ಜಯದ ಆಶೆದೊರೆದು ಆ ಸರದಾರರಿಗೆ ಶರಣುಬಂದನು. ಇಷ್ಟರಲ್ಲಿ ಪುಣೆಯಲ್ಲಿ ಕೆಲವೊಂದು ರಾಜಕಾರಸ್ಥಾನವು ಉಪಸ್ಥಿತವಾಯಿತು. ಅದರಿಂದ ಅವರು ಹೈದರನ ಒಪ್ಪಂದದ ಮಾತಿಗೊಪ್ಪಿ, ಹೇರಳವಾದ ಕಪ್ಪುಗಾಣಿಕೆಯನ್ನು ತಕ್ಕೊಂಡು ರಾಜಧಾನಿಗೆ ತೆರಳಿದರು.

ಇಷ್ಟರಲ್ಲಿ ಕೊಲ್ಹಾಪುರಕರನು ಮತ್ತೆ ತಲೆ ಎತ್ತಿದನು. ಕರ್ನಾಟಕದ ದಾಳಿಯನ್ನು ಮುಗಿಸಿಕೊಂಡು ಬಂದಬಳಿಕ ಭಾವು ಆತನೊಡನೆ ಪುನಃ

---

* ಹೈದರನು ಧಾರವಾಡವನ್ನು ಬಹಳ ಯುಕ್ತಿಯಿಂದ ಹಿಡಿದುಕೊಂಡನು. ಅವನು ಪೇಶ್ವೇ ದಂಡು ಸಹಾಯಕ್ಕೆ ಬರುವದೆಂದು ಸುಳ್ಳು ಕಾಗದ ಒರೆಯಿಸಿ, ಅದು ಅಲ್ಲಿಯ ಪೇಶವೆಯ ಸುಭೇದಾರನಿಗೆ ಮುಟ್ಟುವಂತೆ ಮಾಡಿ, ತನ್ನ ದಂಡಿನವ ರಲ್ಲಿ ಕೆಲವರಿಗೆ ಮರಾಠಾ ಸಿಪಾಯರ ವೇಷಹಾಕಿಸಿ, ಕೋಟೆಯ ಕಾವಲುಗಾರರು ಅವರನ್ನು ಒಳಗೆ ಬರಗೊಟ್ಟ ಕೂಡಲೆ ಶ್ರಮವಿಲ್ಲದೆ ಆ ಕೋಟೆಯನ್ನು ಹಿಡಿದುಕೊಂಡನು. ಹೈದರನಿಗೆ ಈ ಮೋಸದ ಫಲವು ಮುಂದೆ ಬೇಗನೆ ಸಿಕ್ಕಿತು.

ಶಸ್ತ್ರಹಿಡಿದನು. ಆತನು ಆಕಿವಾಟವನ್ನು ಮುತ್ತಿ, ಕಿಲ್ಲೆಯ ಸುತ್ತುಮುತ್ತು ಮೋರ್ಚೆಗಳನ್ನು ಕಟ್ಟಿ ಅದಕ್ಕೆ ಲಗ್ಗೆಹತ್ತಿದನು. ಎರಡೂ ದಂಡಿನ ಜನರು ಕೈಗೆ ಕೈಹತ್ತಿ ಹುರಪಿನಿಂದ ಹೆಣಗಾಡಿದರು; ಹಗೆಗಳ ಕಡೆಯ ಇಬ್ಬರು ಶೂರ ಸರದಾರರು ಭಾವೂನನ್ನು ಕೆಣಕಿ ಕಾಳಗಕ್ಕೆ ನಿಂತರು. ಅವರೊಡನೆ ಭಾವು ಬಹು ಹಂಚಿಕೆಯಿಂದ ಕಾದಿದನು. ಆತನ ಶಕ್ತಿಯುಕ್ತಿಗಳ ಮುಂದೆ ಆ ಸರದಾರರಿಬ್ಬರ ಆಟವು ನಿಂತು, ಕಡೆಗೆ ಅವರು ಯುದ್ಧದಲ್ಲಿ ಬಿದ್ದು ಹತರಾದರು. ಶತ್ರುಪಕ್ಷದ ೨೦೦।೨೫೦ ಜನರು ಪ್ರಾಣನೀಗಿದರು. ೭೦೦-೮೦೦ ಜನರು ಗಾಯಹೊಂದಿದರು. ಹೀಗೆ ಹಗೆಗಳು ದುರ್ದಶೆಯನ್ನು ಹೊಂದಿ ದೆಶೆಗೆಟ್ಟರು. ಆಗ ಆ ಕಿಲ್ಲೆಯು ಭಾವೂನ ಹಸ್ತಗತವಾಯಿತು. ತರುವಾಯ ಅವನು ಶಿರೋಳ ಕಿಲ್ಲೆಯನ್ನು ಮುತ್ತಿ ಹಲ್ಲಾಮಾಡಿದನು. ಅದೂ ಆತನ ಕೈವಶವಾಯಿತು. ಹೀಗೆ ಎರಡು ಕೋಟೆಗಳು ಭಾವೂನ ಕರಗತವಾದದ್ದನ್ನು ಕಂಡು ಹಗೆಗಳ ಕಡೆಯ ಜನರು ಬೆದರಿದರು. ಆತನ ಹೆಸರು ಕೇಳಿ ಅವರು ಧೈರ್ಯಗೆಡುತ್ತಿದ್ದರು. ಭುದರಗಡದ ಕಿಲ್ಲೇದಾರನು ಭಾವೂನ ಶೌರ್ಯಕ್ಕೆ ಅಂಜಿಕೊಂಡು, ತಾನಾಗಿಯೇ ಆ ಕಿಲ್ಲೆಯನ್ನು ಭಾವೂಗೆ ಒಪ್ಪಿಸಿ ಆತನಿಗೆ ಶರಣುಬಂದನು. ಹೀಗೆ ದಿನದಿನಕ್ಕೆ ಹೆಚ್ಚುತ್ತಿರುವ ಭಾವೂನ ಪರಾಕ್ರಮಕ್ಕೆ ಕೊಲ್ಹಾಪುರಕರನು ಹೆದರಿಕೊಂಡು, ಆತನಿಗೆ ಶರಣುಬರುವ ಹೊತ್ತು ಬಂತು. ಕಡೆಗೆ ಅರಸನು ಭಾವೂನ ಕೂಡ ಯುದ್ಧಮಾಡುವ ಭರಕ್ಕೆ ಬೀಳದೆ, ಸಂಧಾನಸಾಧನೆಗಾಗಿ ತನ್ನ ವಕೀಲನನ್ನು ಪುಣೆಗೆ ಕಳುಹಿಸಿದನು. ಮುಂದೆ ಒಪ್ಪಂದದ ಮಾತುಕಥೆಗಳು ಆಗಲು ಯುದ್ಧಪ್ರಸಂಗವು ನಿಂತಿತು.

ಹೈದರನ ಮೇಲೆ ಮಾಡಿದ ದಾಳಿಯಲ್ಲಿ ಹರಿಪಂತ ಫಡಕೆ, ಪರಶುರಾಮಭಾವು ಇತ್ಯಾದಿ ಪೇಶವೆಸರದಾರರು ವಿಜಯಶಾಲಿಗಳಾಗಿ ಹೈದರನನ್ನು ಚನ್ನಾಗಿ ಹಣ್ಣುಮಾಡುವ ಹವಣಿಕೆಯಲ್ಲಿದ್ದರು; ಆದರೆ ಯುದ್ಧವು ನಡುವೇ ನಿಲ್ಲಿಸಲ್ಪಟ್ಟು, ಅವರು ಹೈದರನೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಪುಣೆಯ ಹಾದೀಹಿಡಿದರೆಂದು ಮೇಲೆ ಹೇಳಿದ್ದೇವೆ. ಇದರ ಕಾರಣವೇನಂದರೆಃ—ರಘುನಾಥರಾಯನ ಉಪದ್ವ್ಯಾಪವು ಪುನರುದ್ಭವವಾಗಿತ್ತು. ಪುರಂಧರದ ಒಪ್ಪಂದದ ಪ್ರಕಾರ ಮುಂಬೈಸರಕಾರದವರು ಆತನ ಪಕ್ಷವನ್ನು ಬಿಟ್ಟುಬಿಡತಕ್ಕದ್ದು; ಆದರೆ ಅವರು ಹಾಗೆ ಮಾಡದೆ ರಘುನಾಥರಾಯನ ಬೆನ್ನುಗಟ್ಟಿ

ದರು; ಆತನ ಸವಿಸವಿಯ ಮಾತುಗಳಿಗೆ ಅವರು ಮರುಳಾಗಿಹೋದರು. ಆತನು "ನನಗೆ ಪೇಶವೆಪದವಿಯನ್ನು ಕೊಡಸಿದರೆ, ನಿಮಗೆ ಮುಂಬೈ ಸುತ್ತುಮುತ್ತಿನ ೧೯ಲಕ್ಷ ರುಪಾಯಿ ಉತ್ಪನ್ನವುಳ್ಳ ಪ್ರದೇಶವನ್ನು ಕೊಡುವೆನು; ಮುಂದೆ ನಿಮಗೆ ಅನುರಣ ಋಣಿಯಾಗಿ ನೀವು ಹೇಳಿದಂತೆ ಕೇಳುವೆನು" ಎಂದು ಮಧುರವಾಕ್ಯಗಳನ್ನು ನುಡಿದು, ಮುಂಬೈಸರಕಾರದವರನ್ನು ಮರುಳುಮಾಡಿದನು. ಈ ಪ್ರಕಾರ ರಘುನಾಥರಾಯನ ಮಧುರಭಾಷಣಕ್ಕೆ ಮೋಹಿತರಾದ ಮುಂಬೈ ಸರಕಾರದವರು ಆತನ ಪಕ್ಷ ಬಿಡದೆ ಮುಂದಿನ ಹಂಚಿಕೆಯಲ್ಲಿದ್ದರು. ಯುದ್ಧವನ್ನು ನಿಲ್ಲಿಸಿ ಸೈನ್ಯವನ್ನು ತಿರಿಗಿ ಕಳುಹಿಸುವದಕ್ಕೆ ಸರ್ವಾಧಿಪತಿಯ ಕಟ್ಟಪ್ಪಣೆಯು ಬಂದುದರಿಂದ ಅವರು ನಿರುಪಾಯರಾಗಿ ಆ ಪ್ರಕಾರ ಮಾಡಿದ್ದರು. ಆದರೂ ಅವರು ಅಂತರಂಗತಃ ರಘುನಾಥರಾಯನಿಗೆ ಕೈಲಾದಷ್ಟು ಸಹಾಯಮಾಡುತ್ತಿದ್ದರು. ಆಗ್ಗೆ ರಾಘೋಬನು ಮುಂಬೈಗೆ ಬಂದು ಅಲ್ಲಿ ಇಂಗ್ಲೀಷರ ಆಶ್ರಯದಲ್ಲಿ ಇರಹತ್ತಿದನು. ಆತನು ಅವರ ಸಹಾಯದಿಂದ ಆಂಗ್ಲ ಸಾರ್ವಭೌಮರಕಡೆಗೆ ಒಂದು ಬಿನ್ನಹಪತ್ರವನ್ನು ಬರಕೊಂಡನು. ಅದಕ್ಕೆ ಮುಂಬೈಸರಕಾರದವರು ತಮ್ಮ ಅನುಕೂಲ ಅಭಿಪ್ರಾಯವನ್ನು ಬರೆದು ಅದನ್ನು ಮುಂದೆ ಕಳಿಸಿಕೊಟ್ಟರು. ರಘುನಾಥರಾಯನ ವಿನಯಪೂರಿತವಾದ ಬಿನ್ನಹಕ್ಕೂ, ಮುಂಬೈ ಸರಕಾರದವರ ಗೌರವದ ಅಭಿಪ್ರಾಯಕ್ಕೂ ಇಂಗ್ಲಂಡ ಸರಕಾರದವರು ಮೋಹಿತರಾಗಿ ರಘುನಾಥರಾಯನೊಡನೆ ಮಾಡಿದ ಸುರತದ ಒಪ್ಪಂದವನ್ನು ಮಾನ್ಯಮಾಡಿದರು. ಇಷ್ಟರಲ್ಲಿ ಕೆಲವು ಫ್ರೆಂಚಜನರು ಪುಣೆಗೆ ಬಂದಿದ್ದರು; ಅಲ್ಲಿ ಅವರ ಆದರಸತ್ಕಾರವು ಚನ್ನಾಗಿ ನಡೆದಿತ್ತು. ಇದೆಲ್ಲ ವರ್ತಮಾನವು ಬಂಗಾಲ ಸರಕಾರದವರಿಗೆ ಹತ್ತಲು, ಅವರು ಮಂತ್ರಿಮಂಡಲದವರ ವಿಷಯವಾಗಿ ಸಾಶಂಕಮನಸ್ಕರಾದರು.

ಇಷ್ಟಾದತರುವಾಯ, ಮುಂಬೈ-ಬಂಗಾಲಸರಕಾರಗಳ ನಡುವೆ ಈ ವಿಷಯವಾಗಿ ಕೆಲವು ಪತ್ರವ್ಯವಹಾರವು ನಡೆದು, ರಘುನಾಥರಾಯನಿಗೆ ಕಂಪನಿಸರಕಾರದ ಮೇಲಿನ ಹುಕುಮಿನಂತೆ, ಯೋಗ್ಯ ಸಹಾಯ ಮಾಡಿ ಆತನನ್ನು ಪೇಶವೆ ಗಾದಿಯಮೇಲೆ ಸ್ಥಾಪಿಸಬೇಕೆಂದು ಗೊತ್ತಾಯಿತು; ಮತ್ತು ಮುಂಬೈಯಿಂದ ಒಂದು, ಬಂಗಾಲದಿಂದ ಒಂದು ಹೀಗೆ ಎರಡು ಸೈನ್ಯಗಳನ್ನು ಮಹಾರಾಷ್ಟ್ರರೊಡನೆ ಕಾಳಗಕ್ಕೆ ಕಳಿಸಬೇಕೆಂದು ಆಗಿನ

ಸರ್ವಾಧಿಪತಿಯು‡ ನಿರ್ಣಯವಮಾಡಿದನು. ಗೊತ್ತಾದಮೇರೆಗೆ ರಘುನಾಥ ರಾಯನನ್ನು ಕೂಡಿಕೊಂಡು ೩,೦೦೦ ಜನರುಳ್ಳ ಇಂಗ್ಲೀಷರ ಒಂದು ಸೈನ್ಯವು ಮುಂಬೈಯಿಂದ ಹೊರಟು ಪುಣೆಯ ಹಾದಿಯನ್ನು ಹಿಡಿಯಿತು. ( ಇ. ಸ. ೧೭೭೮ ನವ್ಹಂಬರ ).

ಇತ್ತ ಇಂಗ್ಲೀಷರ ಯುದ್ಧಜೋಡಣೆಯ ವೃತ್ತಾಂತವು ನಾನಾಫಡಣೀಸನಿಗೆ ಈ ಮೊದಲೇ ತಿಳದಿತ್ತು. ಅದರಿಂದ ಅವನು ಅವರೊಡನೆ ಯುದ್ಧ ಮಾಡುವದಕ್ಕೆ ಮಹಾದಾಜಿ ಶಿಂದೇನನ್ನು ದಂಡಿನೊಡನೆ ಕಳಸಿಕೊಟ್ಟನು.

ಇಂಗ್ಲೀಷರ ಸೈನ್ಯವು ಘಟ್ಟವನ್ನು ದಾಟಿ ತಳಗಾಂವಕ್ಕೆ ಬಂದು ತಲ್ಪಿತು. ಅಲ್ಲಿ ಪೇಶವೆಯರ ಸೇನಾಸಮುದ್ರವು ತಮ್ಮೊಡನೆ ಕಾಳಗ ಮಾಡಲು ಹೊರಟುಬರುತ್ತದೆಂಬ ಸುದ್ದಿಯು ಅವರಿಗೆ ಹತ್ತಿತು. ಅದನ್ನು ಕೇಳಿ ಇಂಗ್ಲೀಷಸೇನಾಪತಿಯು ಭಯಭೀತನಾದನು. ಆತನ ಧೈರ್ಯವು ಕುಗ್ಗಿತು. ಸಂಗಡವಿದ್ದ ದಂಡು ಸಣ್ಣದಿದ್ದದರಿಂದ ಅವನು ಕೈಕಾಲು ಬಿಟ್ಟನು; ಕಡೆಗೆ ಅವನು ಕಾಳಗದ ವಿಚಾರವನ್ನು ಬಿಟ್ಟು “ಬಂದಹಾದಿಗೆ ಸುಂಕವಿಲ್ಲ” ಎಂಬಂತೆ ದಂಡಿನೊಡನೆ ಹಿಂದಿರುಗಿದನು. ಇದು ತಿಳಿಯುತ್ತಲೆ ಮರಾಠಾ ಸರದಾರರು ಅವರ ಬೆನ್ನುಹತ್ತಿದರು. ಅವರು ವಡಗಾಂವ ಎಂಬಲ್ಲಿ ಇಂಗ್ಲೀಷಸೈನ್ಯದಮೇಲೆ ಬಿದ್ದು ಮುತ್ತಿದರು. ಅಲ್ಲಿ ಕಿಡಿಕಿಡಿಯಾದ ಕಾಳಗ ನೆಸಗಿತು. ಅದರಲ್ಲಿ ಭಾವೂನಕಡೆಯ ಯಾದವಾಡಕರ ಬಳವಂತರಾಯನಿಗೆ ಗುಂಡುತಗಲಿ ಗಾಯವಾಯಿತು. ಮರಾಠಾಸರದಾರರು ಇಂಗ್ಲೀಷರ ದಂಡನ್ನು ನಾಲ್ಕೂಕಡೆಯಿಂದ ಸುತ್ತಿಬಿಟ್ಟರು. ಆಗ ಸೇನಾಪತಿಯಾದ ಕಾಕಬರ್ನನು ಒಪ್ಪಂದಕ್ಕೆ ಸಿದ್ಧನಾದನು. ಮುಂದೆ ಶಿಂದೇನ ಮಧ್ಯಸ್ಥಿಕೆಯಿಂದ ಇಂಗ್ಲೀಷ-ಪೇಶವೆಯರ ನಡುವೆ ಒಡಂಬಡಿಕೆಯಾಯಿತು. ( ೧೭೭೯ ಇ. ಸ.). ಅದರ ತಾತ್ಪರ್ಯಃ—

೧. ಇಂಗ್ಲೀಷರು ರಘುನಾಥರಾಯನನ್ನು ಪೇಶವೆಯರ ಸ್ವಾಧೀನಮಾಡಿ ಅತಃಪರ ಆತನ ಪಕ್ಷವನ್ನು ಹಿಡಿಯಬಾರದು.

೨. ಅವರು ಬಡೋಚ ಪ್ರಾಂತವನ್ನು ಶಿಂದೇನಿಗೆ ಬಿಟ್ಟುಕೊಡಬೇಕು.

---

‡ ಆಗ್ಗೆ ಇಂಗ್ಲೀಷರ ಸರ್ವಾಧಿಪತಿಯು ಆಂಗ್ಲಸಾಮ್ರಾಜ್ಯರೂಪ ಭವ್ಯಮಂದಿರವನ್ನು ಕಟ್ಟಿ ಖ್ಯಾತಿಗೊಂಡ ವಾರ್ನ ಹೆಸ್ಟಿಂಗ್ಸನೆಂಬ ಧೊರೆಯು ಇದ್ದನು.

೩. ಬಂಗಾಲದಿಂದ ಬರುವ ಸೈನ್ಯಗಳನ್ನು ಹಿಂದಕ್ಕೆ ಕಳಿಸಬೇಕು.

೪. ಇಂಗ್ಲೀಷರ ಇಬ್ಬರು ಸರದಾರರು ಪೇಶವೆಯರ ದರಬಾರದಲ್ಲಿ ಇರಬೇಕು.

೫. ಒಟ್ಟಿನಮೇಲೆ, ಇ. ಸ. ೧೭೭೩ ರಲ್ಲಿ ಇದ್ದ ಸ್ಥಿತಿಯು ನಿರಂತರ ನಡೆಯತಕ್ಕದ್ದು.

ಹೀಗೆ ಒಪ್ಪಂದವಾದಬಳಿಕ ರಘುನಾಥರಾಯನು ಶಿಂದೇನ ಸ್ವಾಧೀನನಾದನು.

ಆಹವಮೂಲನಾದ ರಾಘೋಬನು ಶ್ರೀಮಂತ ಸರಕಾರದವರ ವಶನಾಗಿದ್ದರೂ, ಯುದ್ಧಪ್ರಸಂಗವು ಮುಗಿಯಲಿಲ್ಲ. ಸೇನಾಪತಿಯು ಮಾಡಿದ ಒಪ್ಪಂದವನ್ನು ಮುಂಬೈಸರಕಾರದವರು ಮಾನ್ಯಮಾಡಲಿಲ್ಲ. ಅದರಿಂದ ಅವರು ಪುನಃ ಯುದ್ಧದ ಸಿದ್ಧತೆಯನ್ನು ಮಾಡಿದರು. ಬಂಗಾಲದಿಂದ ಹೊರಟು ಬಂದ ಸೈನ್ಯಸಾಗರವು ನರ್ಮದೆಯನ್ನು ದಾಟಿಬಂತು. ಆ ದಂಡಿನ ಸರ್ವಾಧಿಪತಿಯು ತುಂಗವಿಕ್ರಮನಾದ ಗಾಡರ್ಡನು. ಅವನು ಭೋಸಲೆಯ ಸಹಾಯವು ದೊರಕಿದರೆ ನೆಟ್ಟಗಾಗುವದೆಂದು ಹರಪ್ರಯತ್ನಮಾಡಿದನು. ಆದರೆ ಅದೆಲ್ಲ ನಿಷ್ಫಲವಾಯಿತು. ಗಾಡರ್ಡಧೊರೆಯು ಕಲಕತ್ತೆಯಿಂದ ಹೊರಟ ೨೦ ದಿವಸಗಳಲ್ಲಿ ೩೦೦ ಮೈಲು ದಾರೀ ನಡೆದು ಹಾದಿಯಲ್ಲಿ ಮಹಾರಾಷ್ಟ್ರರ ಪಾಳೇಗಾರರ ಹಾವಳಿಯಿಂದ ಅನೇಕ ತೊಂದರೆಗಳನ್ನು ಸೋಸುತ್ತ ತಾ. ೬-೧-೧೭೭೯ ದಿವಸ ಸುರತಕ್ಕೆ ಬಂದು ಮುಟ್ಟಿದನು. ಬಳಿಕ ರಘುನಾಥರಾಯನು ಶಿಂದೇನ ಕಟ್ಟಿನೊಳಗಿಂದ ಜಾರಿಕೊಂಡು, ಗಾಡರ್ಡ ಸಾಹೇಬನನ್ನು ಕೂಡಿಕೊಂಡನು; ಆಗ ಆ ಇಂಗ್ಲೀಷ ದಳಪತಿಯು ನಾನಾನೊಡನೆ ಹೊಸ ಅನುಸಂಧಾನ ನಡಿಸಿದನು. ಆದರೆ ನಾನಾನು "ಮೊದಲು ರಘುನಾಥರಾಯನನ್ನು ಸ್ವಾಧೀನಮಾಡರಿ. ಬಳಿಕ ಏನು ಮಾತಾಡುವದು ಮಾತಾಡರಿ" ಎಂದು ಹಟಹಿಡಿದನು. ಅದರಿಂದ ಇಂಗ್ಲೀಷರು ಒಪ್ಪಂದದ ಹಾದಿಯನ್ನು ಬಿಟ್ಟು ಮುಂದಿನ ಯುದ್ಧವಿಚಾರದಲ್ಲಿ ಮಗ್ನರಾದರು. ಬಳಿಕ ಗಾಡರ್ಡನು ಗಾಯಕವಾಡನ ಸಹಾಯವನ್ನು ಬಯಿಸಿ ಉತ್ತರಕ್ಕೆ ನಡೆದನು. ಶಿಂದೇಹೋಳಕರರು ಆತನ ಬೆನ್ನುಹತ್ತಿದರು. ಗಾಯಕವಾಡನು ಇಂಗ್ಲೀಷರಿಗೆ ನೆರವಾಗಲಿಲ್ಲ. ಆಗ ಗಾಡರ್ಡಸಾಹೇಬನು ಗುಜರಾಥದೊಳಗಿಂದ ಹಾಯ್ದು ಅಹ್ಮದಾಬಾದ ಕೋಟೆಯನ್ನು ಹಿಡಕೊಂಡು ಮುಂಬೈಗೆ ಬಂದನು.

ಅಲ್ಲಿಂದ ಆ ಶೂರಕರ್ನಲ್ಲನು ಸೈನ್ಯಸಹಿತ ಪುಣೆಯ ಹಾದೀ ಹಿಡಿದು ಬೋಪ ವಳಿಗೆ ಬಂದನು. ಈ ಸುದ್ಧಿಯು ನಾನಾನಿಗೆ ಹತ್ತಿದ ಕೂಡಲೆ ಅವನು ಯುದ್ಧಸೌರಣೆಯನ್ನು ಲಗುಬಗೆಯಿಂದ ಮಾಡಿಕೊಂಡು, ಹುಜೂರಸೈನ್ಯ ತೋಫಖಾನೆಗಳನ್ನು ಕೊಟ್ಟು, ಪಾನಸೆ, ಧುಳಪ ಮತ್ತು ರಾಸ್ತೆ ಸರದಾರ ರನ್ನು ಬೋರಘಟ್ಟದ ಮಾರ್ಗದಿಂದ ಕಳಿಸಿಕೊಟ್ಟನು. ಇದಲ್ಲದೆ ನಾನಾ ಫಡಣವೀಸನು ಪರಶುರಾಮಭಾವೂಗೆ ದಂಡಿನೊಡನೆ ರಾಜಧಾನಿಗೆ ಬೇಗ ಹೊರಟು ಬರಬೇಕೆಂದು ಪತ್ರ ಬರೆದನು.

ರಾಜಾಜ್ಞೆಯಂತೆ ಭಾವು ತನ್ನ ದಂಡುಸಹಿತ ಪುಣೆಗೆ ಬಂದನು. ಕೂಡಲೆ ನಾನಾನು ಆತನ ಸ್ವಾಧೀನಕ್ಕೆ ೧೨೦೦೦ ಸೈನ್ಯವನ್ನು ಕೊಟ್ಟು, ಗಾಡರ್ಡಸಾಹೇಬನ ಸಹಾಯಕ್ಕೆ ಮುಂಬೈಯಿಂದ ಬರುವ ಯುದ್ಧ ಸಾಮಗ್ರಿಗಳನ್ನು ಅಡ್ಡಗಟ್ಟಿ, ಅವನ ಕೈಗೆ ಸಿಗದಂತೆ ಮಾಡಿಬಿಡುವಂತೆ ಅಪ್ಪಣೆಕೊಟ್ಟು ಕಳುಹಿದನು; ಹರಿಪಂತ ಫಡಕೆ, ಮತ್ತೆ ಹೋಳಕರ ಇವ ರಿಬ್ಬರು ಅವರವರ ದಂಡಿನೊಂದಿಗೆ ಘಟ್ಟದಮೇಲೆ ನಿಯಮಿಸಲ್ಪಟ್ಟರು. ಆಗ ಭಾವು ಮಾಡಬೇಕಾದ ಕೆಲಸವು ಬಲು ಬಿಗಿಯಾದದ್ದು ಇದ್ದರೂ, ಆತನು ಅದರಲ್ಲಿಯೇ ಯಶಸ್ವಿಯಾಗಿ ಕೃತಕಾರ್ಯನಾದನು.

ಭಾವು ಕೊಂಕಣವನ್ನು ಪ್ರವೇಶಮಾಡಿದ ಕೂಡಲೆ ಆತನು ಪನವೇ ಲಿಯಿಂದ ಯುದ್ಧಸಾಮಗ್ರಿಯೊಡನೆ ಗಾಡರ್ಡಸಾಹೇಬನ ಬೆಂಬಲಕ್ಕೆಂದು ಹೊರಟು ಬಂದ ಮೇಕಿಸಾಹೇಬನಿಗೆ ಗಂಟುಬಿದ್ದನು. ಭಾವೂನ ಸೈನಿಕರ ಹಾವಳಿಯನ್ನು ಸಹಿಸಿಕೊಂಡು, ಅವರ ಕೈಯೊಳಗಿಂದ ಪಾರಾಗಬೇಕೆಂದು ಮೇಕಿಸಾಹೇಬನು ರಾತ್ರಿಯಲ್ಲಿಯೇ ೧೨ ಮೈಲು ಪ್ರವಾಸಮಾಡಿದನು. ಆತನು ಪಯಣಗತಿಯಿಂದ ಚೌಕಗಾಂವಕ್ಕೆ ಬಂದು ಮುಟ್ಟಿದನು. ಭಾವು ಅವನ ಬೆನ್ನುಹತ್ತಿ ಬಂದು, ಇಂಗ್ಲೀಷ ಜನರಮೇಲೆ ಬಿದ್ದು ಅವರ ಅಸಂಖ್ಯ ಯುದ್ಧಸಾಮಗ್ರಿಗಳನ್ನು ಕಳಕೊಂಡನು. ಮರಾಠಾ-ಇಂಗ್ಲೀಷರ ನಡುವೆ ಚಕಮಕಿಯು ನಡೆದಿರಲು ಬಂಗಾಲಸರಕಾರದಿಂದ ಹೊರಟುಬಂದ ಒಂದು ಇಂಗ್ಲೀಷ ಪಲಟಣದ ಜನರು ಒಮ್ಮಿಂದೊಮ್ಮೆ ಭಾವೂನ ಮೇಲೆ ಸಾಗಿ ಬಂದು ಆತನ ದಂಡನ್ನು ಮುತ್ತಿದರು; ಅವರ ಕಾಟವನ್ನು ಮೊದಲು ಭಾವು ತಾಳಿಕೊಂಡನು. ಮುಂದೆ ತುಸು ಹೊತ್ತಿನಲ್ಲಿ ಆ ದಂಡು ಮುಖ್ಯ ಸೈನ್ಯ ವನ್ನು ಹಿಂದೆ ಬಿಟ್ಟು ಬಹುದೂರ ಬಂದಿರುವದೆಂದು ತಿಳಿಯಲು, ಭಾವು

ಅದನ್ನು ಎಲ್ಲ ಕಡೆಯಿಂದ ಮುತ್ತಿ ಜೇರಿಗೆ ತಂದನು. ಇಂಗ್ಲೀಷಜನರು ದುರ್ದಶೆಯನ್ನು ಹೊಂದಿ ಹಿಂದಕ್ಕೆ ಸರಕೊಂಡರು. ಆಗ ಕಾಳಗವು ನಿಂತಿತು. ಉಭಯದಳದ ಜನರು ಹಗಲು ಸುಮ್ಮಗೆ ಇರುತ್ತಿದ್ದರು. ರಾತ್ರಿಯಾದ ಬಳಿಕ ಮೇಕಿಸಾಹೇಬನು ಪ್ರಯಾಣಕಾರ್ಯವನ್ನು ನಡಿಸುತ್ತಿದ್ದನು. ಅದು ತಿಳಿಯುತ್ತಲೆ ಭಾವು ಅವನನ್ನು ಬೆನ್ನಟ್ಟುತ್ತಿದ್ದನು. ಹೀಗೆ ಪ್ರವಾಸಕ್ರಮದಿಂದ ಮೇಕಿಸಾಹೇಬನು ಬಹು ಪ್ರಯಾಸದಿಂದ ಪೋಪವಳಿಗೆ ಬಂದು ಮುಖ್ಯ ಸೇನಾಪತಿಯನ್ನು ಕೂಡಿಕೊಂಡನು.

ಮುಂದೆ ೧೫ ದಿನಗಳಾದಬಳಿಕ ಗಾಡರ್ಡಸಾಹೇಬನು ಕರ್ನಲ್ಲ ಬ್ರಾವುನನೆಂಬುವನ ಕೂಡ ೩ ಪಲಟಣ, ಹತ್ತು ತೋಫು ಮತ್ತು ಕೆಲವು ಶೂರ ಸ್ವಾರರು ಇಂತಿಷ್ಟು ಸೈನ್ಯಕೊಟ್ಟು, ಪನವೇಲಿಯಿಂದ ಪುನ: ಯುದ್ಧಸಾಮುಗ್ರಿಯನ್ನು ತಕ್ಕೊಂಡುಬರುವದಕ್ಕೆ ಕಳುಹಿದನು. ಹಾದಿಯಲ್ಲಿ ಭಾವು ಹೊಂಚುಹಾಕಿಕೊಂಡು ಕೂತೇ ಇದ್ದನು. ಆತನು ಬ್ರಾವುನನನ್ನು ಅಡ್ಡಗಟ್ಟಿ ಆತನ ದಂಡನ್ನು ಸುಲಿದನು. ಯುದ್ಧಸಾಮಾನುಗಳನ್ನು ಹೇರಿದ ಎತ್ತುಗಳನ್ನು ಬ್ರಾವುನನು ಕೊಡಬಾರದೆಂದು ಕೈಲಾದಷ್ಟು ಯತ್ನಮಾಡಿದನು; ಆದರೆ ದೀರ್ಘಸಾಹಸಿಯಾದ ಭಾವು ಬಿಡಲಿಲ್ಲ. ಹಲವು ಎತ್ತುಗಳು ಆತನ ವಶವಾದವು. ನಾನಾನು ಭಾವೂನ ನೆರವಿಗೆ ತುಕೋಜರಾವ ಹೋಳಕರನನ್ನು ಕಳಿಸಿದ್ದನು. ಆ ಪ್ರಸಂಗದಲ್ಲಿ ಭಾವೂಗೆ ಆತನು ಬಹಳೇ ಸಹಾಯಮಾಡಿದನು. ಭಾವು ನಡುವೇ ಹಾದೀಬಡೆದು ಸುಲಗೆಮಾಡಿದ್ದರಿಂದ ಬ್ರಾವುನಸಾಹೇಬನು ಮುಂದೆ ಹೋಗುವದು ಅಸಾಧ್ಯವಾದುದಲ್ಲದೆ, ಹಿಂದಕ್ಕೆ ಹೋಗುವದು ಸಹ ಶಕ್ಯವಿದ್ದಿಲ್ಲ. ಯುದ್ಧ-ಸಾಮುಗ್ರಿಯು ಬಾರದರಿಂದ ಗಾಡರ್ಡಭೊರೆಯು ಮುಂಗಾಣದಾದನು. ನಾಲ್ಕೂಕಡೆಯಿಂದ ಅವನು ತೊಂದರೆಯಲ್ಲಿ ಬಿದ್ದನು. ನೋಡಿದತ್ತೆಲ್ಲ ಮರಾಠಾಸರದಾರರ ಹಾವಳಿಯು. ಅವನ ಧೈರ್ಯವು ಕುಗ್ಗಿತು. ಆಗ ಅವನು ಮುಂಬೈಯಿಂದ ನವೀನ ಸೇನಾ-ಸಹಾಯವನ್ನು ತರಿಸಿಕೊಂಡನು. ಇತ್ತ ಬ್ರಾವುನಸಾಹೇಬನು ಭಾವೂಸಾಹೇಬನ ಕಾಟವನ್ನು ಹೇಗಾದರು ಸೈರಿಸಿಕೊಂಡು, ಉಳಿದ ಸಾಮಾನಗಳೊಂದಿಗೆ ಖೋಪವಳಿಗೆ ಬಂದು ಮುಟ್ಟಿದನು. ಈ ಗುದ್ದ್ಯಾಟದಲ್ಲಿ ಇಂಗ್ಲೀಷರ ಅಸಂಖ್ಯ ಯುದ್ಧಸಾಮುಗ್ರಿಯು ಭಾವೂನ ಕೈವಶವಾದುದಲ್ಲದೆ ಅವರ ಕಡೆಯ ನೂರಾರು ಜನರು ಸತ್ತುಹೋದರು.

ಈ ಪ್ರಕಾರ ಯುದ್ಧಸಾಮಗ್ರಿಗಳ ಸುಲಿಗೆಯಾದುದರಿಂದ ಮತ್ತು ಮಹಾರಾಷ್ಟ್ರರ ಉಪಟಳವು ಹೆಚ್ಚಾದ್ದರಿಂದ ಗಾಡರ್ಡಸಾಹೇಬನು ಪುಣೆಯ ಮೇಲೆ ಸಾಗಿಹೋಗುವ ಆಶೆಯನ್ನು ಬದಿಗಿಟ್ಟು ಮರಳಿ ಮುಂಬೈಗೆ ಹೋಗುವದನ್ನು ನಿಶ್ಚೈಯಿಸಿದನು; ಮುಂಬೈಯಿಂದ ಅನಾಯಾಸವಾಗಿ ಹೊಸ ದಂಡು ಬಂದಿರುವದು; ತಿರುಗಿ ಹೋಗುವದಕ್ಕೆ ಇದೇ ಉತ್ತಮಸಂಧಿಯೆಂದು ತಿಳಿದು ಆತನು ಮೊದಲು ಬುಣಗು ತೋಫು ಮುಂತಾದವುಗಳನ್ನು ಕಳುಹಿಸಿ, ತಾನು ಹಿಂದಿನಿಂದ ಯಾರಿಗೂ ತಿಳಿಯದಂತೆ ಹೊರಟು ಹೋಗುವ ವ್ಯವಸ್ಥೆಯನ್ನು ಮಾಡಿಕೊಂಡನು. ಆಗ್ಗೆ ಭಾವು ತನ್ನ ದಂಡುಸಹಿತ ಭೀಮಾಶಂಕರಘಟ್ಟದ ಅಡಿಯಲ್ಲಿದ್ದನು; ಹೋಳಕರನು ಕುಸರಘಟ್ಟದ ಅಡಿಯಲ್ಲಿ; ಮತ್ತು ಹರಿಪಂತನು ಘಟ್ಟದಮೇಲೆ ಖಂಡಾಳ ಮತ್ತು ಕಾರ್ಲೆ ಇವುಗಳ ನಡುವೆ ಸೈನ್ಯಸಹಿತ ಇದ್ದನು. ಗಾಡರ್ಡಧೊರೆಯ ಹಿಂದಿರುಗುವ ವಿಚಾರ-ಸಮಾಚಾರವು ಮರಾಠಾಸರದಾರರಿಗೆ ಹತ್ತಿತು. ಅವರು ಅವನನ್ನು ಚೆನ್ನಾಗಿ ಮುತ್ತಿ ಹಣಿಗೆ ತರಬೇಕೆಂದು ಯೋಚಿಸಿ, ತಕ್ಕ ವ್ಯವಸ್ಥೆಯನ್ನು ಮಾಡಿಕೊಂಡರು. ಗಾಡರ್ಡನು ತನ್ನ ಛಾವಣಿಯನ್ನು ಬಿಟ್ಟು ಹೊರಟ ಮರುದಿವಸವೇ, ಹರಿಪಂತನು ಅವನ ಮೇಲೆ ಒಮ್ಮಿಂದೊಮ್ಮೆ ವೇಗದಿಂದ ಸಾಗಿ ಹೋಗಿ, ಅವನ ದಂಡನ್ನು ಹಲ್ಲಾ ಮಾಡಿದನು; ಅವನ ದಂಡಿನಜನರು ಇಂಗ್ಲೀಷರ ಪಲಟಣಗಳನ್ನು ಸುಲಿದರು. ಅವರ ಅಸಂಖ್ಯ ಯುದ್ಧ-ಸಾಮಗ್ರಿಗಳು ಶತ್ರುವಶವಾದವು. ಗಾಡರ್ಡಸಾಹೇಬನು ಮಹಾರಾಷ್ಟ್ರರ ಕಾಟವನ್ನು ಹತ್ತಿಕ್ಕಿ ಅಂದಿನ ದಿವಸ ಅಲ್ಲಿಯೇ ಮುಜಲುಮಾಡಿದನು. ಮರುದಿವಸ ಅವನು ಅಲ್ಲಿಂದ ಹೊರಟು ಸ್ವಲ್ಪ ದೂರ ಹೋಗುವಷ್ಟರಲ್ಲಿ ಹರಿಪಂತನ ಸೈನಿಕರು ಬಿಟ್ಟ ಒಂದು ಗುಂಡು ಇಂಗ್ಲೀಷರ ಯುದ್ಧಸಾಮಾನುಗಳ ಮೇಲೆ ಬಿದ್ದು ಬೆಂಕಿಹತ್ತಿತು. ಹತ್ತಿದ ಬೆಂಕಿಯು ಹೆಚ್ಚಾಗಿ ಕೆಲವು ಸಾಮಾನುಗಳು ಸುಟ್ಟು ಬೂದಿಯಾದವು. "ಮೊದಲುತುತ್ತಿಗೆ ಹರಳು" ಎಂಬ ನಾಣ್ಣುಡಿಯಂತೆ ಅಂದಿನ ಪ್ರವಾಸ ಪ್ರಾರಂಭಕ್ಕೆ ಅಪಶಕುನವಾಯಿತು. ಆದರೂ ಆ ಧೈರ್ಯಶಾಲಿಯಾದ ಗಾಡರ್ಡನು ಮಹಾರಾಷ್ಟ್ರರ ಹಾವಳಿಯನ್ನು ಲೆಕ್ಕಿಸದೆ, ದಂಡಿನೊಡನೆ ಮುಂದಿನ ಹಾದೀ ಹಿಡದನು. ಮುಂದೆ ಹೋಗುವಷ್ಟರಲ್ಲಿ, ಭಾವುಹೋಳಕರರು ತಮ್ಮ ಸೈನ್ಯಸಹಿತ ಬಂದು ಆತನನ್ನು ತರುಬಿದರು. ಹೀಗೆ ಮುಂದೆ ಭಾವುಹೋಳಕರರ ಕಾಟವು; ಹಿಂದೆ

ಹರಿಪಂತನ ಕಾಟವು. ಈ ಪ್ರಕಾರ ಮರಾಠಾ ಸರದಾರರು ಇಂಗ್ಲೀಷ ಸೈನ್ಯದ ಹಿಂಕಟ್ಟು ಮುಂಕಟ್ಟು ಕಟ್ಟಿದ್ದರಿಂದ ಗಾಡರ್ಡಸಾಹೇಬನು ಬಳ್ಳೇ ಪೇಚಿನಲ್ಲಿ ಸಿಕ್ಕನು. ಆಗಿನ ಆತನ ಅವಸ್ಥೆಯು ಅಡಕೊತ್ತಿನಲ್ಲಿ ಅಡಕಿ ಸಿಕ್ಕಂತಾಗಿತ್ತು. ಆ ದಿವಸ ರಣಶೂರರಾದ ಇಂಗ್ಲೀಷರು ತಾವು ತುಸು ಜನ ರಿದ್ದರೂ ಬಹಳ ಕಲಿತನದಿಂದ ಕಾದಿದರು. ಎರಡೂಪಕ್ಷದ ಅಸಂಖ್ಯ ಜನರು ಕಾದಿ ಮಡಿದರು. ಸ್ವತಃ ಗಾಡರ್ಡಸಾಹೇಬನಿಗೆ ಮೂರು ಗಾಯ ಗಳು ಆಗಿದ್ದವು. ಈ ಮೇರೆಗೆ ಆತನು ಮರಾಠಾ ಸರದಾರರ ಕಾಟವನ್ನು ಸಾವಧಾನದಿಂದಲೂ, ಬಹು ಹಂಚಿಕೆಯಿಂದಲೂ ತಪ್ಪಿಸಿಕೊಂಡು ಅವರ ಕೈಯೊಳಗಿಂದ ಪಾರಾಗಿ, ಹೇಗಾದರೂ ಮಾಡಿ ಪನವೇಲಿಗೆ ಬಂದು ಮುಟ್ಟಿದನು.

ಹೀಗೆ ಗಾಡರ್ಡಸಾಹೇಬನು ಕಷ್ಟನಷ್ಟಗಳನ್ನು ಸೋಸುತ್ತ, ಮಿಕ್ಕ ದಂಡಿನೊಡನೆ ಪನವೇಲಿಗೆ ಬಂದ ಸುದ್ಧಿಯನ್ನು ಕೇಳಿದ ಕೂಡಲೆ ರಘುನಾಥ ರಾಯನ ಪ್ರಾಣವು ಹಾರಿದಂತಾಯಿತು. ಅವನ ಮನೋರಾಜ್ಯವು ಲೋಪ ವಾಯಿತು. ಮನುಷ್ಯನು ಹತ್ತಿ ನಿಂತಗಿಡದ ಬೊಡ್ಡೆಯನ್ನು ಕಡಿದುಚಲ್ಲಿ ದರೆ, ಆತನ ಅವಸ್ಥೆಯು ಯಾವಪ್ರಕಾರವಾಗುವದೋ ಅದೇಪ್ರಕಾರ ತಾನು ಆಶ್ರಯಮಾಡಿಕೊಂಡ ಇಂಗ್ಲೀಷರು ಸೋತು ಹಿಂದಿರುಗಿ ಬಂದದರಿಂದ ರಘುನಾಥರಾಯನ ಅವಸ್ಥೆಯಾಯಿತು. ಆದರೂ ಅವನು ಪೂರಾ ನಿರಾಶಿತ ನಾಗದೆ ಪುನಃ ಇಂಗ್ಲೀಷರೊಡನೆ ಅನುಸಂಧಾನ ಹಚ್ಚಿದನು. ಆತನು ತನಗೆ ಪೇಶವೆ ಪದವಿಯನ್ನು ದೊರಕಿಸಿ ಕೊಟ್ಟರೆ ತನ್ನ ಭಾವೀರಾಜ್ಯದ ೬ನೇ ಪಾಲನ್ನು ಅಂದರೆ ಮೊದಲಿನ ಒಪ್ಪಂದದಲ್ಲಿ ಗೊತ್ತಾದ್ದರ ಇಮ್ಮಡಿ ಯಷ್ಟು ಸೀಮೆಯನ್ನು ಕೊಡುವೆನೆಂದು ಗಂಟುಬಿದ್ದನು. ಆಗ್ಗೆ ದಯಾಶೀಲ ರಾದ ಇಂಗ್ಲೀಷರು ಬೆನ್ನಿಗೆ ಬಿದ್ದವರನ್ನು ಕಾಪಾಡಬೇಕೆಂಬ ರಾಜನೀತಿಯ ಅಭಿಮಾನದಿಂದ ಪುನಃ ಕಾಳಗದ ಸೌರಣೆಯನ್ನು ಮಾಡಿಕೊಂಡು, ಸ್ಟೂವ ರ್ಟನೆಂಬ ಕಡುಗಲಿಯನ್ನು ಸರ್ವಸನ್ನಾಹದೊಂದಿಗೆ ಪೇಶವೆ ಸರದಾರ ರೊಡನೆ ಯುದ್ಧಮಾಡಲಿಕ್ಕೆ ಕಳಿಸಿಕೊಟ್ಟರು. ಕ್ಯಾಪ್ಟನ್ನ ಸ್ಟೂವರ್ಟನು ಮುಂಬೈಯಿಂದ ಹೊರಟು ಬೋರಘಟ್ಟದ ಮಾರ್ಗದಿಂದ ಘಟ್ಟವನ್ನೇರಿ ಬಂದನು. ಆತನು ಘನಪರಾಕ್ರಮಿಯಿದ್ದುದಲ್ಲದೆ, ಆತನ ದಂಡಿನ ಜನರು ತಿದ್ದಿ ತಯಾರಾದವರಿದ್ದರು. ಆತನು ಸೈನ್ಯಸಹಿತ ಯುದ್ಧಕ್ಕೆದುರಾಗಲು,

ಫಡಕೆ, ಹೋಳಕರ, ಧುಳಪ, ರಾಸ್ತೆ ಇತ್ಯಾದಿ ಸರದಾರರು ತಮ್ಮ ಕೈಯಿಂದಾದಷ್ಟು ಹೆಣಗಾಡಿದರು. ಆದರೆ ಗಂಡುಗಲಿಯಾದ ಸ್ಟೂವರ್ಟಸಾಹೇಬನ ಪರಾಕ್ರಮದ ಮುಂದೆ ಮಹಾರಾಷ್ಟ್ರರ ಆಟವು ನಿಂತಿತು. ಇಲ್ಲಿಯವರೆಗೆ ಪುರಂಧರದಲ್ಲಿ ತೋರಿಬರುತ್ತಿದ್ದ ಆನಂದವು ಇಲ್ಲದಂತಾಯಿತು. ನಾನಾ ಮುಂತಾದ ಕಾರಭಾರಿಗಳ ಮೋರೆಯ ಮೇಲಿನ ನೀರು ಇಳಿಯಿತು. ಆದರೂ ಅವರು ಧೈರ್ಯಗೆಡದೆ ನಾನಾಬಗೆಯ ಪ್ರಯತ್ನಗಳನ್ನು ಕೈಕೊಂಡು ಇಂಗ್ಲೀಷರನ್ನು ಹಣ್ಣಿಗೆತರುವ ಹಂಚಿಕೆಯಲ್ಲಿದ್ದರು. ಅವರು ಪಾನಸೆ ಸರದಾರನೊಡನೆ ತೋಫಖಾನೆಯನ್ನು ಕೊಟ್ಟು ಫಡಕೆ ಮುಂತಾದವರ ಬೆಂಬಲಕ್ಕೆ ಕಳಿಸಿಕೊಟ್ಟರು. ಮರಾಠಾ ದಂಡಿನಲ್ಲಿ ಹಾಹಾಕಾರವೆದ್ದು, ದಂಡಿನ ಜನರು ಪಲಾಯನಮಂತ್ರವನ್ನು ಜಪಿಸಲಾರಂಭಿಸಿದ್ದರು. ಆಗ ಪಾನಸೆ ಸರದಾರನು ತೋಫಖಾನೆಸಹಿತ ಅವರನ್ನು ಬಂದುಕೂಡಲು, ಅವರು ತುಸು ಧೈರ್ಯಗೊಂಡರು. ಬಳಿಕ ೩-೪ ಸ್ಥಳಗಳಲ್ಲಿ ಇಂಗ್ಲೀಷರಿಗೂ-ಮಹಾರಾಷ್ಟ್ರರಿಗೂ ಕಡುಕಾಳಗವೆಸಗಿ ಇಂಗ್ಲೀಷರು ಜಯಶಾಲಿಗಳಾಗಿ ದುರ್ಜಯರಾದರು. ಇಷ್ಟರಲ್ಲಿ ಘಟ್ಟದ ಕೆಳಗೆ ಇದ್ದ ಪರಶುರಾಮಭಾವು ಸೈನ್ಯಸಹಿತ ಬಂದು ಅವರನ್ನು ಕೂಡಿಕೊಂಡನು. ಇಂಗ್ಲಿಷ-ಮರಾಠಾ ಸೈನ್ಯಗಳು ಕಾರ್ಲೆಯಂಬಲ್ಲಿ ಕಾಳಗಕ್ಕೆ ಎದುರಾದವು. ಭಾವು ಮತ್ತು ಹರಿಪಂತ ತಾತ್ಯಾ ಈ ಉಭಯಕಲಿಗಳು ಜೀವದ ಹಂಗುದೊರೆದು ಕಾಳಗಕ್ಕೆ ಅಣಿಯಾದರು. ಅವರಿಬ್ಬರ ಕಾಲೋಚಿತ ರಣಸಾಹಸ-ರಣೋತ್ಸಾಹಗಳನ್ನು ಕಂಡು ಸೈನಿಕರೆಲ್ಲರು ಪ್ರೋತ್ಸಾಹಗೊಂಡು ಯುದ್ಧಕ್ಕೆ ಮುಂದರಿದು ಬಂದರು. ಇಷ್ಟರಲ್ಲಿ ಆ ರಣ-ಮೈದಾನದಲ್ಲಿ ಒಮ್ಮಿಂದೊಮ್ಮೆ ಭಯಂಕರ ಬಿರುಗಾಳಿಯು ಬೀಸಹತ್ತಿತು. ಅದು ಪೇಶವೆಯ ಸೈನಿಕರ ಹಿಂದಿನಿಂದಲೂ ಇಂಗ್ಲೀಷರ ಎದುರಿನಿಂದಲೂ ಬಳ್ಳೇ ಜೋರಿನಿಂದ ಬೀಸುತ್ತಿತ್ತು. ಅದರಿಂದ ಮರಾಠಾ ಸೈನ್ಯದವರಿಗೆ ಮತ್ತಿಷ್ಟು ಹುರುಪು ಹುಟ್ಟಿತು; ಅವರು "ದೇವರು ದೊಡ್ಡವನು, ಸ್ವಾಮಿಯ ದೈವವು ಚಲೋದು; ಅದರಿಂದಲೆ ಪ್ರತ್ಯಕ್ಷ ವಾಯುದೇವರು ನಮಗೆ ಅನುಕೂಲಿಸಿರುವನು." ಎಂದು ತಮ್ಮತಮ್ಮೊಳಗೆ ಮಾತಾಡುತ್ತ ಕಾಳಗಕ್ಕೆ ಸಜ್ಜಾಗಿ ನಿಂತುಕೊಂಡರು. ಆದರೆ ಇಂಗ್ಲೀಷರಿಗೆ ಆ ಗಾಳಿಯು ಪ್ರತಿಕೂಲವಾದದರಿಂದ ಯುದ್ಧಮಾಡುವದು ಪರಮಪ್ರಯಾಸವೆನಿಸಿತು. ಅಜಿಂಕ್ಯರಾದ ಆರಮರರನ್ನು ಸೋಲಿಸಿಬಿಡಲು, ಇಲಿಜಾಬೇಥ

ರಾಣಿಗೆ ವಾಯುಅಸ್ತ್ರವು ( ಅನುಕೂಲಗಾಳಿಯು ) ದೊರೆತಂತೆ, ಅಂದಿನ ಕಾಳಗದಲ್ಲಿ ಅಂಜನೀ-ಪತಿಯು ಪೇಶವೆಸರದಾರರಿಗೆ ಸಂಪೂರ್ಣಸಹಾಯ ಮಾಡಿದನು. ತಮಗೆ ಅನುಕೂಲಗಾಳಿಯು ಬಿಟ್ಟದ್ದು ಶ್ರೀಮಂತರ ಪುಣ್ಯ ಪ್ರಭಾವವೆಂದು ಬಗೆದು ಮರಾಠಾಸರದಾರರು ಆವೇಶದಿಂದ ಕಾದಲನುವಾದರು. ಆಗ ಸೇನಾಪತಿಯಾದ ಹರಿಪಂತನು ಸಮಯೋಚಿ ತರಣ–ವ್ಯೂಹ ವನ್ನು ರಚಿಸಿ, ದಂಡಿನ ಜನರಲ್ಲಿ ಇನಾಮು ಹಂಚಿಕೊಟ್ಟು, ಅವರಲ್ಲಿ ಹರ್ಷವನ್ನು ಹುಟ್ಟಿಸಿದನು.

ತರುವಾಯ ಮರಾಠಾಸೈನಿಕರು ಮುಂದರಿದು ಬಂದು ಜೀವದಾಶೆ ದೊರೆದು ಕಾದತೊಡಗಿದರು. ಹೋಳಕರ, ಪಾನಸೆ, ರಾಸ್ತೆ ಧುಳಪಸರದಾರರು ಶತ್ರುಗಳಮೇಲೆ ತೋಫುಗುಂಡುಗಳ ಮಳೆಗರೆದರು. ಆಗ ಪರಶುರಾಮಭಾವು ತನ್ನ ದಂಡುಸಹಿತ ಮುಂದರೆದುಬಂದು ಬಹಳ ನಿಕರದಿಂದ ಹೋರಾಡಹತ್ತಿದನು. ತೋಫುಗಳ ಹೊಡತದಿಂದ ಹೊರಡುವ ಹೊಗೆಯು ದಶದಿಕ್ಕುಗಳನ್ನು ವ್ಯಾಪಿಸಿತು. ತುಳಿದಾಟದಿಂದ ಎದ್ದ ಧೂಳಿಯು ಆಕಾಶ ಮಂಡಲವನ್ನು ಮುಚ್ಚಿಬಿಟ್ಟಿತು. ಎಲ್ಲಿನೋಡಿದರೂ ಭಯಂಕರವಾದ ಅಂಧಕಾರವು ಕವಿಯಿತು. ಗೋಲಂದಾಜರು ಗುಂಡಿಗೆ ಸರಬತ್ತಿಯನ್ನು ಹಚ್ಚು ವಾಗ ಹುಟ್ಟುವ ಬೆಂಕಿಯು ನೀಲಮೇಘಾಚ್ಛಾದಿತವಾದ ಗಗನಮಂಡಲದಲ್ಲಿ ಥಳಥಳನೆ ಹೊಳೆಯುವ ಮಿಂಚಿನಂತೆ ತೋರುತ್ತಿತ್ತು. ನಡುನಡುವೆ ಆರ್ಭಟಿಸುತ್ತಿರುವ ವೀರಭಟರ ರಣಗರ್ಜನೆಯು ಮುಂಗಾರಿಯ ಗುಡುಗಿನಂತೆ ಭಯಪ್ರದವಾಗಿತ್ತು. ಇಂಗ್ಲೀಷರು ಕಡಿಮೇಶೂರರೇ? ಅವರಿಗೆ ಪ್ರತಿಕೂಲವಾದ ಪ್ರಚಂಡಗಾಳಿಯು ಬಿಟ್ಟದರಿಂದ ಮತ್ತು ನೋಡಿದತ್ತೆಲ್ಲ ಕೃತ್ರಿಮವಾದ ಕತ್ತಲೆಯು ಕವಿದದರಿಂದ ಅವರಿಗೆ ಮರಾಠಾಸೈನಿಕರ ಸುಳವುಸಹ ಹತ್ತದಂತಾಯಿತು. ಆಗ ಆಹವಚತುರನಾದ ಇಂಗ್ಲೀಷದಳಪತಿಯಾದ ಸ್ಟೂವರ್ಟನು ಮರಾಠಾದಂಡಿನ ಮೊಟ್ಟನ್ನು ತಿಳಿದು ಅದರ ಎಣಿಕೆಯನ್ನು ಮಾಡಬೇಕೆಂದು ಒಂದು ಮರವೇರಿ, ದುರ್ಬಿನಹಚ್ಚಿ ನೋಡಹತ್ತಿದನು. ಅದನ್ನು ಕಂಡು ಹರಿಪಂತನ ಅಪ್ಪಣೆಯಂತೆ ಒಬ್ಬ ಗೋಲಂದಾಜನು ಆ ಸಾಹೇಬನಿಗೆ ಗುರಿಯಿಟ್ಟು ಗುಂಡು ಹೊಡೆಯಲು ಆತನು ನೆಲಕ್ಕುರಳಿ ಅಸುದೊರೆದನು. ಬಳಿಕ ಕೇಳುವದೇನು? ಮರಾಠಾ ಸೈನ್ಯದ ಜನರು ಇಂಗ್ಲೀಷರ ಮೇಲೆ ತ್ವೇಷದಿಂದ ಸಾಗಿಹೋಗಿ ಅವರನ್ನು ನಿರ್ವಿಣ್ಣಮಾಡಿದರು.

ದಂಡಿನೊಡೆಯನು ಮೃತವಾದುದರಿಂದ ಮತ್ತು ಮರಾಠಾದಂಡಿನವರ ಪರಾಕ್ರಮವು ಹೆಚ್ಚಾದುದರಿಂದ ಇಂಗ್ಲೀಷಸೈನಿಕರು ರಣಭೂಮಿಯಿಂದ ಕಾಲ್ದೆಗೆದು ಪನವೇಲಿಗೆ ಬಂದು ಮುಟ್ಟಿದರು. †

ಹೀಗೆ ಇಂಗ್ಲೀಷರು ಮಹಾರಾಷ್ಟ್ರರೊಡನೆ ಯುದ್ಧದಲ್ಲಿ ತೊಡಗಿರುವದನ್ನು ಕಂಡು ಹೈದರಅಲ್ಲಿಯು ದಕ್ಷಿಣಹಿಂದುಸ್ತಾನದಲ್ಲಿ ಬಂಡಾಯವೆಬ್ಬಿಸಿದನು. ಆತನು ಇಂಗ್ಲೀಷರ ಅಂಕಿತಕ್ಕಿರುವ ಪ್ರದೇಶಗಳನ್ನು ಒಂದರಹಿಂದೊಂದು ಹಿಡಕೊಳ್ಳಲಾರಂಭಿಸಿದನು. ಹೈದರನು ಎದ್ದು ಕೂತದರಿಂದ ಮತ್ತು ಮಹಾರಾಷ್ಟ್ರರೊಡನೆ ಮಾಡಿದ ಯುದ್ಧದಲ್ಲಿ ಫಲನಿಷ್ಪತ್ತಿಯು ತೋರಿಬಾರದದರಿಂದ ಚಾಣಾಕ್ಷರಾದ ಇಂಗ್ಲೀಷರು ಯುದ್ಧಪ್ರಸಂಗವನ್ನು ಮುಗಿಸಬೇಕೆಂದು ಯೋಚಿಸಿದರು. ಇತ್ತ ಕಲಕತ್ತೆಯಿಂದ ಹೊರಟುಬಂದ ಪೋಫಾಮನೆಂಬುವ ಶೂರಸರದಾರನು ದುರ್ಗಮವಾದ ಗ್ವಾಲೇರಕಿಲ್ಲೆಯನ್ನು ಹಿಡಕೊಂಡನು. ಇಷ್ಟರಲ್ಲಿ ಹೈದರನು ಕೆಲವು ಕಾಳಗಗಳಲ್ಲಿ ಸೋತು ಕಡೆಗೆ ಅವನು ಕಾಲಿಗೆ ಹುಣ್ಣು ಆಗಿ ಕಾಲವಾದನು. ಇದೆಲ್ಲ ಸಮಾಚಾರವನ್ನು ಕೇಳಿ ನಾನಾ ಇತ್ಯಾದಿ ಕಾರಭಾರಿಗಳು ಇಂಗ್ಲೀಷರೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವದು ವಿಹಿತವೆಂದು ತಿಳಿದು ಅವರ ಅನುಸಂಧಾನಕ್ಕೆ ಸಮ್ಮತಿಸಿದರು. ಕಡೆಗೆ ಶಿಂದೇನ ವಿದ್ಯಮಾನ ಇಂಗ್ಲೀಷ-ಮಹಾರಾಷ್ಟ್ರರನಡುವೆ ಸಾಲ್ಬಾಯಿಯಲ್ಲಿ ಒಪ್ಪಂದವಾಯಿತು. * ಈ ಒಪ್ಪಂದದಿಂದ ದಾದಾಸಾಹೇಬನ ( ರಘುನಾಥರಾವ ) ಇತಿಶ್ರೀಯು ಆದಂತಾಯಿತು. ತರು

---

† ಈ ಯುದ್ಧವು ಮಹಾರಾಷ್ಟ್ರರ ಮೊದಲನೆ ಯುದ್ಧವೆಂದು ಇತಿಹಾಸಪ್ರಸಿದ್ಧವಾಗಿರುವದು. ಇದರಬಗ್ಗೆ ಕೆಲವುಕೆಲವು ಇತಿಹಾಸಕಾರರ ಅಭಿಪ್ರಾಯವು ಭಿನ್ನಭಿನ್ನವುಂಟು. ಆದರೆ ನಾವು ಇಲ್ಲಿ ಕೊಟ್ಟವರ್ಣನೆಯು ಬಹುಮತವನ್ನು ಒಳಕೊಂಡಿರುವದರಿಂದ ಇದು ಹೆಚ್ಚು ವಿಶ್ವಸನೀಯವಾದದ್ದೆಂದು ಒಪ್ಪಬೇಕಾಗುವದು.

* ಸಾಲ್ಬಾಯಿ ಒಪ್ಪಂದದ ಮುಖ್ಯ ಶರ್ತುಗಳು:—

೧ ಪುರಂಧರದ ಒಪ್ಪಂದವಾದಬಳಿಕ ಇಂಗ್ಲೀಷರು ಗೆದ್ದುಕೊಂಡ ಪ್ರದೇಶಗಳನ್ನು ಬಿಟ್ಟುಕೊಡಬೇಕು.

೨ ಪುರಂಧರದ ಒಪ್ಪಂದದಲ್ಲಿ ಗೊತ್ತಾದಪ್ರಕಾರ ಪೇಶವೆಯುರು ಇಂಗ್ಲೀಷರಿಗೆ ಭಡೋಚದ ಬಳಿಯಲ್ಲಿ ೩ ಲಕ್ಷ ಉತ್ಪನ್ನದ ಸೀಮೆಯನ್ನು ಕೊಡಬೇಕಾಗಿತ್ತು. ಅದನ್ನು ಅವರು ಬೇಡಬಾರದು.

ವಾಯ ರಾಜ್ಯಪದವಿಯ ಆಶೆದೊರೆದು ಆತನು ಹೆಂಡರು-ಮಕ್ಕಳೊಡನೆ ಗೋದಾವರಿ ದಂಡೆಯ ಮೇಲಿರುವ ಕೋಪರಗಾಂವಕ್ಕೆ ಬಂದು ಅಲ್ಲಿ ಇರಹತ್ತಿದನು. ಮುಂದೆ ಅವನು ರಾಜಕಾರಭಾರದಲ್ಲಿ ಯಾವ ಗೊಂದಲವನ್ನೂ ಎಬ್ಬಿಸಲಿಲ್ಲ. ಆದರೆ ತಾನು ಪೇಶವೆಗಾದಿಯ ಮಾಲಕನಾಗಿ ಸ್ವತಂತ್ರನಾಗಬೇಕೆಂದು ಮಾಡಿದ ಎಲ್ಲ ಪ್ರಯತ್ನಗಳು “ ನೀರೊಳಗೆ ಹೋಮಮಾಡಿದಂತೆ ವ್ಯರ್ಥವಾದವೆಂಬ ಹೃದ್ರೋಗದಿಂದ ನವಿದು, ದಾದಾಸಾಹೇಬನು ಕಡೆಗೆ ಶಕೆ ೧೭೦೫ ಮಾರ್ಗಶೀರ್ಷ ವದ್ಯ ೭ ದಿವಸ ತೀರಿಕೊಂಡನು.

---

# ೭ನೇ ಅಧ್ಯಾಯ.

## ನರಗುಂದ-ಬದಾಮಿ ಯುದ್ಧಗಳು.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ರಘುನಾಥರಾಯನ ಹಾಡು ಮುಗಿದ ಬಳಿಕ ಕೆಲವು ದಿವಸ ಪೇಶವೆ ಸಾಮ್ರಾಜ್ಯದ ಪ್ರಜೆಗಳು ಸುಖ-ಶಾಂತಿಗಳನ್ನು ಅನುಭವಿಸಿದರು. ಪರಶುರಾಮಭಾವೂನ ತೀಕ್ಷ್ಣವಾದ ಖಡ್ಗವು ಅನೇಕ ವರ್ಷ ಯುದ್ಧಮಾಡಿ ರಕ್ತಪ್ರಾಶನದಿಂದ ಅಮಲು ಏರಿ ನಿದ್ರೆಮಾಡುತ್ತಿರುವದೊ ಏನೋ ಎಂಬಂತೆ ಅದು ತನ್ನ ಧನಿಯೊಡನೆ ತಾಸಗಾಂವಿಯಲ್ಲಿ ಸ್ವಸ್ಥ ಕೂತುಕೊಂಡಿತು.

ಇ. ಸ. ೧೭೮೩ರಲ್ಲಿ ಶ್ರೀಮಂತ ಸವಾಯಿಮಾಧವರಾಯನ ವಿವಾಹವು ಅತ್ಯಂತ ಸಂಭ್ರಮದಿಂದ ಆಯಿತು. ನಾನಾನು ತನ್ನ ರಾಜ್ಯ-ಕೌಶಲ್ಯದ ಪರಮಾವಧಿಯನ್ನು ತೋರಿಸುತ್ತ ರಾಜ್ಯಶಕಟವನ್ನು ನಡಿಸುತ್ತಿದ್ದನು. ಪರಚಕ್ರದ ಕಾಟವಿದ್ದಿಲ್ಲ. ಎಲ್ಲಕಡೆಗೂ ಪೇಶವಾಯಿಯ ದರ್ಪ ಕೂತು ರಾಜ್ಯ

---

೭ ಮುಂದೆ ಇಂಗ್ಲೀಷರು ಬ್ರಹ್ಮಘ್ನನೂ, ಕೃತಘ್ನನೂ, ಆದ ರಘುನಾಥರಾಯನ ಪಕ್ಷವನ್ನು ಕಟ್ಟಬಾರದು; ಆತನು ೨೫೦೦೦ ರೂಪಾಯಿಗಳ ಮಾಸಿಕ-ವೇತನವನ್ನು ತಕ್ಕೊಂಡು ಕೋಪರಗಾಂವದಲ್ಲಿ ವಾಸಮಾಡಬೇಕು—ಇತ್ಯಾದಿ.

ದಾಡಳತೆಯು ನಿಷ್ಕಂಟಕವಾಗಿ ಸಾಗತೊಡಗಿತು. ನಾನಾನ ತೇಜವು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಿತು.

ಈ ಸುಮಾರಕ್ಕೆ ಕರ್ನಾಟಕದಲ್ಲಿ ಕೊಲೆಸುಲಿಗೆಗಳು ಪ್ರಾರಂಭವಾಗಿ ಅಲ್ಲಿಯ ಹಿಂದೂಜನರು ಅಸಾಧ್ಯವಾದ ದುರ್ದಶೆಯನ್ನು ಹೊಂದಿದರು. ಇ. ಸ. ೧೭೮೨ರಲ್ಲಿ, ಪ್ರಜಾಪೀಡಕನಾಗಿ ಶ್ರೀಮಂತ ಮಾಧವರಾವ ಬಲ್ಲಾಳನ ಕೂಡ ಕಾದುವ ಸಮಭಟನಾದ ಕಪಟಪಟು ಹೈದರನು ಮರಣಹೊಂದಿದನು. ಆಗ ಜನರು “ ಕರ್ನಾಟಕದ ಕಾಟವು ನೀಗಿತು; ಈಗ ಇಲ್ಲಿ ಸಮಾಧಾನವು ನೆಲೆಗೊಳ್ಳುವದು. ಮರಾಠಾಸರದಾರರ ದಾಳಿಗಳೂ ನಿಲ್ಲಬಹುದು ” ಎಂದು ಭಾವಿಸಿದರು. ಆದರೆ ಹೈದರನ ತರುವಾಯ ಆತನ ಮಗನಾದ ಟೀಪುಸುಲ್ತಾನನು ಪಟ್ಟವೇರಿದನು. ಅವನ ದುಷ್ಕರ್ಮಾಚರಣೆಯು ಹೈದರನಕಿಂತಲೂ ಹೆಚ್ಚಾಗಿತ್ತು. “ ತಂದೆಯಂತೆ ಮಗ ” ಎಂಬ ಕಿತ್ತೆಯನ್ನು ಚನ್ನಾಗಿ ತೀಡಿದ್ದನು. ಹಿಂದಿನ ಯುದ್ಧದಲ್ಲಿ ಪೇಶವೆಸರಕಾರಕ್ಕೆ ಹೈದರನ ಕಡೆಯಿಂದ ದೊರೆತ ಪ್ರಾಂತಗಳನ್ನು ಅವರು ಆ ಆ ಪ್ರದೇಶಗಳ ವಾರ್ಷಿಕ ಕಂದಾಯವನ್ನು ತಪ್ಪದೆ ಸಲ್ಲಿಸಬೇಕೆಂಬ ಶರ್ತಿನಿಂದ ಆತನ ಕಡೆಗೆ ಬಿಟ್ಟಿದ್ದರು. ಟೀಪು ಪಟ್ಟವೇರಿದಬಳಿಕ ಅವನು ತನ್ನ ಮನಸ್ಸಿಗೆ ಬಂದಂತೆ ಭೂಮಿಯ ತೆರಿಗೆಯನ್ನು ಹೆಚ್ಚಿಸಿದನು. ಹೈದರನಲ್ಲಿ ಸ್ವಧರ್ಮದ ದುರಭಿಮಾನವಿದ್ದಿಲ್ಲ. ಅದರಿಂದ ಅವನು ಜನರನ್ನು ಧರ್ಮಕೃತ್ಯಗಳ ವಿಷಯವಾಗಿ ಪೀಡಿಸುತ್ತಿದ್ದಿಲ್ಲ. ಆದರೆ ಟೀಪುವಿನಲ್ಲಿ ಔರಂಗಜೇಬನಂತೆ ಸ್ವಧರ್ಮದ ದುರಭಿಮಾನವು ಸಂಪೂರ್ಣವಿದ್ದದ್ದಲ್ಲದೆ, ಅವನು ಪರಧರ್ಮ-ಸಹಿಷ್ಣುತೆಯನ್ನು ಕನಸುಮನಸ್ಸಿನಲ್ಲಿ ಸಹ ಅರಿಯನು. ಔರಂಗಜೇಬನ ಸ್ವಧರ್ಮದ ದುರಭಿಮಾನ ಮತ್ತು ಪರಧರ್ಮತಿರಸ್ಕಾರ-ಮೊದಲಾದವುಗಳ ಯೋಗದಿಂದಲೆ ಮೊಗಲರಾಜ್ಯವು ನಾಮಶೇಷವಾದಂತೆ ಟೀಪುಸುಲ್ತಾನನಲ್ಲಿದ್ದ ಅನೇ ದುರ್ಗುಣಪ್ರಭಾವದಿಂದ ಹೈದರನು ಸ್ವಪರಾಕ್ರಮದಿಂದ ಗಳಿಸಿದ ರಾಜ್ಯವು ಮುಂದೆ ಅಳಿದುಹೋಯಿತು. ಇವೆರಡು ದುರ್ಗುಣಗಳ ಅಭಾವ ಮತ್ತು ಅವಕ್ಕೆ ವಿರುದ್ಧವಾದ ಮಿತಸ್ವಧರ್ಮಾಭಿಮಾನ ಮತ್ತು ಪರಧರ್ಮ-ಸಹಿಷ್ಣುತೆಗಳು ರಾಜನೀತಿಯನ್ನು ಅರಿತ ಇಂಗ್ಲೀಷರಲ್ಲಿ ಸಂಪೂರ್ಣ ನೆಲೆಗೊಂಡದರಿಂದಲೇ ಅವರ ವಿಶಾಲವಾದ ಸಾಮ್ರಾಜ್ಯವು ಸೂರ್ಯಾಸ್ತವರ್ಜಿತ ಸಾಮ್ರಾಜ್ಯವೆಂಬ ಹೆಸರನ್ನು ಹೊಂದಿರುವದು. ಇರಲಿ. ಸ್ವಧರ್ಮದ ದುರಭಿ

ಮಾನಿಯಾದ ಟೀಪು ಮುಸಲ್ಮಾನ ಧರ್ಮಪ್ರಸಾರಕ್ಕಾಗಿ ಬಲತ್ಕಾರವನ್ನು ನಡೆಸಿದನು. ಆಗ ಕರ್ನಾಟಕದಲ್ಲಿ ಶಾಂತತೆಯು ನೆಲೆಗೊಳ್ಳುವ ಆಶೆಯು ನಷ್ಟವಾಯಿತು. ಅಲ್ಲಿಯ ಜನರು ಪರಿಪರಿಯ ಸಂಕಟಗಳನ್ನು ಅನುಭೋಗಿಸಬೇಕಾಯಿತು. ಮುಂದೆ ಸ್ವಲ್ಪ ದಿವಸಗಳಲ್ಲಿ ಟೀಪುಸುಲ್ತಾನನ ದುಷ್ಟ ಕೃತ್ಯಗಳ ಸಮಾಚಾರವು ಪೇಶವೆಸರಕಾರಕ್ಕೆ ಹತ್ತಿತು. ಅದರ ವಿವರವು ಹ್ಯಾಗಂದರೆ:—

ಕರ್ನಾಟಕದಲ್ಲಿ ನರಗುಂದ ಎಂಬದೊಂದು ಬ್ರಾಹ್ಮಣರ ಚಿಕ್ಕ ಸಂಸ್ಥಾನವಿರುವದು. ಅಲ್ಲಿಯ ವೆಂಕಟರಾವ ಭಾವೆಯೆಂಬ ಸಂಸ್ಥಾನಿಕನು ಮೊದಲಿಗೆ ಪೇಶವೆಯರ ಮಾಂಡಲಿಕನು. ಹೈದರನು ತುಂಗಭದ್ರೆಯನ್ನು ದಾಟಿ ಅದರ ಉತ್ತರದಿಕ್ಕಿನಲ್ಲಿ ದಂಡಿನೊಡನೆ ಬಂದು ನರಗುಂದವನ್ನು ಗೆದ್ದುಕೊಂಡಿದ್ದನು. ಅಂದಿನಿಂದ ಆ ಸಂಸ್ಥಾನಿಕನು ಶ್ರೀಮಂತಸರಕಾರಕ್ಕೆ ಕೊಡುತ್ತಿದ್ದ ಕರಭಾರವನ್ನು ಹೈದರನಿಗೆ ಕೊಡಲಾರಂಭಿಸಿದ್ದನು. ಟೀಪುವಿಗೆ ರಾಜ್ಯಪದವು ಪ್ರಾಪ್ತವಾದಮೇಲೆ ಅವನು ನರಗುಂದ ಸಂಸ್ಥಾನದಮೇಲೆ ದಂಡೆತ್ತಿ ಬಂದು, ಅಲ್ಲಿಯ ಸಂಸ್ಥಾನಿಕನಿಂದ ಮುಂಚಿಗಿಂತ ಹೆಚ್ಚು ಕರಭಾರವನ್ನು ಬೇಡಹತ್ತಿದನು. ಟೀಪುವಿನ ರಾಜ್ಯದಲ್ಲಿ ‘ ಆತನು ಮಾಡಿದ್ದೆ ಮಟ್ಟ, ಕಟ್ಟಿದ್ದೇ ಪಟ್ಟ ’ ಹೀಗೆ ರಾಜಕಾರಭಾರವು ನಡೆದಿತ್ತು. ಅದರಿಂದ ಆತನ ಅಪ್ಪಣೆಯನ್ನು ಮೀರಿನಡೆಯುವ ಎದೆಯು ನರಗುಂದಕರನಿಗಿದ್ದಿಲ್ಲ. ಒಮ್ಮೆ ಹೆಚ್ಚು ಕರಭಾರವನ್ನು ಕೊಟ್ಟರೆ, ಮುಂದೆ ಅದೇ ವಹಿವಾಟಬಿದ್ದು ನಿರಂತರ ಅದರಂತೆ ಹೆಚ್ಚು ಕರಭಾರವನ್ನು ಕೊಡುತ್ತ ಹೋಗಬೇಕಾಗುವದು. ಹೀಗೆ ನರಗುಂದಕರನು ಎರಡುತೆರನಾಗಿ ಚಿಂತೆಗೊಳಗಾದನು. ವಿಚಾರಮಾಡಿ ಅವನು ಟೀಪುವಿಗೆ ಆತನು ಬೇಡಿದ ಹೆಚ್ಚಿನ ಹಣದವಿಷಯವಾಗಿ ಏನೂ ಬರೆಯಲಿಲ್ಲ. ವೆಂಕಟರಾಯನಾದರೂ ಧೂರ್ತನಿದ್ದುದರಿಂದ ಇಷ್ಟಕ್ಕೆ ಟೀಪು ಯುದ್ಧಕ್ಕೆ ಸಿದ್ಧನಾಗುವನೆಂದು ಬಗೆದು, ತಾನೂ ಯುದ್ಧಸಿದ್ಧತೆಯನ್ನು ಗೌಪ್ಯದಿಂದ ನಡೆಸಿದನು. ಅವನು ಮೊದಲು ಮುಂಬೈಸರಕಾರದವರಿಗೆ ಪತ್ರಬರಕೊಂಡನು. ಅದರಿಂದ ಪ್ರಯೋಜನವಾಗಲಿಲ್ಲ. ಆಗ ಅವನು ಶ್ರೀಮಂತಸರಕಾರಕ್ಕೆ ಬಿನ್ನಹಮಾಡಿಕೊಂಡನು.-ಅದರಲ್ಲಿ ಅವನು “ ನಾನು ಶ್ರೀಮಂತರ ಸೇವಕನು. ಈ ಪ್ರಸಂಗದಲ್ಲಿ ಸಹಾಯಮಾಡಿ ಸುಲ್ತಾನನ ಕಾಟದಿಂದ ತಪ್ಪಿಸುವ ಸರ್ವಭಾರವು ಒಡೆಯರದು. ” ಎಂದು

ಬಹು ವಿನೀತಭಾವದಿಂದ ಬರೆದಿದ್ದನು. ನರಗುಂದಕರ ವೆಂಕಟರಾಯನು ಬ್ರಾಹ್ಮಣಸರದಾರನಿದ್ದುದಲ್ಲದೆ, ಪಟವರ್ಧನಸರದಾರರ ಆಪ್ತನು. ಆದರಿಂದ ನಾನಾಫಡಣವೀಸನು ಅವನ ಅಭಿಮಾನ ಹಿಡಿದು, ಅವನಿಗೆ ಸಮಯೋಚಿತಸಹಾಯವನ್ನು ಮಾಡಬೇಕೆಂದು ಸಂಕಲ್ಪಮಾಡಿದನು. ದಂಡಿನ ಬೆಂಬಲದ ಮಾತು ಬದಿಗಿಟ್ಟು, ನರಗುಂದಕರನ ಕಡೆಯಿಂದ ಹೆಚ್ಚು ಕರಭಾರವನ್ನು ವಸೂಲಮಾಡುವದಕ್ಕಾಗಿ ಸುಲ್ತಾನನು ದುಮ್ಮಾಲುಬಿದ್ದದ್ದು ನ್ಯಾಯವಲ್ಲೆಂದು ಆತನ ಬೇಡಿಕೆಯನ್ನು ನಿಷೇಧಿಸಿ, ಟೀಪುವಿಗೆ ಪೇಶವೆಯರು ಒಂದು ಪತ್ರ ಬರೆದರು. ಅದರ ಸಾರಾಂಶವು:—"ಜಹಗೀರದಾರನ ಸಂಸ್ಥಾನವು ಕಾರಣಪರತ್ವದಿಂದ ಒಂದು ರಾಜ್ಯದ ಛತ್ರವನ್ನು ಬಿಟ್ಟು ಮತ್ತೊಂದು ರಾಜ್ಯದ ಛತ್ರವನ್ನು ಹೊಂದಿರುವದು. ಇಷ್ಟರಮೇಲಿಂದ ಮಾಮೂಲಗೊತ್ತು ಆದ ಕರಭಾರದಕಿಂತ ಹೆಚ್ಚು ಹಣವನ್ನು ಬೇಡುವದಕ್ಕೆ ಆಧಾರಗಳಿಲ್ಲ. ಯಾವ ಸಂಸ್ಥಾನಿಕನು ರಾಜ-ನಿಷ್ಠೆಯಿಂದ ನಡೆಯುವನೋ, ಆತನ ಸರ್ವ-ಮಾನಮರ್ಯಾದೆಗಳನ್ನು ಯಥೋಚಿತ ನಡೆಸುವದು ರಾಜರ ಧರ್ಮವು." ಆ ಪತ್ರಕ್ಕೆ ಸುಲ್ತಾನನು 'ನಾನು ನನ್ನ ರಾಜ್ಯಕ್ಕೆ ಬಾಧ್ಯನು; ನನ್ನ ದೇಶದಲ್ಲಿ ನನ್ನ ಮನಸ್ಸಿಗೆ ಬಂದಷ್ಟು ಕಪ್ಪವನ್ನು ಎತ್ತುವ ಅಧಿಕಾರವು ನನಗುಂಟು'' ಎಂದು ಉದ್ಧಟತನದಿಂದ ಉತ್ತರಬರೆದನು. ಇಷ್ಟಕ್ಕೆ ಟೀಪು ಸುಮ್ಮನಾಗದೆ ಪೇಶವೆಯರ ಉಪಹಾಸಮಾಡಲೆಳಸಿ ನರಗುಂದವನ್ನು ತಕ್ಕೊಳ್ಳುವದಕ್ಕಾಗಿ ಎರಡು ಟೋಳಿಗಳನ್ನು ಕಳಿಸಿದನು. ಹೀಗೆ ಪೇಶವೆ-ಸುಲ್ತಾನರ ನಡುವೆ ಯುದ್ಧವು ಹುಟ್ಟಿತು.

ನರಗುಂದದ ಪ್ರಕರಣವು ಸಾಮೋಪಚಾರದಿಂದ ಸಮಾಪ್ತಿಯಾಗದೆ, ಒಮ್ಮಿಂದೊಮ್ಮೆ ನಿಕರಕ್ಕೆ ಬಂತು. ಅದರಿಂದ ನಾನಾಫಡಣವೀಸನು ನರಗುಂದಕರನ ಬೆಂಬಲಕ್ಕೆ ದಂಡು ಕಳುಹಬೇಕಾಯಿತು. ಆ ಸೈನ್ಯದ ಸರ್ವಾಧಿಪತಿಗಳು ಪರಶುರಾಮಭಾವು ಮತ್ತು ಗಣೇಶಪಂತ ಬೆಹರೆ ಇವರಿಬ್ಬರು. ಆ ಉಭಯ ಸರದಾರರು ದಂಡಿನೊಡನೆ ನರಗುಂದದ ಸಮೀಪಕ್ಕೆ ಬಂದರು. ಆಗ ಟೀಪುವಿನ ಸರದಾರರು ಯುದ್ಧಕ್ಕೆ ಎದುರಾಗಿ ನಿಲ್ಲದೆ, ತಮ್ಮ ಮುತ್ತಿಗೆಯನ್ನು ತೆಗೆದು ದೂರಹೋಗಿ ನಿಂತುಕೊಂಡರು. ಅಲ್ಲಿಂದ ಅವರು ಪೇಶವೆ ಸರದಾರರಿಗೆ "ನಾವು ಪೇಶವೆ ಸರಕಾರದ ಮರ್ಯಾದೆಯನ್ನು ಕಾಯಬೇಕೆಂಬ ಅಭಿಮಾನದಿಂದ ಮುತ್ತಿಗೆಯನ್ನು ಕಿತ್ತಿಕೊಂಡು ಬಂದಿರುವೆವು."

ಎಂದು ಹೇಳಿಕಳುಹಿಸಿದರು. ಆ ನಿರೋಪವನ್ನು ಕೇಳಿದ ಕೂಡಲೆ ಭಾವು-ಬೆಹರೆ ಇವರಿಬ್ಬರು ಕ್ರುದ್ಧರಾಗಿ ಅವರ ಮೇಲೆ ಆವೇಶದಿಂದ ಸಾಗಿ ಹೋದರು. ಸುಲ್ತಾನನ ಸೈನಿಕರು ಕಾದಿ ಕಂಗೆಟ್ಟು ಹಿಂದಕ್ಕೆ ಸರ ಕೊಂಡರು. ಅಷ್ಟರಲ್ಲಿ ಟೀಪುವಿನ ಕಡೆಯಿಂದ ಹೊಸ ಪಲಟಣಸಹಿತ ಅಸಂಖ್ಯ ಸ್ವಾರರು ಬಂದು ಅವರನ್ನು ಕೂಡಿಕೊಂಡು ಯುದ್ಧಸನ್ನದ್ಧರಾ ದರು. ಆಗ ಪೇಶವೆಸರದಾರರ ಬಳಿಯಲ್ಲಿ ಇದ್ದ ಸೈನ್ಯವು ಸಣ್ಣದು. ಅದ ರಿಂದ ಆಹವಚತುರರಾದ ಆ ಸರದಾರರು ಯುದ್ಧಪ್ರಸಂಗವನ್ನು ಅಷ್ಟಕ್ಕೆ ನಿಲ್ಲಿಸಿದರು. ಈ ವರ್ತಮಾನವು ನಾನಾನಿಗೆ ತಿಳಿಯಿತು. ಆಗ ಅವನು ದೊಡ್ಡ ದಂಡಿನೊಡನೆ ತುಕೋಜಿರಾವ ಹೋಳಕರನನ್ನು ಅವರ ಸಹಾ ಯಕ್ಕೆ ಕಳುಹಿಸಿದನು. ಆದರೂ ಆಗಿನಕಾಲಕ್ಕೆ ಹೇಳತಕ್ಕ ಯಶವು ಸಿಗಲಿಲ್ಲ. ಯಾಕಂದರೆ, ಭಾವು ಮತ್ತು ಬೆಹರೆ ಸರದಾರರ ಬೆಂಬಲಕ್ಕೆ ಪುಣೆಯಿಂದ ದೊಡ್ಡ ದಂಡು ಹೊರಟು ಬರುತ್ತದೆಂಬ ಸುದ್ಧಿಯು ಹತ್ತುತ್ತಲೆ ಟೀಪು ಕಪಟಸಂಧಾನವನ್ನು ಪ್ರಾರಂಭಿಸಿದನು. "ನರಗುಂದಕರನು ತನ್ನ ಸ್ವಾಮಿ ತ್ವವನ್ನು ಮನ್ನಿಸಬೇಕು; ಆತನ ಕಡೆಯಿಂದ ಬರಬೇಕಾದ ಎರಡು ವರ್ಷದ ಕರಭಾರವನ್ನು ಪೇಶವೆಯರಿಗೆ ಯುದ್ಧದ ವೆಚ್ಚವೆಂದು ಕೊಡುವೆನು." ಎಂದು ನಿಜಾಮನ ಮುಖಾಂತರ ಸಂಧಿಯನ್ನು ಹಚ್ಚಿದನು. ಟೀಪ್ರುವಿನ ಕಪಟವರ್ತನದ ಅನುಭವವು ನಾನಾಗೆ ಇನ್ನೂ ಆಗಿದ್ದಿಲ್ಲ. ಆದದರಿಂದ ಅವನು ಸುಲ್ತಾನನ ಸವಿಸವಿಯ ಮಾತಿಗೆ ಮರುಳಾದನು. ಅವನ ಕಪಟ ತಂತ್ರವು ನಾನಾನಿಗೆ ನಿಜವೆಂದು ತೋರಿದರಿಂದ ಆತನು ಸುಲ್ತಾನನ ಸಂಧಿಗೊಪ್ಪಿ, ಭಾವು ಮುಂತಾದ ಸರದಾರರಿಗೆ ತಿರುಗಿ ಬರಬೇಕೆಂದು ಆಜ್ಞಾಪಿಸಿದನು.

ಟೀಪುವಿನ ಎಲ್ಲ ಕೃತವು ಕಪಟಮಯವಾಗಿತ್ತು. ಪೇಶವೆಯರು ಒಪ್ಪಂದಕ್ಕೆ ಒಪ್ಪಿಕೊಂಡರೆ, ಅವರ ದಂಡು ಹಿಂದಿರುಗಿ ಹೋಗುವದು; ಬಳಿಕ ನರಗುಂದಕರನು ತನ್ನ ಮುಷ್ಟಿಯಲ್ಲಿ ಸಿಗುವನು. ಆ ಮೇಲೆ ಅವ ನನ್ನು ಚನ್ನಾಗಿ ದಂಡಿಸಬೇಕು. ಇತ್ಯಾದಿ ಟೀಪುವಿನ ಅಂತಸ್ಥ ಉದ್ದೇಶ ವಿತ್ತು. ಆತನು ತನ್ನ ಮೋಸದ ಸಂಧಾನದಿಂದ ತನ್ನ ಮನೋರಥವನ್ನು ನೆರವೇರಿಸಿದನು. ಭಾವು ಮೊದಲಾದ ಪೇಶವೆ ಸರದಾರರು ಇನ್ನೂ ಕೃಷ್ಣೆ ಯನ್ನು ದಾಟಿರಲಿಲ್ಲ; ಅಷ್ಟರಲ್ಲಿ ಆತನು ನರಗುಂದಕರನ ಮೇಲೆ ಬಿದ್ದು

ಅವನನ್ನು ಸೋಲಿಸಿ, ಆ ಕಿಲ್ಲೆಯನ್ನು ಹಿಡಿದುಕೊಂಡನು. ಆಗ ಭಾವೆ ವೆಂಕಟರಾಯನು ನಿರುಪಾಯನಾಗಿ ರಾಕ್ಷಸಸಮನಾದ ಟೀಪುವಿಗೆ ಶರಣು ಬಂದನು. ಶರಣಾಗತರನ್ನು ಸಂರಕ್ಷಿಸಬೇಕೆಂಬ ಆರ್ಯವಚನವು ಆ ಯವನ ರಾಜನಿಗೆ ಗೊತ್ತಿರುವ ಬಗೆಯಾವದು? ಆತನು ವೆಂಕಟರಾಯ ನನ್ನೂ, ಆತನ ಕುಟುಂಬದ ಜನರನ್ನೂ ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ವೈದನು. ಇಷ್ಟಕ್ಕೆ ಆತನ ಕ್ರೂರತನವು ತೀರಲಿಲ್ಲ. ನರಗುಂದಕರನ ಬಲು ಚಲುವೆಯಾದ ಮಗಳನ್ನು ಬಲಾತ್ಕಾರದಿಂದ ಮದುವೆಯಾದನು. ಅಹಾ! ಕಲಿಮಹಿಮೆಯು ಅಗಾಧವಾದದ್ದು. ಅವನಿಗೆ ರಾಜಸತ್ತೆಯು ಇಂಥ ಪಾಪಕರ್ಮಾಚರಣೆಗಾಗಿಯೇ ಲಭ್ಯವಾದಂತೆ ತೋರುವದು! ಇಂಥ ದುಸ್ಸ ಹವಾದ ಬಲತ್ಕಾರ, ಅತ್ಯಾಚಾರಗಳು ಕರುಣಾತೀತರಾದ ಆಂಗ್ಲ ಸಾರ್ವ ಭೌಮರ ಆಳಿಕೆಯಲ್ಲಿ ಇಲ್ಲದಿರುವದರಿಂದ ಅವರ ಪ್ರಜೆಗಳು ಸುಖದಿಂದಿರು ವರು. ಟೀಪು ಮಿಕ್ಕ ಜನರನ್ನು ಅಕ್ಷಯತುರಂಗವಾಸಕ್ಕೆ ಹಚ್ಚಿದನು. ನರ ಗುಂದಕರನ ಪ್ರಕರ್ಣದಲ್ಲಿ ಪೇಶವೆ ಸರಕಾರದವರು ಕೈಹಾಕಿದ್ದನ್ನು ಆತನು ಸೈರಿಸಲಿಲ್ಲ. ಅವನು ನರಗುಂದಕರನ ವ್ಯವಸ್ಥೆಯನ್ನು ಮಾತ್ರ ಮಾಡಿ ಸುಮ್ಮನೆ ಕೂಡ್ರಲಿಲ್ಲ. ಶ್ರೀಮಂತಸರಕಾರದ ಅಂಕಿತಕ್ಕಿರುವ ಪ್ರದೇಶಗಳಲ್ಲಿ ಆತನು ಕಾರಣವಿಲ್ಲದೆ ಬಂಡಾಯಹೂಡಿದನು. ಹಿಂದೂಜನರ ಮೇಲೆ ಆ ಯವನಭೂಪತಿಯು ಶಸ್ತ್ರ-ಹಿಡಿದನು. ಅವರ ಧರ್ಮಕೃತ್ಯಗಳಿಗೆ ಅಡ್ಡ ಬಂದು ಅವರನ್ನು ಪರಿಪರಿಯಿಂದ ಪೀಡಿಸಿದನು. ಕೃಷ್ಣಾನದಿಯ ದಕ್ಷಿಣಕ್ಕಿ ರುವ ಕರ್ನಾಟಕ ಸೀಮೆಯಲ್ಲಿ ಹೊಕ್ಕು, ಅಲ್ಲಿಯ ಅಸಂಖ್ಯ ಹಿಂದೂಜನರ ಮೇಲೆ ಬಲತ್ಕಾರಮಾಡತೊಡಗಿದನು. ಬ್ರಾಹ್ಮಣರನ್ನಂತೂ ಆತನು ಬಹಳ ತೊಂದರೆಗೊಳಿಸಿದನು. ಅದನ್ನು ಹೇಳಿತೀರದು. ಒಂದು ಕೈಯಲ್ಲಿ ಕುರಾಣ, ಮತ್ತೊಂದು ಕೈಯಲ್ಲಿ ಖಡ್ಗವನ್ನು ಹಿಡಿದು "ದೀನ್, ದೀನ್" ಎಂದು ಭಯಂಕರವಾಗಿ ಗರ್ಜಿಸುತ್ತ, ಆ ಸುಲ್ತಾನನು ಕೈಗೆ ಸಿಕ್ಕ ಹಿಂದುಜನರಿಗೆ ಸುಂತಿಯನ್ನು ಮಾಡಹತ್ತಿದನು. ಎಲ್ಲಿ ನೋಡಿದರೂ, "ಬ್ರಾಹ್ಮಣರನ್ನು ಹಿಡಿಯರಿ, ಸುಂತಿಯನ್ನು ಮಾಡರಿ, ಗೋಮಾಂಸವನ್ನು ಅವರ ಬಾಯಿ ಯಲ್ಲಿ ತುರಕರಿ." ಎಂಬ ಅವಾಚ್ಯ ಶಬ್ದಘೋಷವು ಕೇಳಬರುತ್ತಿತ್ತು. "**अब्रह्मण्यं, अब्रह्मण्यं**" ಎಂಬ ಕರುಣಾರವವು ಯಾವತ್ತು ಭಾವಿಕ ಹಿಂದೂಜನರ ಬಾಯಿಂದ ಹೊರಡಹತ್ತಿತು. ಆ ಕ್ರೂರನ ರಾಕ್ಷಸಯಾತ

ನೆಕಿಂತ ಮರಣವೇ ಲೇಸೆಂದೆಣಿಸಿ ಎರಡುಸಾವಿರ ಬ್ರಾಹ್ಮಣರು ಪ್ರಾಣ ನೀಗಿದರು. ಅನೇಕ ಪತಿವ್ರತೆಯರಾದ ಆರ್ಯಸ್ತ್ರೀಯರು ಸುಲ್ತಾನನ ಕಡು ಕಷ್ಟಕರವಾದ ಉಪಟಳವನ್ನು ಸೈರಿಸದೆ, ದಕ್ಷಿಣಗಂಗಾ (ಕಾವೇರಿ)-ತುಂಗಾ ನದಿಗಳಲ್ಲಿ ಮುಳಗಿ ತಮ್ಮ ಪಾತಿವ್ರತ್ಯವನ್ನು ರಕ್ಷಿಸಿಕೊಂಡರು. ಬಹಳ ಹೇಳುವದೇನು? ಹಿಂದೂಧರ್ಮದ ಪ್ರಳಯಕಾಲವು ಸಮೀಪಿಸಿ ದಂತೆ ತೋರಿತು. ಹೀಗೆ ಟೀಪುವಿನ ಹಾವಳಿಯಿಂದ ಸಮಗ್ರ ಕರ್ನಾಟಕವು ದುರ್ದಮನೀಯವಾದ ದುಃಖಕ್ಕೆ ಗುರಿಯಾಯಿತು. ಆದರೆ ಕೇವಲ ಧರ್ಮ ಜಾಗೃತವಾದ ಪೇಶವೆಸಾಮ್ರಾಜ್ಯವೂ, ಗೋಬ್ರಾಹ್ಮಣಪ್ರತಿಪಾಲಕರಾದ ಪಟವರ್ಧನ ಸರದಾರರೂ ಬಳಿಯಲ್ಲಿ ಇದ್ದುದರಿಂದ ಕರ್ನಾಟಕದ ಹಿಂದೂ ಜನರಿಗೊದಗಿದ ಈ ಗುರುತರವಾದ ಕಷ್ಟದೆಶೆಯು ಸ್ವಲ್ಪ ದಿವಸಗಳಲ್ಲಿ ವಿಲುಪ್ತವಾಯಿತು. ಅದು ಹ್ಯಾಗಂದರೆಃ—

"ಟೀಪುಸುಲ್ತಾನನು ಒಪ್ಪಂದಮಾಡಿಕೊಂಡಿರುವನು; ಅಂದಬಳಿಕ ನರ ಗುಂದದ ಪ್ರಕರ್ಣವು ಸಮಾಪ್ತಿಯಾಯಿತು;" ಎಂದು ನಾನಾಫಡಣವೀಸನು ವಿಚಾರಿಸಿದನು. ಇಷ್ಟರಲ್ಲಿ ಸುಲ್ತಾನನು ಕರ್ನಾಟಕದಲ್ಲಿ ನಡಿಸಿದ ಅಘೋ ರಕೃತ್ಯಗಳ ವೃತ್ತಾಂತವು ರಾಜಧಾನಿಗೆ ತಲ್ಪಿತು. ಅದನ್ನು ಕೇಳಿ ನಾನಾನು ಸಿಟ್ಟುಬೆಂಕಿಯಾದನು. ಆತನು ಚತುರ ಪ್ರಧಾನನೆಂಬುವದು ನಿಜವು; ಆದ ರೂ ಆತನು ಕಪಟಪಟುವಾದ ಟೀಪುವಿನ ಜಾಲದಲ್ಲಿ ಸಿಗಿಬಿದ್ದನು. ನಾನಾನು "ಶೇರಿಗೆಸವ್ವಾಶೇರು" ಎಂಬ ಗಾದಿಯಂತೆ ಟೀಪು ತನ್ನನ್ನು ಪೂರಾ ಮೋಸಗೊಳಿಸಿದನೆಂದು ಬಹಳ ಹಳಹಳಿಸಿದನು. ಆದರೆ ಮಿಂಚಿಹೋದ ಮಾತಿಗೆ ಮಾಡುವದೇನು? ಆದರೂ "ಟೀಪು ಪೇಶವೆಯರ ಗೌರವವನ್ನು ತಿರಸ್ಕರಿಸುವನು; ಬ್ರಾಹ್ಮಣಸರದಾರನನ್ನು ಸೆರೆಹಿಡದಿರುವನು; ಹಿಂದೂ ಜನರಮೇಲೆ ಬಲಾತ್ಕಾರಗಳನ್ನು ನಡಿಸಹತ್ತಿರುವನು; ಪವಿತ್ರ ಹಿಂದೂಧರ್ಮ ವನ್ನು ಕೆಡಿಸಿ ಮುಸಲ್ಮಾನಧರ್ಮವನ್ನು ಪ್ರಸಾರಗೊಳಿಸುತ್ತಿರುವನು; ಇದ ಲ್ಲದೆ ಪೇಶವೆ ರಾಜ್ಯದಲ್ಲಿ ನಿಷ್ಕಾರಣ ದಂಗೆಗಳನ್ನು ಎಬ್ಬಿಸಿರುವನು; ಆದದ ರಿಂದ ಆತನಿಗೆ ಯಥೋಚಿತ ಶಾಸನವನ್ನು ಮಾಡಲೇಬೇಕು" ಎಂದು ನಾನಾನು ಸಂಕಲ್ಪಮಾಡಿದನು; ಮತ್ತು ಭಯಂಕರ ಸೈನ್ಯಸಮೂಹದೊಂದಿ ಗೆ ಆತನಮೇಲೆ ಏರಿಹೋಗಿ ಅವನ ಸೊಕ್ಕು ಮುರಿದುಬರುವದನ್ನು ನಿಶ್ಚೈ ಸಿ ಮುಂದಿನ ಉದ್ಯೋಗಕ್ಕೆ ಹತ್ತಿದನು.

ರಾಜಪದ್ಧತಿಯಂತೆ ಯುದ್ಧಪ್ರಕಟನೆಯಾಗಿ ಆ ಸ್ವಾರಿಯಸಂಗಡ ಬರಬೇಕೆಂದು ಎಲ್ಲ ಸರದಾರರಿಗೆ ಆಜ್ಞಾಪತ್ರಗಳು ಕಳಿಸಲ್ಪಟ್ಟವು. ಪುಣೆಯಲ್ಲಿ ದಂಡು ಕೂಡತೊಡಗಿತು. ಪೇಶವೆಸರಕಾರದವರು ಇಂಗ್ಲೀಷರಿಗೆ ಸಹಾಯಕ್ಕೆ ಬರಲು ಪತ್ರಬರೆದರು. ಆದರೆ ಅವರು ಕೆಲವು ಆಕ್ಷೇಪಣೆಗಳನ್ನು ತೆಗೆದು ಬರಲಿಲ್ಲ. ಶಿಂದೆ, ಹೋಳಕರ ಮೊದಲಾದ ಪ್ರಮುಖಸರದಾರರು ದಂಡಿನೊಡನೆ ಪುಣೆಗೆ ಬಂದರು. ಹುಜೂರಸೈನ್ಯವು ಸಿದ್ಧವಾಯಿತು.

ಆಗ ನಾನಾಫಡಣವೀಸನು ಆ ದಾಳಿಯ ಸರ್ವ ಭಾರವನ್ನು ಪೇಶವಾಯಿಯ ಭವ್ಯಕಟ್ಟಡಕ್ಕೆ ಅಸ್ತಿವಾರಸ್ವರೂಪರಾದ ಪರಶುರಾಮಭಾವು ಮತ್ತು ಹರಿಪಂತ ಫಡಕೆ ಈ ಉಭಯತರಿಗೊಪ್ಪಿಸಿದನು. ಈ ಕಾಲಕ್ಕೆ ಪರಶುರಾಮಭಾವು ನಾನಾನ ಬಲಗೈ ಆಗಿ ಕೂತಿದ್ದನು. ನಾನಾನ ಅತರ್ಕ್ಯಚಾತುರ್ಯಪರಿಪೂರ್ಣವಾದ ರಾಜ್ಯದಾಡಳತೆಯು ಭಾವೂನ ಭುಜಬಲ, ದೃಢನಿಶ್ಚಯ, ಸರಳವರ್ತನ, ಯುದ್ಧಕೌಶಲ್ಯ ಮುಂತಾದವುಗಳನ್ನು ಅವಲಂಬಿಸಿತ್ತು. ಒಬ್ಬ ಭಾವು ಇದ್ದರೆ ಪೇಶವೆಯರು ಸುರಕ್ಷಿತರಿರುವರು; ಪೇಶವಾಯಿಯು ನಿಷ್ಕಂಟಕವಾಗಿ ಸಾಗುವದು. ನಾನಾನ ರಾಜ್ಯ-ಕುಶಲತೆಯು ಕುಂಠಿತವಾಗದೆ ತೇಜವನ್ನು ಹೊಂದುವದು. ಸಾರಾಂಶ, ಒಬ್ಬ ಭಾವು ಇದ್ದರೆ ಮಿಕ್ಕದ್ದೆಲ್ಲವೂ ಉಂಟು. ಹೀಗೆ ಆಕಾಲಕ್ಕೆ ಎಲ್ಲರೂ ಮಾತಾಡತೊಡಗಿದರು.

ಈ ಮೇರೆಗೆ ಯುದ್ಧಸನ್ನದ್ಧವಾದ ಸೈನ್ಯಸಮೂಹವು ಪುಣೆಯಿಂದ ಹೊರಟು ಭೀಮಾನದಿ ತಟಾಕದವರೆಗೆ ಸಾಗಿಬಂತು. ನಾನಾನು ಸ್ವತಃ ಪಂಢರಪುರ ಮುಕ್ಕಾಮಿಗೆ ಬಂದು ಮುಟ್ಟಿದನು. ಮುಂದೆ ಯಾದಗಿರಿಯಲ್ಲಿ ಭೋಸಲೆ-ನಿಜಾಮರ ದಂಡುಗಳು ಬಂದುಕೂಡಿದವು. ಮೇಲೆ ಹೇಳಿದಂತೆ ಫಡಕೆ ಹರಿಪಂತನು ಆ ದಾಳಿಯ ಮುಖ್ಯ ಸೇನಾಪತಿಯು; ಭಾವು ಸಹಾಯಕ ಸೇನಾಧಿಪತಿಯು; ಸರ್ವಭಾರವು ಅವರಿಬ್ಬರದು. ಭಾವು, ಗಂಗಾಧರರಾವ ಗೋವಿಂದ ಮತ್ತು ರಘುನಾಥ ನೀಲಕಂಠ ಇತ್ಯಾದಿ ಪಟವರ್ಧನ ಸರದಾರರು ತಮ್ಮ ಸೈನ್ಯಸಹಿತ ಬಂದು ಹರಿಪಂತನನ್ನು ಕೂಡಿಕೊಂಡರು. ಕೃಷ್ಣಾ-ತುಂಗಾನದಿಗಳ ನಡುವಿನ ಯಾವತ್ತೂ ಪ್ರದೇಶವನ್ನೂ, ಅಲ್ಲಿ ಇರುವ ಚಿಕ್ಕದೊಡ್ಡ ಕಿಲ್ಲೆಗಳನ್ನೂ ಹಿಡಕೊಳ್ಳಲಿಕ್ಕೆ ತುಕೋಜಿರಾವ ಹೋಳಕರ, ಗಣೇಶಪಂತ ಬೇಹರೆ ಇವರಿಬ್ಬರು ನೇಮಿಸಲ್ಪಟ್ಟರು. ಅವರು ೨೫೦೦೦

ದಂಡಿನೊಡನೆ ಕಿತ್ತೂರಿನ ಪಕ್ಕದಿಂದ ಹೋಗಬೇಕೆಂದು ಗೊತ್ತಾಯಿತು. ಮಿಕ್ಕ ಸೈನ್ಯದೊಂದಿಗೆ ಭಾವು-ಹರಿಪಂತರು ಬದಾಮಿಯ ಹಾದೀಹಿಡಿದರು. ಅವರು ಪಯಣಗತಿಯಿಂದ ಬಂದು ತಾರೀಖು ೯-೫-೧೭೮೬ ಇ. ಸ. ದಿವಸ ಬದಾಮಿಯನ್ನು ಮುತ್ತಿದರು. ಬದಾಮಿಯು ತಟಬಂದಿಸ್ತ ಕೋಟೆಯು. ಅದು ಒಂದು ದೊಡ್ಡ ಮೈದಾನದಲ್ಲಿರುವದು. ಅದರ ಮಧ್ಯದಲ್ಲಿ ಒಂದು ಚಿಕ್ಕ ದುರ್ಗವಿರುವದು. ಎರಡೂ ಕಡೆಗೆ ಗುಡ್ಡವು ಗೋಡೆಯಂತೆ ನಿಂತಿರುವದು. ಆದರಿಂದ ಅದು ದುರ್ಗಮವಾದ ದುರ್ಗವೆಂದೆನಿಸಿಕೊಂಡಿತ್ತು. ಮರಾಠಾ ಸೈನ್ಯದವರು ಅದನ್ನು ೨೦ ದಿನಗಳವರೆಗೆ ಮುತ್ತಿಕೊಂಡರು. ತೋಫು ಗುಂಡುಗಳ ಹೊಡತವು ಎಡಬಿಡದೆ ನಡೆದಿತ್ತು. ಆದರೂ ಆ ಬಲವಾದ ಕಿಲ್ಲೆಯು ಬಿಚ್ಚಲಿಲ್ಲ. ಕಟ್ಟಕಡೆಗೆ ನಿಚ್ಚಣಿಕೆಗಳನ್ನು ಹಚ್ಚಿ ಮೇಲೆ ಏರಿ ಹೋಗಿ, ಕಿಲ್ಲೆಯನ್ನು ತಕ್ಕೊಳ್ಳಬೇಕೆಂದು ನಿರ್ಧರವಾಯಿತು. ಆ ಕೆಲಸಕ್ಕೆ ಮೊಗಲ-ಮರಾಠಾ ಮಿಶ್ರವಾದ ೨೦,೦೦೦ ಜನರು ನೇಮಿಸಲ್ಪಟ್ಟರು. ಕೋಟೆಯಲ್ಲಿ ಟೀಪುವಿನ ಕಡೆಯ ೩೫೦೦ ಜನರಿದ್ದರು. ಅವರು ಶತ್ರುಗಳನ್ನು ಪ್ರತಿಬಂಧಿಸಿ, ಕೋಟೆಯನ್ನು ಅವರ ಕೈವಶಮಾಡಬಾರದೆಂದು ಯುದ್ಧಕ್ಕೆ ಸಿದ್ಧರಾದರು. ಪ್ರಸಂಗವು ಬಹಳ ನಿಕರಕ್ಕೆ ಬಂತು. ಆಗ ಭಾವು ತನ್ನ ಜತೆಯ ಜನರೊಂದಿಗೆ ಸೈನಿಕರನ್ನು ಪ್ರೋತ್ಸಾಹಗೊಳಿಸುತ್ತ, ಕೆಲವರನ್ನು ಕೂಡಿಕೊಂಡು ನಿಚ್ಚಣಿಕೆಯಿಂದ ಮೇಲೆ ಏರಿದನು. ಒಳಗಿನ ಜನರು ಕಿಲ್ಲೆಯ ಒಳಭಾಗದ ಮಾರ್ಗದ ಬುಡದಲ್ಲಿ ಮದ್ದು ತುಂಬಿದ ಬುದ್ದಲಕಿಗಳನ್ನು ಅಲ್ಲಲ್ಲಿ ಹುಗಿದಿಟ್ಟದ್ದರು. ಶತ್ರುಗಳು ಕಿಲ್ಲೆಯ ಮೇಲೇರಿ ಅದನ್ನು ಹಲ್ಲಾಮಾಡುವದಕ್ಕಾಗಿ ಸಾಗಿಬರುತ್ತಲೆ, ಅವರು ಆ ಬುದ್ದಲಿಕೆಗಳಿಗೆ ಸರಬತ್ತಿಯನ್ನು ಹಚ್ಚಿದರು. ಅದರಿಂದ ಮರಾಠಾಸೈನ್ಯದ ಕೆಲವು ಜನರು ದುರ್ದಶೆಯನ್ನು ಹೊಂದಿದರು. ಆದರೂ ಆ ಶೂರರು ಬೆದರದೆ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತಕ್ಕೊಳ್ಳದೆ, ಈರ್ಷೆಯಿಂದ ನಿಚ್ಚಣಿಯನ್ನು ಹತ್ತಿ ಕಿಲ್ಲೆಯಮೇಲೆ ಹೋಗಿ ನಿಂತರು; ಕೂಡಲೆ ಅಲ್ಲಿ ಪೇಶವೆಯರ ವಿಜಯಸೂಚಕ ನಿಶಾನೆಯು ನಿಲ್ಲಿಸಲ್ಪಟ್ಟಿತು. ಆಗ ಒಳಗಿನ ಜನರು ಅಂಜಿ ಓಡಿಹೋಗಿ ಜೀವದಾಶೆಯಿಂದ ಗುಡ್ಡದ ಗೋಡೆಗಳಲ್ಲಿ ಅಡಗಿಕೊಂಡರು. ಪೇಶವೆಯರ ಮಿಕ್ಕ ದಂಡು ಕಿಲ್ಲೆಯನ್ನು ತಕ್ಕೊಳ್ಳುವದಕ್ಕಾಗಿ ಆವೇಶದಿಂದ ಸಾಗಿಬಂತು. ಒಳಗಿನವರು ಕಲ್ಲುಗುಂಡುಗಳ ಮಳೆಗರೆದರು. ಆದರೆ

ಹಲ್ಲಾ ಮಾಡಬೇಕೆಂದು ಕಂಕಣಬದ್ಧರಾದ ಪೇಶವೆ ಸೈನಿಕರ ನಿಸ್ಸೀಮಪರಾಕ್ರಮ, ಅತ್ಯಂತ ತ್ವೇಷ, ದೃಢನಿಶ್ಚಯ, ದೀರ್ಘಪರಿಶ್ರಮಗಳ ಮುಂದೆ ಅವರ ಆಟವು ಸಾಗಲಿಲ್ಲ. ಮುಂದೆ ಅವರು ಆಶೆದೊರೆದು ಕಿಲ್ಲೆಯನ್ನು ಭಾವು ಹರಿಪಂತರ ಕೈವಶಮಾಡಿ ಪ್ರಾಣದಾನವನ್ನು ಬೇಡಿಕೊಂಡರು.

ಬದಾಮಿಯ ಮುತ್ತಿಗೆಯಲ್ಲಿ ಭಾವು ಮೊದಲಾದ ಪಟವರ್ಧನ ಸರದಾರರು ತಮ್ಮ ತುಂಗವಿಕ್ರಮವನ್ನು ಪ್ರಕಟಗೊಳಿಸಿದರು. ಕಿಲ್ಲೆಯ ಒಂದು ಪಕ್ಕವನ್ನು ಹಲ್ಲಾ ಮಾಡುವ ಕೆಲಸವು ಭಾವೂನ ದಂಡಿನವರದೆಂದು ಗೊತ್ತಾಗಿತ್ತು. ಅವರು ಆ ಕೆಲಸವನ್ನು ಬಹು ಶೌರ್ಯದಿಂದ ಕಡೆಗಾಣಿಸಿದರು. ಅದರಲ್ಲಿ ಆತನ ಅಸಂಖ್ಯ ಜನರು ಮಡಿದರು; ಕೆಲವರು ಗಾಯಹೊಂದಿದರು. ಸರ್ವಾಧಿಪತಿಯಾದ ಹರಿಪಂತನು ಸಹಾಯಕ ಸೇನಾಪತಿಯಾದ ಭಾವೂನನ್ನೂ ಆತನ ಸೈನಿಕರನ್ನೂ ಬಹಳ ಶ್ಲಾಘಿಸಿದನು. ಪೇಶವೆಯರ ಅಮಲಿನಲ್ಲಿ ಆದ ನಿಕರದ ಕಾಳಗಗಳಲ್ಲಿ ಬದಾಮಿ ಯುದ್ಧವು ಒಂದಾಗಿರುವದು. ಬದಾಮಿಯ ಕಾಳಗದಲ್ಲಿ ಪೇಶವೆಯರ ಸರ್ವ ಸೈನ್ಯದ ಜನರು ಅದ್ವಿತೀಯ ಶೌರ್ಯ, ಧೈರ್ಯ, ಸಾಹಸ, ಸಹನಶೀಲತೆಗಳನ್ನು ಪ್ರಕಟಗೊಳಿಸಿ ವಿಜಯಶಾಲಿಗಳಾದರು. ಈ ಯುದ್ಧದಲ್ಲಿ ಪಟವರ್ಧನ ಸರದಾರರು ಒಳ್ಳೇ ಪ್ರತಿಷ್ಠೆಯನ್ನು ಹೊಂದಿದರು. ಕರ್ನಾಟಕದ ಜನರು ಅವರ ಜೋಡಿಲ್ಲದ ಪರಾಕ್ರಮವನ್ನೂ, ಟೀಪುವಿನ ಹಾವಳಿಯಿಂದ ಆಗುತ್ತಿದ್ದ ಕಾಟವನ್ನು ನಿಲ್ಲಿಸಿ ತಮ್ಮ ಮೇಲೆ ಅವರು ಮಾಡಿದ ಅನಂತಾನಂತ ಉಪಕಾರಗಳನ್ನೂ, ಬಗೆಬಗೆಯಿಂದ ಹೊಗಳಿದರು.

ಬದಾಮಿಯ ಮುತ್ತಿಗೆಯು ನಡೆದಾಗ್ಗೆ ವರ್ತಿಸಿದ ಒಂದು ಚಮತ್ಕಾರಿಕ ಸಂಗತಿಯನ್ನು ಇಲ್ಲಿ ವರ್ಣಿಸುವದು ಯೋಗ್ಯವೆನಿಸುತ್ತದೆ.

ಬದಾಮಿಯ ಮುತ್ತಿಗೆಯು ಬಹುದಿವಸ ನಡೆಯಿತು. ಕಿಲ್ಲೆಯು ವಶವಾಗುವ ಆಶೆಯು ಕಾಣಲಿಲ್ಲ. ದಂಡಿನಲ್ಲಿ ನೋಡಿದತ್ತೆಲ್ಲ ಗೊಂದಲವು. ಇದನ್ನು ಕಂಡು ನಾನಾಫಡಣವೀಸನು ವಿಸ್ಮಿತನಾದನು. ಒಂದುದಿವಸ ರಾತ್ರಿ ಆತನು ಸರದಾರರು ಏನುಮಾಡುತ್ತಿರುವರೆಂಬದನ್ನು ನೋಡುವ ಉದ್ದೇಶದಿಂದ ವೇಷಬದಲಿಸಿಕೊಂಡು, ಪಾಳಯವನ್ನು ನೋಡುತ್ತನೋಡುತ್ತ, ಪಟವರ್ಧನಸರದಾರರ ಡೇರೆಗೆ ಬಂದನು. ಅಲ್ಲಿ ಚದುರಂಗದ ಆಟವು ನಡೆ

ದಿತ್ತು. ನಾನಾನು ಬಾಗಿಲಬಳಿಯಲ್ಲಿ ಮರೆಯಾಗಿ ನಿಂತುಕೊಂಡನು. ಇಷ್ಟರಲ್ಲಿ ಭಾವೂನ ದೃಷ್ಟಿಯು ನಾನಾನ ಮೇಲೆ ಬಿದ್ದಿತು. ನಿಂತವನು ನಾನಾಫಡಣವೀಸನೇ ಎಂದು ಭಾವು ತರ್ಕಿಸಿದನು. ಆತನ ತರ್ಕವು ಯಥಾಸತ್ಯವಿತ್ತು. ಭಾವೂನ ದೃಷ್ಟಿಯು ತನ್ನಮೇಲೆ ಬಿದ್ದದ್ದನ್ನು ತಿಳಿದು, ಚತುರನಾದ ನಾನಾನು ಕೂಡಲೇ ಅಲ್ಲಿಂದ ಹೊರಟುಹೋದನು. ಸರದಾರರಲ್ಲಿ ನಾನಾನ ಗೌರವವು ವಿಶೇಷವಿತ್ತು; ಅದರಿಂದ ಎಲ್ಲ ಸರದಾರರು “ ನಾವೇ ಆತನನ್ನು ಸಂಗ್ರಾಮನಿಮಿತ್ತದಿಂದ ಕರತಂದಿರುವೆವು. ಆತನು ನಾವು ಹೀಗೆ ಆಟವಾಡುತ್ತಿರುವದನ್ನು ಕಣ್ಣಾರೆ ಕಂಡನು. ಇನ್ನು ನಮ್ಮ ಅವಸ್ಥೆಯು ನೆಟ್ಟಗಾಗದು ” ಎಂದು ಭಯಭೀತರಾದರು. ಆಗ ಭಾವು ಅವರೆಲ್ಲರನ್ನು ಮುಂದೆ ಮಾಡಿಕೊಂಡು ಹರಿಪಂತನ ಡೇರೆಗೆ ಬಂದನು. ಅಲ್ಲಿ ವಿಶೇಷ ಚರ್ಚೆನಡೆದು ಕಡೆಗೆ ಭಾವು ಮೊದಲಾದ ಪ್ರಮುಖ ಸರದಾರರ ಸಲಹೆಯಿಂದ ಮರುದಿವಸವೇ ಕಿಲ್ಲೆಗೆ ಲಗ್ಗೆಹತ್ತಬೇಕೆಂದು ಹರಿಪಂತನು ನಿರ್ಣೈಸಿದನು; ಆ ನಿರ್ಣಯವು ಕೊನೆಗಂಡು ಕೋಟೆಯು ವಶವಾಯಿತು: ಪೇಶವೆಸರದಾರರು ಜಯಶಾಲಿಗಳಾದರು.

ಬದಾಮಿಯ ಕೋಟೆಯು ಹಸ್ತಗತವಾದಬಳಿಕ ಭಾವು ಹರಿಪಂತನೊಡನೆ ಗಜೇಂದ್ರಗಡದ ಕಡೆಗೆ ಸಾಗಿದನು. ಹಾದಿಯಲ್ಲಿ ಹತ್ತಿದ ಶಿರಹಟ್ಟಿಯ ಕಿಲ್ಲೆಯನ್ನು ಭಾವು ಹಿಡಕೊಂಡನು. ಇಷ್ಟರಲ್ಲಿ ಟೀಪು ಯುದ್ಧಾಭಿಮುಖನಾಗಿ ದೊಡ್ಡದಂಡಿನೊಂದಿಗೆ ಹೊರಟು ತೀರಾ ಸಮೀಪಕ್ಕೆ ಬಂದನೆಂಬ ಸುದ್ದಿಯು ಹತ್ತಿತು. “ ನಿಜಾಮನು ಜಾತಿಯಿಂದ ಮುಸಲ್ಮಾನನಿದ್ದರೂ, ಪೇಶವೆಯರ ಸಹಾಯಕನಾಗಿರುವನು ” ಎಂದು ಅವನು ಹಲ್ಲುಕಡಿಯುತ್ತಿದ್ದನು. † ಆಗ ಸುಲ್ತಾನನು ನಿಜಾಮನ ಅಂಕೆಯೊಳಗಿದ್ದ ಆದವಾನಿಯನ್ನು ಮುತ್ತಬೇಕೆಂದು ಅತ್ತಕಡೆಗೆ ಹೊರಟನು. ಇತ್ತ ಪೇಶವೆಯರ ದಂಡಿಗೆ ಎದುರಾಗಲಿಕ್ಕೆ ತನ್ನ ದಳವಾಯಿಯಾದ ಬುರಾಮದ್ದೀನನ್ನು ಕಳುಹಿಸಿದನು. ಆದವಾನಿಯಲ್ಲಿ ಮೊಹಬತಜಂಗನೆಂಬೊಬ್ಬ ನಿಜಾಮನ ಸರದಾರನಿದ್ದನು. ಟೀಪುವಿನ ದಂಡಯಾತ್ರೆಯ ವೃತ್ತಾಂತವನ್ನು ಕೇಳಿ ಆತನು ಪೇಶವೆಸರದಾ

---

† ಸುಲ್ತಾನನು ವಿಜಾಪುರವು ತನ್ನದೆಂದು ಇದಕ್ಕು ಮೊದಲೇ ನಿಜಾಮನೊಡನೆ ಕಾಲುಕೆದರಿ ಜಗಳತೆಗೆದಿದ್ದನು.

ರರಿಗೂ ಭಾಗಾನಗರ‡ದಲ್ಲಿರುವ ನಿಜಾಮನಿಗೂ ಬೆಂಬಲಕ್ಕೆ ಬರಬೇಕೆಂದು ಪತ್ರಬರೆದನು. ಹರಿಪಂತನು ಸಹಾಯಿಕ ಸೇನಾಪತಿಯಾದ ಭಾವು ಇತ್ಯಾದಿ ಸರದಾರರನ್ನೂ ಅವರವರ ದಂಡನ್ನೂ ತನ್ನ ಬಳಿಯಲ್ಲಿಟ್ಟುಕೊಂಡು ಮಿಕ್ಕ ಸೈನ್ಯವೆಲ್ಲವನ್ನು ಅಂದರೆ ನಿಜಾಮನ ಯಾವತ್ತು ದಂಡು ಮತ್ತು ೨೦,೦೦೦ ಮರಾಠಾಸೈನ್ಯವನ್ನು ಕೃಷ್ಣರಾವಬಳವಂತ ಧಾಯಗುಡಿ ಮತ್ತು ರಘುನಾಥನೀಲಕಂಠ ಕುರುಂದವಾಡಕರ ಇವರ ಸಂಗಡ ಕೊಟ್ಟುಕಳುಹಿದನು. ಆ ದಂಡನ್ನು ಹೈದರಾಬಾದದಿಂದ ಬಂದ ದಂಡು ಕೂಡಿಕೊಂಡಿತು. ಹೀಗೆ ಒಟ್ಟು ೬೦,೦೦೦ ಸೈನ್ಯವು ಸಿದ್ಧವಾಯಿತು. ಪೇಶವೆ-ನಿಜಾಮರ ಬೆಂಬಲವು ಬರುವ ಮೊದಲೇ ಮೊಹಬತಜಂಗನನ್ನು ಸೋಲಿಸಿ ಆದವಾನಿಯನ್ನು ನೆಲಸಮಮಾಡಬೇಕೆಂದು ಹವಣಿಸಿ ಸುಲ್ತಾನನು ೨|೩ಸಾರೆ ಕಿಲ್ಲೆಯಮೇಲೆ ಏರಿಹೋದನು. ಅದಕ್ಕೆ ಮೊಹಬತಜಂಗನು ಬೆದರಲಿಲ್ಲ. ಇಷ್ಟರಲ್ಲಿ ಆ ದೊಡ್ಡದಂಡು ಆತನ ಬೆಂಬಲಕ್ಕೆ ಬರಲು, ಟೀಪು ಮುತ್ತಿಗೆಯನ್ನು ಕಿತ್ತಿಕೊಂಡು ದಕ್ಷಿಣಕ್ಕೆ ನಡೆದನು.

ಮೊಹಬತಜಂಗನ ಪತ್ರದಂತೆ ಸೇನಾಸಹಾಯವನ್ನು ಕಳುಹಿಸಿಕೊಟ್ಟಬಳಿಕ ಭಾವು--ಹರಿಪಂತರು ಉಳಿದ ಅಲ್ಪಸ್ವಲ್ಪ ಸೈನ್ಯದೊಡನೆ ಶಿರಹಟ್ಟಿಯಿಂದ ಹೊರಟು ಗಜೇಂದ್ರಗಡಕ್ಕೆ ಬಂದರು. ಆದವಾನಿಯ ಕಾರ್ಯಭಾಗವು ಮುಗಿಯುವ ಮುಂಚೆಯೇ, ಆ ಶೂರರಿಬ್ಬರು ಗಜೇಂದ್ರಗಡವನ್ನು ತಮ್ಮ ಹಸ್ತಗತಮಾಡಿಕೊಂಡಿದ್ದರು.

ಗಜೇಂದ್ರಗಡವನ್ನು ಹಿಡಕೊಂಡ ತರುವಾಯ, ಭಾವು-ಹರಿಪಂತರು ಸೈನ್ಯದೊಂದಿಗೆ ಕೊಪ್ಪಳ-ಬಹದ್ದುರಬೇಡಗಳ ಕಡೆಗೆ ಸಾಗಿದರು. ಬಹದ್ದುರಬೇಡವು ಅವರ ಸ್ವಾಧೀನವಾಯಿತು. ಕೊಪ್ಪಳಕಿಲ್ಲೆಯೂ ಅವರ ವಶವಾಗತಕ್ಕದ್ದಿತ್ತು. ಅಷ್ಟರಲ್ಲಿ ಸುಲ್ತಾನನು ದೊಡ್ಡ ದಂಡಿನೊಡನೆ ತುಂಗಭದ್ರೆಯನ್ನು ದಾಟ ಬಂದನೆಂಬ ವರ್ತಮಾನವು ಹತ್ತಿತು; ಅದರಿಂದ ಟೀಪುವಿನ ಮೇಲೆ ಸಾಗಿಹೋಗುವ ಸಿದ್ಧತೆಯು ನಡೆಯಿತು. ಆದರೆ ಅಲ್ಲಿ ಸಂಗ್ರಾಮಕ್ಕೆ ಯೋಗ್ಯ ಸ್ಥಳವು ಸಿಗದ್ದರಿಂದ ಪೇಶವೆ ಸರದಾರರು ದಂಡಿನೊಡನೆ ಸವನೂರ ಸಮೀಪಕ್ಕೆ ಬಂದು ತಳವೂರಿದರು. ಟೀಪುವು ಅವರನ್ನು ಎದು

‡ ನಿಜಾಮನ ರಾಜಧಾನಿಯಾದ ಹೈದರಾಬಾದಕ್ಕೆ ಭಾಗಾನಗರವೆಂಬ ಹೆಸರು ರೂಢಿಯಾಗಿರುವದು.

ರಿಸಬೇಕೆಂದು ಸತ್ವರದಿಂದ ಸಾಗಿಬಂದನು. ಅವರಿಬ್ಬರ ನಡುವೆ ಮೂರೇ ಹರದಾರಿಯ ಅಂತರ. ಹದಿನೈದು ದಿನಗಳವರೆಗೆ ಎರಡೂ ದಂಡಿನ ಜನರು ಕಾಳಗದ ಗೊಡವೆಗೆ ಹೋಗದೆ ಸುಮ್ಮನಿದ್ದರು. ಕಡೆಗೆ ಅಕ್ಟೋಬರ ತಿಂಗಳ ೧ನೇ ತಾರೀಖಿನ ದಿವಸ ಸೂರ್ಯೋದಯವಾಗಲು ಐದುಗಳಿಗೆ ರಾತ್ರಿಯಿದ್ದಾಗ್ಗೆ, ಪೂರ್ವಸೂಚನೆಯಿಲ್ಲದೆ ಟೀಪುವಿನ ಜನರು ಮರಾಠಾ ತೋಫಖಾನೆಯ ಮೇಲೆ ಬಿದ್ದರು; ಸುಲ್ತಾನನು ಸ್ವತಃ ಮುಂದೆಬಂದು ಅದನ್ನು ಹಿಡಿದುಕೊಳ್ಳುವದಕ್ಕಾಗಿ ಕೈಲಾದಷ್ಟು ಯತ್ನಮಾಡಿದನು. ಆದರೆ ಮರಾಠಾಜನರು ಸಾವಧರಾಗಿ ಯುದ್ಧಕ್ಕೆ ಸಿದ್ಧರಾಗಲು, ಆತನ ಉದ್ದೇಶವು ಈಡೇರಲಿಲ್ಲ. ಅದರಿಂದ ಅವನು ನಿರಾಶಿತನಾಗಿ ತನ್ನ ಛಾವಣಿಗೆ ತಿರುಗಿ ಹೋದನು.

ಮುಂದೆ ಟೀಪು ಪುನಃ ೨-೩ ಸಾರೆ ಪೇಶವೆ ಸೈನ್ಯದ ಮೇಲೆ ಬಿದ್ದು ಹಲ್ಲಾಮಾಡುವ ಪ್ರಯತ್ನಮಾಡಿದನು. ಆದರೆ ಅವನ ಆಟವು ಸಾಗಲಿಲ್ಲ. ಯಾಕಂದರೆ ಪೇಶವೆ ಸರದಾರರು ಬಹು ಜಾಗ್ರತರು; ಇದಲ್ಲದೆ ಕಾಳಗದ ಹದನವನ್ನು ಪೂರಾ ಅರಿತವರು. ಟೀಪುವಿನ ಯೋಚನೆಯು ತಿಳಿಯುತ್ತಲೆ, ಅವರು ಕುದುರೆಯನ್ನೇರಿಕೊಂಡು ಯುದ್ಧಸನ್ನದ್ಧರಾಗುತ್ತಿದ್ದರು; ಮತ್ತು ಆವೇಶದಿಂದ ಸಾಗಿಹೋಗಿ ಅವನ ದಂಡನ್ನು ಹಿಂದಕ್ಕೆ ಅಟ್ಟುತ್ತಿದ್ದರು. ಅದರಿಂದ ಟೀಪುವಿನ ಎಲ್ಲ ಹಂಚಿಕೆಗಳು ವ್ಯರ್ಥವಾದವು. ಕಡೆಗೆ ಪೇಶವೆ ಸರದಾರರ ಹುಲುಬೆಗೆ ಬೇಸತ್ತು; ಹೋಳಕರನ ವಿದ್ಯಮಾನ ಸಂಧಾನ ಹಚ್ಚಿದನು. ಆತನ ಕಪಟಸಂಧಾನದ ಅನುಭವವು ಒಂದಾವರ್ತಿ ಆಗಿತ್ತು ಆದದರಿಂದ ಆತನ ಪ್ರಸ್ತುತ ಸಂಧಿಯ ಪ್ರಸಕ್ತಿಯು ಸತ್ಯವೋ, ಮಿಥ್ಯವೋ ಎಂದು ಪೇಶವೆ ಸರದಾರರು ಅನುಮಾನಿಸಿದರು. ತನ್ನಲ್ಲಿ ವಂಚಕತನವಿಲ್ಲವೆಂಬುದರ ನಿದರ್ಶನಕ್ಕಾಗಿ ಸುಲ್ತಾನನು ತನ್ನ ಇಬ್ಬರು ಪ್ರಮುಖಸರದಾರರನ್ನು ಪೇಶವೆಯರ ಸ್ವಾಧೀನ ಮಾಡಲಿಕ್ಕೆ ಸಿದ್ಧನಾದನು. ಆದರೂ ಅವನ ಒಪ್ಪಂದದ ಮಾತುಗಳಿಗೆ ಯಾರು ಕಿವಿಗೊಡಲಿಲ್ಲ. ಹೀಗೆ ಸಂಧಾನಪ್ರಸಕ್ತಿಯು ನಾಲ್ಕು ತಿಂಗಳತನಕ ನೆನಗುದಿಗೆ ಬಿತ್ತು. ಕಟ್ಟಕಡೆಗೆ ಇ. ಸ. ೧೭೮೭ ಎಪ್ರೀಲ ತಿಂಗಳಲ್ಲಿ ಪೇಶವೆ-ಸುಲ್ತಾನರ ನಡುವೆ ಒಪ್ಪಂದವಾಯಿತು. ಟೀಪು ಬದಾಮಿ, ನರಗುಂದ, ಮತ್ತು ಕಿತ್ತೂರ ಪ್ರಾಂತಗಳನ್ನು ಶ್ರೀಮಂತ ಸರಕಾರಕ್ಕೆ ಬಿಟ್ಟುಕೊಡಬೇಕು; ಮತ್ತು ೪೫ ಲಕ್ಷ ರೂಪಾಯಿ ಕಪ್ಪಕೊಡಬೇಕು.

ಇವೇ ಆ ಒಪ್ಪಂದದ ಮುಖ್ಯ ಶರ್ತುಗಳು. ಟೀಪು ೩೦ ಲಕ್ಷ ರೂಪಾಯಿಗಳನ್ನು ಆಗಲೇ ಕೊಟ್ಟು ಉಳಿದ ೧೫ ಲಕ್ಷ ರೂಪಾಯಿಗಳನ್ನು ಹಿಂದುಗಡೆ ಕೊಡಲಿಕ್ಕೊಪ್ಪಿಕೊಂಡನು.

ಹೀಗೆ ಭಾವು-ಹರಿಪಂತರು ಟೀಪುವಿನ ಕೃತ್ರಿಮತನಕ್ಕೂ, ಆತನ ದುಷ್ಕರ್ಮಾಚರಣೆಗೂ, ಯಥಾಯೋಗ್ಯವಾದ ಶಾಸನವನ್ನು ಮಾಡಿ, ಸ್ವಾಮಿಕಾರ್ಯವನ್ನು ಕಡೆಗಾಣಿಸಿ ಕೃತಾರ್ಥರಾದರು. ಹರಿಪಂತನು ಪೇಶವೆ ಸೈನ್ಯಸಹಿತ ಪುಣೆಗೆ ಹೋದನು. ನಮ್ಮ ಚರಿತ್ರನಾಯಕನು ತಾಸಗಾಂವಿಗೆ ಹೋದನು; ಮಿಕ್ಕ ಸರದಾರರು ತಮ್ಮ ತಮ್ಮ ಸ್ಥಳಗಳನ್ನು ಸೇರಿಕೊಂಡರು. ಕರ್ನಾಟಕದ ಜನರಿಗೊದಗಿದ ಕಷ್ಟದೆಶೆಯು ನಷ್ಟವಾಯಿತು.

---

## ೮ನೇ ಅಧ್ಯಾಯ.

### ಶ್ರೀರಂಗಪಟ್ಟಣದ ಮುತ್ತಿಗೆಯೂ, ಇಂಗ್ಲಿಷರಿಗೆ ಭಾವು ಮಾಡಿದ ಸಹಾಯವು.

ಟೀಪುವಿನ ಉದ್ದಾಮತನ, ದುಷ್ಕರ್ಮ, ಪ್ರಜಾ-ಪೀಡನ, ನಿಷ್ಕಾರಣಕ್ರೌರ್ಯ, ಮುಂತಾದವುಗಳ ಬಗ್ಗೆ ಪೇಶವೆಸರದಾರರು ಆತನನ್ನು ಚನ್ನಾಗಿ ಶಾಸನಮಾಡಿದರೆಂದು ಹಿಂದಿನ ಅಧ್ಯಾಯದ ಕೊನೆಯಲ್ಲಿ ನಿರೂಪಿಸಿರುವೆವು. ತನಗಾದ ಶಾಸನವನ್ನು ನೆನಪಿನಲ್ಲಿಟ್ಟು, ಮದಾಂಧತನವನ್ನು ಬಿಟ್ಟು ಅವನು ತನ್ನ ನಡೆ-ನುಡಿಗಳನ್ನು ಸುಧಾರಿಸಕೊಳ್ಳಬೇಕಾಗಿತ್ತು; ಮತ್ತು ಪೇಶವೆಸರದಾರರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಡಕೊಂಡು ತನ್ನ ಕ್ಷೇಮವನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ವಿವೇಕಶೂನ್ಯನಾದ ಆ ಸುಲ್ತಾನನಿಗೆ ಅಂಥ ಸುಬುದ್ಧಿಯು ಬರುವ ಬಗೆಯು ಹ್ಯಾಗೆ? “ ಒತ್ತಿದರೆ ಸರಿಯಪ್ಪ ” ಎಂಬ ಗಾದಿಯಂತೆ ಅವನು ಹಣ್ಣಿಗೆಬಂದು ನಿರ್ವಿಣ್ಣನಾದನೆಂದರೆ ನಿರುಪಾಯನಾಗಿ ಒಪ್ಪಂದಮಾಡಿಕೊಂಡು ಬಂದ ಪ್ರಸಂಗವನ್ನು ದಾಟುವನು; ಪುನ: ಸ್ವಲ್ಪ ಧೈರ್ಯವು ಬಂದಿತೆಂದರೆ ಅದನ್ನು ಮುರಿದು ಮೈಮರೆಯುವನು. ಇದು ಆತನ ನಿತ್ಯವರ್ತನವಾಗಿತ್ತು. ಅವನು ಒಪ್ಪಂದದ ಯಾದಿಯನ್ನು ಎಣ್ಣೀಚೀಟಿಯೆಂದು ತಿಳಿಯುತ್ತಿದ್ದನು; ಒಪ್ಪಂದವೆಂದರೆ ತನ್ನ

ಮೈಮೇಲೆ ಬಂದ ದುರ್ಧರಪ್ರಸಂಗದೊಳಗಿಂದ ಪಾರುಬೀಳುವ ಒಂದು ಸುಲಭಸಾಧ್ಯವಾದ ಸಾಧನವೆಂದು ತಿಳಿಯುವನು. ಟೀಪು ಇಂಥ ವಿಚಿತ್ರ ಗುಣಮಂಡಿತ ಮೂರ್ತಿಯು. ಆದರೂ ರಾಜಕರಣಕುಶಲರಾದ ಪೇಶವೆಸರಕಾರದವರು ಅವನ ಸಂಗಡ ರಾಜನೀತಿಯನ್ನು ಬಿಡದೆ, ರಾಜರಿಗೆ ತಕ್ಕ ರೀತಿಯಿಂದ ನಡೆಯುತ್ತ ಅವನ ಮೇಲೆ ದೊಡ್ಡ ದೊಡ್ಡ ಉಪಕಾರಗಳನ್ನು ಮಾಡಿದರು. ಆ ಉಪಕಾರಸ್ಮರಣೆಯು ಆ ಕೃತಘ್ನನಲ್ಲಿ ಎಂತು ಹುಟ್ಟುವದು? ಸುಲ್ತಾನನು ಪೇಶವೆಯರು ಕೊಟ್ಟ ಸವಲತ್ತಿನಿಂದ ಹೆಚ್ಚು ಹುರುಪುಗೊಂಡನು. ಅವರು ಮಾಡಿದ ಉಪಕಾರಗಳನ್ನು ಸ್ಮರಿಸಿ ಕೃತಜ್ಞತೆಯನ್ನು ತೋರಿಸುವದು ಒತ್ತಟ್ಟಿಗಿರಲಿ! ಅವನು ಅವರನ್ನು ನಿರ್ಮೂಲಮಾಡಬೇಕೆಂದು ಮೊದಲಿಗಿಂತ ಹೆಚ್ಚು ಪ್ರಯತ್ನ ಮಾಡಹತ್ತಿದನು. "ಉಂಡಮನಿ ಗಳಾ ಎಣಿಸು" ಎಂಬುವದು ಟೀಪುವಿನ ಗುರುಮಂತ್ರವಾಗಿತ್ತು. ಆತನು ಫ್ರೆಂಚಜನರಿಗೆ ಆಶ್ರಯಕೊಟ್ಟು, ಸೈನ್ಯಸಿದ್ಧತೆಯನ್ನು ಸತ್ವರದಿಂದ ನಡೆಸಿದನು. ದಿನೇದಿನೇ ಅವನ ದಂಡು ಬೆಳೆಯಹತ್ತಿತು. ಹಿಂದಿನ ದಾಳಿಯಲ್ಲಿ ಇಂಗ್ಲೀಷರು ಅವನಿಗೆ ಸಹಾಯಮಾಡಲಿಲ್ಲ. ನಿಜಾಮನಂತೂ ಪೇಶವೆಯರ ಸಹಾಯಕನಾಗಿ ತನ್ನೊಡನೆ ಯುದ್ಧಮಾಡಿದನು. ಆದರಿಂದ ಈ ಮೂರುರಾಷ್ಟ್ರಗಳ (ಇಂಗ್ಲೀಷ, ಮರಾಠಾ ಮತ್ತು ನಿಜಾಮ) ಅಂತಸ್ಥ ಉದ್ದೇಶವು ಒಂದೇ ಇರುವದು. ಈ ತ್ರಿವರ್ಗರಾಷ್ಟ್ರದವರು ತನ್ನ ನಾಶಾರ್ಥ ದೃಢಸಂಕಲ್ಪಮಾಡಿರುವರು. ಹೀಗೆ "**विनाशकाले विपरीतबुद्धिः**" ಎಂಬಂತೆ ಸುಲ್ತಾನನು ಇಲ್ಲದ ಕುಹಕ ವಿಚಾರಗಳಿಗೆ ಇಂಬುಗೊಟ್ಟು ತನ್ನ ನಾಶವನ್ನು ತಾನೇ ಮಾಡಿಕೊಂಡನು.* ದುಷ್ಟವಿಚಾರಗಳಿಗೆ ಆಸ್ಪದ ಕೊಟ್ಟು ಅದರಂತೆ ನಡೆದು ಮಾನಗೇಡಿಯಾಗುವದು ದುರ್ಜನನ ಸ್ವಾಭಾವಿಕಗುಣವೇ ಆಗಿರುವದು. ಯಾಕಂದರೆ ದುಷ್ಕರ್ಮ ತತ್ಪರನ ಮನಸ್ಸು ಯಾವಾಗಲೂ ಸಾಶಂಕತನದ್ದಿರುವದು. ಹೆರವರು ಮಾಡುವ ಸಣ್ಣಪುಟ್ಟ ಕೆಲಸಗಳಿಂದ ಸಹ, ಅವನು ತನ್ನ ವಿನಾಶವು ಆಗಬಹುದೆಂದು ಶಂಕಿಸುವನು. ಈ ಪ್ರಕಾರ "ಕಳ್ಳನ ಜೀವ ಹುಳ್ಳುಳ್ಳಗೆ" ಎಂಬಂತೆ ಟೀಪುವಿನ ಅವಸ್ಥೆಯಾಗಿತ್ತು. ಹಿಂದಿನ ಅಧ್ಯಾಯದಲ್ಲಿ ಹೇಳಿದ ಪ್ರಕಾರ ಪೇಶವೆಸರದಾರರು ಸುಲ್ತಾನನನ್ನು ಮೆತ್ತಗೆಮಾಡಿ ರಾಜಧಾನಿಗೆ ಹೋದಬಳಿಕ ಮುಂದೆ ಕೆಲವು ದಿವಸಗಳಲ್ಲಿ ನಿಜಾಮನ ವಕೀಲನು ಪುಣೆಗೆ

* ಇದರ ಸತ್ಯತೆಯು ಟೀಪುವಿನ ಚರಿತ್ರೆಯನ್ನು ಓದಿದರೆ ಗೊತ್ತಾಗುವದು.

ಬಂದಿದ್ದನು. ಆಗ ಅಲ್ಲಿ ಚರ್ಚೆ ನಡೆದು ಪೇಶವೆ-ನಿಜಾಮರ ನಡುವೆ ಕೆಲವು ಕರಾರಗಳು ಆದವು. ಇದು ಟೀಪುವಿಗೆ ಗೊತ್ತಾಯಿತು. ಅವನು ಪೇಶವೆ-ನಿಜಾಮರು ತನ್ನ ನಾಶಾರ್ಥ ವಿಚಾರವನ್ನು ನಿರ್ಧರವಮಾಡಿದರೆಂದು ನೆನಿಸಿ ಕಡು ಕನಲ್ದನು. ಇಷ್ಟರಲ್ಲಿ ಇಂಗ್ಲೀಷರು ನಿಜಾಮನೊಡನೆ ಒಪ್ಪಂದವಮಾಡಿ ಕೊಂಡರು. ( ಇ. ಸ. ೧೭೮೮ ) ಆ ಒಪ್ಪಂದದಲ್ಲಿ ಪೇಶವೆಯರು ಇಂಗ್ಲೀಷ ನಿಜಾಮರ ಗೆಳೆಯರೆಂತಲೂ, ನಿಜಾಮನು ಇಂಗ್ಲೀಷರ ಗೆಳೆಯರೊಡನೆ ಯುದ್ಧವಮಾಡಕೂಡದೆಂತಲೂ ಒಂದು ಶರ್ತು ಇತ್ತು. ಆ ಗೆಳೆಯರ ಪಟ್ಟಿ ಯಲ್ಲಿ ಟೀಪುವಿನ ಹೆಸರೇ ಇದ್ದಿಲ್ಲ. ಆಗ ಟೀಪುಸುಲ್ತಾನನು ತನ್ನ ಹೆಸರನ್ನು ಇಂಗ್ಲೀಷರು ದ್ವೇಷಬುದ್ಧಿಯಿಂದ ಬಿಟ್ಟಿರುತ್ತಾರೆಂದು ತಿಳಿದನು; ಇಷ್ಟೇ ಅಲ್ಲ, ಇಂಗ್ಲೀಷ-ಮರಾಠಾ-ನಿಜಾಮ ಈ ತ್ರಿವರ್ಗ ರಾಷ್ಟ್ರದವರು ಏಕತ್ರ ರಾಗಿ ತನ್ನನ್ನು ನಾಶವಮಾಡಬೇಕೆಂದು ಕಂಕಣಬದ್ಧರಾಗಿರುವರೆಂದು ಆತನು ಗ್ರಹಿಸಿಕೊಂಡನು. ಸ್ವಲ್ಪ ವಿಚಾರವಮಾಡಿ ನೋಡಿದರೆ, ಆತನ ನಿಷ್ಕಾರಣ ದುಷ್ಟವಿಚಾರ, ದುರ್ವರ್ತನ, ಕೃತಘ್ನತನ, ದುರಾಗ್ರಹ ಮೊದಲಾದವುಗಳೇ ಆತನ ಭಾವೀ ವಿನಾಶಮಂದಿರದ ಪಾಯವಾಗಿ ಕೂತವು. ಪೇಶವೆಸರದಾರರೊ ಡನೆ ಆತನು ಒಡಂಬಡಿಕೆಯನ್ನು ಮಾಡಿಕೊಂಡಿದ್ದರೂ, ಭಾವು-ಹರಿಪಂತರು ಇನ್ನೂ ಕೃಷ್ಣಾನದಿಯನ್ನು ದಾಟಿದ್ದಿಲ್ಲ; ಅಷ್ಟರಲ್ಲಿಯೇ ಟೀಪು ಕಿತ್ತೂರ ಕಿಲ್ಲೆಯನ್ನು ಶಳಕೊಂಡು ಒಪ್ಪಂದವನ್ನು ಮುರಿದನು; ಇದಲ್ಲದೆ ಬೇದನೂ ರಲ್ಲಿ ದೊಡ್ಡದಂಡು ಕೂಡಿಸಿ ಕೊಂಕಣವನ್ನು ಒಳನುಗ್ಗುವ ಅಂಜಿಕೆಯನ್ನು ತೋರಿಸಿದನು. ಇದು ನಾನಾಫಡಣವೀಸನಿಗೆ ಗೊತ್ತಾಗುತ್ತಲೆ ಅವನು ಸುಲ್ತಾನನು ಮರಾಠಾರಾಜ್ಯವನ್ನೇ ನಿರ್ನಾಮವಮಾಡಬೇಕೆಂದು ಸಂಕಲ್ಪ ಮಾಡಿರುವನೆಂದು ಬಗೆದು, ಹೊಸದಾಗಿ ಉದ್ಭವವಾದ ಗಂಡಾಂತರದೊಳ ಗಿಂದ ಪಾರಾಗುವ ಹಂಚಿಕೆಯನ್ನು ಹಾಕಿದನು. ವಿಚಾರಾಂತ್ಯದಲ್ಲಿ ಅಗ್ಗ ಬಲಾಢ್ಯರಾದ ಇಂಗ್ಲೀಷರ ಸಹಾಯವಿಲ್ಲದೆ ಕಷ್ಟಕಾರ್ಯವು ಕೈಗೂಡ ದೆಂದು ತಿಳಿದು, ಆತನು ಪುಣೆಯಲ್ಲಿದ್ದ ಅವರ ವಕೀಲನ ಮುಖಾಂತರವಾಗಿ ಸಂಧಾನಪ್ರಸಕ್ತಿಯನ್ನು ಪ್ರಾರಂಭಿಸಿದನು. ಇಂಗ್ಲೀಷರಿಗಾದರೂ ಅದೇ ಬೇಕಾಗಿತ್ತು. ಅವರು ಇದಕ್ಕು ಮುಂಚೆಯೇ ಟೀಪುವಿನ-ವಿನಾಶ--ವಿಚಾರ ವನ್ನು ಯೋಚಿಸಿದ್ದರು. ಅದರಿಂದ ಅವರು ನಾನಾನ ಮಾತಿಗೊಪ್ಪಿಕೊಂಡರು. ಆದರೂ ಸುಲ್ತಾನನು ಅಲ್ಲಿಯವರೆಗೆ ಇಂಗ್ಲೀಷರ ಹೆಸರು ತೆಗೆದಿದ್ದಿಲ್ಲ.

ಕಾರಣ ಪೇಶವೆಯರೊಡನೆ ಒಪ್ಪಂದ ಮಾಡಿಕೊಳ್ಳುವ ಮೊದಲು ಅವರು ಏನಾದರೂ ನಿಮಿತ್ಯವನ್ನು ಹುಡುಕತೊಡಗಿದರು. ಅಷ್ಟರಲ್ಲಿ ಟೀಪು ಇಂಗ್ಲೀಷರ ಆಶ್ರಯದಲ್ಲಿರುವ ತ್ರಾವಣಕೋರದ ಅರಸನನ್ನು ಕಾರಣವಿಲ್ಲದೆ ಕೆಣಕಿದನು. ಆಗ ಅಷ್ಟೇ ಕಾರಣವು ಇಂಗ್ಲೀಷರಿಗೆ ಸಾಕಾಯಿತು. ಕೂಡಲೆ ಇಂಗ್ಲೀಷರು ಪೇಶವೆಯರೊಡನೆ ಒಪ್ಪಂದ ಮಾಡಿಕೊಂಡರು. ಈ ಮೇರೆಗೆ ಇಂಗ್ಲೀಷ, ಮರಾಠಾ, ನಿಜಾಮ ಈ ತ್ರಿವರ್ಗರಾಷ್ಟ್ರದವರು ಏಕತ್ರರಾದರು.

ಆ ತ್ರಿವರ್ಗ-ರಾಷ್ಟ್ರಗಳ ನಡುವೆ ಇ. ಸ. ೧೭೯೦ ಜೂನ ೧ನೇ ತಾರೀಖಿನ ದಿವಸ ಪುಣೆಯಲ್ಲಿ ಒಪ್ಪಂದವಾಯಿತು. ಅದರಲ್ಲಿ ನಿರ್ಣಯವಾದದ್ದೇನಂದರೆ—ಪೇಶವೆ-ನಿಜಾಮರ ೨೫,೦೦೦ ಸೈನ್ಯವು ಮಳೆಗಾಲದಲ್ಲಿ ಹೊರಟು ಟೀಪುವಿನ ರಾಜ್ಯದ ಉತ್ತರಭಾಗವನ್ನು ಕೈವಶಮಾಡಿಕೊಳ್ಳಬೇಕು. ಮಳೆಗಾಲವು ಮುಗಿದ ಬಳಿಕ ತ್ರಿವರ್ಗರಾಷ್ಟ್ರದವರು ಕೂಡಿದಷ್ಟು ದಂಡು ತಕ್ಕೊಂಡು, ಅವನ ಮೇಲೆ ಸಾಗಿಹೋಗಿ ಆತನ ಯಾವತ್ತು ರಾಜ್ಯವನ್ನು ತಕ್ಕೊಳ್ಳಬೇಕು. ಅವಶ್ಯಬಿದ್ದರೆ ಪೇಶ್ವೆ-ನಿಜಾಮರು ಹೆಚ್ಚಿಗೆ ೧೦,೦೦೦ ದಂಡಿನ ಸಹಾಯವನ್ನು ಒದಗಿಸಿಕೊಡಬೇಕು. ಆ ದಂಡಿನ ವೆಚ್ಚವನ್ನು ಇಂಗ್ಲೀಷರು ಸೋಸಬೇಕು. ಪೇಶ್ವೆ-ನಿಜಾಮರ ಬೆಂಬಲಕ್ಕೆ ಇಂಗ್ಲೀಷರು ಪ್ರತಿಒಬ್ಬರಿಗೆ ಎರಡೆರಡು ಪಲಟಣಗಳನ್ನು ಅವರೊಡನೆ ಕಳಿಸಿಕೊಡಬೇಕು. ಆ ಪಲಟಣಗಳ ವೆಚ್ಚವನ್ನು ಪೇಶವೆ-ನಿಜಾಮರೇ ನೋಡಿಕೊಳ್ಳಬೇಕು. ಕಾಳಗದಲ್ಲಿ ಗೆದ್ದ ದೇಶಕೋಶಗಳನ್ನು ಮೂವರೂ ಸರಿಯಾಗಿ ಹಂಚಿಕೊಳ್ಳಬೇಕು. ಇತ್ಯಾದಿ.

ಒಪ್ಪಂದದಂತೆ ಸುಲ್ತಾನನ ರಾಜ್ಯದ ಮೇಲೆ ಮಾಡಬೇಕಾದ ದೌಡಿನ ಗೋಸ್ಕರ ದಂಡು ಕಳುಹಿಸಿಕೊಡುವದು ನಿಶ್ಚಯವಾಯಿತು. ಆಗ ಆ ಮರಾಠಾಸೈನ್ಯದ ಸರ್ವಾಧಿಪತ್ಯವನ್ನು ಯಾರಿಗೆ ಒಪ್ಪಿಸಬೇಕೆಂಬ ಪ್ರಶ್ನವು ಹೊರಟಿತು. ಆ ಕಾಲಕ್ಕೆ ಪೇಶವೆಯರ ಪದರಿನಲ್ಲಿ ಅಸಂಖ್ಯ ಶಿಲೇದಾರ, ಸರದಾರ, ಸಂಸ್ಥಾನಿಕರಿದ್ದರು. ಆದರೆ "**शैलेशैले न माणिक्यं, मौक्तिकं न गजेगजे**" ಎಂಬ ಕವಿಯ ವಚನದಂತೆ ಅವರೆಲ್ಲರು ತಮ್ಮ ಭುಜಬಲದಿಂದ ಪ್ರಖ್ಯಾತಿಯನ್ನು ಹೊಂದಿರದೆ, ಅವರಲ್ಲಿ ಹಲಕೆಲವರು ಮಾತ್ರ ಹೆಸರಾದ ಪರಾಕ್ರಮಿಗಳಿದ್ದರು. ಆದರೂ ಅವರ ಪರಾಕ್ರಮ-ಗುಣವು ಕೇವಲ ಏಕದೇಶೀಯ

ವಾದದ್ದು. ಸ್ವತಂತ್ರಸ್ವಾರಿಯ ಮಹತ್ವಕೆಲಸವನ್ನು ವಹಿಸಿಕೊಡಬೇಕಾದ ಪುರುಷನಲ್ಲಿ ಶೌರ್ಯ, ಧೈರ್ಯ ಇತ್ಯಾದಿ ಪೌರುಷ-ಗುಣಗಳು ಇದ್ದುದಲ್ಲದೆ, ಇನ್ನೂ ಕೆಲವು ಗುಣಗಳು ಅವಶ್ಯವಾಗಿ ಇರಬೇಕಾಗುವದು. ಕೈಕೆಳಗಿನ ಜನರನ್ನು ಗೌರವದಿಂದಲೂ, ಪ್ರೀತಿಯಿಂದಲೂ ನಡೆಸಿಕೊಳ್ಳುವ ಕುಶಲತೆಯು ಸೇನಾಪತಿಯಲ್ಲಿ ಇರಬೇಕಾದ ಪ್ರಥಮ ಮತ್ತು ಪ್ರಮುಖವಾದ ಸದ್ಗುಣವು. ಅವರಲ್ಲಿ ದಳಪತಿಯ ವರ್ಚಸ್ಸು ಇರದಿದ್ದರೆ ಸರದಾರರಲ್ಲಿ ಒಡಕು ಹುಟ್ಟಿ ದಂಡಿನ ಕಟ್ಟು ಸಡಿಲಾಗುವದು; ಕಟ್ಟು ಕೆಡುವದರಿಂದ ದಂಡಿನ ವ್ಯವಸ್ಥೆಯು ಲೋಪವಾಗುವದು. ಹೀಗಾಗುವದರಿಂದ ಕೆಲವು ಜನರು ಒಡೆದುಹೋಗಿ ಹಗೆಗಳನ್ನು ಕೂಡಿಕೊಳ್ಳುವರು. ಆದದರಿಂದ ಸೇನಾಧೀಶನಾದವನು ಕೈಕೆಳಗಿನವರನ್ನು ಮಮತೆಯಿಂದ ನಡೆಸಿಕೊಳ್ಳಬೇಕಾಗುತ್ತದೆ. ಇದಲ್ಲದೆ ಪ್ರಸಂಗಬಂದರೆ ಜೀವದ ಹಂಗುದೊರೆದು ಸ್ವಾಮಿಕಾರ್ಯವನ್ನು ಸಾಂಗಗೊಳಿಸುವದಕ್ಕೆ ಸಮಯೋಚಿತ ಸ್ಫುರಣವನ್ನು ಸೈನಿಕರಲ್ಲಿ ಹುಟ್ಟಿಸುವ ಸಾಮರ್ಥ್ಯವೂ ಬೇಕು. ಇದಕ್ಕೆ ಸಮಯಸ್ಫೂರ್ತಿಯೂ ಪ್ರಸಂಗಾವಧಾನವೂ ಅಗತ್ಯವಾದವುಗಳು. ಇಷ್ಟೇ ಅಲ್ಲ. ಎಂಥ ದುರ್ಘಟ ಪ್ರಸಂಗಗಳು ಬಂದರೂ, ಧೈರ್ಯಬಿಡದೆ ಆ ಗಂಡಾಂತರಗಳೊಳಗಿಂದ ಪಾರುಗಾಣುವ ಸಮಯಾನುಸಾರ ಯುಕ್ತಿಗಳು ತತ್ಕಾಲ ಅವನಲ್ಲಿ ಹುಟ್ಟುತ್ತಿರಬೇಕು; ಮತ್ತು ಕೈಕೆಳಗಿನ ಜನರು ಸಂತುಷ್ಟರಾಗಿರುವಂತೆ ತಾನು ಸ್ವತಃ ದಕ್ಷತೆಯಿಂದ ವರ್ತಿಸುತ್ತಿರಬೇಕು. ಇವೆಲ್ಲ ಮಾತುಗಳ ಕಡೆಗೆ ತಕ್ಕಷ್ಟು ಲಕ್ಷ್ಯಕೊಟ್ಟು ಸಾರಾಸಾರ ವಿಚಾರಮಾಡಿ ನೋಡಲು, ಸರದಾರರ ಸಮೂಹದಲ್ಲಿ ಇಬ್ಬರು ಮಾತ್ರ ನಾನಾಫಡಣವೀಸನ ಮನಸ್ಸಿಗೆ ಬಂದರು. ಒಬ್ಬನು ನಮ್ಮ ಕಥಾನಾಯಕನಾದ ಪರಶುರಾಮಪಂತಭಾವು, ಇನ್ನೊಬ್ಬನು ಹರಿಪಂತತಾತ್ಯಾ ಫಡಕೆ. ಅವರಲ್ಲಿ ಕರ್ನಾಟಕಪ್ರಾಂತದ ಜನರ ಪರಿಚಯವೂ, ಯುದ್ಧಕ್ಕೆ ತಕ್ಕ ಆಯಮೆಟ್ಟಿನ ಸ್ಥಳಗಳನ್ನು ಗೊತ್ತುಮಾಡಿಕೊಳ್ಳುವ ಕಾಳಗದ ಹದನವೂ, ಅಲ್ಲಿ ಇರುವ ಕೋಟೆಕೊತ್ತಳಗಳ ಬಲಾಬಲವೂ, ಶತ್ರುಸರದಾರರ ಗುಣದೋಷಗಳ ಅನುಭವವೂ ಇತ್ಯಾದಿ ಆಹವ-ಉಪಕರಣಗಳು ಭಾವೂಗೆ ಹೆಚ್ಚು ಗೊತ್ತಿದ್ದದರಿಂದ ಆ ದಾಳಿಯ ಸರ್ವಾಧಿಪತ್ಯವನ್ನು ಆತನಿಗೆ ಒಪ್ಪಿಸಬೇಕೆಂದು ನಾನಾಫಡಣವೀಸನು ನಿಶ್ಚೈಸಿದನು.

ಬಳಿಕ ನಾನಾನು ತಾ. ೫-೫-೧೭೯೧ ಇಷ್ಟು ದಿವಸ ಪರಶುರಾಮಭಾವು ವಿಗೆ ಸೇನಾಪತಿಯ ಅಧಿಕಾರ-ಪ್ರಧಾನದಗೋಸ್ಕರ ಒಂದು ದೊಡ್ಡ ದರಬಾರ ಕೂಡಿಸಿದನು. ಶ್ರೀಮಂತ ಸವಾಯಿಮಾಧವರಾವಸಾಹೇಬ ಪೇಶವೆ, ಕಾರ ಭಾರಿ, ಸರದಾರ, ಶಿಲೇದಾರ, ಮಾನಕರಿ ಇತ್ಯಾದಿ ಸಕಲಜನರು ಬಂದು ಉಚಿತಾಸನದಲ್ಲಿ ಕುಳಿತುಕೊಂಡರು. ಆಗ ನಾನಾಫಡಣವೀಸನು ಟೀಪು ವಿನ ಮೇಲೆ ದೌಡುಮಾಡಬೇಕೆಂದು ಶ್ರೀಮಂತ ಸರಕಾರದವರು ಮಾಡಿದ ನಿಶ್ಚಯವನ್ನು ಎಲ್ಲರಿಗೂ ವಿದಿತಪಡಿಸಿದನು. ಅದು ಹ್ಯಾಗಂದರೆ “ಸಭಿಕರೆ, ನೀವೆಲ್ಲರು ಪೇಶವಾಯಿಯ ಸಂಪೂರ್ಣ ಅಭಿಮಾನಿಗಳು. ಯವನ ರಾಜ ನಾದ ಟೀಪುಸುಲ್ತಾನನು ಮದಾಂಧನಾಗಿರುವನು; ಅವನ ದುಷ್ಟಕೃತ್ಯಗಳು ಅಳತೆಗೆಟ್ಟಿರುವವು. ಅವನು ಹಿಂದುರಾಜರನ್ನೂ, ಹಿಂದುಪ್ರಜೆಗಳನ್ನೂ ಪರಿಪರಿಯಿಂದ ಪೀಡಿಸುತ್ತಿರುವನು; ಪವಿತ್ರ ಹಿಂದುಧರ್ಮವನ್ನು ಲೋಪ ಮಾಡಬೇಕೆಂದು ಸಂಕಲ್ಪಮಾಡಿರುವನು. ಆತನು ಕಾರಣವಿಲ್ಲದೆ ನಮ್ಮ ಸೀಮೆಯನ್ನು ಹೊಕ್ಕು ಅಲ್ಲಿ ಕೊಲೆಸುಲಿಗೆಗಳನ್ನು ನಡೆಸಿರುವನು. ಕರ್ನಾ ಟಕದ ಜನರ ಗೋಳಾಟವಂತೂ ಹೇಳಲಸಾಧ್ಯವು. ಆತನು ಸ್ವಧರ್ಮದ ದುರಭಿಮಾನದಿಂದ ಹಿಂದೂಜನರ ಮೇಲೆ ಬಲಾತ್ಕಾರಮಾಡಿ ಅವರನ್ನು ಮುಸಲ್ಮಾನರನ್ನು ಮಾಡುವನು. ಪ್ರತ್ಯಕ್ಷ ಪಟವರ್ಧನ ಸರದಾರರ ಆಪ್ತ ನಾದ ನರಗುಂದಕರನನ್ನು ಯಾವಪ್ರಕಾರ ಪೀಡಿಸಿದನೆಂಬದು ಎಲ್ಲರಿಗೂ ಗೊತ್ತಿದ್ದಮಾತು. ಅವನ ನಿಷ್ಕಾರಣ ಕ್ರೌರ್ಯ, ದುರಾಗ್ರಹ, ಬಲಾತ್ಕಾರ, ಅತ್ಯಾಚಾರಗಳನ್ನು ನೆನಸಿಕೊಂಡರೆ ಮೈಗೆ ಮುಳ್ಳುಬರುವದು; ಹೃದಯವು ಕಂಪಿಸುವದು. ಸಾರಾಂಶ, ಈಗ್ಗೆ ಇಡೀ ಹಿಂದುಸ್ಥಾನದಲ್ಲಿ ಒಂದೇ ಒಂದಾದ ಹಿಂದೂಸಾಮ್ರಾಜ್ಯ (ಪೇಶ್ವೆರಾಜ್ಯ)ವು ಸ್ವಲ್ಪ ದಿವಸಗಳಲ್ಲಿ ಆ ಯವನ ಭೂಪತಿಯ ಬಲಿಗೆ ಬಿದ್ದು ಮಣ್ಣುಪಾಲಾಗುವದು. ಅಂದಮೇಲೆ ಇಂಥ ಸಮಯದಲ್ಲಿ ನಾವು ಹುಚ್ಚರಂತೆ ಕೂಡ್ರುವದು ಸರಿಯೆನಿಸದು. ಯಾ ಕಂದರೆ, ‘ಗಿಡವಾಗಿ ಬಾಗಿದ್ದು ಮರವಾಗಿ ಬಾಗದು’ ಎಂದು ನೀತಿಯುಂಟು. ಈಗ ಆತನು ಅಷ್ಟೊಂದು ಬಲತಿಲ್ಲ. ಇದಲ್ಲದೆ ಸ್ವಜಾತಿಯ ಅರಸನಾದ ನಿಜಾಮನು ಆತನ ಹಗೆಯಾಗಿ ಕೂತಿರುವನು. ಪರರಾಯರಾದ ಇಂಗ್ಲೀ ಷರು ಅವನ ದ್ವೇಷಸಾಧಕರಾಗಿರುವರು. ಇವರಿಬ್ಬರು ನಮ್ಮಕೂಡ ಸ್ನೇಹ ಭಾವದಿಂದ ಇರುವರು. ಇಂಥ ಉತ್ತಮವಾದ ಸಂಧಿಯು ಮುಂದೆ ಸಿಗದು.

ಇದೆಲ್ಲ ಪರ್ಯಾಲೋಚಿಸಿ ಇಂಗ್ಲೀಷ-ಮರಾಠಾ-ನಿಜಾಮ ಈ ತ್ರಿವರ್ಗ ರಾಷ್ಟ್ರದವರು ಆತನಿಗೆ ಯಾವಜ್ಜನ್ಮಸ್ಮಾರಕವಿರುವ ಯಥಾಯೋಗ್ಯ ಶಾಸನವನ್ನು ಮಾಡಬೇಕೆಂದು ನಿರ್ಣಯಮಾಡಿರುವರು. ಪೇಶವೆಸರಕಾರದ ದಂಡು ಬೇಗನೆ ಹೊರಡತಕ್ಕದ್ದಿರುವದು. ಅದರ ದಂಡನಾಯಕತ್ವವು ನಾಮಾಂಕಿತ ಪಟವರ್ಧನಸರದಾರನಾದ ಪರಶುರಾಮಭಾವು ಇವನ ಕಡೆಗೆ ಒಪ್ಪಿಸಿ ಕೊಡಲ್ಪಟ್ಟಿರುವದು. ಆದದರಿಂದ ಅವರೊಡನೆ ಹೋಗುವ ಯಾವತ್ತು ಸರದಾರ, ಶಿಲೇದಾರ ಇತ್ಯಾದಿ ಸೈನ್ಯದ ಜನರು ಅವರು ಆಗಾಗ್ಗೆ ಮಾಡುವ ಅಪ್ಪಣೆಗಳನ್ನು ಶಿರಸಾವಹಿಸಿ ಅದರಂತೆ ಅವರಿಗೆ ವಿಧೇಯರಾಗಿ ನಡೆಯಬೇಕು; ಪವಿತ್ರ 'ಹಿಂದೂ' ಈ ಶಬ್ದದ ಸಂಪೂರ್ಣ ಅಭಿಮಾನವನ್ನು ಹಿಡಿದು ಮತ್ತು ಶ್ರೀಮಂತರ ಗಾದಿಯ ಪಕ್ಷಪಾತವನ್ನು ಬಿಡದೆ ಎಲ್ಲರೂ ಶೌರ್ಯದಿಂದ ಕಾದಿ ಸುಲ್ತಾನನನ್ನು ಸೋಲಿಸಿ, ಸ್ವಾಮಿಕಾರ್ಯವನ್ನು ತನು-ಮನ-ವಚನದಿಂದ ನೆರವೇರಿಸಿ ಕೃತಾರ್ಥರಾಗಬೇಕು." ನಾನಾಫಡಣವೀಸನ ಈ ಸುರಸಸಂಭಾಷಣವು ಮುಗಿದಬಳಿಕ ಭಾವೂಗೆ ಸೇನಾಪತಿಯ ವಸ್ತ್ರ-ತಾಂಬೂಲಗಳು ಕೊಡಲ್ಪಟ್ಟು, ಆತನನ್ನು ಸೇನಾಧೀಶನನ್ನು ಮಾಡಿದಂತೆ ಬರೆದ ಸರಕಾರದ ರಾಯಸವು ಅವನ ಸ್ವಾಧೀನ ಮಾಡಲ್ಪಟ್ಟಿತು.

ಶಿಂದೆ, ಹೋಳಕರ ಮುಂತಾದ ಪ್ರಖ್ಯಾತ ರಣಧುರೀಣಸರದಾರರು ಇರುತ್ತಿರಲು, ಟೀಪುವಿನಂಥ ಪ್ರಚಂಡವೈರಿಯಕೂಡ ಯುದ್ಧಕ್ಕೆ ಕಳುಹಿಸಬೇಕಾದ ಪೇಶವೆಸೈನ್ಯದ ಸ್ವತಂತ್ರ ಸರ್ವಾಧಿಪತ್ಯವನ್ನು ಪರಶುರಾಮಭಾವೂನ ಕಡೆಗೆ ಒಪ್ಪಿಸಿದ್ದು ಸಣ್ಣಪುಟ್ಟ ಸಂಗತಿಯಲ್ಲ. ಪೇಶವೆದರಬಾರದಲ್ಲಿ ಈ ಅಲೌಕಿಕಪುರುಷನ ವಿಲಕ್ಷಣ ತೇಜವು ಹೆಚ್ಚುತ್ತ ನಡೆದು ಈ ಭಾಗ್ಯಶಾಲಿಯು ಪರಾಕ್ರಮಪರ್ವತದ ಅತ್ಯುಚ್ಚಶಿಖರವನ್ನು ಆರೋಹಣಮಾಡಿಕೊಂಡು ಮೆರೆಯುತ್ತಿದ್ದದರಿಂದಲೇ ಆತನಿಗೆ ಇಂಥ ಅದ್ಭುತ ಸೇನಾಸಾಗರದ ಸ್ವತಂತ್ರ ದಂಡನಾಯಕತ್ವವು ಸಹಜವಾಗಿ ಲಭ್ಯವಾಯಿತು. ಇದು ಆತನ ಮೇರುಸದೃಶ ಧೈರ್ಯ, ಭೀಷ್ಮಪರಾಕ್ರಮ ಮುಂತಾದವುಗಳ ಪ್ರತ್ಯಕ್ಷ ಸಾಕ್ಷಿಯಾಗಿರುವದು. ಇರಲಿ.

ಶ್ರೀಮಂತರ ಮತ್ತು ನಾನಾಫಡಣವೀಸ ಮೊದಲಾದ ಪ್ರಧಾನಮಂಡಲದವರ ನಿರೋಪ ತಕ್ಕೊಂಡು ಭಾವು ತಾಸಗಾಂವಿಗೆ ಬಂದನು. ಪೇಶವೆಸರ

ಕಾರದ ಹುಜೂರಸೈನ್ಯದ ಸ್ವಾರರು, ಕಾಲಾಳುಗಳು, ತೋಫುಗಳು, ಯಾವತ್ತೂ ಪಟವರ್ಧನಸರದಾರರು, ಪ್ರತಿನಿಧಿ, ಗೋಖಲೆ ಮುಂತಾದ ಚಿಕ್ಕದೊಡ್ಡ ಸರದಾರರು, ಅವರವರ ಕಡೆಗಿರುವ ದಂಡು ಇಷ್ಟೆಲ್ಲ ಸೇನಾಸಮೂಹವನ್ನು ಭಾವೂಸಾಹೇಬನ ಸ್ವಾಧೀನಮಾಡುವದು ನಿಶ್ಚಯವಾಯಿತು. ಇದೆಲ್ಲ ಕೂಡಿದರೂ ಒಪ್ಪಂದದಲ್ಲಿ ಗೊತ್ತಾದ ದಂಡಿಗೆ ಸರಿಯಿದ್ದಿಲ್ಲ. ಆದರಿಂದ ಹೊಸ ದಂಡು ಕೂಡಿಸಬೇಕೆಂದು ಭಾವೂಗೆ ಆಜ್ಞೆಯಾಯಿತು; ತಾಸಗಾಂವಿಗೆ ಬರುತ್ತಲೇ ಅವನು ಮೊದಲು ಅದೇ ಉದ್ಯೋಗಕ್ಕೆ ಹತ್ತಿದನು; ಅವನು ದಾಳಿಯ ಸಿದ್ಧತೆಯನ್ನು ಬಹಳ ಚಟುವಟಿಕೆಯಿಂದ ಮಾಡತೊಡಗಿದನು. ದೂರಿನ ದಾಳಿಯ ಸಿದ್ಧತೆಯನ್ನು ಬಹಳ ಚಟುವಟಿಕೆಯಿಂದ ಮಾಡುವ ಕೆಲಸವು ಪರಮಪ್ರಯಾಸಕರವು. ಶಿಪಾಯಿಜನರ ವಸ್ತ್ರ-ಪ್ರಾವರಣ ಮೊದಲ್ಗೊಂಡು ಅವರ ಅನ್ನ-ನೀರು ಮುಂತಾದ ಸಾಮುಗ್ರಿಗಳವರೆಗೆ, ಸ್ವಾರಜನರ ಕುದುರೆಗಳ ನಾಲುಹಿಡದು, ಅವುಗಳ ಕಡಿವಾಣದವರೆಗೆ, ಎಲ್ಲ ಪದಾರ್ಥಗಳ ಸಂಗ್ರಹವು ಸಾಕಷ್ಟು ಇರುವದೋ ಇಲ್ಲವೋ ಎಂಬದನ್ನು ನೋಡಿಕೊಳ್ಳಬೇಕಾಗುವದು; ಇದಲ್ಲದೆ ಶಸ್ತ್ರಾಸ್ತ್ರ ಮೊದಲಾದ ಆಹವ-ಸಾಹಿತ್ಯಗಳು ಸಾಕಷ್ಟು ಇದ್ದು ಅವುಗಳ ವ್ಯವಸ್ಥೆಯು ಚನ್ನಾಗಿ ಇರುವದೋ ಇಲ್ಲವೋ ಎಂಬದರ ಕಡೆಗೆ ತಕ್ಕಷ್ಟು ಲಕ್ಷ್ಯಕೊಡಬೇಕಾಗುವದು. ಕೆಲಸದ ಮಹತ್ವವನ್ನು ಅರಿತು ಆ ಆ ಕೆಲಸಗಳಿಗೆ ತಕ್ಕ ಜನರನ್ನು ನೇಮಿಸಬೇಕು. ಇವೆಲ್ಲ ಕಾರ್ಯನಿರ್ವಾಹವು ಬಹಳ ಕಠಿಣವಾದದ್ದು. ಇದೆಲ್ಲ ಮನದಂದು ಭಾವು ಯುದ್ಧಸಿದ್ಧತೆಯನ್ನು ಒಳ್ಳೇ ನಿಕಟತನದಿಂದಲೂ ಜಾಗ್ರತೆಯಿಂದಲೂ ನಡೆಸಿದನು. ಇಷ್ಟೆಲ್ಲ ಆಗಲು ಮೂರು ತಿಂಗಳುಗಳು ಕಳೆದವು.

ಸರ್ವಸಿದ್ಧತೆಯಾಯಿತು; ಆಷಾಢಮಾಸದ ಅಂತ್ಯದಲ್ಲಿ ಭಾವು ತಾಸಗಾಂವಿಯಿಂದ ಹೊರಟನು. ಆಗ ಅವನ ಸಂಗಡ ೫೦೦೦ ಸ್ವಾರರು ೨೦೦೦ ಕಾಲಾಳುಗಳು ಇದ್ದರು. ಮೊದಲು ಮುಜಲು ಕೌಟವೆಂಬಲ್ಲಿ; ಎರಡನೇದು ಕುಮಠೆಯಲ್ಲಿ; ಅಲ್ಲಿ ಮುಂಬೈಯಿಂದ ಹೊರಟುಬಂದ ಇಂಗ್ಲೀಷರ ಪಲಟಣವು ಅವನನ್ನು ಕೂಡಿಕೊಂಡಿತ್ತು.

ಆಗ ಮಳೆಗಾಲವಾದುದರಿಂದ, ಮಳೆಯು ‘ ಧೊ ’ ‘ ಧೊ ’ ಎಂದು ಸುರಿಯುತ್ತಿತ್ತು. ಈಗಿನಕಾಲದ ಮಳೆಗಾಲವಲ್ಲ; ಮಳೆಗಾಲದಲ್ಲಿ ಕುಡಿಯುವ ನೀರು ಸಿಗುವದಿಲ್ಲ. ಆಗ್ಗೆ ಜನರು ಸ್ವಧರ್ಮನಿರತರಿದ್ದರು; ನಿಬಿಡ

ತರವಾದ ಅರಣ್ಯಗಳು ಅಸಂಖ್ಯವಿದ್ದವು. ಇವೇ ಮೊದಲಾದ ಕಾರಣಗಳಿಂದ ಕಾಲಕಾಲಕ್ಕೆ ತಕ್ಕ ಮಳೆಯು ಬೀಳುತ್ತಿತ್ತು. ತೆರಪಿಲ್ಲದೆ ಮಳೆಯು ಸುರಿಯುತ್ತಿದ್ದದರಿಂದ ಹೊಳೆಹಳ್ಳಗಳು ಹೊರಸೂಸಿ ಹರಿಯುತ್ತಿದ್ದವು. ಹಾದಿಯು ಅಲ್ಲಲ್ಲಿಗೆ ಕೆಸರು ಆಗಿತ್ತು. ಅದರೊಳಗಿಂದ ಮಾರ್ಗಕ್ರಮಣಮಾಡುವದು ಬಲು ಬಿಗಿಯು. ಕುದುರೆಗಳು, ಬಹಳ ದಣಕೊಂಡವು. ಕಾಲ್ಬಲದ ಜನರು ಬಹು ಶ್ರಮಗೊಂಡು ನಡೆಯುವರು. ಹೀಗೆ ಪ್ರಯಾಸದಿಂದ ಪ್ರವಾಸ ಮಾಡುತ್ತ ಆ ಸೈನ್ಯವು ಕುಡಚಿಯ ಬಳಿಗೆ ಬಂದು ತಲ್ಪಿತು. ಅಲ್ಲಿ ನಾವಿನೊಳಗಿಂದ ಆ ದಂಡು ತಾ. ೧೧-೮-೧೭೯೧ ಇಸ್ವಿ ದಿವಸ ಕೃಷ್ಣಾನದಿಯನ್ನು ದಾಟಿತು. ಅಷ್ಟರಲ್ಲಿ ಕರಾಡಕರ ಪಂತಪ್ರತಿನಿಧಿಯೂ, ವಿಜಯದುರ್ಗದ ಸುಭೇದಾರ ಗೋಖಲೆ ಧೊಂಡೊಪಂತನೂ, ತಮ್ಮ ತಮ್ಮ ದಳದೊಂದಿಗೆ ಬಂದು ಕೂಡಿದರು. ಚಿಕ್ಕ ಚಿಕ್ಕ ಸರದಾರರು ದರಮಜಲಿಗೆ ಬಂದು ಕೂಡತೊಡಗಿದರು. ಮುಂದೆ ಒಂದೆರಡು ಮಜಲು ಮಾಡಿಕೊಂಡು ಭಾವು ದಂಡುಸಹಿತ ಗೋಕಾಕದ ಸಮೀಪಕ್ಕೆ ಬಂದು ತಳವೂರಿದನು. ಅಲ್ಲಿ ತೋಫಖಾನೆ ಮಂತಾದ ಭಾರದ ಸಾಮಾನಗಳನ್ನು ಘಟಪ್ರಭೆಯನ್ನು ದಾಟಿಸಬೇಕೆಂದು ಮುಂದೆ ಕಳುಹಿಸಿ, ಭಾವು ಮುಖ್ಯ ಸರದಾರರೊಡಗೊಂಡು ಘಟಪ್ರಭೆಯ ಮನೋಹರವಾದ ತಡಸಲವನ್ನು ನೋಡುವದಕ್ಕೆ ಹೊರಟನು. ಗೋಕಾಕದ ಧಬೆಧಬೆಯು ಸೃಷ್ಟಿಯ ಅದ್ಭುತಚಮತ್ಕಾರಗಳಲ್ಲಿ ಒಂದಾಗಿರುವದು. ಅಲ್ಲಿ ನದಿಯ ನೀರಿನ ಪ್ರವಾಹವು ಬಹಳ ವೇಗದಿಂದ ಹರಿದುಬಂದು, ಸುಮಾರು ೨೦೦ ಫೂಟು ಎತ್ತರವಿರುವ ಗುಡ್ಡದ ಮೇಲಿಂದ ಕೆಳಗೆ ಬೀಳುವದು; ಆ ನೀರು ಕೆಳಗೆ ಛಿನ್ನವಿಚ್ಛಿನ್ನವಾಗಿ ಬೀಳುತ್ತಿರುವದರಿಂದ ಅದು ಅರಳಿಯ ಚೂರು ವಾಯುವೇಗದಿಂದ ಹಾರುತ್ತಿರುವಂತೆ ತೋರುವದು. ಅಲ್ಲಿ ಮೇಘಗರ್ಜನೆಗಿಂತ ಹೆಚ್ಚು ಭಯಂಕರವಾದ ಶಬ್ದಘೋಷವು ಸದಾ ನಡೆದಿರುವದು. ಆ ಭಯಪ್ರದವಾದ ಸಪ್ಪಳಕ್ಕೆ ಹೆದರಿಕೊಂಡು ಅಲ್ಲಿ ಪಶುಪಕ್ಷಿಗಳು ಹೋಗುವದಿಲ್ಲ. ಅದರಿಂದ ಆ ಪ್ರದೇಶವು ಸಕಲಪ್ರಾಣಿಗಳು ಬಿಟ್ಟುಕೊಟ್ಟ ಕಾಲನ ವಸತಿಸ್ಥಾನವೋ ಏನೋ ಎಂಬಂತೆ ಭಾಸವಾಗುವದು. ಆ ಭಯಂಕರ ಸೃಷ್ಟಿಚಮತ್ಕಾರವನ್ನು ಅವಲೋಕಿಸುವದರಿಂದ ಚಿತ್ತವು ಆಶ್ಚರ್ಯಗೊಳ್ಳುವದು. ನಮ್ಮ ಚರಿತ್ರನಾಯಕನು ಅಲ್ಲಿಗೆ ಹೋದಾಗ್ಗೆ ಶ್ರಾವಣಮಾಸವಿತ್ತು. ಮಳೆಯ ಸಂತೋದ್ಧಾರವು ನಡೆದಿತ್ತು. ನದಿಯು ತುಂಬಿ ಹರಿಯುತ್ತಿತ್ತು.

ಅದರಿಂದ ಆ ಧಬೆಧಬೆಯ ಶೋಭೆಯೂ, ಅದರ ಘೋರತರವಾದ ಶಬ್ದ
ಘೋಷವೂ ಅತ್ಯಂತ ಅವರ್ಣನೀಯವಾಗಿತ್ತು. ಸೃಷ್ಟಿಯ ಈ ಅಪೂರ್ವ
ಕೌತುಕವನ್ನು ನೋಡಿಕೊಂಡು, ಭಾವು ತನ್ನ ಪರಿವಾರಸಹಿತ ಬಿಡಾರಕ್ಕೆ
ಮರಳಿ ಬಂದನು.

ಮುಂದೆ ನಾಲ್ಕು ದಿವಸಗಳಾದ ಬಳಿಕ ಆ ದಂಡು ಮಲಪ್ರಭೆಯನ್ನು
ದಾಟಿ ದಕ್ಷಿಣಕ್ಕೆ ಸಾಗಿತು. ಅಲ್ಲಿಂದ ಟೀಪುಸುಲ್ತಾನನ ರಾಜ್ಯದ ಮೇರೆಯು
ಹತ್ತಿತು. ಕಾಳಗಪ್ರಸಂಗವು ಅಲ್ಪ ಸ್ವಲ್ಪ ಪ್ರಾರಂಭವಾಯಿತು. ಮಾರ್ಗ
ವು ಸರಿಯಾಗಿ ಇರುವದೋ ಇಲ್ಲವೋ ಎಂಬುವದನ್ನು ನೋಡುವದಕ್ಕೂ
ವೈರಿಯ ರಾಜ್ಯವ್ಯವಸ್ಥೆಯು ಯಾವ ಪ್ರಕಾರವಿರುವದೆಂಬುದನ್ನು ಪರೀಕ್ಷಿಸು
ವದಕ್ಕೂ ಭಾವೂಸಾಹೇಬನ ಹಿರಿಯಮಗನಾದ ರಾಮಚಂದ್ರರಾಯನು
ಸೈನ್ಯದ ಮುಂಭಾಗದಲ್ಲಿ ಮಾರ್ಗಕ್ರಮಣ ಮಾಡುತ್ತಿದ್ದನು ಆತನೊಡನೆ
೫-೬ ನೂರು ಕಲಿತನದ ಕಟ್ಟಾಳುಗಳು ಇರುತ್ತಿದ್ದರು. ಹೀಗೆ ಪಯಣಗ
ತಿಯಿಂದ ಆ ದಂಡು ನವಲಗುಂದಕ್ಕೆ ಬಂದು ಮಜಲುಮಾಡಿತು.
ಆಗ ಅಪ್ಪಾಸಾಹೇಬನು ನಿತ್ಯದಂತೆ ಮುಂದೆ ನಡೆದಿದ್ದನು. ಅಷ್ಟರಲ್ಲಿ ಹಗೆ
ಗಳ ಕಡೆಯ ೩೦೦ ಜನರು, ಕೆಲವು ಸ್ವಾರರು, ತೋಫು ಸಹಿತ ಬಂದು
ಬಳಿಯಲ್ಲಿರುವ ಕಿಲ್ಲೆಯ ಹತ್ತರ ಅಡ್ಡಗಟ್ಟಿದರು. ಕೂಡಲೆ ಎರಡೂ
ದಂಡಿನ ಜನರು ಕೈಗೆ ಕೈಹತ್ತಿ ಕಾದಿದರು. ಶತ್ರುಪಕ್ಷದ ಜನರು ಸೋತು
ಕಂಗೆಟ್ಟು ಹಿಂದಕ್ಕೆ ಓಡಿದರು. ಅದರಿಂದ ಆ ಕಿಲ್ಲೆಯು ಭಾವೂನ ವಶವಾ
ಯಿತು. ಹೀಗೆ ಎರಡು ಮೂರು ಸ್ಥಳಗಳಲ್ಲಿ ಕಾಳಗವೆಸಗಿ ಮರಾಠಾ ದಂಡಿ
ನವರೇ ಗೆದ್ದರು. ಅಕ್ಕಪಕ್ಕದ ಕಿಲ್ಲೆಗಳು ಅವರ ಕೈವಶವಾದವು. ಅವರ
ಪರಾಕ್ರಮವನ್ನು ಕೇಳಿ ಎಡಬಲದ ಪಾಳಯಗಾರರು ಬೆದರಿದರು. ಪೇಶವೆ
ಸರದಾರರಿಗೆ ಎದುರಾಗಿ ಹೋರಾಡುವ ಅವರ ಎದೆಯೊಡೆದು ನೀರಾಯಿತು.
ಹಸ್ತಗತವಾದ ಪ್ರದೇಶಗಳಲ್ಲಿ ಭಾವು ಶ್ರೀಮಂತ ಸರಕಾರದ ಅಮಲು
ಕೂಡ್ರಿಸುತ್ತ ನಡೆದನು. ಕರ್ನಾಟಕದ ಜನರು ಟೀಪುವಿನ ಹಾವಳಿಗೆ ಬೇ
ಸತ್ತು ಹೋಗಿದ್ದರು. ಅವರು ಪರಶುರಾಮಭಾವೂನ ಸೌಜನ್ಯ, ಪ್ರಜಾ-
ಪ್ರೇಮ, ಸಹನಶೀಲತೆಗಳನ್ನು ಕಂಡು ಹಿರಿಹಿರಿ ಹಿಗ್ಗಿದರು; ಇನ್ನು ನಮ್ಮ
ಕೋಟಲೆಯು ನೀಗಿತೆಂದು ಹರುಷಗೊಂಡರು. ಅವರು ಸುಲ್ತಾನನ ದಂಡಿಗೆ
ಅರಪಾಳ ಹಚ್ಚುವ ಉದ್ದೇಶದಿಂದ ತಾವಾಗಿಯೇ ಭಾವೂನ ಬಳಿಗೆ ಬಂದು

ಅವನಿಗೆ ನೆರವಾದರು. ಹೀಗೆ ಹೋದ ಹೋದಲ್ಲಿ ಜನಸಹಾಯವು ಸಿಗಹತ್ತಿತು. ಕಂದಾಯವು ಸುಸೂತ್ರ ವಸೂಲ ಬರತೊಡಗಿತು. ಹೋದ ಹೋದಲ್ಲಿ ಭಾವು ಆ ಆ ಗ್ರಾಮಗಳ ಶಿಲೇದಾರರನ್ನು ಇಲ್ಲವೆ ಪಾಟೀಲರನ್ನು ಕರೆಸಿಕೊಂಡು ಅವರನ್ನು ಸತ್ಕರಿಸುವನು. ಒಮ್ಮೊಮ್ಮೆ ಆವನು ಅವರೊಡನೆ ಕುದುರೆಗಳ ಏರಾಟದಲ್ಲಿಯೂ, ಭಾಲೆ ಬರ್ಚಿಗಳ ಉಪಯೋಗವನ್ನು ತಿಳಿಸಿಕೊಡುವದರಲ್ಲಿಯೂ ಹೊತ್ತುಗಳೆಯುವನು; ಇಲ್ಲವೆ ಒಮ್ಮೊಮ್ಮೆ ಅವರೊಡನೆ ಆ ಚತುರನು ಚದುರಂಗದ ಆಟವಾಡುವನು; ಅದರಲ್ಲಿ ಅರಸನು ಎಲ್ಲಿ ಇರಬೇಕು? ಮಂತ್ರಿಯು ಎಲ್ಲೆಲ್ಲಿ ಅಡ್ಡಾಡಬೇಕು? ಆನೆ ಕುದುರೆಗಳನ್ನು ಹ್ಯಾಗೆ ನಡಿಸಬೇಕು? ಇವೇ ಮೊದಲಾದ ಮರ್ಮಗಳನ್ನು ತಿಳಿಸಿ ಹೇಳಿ ಚದುರಂಗದಾಟವು ಯುದ್ಧರಂಗದ ಪ್ರತಿಬಿಂಬದ ಆಟವೆಂದು ತೋರಿಸಿಕೊಟ್ಟು, ಚದುರಂಗದಾಟದಲ್ಲಿ ಅಭ್ಯಾಸಮಾಡಿದ ಬುದ್ಧಿಬಲವು ಕೆಲವು ಮಟ್ಟಿಗೆ ಕಾಳಗಪ್ರಸಂಗದಲ್ಲಿ ಉಪಯೋಗಿಸುವದೆಂದು ಅವರಿಗೆ ಹೇಳಿಕೊಡುವನು. ಒಮ್ಮೊಮ್ಮೆ ಭಾವು ಆ ಜನರಿಗೆ ತಕ್ಕಂತೆ ಇನಾಮು ಕೊಟ್ಟು ಸಂತೋಷಪಡಿಸುವನು. ಇದರಂತೆ ಆತನ ನಿತ್ಯಕ್ರಮವು ನಡೆದಿತ್ತು. ಭಾವೂಸಾಹೇಬನ ಜನಮನವಶೀಕರಣ, ಸರ್ವಭೂತ ಸಹಾನುಭೂತಿ, ಪ್ರಜಾ-ಪ್ರೀತಿ ಮುಂತಾದವುಗಳ ಯೋಗದಿಂದ ಕರ್ನಾಟಕದ ಗ್ರಾಮಗಳ ಅಧಿಕಾರಸ್ಥರೂ, ಸಣ್ಣ ಪುಟ್ಟ ಕಿಲ್ಲೇದಾರರೂ ಪಾಳಯಗಾರರೂ ಆತನಿಗೆ ಅನುಕೂಲರಾದರು. ಆತನು ಕೊಡುವ ಉಚಿತಗಳ ಆಶೆಯಿಂದ ಸಾವಿರಾರು ಜನರು ಆತನ ದಂಡಿನಲ್ಲಿ ಚಾಕರಿಯನ್ನು ಹಿಡಿದರು. ಬರಬರುತ್ತ ಭಾವೂನ ದಂಡಿನಲ್ಲಿ ೧೦,೦೦೦ ಸ್ವಾರರೂ, ೩,೦೦೦ ಕಾಲಾಳುಗಳೂ ಕೂಡಿದರು.

ತರುವಾಯ ಮಜಲಿನಮೇಲೆ ಮಜಲು ಮಾಡುತ್ತ ಪರಶುರಾಮಭಾವು ಹುಬ್ಬಳ್ಳಿಯ ಮೇಲೆ ಹಾಯ್ದು ಉತ್ತರಕರ್ನಾಟಕದ ರಾಜಧಾನಿಯಾಗಿದ್ದ ಧಾರವಾಡಕ್ಕೆ ಬಂದನು. ಅಲ್ಲಿ ಬದರುಜ್‌ಝುಮಾನನೆಂಬ ಟೀಪುವಿನ ಸರದಾರನು ದೊಡ್ಡ ದಂಡಿನೊಡನೆ ಮರಾಠಾಸೈನ್ಯವನ್ನು ಎದುರಿಸುವ ಉದ್ದೇಶದಿಂದ ಕಾಳಗಕ್ಕೆ ಸಜ್ಜಾಗಿ ನಿಂತುಕೊಂಡಿದ್ದನು. ಭಾವು ಧಾರವಾಡದ ಕಿಲ್ಲೆಯನ್ನು ೧೮-೯-೧೭೯೧ ಇಸ್ವಿ ದಿವಸ ಮುತ್ತಿದನು. ಕೋಟೆಯು ಮಣ್ಣಿನದು. ಆದರೂ ಅದು ಬಹಳ ಬಲವಾದದ್ದು. ಅದರ ಗೋಡೆಗೆ ತೂತು ಬೀಳಿಸುವದು ಬಳ್ಳೇ ಶ್ರಮದ ಕೆಲಸವು. ಆ ಕಿಲ್ಲೆಯು ಬಂದು ಮೈದಾನದಲ್ಲಿ

ಇರುವದು. ಅದರ ಸುತ್ತುಮುತ್ತು ೨೫-೩೦ ಮೊಳ ಅಗಲವುಳ್ಳ ಮತ್ತು ಬಹಳ ಆಳವಾದ ಕಂದಕಗಳು ಇದ್ದದರಿಂದ, ಎತ್ತು-ಕುದುರೆಗಳೂ, ಮನುಷ್ಯರೂ ಒಳಗೆ ಹೋಗುವದು ದುರ್ಘಟವೆನಿಸುತ್ತಿತ್ತು. ಈ ಕಂದಕಗಳನ್ನು ದಾಟಿ, ಒಂದು ಬಲವಾದ ಗೋಡೆಯು ಇತ್ತು. ಅದರ ಹೊಂದಿಗೆ ಮತ್ತೊಂದು ಕಂದಕವಿತ್ತು. ಅದು ೨೦ ಮೊಳ ಅಗಲವಿದ್ದು ಅಷ್ಟೇ ಆಳವಿತ್ತು. ಅದರಾಚೆಗೆ ಪ್ರಾಕಾರದ ಭದ್ರವಾದ ಗೋಡೆಯು ಇತ್ತು. ಹೀಗೆ ಧಾರವಾಡದ ದುರ್ಗವು ಅಗ್ಗ ದುರ್ಗಮವೆನಿಸಿತ್ತು. ಹೈದರ-ಟೀಪುಸುಲ್ತಾನರ ಆಳಿಕೆಯಲ್ಲಿ ಇದಕ್ಕೆ ನಶೀರಾಬಾದಕಿಲ್ಲೆಯೆಂಬ ಹೆಸರು ಬಳಿಕೆಯಾಗಿತ್ತು. ಕೋಟೆಗೆ ಹತ್ತಿ ದಕ್ಷಿಣಕ್ಕೆ ಧಾರವಾಡದ ಪೂರ್ವಪಶ್ಚಿಮ ಪೇಟೆಯು ಇದ್ದು, ಅದರ ಸುತ್ತಲೂ ಒಂದು ಚಿಕ್ಕ ಗೋಡೆಯೂ, ಒಂದು ಕಂದಕವೂ ಇತ್ತು. ಈಗ ಇದೆಲ್ಲ ಹಾಳಾಗಿರುವದು. ಕಿಲ್ಲೆಯ ಕುರುಹು ಮಾತ್ರ ಉಳದಿರುವದು. ಕಿಲ್ಲೆಯ ಸುತ್ತಲಿದ್ದ ಕಂದಕಗಳನ್ನು ಮುಚ್ಚಿ ಅಲ್ಲಿ ಕೆಲವು ಇಮಾರತುಗಳನ್ನು ಕಟ್ಟಿಸಿರುವರು. ಕಿಲ್ಲೆಯ ಒಳಗೆ ಕೆಲವು ಖಾಸಗಿಜನರ ಬಂಗಲೆಗಳು ಇರುವವು; ಸರಕಾರಿ ಆಸ್ಪತ್ರೆಯೂ ಅಲ್ಲಿಯೇ ಇರುವದು.

ಮೇಲೆ ಹೇಳಿದಂತೆ ಭಾವು ಧಾರವಾಡಕ್ಕೆ ಮುತ್ತಿಗೆಯನ್ನು ಹಾಕಿದಂದಿನಿಂದ ಸುಮಾರು ಒಂದುವರೆ ತಿಂಗಳವರೆಗೆ ಆ ಮುತ್ತಿಗೆಯು ಯಥಾಪ್ರಕಾರ ನಡೆದಿತ್ತು; ಆತನ ಸೈನಿಕರು ಕಿಲ್ಲೆಯ ಮೇಲೆ ತೋಫುಗುಂಡುಗಳ ಮಳೆಗರೆದರು. ಆಗ ಯುದ್ಧವು ಅಲ್ಪ ಸ್ವಲ್ಪ ಪ್ರಾರಂಭವಾಯಿತು. ಹಗೆಗಳ ಕಡೆಯ ಕೆಲವು ಜನರು ಪೇಟೆಯೊಳಗಿಂದ ಹೊರಬಿದ್ದು ಯುದ್ಧ ಮಾಡುವ ವಿಚಾರದಲ್ಲಿದ್ದರು. ಅವರ ಮೇಲೆ ಭಾವು ಸಾಗಿಹೋಗಿ ಅವರನ್ನು ಹಿಂದಕ್ಕೆ ಓಡಿಸಿದನು. ಶತ್ರುಗಳ ಮೂರು ತೋಫುಗಳು ಭಾವೂನ ಕೈವಶವಾದವು. ಮುಂದೆ ಅಕ್ಟೋಬರ ತಿಂಗಳ ೩ನೇ ತಾರೀಖಿನ ದಿವಸ ಭಾವೂನ ಸೈನಿಕರು ಪೇಟೆಗೆ ಲಗ್ಗ ಹತ್ತಿ ನಿಕರದಿಂದ ಕಾದಿದರು. ಪೇಟೆಯು ವಶವಾಯಿತು. ಈ ಯುದ್ಧದಲ್ಲಿ ಇಂಗ್ಲೀಷರು ಬಹಳ ಸಾಹಸಮಾಡಿದರು. ಅವರ ತ್ರಿಕರ್ಣಪೂರ್ವಕವಾದ ಸಹಾಯವು ಇದ್ದುದರಿಂದಲೇ ಭಾವು ಆ ಕಾಳಗದಲ್ಲಿ ಯಶಸ್ವಿಯಾದನು. 'ಆಡಿದಂತೆ ಮಾಡು' ಎಂಬ ಕೀರ್ತಿಯನ್ನು ಇಂಗ್ಲೀಷ ಜನರು ಚೆನ್ನಾಗಿ ತೀಡಿರುವರು. ಅವರು ಕೊಟ್ಟ ವಚನಕ್ಕೆ ಎಂದೂ ವಿಮುಖರಾಗರು. ಅವರಲ್ಲಿರುವ ಈ ಸದ್ಗುಣವೇ ಅವರ ಅಚಲ

ವಾದ ಸಾಮ್ರಾಜ್ಯದ ಆಧಾರಸ್ತಂಭವಾಗಿರುವದು. ಅವರು ಟೀಪುವಿನಂತೆ ಮಾತುಕೊಟ್ಟು ತಿರುಗಿ ಬೀಳತಕ್ಕವರಲ್ಲ. ಇರಲಿ.

ಧಾರವಾಡದ ಮುತ್ತಿಗೆಯಲ್ಲಿ ಇಂಗ್ಲೀಸರ ಇಬ್ಬರು ಮುಖಂಡರು ಗಾಯಗೊಂಡರು. ಕೆಲವರು ಮರಣಹೊಂದಿದರು. ಭಾವೂಸಾಹೇಬನ ೫೦೦ ಜನರು ಮೃತರಾದರು; ಅಸಂಖ್ಯ ಜನರು ಘಾಸಿಯಾದರು. ಜನಾರ್ಧನ ಮೋಘಶ್ಯಾಮನೆಂಬುವ ಪಟವರ್ಧನಸರದಾರನು ವೈರಿಗಳ ಮೇಲೆ ಈರ್ಷೆ ಯಿಂದ ಸಾಗಿಹೋಗುವಾಗ್ಗೆ ಗುಂಡುಬಡಿದು ಮಡಿದನು. ಶತ್ರುಪಕ್ಷದ ಹಾನಿಯು ಇದಕ್ಕೂ ಅಧಿಕವಾಯಿತು.

ಪೇಟೆಯು ವಶವಾದಬಳಿಕ ಕೋಟೆಯನ್ನು ತಕ್ಕೊಳ್ಳುವದು ಉಳಿ ಯಿತು. ಕಿಲ್ಲೆಯಮೇಲೆ ತೋಫುಗುಂಡುಗಳನ್ನು ಎಡೆಬಿಡದೆ ಹಾರಿಸುವ ಕ್ರಮವು ಬಹಳ ದಿನಗಳಿಂದ ನಡದೇ ಇತ್ತು. ಅದರೂ ಪ್ರತಿಪಕ್ಷದ ಜನರು ಬೆದರಲಿಲ್ಲ. ಅವರು ಇಂಗ್ಲೀಷ ಪೇಶ್ವೇರ ಸರಕುಕಟ್ಟಿ ಅವರ ಎಲ್ಲ ಪ್ರಯ ತ್ನಗಳನನ್ನು ನಿಷ್ಫಲವಾಗಿ ಮಾಡಿಬಿಟ್ಟರು. ಮರಾಠಾದಂಡಿನಲ್ಲಿ ಮದ್ದು- ಗುಂಡು ಇತ್ಯಾದಿ ಸಾಮಾನಗಳು ದಿನದಿನಕ್ಕೆ ಕಡಿಮೆಯಾಗತೊಡಗಿದವು. ಗೋಡೆಗೆ ತೂತುಕೆಡವಿ ಒಳನುಗ್ಗಬೇಕೆಂದು ಕೆಲವರು ಆಗ್ರಹತೊಟ್ಟದ್ದ ರಿಂದ ಭಾವು ಅದಕ್ಕೆ ಸಮ್ಮತಿಸಿದನು. ಆದರೆ ಆ ಉಪಾಯದಿಂದ ಏನೂ ಉಪಯೋಗವಾಗಲಿಲ್ಲ. ದಂಡಿನ ಜನರು ಮಾತ್ರ ವ್ಯರ್ಥ ದಣಿಕೊಂಡರು. ಆದರೂ ಪರಶುರಾಮಭಾವು ಧೈರ್ಯಬಿಡಲಿಲ್ಲ. ಅವನು ಸೈನ್ಯದ ಜನರಿಗೆ ಧೈರ್ಯ ಹೇಳುತ್ತ ಅವರನ್ನು ಹುರುಪುಗೊಳಿಸಿದನು. ಆತನು ಮುತ್ತಿಗೆ ಯನ್ನು ಬಲವತ್ತರವಾಗಿ ನಡೆಸಿದರೆ, ಒಳಗಿನ ಜನರಿಗೆ ಅನ್ನ-ನೀರಿನ ಕೊರ ತೆಯಾಗಿ ಬಲಗುಂದುವರೆಂತಲೂ, ಆ ಮೇಲೆ ಕಿಲ್ಲೆಯು ಸುಲಭವಾಗಿ ಕೈಸೇರುವದೆಂತಲೂ ಯೋಚಿಸಿ, ತೋಫುಗುಂಡುಗಳನ್ನು ತಕ್ಕ ಸ್ಥಳಗ ಳಲ್ಲಿ ನಿಲ್ಲಿಸಿ, ಅವುಗಳ ಹೊಡತವನ್ನು ಬಹು ಹಂಚಿಕೆಯಿಂದ ನಡೆಸಿ, ಕಿಲ್ಲೆಯನ್ನು ಬಲವಾಗಿ ಮುತ್ತಿದನು. ಕೋಟೆಯ ಒಳಗೆ ಹೋಗುವ ಅನ್ನ- ನೀರಿನ ಪುರವಠೆಯನ್ನು ಕಟ್ಟುಮಾಡಿದನು. ಅದರಿಂದ ಒಳಗಿನ ಜನರಿಗೆ ಅನ್ನ-ನೀರಿನ ಕೊರತೆಯಾಗಿ ಹೊರಗೆ ಸಜ್ಜಾಗಿನಿಂತ ಹಗೆಗಳೊಡನೆ ಯುದ್ಧ ಮಾಡುವ ಸಾಮರ್ಥ್ಯವೂ, ಧೈರ್ಯವೂ, ಅವರಲ್ಲಿ ಉಳಿಯಲಿಲ್ಲ. ಅವರು

ತೀರ ಹಣ್ಣಿಗೆ ಬಂದು ಕೈಕಾಲುಬಿಟ್ಟರು. ಈ ಮೇರೆಗೆ ಬದ್ರಿಜಮಾನಖಾನನು ಆ ಕಿಲ್ಲೆಯನ್ನು ಆರುವರೆ ತಿಂಗಳತನಕ ಸಂರಕ್ಷಿಸಿಕೊಂಡನು. ಕಟ್ಟಕಡೆಗೆ ಆ ಸರದಾರನು ಬಹಳ ನಿರ್ವಿಣ್ಣನಾಗಿ ಹೈರವಾಡಕರ ತ್ರ್ಯಂಬಕರಾಯನ ಮುಖಾಂತರ ಭಾವುಸಾಹೇಬನಿಗೆ "ನನಗೆ ಜೀವದಾನ ಕೊಟ್ಟರೆ, ಕೋಟೆಯನ್ನು ಒಪ್ಪಿಸುವೆನೆ"ಂದು ಹೇಳಿಕಳುಹಿ ಶರಣುಬಂದನು. ಪರಶುರಾಮಭಾವು ಅದಕ್ಕೆ ಒಪ್ಪಿಕೊಂಡನು. ಕೂಡಲೇ ಪೇಶವೆಯರ ವಿಜಯಧ್ವಜವು ಕಿಲ್ಲೆಯ ಮೇಲೆ ನಿಲ್ಲಿಸಲ್ಪಟ್ಟಿತು.

ಭಾವು ಮತ್ತು ಬದ್ರಿಜಮಾನಖಾನ ಇವರಿಬ್ಬರ ನಡುವೆ "ಬದ್ರಿಜಮಾನಖಾನನು ಕಿಲ್ಲೆಯಲ್ಲಿರುವ ಯಾವತ್ತು ಸಾಮಾನಗಳೊಂದಿಗೆ ಕಿಲ್ಲೆಯನ್ನು ಒಪ್ಪಿಸಬೇಕು" ಎಂದು ಗೊತ್ತಾಗಿತ್ತು. ಅದರಂತೆ ಆ ಸರದಾರನು ನಡೆಯದೆ ವಚನಭ್ರಷ್ಟನಾದನು. ಆದ್ದರಿಂದ ಭಾವು ಸಿಟ್ಟಿಗೆದ್ದು, ಅವನನ್ನು ಹೀಯಾಳಿಸಿ "ಮುಸಲ್ಮಾನರಾದ ನಿಮ್ಮಲ್ಲಿ ನಂಬಿಗೆಯನ್ನು ಇಡುವದೇ ಕಷ್ಟ. ಹೈದರನ ಕಪಟತನದ ಕಿತ್ತೆಯನ್ನು ಟೀಪೂ ಮತ್ತು ಆತನ ಸರದಾರರಾದ ನೀವೆಲ್ಲರೂ ಚನ್ನಾಗಿ ತೀಡಿ 'ಗುರುವಿನಂತೆ ಶಿಷ್ಯ' ಎಂಬ ನಾಣ್ಣುಡಿಯನ್ನು ಸಾರ್ಥಕಗೊಳಿಸಿರುವಿರಿ. ನರಗುಂದದ ಪ್ರಕರ್ಣದಲ್ಲಿ ನೀವು ತೋರಿಸಿದ ವಿಶ್ವಾಸಘಾತಕದ ದೃಷ್ಟಾಂತವನ್ನು ಇನ್ನೂ ನಾವು ಮರೆತಿಲ್ಲ. ನಿಮ್ಮ ಮೋಸಕೃತ್ಯಗಳಿಂದ ನಿಮ್ಮ ಶೂರತ್ವ-ರಾಜ್ಯಕುಶಲತೆಗಳಿಗೆ ಚಿರಕಾಲ ಕಲಂಕವನ್ನು ಮಾತ್ರ ಹಚ್ಚಿಕೊಂಡಿರಲ್ಲದೆ, ಅದರಿಂದ ಯಾವ ಪುರುಷಾರ್ಥವೂ ಸಾಧಿಸಲಿಲ್ಲ." ಎಂದು ನುಡಿದನು. ಕೂಡಲೆ ಖಾನನು ಕ್ರುದ್ಧನಾಗಿ, ಭಾವೂನ ಮೇಲೆ ತ್ವೇಷದಿಂದ ಕತ್ತಿಯನ್ನು ಎತ್ತಿದನು. ಆದದರಿಂದ ಕಲಿಗಳಾದ ಅವರಿಬ್ಬರ ನಡುವೆ ಅಲ್ಲಿಂದಲ್ಲೆ ಯುದ್ಧವು ಆರಂಭವಾಯಿತು. ಖಾನನ ಕಡೆಯ ೫೦೦ ಜನರು ಭಾವೂನ ಕತ್ತಿಯ ಪೆಟ್ಟಿಗೆ ತುತ್ತಾಗಿ ಪ್ರಾಣದೊರೆದರು. ಖಾನನು ಗಾಯಹೊಂದಿ ಕಾಲಿಗೆ ಬುದ್ಧೀ ಹೇಳಿದನು. ಅವನು ಓಡಿಹೋಗುತ್ತಿರುವಷ್ಟರಲ್ಲಿ ಭಾವೂನ ಜನರು ಅವನನ್ನು ಹಿಡಿದು ಹೆಡಮುರಿಗೆ ಕಟ್ಟಿದರು. ಆತನ ಎಲ್ಲ ಆಸ್ತಿಯು ಪರಶುರಾಮಭಾವೂನ ಹಸ್ತಗತವಾಯಿತು; ಖಾನನನ್ನು ಸೆರೆಹಿಡಿದು ನರಗುಂದದ ಕಿಲ್ಲೆಯಲ್ಲಿ ಇಡಿಸಿದನು. ಬದ್ರಿಜಮಾನಖಾನನು ವಿಶ್ವಾಸಘಾತಕಮಾಡಿ ಅವಿಚಾರದಿಂದ ನಡೆದುದರಿಂದ ಅವನಿಗೆ ತಕ್ಕ ಶಾಸನವಾಯಿತು.

ಧಾರವಾಡದ ಮುತ್ತಿಗೆಯಲ್ಲಿಯೂ, ಟೀಪುವಿನ ಸರದಾರನೊಡನೆ ನಡೆದ ಕಾಳಗದಲ್ಲಿಯೂ ಭಾವೂನ ಚಿರಂಜೀವನಾದ ಅಪ್ಪಾಸಾಹೇಬನು ಬಹಳೇ ಶೌರ್ಯದಿಂದ ಹೋರಾಡಿದನು. ಕುರುಕ್ಷೇತ್ರದಲ್ಲಿ ಅಂಗರಾಜನ ಮಗನಾದ ಕುಮಾರ ವೃಷಸೇನನು ಸ್ವತಂತ್ರ ಯುದ್ಧ ಮಾಡಿದಂತೆ, ಅಪ್ಪಾಸಾಹೇಬನು ಅಂದಿನ ಕಾಳಗದಲ್ಲಿ ಯುದ್ಧ ಮಾಡಿ ತಂದೆಗೆ ನೆರವಾದನು.

ಶ್ರೀರಂಗಪಟ್ಟಣದ ಕಡೆಗೆ ಬೇಗ ಹೋಗಬೇಕೆಂದು ನಾನಾಫಡಣವೀಸನ ಆಜ್ಞಾಪತ್ರಗಳು ಭಾವೂಗೆ ಮೇಲಿಂದ ಮೇಲೆ ಬರುತ್ತಿದ್ದವು. ಆದರೂ ಧಾರವಾಡದ ಕಿಲ್ಲೆಯನ್ನು ಹಿಡಕೊಳ್ಳದಿದ್ದರೆ, ಅಲ್ಲಿಯವರೆಗೆ ಜನರ ಮೇಲೆ ಕೂಡ್ರಿಸಿದ ದರ್ಪ ಶಿಥಿಲವಾಗುತ್ತಿತ್ತು; ಸುಲ್ತಾನನ ಸರದಾರರು ಬಂಡಾಯ ಹೂಡುತ್ತಿದ್ದರು. ಅವರು ಹಿಂದಿನಿಂದ ಬಂದು ಆ ದಂಡಿನ ಜನರನ್ನು ಕಾಡಲಿಕ್ಕೆ ಆಸ್ಪದವಾಗುತ್ತಿತ್ತು; ಇದಲ್ಲದೆ ಮದ್ದು ಗುಂಡುಗಳ ಪುರವಠೆಯು ಹಿಂದಿನಿಂದ ಸಾಕಷ್ಟು ಆಗುವಂತಿದ್ದಿಲ್ಲ. ದೊಡ್ಡ ದಂಡಿನೊಡನೆ ಸಜ್ಜಾಗಿನಿಂತ ಬದ್ರಿಜಮಾನಖಾನನಿಗೆ ಧೈರ್ಯಹುಟ್ಟಿ, ಅವನು ಮರಾಠಾ ದಂಡನ್ನು ಮುತ್ತಿಬಿಡುವ ಸಂಭವವಿತ್ತು. ಇವೇ ಮೊದಲಾದ ಸಬಲಕಾರಣಗಳ ಮೇಲೆ ದೃಷ್ಟಿಯನ್ನಿಟ್ಟು ಪರಶುರಾಮಭಾವು ಧಾರವಾಡವನ್ನು ತಕ್ಕೊಳ್ಳದೆ ಮುಂದೆ ಹೆಜ್ಜೆಯನ್ನಿಡುವಂತಿದ್ದಿಲ್ಲ. ಉತ್ತರಕರ್ನಾಟಕದ ರಾಜಧಾನಿಯೆನಿಸಿದ ಧಾರವಾಡವು ಭಾವೂನ ಕರಗತವಾಗುತ್ತಲೆ, ಕೃಷ್ಣಾ-ತುಂಗಾನದಿಗಳ ನಡುವಿನ ಪ್ರದೇಶಗಳಲ್ಲಿ ಪೇಶವಾಯಿಯ ಅಮಲು ಚನ್ನಾಗಿ ಕೂತು, ಅಲ್ಲಿಯ ಎಲ್ಲ ಸರದಾರರು, ಸಂಸ್ಥಾನಿಕರು ತಲೆಯೆತ್ತದಂತಾದರು. ಕುಸುಗಲ್ಲ ಮುಂತಾದ ಚಿಕ್ಕ ದೊಡ್ಡ ಕಿಲ್ಲೆಗಳು ಒಂದರ ಹಿಂದೊಂದು ಭಾವೂನ ಕೈವಶವಾದವು. ಗೆದ್ದ ಪ್ರಾಂತಗಳ ರೈತಜನರ ಕಡೆಯಿಂದ ಮಹಸೂಲು ಸುಲಭವಾಗಿ ಬರತೊಡಗಿತು.

ಇತ್ತ ಆಗ್ಗೆ ಇಂಗ್ಲೀಷರ ಸರ್ವಾಧಿಪತಿಯಾದ ಕಾರ್ನವಾಲೀಸಧೊರೆಯು ತಾನೇ ಸೈನ್ಯಾಧಿಪತ್ಯವನ್ನು ವಹಿಸಿ, ಮದ್ರಾಸದ ಕಡೆಯಿಂದ ಸಾಗಿ ಬಂದು, ಸುಲ್ತಾನನ ರಾಜ್ಯವನ್ನು ಹೊಕ್ಕು ಕೆಲವು ಪ್ರದೇಶಗಳನ್ನೂ, ಹಲವು ಕಿಲ್ಲೆಗಳನ್ನೂ ಹಿಡಕೊಂಡು ವಿಜಯೋತ್ಸಾಹದಿಂದ ಶ್ರೀರಂಗಪಟ್ಟಣದ ಹಾದೀಹಿಡಿದು ನಡೆದಿದ್ದನು. ಹಾದಿಯಲ್ಲಿ ಬಲಕಟ್ಟಾದ ಬೆಂಗಳೂರ ಕೋ

ಟೆಯು ಆತನ ವಶವಾಯಿತು. ಮುಂದೆ ಆ ಧೊರೆಯು ರಾಜಧಾನಿಯ ಮೇಲೆ ಸಾಗಿಹೋಗುವದಕ್ಕೆ ಪೇಶವೆ-ನಿಜಾಮರ ಸೇನಾ-ಸಹಾಯವು ಅವಶ್ಯವೆಂದು ತಿಳಿದು, ಅವು ಯಾವಾಗ ಬಂದು ಕೂಡುವವೆಂದು ಯೋಚಿಸಿದನು. ನಿಜಾಮನ ಕಡೆಯಿಂದ ಸ್ವಲ್ಪ ಸೈನ್ಯವು ಮಾತ್ರ ಇದಕ್ಕೂ ಮೊದಲೇ ಬಂದಿತ್ತು. ಆದರೆ ಪೇಶವೆಯರ ಸೇನಾಸಹಾಯದ ಸುದ್ದಿಯೇ ಇದ್ದಿಲ್ಲ. ಭಾವುಸಾಹೇಬನು ಧಾರವಾಡ ಕಿಲ್ಲೆಯನ್ನು ಹಿಡಕೊಂಡ ಸುದ್ದಿಯನ್ನು ಇದಕ್ಕೂ ಮುಂಚೆಯೇ ಕೇಳಿದ್ದನು; ಆದರೆ ಪರಶುರಾಮಭಾವು ಮುಂದೆ ಎತ್ತಹೋದನು; ಅವನ ದಂಡು ಎಲ್ಲಿ ಇರುವದು, ಇತ್ಯಾದಿ ಸಮಾಚಾರವೇ ಇದ್ದಿಲ್ಲ. ಸಹಾಯಕ ಸೇನೆಯನ್ನು ಬೇಗ ಕಳಿಸಿಕೊಡಬೇಕೆಂದು ಆ ಧೊರೆಯು ಪೇಶವೆ ಸರಕಾರದವರಿಗೆ ದುಂಬಾಲುಬಿದ್ದನು. ಆಗ ನಾನಾಫಡಣವೀಸನು ಮತ್ತೆ ೩೦೦೦ ಸೈನ್ಯವನ್ನು ಸಜ್ಜುಗೊಳಿಸಿ, ಅದನ್ನು ಫಡಕೆ ಹರಿಪಂತನ ಸ್ವಾಧೀನಕ್ಕೆ ಕೊಟ್ಟು, ಅವನನ್ನು ಲಾರ್ಡ ಕಾರ್ನವಾಲೀಸನ ಸಹಾಯಕ್ಕೆ ಅಟ್ಟಿಕೊಟ್ಟನು.

ಹರಿಪಂತನು ತನ್ನ ದಂಡಿನೊಡನೆ ಪ್ರವಾಸಮಾಡುತ್ತ ಭೀಮಾನದಿಯನ್ನು ದಾಟಿಬಂದು, ಅಲ್ಲಿ ಶ್ರೀರಂಗಪಟ್ಟಣದ ಕಡೆಗೆ ಹೋಗುತ್ತಿದ್ದ ನಿಜಾಮನ ಮುಖ್ಯ ದಂಡನ್ನು ಕೂಡಿಕೊಂಡನು. ಮುಂದೆ ಅವೆರಡು ದಂಡುಗಳು ಕೂಡಿ ಶ್ರೀರಂಗಪಟ್ಟಣದ ಹಾದಿಹಿಡಿದು ನಡೆದವು.

ಇತ್ತ ಪರಶುರಾಮಭಾವು ತನ್ನ ದಂಡಿನೊಡನೆ ಶ್ರೀರಂಗಪಟ್ಟಣದ ಹಾದಿಹಿಡಿದು ಪಯಣಮಾಡತೊಡಗಿದ್ದನು. ಪೇಶವೆಸರಕಾರದ ಹಲಕೆಲವು ಸೀಮೆಗಳನ್ನು ಟೀಪು ಆಕ್ರಮಿಸಿಕೊಂಡಿದ್ದನು. ಭಾವು ತನ್ನ ಪರಾಕ್ರಮದಿಂದ ಅವೆಲ್ಲವುಗಳನ್ನು ಮತ್ತೆ ಗೆದ್ದು ಪೇಶವಾಯಿಗೆ ಜೋಡಿಸಿಕೊಂಡನು. ಆತನು ಚಿತ್ರದುರ್ಗ, ಮಾಯಕೊಂಡ ಇತ್ಯಾದಿ ಭವ್ಯವಾದ ಸ್ಥಳಗಳನ್ನು ಹಿಡಕೊಂಡನು. ಮಾಯಾಸಮುದ್ರದಲ್ಲಿದ್ದಾಗ್ಗೆ “ಲಾರ್ಡ ಕಾರ್ನವಾಲೀಸ ಸಾಹೇಬನು ಶ್ರೀರಂಗಪಟ್ಟಣದಕಡೆಗೆ ಹೋಗಿರುವನು. ಅಲ್ಲಿ ಅನ್ನಸಾಮಗ್ರಿಯ ಕೊರತೆಯಾಗಿರುವದರಿಂದ ಆ ಧೊರೆಯು ಬಳ್ಳೇ ಪೇಚಿನಲ್ಲಿ ಸಿಕ್ಕಿರುವನು” ಎಂಬ ವರ್ತಮಾನವು ಭಾವೂಸಾಹೇಬನಿಗೆ ಹತ್ತಿತು. ಇದನ್ನು ಕೇಳಿದೊಡನೆ ಆತನು ತನ್ನ ಮಗನಾದ ಅಪ್ಪಾಸಾಹೇಬನಕೂಡ ೫|೬ ಸಾವಿರ ದಂಡುಕೊಟ್ಟು, ೫|೬ ಸಾವಿರ ಲಮಾಣಿಜನರ ಮೇಲೆ ಅನ್ನಸಾಮಗ್ರಿಗ

ಳನ್ನು ಹೊರಸಿ ಕಳುಹಿದನು. " ಲಾರ್ಡಸಾಹೇಬನು ಇದ್ದಲ್ಲಿಗೆ ಹೋಗಿ ಭೆಟ್ಟಿಯಾಗಬೇಕು; ಅಲ್ಲಿಗೆ ಹೋದ ಬಳಿಕ ಅವರು ಕುದುರೆಗಳಿಗೆ ದಾಣಿ, ಮೇವು, ಹುಲ್ಲು, ದಂಡಿನಜನರಿಗೆ ಅನ್ನ, ನೀರು ಮೊದಲಾದ ಸಾಮಾನುಗಳ ಅನುಕೂಲತೆಯನ್ನು ಮಾಡಿಕೊಡಬೇಕು; ನಾನು ಹಿಂದಿನಿಂದ ಬರುತ್ತಿರುವ ಸಂಗತಿಯನ್ನು ಆ ಧೊರೆಗೆ ತಿಳಿಸಬೇಕು " ಎಂದು ಮಗನಿಗೆ ಆಜ್ಞಾಪಿಸಿ ಪರಶುರಾಮಭಾವು ಆತನನ್ನು ಸಕಲ ಸಾಹಿತ್ಯದೊಂದಿಗೆ ಬೀಳ್ಕೊಟ್ಟನು; ಮತ್ತು ತಾನು ಹಿಂದಿನಿಂದ ದಂಡಿನೊಂದಿಗೆ ತ್ವರಿತಗತಿಯಿಂದ ಪ್ರವಾಸ ಮಾಡಹತ್ತಿದನು.

ಅತ್ತ ಇಂಗ್ಲೀಷರ ಸರ್ವಾಧಿಪತಿಯು ಪೇಶವೆಯರ ಸಹಾಯಕಸೈನ್ಯದ ಮಾರ್ಗನೋಡಿ ಬೇಸತ್ತನು; ಮಹಾರಾಷ್ಟ್ರರು ತನ್ನನ್ನು ಮೋಸಗೊಳಿಸಿದ ರೆಂದು ಶಂಕಿಸಿದನು. ಕಡೆಗೆ ಅವನು ನಿರಾಶಿತನಾಗಿ, ಇದು ಮೊದಲು ಬಂದ ನಿಜಾಮನ ಚಿಕ್ಕದಳದೊಂದಿಗೆ ಶ್ರೀರಂಗಪಟ್ಟಣದ ಹಾದೀ ಹಿಡಿದನು. ಸುಲ್ತಾನನು ಹಾದಿಯಲ್ಲಿ ಏನೂ ತೊಂದರೆ ಕೊಡಲಿಲ್ಲ. ಆದರೆ ಇಂಗ್ಲೀಷರನ್ನು ಪೇಚಿಗೆತರುವ ಉದ್ದೇಶದಿಂದ ಒಂದು ಚಮತ್ಕಾರಿಕ ಯುಕ್ತಿಯನ್ನು ಯೋಚಿಸಿ ಅದನ್ನು ಸಾಧಿಸಿದನು. ಅವನು ಲಾರ್ಡ ಸಾಹೇಬಗೆ ಹಾದಿಯಲ್ಲಿ ಹತ್ತುವ ಮತ್ತು ತನ್ನ ರಾಜಧಾನಿಯ ಸುತ್ತುಮುತ್ತು ಇರುವ ಯಾವತ್ತು ಹಳ್ಳಿಪಳ್ಳಿಗಳನ್ನು ಸುಡಿಸಿ ನೆಲಸಮ ಮಾಡಿಸಿ ಬಿಟ್ಟಿದ್ದನು. ಹಾದಿಯಲ್ಲಿ ಜನರ ದರ್ಶನವಿಲ್ಲ. ನೋಡಿದತ್ತೆಲ್ಲ ವಿಶಾಲವಾದ ಬಯಲಪ್ರದ ಪ್ರದೇಶವು ಕಾಣಿಸುತ್ತಿತ್ತು; ಅದು ನೋಡುವವರಿಗೆ ಸ್ಮಶಾನದಂತೆ ಭಾಸವಾಗಿ ಅಂಜಿಕೆಯನ್ನುಂಟು ಮಾಡುತ್ತಿತ್ತು. ಹೀಗಾದದರಿಂದ ಇಂಗ್ಲೀಷರ ದಂಡಿನವರಿಗೆ ಹಾದಿಯಲ್ಲಿ ಅನ್ನ ನೀರು ಹುಲ್ಲು ಮುಂತಾದ ಸಾಮಾನುಗಳು ಸಿಗದಂತಾದವು. ಶ್ರೀರಂಗಪಟ್ಟಣದ ಸಮೀಪಕ್ಕೆ ಹೋಗಿ ಕೋಟೆಯ ಸುತ್ತಲೂ ಮೋರ್ಚೆಗಳನ್ನು ಕಟ್ಟಿ, ಅದನ್ನು ಹಲ್ಲಾಮಾಡಿ ಸುಲ್ತಾನನನ್ನು ಜೇರಿಗೆ ತರಬೇಕೆಂದು ಲಾರ್ಡ ಕಾರ್ನವಾಲೀಸನು ಯೋಚಿಸಿದನು; ಅದರಂತೆ ಅವನು ಆ ಕಿಲ್ಲೆಯನ್ನು ಮುತ್ತುವ ಪ್ರಯತ್ನದಲ್ಲಿರಲು, ಸುಲ್ತಾನನು ತನ್ನ ದಂಡನ್ನು ಒಂದು ಭದ್ರವಾದ ಸ್ಥಳದಲ್ಲಿ ನಿಲ್ಲಿಸಿ ಕಾದಲಿಕ್ಕೆ ಅನುವಾದನು. ಅಲ್ಲಿ ಎರಡೂ ದಂಡುಗಳ ನಡುವೆ ಕಾಳಗವಾಗಲು, ಸುಲ್ತಾನನ ದಂಡಿನವರು ವ್ಯವಸ್ಥೆಯಿಂದ ಕೋಟೆಯನ್ನು ಸೇರಿಕೊಂಡರು. ಆದರೆ ಅಷ್ಟರಲ್ಲಿ

ಇಂಗ್ಲೀಷರ ದಂಡಿನಲ್ಲಿ ದುಷ್ಕಾಳವು ಬಿತ್ತು. † ಜನರಿಗೆ ಅನ್ನವಿಲ್ಲದಾಯಿತು; ಎತ್ತು ಕುದುರೆಗಳಿಗೆ ಹುಲ್ಲು, ಮೇವು ಇತ್ಯಾದಿ ಆಹಾರ-ಪದಾರ್ಥಗಳು ದೊರಕದಂತಾಗಿ ಅವು ಉಪವಾಸ ಬೀಳತೊಡಗಿದವು; ಇದಲ್ಲದೆ ಕೆಲವು ದನಕರಗಳು ಪಿಡಗಿನಿಂದ ದಿನಾಲು ಸಾಯಲಾರಂಭಿಸಿದವು. ಅದರಿಂದ ಕಾರ್ನವಾಲೀಸನು ತನ್ನ ಪಾಳಯವನ್ನೆತ್ತಿ, ಬೆಂಗಳೂರಿಗೆ ತಿರುಗಿದನು. ( ಮೇ ೨೬ ). ಶ್ರೀರಂಗಪಟ್ಟಣದ ಆಶೆಯನ್ನು ಬಿಟ್ಟು ಆತನು ಒಂದು ಮಜಲು ಅಂತರ ಮೇಲೆ ಹಿಂದಕ್ಕೆ ಬಂದಿದ್ದನು. ಅಲ್ಲಿ ಅವನು ನಾಲ್ಕೂ ಕಡೆಯಿಂದ ಕುದುರೆಯ ಸವಾರರು ಗುಂಪುಗುಂಪಾಗಿ ವೇಗದಿಂದ ಬರುತ್ತಿರುವದನ್ನು ಕಂಡನು. ಮೊದಲು ಆ ಧೊರೆಯು ಅವರು ಶತ್ರುಪಕ್ಷದವರೆಂದು ತಿಳಿದು ನೆರೆ ಚಿಂತಿಸಿದನು; ಅದರಿಂದ ಇಂಗ್ಲೀಷರು ಯುದ್ಧ-ಸಿದ್ಧತೆಯನ್ನು ಮಾಡಿಕೊಂಡು ಅವರನ್ನು ಎದುರಿಸಲು ಅಣಿಯಾದರು. ಮುಂದೆ ವಿಚಾರ ಮಾಡಿ ನೋಡಲು, ಪರಶುರಾಮಭಾವೂನ ಚಿರಂಜೀವನಾದ ಅಪ್ಪಾಸಾಹೇಬನು ತಂದೆಯ ಆಗಮನದ ಸುವಾರ್ತೆಯನ್ನು ತಿಳಿಸಲು ಬರುತ್ತಿರುವನೆಂದು ಗೊತ್ತಾಯಿತು. ಅಪ್ಪಾಸಾಹೇಬನು ತನ್ನ ಪರಿವಾರದವರೊಂದಿಗೆ ಬಂದು, ಸರ್ವಾಧಿಪತಿಯನ್ನು ಕಂಡುಕೊಂಡನು. ಆಗ ಕಾರ್ನವಾಲೀಸನು ಆತನನ್ನು ಚನ್ನಾಗಿ ಸತ್ಕರಿಸಿ “ ಸಂಗಡ ಅನ್ನಸಾಮುಗ್ರಿಯು ಎಷ್ಟು ಉಂಟು? ಭಾವೂಸಾಹೇಬರು ಎಲ್ಲಿ ಇರುವರು ” ಎಂದು ಕೇಳಿದನು. ಅದಕ್ಕೆ ಅಪ್ಪಾಸಾಹೇಬನು “ ನನ್ನ ಸಂಗಡ ೫ ಸಾವಿರ ಲಮಾಣಿಜನರು ಇರುವರು. ಅವರೊಡನೆ ಧಾನ್ಯಸಂಗ್ರಹವು ವಿಪುಲವಾಗಿರುವದು. ಹಿಂದಿನಿಂದ ೧೦ ಸಾವಿರ ಜನರು ಆಹಾರ-ಪದಾರ್ಥಗಳನ್ನು ತಕ್ಕೊಂಡು ಬರುತ್ತಿರುವರು. ಭಾವೂಸಾಹೇಬರ ಸ್ವಾರಿಯು ಒಂದೆರಡು ಮಜಲು ಹಿಂದೆ ಇರುವದು ” ಎಂದು ಹೇಳಿದನು. ಬೇಸಿಗೆಯ ಬಿಸಲಿನಲ್ಲಿ ಬಾಯಾರಿ ಬಳಲುವವರಿಗೆ ಜಲಾಶಯವು ಸಿಕ್ಕಂತೆ, ಆಗ ಇಂಗ್ಲೀಷರಿಗೆ ಅಪ್ಪಾಸಾಹೇಬನು ಅನ್ನನೀರಿನ ಪುರುವಠೆಯನ್ನು ಮಾಡಿಕೊಡಲು, ಆ ಧೊರೆಯು ಸಂತೋಷಭರಿತನಾದನು; ಪರಶುರಾಮಭಾವುವಿನ ಸಕಾಲ ಸಹಾಯವನ್ನೂ ಅಪ್ಪಾಸಾಹೇಬನ ಚಟುವಟಿಕೆಯನ್ನೂ ಕಂಡು ಆತನು ಹಿರಿಹಿರಿ ಹಿಗ್ಗಿ, ಅವರಿಬ್ಬರನ್ನು ಬಗೆಬಗೆ

† ಈ ಕಾಲಕ್ಕೆ ೧ ಶೇರು ಅಕ್ಕಿಗೆ ೮ ರೂಪಾಯಿ, ೧ ಶೇರು ರಾಗೀಹಿಟ್ಟಿಗೆ ೪ ರೂಪಾಯಿ ಈ ಪ್ರಕಾರ ಪದಾರ್ಥಗಳು ತುಟ್ಟಿಯಾಗಿದ್ದವು.

ಯಿಂದ ಹೊಗಳಿದನು. ಪೇಶವೆಸರದಾರರು ಮೋಸಗೊಳಿಸುವರೆಂಬ ಅವನ ನಿರಾಧಾರವಾದ ಅನುಮಾನವು ದೂರವಾಯಿತು. ಕೂಡಲೆ ಆನಂದಸೂಚಕ ತೋಫುಗಳು ಹಾರಿಸಲ್ಪಟ್ಟವು. ಅಪ್ಪಾಸಾಹೇಬನು ಇಂಗ್ಲೀಷಧೊರೆಯ ನಿರೋಪತಕ್ಕೊಂಡು ಮೇಲಕೋಟಕ್ಕೆಬಂದು ತಂದೆಯನ್ನು ಕೂಡಿಕೊಂಡನು.

ಕೂಳುನೀರಿಲ್ಲದೆ ಸಾಯುವ ಸಂಕಟಸಮಯದಲ್ಲಿ ಪರಶುರಾಮ ಭಾವು ವಿಪುಲವಾದ ಧಾನ್ಯಸಂಗ್ರಹವನ್ನು ಕಳಿಸಿಕೊಟ್ಟು, ಇಂಗ್ಲೀಷರಿಗೆ ನೆರವಾಗದಿದ್ದರೆ ಅವರ ದಂಡಿನ ಜನರು ಪಟಪಟನೆ ಸತ್ತುಹೋಗುತ್ತಿದ್ದರು. ಎತ್ತುಕುದುರೆಗಳು ಬಲಗುಂದುತ್ತ ಕಡೆಗೆ ಪ್ರಾಣದೊರೆಯುತ್ತಿದ್ದವು. ಹೀಗೆ ಕೆಲವು ದಿವಸಗಳು ಗತಿಸಿದ್ದರೆ ಅವರ ದಂಡಿನ ಜನಸಂಖ್ಯೆಯು ಕಡಿಮೆ ಯಾಗುತ್ತಿತ್ತಲ್ಲದೆ, ಜೀವಂತ ಇದ್ದವರಲ್ಲಿ ಸಹ ಹಗೆಗಳೊಡನೆ ಕಾದುವ ಸಾಮರ್ಥ್ಯವು ಉಳಿಯುತ್ತಿದ್ದಿಲ್ಲ. ಅಂದಮೇಲೆ ಅವರು ಟೀಪುವಿನನ್ನು ಸೋಲಿಸುವದೊತ್ತಟ್ಟಿಗಿರಲಿ; ಅವರೇ ದುರ್ದಶೆಯನ್ನು ಹೊಂದಿ ತಿರುಗಿ ಹೋಗಬೇಕಾಗುತ್ತಿತ್ತು. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ದಂಡಿನ ಜನರಿಗೆ ಸಾಕಷ್ಟು ಧಾನ್ಯವನ್ನು ಪೂರೈಸಿ ಕೊಟ್ಟು, ಅವರನ್ನು ಮೃತ್ಯು-ಮುಖದಿಂದ ಪಾರುಮಾಡಿದ ಸರ್ವಶ್ರೇಯವು ಭಾವು-ಅಪ್ಪಾಸಾಹೇಬರದೇ ಸೈ; ಹೀಗೆ ಅವರಿಬ್ಬರು ಆಗ ಇಂಗ್ಲೀಷರಿಗೆ ಪರ್ವತಪ್ರಾಯ ಉಪಕಾರವನ್ನು ಮಾಡಿ " ಆಪದ್ಬಾಂಧವರು " ಎಂಬ ಕೀರ್ತಿಯನ್ನು ಪಡೆದರು.

ಮೇಲಕೋಟದಿಂದ ಹೊರಟು ಭಾವು ತನ್ನ ದಂಡುಸಹಿತ ಮೋತೀ ತಲಾವದ ಬಳಿಗೆ ಬಂದನು. ಅಲ್ಲಿಂದ ಆತನು ತಾನು ಬಂದ ಸುದ್ದಿಯನ್ನು ಕಾರ್ನವಾಲೀಸಧೊರೆಗೆ ತಿಳಿಸುವದಕ್ಕೆ ತನ್ನ ಪದರಿನೊಳಗಿನ ಏಸಾಜಿ ರಘುನಾಥ ಘಾಟಕ ಎಂಬ ಸರದಾರನನ್ನು ಕಳಿಸಿಕೊಟ್ಟನು. ಆ ಉದಾರ ಹೃದಯನಾದ ಧೊರೆಯು ಭಾವುಸಾಹೇಬನ ಕಡೆಯಿಂದ ಬಂದ ಆ ಸರದಾ ರನನ್ನು ಚನ್ನಾಗಿ ಸನ್ಮಾನಿಸಿದನು. ಆಗ್ಗೆ ಕಾರ್ನವಾಲೀಸನು ರಾಮನಾಥ ವೆಂಬಲ್ಲಿದ್ದನು. ಅದು ಭಾವೂನ ಛಾವಣಿಯಿಂದ ಮೂರೇ ಹರದಾರಿ ದೂರ ವಿತ್ತು. ಅಷ್ಟರಲ್ಲಿ ಫಡಕೆ ಹರಿಪಂತನು ತೀರಾ ಸಮೀಪಕ್ಕೆ ಬಂದನು; ಆತ ನು ಪುಣೆಯಿಂದ ಹೊರಟ ವರ್ತಮಾನವು ಭಾವೂಗೆ ಇದಕ್ಕೂ ಮುಂಚೆ ತಿಳಿದಿತ್ತು; ಆದರೆ ತದನಂತರ ಅತ್ತಕಡೆಯ ಸಮಾಚಾರವು ಆತನಿಗೆ ಏನೂ

ಗೊತ್ತಾಗಿದ್ದಿಲ್ಲ. ಹೀಗೆ ಆ ತ್ರಿವರ್ಗ-ತುಂಗವಿಕ್ರಮರಾದ ಸರದಾರರು, ಒಬ್ಬರಿಗೊಬ್ಬರು ಸಮೀಪದಲ್ಲಿದ್ದರೂ, ಪರಸ್ಪರ ಸಮಾಚಾರವು ತಿಳಿಯದೆ ಇದ್ದದ್ದು ಕಡು ಸೋಜಿಗದ ಸಂಗತಿಯೇ ಸರಿ. ಹೀಗಾಗಲು ಒಂದು ಸಬಲ ವಾದ ಗೌಪ್ಯ ಕಾರಣವಿತ್ತು. ಅವರು ಕಳುಹಿಸಿಕೊಡುವ ಹೇರರನ್ನು ಸುಲ್ತಾನನ ಕಡೆಯ ಬೇಡಜಾತಿಯ ಜನರು ಹಾದಿಯಲ್ಲಿ ಹೊಡೆದು ಕೊಲ್ಲುತ್ತಿದ್ದರು; ಇಲ್ಲವೆ ಅವಗ ಹೆಡಕುಬಡೆದು ಅವರನ್ನು ಮುಂದೆ ಹೋಗಗೊಡುತ್ತಿದ್ದಿಲ್ಲ.

ಕಡೆಗೆ ಇಂಗ್ಲೀಷ-ಮರಾಠಾ-ನಿಜಾಮಸರಕಾರದ ಸರದಾರರು ಚಿನಕುರಳಿಯೆಂಬಲ್ಲಿ ಆನಂದದಿಂದ ಪರಸ್ಪರ ಭೆಟ್ಟಿಯಾದರು. ಪೇಶವೆ ಸೈನ್ಯದ ಸಾಮಾನುಗಳು ಹಿಂದಿನಿಂದ ಬರತಕ್ಕವಿದ್ದದರಿಂದ ಎಲ್ಲರೂ ಅಲ್ಲಿಯೇ ಹತ್ತು ದಿವಸಗಳವರೆಗೆ ನಿಂತುಕೊಂಡರು. ತರುವಾಯ ಆ ಅದ್ಭುತ ಸೇನಾಸಾಗರವು ನಾಗಮಂಗಲಕ್ಕೆ ಬಂತು; ಮುಂದೆ ಮಾರ್ಗದಲ್ಲಿ ಭೈರವದುರ್ಗ, ಉತ್ತರದುರ್ಗ ಕಿಲ್ಲೆಗಳು ಹತ್ತಿದವು; ಅವು ಅವರ ಹಸ್ತಗತವಾದವು. ನಾಲ್ಕೈದು ದಿನಗಳಲ್ಲಿ ಅವರು ಮಾಂಗಲ್ಯದುರ್ಗದ ಬಳಿಗೆ ಬಂದು ಬೀಡುಬಿಟ್ಟರು. ಅಲ್ಲಿ ಮುಂದಿನ ಆಹವ-ವ್ಯವಸ್ಥೆಯ ಬಗ್ಗೆ ಆ ತ್ರಿವರ್ಗ-ರಾಷ್ಟ್ರಗಳ ಸರದಾರರ ನಡುವೆ ಚರ್ಚೆ ನಡೆಯಿತು. ಶಿರೆಶಹರದ ಮೇಲೆ ಸಾಗಿಹೋಗಿ ಕೃಷ್ಣನಗರದವರೆಗೆ ಯಾವತ್ತು ಪ್ರಾಂತವನ್ನು ಗೆದೆಯಬೇಕೆಂದು ಪರಶುರಾಮಭಾವು-ಹರಿಪಂತ ಫಡಕೆ ಇವರಿಬ್ಬರು ಅಭಿಪ್ರಾಯಕೊಟ್ಟರು. ಕಾರ್ನವಾಲೀಸನು ಬಾರಾಮಹಾಲ-ಬೆಂಗಳೂರ ಪ್ರಾಂತಗಳನ್ನು ತಕ್ಕೊಳ್ಳಬೇಕೆಂದು ಸೂಚಿಸಿದನು. ಹೀಗೆ ಅವರವರಲ್ಲಿ ‘ ಭವತಿ ನ ಭವತಿ ’ಯಾಗಿ ಕಡೆಗೆ ಇಂಗ್ಲೀಷ ಸರ್ವಾಧಿಪತಿಯ ಅಭಿಪ್ರಾಯವೇ ಸರ್ವಮಾನ್ಯವಾಯಿತು.

ಇಷ್ಟು ದೊಡ್ಡ ದಂಡು ಒಂದೇ ಕಡೆಗೆ ಇದ್ದರೆ ಧಾನ್ಯ-ಹುಲ್ಲುಗಳ ಪುರುವಠೆಯಾಗುವದು ಕಠಿಣವಾಗುವದೆಂದು ಯೋಚಿಸಿ, ಸೈನ್ಯದಲ್ಲಿ ಪ್ರತ್ಯೇಕ ಪೃಥಕಗಳನ್ನು ಮಾಡಿ ಅವುಗಳನ್ನು ಆ ಆ ಸೇನಾಧಿಪತಿಗಳ ಕಡೆಗೆ ಒಪ್ಪಿಸಿಕೊಟ್ಟು, ಅವರಿಗೆ ಬೇರೆ ಬೇರೆ ಕಾರ್ಯಭಾಗವನ್ನು ವಹಿಸಿಕೊಡುವದು ವಿಹಿತವೆಂಬ ವಿಚಾರವು ಹೊರಟಿತು. ವಿಚಾರಾಂತ್ಯದಲ್ಲಿ “ ಉತ್ತರ ದಿಕ್ಕಿನಲ್ಲಿ ಜಾಗೃತೆಯನ್ನುಂಟುಮಾಡಿ, ಅಲ್ಲಿಯ ಟೀಪೂನ ಸರದಾರರನ್ನು ಗೆದ್ದು, ಗೆದ್ದ ಪ್ರಾಂತಗಳಲ್ಲಿ ಯೋಗ್ಯ ಅಮಲು ಕೂಡ್ರಿಸುವದಕ್ಕೆ ಪರಶುರಾ

ಮಭಾವು ಶಿರೆಶಹದ ಕಡೆಗೆ ಸಾಗಿಹೋಗಬೇಕು. ಫಡಕೆ ಹರಿಪಂತನು ಕಾರ್ನವಾಲೀಸ ಧೊರೆಯ ಸಂಗಡ ಇದ್ದು ಸಹಾಯಮಾಡಬೇಕು; ನಿಜಾಮನ ಸರದಾರರು ಗಂಜಿಕೋಟೆಯ ಕಡೆಗೆ ಹೋಗಬೇಕು." ಎಂದು ನಿರ್ಣಯವಾಯಿತು.

ಈ ಮೇರೆಗೆ ವ್ಯವಸ್ಥೆಯಾದ ಕೂಡಲೆ ಭಾವು ಅಲ್ಲಿಂದ ಹೊರಟನು. ಆತನು ಆಲಸ್ಯವನ್ನು ಎಂದೂ ಅರಿಯನು. ಸೋಮಾರಿತನದಿಂದ ಇಷ್ಟಕಾರ್ಯವು ಸಾಧಿಸದೆಂದು ಆತನು ಪೂರಾ ಬಲ್ಲನು. ಪಾಲುಮಾರಿಕೆಯಿಂದ ಮನುಷ್ಯನ ಮೇಲ್ಮೆಯಾಗದೆಂದು ತಿಳಿದು, ಆತನು ಯಾವಾಗಲೂ ಉದ್ಯೋಗದಲ್ಲಿ ತೊಡಗಿರುತ್ತಿದ್ದನು; ಅದರಿಂದ ಅವನು ದಂಡಿನೊಡನೆ ಹೊರಟು ಮುಂದಿನ ಉದ್ಯೋಗಕ್ಕೆ ಹತ್ತಿದನು. ಆತನು ಶಿವಗಂಗೆಯ ಮೇಲಿಂದ ನಿಜಗಡಕ್ಕೆ ಬಂದನು. ಅಲ್ಲಿಯ ಅಮಲದಾರನು ಭಾವೂನ ಅದ್ಭುತಸೈನ್ಯವನ್ನು ಕಂಡು ಅಂಜಿಕೊಂಡು, ಆ ದುರ್ಗವನ್ನು ಆತನ ಸ್ವಾಧೀನ ಮಾಡಿದನು. ಅಲ್ಲಿ ತಕ್ಕ ಅಮಲು ಕೂಡ್ರಿಸಿ ಆತನು ಶಿರೆಶಹರದ ಕಡೆಗೆ ಸಾಗಿದನು. ಅದೂ ಆ ನರವೀರನ ಕರಗತವಾಯಿತು. ಅದರಂತೆ, ಬಸ್ಮಂಗಿ, ದೇವರಾಯದುರ್ಗ, ಮಂದಗಿರಿ, ಚಂದ್ರರಾಯ ಇತ್ಯಾದಿ ಅಸಂಖ್ಯ ಭದ್ರವಾದ ಸ್ಥಳಗಳು ಒಂದರಹಿಂದೊಂದು ಆತನ ಹಸ್ತಗತವಾದವು. ಆ ಪ್ರದೇಶಗಳಲ್ಲಿ ಯಥಾಯೋಗ್ಯ ಅಮಲು ಕೂಡ್ರಿಸಿ ಭಾವು ಗುತ್ತಿಯ ಬಳಿಗೆ ಬಂದನು. ಅದೂ ಆತನ ಕೈಸೇರಿತು. ಸೂರ್ಯಪ್ರಕಾಶಕ್ಕೆ ಗೂಗೆಗಳ ಕಣ್ಣುಕುಕ್ಕಿ ಕತ್ತಲೆಗೊಡಿಸುವಂತೆ, ಪ್ರೌಢಪರಾಕ್ರಮಿಯಾದ ಪರಶುರಾಮಭಾವೂನ ಪ್ರತಾಪರವಿಯ ಪ್ರಕಾಶಕ್ಕೆ ಸುಲ್ತಾನನ ಸರದಾರರ ಕಣ್ಣು ಕುಕ್ಕಿದಂತಾಗಿ, ಅವನನ್ನು ಎದುರಿಸುವ ಎದೆಯಿಲ್ಲದೆ ತಾವಾಗಿಯೇ ತಾವಿರುವ ಕಿಲ್ಲೆಗಳನ್ನು ಅವನ ಸ್ವಾಧೀನ ಮಾಡತೊಡಗಿದರು. ಇನ್ನು ಯಾರಾದರೂ ಸಿಟ್ಟಿಗೆದ್ದು ಆತನೊಡನೆ ಕಾಳಗಕ್ಕೆ ನಿಂತರೆ ಅವರು 'ದೀಪಪತಂಗ' ನ್ಯಾಯದಂತೆ ನೆರೆಸೋತು ಅವನಿಗೆ ಶರಣು ಬರುವರು. ಹೀಗೆ ಹೋದಹೋದಲ್ಲಿ ಭಾವುವಿಗೆ ಗೆಲವು ದೊರೆಯಿತು; ಆ ರಣಧುರಂಧರನಿಗೆ ಸೋಲು ಎಲ್ಲಿಯೂ ಬರಲಿಲ್ಲ. ಮಿಕ್ಕ ಸರದಾರರು ಸ್ವೀಕೃತಕಾರ್ಯವನ್ನು ಇನ್ನು ಪ್ರಾರಂಭ ಸಹ ಮಾಡಿದ್ದಿಲ್ಲ. ಆದರೆ ಶೂರನೂ ಚತುರನೂ ಆದ ನಮ್ಮ ಚರಿತ್ರನಾಯಕನು ಅಷ್ಟರಲ್ಲಿ ತನ್ನ ಪಾಲಿನ ಕೆಲಸವನ್ನು ಮುಗಿಸಿ ಬಿಟ್ಟಿದ್ದನು. ಅವನ ಅದ್ವಿತೀಯ

ಪರಾಕ್ರಮವನ್ನು ಕಂಡು ಎಲ್ಲರೂ ತಲೆದೂಗಿದರು. ಶತ್ರುಗಳಂತೂ ನಾಚಿ ಹುಚ್ಚರಾಗುತ್ತಿದ್ದರು. ಎಲ್ಲರ ಬಾಯೆಯಲ್ಲಿ ಪರಶುರಾಮಭಾವೂನ ಪರಾಕ್ರಮ, ಆಹವ-ಚಾತುರ್ಯ, ಕಾರ್ಯದಕ್ಷತೆ, ದಯಾಶೀಲತೆ, ಸಕಾಲ-ಸಹಾಯ ಇತ್ಯಾದಿ ಗುಣಾನುವಾದವೇ ನಡೆದಿರುವದು. ಇಂಥ ಪರಮ ಪರಾಕ್ರಮಿಯೆನಿಸಿದ ಪರಶುರಾಮಭಾವೂನೇ ಧನ್ಯನು. ಧನ್ಯನು.

ಇಷ್ಟಾದ ಮೇಲೆ ಚಿತ್ರದುರ್ಗ ಪ್ರಾಂತದಲ್ಲಿ ಅಮಲು ಕೂಡ್ರಿಸುವದಕ್ಕಾಗಿ ಭಾವು, ಕುರಂದವಾಡಕರ ರಘುನಾಥರಾಯನನ್ನು ಕಳುಹಿದನು. ಆತನು ಚಿತ್ರದುರ್ಗವನ್ನು ಮುಟ್ಟುವಷ್ಟರಲ್ಲಿ, ಆ ಕಿಲ್ಲೆಯ ಹೊರಮುಗ್ಗಲು, ಹಗೆಗಳ ೩೦೦ ಜನರು ಅವನಿಗೆ ಗಂಟುಬಿದ್ದರು. ರಘುನಾಥರಾಯನು ಅವರ ಮೇಲೆ ಬಿದ್ದು ಅವರೆಲ್ಲರನ್ನು ಪೂರಾ ಪರಾಭವಗೊಳಿಸಿ ಕಿಲ್ಲೆಯನ್ನು ಮುತ್ತಿದನು. ಸ್ವಲ್ಪ ದಿವಸಗಳಲ್ಲಿ ಆ ಕೋಟೆಯು ಅವನ ವಶವಾಯಿತು. ಮುಂದೆ ರಘುನಾಥರಾಯನು ಅಂಡೂರ, ಬಾಣಾವರ, ಅಜಮಪೂರ ಇತ್ಯಾದಿ ಭದ್ರವಾದ ಸ್ಥಳಗಳನ್ನು ಹಿಡಕೊಂಡನು.

ಪರಮಪ್ರತಾಪಿಯೂ ಪಟವರ್ಧನ ಪ್ರಮುಖನೂ ಆದ ಪರಶುರಾಮಭಾವು ತನ್ನ ಭುಜಬಲಪರಾಕ್ರಮದಿಂದ ಉತ್ತರದಿಕ್ಕಿನ ಕಾರ್ಯಭಾಗವನ್ನು ಅಲ್ಪಾವಧಿಯಲ್ಲಿಯೇ ಕೊನೆಗಾಣಿಸಿ, ಯಶಸ್ವಿಯಾದನೆಂಬ ಸುವಾರ್ತೆಯು ಕಾರ್ನವಾಲೀಸಸಾಹೇಬನಿಗೆ ಹತ್ತಿತು. ಭಾವೂನ ಅದ್ಭುತಸಾಹಸ-ಪರಾಕ್ರಮ-ಸಮಾಚಾರವನ್ನು ಕೇಳಿ ಆ ಧೊರೆಯು ಆಶ್ಚರ್ಯಚಕಿತನಾಗಿ ಬೊಟ್ಟುಕಚ್ಚಿದನು. ಆಗ ಆತನು ಶ್ರೀರಂಗಪಟ್ಟಣವನ್ನು ಮುತ್ತಿದ್ದನು. ಅದ್ವಿತೀಯ ಸಂಗ್ರಾಮಧುರಂಧರನಾದ ಭಾವೂನ ಮತ್ತು ಆತನ ಶೂರಸರದಾರರ ಸಹಾಯವು ಸಿಕ್ಕರೆ ಟೀಪುವಿನ ರಾಜಧಾನಿಯು ಸುಲಭವಾಗಿ ಕೈವಶವಾಗುವದೆಂದೆಣಿಸಿ, ಕಾರ್ನವಾಲೀಸಸಾಹೇಬನು ಭಾವೂಸಾಹೇಬನಿಗೆ ಕಡುತವಕದಿಂದ ಹೊರಟು ಬರಬೇಕೆಂದು ಪತ್ರ ಬರೆದನು. ಆದರೆ ಸ್ವತಂತ್ರ್ಯಯಶವನ್ನು ಸಂಪಾದಿಸಲು ಅನಾಯಾಸವಾಗಿ ಅನುಕೂಲಿಸಿದ ಅಲಭ್ಯಪ್ರಸಂಗವನ್ನು ಕಳಕೊಳ್ಳುವದು ಭಾವೂನ ಮನಸ್ಸಿಗೆ ಬರಲಿಲ್ಲ. ಶ್ರೀರಂಗಪಟ್ಟಣದ ಕಡೆಗೆ ಹೋಗದಿರುವದಕ್ಕೆ ಆತನಿಗೆ ಇನ್ನೂ ಒಂದು ಅಂತಸ್ಥ ಕಾರಣವಿತ್ತು. ಶ್ರೀಮಂತ ಮಾಧವರಾಯನ ಕಾಲಕಿರ್ದಿಯಿಂದ ಟೀಪುವಿನ ಫಲದ್ರೂಪವಾದ ಬೇದನೂರ ಪ್ರಾಂತವನ್ನು ತಕ್ಕೊಳ್ಳುವದು

ಪೇಶವೆಯರ ಮನಸ್ಸಿನಲ್ಲಿ ಇದ್ದೇ ಇತ್ತು. ಭೀಮಬಲನಾದ ಭಾವು ಹೋದ ಹೋದಲ್ಲಿ ವಿಜಯಶಾಲಿಯಾಗುತ್ತ ನಡೆದ ವರ್ತಮಾನವು ಶ್ರೀಮಂತಸರಕಾರಕ್ಕೆ ತಿಳಿಯಲು, ನಾನಾಫಡಣವೀಸನು "ಮಹಾರಾಷ್ಟ್ರರ ಬಹುಕಾಲದ ಇಷ್ಟಕಾರ್ಯವು ಸಾಧ್ಯವಾಗಲು ಈ ಸಂಧಿಯು ಉತ್ತಮವಾಗಿರುವದು." ಎಂದು ಯೋಚಿಸಿ, ಆ ಕಾರ್ಯಸಾಧನಕ್ಕೆ ಅಗತ್ಯವಾದ ಉಪಾಯಗಳನ್ನು ಕೈಕೊಂಡು, ಕೃತಕಾರ್ಯನಾಗಬಹುದೆಂದು ಆತನು ಭಾವುವಿಗೆ ಅಂತರಂಗತಃ ಉತ್ತೇಜನವನ್ನು ಕೊಟ್ಟಿದ್ದನು. ಇತ್ತ ಕಾರ್ನವಾಲೀಸನ ಪತ್ರಗಳು ಎಡಬಿಡದೆ ಬರತೊಡಗಿದವು. ಬೇಟೆಗಾರನು ಕೈಯಲ್ಲಿ ಸಿಕ್ಕ ಚಿಗರೆಯನ್ನು ಬಿಟ್ಟುಕೊಟ್ಟು, ಓಡುವ ಚಿಗರೆಯನ್ನು ಹಿಡಿಯುವ ಬಯಲಾಶೆಯನ್ನು ಮಾಡುವನೆ? ಎಂದೂ ಮಾಡನು. ಅದರಂತೆ ಭಾವು ಕೈಯಲ್ಲಿ ಸಿಕ್ಕ ಪ್ರದೇಶಗಳನ್ನು ಗೆದೆಯುವದೇ ಉತ್ತಮವೆಂದು ಬಗೆದನು. ಆದರೆ ಆ ಆಂಗ್ಲಧೊರೆಯ ಗೌರವದ ಬರಹವನ್ನು ಅನಾದರಮಾಡುವದೂ ಆತನ ಪ್ರಾಣದ ಸುತ್ತ ಬಂತು; ಇತ್ತ ಅಂತಸ್ಥ ಉದ್ದೇಶವನ್ನು ಸಾಧಿಸಿಕೊಳ್ಳದೆ ಬಿಡುವದೂ ಆತನಿಗೆ ರುಚಿಸಲಿಲ್ಲ. ಹೀಗಾಗಿ ಅವನು ಏನು ಮಾಡಬೇಕೆಂಬ ಚಿಂತೆಗೊಳಗಾಗಿ ಬಗೆಬಗೆಯ ವಿಚಾರ-ತರಂಗಗಳಿಂದ ಅವನ ಹೃದಯವು ವ್ಯಾಕುಲಿತವಾಯಿತು. ಇಷ್ಟರಲ್ಲಿ ಕರ್ಮಧರ್ಮಸಂಯೋಗದಿಂದ ಅವನ ಪ್ರಕೃತಿಯ ಸ್ಥಿತಿಯು ಬದಲಾಯಿತು. ಆಗ ಆತನು ಜಡ್ಡಿನ ನಿಮಿತ್ಯದಿಂದ ಚಿತ್ರದುರ್ಗದ ಪ್ರಾಂತದಲ್ಲಿ ಕೆಲವು ದಿವಸ ನಿಂತುಕೊಂಡನು; ಅದರಂತೆ ಆತನು ಇಂಗ್ಲೀಷ ಸರ್ವಾಧಿಪತಿಗೆ ಬರೆದು ತಿಳಿಸಿದನು. ಬಳಿಕ ಇಷ್ಟಕಾರ್ಯವನ್ನು ಸಾಧಿಸುವ ಉದ್ದೇಶದಿಂದ ಭಾವು ಬೇದನೂರ ಹಾದೀಹಿಡಿದನು. ಹಾದಿಯಲ್ಲಿ ಹೊಳಿನೂರ ಕಿಲ್ಲೆಯು ಹತ್ತಿತು; ಅದನ್ನು ಹಿಡಕೊಂಡು ಆತನು ತುಂಗಾನದಿಯ ಉತ್ತರದಂಡೆಗುಂಟ ಸಾಗುತ್ತಿರಲು ದುರ್ಗಮವಾದ ಶಿವಮೊಗ್ಗೆಯ ಕಿಲ್ಲೆಯು ಹತ್ತಿತು. ಅದರ ಬಳಿಯಲ್ಲಿ ಟೀಪುವಿನ ಆಪ್ತನಾದ ರೇಜಖಾನನೆಂಬ ಶೂರಸರದಾರನು ೮೦೦ ಸ್ವಾರರು ೭೦೦೦ ಕಾಲಾಳು ಮತ್ತು ೧೦ ತೋಫುಗಳೊಂದಿಗೆ ಇಳಕೊಂಡಿದ್ದನು. ಮೊದಲು ಭಾವು ಆ ಕೋಟೆಯನ್ನು ತಕ್ಕೊಳ್ಳಬೇಕೆಂದು ಯೋಚಿಸಿದನು. ಆತನು ಕಿಲ್ಲೆಯ ಕಡೆಗೆ ಬರುತ್ತಿರುವ ವರ್ತಮಾನವು ಹತ್ತಿದರಿಂದ ರೇಜಖಾನನು ತನ್ನ ಛಾವಣಿಯನ್ನು ಕಿತ್ತಿಕೊಂಡು ಸಮೀಪದಲ್ಲಿದ್ದ ದಟ್ಟವಾದ ಅಡವಿಯನ್ನು

ಹೊಕ್ಕು ಅಡಗಿಕೊಂಡನು. ಹೀಗೆ ಮಾಡುವದರಲ್ಲಿ ಆ ಯವನ-ಸರದಾರನ ಉದ್ದೇಶವೇನಂದರೆ—" ಭಾವುನ ಜನರು ಕಿಲ್ಲೆಯನ್ನು ಮುತ್ತುವರು; ಬಳಿಕ ತಾನು ದಂಡಿನೊಡನೆ ಹೊರಗಿನಿಂದ ಬಂದು ಅವರನ್ನು ಸುತ್ತಿ ಸೋಲಿಸಬೇಕು. "

ಆ ಪ್ರದೇಶದ ಬಲಭಾಗಕ್ಕೆ ಭೋರ್ಗರೆಯುವ ಆಳವಾದ ನೀರಿನ ಪ್ರವಾಹವುಳ್ಳ ಪವಿತ್ರ ತುಂಗಾನದಿಯು; ಎಡಭಾಗಕ್ಕೆ ನಿಬಿಡವಾದ ಅಡವಿಯು; ದಂಡೆಗುಂಟ ಎತ್ತರವಾದ ದಿಬ್ಬಗಳು; ಹಿಂದು ಮುಂದೆ ಮುಗಿಲಿಗೆ ಮುದ್ದು ಕೊಡುವ ಮತ್ತು ದಟ್ಟವಾಗಿ ಹಬ್ಬಿದ ಬಿದರಿನ ಬನವು ಹೀಗೆ ಆ ಪ್ರದೇಶವು ಶತ್ರುಗಳು ಪ್ರವೇಶ ಮಾಡಲು ದುರ್ಘಟವಾಗಿತ್ತು. ಅದರೊಳಗೆ ಹೋಗಲು ಒಂದೇ ಚಿಕ್ಕ ಮಾರ್ಗವಿತ್ತು. ಇಂಥ ಭದ್ರವಾದ ಸ್ಥಳದಲ್ಲಿ ರೇಜಖಾನನು ನಿರ್ಭಯನಾಗಿ ಇಳಕೊಂಡನು. ಆದರೆ ಆಹವ-ಚತುರನಾದ ಪರಶುರಾಮಭಾವು ಇಂಥ ಹಗೆಯನ್ನು ಬಿಟ್ಟು ಹೋಗುವನೇ ಕಿಲ್ಲೆಯ ಬಳಿಗೆ ಬರುತ್ತಲೆ ರೇಜಖಾನನ ವರ್ತಮಾನವು ಆತನಿಗೆ ಗೊತ್ತಾಯಿತು. ಅದರಿಂದ ಅವನು ಕಿಲ್ಲೆಯನ್ನು ತಕ್ಕೊಳ್ಳಬೇಕೆಂದು ಮೊದಲು ಮಾಡಿದ ಆಲೋಚನೆಯನ್ನು ಬದಿಗಿಟ್ಟು, ಶತ್ರುಸರದಾರನಾದ ರೇಜಖಾನನಿಗೆ ಗಂಟು ಬೀಳಬೇಕೆಂದು ಹೊರಟನು. ಭಾವು ಕೋಟೆಯ ಸುತ್ತಲೂ ಅಡ್ಡಾಡಿ ನೋಡಿ ಆ ಸರದಾರನು ಹೊಕ್ಕು ಅಡಗಿಕೊಂಡ ಪ್ರದೇಶದ ಬಳಿಗೆ ಬಂದು ಮಜಲುಮಾಡಿದನು.

ಭಾವೂನ ಜೇಷ್ಟ ಚಿರಂಜೀವನಾದ ರಾಮಚಂದ್ರರಾವ ಅಪ್ಪಾಸಾಹೇಬನು ತಂದೆಯೊಡನೆ ಹೊರಟು ಬಂದಿರುವದು ವಾಚಕರಿಗೆ ಗೊತ್ತಿರುವದಷ್ಟೇ. ಆತನು ತಂದೆಯೊಡನೆ ಇದ್ದು ಅನೇಕ ಕಾಳಗಗಳಲ್ಲಿ ಶೌರ್ಯ-ಸಾಹಸ-ಯುದ್ಧಕುಶಲತೆಗಳನ್ನು ಪ್ರಕಟಗೊಳಿಸಿದ್ದನು. ಆದರೂ ಮಗನಿಗೆ ಸೇನಾಧಿಪತ್ಯವನ್ನು ಒಪ್ಪಿಸಿಕೊಟ್ಟು, ಆತನು ಸ್ವತಂತ್ರ ಯುದ್ಧವನ್ನು ಹ್ಯಾಗೆ ಮಾಡುವನೆಂಬದನ್ನು ಪರೀಕ್ಷಿಸಬೇಕೆಂದು ಭಾವೂನ ಮನಸ್ಸಿನಲ್ಲಿ ಬಹಳ ದಿವಸಗಳಿಂದ ಇತ್ತು. ಆದ್ದರಿಂದ ಆರ್ಯರ ವೈರಿಯಾದ ರೇಜಖಾನನು ಭದ್ರವಾದ ಸ್ಥಳದಲ್ಲಿ ಅಡಗಿಕೊಂಡಿದ್ದು ಆತನೊಡನೆ ಯುದ್ಧಮಾಡುವ ಕಾರ್ಯಭಾಗವನ್ನು ಅಪ್ಪಾಸಾಹೇಬನಿಗೊಪ್ಪಿಸಬೇಕೆಂದು ಭಾವೂಸಾಹೇ

ಬನು ನಿಶ್ಚೈಸಿದನು. ತಂದೆಯ ಆಜ್ಞೆಯನ್ನು ರಾಮಚಂದ್ರರಾಯನು ಬಹಳ ಉಲ್ಹಾಸದಿಂದ ಶಿರಸಾವಹಿಸಿದನು.

ಅಪ್ಪಾಸಾಹೇಬನು ಮರಾಠಾ-ಸೈನ್ಯ, ಇಂಗ್ಲೀಷರ ಪಲಟಣಗಳನ್ನು ತಕ್ಕೊಂಡು ಆ ಅಡವಿಯನ್ನು ಹೊಕ್ಕನು. ಅಲ್ಲಿ ರೇಜಖಾನನು ಅಂಜಿಕೆಯಿಲ್ಲದೆ ಕೂತಿದ್ದನು. ಮರಾಠಾ ಸೈನ್ಯವು ಒಮ್ಮೆಲೆ ಅವನ ಮೇಲೆ ಸಾಗಿಹೋಗಿ ಧುಮಕಿತು; ಅಷ್ಟರಲ್ಲಿ ಆವನೂ ಅವನ ಅನುಚರರೂ ಸಾವಧರಾಗಿ ಯುದ್ಧಕೆ ಸಿದ್ಧರಾದರು. ತೋಫುಗುಂಡುಗಳ ಹೊಡತವು ಆರಂಭವಾಯಿತು. ಶತ್ರುಜನರು ಅಡವಿಯಲ್ಲಿ ಓಡಿಹೋಗಬಾರದೆಂದು ಅಪ್ಪಾಸಾಹೇಬನು ಎಡಬಲದ ಭಾಗಗಳ ಕಡೆಗೆ ಇಂಗ್ಲೀಷ ಪಲಟಣಗಳ ಕಾವಲಿಟ್ಟನು. ಇಂಗ್ಲೀಷ ಪಲಟಣದ ಮುಖ್ಯಾಧಿಕಾರಿಯಾದ ಲಟಲಸಾಹೇಬನೊಡಗೊಂಡು ಆತನು ಶತ್ರುಸೇನೆಯ ಮಧ್ಯಭಾಗದ ಮೇಲೆ ಸಾಗಿಹೋದನು. ಉಭಯಪಕ್ಷದ ಕಲಿಗಳು ಒಳ್ಳೇ ನಿಕರದಿಂದ ಕಾದಿದರು. ಖಾನನು ತ್ವೇಷದಿಂದ ಬಹಳ ಹೊತ್ತು ಹೋರಾಡಿ ಅಪ್ಪಾಸಾಹೇಬನನ್ನು ಹಿಮ್ಮೋಡುವಮಾಡಿದನು. ಅಪಯಶದ ಆಶೆಯು ಲೋಪವಾಯಿತು. ಆಗ ಭಾವೂ ಅಲ್ಲಿಯೇ ಸಮೀಪದಲ್ಲಿ ಇದ್ದನು. ಆಗ ಆತನು ತನ್ನ ಮಗನ ಬೆಂಬಲಕ್ಕೆ ಹೋಗುವದುಚಿತವೆಂದು ದಂಡಿನ ಜನರು ಗುಣಗುಟ್ಟಿದರು. ಆಗ ಪರಶುರಾಮಭಾವು ಶಾಂತತನದಿಂದ " ಇಂದಿನ ಕಾಳಗವು ಅಪ್ಪಾಸಾಹೇಬನದು; ಯಶವು ಅಥವಾ ಅಪಶಯವು ಆತನದೇ. ಆತನು ವಹಿಸಿದ ಕಾರ್ಯಭಾಗವನ್ನು ಆತನೇ ಮಾಡಿ ತೀರಬೇಕು. ಯುದ್ಧದಲ್ಲಿ ಸೋಲುಗೆಲವುಗಳು ನಮ್ಮ ಕೈಯೊಳಗಿನವಲ್ಲ. ಆದರೆ ಪ್ರಭುಚರಣದಲ್ಲಿ ವಿಶ್ವಾಸವಿಟ್ಟು, ಪ್ರಾಣದಾಶೆಯನ್ನು ಹಿಡಿಯದೇ ಶೂರರಿಗೆ ತಕ್ಕಂತೆ ಶತ್ರುಗಳೊಡನೆ ಕಾದುವದೇ ಪಟುಭಟರ ಕರ್ತವ್ಯವು; ಇಷ್ಟು ಮಾಡಿದ ಬಳಿಕ ಆತನು ಹಗೆಗಳನ್ನು ಕೊಲ್ಲಲಿ, ಇಲ್ಲವೇ ತಾನೇ ಸಾಯಲಿ. ಪಟವರ್ಧನ ಪುರುಷರು ಎರಡನೇಯವರ ಸೊಂಡಿಯಿಂದ ನೀರು ಕುಡಿಯತಕ್ಕ ಹೇಡಿಗಳಲ್ಲಿ ಆದರೆ ಅವರು ಸೂರ್ಯನಂತೆ ಸ್ವಪರಾಕ್ರಮದಿಂದ ಪ್ರಕಾಶಿತರಾಗುವ ನರವೀರರು!!! ಅದರಿಂದ ನಾನಂತೂ ರಾಮಚಂದ್ರನಿಗೆ ನೆರವಾಗಬೇಕೆಂದು ಇಚ್ಛಿಸುವದಿಲ್ಲ. " ಎಂದು ಹೇಳಿ ಪರಶುರಾಮಭಾವು, ಹಿಂದೆ ರಾಮ-ರಾವಣರ ಯುದ್ಧದಲ್ಲಿ ರಾಜಾರಾಮಚಂದ್ರನು ಇಂದ್ರಜಿತು-ವಿಜಯದ ಕಾಳಗವನ್ನು ವೀರಮಣಿಯಾದ

ಲಕ್ಷ್ಮಣನಿಗೊಪ್ಪಿಸಿದಂತೆ, ತಾನು, ರೇಜಖಾನನ್ನು ಗೆದೆಯುವ ಎಲ್ಲ ಭಾರ ವನ್ನು ತನ್ನ ಪರಮ ಪರಾಕ್ರಮಿಯಾದ ಮಗನಿಗೊಪ್ಪಿಸಿ ಅಂದಿನ ಯುದ್ಧದ ಗೊಡವಿಗೆ ಹೋಗಲಿಲ್ಲ.

ಅಹಹಾ! ಈ ಪಟವರ್ಧಪ್ರಭುರಾಯನ ಯೋಗ್ಯತೆಯು ಎಷ್ಟು ದೊಡ್ಡದು? ಆತನ ಸ್ವಕುಲಾಭಿಮಾನಕ್ಕಂತೂ ಜೋಡು ಇಲ್ಲ. ಆತನು ಎಂಥ ಎದೆಗಾರನು? ಆತನ ಭಾಷಣವು ಎಷ್ಟು ಗಾಂಭೀರ್ಯಮಯವಾದದ್ದು? ಪ್ರತ್ಯಕ್ಷ ಹೊಟ್ಟೆಯ ಮಗನು ಶತ್ರುವಿನ ಕೈಯ್ಯಲ್ಲಿ ಸಿಕ್ಕಿರಲು, ಮೇಲೆ ಹೇಳಿದಂತೆ ಕ್ಷಾತ್ರಧರ್ಮಕ್ಕನುರೂಪವಾದ ಸಂಭಾಷಣವನ್ನು ಮಾಡಿ ತದನುಸಾರ ನಡೆದ ಪರಶುರಾಮಭಾವೂನಂಥ ಎದೆಗಾರರಾದ ಯೋಧರು ದೊರಕುವದು ಅಪರೂಪವಲ್ಲವೇ?

ಭಾವು ಮಗನಿಗೆ ಸಹಾಯಮಾಡುವದನ್ನು ನಿರಾಕರಿಸಿದಂತೆ, ಅಪ್ಪಾ ಸಾಹೇಬನು ತಂದೆಯ ನೆರವಿನ ಆಶೆಯನ್ನು ಹಿಡಿಯದೆ, ಜೀವದ ಮೇಲೆ ಉದಾರನಾಗಿ, ರೇಜಖಾನನ ಹೊಡತವನ್ನು ಸೈರಿಸಿಕೊಳ್ಳುತ್ತ ಆತನನ್ನು ಹಿಂದಕ್ಕಟ್ಟಬಿಡಲು ದೀರ್ಘಪ್ರಯತ್ನಗಳನ್ನು ಮಾಡಿದನು. ಹೀಗೆ ಆ ಗಂಡುಗಲಿಯು ಹಿಂಜರಿಯದೆ, ಆತನೂ, ಇಂಗ್ಲೀಷರ ಕಡೆಯ ರಣಧುರೀಣನಾದ ಲಿಟಲಸಾಹೇಬನೂ ಸೈನ್ಯದ ಜನರಿಗೆ ಉತ್ತೇಜನವನ್ನು ಕೊಟ್ಟು, ಹಗೆಗಳ ಮೇಲೆ ಬಳ್ಳೇ ತ್ವೇಷದಿಂದ ಸಾಗಿಹೋದರು. ತೋಫು ಗುಂಡುಗಳ ಹೊಡತವು ತೆರಪಿಲ್ಲದೆ ನಡೆದಿತ್ತು. ಮರಾಠಾ ದಂಡಿನ ಜನರ ಹುರುಪು ಹೆಚ್ಚಾಗಲು, ಶತ್ರುಜನರು ಕಾದಿ ಕಂಗೆಟ್ಟರು. ಅವರ ಶಸ್ತ್ರಾಸ್ತ್ರಗಳ ಪ್ರಹಾರವನ್ನು ಸಹಿಸುವದು ಅಸಾಧ್ಯವೆನಿಸಿತು. ಅಡವಿಯ ಒಳಭಾಗವನ್ನು ಸೇರಿಕೊಳ್ಳಬೇಕೆಂದರೆ, ಅಲ್ಲಿ ಮರಾಠಾಸೈನ್ಯದ ಭಯಂಕರ ಕಾವಲು ಇದ್ದದರಿಂದ ಅದು ಸಾಧಿಸಲಿಲ್ಲ. ಹೀಗೆ ಆ ಮ್ಲೇಂಛಸರದಾರನು ಬಳ್ಳೇ ಪೇಚಿನಲ್ಲಿ ಸಿಕ್ಕನು. ಅವನು ತೀರ ಹಣ್ಣಿಗೆ ಬಂದು ನಿರ್ವಿಣ್ಣನಾದನು. ಕಡೆಗೆ ಹಗೆಗಳು ಆ ಅಡವಿಯಲ್ಲಿ ಒಂದು ಚಿಕ್ಕ ಕಳ್ಳಹಾದಿಯನ್ನು ಹುಡುಕಿ, ಕೈಯಲ್ಲಿ ಜೀವವನ್ನು ಹಿಡಕೊಂಡು ಅದರೊಳಗಿಂದ ಓಡಿ ಹೋಗಲಾರಂಭಿಸಿದರು. ಪೇಶವೆಸೈನಿಕರು ಅವರ ಬೆನ್ನುಹತ್ತಿದರು. ಎಲ್ಲ ತೋಫುಗಳು ಅವರ ವಶವಾದವು. ಅವರು ಶತ್ರುಛಾವಣಿಯನ್ನು ಸುಲಿದರು.

ಆ ಸುಲಿಗೆಯಿಂದ ಅಪ್ಪಾಸಾಹೇಬನಿಗೆ ಅಸಂಖ್ಯ ಯುದ್ಧೋಪಯೋಗಿಯಾದ ಸಾಮಾನುಗಳು ದೊರೆತವು. ಆ ಪ್ರಸಂಗದಲ್ಲಿ ಇಂಗ್ಲೀಷರು ಆತನಿಗೆ ಮಾಡಿದ ಸಹಾಯವು ಶ್ಲಾಘನೀಯವಾದದ್ದು. ಉಭಯಪಕ್ಷದಲ್ಲಿ ಒಟ್ಟು ೧೫೦೦ ಜನರು ಪ್ರಾಣದೊರೆದರು. ಈ ಮೇರೆಗೆ ಅಪ್ಪಾಸಾಹೇಬನು ಯಶಸ್ವಿಯಾಗಿ ವಿಜಯೋಲ್ಲಾಸದಿಂದ ತನ್ನ ಛಾವಣಿಗೆ ಬಂದು ಪರಶುರಾಮಭಾವೂನ ಪಾದ ಕಮಲಗಳಿಗೆ ಪ್ರೊಡಮುಟ್ಟಿ, ಗೆಲವಿನ ಸುದ್ದಿಯನ್ನು ಹೇಳಿದನು. ಪ್ರಿಯಪುತ್ರನ ಪರಾಕ್ರಮವನ್ನು ನೋಡಿ ಭಾವೂಗೆ ಆದ ಆನಂದವನ್ನು ಬಣ್ಣಿಸಲಳವಲ್ಲ.

ರೇಜಖಾನನ ಸೈನ್ಯವು ದಶದಿಶೆಗಳಲ್ಲಿ ಚದುರಿಸಲ್ಪಟ್ಟದ್ದರಿಂದ ಶಿವಮೊಗ್ಗೆಯ ಕಿಲ್ಲೆಯು ಸುಲಭವಾಗಿ ಭಾವುವಿನ ಹಸ್ತಗತವಾಯಿತು. ಆತನು ಅಲ್ಲಿ ಕೆಲವು ದಿವಸ ನಿಂತು ಶ್ರೀಮಂತಸರಕಾರದ ಅಮಲು ಚನ್ನಾಗಿ ಕೂಡ್ರಿಸಿದನು. ಪಟವರ್ಧನರ ದರ್ಪಿಗೆ ಸುಲ್ತಾನನ ಹಿತಚಿಂತಕರು ತಲೆಯೆತ್ತುವ ಎದೆಯಿಲ್ಲದೆ ಮೆತ್ತಗಾದರು. ಹೀಗೆ ಪ್ರೌಢಪ್ರತಾಪಿಯಾದ ಭಾವು ಟೀಪುವಿನ ಅನೇಕಾನೇಕ ಪ್ರದೇಶಗಳನ್ನು ಹಿಡಕೊಂಡನು. ಆ ಪುರುಷಶ್ರೇಷ್ಠನ ಯಶೋದಧಿಯು ಉತ್ತರೋತ್ತರ ವಿಸ್ತೃತವನ್ನು ಹೊಂದುತ್ತ ಸಮಸ್ತ ಕರ್ನಾಟಕವನ್ನು ಹಬ್ಬಿಗೊಂಡಿತು. ಪ್ರಖ್ಯಾತ ಪಾಶ್ಚಿಮಾತ್ಯವೀರನಾದ ಹಾನಿಬಾಲನು ಹ್ಯಾಗೆ ಇಡೀ ರೋಮರಾಜ್ಯವನ್ನು ನಡುಗಿಸಿ ದಿಗಂತಕೀರ್ತಿಯನ್ನು ಹೊಂದಿದನೋ, ಹಾಗೆಯೇ ನಮ್ಮ ಹಿಂದೂದೇಶದ ವೀರಾಗ್ರೇಸರನಾದ ಪರಶುರಾಮಭಾವು ಪೇಶವಾಯಿಯ ಭರಭರಾಟಿಯ ಕಾಲದಲ್ಲಿ ಉದಯಹೊಂದಿ, ಶ್ರೀಮಂತ ಸವಾಯಿಮಾಧವರಾಯರ ಕಾಲದಲ್ಲಿ ಬೆಳಕಿಗೆ ಬಂದು ದಕ್ಷಿಣಪ್ರಾಂತದಲ್ಲಿ ಧ್ರುವನಕ್ಷತ್ರದಂತೆ ಪ್ರಕಾಶಿಸುತ್ತ ಟೀಪು ಮೊದಲಾದ ಯವನ ರಾಜಾಧಿರಾಜರನ್ನು ಥರಥರನೆ ನಡುಗಿಸಿ ಬಿಟ್ಟನು!!

ಬಳಿಕ ಬೇದನೂರ ಪ್ರಾಂತವನ್ನು ಗೆದೆಯುವ ಮುಖ್ಯ ಕಾರ್ಯಭಾಗವು ಮಾತ್ರ ಉಳಿಯಿತು; ಅದನ್ನು ಸಾಧಿಸುವ ಉದ್ದೇಶದಿಂದ ಭಾವು ದಂಡಿನೊಡನೆ ಅತ್ತಕಡೆಗೆ ತೆರಳಿದನು; ಆತನು ಆ ಪ್ರದೇಶವನ್ನು ಮುತ್ತುವಗೋಸ್ಕರ ಯಾವತ್ತು ಸಿದ್ಧತೆಯನ್ನು ಮಾಡಿಕೊಂಡನು. ಅಷ್ಟರಲ್ಲಿ ಆತನು ಆ ಆಲೋಚನೆಯನ್ನು ರಹಿತಮಾಡಿ ಶ್ರೀರಂಗಪಟ್ಟಣದಕಡೆಗೆ ಹೋಗ

ಬೇಕಾಯಿತು. ಅದು ಹ್ಯಾಗಂದರೆ--ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ತೊಡಗಿದ ಕಾರ್ನವಾಲೀಸಧೊರೆಗೆ ಗಂಡುಗಲಿಯಾದ ಭಾವೂಸಾಹೇಬನ ಬೆಂಬಲವು ಬಹಳ ಅವಶ್ಯವಾಗಿ ಬೇಕಾಗಿತ್ತು; ಅದರಿಂದ ಆತನು ನಮ್ಮ ಕಥಾನಾಯಕನಿಗೆ ಅಸಂಖ್ಯ ಪತ್ರಗಳನ್ನು ಬರೆದನು. ಆದರೆ ಉತ್ತರದಲ್ಲಿ ಭಾವುವಿಗೆ ಒಂದರಹಿಂದೊಂದು ಗೆಲವುಗಳು ಆಗುತ್ತ ನಡೆದಿದ್ದರಿಂದ ಆವ ನಿಗೆ ಅತ್ತಕಡೆಗೆ ಹೋಗಲಿಕ್ಕಾಗಲಿಲ್ಲ. ಕಡೆಗೆ ಇಂಗ್ಲೀಷ ಸರ್ವಾಧಿಪತಿಯು ನಾನಾಫಡಣವೀಸನಿಗೆ ಪತ್ರಬರೆದನು. ಭಾವು ಮಾಡುವ ಸಕಲ ಕೃತ್ಯಗ ಳಿಗೂ ನಾನಾನು ಅಂತರಂಗತಃ ಅನುಮೋದಿಸಿದ್ದನು; ಅದರಿಂದ ಅವನು ಭಾವು ಶ್ರೀರಂಗಪಟ್ಟಣದ ಕಡೆಗೆ ಹೊರಟುಬರಲು ಅನೇಕ ತೊಂದರೆಗ ಳುಂಟೆಂದು ಉತ್ತರಬರೆದನು. ಕಟ್ಟಕಡೆಗೆ ಕಾರ್ನವಾಲೀಸನು ನಿಜಾಮಲ್ಲಿ ಖಾನನ ಮಗ ಸಿಕಂದರಜಾ ಮತ್ತು ಪೇಶವೆಸರದಾರನಾದ ಹರಿಪಂತ ಇವ ರಿಬ್ಬರ ಮತ್ತು ಆ ಉಭಯತರ ಶೂರಸೈನಿಕರ ಸಹಾಯದಿಂದ ಶ್ರೀರಂಗ ಪಟ್ಟಣದ ಬಹ್ವಂಶ ಕಾರ್ಯಭಾಗವನ್ನು ಸಿದ್ಧಿಗೊಯ್ದನು. ಇಂಗ್ಲೀಷ-ಮರಾಠಾ-ನಿಜಾಮರ ದಂಡಿನ ಜನರು ಹುರುಪಿನಿಂದ ಕಾದಿ ಆತನನ್ನು ಜೇರಿಗೆ ತಂದರು. ಅವನು ಅವರ ಮೇಲೆ ಹಲ್ಲುಕಡಿಯಹತ್ತಿದನು. ಆದರೆ ಮಾಡುತ್ತಾನೇನು? ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿದ್ದಿಲ್ಲ. ಆದ್ದರಿಂದ ಕೊಬ್ಬೇರಿ ಅರವುಗೆಟ್ಟ ಮೈಸೂರಿನ ಹುಲಿಯು ಬಲೆಯಲ್ಲಿ ಸಿಕ್ಕು ಒದ್ದಾಡ ಲಾರಂಭಿಸಿತು. ಅದಕ್ಕೆ ಹೊರಗೆ ಹೋಗಲಿಕ್ಕೆ ಮಾರ್ಗವಿದ್ದಿಲ್ಲ; ಮತ್ತು ಒಳಗೆ ಇರಲಿಕ್ಕೆ ಅದು ಒಪ್ಪುತ್ತಿದ್ದಿಲ್ಲ. “ಎಲ್ಲ ಹೋಗಲಿ ಅಥವಾ ಎಲ್ಲ ಬರಲಿ” ಎಂಬ ಹುಂಬತನದ ವಿಚಾರವನ್ನು ಆತನು ಅನುಸರಿಸದಿದ್ದರೆ, ಎಲ್ಲ ಹೋಗುವದೇ ನಿಶ್ಚಯವೆಂದು ತೋರುತ್ತಿತ್ತು. ಕಡೆಗೆ ಟೀಪು ಶರಣು ಹೋಗುವದರ ಹೊರತು ಎರಡನೆಯ ಉಪಾಯವಿಲ್ಲೆಂದು ತಿಳಿದು, ನಿರು ಪಾಯನಾಗಿ ಆ ತ್ರಿವರ್ಗರಾಷ್ಟ್ರದವರು ಹೇಳಿದಂತೆ ಕೇಳಲು ಸಮ್ಮತಿಸಿ ಒಪ್ಪಂದವನ್ನು ಅಂಗಲಾಚಿ ಬೇಡಿಕೊಂಡನು. ಇದೆಲ್ಲ ವರ್ತಮಾನವು ನಾನಾನಿಗೆ ಹತ್ತಲು, ಇನ್ನು ಬೇದನೂರಕಡೆಗೆ ಯುದ್ಧನಡೆಸುವದು ಪ್ರಶಸ್ತ ವಲ್ಲವೆಂದು ಗ್ರಹಿಸಿ, ಆತನು ಭಾವೂಗೆ ಪತ್ರ ಕಂಡಕೂಡಲೆ ಯುದ್ಧ-ವಿಚಾ ರವನ್ನು ಬದಿಗಿಟ್ಟು ಸುಲ್ತಾನನ ರಾಜಧಾನಿಯಕಡೆಗೆ ಸಾಗಿಹೋಗಬೇಕೆಂದು ರಾಯಸವನ್ನು ಕಳುಹಿದನು. ಆಜ್ಞಾಪತ್ರವು ಬಂದಕೂಡಲೆ ಭಾವು ದಂಡಿ

ನೊಡನೆ ಹೊರಟು ಶ್ರೀರಂಗಪಟ್ಟಣಕ್ಕೆ ಬಂದು ಮುಟ್ಟಿದನು; ಅದಕ್ಕಿಂತ ಎರಡು ದಿನ ಮೊದಲು ಟೀಪು ಇಂಗ್ಲೀಸ-ಮರಾಠಾ-ನಿಜಾಮ ಈ ತ್ರಿವರ್ಗ ರಾಷ್ಟ್ರದವರೊಡನೆ ಒಪ್ಪಂದ ಮಾಡಿಕೊಂಡಿದ್ದನು. ಆ ಒಪ್ಪಂದದ ಮುಖ್ಯ ಕಲಮುಗಳು:—

೧. ಸುಲ್ತಾನನು ತನ್ನ ಅರ್ಧರಾಜ್ಯವನ್ನು ಆ ತ್ರಿವರ್ಗರಾಷ್ಟ್ರದವರಿಗೆ ಬಿಟ್ಟು ಕೊಡಬೇಕು.

೨. ಅವನು ಯುದ್ಧದ ವೆಚ್ಚಕ್ಕಾಗಿ ೩ ಕೋಟಿ ೩೦ ಲಕ್ಷ ರೂಪಾಯಿಗಳನ್ನು ರೋಖ ಕೊಡಬೇಕು.

೩. ಅವನು ಮೊಯಿಜುದ್ದೀನ, ಅಬ್ದುಲ್‌ಖಾಲಿಕ್ ಎಂಬ ತನ್ನಿಬ್ಬರು ಮಕ್ಕಳನ್ನು ಇಂಗ್ಲೀಷರ ವಶದಲ್ಲಿಡಬೇಕು.*

ಇವೆಲ್ಲವುಗಳಿಗೆ ಒಪ್ಪಿಕೊಳ್ಳುವದೆಂದರೆ ಸುಲ್ತಾನನ ಜೀವದ ಸುತ್ತ ಬಂತು. ಅವನು ಮೊದಲಿನೆರಡು ಕಲಮುಗಳನ್ನು ನೋಡಿ ಬಿಸುಸುಯ್ದನು. ಮೂರನೆಯ ಕಲಮನ್ನು ನೋಡಿ ಕಡು ಮರುಗಿದನು. ಆದರೆ ಅವನು ಅಂಥ ಕಠಿಣಪ್ರಸಂಗದಲ್ಲಿ ಏನು ಮಾಡಲಾಪನು? ಒಪ್ಪಿಕೊಳ್ಳದಿದ್ದರೆ ಅನ್ಯ ಮಾರ್ಗವಿದ್ದಿಲ್ಲ. ಗೆಲವಿನಿಂದ ಏರಿ ಕುಳಿತ ಹಗೆಗಳಿಗೆ ಹೆಚ್ಚು ಕನಿಕರವು ಹುಟ್ಟುವಂತಿದ್ದಿಲ್ಲ. ಯಾಕೆಂದರೆ ಅವನು ಇಂಗ್ಲೀಷರ ಹೆಚ್ಚಳವನ್ನು ಸೈರಿಸುತ್ತಿದ್ದಿಲ್ಲ. ಅವರನ್ನು ಹಿಂದುಸ್ತಾನದಿಂದ ಹೊರದೂಡುವ ಹಂಚಿಕೆಯಲ್ಲಿದ್ದನು. ಹಿಂದೂಜನರನ್ನು ಪರಿಪರಿಯಿಂದ ಪೀಡಿಸಿ ಪೇಶ್ವೆಯರ ದ್ವೇಷಕಟ್ಟಿಕೊಂಡಿದ್ದನು. ನಿಜಾಮನು ಇಂಗ್ಲೀಷ-ಮಹಾರಾಷ್ಟ್ರರ ಸ್ನೇಹಿತನಾದುದರಿಂದ ಆತನೂ ಸುಲ್ತಾನನ ಹಗೆಯಾಗಿದ್ದನು. ಆಗ ಸುಲ್ತಾನನು ತನ್ನ ಆಪ್ತರೊಡನೆ ಆಲೋಚಿಸಿ, ಒಪ್ಪಂದದ ಶರ್ತುಗಳಿಗೆ ಒಡಂಬಟ್ಟು ಅದಕ್ಕೆ ತನ್ನ ರುಜುಹಾಕಿದನು. ಹೀಗೆ ಮೈಸೂರಿನ 'ಹುಲಿ' ಎಂದು ಹೊಗಳಿಕೊಳ್ಳುತ್ತಿದ್ದ ಟೀಪುಸುಲ್ತಾನನನ್ನು, ಇಂಗ್ಲೀಷ-ಮರಾಠಾ-ನಿಜಾಮ ಈ ತ್ರಿವರ್ಗರಾಷ್ಟ್ರದ ತುಂಗವಿಕ್ರಮರಾದ ಸರದಾರರು 'ಇಲಿ'ಯಂತೆ ಮೆತ್ತಗೆ ಮಾಡಿಬಿಟ್ಟರು. ಇದಕ್ಕೆ ಆ ತ್ರಿವರ್ಗರಾಷ್ಟ್ರದ ಒಕ್ಕಟ್ಟೇ ಕಾರಣವು. ಒಕ್ಕಟ್ಟಿನಿಂದ ಬಿಕ್ಕಟ್ಟಿನ ಕೆಲಸಗಳು ಸುಲಭ ಸಾಧ್ಯವಾಗುವವು. ಅದು ಲೋಪವಾ

* ಮುಂದೆ ೧೭೯೪ರಲ್ಲಿ ಸುಲ್ತಾನನು ತನ್ನ ಇಬ್ಬರು ಮಕ್ಕಳನ್ನು ಬಿಡಿಸಿಕೊಂಡನು.

ಗಲು, ಅತ್ಯಂತ ಕ್ಷುಲ್ಲಕಕೃತ್ಯವು ಸಹ ಅಶಕ್ಯವೆನಿಸುವದು. ಒಕ್ಕಟ್ಟಿನಿಂದ ಕುಟುಂಬಗೌರವವು ಹೆಚ್ಚುವದಲ್ಲದೆ ಮನೆತನವು ಮುಂದೆ ಬರುವದು; ಅದರ ಹೆಸರು ಚಿರಕಾಲ ನಿಲ್ಲುವದು. ಅದೇ ಅಣ್ಣತಮ್ಮಂದಿರು ಏಕತ್ರರಾಗಿ ರದೆ ವಿಭಾಗವಾಗುವದರಿಂದ ಯಾದವೀ ಕಲಹವು ಬೆಳೆಯುವದು. ಅದರ ಯೋಗದಿಂದ ಮನೆತನದ ಮರ್ಯಾದೆಯು ಕುಗ್ಗಿ ಕಡೆಗೆ ಮನೆತನವೇ ಹೇಳಹೆಸರಿಲ್ಲದಾಗುವದು. ಒಕ್ಕಟ್ಟಿನಿಂದಿರುವ ದನಕರುಗಳ ಗುಂಪನ್ನು ಕಂಡು ಬಲಿಷ್ಠವಾದ ಹುಲಿಯು ಕೂಡ ಹೆದರಿ ಹಿಂದಕ್ಕೆ ಸರಿಯುವದು. ಅದೇ ಒಂದೊಂದೇ ದನವು ಸಿಗಲು ಅದು ಆಯಾಸವಿಲ್ಲದೆ ಕೊಂದು ತಿನ್ನು ವದು. ಸಾರಾಂಶ, ಒಕ್ಕಟ್ಟು ಸಾಮರ್ಥ್ಯದ ರಾಶಿಯೆಂದರೂ ಸಲ್ಲುವದು. ಮುಂದೆ ಮಹಾರಾಷ್ಟ್ರರಲ್ಲಿ ಒಕ್ಕಟ್ಟು ಮುರಿದುಹೋದುದರಿಂದಲೇ ಅವರ ರಾಜ್ಯವು ನಾಮಶೇಷವಾಗಿರುವದು. ಮೊಗಲ-ಸಾಮ್ರಾಜ್ಯವಾದರೂ ಒಕ್ಕ ಟ್ಟಿನ ಕೊರತೆಯಿಂದಲೇ ಸೂರೆಗೊಂಡಿತು. ಈಗ ಏಕಚಕ್ರೇಶ್ವರರಾದ ಆಂಗ್ಲ-ಸಾರ್ವಭೌಮರ ಅಚಲವಾದ ಸಾಮ್ರಾಜ್ಯ-ಮಂದಿರಕ್ಕೆ ಆಂಗ್ಲೇಯ ರಲ್ಲಿರುವ ಒಕ್ಕಟ್ಟೇ ಆಧಾರಸ್ತಂಭವಾಗಿರುವದು.

ಟೀಪುಸುಲ್ತಾನನು ಕೊಟ್ಟ ಅರ್ಧರಾಜ್ಯವನ್ನು ಆ ತ್ರಿವರ್ಗರಾಷ್ಟ್ರದ ವರು ಸರಿಯಾಗಿ ಹಂಚಿಕೊಂಡರು. ಗಂಜೀಕೋಟ ಮತ್ತು ಕಡಪಾಪ್ರಾಂತ ಗಳು ನಿಜಾಮನಿಗೆ ದೊರೆತವು. ಮಲೆಯಾಳ, ಕೊಡಗು, ದಿಂಡಿಗಲ್ಲ, ಬಾರಾ ಮಹಾಲ ಮುಂತಾದ ಪ್ರಾಂತಗಳು ಇಂಗ್ಲೀಷರ ಪಾಲಿಗೆ ಬಂದವು. ತುಂಗ ಭದ್ರೆಯ ಉತ್ತರಕ್ಕಿರುವ ಯಾವತ್ತು ಪ್ರಾಂತವು ಪೇಶವೆಯರಿಗೆ ಸಿಕ್ಕಿತು.

ಪೇಶವೆಸರಕಾರಕ್ಕೆ ದೊರೆತ ಪ್ರಾಂತಗಳ ಸನದನ್ನೂ ಹುಜೂರ ಸೈನ್ಯವನ್ನೂ ಹರಿಪಂತನ ಸ್ವಾಧೀನ ಮಾಡಿ ಸರ್ವಾಧಿಪತಿಯಾದ ಪರಶುರಾ ಮಭಾವು ಆತನನ್ನು ಪುಣೆಯ ಕಡೆಗೆ ಕಳಿಸಿಕೊಟ್ಟು, ತಾನು ಮಿಕ್ಕ ದಂಡು, ಭಾರದ ಸಾಮಾನು ಮತ್ತು ಇಂಗ್ಲೀಷರು ತನ್ನ ಶೌರ್ಯಸಾಹಸಗಳಿಗೆ ಮೆಚ್ಚಿ ಶ್ರೀಮಂತ ಸರಕಾರಕ್ಕೆ ಕಾಣಿಕೆಕೊಟ್ಟ ೧೭ ತೋಫು ಮುಂತಾದವುಗಳೊ ಡನೆ ಬಂದ ಹಾದಿಯಿಂದ ತಿರುಗಿದನು. ಹಾದಿಯಲ್ಲಿ ಭಾವೂನ ದಂಡಿನ ವರು ಬಹಳ ಕಳವಳಗೊಂಡರು; ಅದನ್ನು ಹೇಳಲಸದಳವು. ಆಗ ಬೇಸಿಗೆ ಯ ಕಾಲವು. ಮೇಲೆ ಪ್ರಖರವಾದ ಬಿಸಿಲು, ಕೆಳಗೆ ಕಾದ ಎರೇನೆಲವು, ನಿಮಿ

ಷವಾದರೂ ದಣುವಾರಿಸಕೊಳ್ಳಬೇಕೆಂದರೆ ಗಿಡದ ನೆಳಲು ಇಲ್ಲ. ಕಂಠಿಗೆ ಹಚಿಕೊಂಡೇನಂದರೆ ಹನಿನೀರು ಇಲ್ಲ. ಸಂಗಡ ಜಡಪದಾರ್ಥಗಳಿದ್ದವು. ಆದರಿಂದಲೂ ದಾಣಿ-ಹುಲ್ಲು-ನೀರುಗಳಿರದ್ದರಿಂದಲೂ, ಎತ್ತು-ಕುದುರೆಗಳು ಕಂಗೆಟ್ಟವು; ಅವುಗಳ ಎಲಬಿನ-ಹಂದರವು ಕಾಣತೊಡಗಿತು. ಎಲ್ಲ ಕಡೆಗೂ ಅನ್ನ-ನೀರುಗಳ ಹಾಹಾಕಾರವೆದ್ದಿತು. ಇದಲ್ಲದೆ ಟೀಪುವಿನ ಪಕ್ಷದ ಪುಂಡ ಜನರ ಉಪದ್ರವು. ಅವರು ಹಾದಿಯಲ್ಲಿ ಒಬ್ಬೊಬ್ಬರೆ ಸಿಕ್ಕವರನ್ನು ಸುಲಕೊಳ್ಳುತ್ತಿದ್ದರು. ಹೀಗೆ ಪರಿಪರಿಯು ಕಷ್ಟಗಳನ್ನು ಭಾವು ಮತ್ತು ಆತನ ಪರಿವಾರದ ಜನರು ಸೋಸಿ ಪರಮ ಪ್ರಯಾಸಗೊಂಡರು. ಅಷ್ಟರಲ್ಲಿ ಮಳೆಗಾಲವು ಪ್ರಾರಂಭವಾಯಿತು; ಆಗ ಮರಾಠಾಸೈನ್ಯವು ತುಂಗಭದ್ರೆಯನ್ನು ದಾಟಿ ಬರುತ್ತಿತ್ತು. ಬಳಿಕ ಎಲ್ಲ ಮಾತಿನ ಅನುಕೂಲವಾಯಿತು. ಅನ್ನ-ನೀರಿನ ಬರವು ಹಿಂಗಿತು. ದನಕರುಗಳು ಚೇತನಗೊಂಡವು. ದಂಡಿನ ಜನರಲ್ಲಿ ಉಲ್ಹಾಸ-ವಾಯುಸಂಚಾರ ಮಾಡತೊಡಗಿತು. ಮುಂದೆ ಸಂಗಡ ಇದ್ದ ಸರದಾರರಿಗೆ ನಿರೋಪ ಕೊಟ್ಟು, ಸಕಲ ಸಾಮಾನಗಳ ವ್ಯವಸ್ಥೆ ಮಾಡಿ ಪರಶುರಾಮಭಾವು ತಾಸಗಾಂವಿಗೆ ಬಂದನು.

## ೯ನೆಯ ಅಧ್ಯಾಯ.

### ಆಳತೆ--ಕೊಲ್ಹಾಪೂರಗಳ ಕಾಳಗಗಳು.

ಕರ್ನಾಟಕದ ಕಡೆಯ ಕಡು ಕಷ್ಟಕರವಾದ ಕಾಳಗದ ಕೆಲಸವು ಕೊನೆಗಂಡಬಳಿಕ, ಭಾವು ತಾಸಗಾಂವಿಯಲ್ಲಿ ಕೆಲವು ದಿವಸಗಳನ್ನು ಸಂಸಾರಸುಖದಲ್ಲಿ ಕಳೆದನು. ಸ್ವಕೀಯ ಜನರ ದೀರ್ಘಕಾಲ ವಿಯೋಗವಾಗಿ ಪುನಃ ಭೆಟ್ಟಿಯಾಯಿತೆಂದರೆ ಪರಸ್ಪರರಿಗಾಗುವ ಆನಂದವು ಅತ್ಯಧಿಕವಾದದ್ದು. ಅದರಲ್ಲಿ ಹಗೆಗಳೊಡನೆ ಯುದ್ಧಮಾಡಲಿಕ್ಕೆ ಹೋಗಬೇಕಾದರೆ, ಎಡಗೈಯಲ್ಲಿ ಜೀವಹಿಡಕೊಂಡು ಮತ್ತು ಆಪ್ತವರ್ಗದ ಆಶೆದೊರೆದು ಹೋಗಬೇಕಾಗುವದು. ರಣಭೂಮಿಯಿಂದ ವಿಜಯೋತ್ಸಾಹದಿಂದ ಮರಳಿ ಬರುವದಂತೂ

ಕೇವಲ ದೈವಾಧೀನದ ಮಾತು. ಅದರಿಂದಲೇ ಯುದ್ಧಕ್ಕೆ ಹೋದ ಜನರು ತಿರುಗಿ ಬಂದು ಭೆಟ್ಟಿಯಾಗುವದರಿಂದಾಗುವ ಅನ್ಯೋನ್ಯ ಆನಂದವು ಅವರ್ಣನೀಯವಾದದ್ದು. ಆನಂದವನ್ನು ಯಾರು ಅನುಭೋಗಿಸುವರು, ಅವರಿಗೇ ಗೊತ್ತು; ಅದನ್ನು ಅನ್ಯರು ತಿಳಿಯರು. ಅದರ ವರ್ಣನೆಯನ್ನು ಮಾಡುವ ಇತಿಹಾಸಕಾರನ ಲೇಖಣಿಯು ಭ್ರಮಿತವಾಗುವದು. ಇಂಥ ಸುಖಾನಂದಗಳು ಭಾವುಗೆ ಅನೇಕಸಾರೆ ಲಭಿಸಿದವು. ಶ್ರೀರಂಗಪಟ್ಟಣದ ಮುತ್ತಿಗೆಯ ಕೆಲಸದಲ್ಲಿ ಭಾವು ಬಹಳ ದಿವಸಗಳವರೆಗೆ ತೊಡಗಿದ್ದನು. ಅಲ್ಲಿಂದ ಆತನು ತಿರುಗಿ ಬರುವಾಗ್ಗೆ ಹಾದಿಯಲ್ಲಿ ಬಗೆಬಗೆಯ ಕಷ್ಟನಷ್ಟಗಳನ್ನು ಸೋಸಿದ್ದನು. ಆದದರಿಂದ ಆತನಿಗೆ ತಾಸಗಾಂವಿಯಲ್ಲಿ ದೊರೆತ ಗೃಹ-ವಿಶ್ರಾಂತಿಯು ಬಹು ಸುಖಮಯವೆನಿಸಿತು. ಪುತ್ರ-ಮಿತ್ರ-ಕಳತ್ರ ಇತ್ಯಾದಿ ಇಷ್ಟಜನರ ಸಹವಾಸದಿಂದ ಆತನ ತ್ರಸ್ತವಾದ ಮನಸು ಸಮಾಧಾನವನ್ನು ಹೊಂದಿ, ಆತನಿಗಾದ ಶರೀರಶ್ರಮವು ಪರಿಹಾರವಾಯಿತು. ಇನ್ನೂ ಹೆಚ್ಚು ವಿಶ್ರಾಂತಿಯು ಆತನಿಗೆ ಬೇಕಾಗಿತ್ತು; ಆದರೆ ಪುಣೆಗೆ ಹೊರಟು ಬರಲು ನಾನಾನ ಆಜ್ಞಾ-ಪತ್ರಗಳು ಬರತೊಡಗಿದವು. ಆಗ ಹೆಚ್ಚಿನ ವಿಶ್ರಾಂತಿಯ ಬಯಕೆಯನ್ನು ಬದಿಗಿಟ್ಟು, ಭಾವು ರಾಜಧಾನಿಗೆ ಹೊರಡಲುದ್ಯುಕ್ತನಾದನು.

ಪೂರ್ವೋಕ್ತ ಪ್ರಯಾಣಕ್ಕೆ ಕಾರಣವೇನಂದರೆಃ—ಕೊಲ್ಹಾಪೂರಕರನು ಮತ್ತೆ ಬಂಡಾಯ ಹೂಡಿದ್ದನು. ಆತನು ಸುಮ್ಮನೆ ಕೂಡ್ರತಕ್ಕವನಲ್ಲ. ಪಟವರ್ಧನ ಅಥವಾ ಪೇಶ್ವೇನ ಅನ್ಯ ಸರದಾರರು ತನ್ನ ರಾಜ್ಯದ ಸರಹದ್ದಿನಲ್ಲಿ ಇರುವವರೆಗೆ ಆತನು ಏನೂ ಉಪದ್ವ್ಯಾಪವನ್ನು ಮಾಡುತ್ತಿದ್ದಿಲ್ಲ. ಅದೇ ಆ ಸರದಾರರು ಎರಡನೆ ರಾಜಕರಣಗಳಲ್ಲಿ ತೊಡಗಿದರೆಂದರೆ, ಕರವೀರಕರನು ಮತ್ತೆ ತಲೆಯತ್ತುವನು. ಪೇಶವಾಯಿಯ ಸರಹದ್ದಿನ ಪ್ರಾಂತಗಳನ್ನು ಹೊಕ್ಕು ದಂಗೆಗಳನ್ನು ಎಬ್ಬಿಸುವನು; ಊರುಗಳನ್ನು ಸುಲಿಯುವನು; ಶ್ರೀರಂಗಪಟ್ಟಣದ ದಾಳಿಯಲ್ಲಿ ಭಾವು ಮೊದಲಾದ ಪಟವರ್ಧನ ಮತ್ತು ಹರಿಪಂತ ಫಡಕೆ ಮುಂತಾದ ಪೇಶವೆಸರದಾರರು ತೊಡಗಿದ್ದರು. ಶಿಂದೆ, ಹೋಳಕರರು ಸೈನ್ಯಸಹಿತ ಉತ್ತರ ಹಿಂದುಸ್ತಾನದಲ್ಲಿ ಇದ್ದರು. ಈ ಸಂಧಿಯು ಕೊಲ್ಹಾಪೂರಕರನಿಗೆ ಅನಾಯಾಸವಾಗಿ ಅನುಕೂಲಿಸಿತು. ಶ್ರೀಮಂತಸರಕಾರದ ಪ್ರದೇಶಗಳಲ್ಲಿ ತಾನು ಏನು ಮಾಡಿದರೂ, ತನ್ನನ್ನು ಪ್ರತಿಬಂಧಿಸುವವರು ಯಾರೂ ಇಲ್ಲವೆಂದು ತಿಳಿದು, ಆತನು

ಕೊಳೆಸುಲಿಗೆಗಳನ್ನು ಮಾಡಲುಪಕ್ರಮಿಸಿದನು; ಎಷ್ಟೋ ಕಿಲ್ಲೆಗಳನ್ನು ಹಿಡಕೊಂಡನು; ಪೇಶವೆಸರಕಾರದ ಕಂದಾಯವು ವಸೂಲಾಗದಂತಾಯಿತು. ಹೀಗೆ ಕೊಲ್ಹಾಪೂರಕರನ ಉಪಟಳವು ಹೆಚ್ಚುತ್ತ ನಡೆಯಿತು. ಇದೆಲ್ಲ ವೃತ್ತಾಂತವು ಪುಣೆಗೆ ತಲುಪಿತ್ತು. ನಾನಾನು ಈ ಬಂಡಾಯವನ್ನು ಮುರಿಯು ಲಿಕ್ಕೆ ಯತ್ನ ಮಾಡತಕ್ಕವನೇ? ಆದರೆ ಅವನು ಏನು ಮಾಡಿಯಾನು? ಆತನ ಎಡಗೈ-ಬಲಗೈಯಂತಿರುವ ಸರದಾರರೆಲ್ಲರು ಆಹವ ನಿಮಗ್ನರಾಗಿ ದ್ದರು. ಅದರಿಂದ ಅವನು ಯಾವ ಉಪಾಯವನ್ನು ಕೈಕೊಳ್ಳದೆ, ಶ್ರೀರಂಗ ಪಟ್ಟಣದ ಮುತ್ತಿಗೆಯ ಅವಸಾನಪರಿಣಾಮವನ್ನು ನಿರೀಕ್ಷಿಸುತ್ತಿದ್ದನು. ಕಡೆಗೆ ಶ್ರೀರಂಗಪಟ್ಟಣದ ದಾಳಿಯು ಮುಗಿದು, ತನ್ನ ಮನೋದಯದಂತೆ ಭೀಮಪರಾಕ್ರಮಿಯಾದ ಪರಶುರಾಮಭಾವು ಯಶಸ್ವಿಯಾಗಿ ಮರಳಿ ಬಂದ ನು; ವಿಜಯಶಾಲಿಯಾಗಿ ಬಂದ ಭಾವೂನ ದರ್ಶನಾಪೇಕ್ಷೆಯಿಂದಲೂ ಮತ್ತು ಕೊಲ್ಹಾಪುರಕರನನ್ನು ಮೆತ್ತಗೆ ಮಾಡುವದಕ್ಕಾಗಿ ಆತನನ್ನು ಸೈನ್ಯ ಸಹಿತ ಕಳಿಸಬೇಕೆಂಬುವ ಉದ್ದೇಶದಿಂದಲೂ ನಾನಾನು ನಮ್ಮ ಚರಿತ್ರ ನಾಯಕನನ್ನು ಸೈನ್ಯಸಹಿತ ಕರೆಸಿಕೊಂಡನು.

ಇತ್ತ ಭಾವು ಸೈನ್ಯಸಹವರ್ತಮಾನ ತಾಸಗಾಂವಿಯಿಂದ ಹೊರಟು ರಹಿಮತಪುರದಮೇಲಿಂದ ಪುಣೆಗೆ ಬಂದು ಮುಟ್ಟಿದನು. ಆತನ ದಂಡು ಮುಳಾ-ಮುಠಾ ಸಂಗಮದ ಬಳಿಗೆ ಬೀಡುಬಿಟ್ಟಿತು. ಭಾವು ಪೇಶವೆ--ನಾನಾ ಇವರಿಗೆ ಭೆಟ್ಟಿಯಾದನು. ಕೊಲ್ಹಾಪೂರಕರನ ಮೇಲೆ ದಾಳೀ ಮಾಡುವ ವಿಚಾರವು ನಿರ್ಧರವಾಯಿತು. ಆ ಸೈನ್ಯದ ಸರ್ವಾಧಿಪತ್ಯವನ್ನು ಭಾವು ಸ್ವೀಕರಿಸಬೇಕೆಂದು ಗೊತ್ತಾಯಿತು. ಕೂಡಲೆ ದರಬಾರು ನೆರೆದು ಸೇನಾ ಪತಿಯ ವಸ್ತ್ರ--ತಾಂಬೂಲಗಳು ಭಾವೂ.ಗೆ ಕೊಡಲ್ಪಟ್ಟವು. ಪೇಶವೆಸರಕಾ ರದ ಹುಜೂರಸೈನ್ಯದ ಕೆಲವು ಭಾಗವೂ, ಇಂಗ್ಲೀಷರ ಕೆಲವು ಪಲಟಣಿ ಗಳೂ ಆ ಸ್ವಾರಿಯ ಕೂಡ ಹೊರಡುವದು ನಿಶ್ಚಯವಾಯಿತು.

ಶ್ರೀಮಂತರ ಆಜ್ಞೆಯನ್ನು ಶಿರಸಾವಹಿಸಿ, ಭಾವು ತಾಸಗಾಂವಿಗೆ ಬಂದನು. ಕೂಡಲೆ ಆತನು ತನ್ನ ಹಿರೇಮಗನಾದ ರಾಮಚಂದ್ರರಾಯ ನಿಗೆ ಯುದ್ಧ-ಸಿದ್ಧತೆಯನ್ನು ಸತ್ವರದಿಂದ ಮಾಡಲಿಕ್ಕೆ ಆಜ್ಞಾಪಿಸಿದನು. ರಾಮಚಂದ್ರರಾಯನು ತನ್ನ ಯುದ-ಕೌಶಲ್ಯವನ್ನು ಅನೇಕ ಪ್ರಸಂಗಗ

ಳಲ್ಲಿ ಪ್ರಕಟಮಾಡಿದ್ದನು. ಶ್ರೀರಂಗಪಟ್ಟಣದ ಕಾಳಗದಲ್ಲಿ ಒಂದು ಸಂದರ್ಭದಲ್ಲಿ ಆತನು ಸ್ವತಂತ್ರ ಸೇನಾನಾಯಕತ್ವವನ್ನು ವಹಿಸಿ ಯಶ ಸಂಪಾದಿಸಿದ್ದನು. ಇದು ಹಿಂದಿನ ಪ್ರಕರ್ಣದಲ್ಲಿ ಹೇಳಿದ್ದು, ವಾಚಕರ ಸ್ಮರಣದಲ್ಲಿರಬಹುದು. " ಕೊಲ್ಹಾಪೂರ ದಾಳಿಯ ಕಾರ್ಯಭಾಗವನ್ನು ನನಗೆ ಒಪ್ಪಿಸರಿ, ನಾನು ಹಿರಿಯರ ಆಶೀರ್ವಾದದ ಪ್ರಭಾವದಿಂದ ಕರವೀರಕರನ್ನು ಎಬ್ಬಿಸಿರುವ ದಂಗೆಯನ್ನು 'ಹಾ, ಹಾ' ಅನ್ನುವಷ್ಟರಲ್ಲಿ ಮುರಿದು ಬರುವೆನು " ಎಂದು ಅಪ್ಪಾಸಾಹೇಬನು ಭಾವೂಗೆ ಗಂಟುಬಿದ್ದನು. ತನ್ನ ಶೂರ ಶಾರ್ದೂಲನಾದ ಮಗನು ಮಾಡಿಕೊಂಡ, ವೀರರಿಗನುರೂಪವಾದ ಬಿನ್ನಹವನ್ನು ಅಮಾನ್ಯಮಾಡುವದು ಭಾವುಗೆ ಸರಿದೋರಲಿಲ್ಲ. ಹೊಟ್ಟೆಯ ಮಕ್ಕಳ ಪರಾಕ್ರಮವನ್ನು ಕಣ್ಣಾರೆ ಕಂಡು, ಹರುಷಬಡುವ ಕುತೂಹಲವು ಅವರ ತಂದೆಯಲ್ಲಿ ಬಹಳ ಇರುತ್ತದೆ. ಇವೆಲ್ಲ ಕಾರಣಗಳಿಂದ ಭಾವು ಪ್ರಸ್ತುತ ದಾಳಿಯ ಕಾರ್ಯವನ್ನು ಅಪ್ಪಾಸಾಹೇಬನಿಗೊಪ್ಪಿಸಬೇಕು. ಆತನೇ ಅದನ್ನು ಕೊನೆಗಾಣಿಸಿ ಬಂದರಂತೂ ವಿಹಿತವೇ. ಇಲ್ಲದಿದ್ದರೆ ತಾನೇ ಸ್ವತ: ಹೋಗಬೇಕು ಎಂದು ವಿಚಾರಮಾಡಿ, ಆ ಸ್ವಾರಿಯ ಸರ್ವಭಾರವನ್ನು ತನ್ನ ಮಗನ ಮೇಲೆ ಹೊರಸಿದನು.

ಅಪ್ಪಾಸಾಹೇಬನು ತಂದೆಯ ಅಪ್ಪಣೆಯಂತೆ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ಸೈನ್ಯಸಹಿತ ಹೊರಟನು. ಮೊದಲನೇ ಮಜಲು ಕೊಲ್ಹಾಪುರದ ಬಳಿಯಲ್ಲಿ ಆಯಿತು; ಮುಂದೆ ಆ ದಂಡು ಹೊಳೆಯನ್ನು ದಾಟಿ ಆಳತೆ ಗ್ರಾಮದ ಸಮೀಪಕ್ಕೆ ಬಂದು ತಳವೂರಿತು. ಅಲ್ಲಿ ಅದು ಒಂದು ತಿಂಗಳವರೆಗೆ ನಿಂತುಕೊಂಡಿತು. ಕಡೆಗೆ ತೋಫುಗುಂಡುಗಳ ಹೊಡತವನ್ನು ಪ್ರಾರಂಭಿಸಿ ಅಸ್ಥಳವನ್ನು ಹಿಡಕೊಳ್ಳಬೇಕೆಂದು ಸರ್ವಾನುಮತದಿಂದ ನಿಶ್ಚಯವಾಯಿತು. ಆ ಪ್ರಕಾರ ಜನೋಬಾ ಯಾದವಾಡಕರನು ತೋಫುಖಾನೆಯನ್ನು ಸಜ್ಜುಮಾಡಿಕೊಂಡು ತೋಫುಗಳನ್ನು ಹಾರಿಸತೊಡಗಿದನು. ಇಂಗ್ಲೀಷ ಪಲಟಣದ ಜನರು ಸಾಹಸದಿಂದ ಊರೊಳಗೆ ನುಗ್ಗಿ ಪೇಟೆಯನ್ನು ಸುಲಿದರು. ಅಪ್ಪಾಸಾಹೇಬನು ಕೆಲವು ಶೂರಸರದಾರರೊಂದಿಗೆ ಶತ್ರುಗಳ ಮೇಲೆ ಸಾಗಿ ಹೋದನು. ಕೂಡಲೆ ಶಸ್ತ್ರಾಸ್ತ್ರಗಳ ಮಳೆಯು ಪ್ರಾರಂಭವಾಯಿತು. ಹಗೆಗಳು ಕಾದಿ ಕಂಗೆಟ್ಟರು. ಕೆಲವರು ಮರಣಹೊಂದಿದರು. ಹಲವರು ಗಾಸಿ

ಯಾಗಿ ನಿಃಶಕ್ತರಾದರು. ಉಳಿದವರೆಲ್ಲರು ಹಣ್ಣುಗಾಯಿ ನೀರಗಾಯಿಯಾಗಿ ಪಲಾಯನ ಹೇಳಿದರು.

ಆಳತೆಯ ಕಾಳಗದಲ್ಲಿ ತನ್ನ ಪಕ್ಷದ ಜನರು ಹೊಂದಿದ ದುರ್ದಶೆಯ ಸಮಾಚಾರವನ್ನು ಕೊಲ್ಹಾಪುರಕರನು ಕೇಳುತ್ತಲೆ, ಆತನು ಸರ್ಜೇರಾವ ಘಾಟಗೆ ಸರದಾರನನ್ನು ಸೈನ್ಯದೊಂದಿಗೆ ಕಳುಹಿಸಿಕೊಟ್ಟನು; ಕೂಡಿದಷ್ಟು ಹೊಸದಂಡು ಕೂಡಿಸುವದಕ್ಕೆ ದಿವಾಣ ರತ್ನಾಕರಪಂತನಿಗೆ ಆಜ್ಞಾಪಿಸಿದನು. ಸೈನ್ಯದ ಸರ್ವಾಧಿಪತ್ಯವನ್ನು ತಾನೇ ಸ್ವೀಕರಿಸಿ ಸೈನ್ಯಸಹಿತ ಕೊಲ್ಹಾಪುರದ ಅರಸನು ಜತ್ತೆಯ ಬಳಿಗೆ ಬಂದು ತಳವೂರಿದನು. ಅಷ್ಟರಲ್ಲಿ ಆ ಊರನ್ನು ಅಪ್ಪಾಸಾಹೇಬನು ಹಿಡಕೊಂಡು ಅಲ್ಲಿ ನಿಂತುಕೊಂಡಿದ್ದನು. ಅದನ್ನು ತಿಳಕೊಂಡು, ಕರವೀರಕರನು ತನ್ನ ದಂಡಿನಲ್ಲಿ ಎರಡು ತಂಡಗಳನ್ನು ಮಾಡಿ ಒಂದು ತುಕಡಿಯ ಆಧಿಪತ್ಯವನ್ನು ರತ್ನಾಕರಪಂತನಿಗೊಪ್ಪಿಸಿ ಮತ್ತೊಂದರ ಆಧಿಪತ್ಯವನ್ನು ತಾನೇ ವಹಿಸಿ ಯುದ್ಧಕ್ಕೆ ಹೊರಟನು. ಆ ಉಭಯ ಸೈನ್ಯದ ಜನರು ಅಪ್ಪಾಸಾಹೇಬನ ದಂಡನ್ನು ಮುತ್ತಿದರು. ಕೂಡಲೆ ತುಮುಲ ಯುದ್ಧವು ಪ್ರಾರಂಭವಾಯಿತು. ಶಸ್ತ್ರಾಸ್ತ್ರಗಳ ಖಣಾಖಣಾಟದಿಂದಲೂ, ಬಾಣಗಳ ಸಣಸಣಾಟದಿಂದಲೂ, ಆನೆಗಳ ಕೂಗಿನಿಂದಲೂ ಕುದುರೆಗಳ ಖುರಪುಟ ಧ್ವನಿಯಿಂದಲೂ, ಶೂರಸರದಾರರ ವೀರಶ್ರೀಯಿಂದಲೂ ಆ ಸಮರಾಂಗಣವು ಬಹು ಭಯಂಕರ ಸ್ವರೂಪವನ್ನು ಧರಿಸಿತು; ಮದ್ದಿನ ಹೊಗೆಯು ಆಕಾಶಮಂಡಲವನ್ನು ವ್ಯಾಪಿಸಿತು. ಅದರಿಂದ ನೋಡಿದೆತ್ತಲ್ಲ ಕತ್ತಲೆಯು ಕವಿದಂತಾಯಿತು. ಒಬ್ಬರಿಗೊಬ್ಬರು ಕಾಣದಾದರು. ತೋಫುಗುಂಡುಗಳ ಹೊಡತದಿಂದ ಹೊರಡುವ ಕಿಡಿಕಿಡಿಯಾದ ಬೆಳಕು ಮಿಂಚಿನಂತೆ ತೋರುತ್ತಿತ್ತು. ಅಪ್ಪಾಸಾಹೇಬನು ಮತ್ತು ಆತನ ಜತೆಯ ಸರದಾರರು ಬಹಳ ನಿಕರದಿಂದ ಕಾದಿದರು. ಅಸಹಾಯ ಶೂರರಾದ ಇಂಗ್ಲೀಷರು ಒಳ್ಳೇ ಹುರುಪಿನಿಂದ ಹೋರಾಡಿ, ಪಟವರ್ಧನ ಬಾಲದಿನಮಣಿಗೆ ಚನ್ನಾಗಿ ನೆರವಾದರು. ಆದರೆ ಶತ್ರು-ಸಂಖ್ಯೆಯು ಅಗಣಿತವಾಗಿತ್ತು. ಅದರಿಂದ ಯಶದ ಆಶೆಯು ತೋರಲಿಲ್ಲ. ಕೆಲವು ಆನೆ-ತೊಫುಗಳು ಹಗೆಗಳ ಹಸ್ತಗತವಾದವು. ಆಗ ಅಪ್ಪಾಸಾಹೇಬನು ಸಿಟ್ಟಿಗೆದ್ದ ಸಿಂಹದಂತೆ ಕೆಲವು ಸ್ವಾರರೊಡನೆ ಹಗೆಗಳ ಮೇಲೆ ಅತ್ಯಂತ ಆವೇಶದಿಂದ ಸಾಗಿಹೋಗಿ ಯುದ್ಧ ಮಾಡತೊಡಗಿದನು. ಆದರೂ ವ್ಯರ್ಥ. ಅಪ್ಪಾಸಾಹೇಬನ ತಲೆಗೆ

ಪೆಟ್ಟು ತಗಲಿ ಆತನು ಗಾಯಹೊಂದಿದನು. ಕಡೆಗೆ ಅವನು ತನ್ನ ದಂಡಿನ ಜನರಿಗೆ ಧೈರ್ಯ ಹೇಳುತ್ತ ಅವರೊಡನೆ ಶಿರಗಾಂವಕ್ಕೆ ಬಂದನು. ಮಹಾರಾಜನ ಸೈನಿಕರು ಬೆನ್ನುಹತ್ತಿ ಬಂದುದರಿಂದ ಅಲ್ಲಿಯೂ ಮುಂದಿನ ಸಿದ್ಧತೆಯನ್ನು ಮಾಡಿಕೊಳ್ಳುವದಕ್ಕೆ ಅವಕಾಶವಾಗಲಿಲ್ಲ. ಶಿರಗಾಂವದಲ್ಲಿ ಪುನಃ ಕಾಳಗವೆಸಗಿತು. ಅಂದಿನ ಯುದ್ಧದಲ್ಲಿ ಅಪ್ಪಾಸಾಹೇಬನೂ ಮತ್ತು ಆತನ ಕಡೆಯ ಸಕಲ ಸರದಾರರೂ, ಸ್ವಾರರೂ, ಅತ್ಯಂತ ತ್ವೇಷದಿಂದ ಕಾದುತ್ತ ತಮ್ಮ ಶೌರ್ಯದ ಶಿಖರವನ್ನು ಪ್ರಕಟಗೊಳಿಸಿದರು. ಶತ್ರುಪಕ್ಷದ ಅಸಂಖ್ಯ ಜನರು ರಣದೇವತೆಗಾಹುತಿಯಾದರು. ವಿಠ್ಠಲಧೊಂಡದೇವ ಮತ್ತು ಬಾಬಾ ಫಡಣವೀಸ ಮೊದಲಾದ ಪಟವರ್ಧನರ ಕಡೆಯ ಸರದಾರರು ಗಾಯ ಹೊಂದಿದರು. ಅಪ್ಪಾಸಾಹೇಬನು ತನಗೆ ಮೊದಲೇ ತಗಲಿದ ಪೆಟ್ಟಿನಿಂದ ಬಹಳ ಕಳವಳಗೊಂಡಿದ್ದನು. ಆದರೂ ಆ ಶೂರನು ಜೀವಿತದಾಶೆಯನ್ನು ತೊರೆದು ಹಗೆಗಳ ಮೇಲೆ ಸಾಹಸದಿಂದ ಸಾಗಿಹೋಗಿ, ಅತ್ತಕಡೆಯ ೧೫-೨೦ ಶೂರ ಜನರ ಕತ್ತನ್ನು ಕತ್ತರಿಸಿ ಚೆಲ್ಲಿದನು. ಕಟ್ಟಕಡೆಗೆ ಅಪ್ಪಾಸಾಹೇಬನು ಶತ್ರುಗಳ ನಡುವೆ ಒಬ್ಬನೇ ಸಿಕ್ಕನು. ಆಗ ಸರ್ಜೇರಾಯನು ಆತನನ್ನು ಚತುರ್ಭುಜಮಾಡಿ, ಪಲ್ಲಕ್ಕಿಯಲ್ಲಿ ಹಾಕಿಕೊಂಡು ಅರಸನ ಬಳಿಗೆ ಒಯ್ದನು. ಇದಲ್ಲದೆ ಪಟವರ್ಧನರ ಕಡೆಯ ಇನ್ನೂ ಕೆಲವು ಜನರು ಸೆರೆಯಾಳಾದರು. ಈ ಮೇರೆಗೆ ಅಪ್ಪಾಸಾಹೇಬನ ದಾಳಿಯ ಕೊನೆಯ ಪರಿಣಾಮವು ವಿಪರೀತವಾಯಿತು.

ಪ್ರಿಯಪುತ್ರನ ಪರಾಭವವು; ಮೇಲಾಗಿ, ಆತನು ವೈರಿಗಳ ಕೈಗೆ ಸಿಕ್ಕು ಅವರ ಸೆರೆಯಲ್ಲಿರುವನೆಂಬ ಈ ಸುದ್ದಿಯನ್ನು ಕೇಳಿ ಭಾವು ಬೆಂಕಿಯಾದನು. ಇತ್ತ ಅಪ್ಪಾಸಾಹೇಬನ ಗಾಯಗಳು ಮಾದು ಗುಣಮುಖವಾದ ಬಳಿಕ, ಮಹಾರಾಜನು ಆತನನ್ನು ಸತ್ಕರಿಸಿ ವಸ್ತ್ರಾಲಂಕಾರಭೂಷಣಗಳನ್ನು ಉಚಿತಕೊಟ್ಟು, ಆತನ ಅಪ್ರತಿಮ ಪ್ರತಾಪಕ್ಕೆ ಮೆಚ್ಚಿ ಐದು ಊರುಗಳನ್ನು ಇನಾಮು ಹಾಕಿಕೊಟ್ಟು ಆತನನ್ನು ಕಳಿಸಿಕೊಟ್ಟನು. ಇದರಿಂದಂತೂ ಭಾವುಗೆ ಹುಣ್ಣಿನ ಮೇಲೆ ಬರೆ ಕೊಟ್ಟಂತಾಯಿತು. ತನ್ನ ಮಾನಖಂಡನೆಗಾಗಿ ಕೊಲ್ಹಾಪುರದ ಅರಸನು ತನ್ನ ಮಗನನ್ನು ಈ ಪ್ರಕಾರ ಸನ್ಮಾನಿಸಿದನೆಂದು ಭಾವೂನ ಮನಸ್ಸಿನಲ್ಲಿ ಕಟಿಯಹತ್ತಿತು. ಶತ್ರು-ಸನ್ಮಾನವನ್ನು ಬಯಸುವದಕ್ಕಿಂತ "शूरस्य मरणं तृणं" ಎಂಬಂತೆ, ನಿಜಶೂರ

ನಾದವನಿಗೆ ಮರಣವೇ ಭೂಷಣವಾದದ್ದೆಂದು ಭಾವು ಅಪ್ಪಾಸಾಹೇಬನನ್ನು ಪರಿಪರಿಯಿಂದ ತಿರಸ್ಕರಿಸಿದನು; ಮತ್ತು ತನಗಾದ ಮಾನಚ್ಯುತಿಯ ಸೇಡು ತೀರಿಸಿಕೊಳ್ಳುವದಕ್ಕಾಗಿ ತಾನೇ ಸ್ವತಃ ಟೊಂಕಕಟ್ಟಿದನು. ಕೊಲ್ಹಾಪುರ ಕರನಿಗೆ ತನ್ನ ಬಾಹುಬಲವನ್ನು ಯಾವಾಗ ತೋರಿಸುವೆನೆಂದು ಆತನು ಆತುರಪಡತೊಡಗಿದನು. ಕರವೀರಕರನ ಮೇಲೆ ಮಾಡುವ ದಾಳಿಯ ವಿಚಾರವೇ ವಿಚಾರವು. ಅನ್ಯ ವಿಚಾರಗಳು ತೋಚದಂತಾದವು. ಆತನು ಯುದ್ಧದ ಸಂರಣೆಯನ್ನು ಬಹಳ ಜಾಗ್ರತೆಯಿಂದ ನಡೆಸಿದನು. ಗಂಗಾ ಧರಗೋವಿಂದನನ್ನು ಕರೆಸಿಕೊಂಡು, ಆತನೊಡನೆ ಕೆಲವು ದಂಡುಕೊಟ್ಟು ಭಾವು ಆತನನ್ನು ಮುಂದೆ ಕಳುಹಿದನು. ತನ್ನ ದ್ವಿತೀಯಪುತ್ರನಾದ ಬಾಬಾ ಸಾಹೇಬ, ಚಿಂತಾಮಣರಾವ ಸಾಂಗಲೀಕರ, ರಘುನಾಥ ನೀಲಕಂಠ ಕುರಂದವಾಡಕರ ಇತ್ಯಾದಿ ಶೂರರನ್ನು ಕೂಡಿಕೊಂಡು ಸೈನ್ಯಸಹಿತ ಭಾವು ಯುದ್ಧಕ್ಕೆ ಹೊರಟನು. ಪೇಶವೆಯ ಶೂರರಾದ ಗಾರ್ದಿಯ ಜನರು ತೋಫುಖಾನೆ ಸಹಿತ ಭಾವೂನ ಹಿಂದಿನಿಂದ ಹೊರಟು ಬಂದು ಆತನನ್ನು ಕೂಡಿಕೊಂಡರು. ಹೀಗೆ ಸಂಗ್ರಾಮಸನ್ನಾಹದೊಡನೆ ಭಾವು ಉದಗಾಂವ ದಲ್ಲಿ ಕೃಷ್ಣೆಯನ್ನು ದಾಟಬಂದು, ಅಲ್ಲಿಯೇ ಶತ್ರುಗಳ ಮೇಲೆ ಶಸ್ತ್ರಹಿಡಿದನು. ಪ್ರಥಮತಃ ಭಾವು ಉದಗಾಂವದ ಕಿಲ್ಲೆಯ ಸುತ್ತುಮುತ್ತು ಬಲವಾದ ಮೋರ್ಚೆಗಳನ್ನು ಕಟ್ಟಿಸಿ, ವೈರಿಗಳನ್ನು ಕೆಣಕಿದನು; ಅವರು ಭಾವೂನ ಮೇಲೆ ಸಾಗಿಬಂದರು. ಕೂಡಲೆ ಭಾವು ಚಿಗರೆಯ ಗುಂಪನ್ನು ಮುತ್ತುವ ಹುಲಿಯಂತೆ, ಶತ್ರುಗಳ ಮೇಲೆ ಮುಗಿಬಿದ್ದು ಅವರನ್ನು ಚದುರಿಸಿದನು. ಭಾವೂನ ಪ್ರಖರ ಶಸ್ತ್ರಪ್ರಹಾರವನ್ನು ಸಹಿಸುವ ತ್ರಾಣವಿಲ್ಲದೆ ಅವರು ಪಲಾಯನಸೂಕ್ತವನ್ನು ಜಪಿಸತೊಡಗಿದರು. ಉದಗಾಂವ ಕಾಳಗದ ಗೆಲ ವಿನಿಂದ ಪಟವರ್ಧನ ಸೈನಿಕರಲ್ಲಿ ಹೊಸ ಸ್ಫುರಣವು ಉತ್ಪನ್ನವಾಯಿತು. ಅವರು ಅಕ್ಕಪಕ್ಕದ ಎಲ್ಲ ಕಿಲ್ಲೆಗಳನ್ನು ಹಿಡಕೊಂಡರು; ಹಾದಿಗುಂಟ ಹತ್ತುವ ಕೊಲ್ಹಾಪುರಕರನ ಫಲದ್ರೂಪ ಪ್ರದೇಶಗಳನ್ನು ಹಾಳುಗೆಡವಿದರು. ವೈರಿ ಸರದಾರರ ಮತ್ತು ಆತನ ದಂಡಿನ ಜನರ ಪ್ರತಿರೋಧವನ್ನು ಲಕ್ಷ್ಯಕ್ಕೆ ತಾರದೆ, ಅವರನ್ನು ಗಾಸಿಗೊಳಿಸುತ್ತ ಭಾವು ತನ್ನ ವಿಜಯಶಾಲಿಯಾದ ಸೈನ್ಯದೊಂದಿಗೆ ಕೊಲ್ಹಾಪುರಕ್ಕೆ ಬಂದು ತಲ್ಪಿದನು. ರಾಜಧಾನಿಯನ್ನು ಮುತ್ತಿ ಅದರ ಮೇಲೆ ಭಾವೂನ ಸೈನಿಕರು ತೋಫುಗುಂಡುಗಳ ಮಳೆಗರೆ

ದರು. ಪಟ್ಟಣದೊಳಗಿನ ಭವ್ಯವಾದ ಮಂದಿರಗಳು ಧಡಧಡನೆ ನೆಲಕ್ಕುರುಳಿದವು. ಮಾರ್ಗಗಳು ಕಟ್ಟಾದವು. ತೋಫುಗುಂಡುಗಳ ಹೊಡತವಂತೂ ಸಹಿಸಲಸಾಧ್ಯವಾಯಿತು. ಕಡೆಗೆ ಶತ್ರುಸೈನ್ಯವು ರಾಜಧಾನಿಯನ್ನು ಬಿಟ್ಟು ಹೊರಬಿದ್ದಿತು.

ಶತ್ರುಗಳ ಯುದ್ಧ-ವಿಚಾರವು ಭಾವೂಗೆ ತಿಳಿದ ಕೂಡಲೆ, ಆತನು ತನ್ನ ಸೈನ್ಯದ ಜನರಿಗೆ ಬೇರೆ ಬೇರೆ ಕೆಲಸಗಳನ್ನು ಒಪ್ಪಿಸಿ, ತಾನು ಸ್ವತಃ ಟೊಂಕಕಟ್ಟಿ ದಂಡಿನವರಿಗೆ ಉತ್ತೇಜನವನ್ನು ಕೊಡುತ್ತ ಮುಂದೆ ಬಂದನು. ಆತನ ಪ್ರೋತ್ಸಾಹಜನಕ ಭಾಷಣದಿಂದಲೂ, ಆತನು ಸ್ವತ: ಮುಂದರೆದು ಯುದ್ಧಕ್ಕೆ ಎದುರಾದುದರಿಂದಲೂ, ಆತನ ಸೈನಿಕರು ಒಳ್ಳೇ ಆವೇಶದಿಂದ ‹ ಕೊಲ್ಲೋಣ ಇಲ್ಲವೇ ಸಾಯೋಣ › ಎಂದು ನಿರ್ಧರಮಾಡಿದರು. ಇಂಥ ಧೈರ್ಯದ ನಿರ್ಧಾರದಿಂದ ಯುದ್ಧ-ಸನ್ನದ್ಧರಾದ ಭಾವೂನ ಸೇನಾಜನರ ಮುಂದೆ ಕೊಲ್ಹಾಪುರಕರನ ಆಟವು ಸಾಗುವ ಬಗೆಯಾವದು? ರಾಜಧಾನಿಯ ಹತ್ತರವೇ ತುಮುಲ ಯುದ್ಧವು ಪ್ರಾರಂಭವಾಯಿತು. ಉಭಯದಳದ ವೀರರು ಬಹಳ ಈರ್ಷೆಯಿಂದಲೂ, ಯುಕ್ತಿಪ್ರಯುಕ್ತಿಯಿಂದಲೂ ಹೋರಾಡಿದರು. ಕಾಳಗವು ಒಳ್ಳೇ ನಿಕರದಿಂದ ನಡೆಯಲು, ಭಾವೂನ ಸೈನ್ಯದವರ ಹುರುಪು ಹೆಚ್ಚಿತು. ರಿಪುಪಕ್ಷದ ಜನರು ಹತವೀರ್ಯರಾಗಿ ಭಾವೂನ ಪ್ರಚಂಡಸೈನ್ಯದ ಮುಂದೆ ಅವರ ತೇಜವು ಬೀಳದಂತಾಯಿತು. ಕತ್ತಿ-ಡಾಲುಗಳ ಮತ್ತು ಫಿರಂಗಿ ಜನರ ಪ್ರಖರವಾದ ತೋಫುಗುಂಡುಗಳ ಹೊಡತವನ್ನು ಸಹಿಸುವದಸದಳವಾಯಿತು. ಅರಕ್ಷಣದಲ್ಲಿ ಭಾವೂನ ದಂಡಿನ ಜನರು ವೈರಿಗಳನ್ನು ಜೇರಿಗೆ ತಂದರು; ಹಗೆಗಳು ಕಾದಿ ಕಂಗೆಟ್ಟು ‹ ತ್ರಾಹಿ,› ‹ ತ್ರಾಹಿ › ಎಂದರು. ಅವರ ಕಡೆಯ ನಾಮಾಂಕಿತ ಸರದಾರರು ಒಬ್ಬರ ಹಿಂದೊಬ್ಬರು ಸಮರಭೂಮಿಯಲ್ಲಿ ‹ ಪಟ, ಪಟ ›ನೆ ಬಿದ್ದು ಹತರಾದರು. ಭೀಮಬಲನಾದ ಭಾವು ಮತ್ತು ರಣಶೂರರಾದ ಆತನ ಸರದಾರರು ಕೆರಳಿದ ಹುಲಿಯಂತೆ ಶತ್ರುಸೈನ್ಯವನ್ನು ಹೊಕ್ಕು ಕೈಗೆ ಸಿಕ್ಕವರ ಕತ್ತನ್ನು ಕತ್ತರಿಸಿ ಚೆಲ್ಲುತ್ತ ನಡೆದರು. ಅವರು ಹುಲಿಯಂತೆ ಹಗೆಗಳನ್ನು ಕೊಂದು ತಿನ್ನುವರೊ ಏನೋ ಎಂಬಂತೆ ಭಾಸವಾಯಿತು. ಅವರ ಮೈಯಲ್ಲ ರಕ್ತಮಯವಾಯಿತು. ಉಭಯ ದಳಗಳಲ್ಲಿ ರುಧಿರಪ್ರವಾಹವು ಹರಿಯಿತು. ಬಳಿಕ ಹಗೆಗಳು ಆಕಳದಂತೆ ಮೆತ್ತಗಾಗಿ ಜೀವದಾಶೆಯಿಂದ ಓಡಿಹೋಗಿ

ಪಟ್ಟಣವನ್ನು ಸೇರಿಕೊಂಡರು. ಕೂಡಲೆ ಭಾವೂನ ಜನರು ಪೇಶವೆಯರ ವಿಜಯಸೂಚಕ 'ಭಗವಾ' ಪತಾಕೆಯನ್ನು ರಾಜಧಾನಿಯ ಕೋಟೆಯ ಮೇಲೆ ನಿಲ್ಲಿಸಿದರು.* ಅಷ್ಟರಲ್ಲಿ ಅಲ್ಲಿಯ ಅರಸನು ಹತ್ತೆಸರಿಗೆ ಬಂದು ಒಪ್ಪಂದಕ್ಕೆ ಸಿದ್ಧನಾದನು. ಆಗ ಮಾತ್ರ ಕಾಳಗದ ಪ್ರಸಂಗವು ನಿಂತಿತು.

ಭಾವು ಮತ್ತು ಮಹಾರಾಜರ ನಡುವೆ ಬಹಳ ವಾದವಿವಾದ ನಡೆದು ಕಡೆಗೆ ಒಪ್ಪಂದದ ಶಾಸ್ತ್ರವಾಯಿತು. ಆ ಒಪ್ಪಂದದ ಮುಖ್ಯ ಶರ್ತುಗಳು ಯಾವವೆಂದರೆ:—

೧. ಕೊಲ್ಹಾಪುರಕರನು ಮುಂದೆ ಯಾವತರದ ಉಪದ್ರವವನ್ನು ಕೊಡ ಕೂಡದು.

೨. ಮೂರುಲಕ್ಷ ರೂಪಾಯಿ ಕಪ್ಪವನ್ನು ಕೊಡಬೇಕು.

೩. ಕಪ್ಪವು ಮುಟ್ಟುವತನಕ ತನ್ನ ಇಬ್ಬರು ಹೆಸರಾದ ಸರದಾರರನ್ನು ಭಾವೂನ ಸ್ವಾಧೀನ ಮಾಡಬೇಕು.

ಒಪ್ಪಂದದಲ್ಲಿ ಆಡಿ ಗೊತ್ತುಮಾಡಿದಂತೆ ಕರವೀರಕರನು ಉದಾಜಿರಾವ ಮತ್ತು ದೌಲತ್ತರಾವ ಗಾಯಿಕವಾಡ ಎಂಬ ತನ್ನ ಇಬ್ಬರು ಸರದಾರರನ್ನು ಭಾವೂನ ಸ್ವಾಧೀನಮಾಡಿದನು. ಮುಂದೆ ಭಾವು ಕೊಲ್ಹಾಪುರದ ಯುದ್ಧದ ಪರಿಣಾಮವನ್ನೂ, ಒಪ್ಪಂದದ ಶರ್ತುಗಳನ್ನೂ ಸವಿಸ್ತಾರವಾಗಿ ಪತ್ರ ಬರೆದು ಶ್ರೀಮಂತ ಪೇಶವೆ ಮತ್ತು ನಾನಾ ಇವರಿಗೆ ತಿಳಿಸಿ ತಾನು ಸೈನ್ಯ ಸಹಿತ ತಾಸಗಾಂವಿಗೆ ಬಂದನು.

ಇತ್ತ ಕೊಲ್ಹಾಪುರದ ಯುದ್ಧದಲ್ಲಿ ದೊರೆತ ಗೆಲವಿನ ಸುದ್ದಿಯು ಪುಣೆಗೆ ತಲ್ಪಿತು; ಆಗ ನೋಡಿದತ್ತೆಲ್ಲ ಆನಂದಪ್ರದರ್ಶನವು ಗೋಚರವಾಗ ಹತ್ತಿತು. ಸರ್ವರೂ ಭಾವೂನ ಪರಾಕ್ರಮಗುಣಗಣವನ್ನು ಶ್ಲಾಘಿಸಿದರು ವಿಶಾಲವಾದ ಆಕಾಶಮಂಡಲದಲ್ಲಿ ಸೂರ್ಯನ ತೇಜವು ಪ್ರಕಾಶಿಸುವಂತೆ, ಪೇಶವಾಯಿಯಲ್ಲಿ ಭಾವೂನ ಪರಾಕ್ರಮಪ್ರಕಾಶವು ಪ್ರಜ್ವಲಿಸತೊಡಗಿತು. ಪರಶುರಾಮಪಂತಭಾವು ಪಟವರ್ಧನ ಮತ್ತು ಹರಿಪಂತ ಫಡಕೆ ಇವರಿಬ್ಬರು ಪೇಶವೆ ಸಾಮ್ರಾಜ್ಯದ ಆಧಾರಸ್ತಂಭರೆಂದು ಎಲ್ಲರೂ ಅನ್ನಹತ್ತಿದರು.

* ಈ ವಿಜಯಧ್ವಜವನ್ನು ಭಾವೂನ ಊಳಿಗದಲ್ಲಿದ್ದ ಧಾಯಗುಡೆ ಎಂಬ ಸರದಾರನು ನಿಲ್ಲಿಸಿದನೆಂದು ಜನ ಕೇಳಿಕೆಯಲ್ಲುಂಟು.

ನಾನಾನಲ್ಲಿದ್ದ ಜನರ ಗುಣಪರೀಕ್ಷಾಬುದ್ಧಿಯು ಅದ್ವಿತೀಯವಾದದ್ದು. ಆತನು ಭಾವೂನನ್ನು ಮೊದಲಿನಿಂದ ಪ್ರೀತಿಸುತ್ತಿದ್ದನು. ಕೊಲ್ಹಾಪುರದ ಕಾಳಗದ ಗೆಲವಿನಿಂದ ನಾನಾನ ಪ್ರೀತಿಯು ಮತ್ತಿಷ್ಟು ಹೆಚ್ಚಿತು. ಉತ್ತರ ಹಿಂದುಸ್ತಾನದಲ್ಲಿ ಶಿಂದೆ, ಹೋಳಕರರ ಪರಾಕ್ರಮವು ಮೆರೆಯುತ್ತಿರುವಂತೆ, ಭಾವೂನ ಅಪ್ರತಿಮ ಪ್ರತಾಪ-ಪ್ರಭಾಕರನು ಕರ್ನಾಟಕಪ್ರಾಂತದಲ್ಲಿ ಪ್ರಜ್ವಲಿಸತೊಡಗಿದನು; ಆತನ ಪರಾಕ್ರಮಕ್ಕೆ ಆ ಪ್ರಾಂತದ ರಾಜರೆಲ್ಲರು ಭಯಭೀತರಾಗಿ ತಲೆ ಎತ್ತದಂತಾದರು. ಹೀಗೆ ಬಹು ದಿವಸದಿಂದ ಕರ್ನಾಟಕದಲ್ಲಿ ಬೆಳಗುತ್ತಿದ್ದ ಭಾವೂನ ತೇಜವು ಉತ್ತರೋತ್ತರ ವಿಸ್ತೃತವನ್ನು ಹೊಂದುತ್ತ ಶ್ರೀಮಂತರ ಸನ್ನಿಧಿಯನ್ನು ಸಾರಿ, ಅಲ್ಲಿಯೇ ಆತನ ಆಮರಣ ವಾಸವಾಡಿತು. ಹೀಗೆ ಭಾವೂನ ಅಭ್ಯುದಯವು ದಿನದಿನಕ್ಕೆ ಅಭಿವೃದ್ಧಿಯಾದ ಸುರಸ ಕಥಾಭಾಗವನ್ನು ನಾವು ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

---

## ೧೦ನೇ ಅಧ್ಯಾಯ.

### ನಿಜಾಮನ-ಪರಾಜಯ

ಭುಜಬಲಪರಾಕ್ರಮಿಗಳೂ, ರಾಜಕಾರ್ಯಧುರಂಧರರೂ, ಪರಮಪ್ರತಿಷ್ಠಿತರೂ ಆದ ಪುರುಷಶ್ರೇಷ್ಠರು ತಮ್ಮ ದೇಶಕಲ್ಯಾಣ, ಪ್ರಭುಸೇವೆಗಳ ದಾಸಾನುದಾಸರೆಂದು ಹಿರಿಯರು ಹೇಳುವ ಅನುಭವದ ಮಾತು ಸತ್ಯವಾದದ್ದು. ಇಂಥ ಮಹಾತ್ಮರಿಗೆ ತಿಲಾರ್ಧವಾದರೂ ವಿಶ್ರಾಂತಿಯಿರುವದಿಲ್ಲ. ಒಂದು ಕಾರ್ಯಭಾಗವನ್ನು ಸಾಂಗಮಾಡುವಷ್ಟರಲ್ಲಿ ಮತ್ತೊಂದು ಉಪಸ್ಥಿತವಾಗುವದು. ಅದನ್ನು ಕಡೆಗಾಣಿಸುವಷ್ಟರಲ್ಲಿ ಮೂರನೇ ಕಾರ್ಯವು 'ದತ್ತ' ಎಂದು ಮುಂದೆ ನಿಲ್ಲುವದು. ಹೀಗೆ ಹನುಮಂತನ ಬಾಲದಂತೆ ಕಾರ್ಯಪರಂಪರೆಗಳ ಮಾಲಿಕೆಯು ಹಬ್ಬುವದು. ಸ್ವಂತಕರ್ತವ್ಯವನ್ನು ಯಥಾಯೋಗ್ಯ ಸಾಂಗಮಾಡುವದರಿಂದ ಅವರ ಮನಸ್ಸಿಗೆ ಒಂದು ಬಗೆಯ ಸಮಾಧಾನವಾಗುವದು. ಅದೇ ಅವರ ಸುಖವು; ಮತ್ತು ಜನಸಮುದಾಯವು

'ಸೈ ಸೈ' ಎಂದು ಹೊಗಳುವದೇ ಅವರ ಆನಂದವು. ಅವರು ತಮ್ಮ ರಾಜ್ಯ ರೂಪ ನೌಕೆಯ ನಾವಿಕರಂತಿರುವರು. ಬಂಡಾಯ, ದಂಗೆ, ಪರಚಕ್ರ, ರಾಜ್ಯಕ್ರಾಂತಿ ಇತ್ಯಾದಿ ಅನೇಕ ದುರ್ಘಟ ಸಂಕಟಗಳೊಳಗಿಂದ ಆ ಸಾಮ್ರಾಜ್ಯರೂಪ ನೌಕೆಯನ್ನು ಸುರಕ್ಷಿತವಾಗಿ ಪಾರುಮಾಡುವದೇ ಅವರ ಕರ್ತವ್ಯಕರ್ಮವು. ಸರ್ವಜನರ ದೃಷ್ಟಿಯು ಅವರ ನಡೆನುಡಿಗಳ ಕಡೆಗೇ ಇರುವದು. ರಾಷ್ಟ್ರಹಿತವು ಅವರ ಕರ್ತೃತ್ವಶಕ್ತಿಯನ್ನೂ ಸ್ವೀಕೃತಕಾರ್ಯ ಕರ್ಮಗಳಲ್ಲಿ ಅವರು ಹೊಂದುವ ಯಶಸ್ಸನ್ನೂ ಪೂರ್ಣವಾಗಿ ಅವಲಂಬಿಸಿರುತ್ತದೆ. ಸಕಲ ನವನಾಗರಿಕರು ಅವರ ನಡೆನುಡಿಗಳನ್ನು ಅನುಕರಣ ಮಾಡಲು ಆತುರಪಡುವರು. ಹೀಗೆ ಆ ಮಹೋದಯರು ಲೋಕಮಾನ್ಯತೆಯನ್ನು ಹೊಂದಿ ಅಖಂಡ ಕೀರ್ತಿಯನ್ನು ಹೊಂದುವರು. ಅವರ ವಿಶುದ್ಧವಾದ ಆಚಾರ-ವಿಚಾರಗಳು ಮುಂದಿನ ಪೀಳಿಗೆಯ ಜನರು ತೀಡುವ ಕಿತ್ತೆಯಂತಿರುವವು. ನಾವು ಯಾವಕಾಲದ ವಿಷಯವಾಗಿ ಕಥನಮಾಡುತ್ತಿರುವೆವ್ರೋ, ಆ ಕಾಲದಲ್ಲಿ ಮಹಾರಾಷ್ಟ್ರರಾಜ್ಯದ ಈ ಬಗೆಯ ಸಂಪೂರ್ಣಭಾರವನ್ನು ವಹಿಸಲು ಅರ್ಹರಾದ ಮಹಾಪುರುಷರಲ್ಲಿ ನಮ್ಮ ಚರಿತ್ರನಾಯಕನು ಒಬ್ಬನಾಗಿರುವನು. ಆತನ ಜೀವಕ್ಕೆ ವಿಶ್ರಾಂತಿ ಎಂಬುವದೇ ಇದ್ದಿಲ್ಲ. ವಿಸ್ತೃತವಾದ ಪೇಶವೆ ಸಾಮ್ರಾಜ್ಯದಲ್ಲಿ ಎಲ್ಲಾದರೂ ಶತ್ರುಗಳು ತಲೆ ಎತ್ತಿದರೆಂದರೆ, ಕೂಡಲೆ ಅವರ ಪಾರುಪಾತ್ಯ ಮಾಡಿಬರುವದಕ್ಕೆ ಭಾವೂಗೆ ಆಜ್ಞೆಯಾಗುತ್ತಿತ್ತು. ಆಗ್ಗೆ ಪೇಶವೆಸರಕಾರದಲ್ಲಿ ನಾನಾಫಡಣವೀಸನ ಗೌರವವು ವಿಶೇಷವಾಗಿತ್ತು; ಭಾವೂನ ಮೇಲೆ ನಾನಾನ ಮಮತೆಯು ಅತ್ಯಂತವಾಗಿದ್ದದರಿಂದ ನಾನಾನು ಸೂಕ್ಷ್ಮ, ವಿಶ್ವಾಸದ ಮತ್ತು ಮಹತ್ವದ ಎಲ್ಲ ರಾಜಕೀಯ ಕೆಲಸಗಳನ್ನು ಭಾವೂಗೆ ಒಪ್ಪಿಸುತ್ತಿದ್ದನು. ಭಾವು ನಾನಾನ ಅರ್ಧವಚನದಲ್ಲಿ ಇರುತ್ತಿದ್ದನು; ಆತನು ಆ ಸಚಿವಶಿರೋಮಣಿಯ ಇಚ್ಛೆಯಂತೆ ವರ್ತಿಸಲು ಸರ್ವದಾ ಸಿದ್ಧನು. ಕಾರಣ ಮಹನೀಯರಾದ ಅವರಿಬ್ಬರ ಪರಸ್ಪರ ಪ್ರೇಮವು ಅಭಿವೃದ್ಧಿಯಾದುದಲ್ಲದೆ, ಆ ಉಭಯ ಪುರುಷಶ್ರೇಷ್ಠರ ಅಭ್ಯುದಯವು ಶುಕ್ಲಪಕ್ಷದ ಚಂದ್ರನಂತೆ ಹೆಚ್ಚುತ್ತ ನಡೆಯಿತು. ಇರಲಿ.

ಹಿಂದಿನ ಪ್ರಕರ್ಣದಲ್ಲಿ ಹೇಳಿದಂತೆ ಕೊಲ್ಹಾಪುರದ ದಾಳಿಯನ್ನು ಮುಗಿಸಿಕೊಂಡು ಭಾವು ಯಶಸ್ವಿಯಾಗಿ ಮರಳಿ ತಾಸಗಾಂವಿಗೆ ಬಂದನು; ಅವನು ಅಲ್ಲಿಗೆ ಬಂದು ಬಹಳ ದಿವಸಗಳು ಸಹ ಆಗಿದ್ದಿಲ್ಲ. ಅಷ್ಟರಲ್ಲಿ

ಆತನು ಸೈನಸಹಿತ ಪುಣೆಗೆ ಹೊರಟು ಬರಬೇಕೆಂದು ಭಾವೂಗೆ ನಾನಾಫ ಡಣವೀಸನ ಪತ್ರವು ಬಂದು ತಲ್ಪಿತು. ಅದರ ವಿವರವೇನಂದರೆ:—

ಬಲಾಢ್ಯನಾದ ಮಹದಾಜಿ ಶಿಂದೆಯು ಸ್ವಪರಾಕ್ರಮದ ಬಲದಿಂದ ಉತ್ತರಹಿಂದುಸ್ತಾನದಲ್ಲಿ ಅನೇಕಾನೇಕ ಚಿಕ್ಕ ದೊಡ್ಡ ಪ್ರದೇಶಗಳನ್ನು ಪಾದಾಕ್ರಾಂತ ಮಾಡಿಕೊಂಡನು. ಜಾತ್ಯಾಶೂರರಾದ ರಜಪೂತ ರಾಜರನ್ನು ಗೆದ್ದು ಅವರನ್ನು ಪೇಶವೆಯರ ಮಾಂಡಲಿಕ ಅರಸರನ್ನು ಮಾಡಿದನು. ದಿಲ್ಲಿ ಯವರೆಗೆ ಸಾಗಿಹೋಗಿ ಅಲ್ಲಿಯ ಬಾದಶಹನಿಗೆ ಒಳ್ಳೇ ಸಹಾಯಮಾಡಿ ಆತನ ಪ್ರೀತಿಗೆ ಪಾತ್ರನಾದನು. ಸಂತುಷ್ಟನಾದ ದಿಲ್ಲೀಶ್ವರನು ಮರಾಠಾ ಸ್ವಾಮಿತ್ವವನ್ನು ಒಪ್ಪಿಕೊಂಡು ಮಹದಾಜಿಯನ್ನು ಚನ್ನಾಗಿ ಸತ್ಕರಿಸಿದನು. ಹೀಗೆ ಮಹದಾಜಿಯು ಮೊಗಲಬಾದಶಹನನ್ನು ಒಲಿಸಿಕೊಂಡು, ಆತನ ಕೃಪೆಯಿಂದ ಸಾರ್ವಭೌಮಾಧಿಪತ್ಯದ ಮುಖ್ಯ ಪ್ರತಿನಿಧಿತ್ವದ ನೂತನ ಪದ ವಿಯನ್ನೂ (ವಕೀಲ ಮುತಲಖ) ಮತ್ತು ಪಾಲಕಿಯ ಬಹುಮಾನವನ್ನೂ ತನ್ನೊಡೆಯಾದ ಪೇಶವೆಯನ ಸಲುವಾಗಿ ಸಂಪಾದಿಸಿದನು. ಮಹದಾಜಿಯು ಬಲ್ಲದ ಬಂಟನಿದ್ದಂತೆ ಒಳ್ಳೇ ಹೆಸರಾದ ಮುತ್ಸದ್ದಿಯೂ ಇದ್ದನು. ಅವನ ರಾಜಕಾರಸ್ಥಾನ ವಿಚಾರವು ಅಗಮ್ಯವಾದದ್ದು. ಅವನು ಮರಾಠಾ-ಸಾಮ್ರಾ ಜ್ಯದಲ್ಲಿ ಬ್ರಾಹ್ಮಣರ ವರ್ಚಸ್ಸು ಬೆಳೆಯಹತ್ತಿದ್ದನ್ನು ನೋಡಿ ಸೇರುತ್ತಿದ್ದಿಲ್ಲ. ಆತನ ಮನಸ್ಸಿನಲ್ಲಿ ಪೇಶವೆ ಸಾಮ್ರಾಜ್ಯದ ದೌಲತ್ತಿನ ಕಾರಭಾರವನ್ನೂ ಮುಖ್ಯ ದಿವಾಣಗಿರಿಯನ್ನೂ ತಾನು ಮಾಡಬೇಕೆಂಬ ಮಹತ್ವಾಕಾಂಕ್ಷೆಯು ಬಹು ದಿವಸದಿಂದ ಇತ್ತು. ಆದರೂ ಅವನು ಅದನ್ನು ತೋರ್ಪಡಿಸದೆ, ವಿಪ್ರವರ್ಗ ಪ್ರಮುಖನಾದ ನಾನಾಫಡಣವೀಸನ ಕೂಡ ಬಹಳ ನಯಭಯ ದಿಂದ ನಡೆದುಕೊಳ್ಳುತ್ತಿದ್ದನು; ಹೀಗಿದ್ದರೂ ನಾನಾನ ವಿಷಯವಾಗಿ ಶಿಂದೇನ ಮನಸ್ಸು ಕಲುಷಿತವಾಗಿತ್ತು. ಇಂಗಿತಜ್ಞನಾದ ನಾನಾನಿಗೆ ಇದೆಲ್ಲ ಗೊತ್ತು ಇದ್ದೇ ಇತ್ತು. ಅವನು ಶಿಂದೇನ ಉತ್ಕರ್ಷವನ್ನು ಸೈರಿಸನು. ಆತನು ದಿಲ್ಲಿಯ ಕಡೆಗೆ ತನ್ನ ಬಾಹುಬಲವನ್ನು ತೋರಿಸಿ ಪ್ರತಿಷ್ಠೆಯನ್ನು ಹೊಂದಿ "ವಕೀಲ ಮುತಾಲಖ" ಇತ್ಯಾದಿ ಗೌರವದ ಬಿರದುಗಳನ್ನು ಸಂಪಾದಿಸಿ ಕೊಂಡು ಬಂದದ್ದು ನಾನಾನಿಗೆ ರುಚಿಸಲಿಲ್ಲ. ಇರಲಿ. ಮೇಲೆ ಹೇಳಿದ ಪ್ರಕಾರ ಮಹದಾಜಿಯು ಉತ್ತರಹಿಂದುಸ್ತಾನದಲ್ಲಿ ಜಯಜಯಕಾರವನ್ನು ಹೊಂದಿ, ದಿಲ್ಲೀಶ್ವರನಿಂದ ದೊರೆತ 'ವಕೀಲ ಮುತಾಲಖ' ಪದದ ವಸ್ತ್ರ-

ಶಸ್ತ್ರ-ವಾಹನ-ಮುದ್ರೆಗಳನ್ನೂ, ಪಲ್ಲಕ್ಕಿ-ಆನೆ-ಸನದು ಮುಂತಾದವುಗಳನ್ನೂ ತೆಗೆದುಕೊಂಡು ರಾಜಧಾನಿಗೆ ಬಂದು ಮುಟ್ಟಿದನು. ಆತನು ದಿಲ್ಲಿಯ ಸಾರ್ವಭೌಮ ರಾಜನಿಂದ ದೊರಕಿಸಿದ 'ವಕೀಲ ಮುತಾಲಖ' ಪದವಿ ಇತ್ಯಾದಿ ಬಹುಮಾನಗಳನ್ನು ಶ್ರೀಮಂತರಿಗೆ ಸಮರ್ಪಿಸುವದಕ್ಕಾಗಿ ಉತ್ತರಹಿಂದುಸ್ಥಾನದಿಂದ ಬಂದಿರುವನೆಂದು ಜನರು ತರ್ಕಿಸಿದರು. ಜನರ ಈ ತರ್ಕವು ಸ್ವಲ್ಪ ದಿಟವಿದ್ದರೂ, ಆತನ ಅಂತರಂಗ ಮನೋದಯವು ಬೇರೆ ಇತ್ತು. "ಶ್ರೀಮಂತ ಸವಾಯಿಮಾಧವರಾಯರು ಅಲ್ಪ*ವಯಸ್ಕರು; ಅವರಿಗೆ ನಾನು ಸಂಪಾದಿಸಿದ ಬಹುಮಾನಗಳನ್ನು ಅರ್ಪಿಸಿದರೆ ಅವರು ಸುಪ್ರಸನ್ನರಾಗುವರು. ಮುಂದೆ ಕಾಲಕ್ರಮದಿಂದ ಅವರ ಮನವಲಿಸಿಕೊಂಡು ಯಾವತ್ತು ರಾಜ್ಯಸೂತ್ರವನ್ನು ನನ್ನ ಕೈಯಲ್ಲಿ ತಕ್ಕೊಂಡು ಕಾರಭಾರ ಮಾಡಬೇಕು." ಇತ್ಯಾದಿ, ಸ್ವಾರ್ಥ-ವಿಚಾರವು ಮಹದಾಜಿಯ ತಲೆಯಲ್ಲಿ ಸಂಚರಿಸುತ್ತಿತ್ತು. ಇದೇ ಉದ್ದೇಶದಿಂದ ಅವನು ತನ್ನ ದಂಡುಮಾರ್ಬಲದೊಡನೆ ಪುಣೆಗೆ ಬಂದಿದ್ದನು. ಮರ್ಮಜ್ಞನಾದ ನಾನಾನಿಗೆ ಶಿಂದೇನ ಅಂತಸ್ಥ ಉದ್ದೇಶವು ತಿಳಿಯದೇ ಉಳಿಯಲಿಲ್ಲ. ಅಂತರಂಗತಃ ಶತ್ರು-ಸ್ವರೂಪನಾದ ಮಹದಾಜಿಯ ಆಗಮನದಿಂದ ನಾನಾಫಡಣವೀಸನು ಭಯವಿಹ್ವಲನಾದನು. ಇವೆಲ್ಲ ಕಾರಣಗಳಿಂದ ಆ ಚತುರ ದಿವಾಣನು ಇಂಥ ಪ್ರಸಂಗದಲ್ಲಿ ತನ್ನ ಜೀವದ ಗೆಳೆಯನಾದ ಭಾವು ತನ್ನ ಹತ್ತರ ಇರುವದು ವಿಹಿತವೆಂದೆಣಿಸಿ, ಆತನಿಗೆ ದಂಡು ಸಹಿತ ಹೊರಟು ಬರಲಿಕ್ಕೆ ಪತ್ರಬರೆದನು. ಅದರಂತೆ ಭಾವು ತಾಸಗಾಂವಿಯಿಂದ ಹೊರಟು ಪುಣೆಗೆ ಬಂದು ನಾನಾಫಡಣವೀಸನನ್ನು ಕಂಡುಕೊಂಡನು.

ಇತ್ತ ಶ್ರೀಮಂತರಿಗೂ ಶಿಂದೇನಿಗೂ ಪರಸ್ಪರ ಭೆಟ್ಟಿಯಾಯಿತು. ಪೇಶವೆ ಸವಾಯಿಮಾಧವರಾಯರು ಮಹದಾಜಿಯ ಸವಿಸವಿಯ ಮಾತುಗಳಿಗೂ, ಮುಖಸ್ತುತಿಗೂ, ಆತನ ಪರಾಕ್ರಮಕ್ಕೂ ಮತ್ತು ಆತನ ವೈಭವಕ್ಕೂ ಮೋಹಿತರಾದರು. ಆ ಉತ್ತರಹಿಂದುಸ್ಥಾನದ ಮಾಂತ್ರಿಕನ ಅಂತರಂಗವನ್ನು ತಿಳಿಯದೆ ಆತನ ಹೊರಗಿನ ಆಡಂಬರ, ಮಧುರಭಾಷಣಗಳಿಗೆ ಮರಳುಗೊಂಡು, ವಕೀಲ ಮುತಾಲಖ ಪದವಿಯನ್ನು ಅಂಗೀಕರಿಸಲು, ದೀರ್ಘದೃಷ್ಟಿಯಿಲ್ಲದ ಶ್ರೀಮಂತರು ಒಪ್ಪಿಕೊಂಡರು. ಆಗ ಶಿಂದೇನ ಅಂತ

* ಆಗ್ಗೆ ಸವಾಯಿಮಾಧವರಾಯರು ೧೯ ವರುಷದವರಿದ್ದರು.

ರಂಗವನ್ನು ತಿಳಿದ ನಾನಾನು ಸವಾಯಿಮಾಧವರಾಯರಿಗೆ ಪರಿಪರಿಯಿಂದ ಹೇಳಿನೋಡಿದನು. ಆದರೂ ವ್ಯರ್ಥ.

ವಾಚಕರೇ, ಇಲ್ಲಿ ಶಿಂದೆ ಮಹದಾಜಿಯು ಶ್ರೀಮಂತರಿಗೆ ತಾನು ಉತ್ತರಹಿಂದುಸ್ತಾನದಿಂದ ತಂದ ಬಹುಮಾನಗಳನ್ನು ಸಮರ್ಪಿಸುವದ ಕ್ಕಾಗಿ ಮಾಡಿದ ಅಪೂರ್ವ ಸಮಾರಂಭದ ಸಂಕ್ಷಿಪ್ತ ವರ್ಣನೆಯನ್ನು ಕೊಡ ಬೇಕೆಂದು ನಾವು ಯೋಚಿಸಿರುತ್ತೇವೆ. ಇದೆಲ್ಲರಲ್ಲಿ ನಮ್ಮ ಚರಿತ್ರನಾಯಕನ ಅಂಗವಿರದಿದ್ದರೂ, ಆ ಅಮೌಘ ಉತ್ಸವಸಮಯದಲ್ಲಿ ಭಾವು ಪುಣೆಯಲ್ಲಿ ಯೇ ಇದ್ದುದರಿಂದ, ಆತನು ಶ್ರೀಮಂತರ ಸಂಗಡ ಸಂಪೂರ್ಣ ವೈಭವ ದೊಂದಿಗೆ ಮೆರವಣಿಗೆಯೊಡನೆ ಹೊರಟು ಶಿಂದೇನ ಶಿಬಿರಕ್ಕೆ ಬಂದದ್ದು ಇತ್ಯಾದಿ ಸಂಗತಿಗಳಿಂದ ವಾಚಕವರ್ಗಕ್ಕೆ ಆ ಕಾಲಕ್ಕೆ ಆತನಿಗಿದ್ದ ರಾಜ ಸನ್ಮಾನ-ವೈಭವ ಮುಂತಾದವುಗಳು ಗೊತ್ತಾಗುವವು.

ಇತ್ತ, ತರುಣ ಪೇಶವೆಯು ತನ್ನ ಬಿನ್ನಹಕ್ಕೆ ಒಪ್ಪುತ್ತಲೆ, ಮಹದಾ ಜಿಯು ಅದ್ಭುತ ಸಮಾರಂಭವನ್ನು ಹೂಡಿದನು. ಶ್ರೀಮಂತರ ವಾಡೆಯಿಂದ ತನ್ನ ಶಿಬಿರದವರೆಗೆ ಜರತಾರಿಯ ಮಕಮಲಗಳನ್ನು ಹಾಸಿಸಿದ್ದನು. ಶ್ರೀಮಂತರಗೋಸ್ಕರ ಅತ್ಯಂತ ಸುಂದರವಾದ ಸಿಂಹಾಸನವನ್ನು ಸಿದ್ಧಮಾಡಿ ಸಿದ್ದನು. ಅವನ ಸೈನಿಕರ ಅಲಂಕಾರಗಳನ್ನು ಬಣ್ಣಿಸುವದೇ ಅಶಕ್ಯವು. ಎಲ್ಲ ಸಿದ್ಧತೆಯಾದ ಬಳಿಕ ಶಿಂದೆಯು ಶ್ರೀಮಂತರನ್ನು ಕರೆಯಲು ಸ್ವತಃ ಬಂದನು. ಕೂಡಲೆ ಶ್ರೀಮಂತ ಸವಾಯಿಮಾಧವರಾಯರು ಸಂಪೂರ್ಣ ರಾಜವೈಭವಸಮೇತ ವಿನಾಯಕ ಗಜಾರೂಢರಾಗಿ ವಾಡೆಯಿಂದ ಹೊರಟರು. ಅವರ ಸಂಗಡ ಅಪ್ಪಾ ಬಳವಂತ, ನಾರೋಪಂತ ಚಕ್ರದೇವ, ಬೆಹರೆ ವಿಂಚೂರಕರ ಇತ್ಯಾದಿ ಸರದಾರಸಮೂಹವು ಹೊರಟಿತು. ನಾನಾಫಡಣ ವೀಸನು ಮನಸ್ಸಿರದಿದ್ದರೂ ನಿಮಿತ್ಯಮಾತ್ರಕ್ಕೆ ಶ್ರೀಮಂತರ ಕೂಡ ಹೊರ ಟಿದ್ದನು. ಆತನ ಮುಖಮುದ್ರೆಯಲ್ಲಿ ಅಷ್ಟೊಂದು ಉಲ್ಹಾಸವೃತ್ತಿಯು ಇದ್ದಿಲ್ಲ. ಆತನು ಆನೆಯ ಮೇಲೆ ಅಂಬಾರಿಯಲ್ಲಿ ವಿರಾಜಮಾನನಾಗಿದ್ದನು. ಶ್ರೀಮಂತರು ಕೂತ ವಿನಾಯಕ ಗಜವು ಮುಂದೆ; ಅದರ ಹಿಂದೆ ನಾನಾನ ಆನೆಯು; ಬಳಿಯಲ್ಲಿಯೇ ಸುಶೋಭಿತವಾದ ಆನೆಯ ಮೇಲೆ ದಿವ್ಯತರವಾದ ಅಂಬಾರಿಯಲ್ಲಿ, ನಾನಾನ ಕಂಠಮಣಿ, ಪೇಶವಾಯಿಯ ಆಧಾರಸ್ತಂಭ,

ಸಕಲ ಸರದಾರರ ಶಿರೋಭೂಷಣ ಮತ್ತು ಪಟವರ್ಧನ ಕುಲದೀಪಕನಾದ ಪರಶುರಾಮಭಾವು ವೀರಾಸನ ಹಾಕಿಕೊಂಡು ಕೂತಿದ್ದನು. ಫಡಕೆ, ಶಿಂದೆ ಇತ್ಯಾದಿ ಸರದಾರರು ಗಜಾರೂಢರಾಗಿ ಸಂಗಡ ನಡೆದಿದ್ದರು. ಆ ರಾಜವೈಭವವನ್ನು ನೋಡಿದರೆ, ಅದು ದೇವೇಂದ್ರನ ವೈಭವವನ್ನು ಹೋಲುವದೆಂದು ಭಾಸವಾಗುತ್ತಿತ್ತು. ಹೀಗೆ ಶ್ರೀಮಂತರು ಸಂಭ್ರಮದಿಂದ ಸಾಗುತ್ತ ಶಿಂದೇನ ಬಿಡಾರಕ್ಕೆ ಬಂದರು. ಮಹದಾಜಿಯು ಅವರ ಕೈಹಿಡಿದು ಆನೆಯಿಂದ ಕೆಳಗಿಳಿಸಿ ಅವರ ಸಲುವಾಗಿ ಸಿದ್ಧಪಡಿಸಿದ ಸುಶೋಭಿತ ಸಿಂಹಾಸನದಲ್ಲಿ ಕೂಡ್ರಿಸಿದನು. ಭಾವು, ಫಡಕೆ ಮುಂತಾದ ಸರದಾರರು, ನಾನಾ ಮೊದಲಾದ ಪ್ರಧಾನರು ಉಚಿತಾಸನಗಳಲ್ಲಿ ವಿರಾಜಮಾನರಾದರು. ಆಗ ಶಿಂದೇನು ಸಮಯೋಚಿತ ಸಂಭಾಷಣವನ್ನು ಮಾಡಿ, ಅತ್ಯಂತ ವಿನೀತಭಾವದಿಂದ ತಾನು ತಂದ ವಕೀಲ ಮುತಾಲಖ-ವಸ್ತ್ರ-ಪಲ್ಲಕ್ಕಿ-ಶಸ್ತ್ರ-ವಾಹನಗಳನ್ನು ಶ್ರೀಮಂತರಿಗೆ ಸಮರ್ಪಿಸಿ ಸ್ವಾಮಿಭಕ್ತಿಯನ್ನು ಪ್ರಕಟಗೊಳಿಸಿದನು. ಬಳಿಕ ಶ್ರೀಮಂತರು ನಜರಾಣಿಗಳನ್ನು ತಕ್ಕೊಂಡು ಅರಮನೆಗೆ ಬಿಜಯಗೈದರು. ಹೀಗೆ ಶಿಂದೇನು ಶ್ರೀಮಂತರನ್ನು ಪ್ರಸನ್ನಮಾಡಿಕೊಂಡು ಪ್ರತಿಷ್ಠೆಯನ್ನು ಹೊಂದಿದನು.

ಮಹದಾಜಿಯ ಪ್ರತಿಷ್ಠೆಯು ಹೆಚ್ಚುತ್ತ ನಡೆಯಲು, ನಾನಾಫಡಣವೀಸನ ತೇಜವು ಕುಂದತೊಡಗಿತು. ಇಷ್ಟರಲ್ಲಿ ನಾನಾನ ಜೀವದ ಗೆಳೆಯನಾದ ಹೋಳಕರನ ದಂಡಿನವರಿಗೂ, ಶಿಂದೇನ ದಂಡಿನವರಿಗೂ ಉತ್ತರ ಹಿಂದುಸ್ತಾನದಲ್ಲಿ ಅಲ್ಪಕಾರಣದಗೋಸ್ಕರ ಕಾಳಗವಾಯಿತು. ಅದರಲ್ಲಿ ಹೋಳಕರನು ಪರಾಜಿತನಾದನು. ಈ ಸುದ್ದಿಯು ಪುಣೆಗೆ ಹತ್ತಲು, ಮಹದಾಜಿಗೆ ಅಧಿಕ ಸಂತೋಷವೂ, ನಾನಾನಿಗೆ ಕಡು ವಿಷಾದವೂ ಆಯಿತು. ಹೀಗೆ ಸ್ವಲ್ಪ ದಿವಸದ ಮುಂಚೆ ಏಕಮನಸ್ಕರಾಗಿದ್ದ ಅವರಿಬ್ಬರ ಮನೋಲಹರಿಯು ಈಗ ಬಂದಕ್ಕೊಂದು ವಿರೋಧದಿಕ್ಕಿಗೆ ಹರಿಯಲಾರಂಭಿಸಿತು. ನಾನಾಫಡಣವೀಸನಿಗೆ ಮಹದಾಜಿಯ ಭರವಸವೇ ಉಳಿಯದಂತಾಯಿತು. "ಯಾವಾಗ ಬಂಡಾಯವು ಎದ್ದೀತು, ಎಂಥ ಎಡರುಗಳು ಬಂದಾವು" ಎಂಬ ನಿಯಮವೇ ಇಲ್ಲದಂತಾಯಿತು. ಸಾರಾಂಶ, ಆಗ್ಗೆ ಪುಣೆಯಲ್ಲಿ ಶಿಂದೆಯು ಅಂದದ್ದೇ ಪೂರ್ವ-ಪಶ್ಚಿಮ. ಆತನ ಮುರವೊತ್ತು ಎಲ್ಲ ಸರದಾರರ ಮೇಲೆ ಚನ್ನಾಗಿ ಕೂತಿತ್ತು. ಇಂಥ ಪ್ರಸಂಗದಲ್ಲಿ ಸ್ವಂತ ರಕ್ಷಣೆಗಾಗಿ

ಬೆಂಬಲವು ಇರುವದು ಯೋಗ್ಯವೆಂದು ತಿಳಿದು ಇದಕ್ಕೂ ಮುಂಚೆಯೇ ನಾನಾನು ಭಾವೂನನ್ನು ಪುಣೆಗೆ ಕರೆಸಿಕೊಂಡಿದ್ದನು.

ಭಾವೂನ ಸಂಗಡ ೨೦೦೦ ಸ್ವಾರರು ಮಾತ್ರ ಇದ್ದರು. ಶಿಂದೆಯ ಸಂಗಡ ಇದ್ದ ಸೈನ್ಯವು ಬಹಳ ದೊಡ್ಡದಿತ್ತು. ನಾನಾ-ಶಿಂದೆ ಇವರಿಬ್ಬರಲ್ಲಿ ಹುಟ್ಟಿದ ವೈಮನಸ್ಸು ಬೆಳೆಯಿತು. ಮಹದಾಜಿಯು, ಶ್ರೀಮಂತರು ಅರಮನೆ ಯಲ್ಲಿ ಇರಲು, ಅಲ್ಲಿಯೇ ಹೋಗಿ ಅವರ ಅರ್ಜವ ಹಿಡಿಯುವನು; ಅವರು ಪರ್ವತಿಗೆ ವಿಹಾರಕ್ಕೆ ಹೋದರೆ ತಾನೂ ಹೋಗಿ 'ಖಾವಿಂದ' 'ಖುದಾ ವಂದ, ಸರಕಾರ' ಎಂದು ಲಾಂಗೂಲ-ಚಾಲನಕ್ರಮವನ್ನು ನಡೆಸುವನು. ಹೀಗೆ ಆ ರಾಹುಸ್ವರೂಪನಾದ ಮಾಧವರಾವ ಶಿಂದೆಯು, ಸವಾಯಿಮಾಧವರಾ ಯರ ಬೆನ್ನುಕಾಯುಹತ್ತಿದನು. ಈ ರಾಹುವು ಯಾವಾಗ ಪೇಶವೆ ಸಾಮ್ರಾಜ್ಯ ರೂಪ ಚಂದ್ರಮನನ್ನು ಗ್ರಾಸಮಾಡಿ ಬಿಡುವನೆಂಬದರ ನೇಮವಿದ್ದಿಲ್ಲ. ಆತನ ದೀರ್ಘಪ್ರಯತ್ನಗಳು ಸಫಲವಾಗುವವೆಂದು ಎಲ್ಲರೂ ಭಯಗ್ರಸ್ತರಾದರು. ಒಮ್ಮೆಲ್ಲೊಮ್ಮೆ ರಕ್ತಪ್ರವಾಹವು ಹರಿಯುವ ಘೋರಪ್ರಸಂಗವು ಪ್ರಾಪ್ತವಾ ಗುವದೆಂಬ ಧೋರಣವು ಒಡೆದು ಕಾಣಿಸಿತು. ಆಗ ಫಡಕೆ ಹರಿಪಂತನ ಮಧ್ಯಸ್ಥಿಕೆಯಿಂದ ಆ ರಕ್ತಸ್ರಾವದ ಅನಿಷ್ಟವು ನಿವಾರಣವಾಯಿತು.

ರಕ್ತಸ್ರಾವದ ಪ್ರಸಂಗವು ದೂರವಾದರೂ ಮಹದಾಜಿಯು ತನ್ನ ದೀರ್ಘಪ್ರಯತ್ನಗಳನ್ನು ಬಿಡಲಿಲ್ಲ. ಹರಪ್ರಯತ್ನಮಾಡಿ ಶ್ರೀಮಂತರನ್ನು ಒಲಿಸಿಕೊಂಡು ತನ್ನ ಮನೀಷೆಯನ್ನು ನೇರವೇರಿಸಿಕೊಳ್ಳಬೇಕೆಂಬುದೇ ಆತನ ದೃಢನಿಶ್ಚಯವು. ಆತನು ಮಹತ್ವಾಕಾಂಕ್ಷೆಯುವನಿದ್ದಂತೆ, ದೀರ್ಘ ಸಾಹಸಿಯೂ, ಕಾರ್ಯದಕ್ಷನೂ, ನಿಶ್ಚಲಮನಸ್ಸಿನವನೂ ಆಗಿದ್ದನು. ಅವನು ತನ್ನ ಇಷ್ಟಕಾರ್ಯಸಾಧನೆಗಾಗಿ ಶ್ರೀಮಂತರನ್ನು ಬೇಟೆ ಮುಂತಾದ ಅರ ಸುತನದ ಆಟುಗಳಿಗೆ ಕರಕೊಂಡು ಹೋಗುತ್ತಿದ್ದನು. ಇದು ತಿಳಿಯುತ್ತಲೆ ನಾನಾನು ಭಾವೂನನ್ನು ಶ್ರೀಮಂತರ ಕೂಡ ಕಳುಹಿಸುತ್ತಿದ್ದನು. ಶ್ರೀಮಂತ ಸವಾಯಿಮಾಧವರಾಯರು ಚಿಕ್ಕಂದಿನಲ್ಲಿ ಪುರಂಧರದಲ್ಲಿದ್ದಾಗ್ಗೆ, ಅವರ ಮೈಗಾವಲಿಗಾಗಿ ನಾನಾನು ಕೆಲವು ಪಟವರ್ಧನ ಸರದಾರರನ್ನು ನೇಮಿಸಿ ದ್ದನು. ಅವರಲ್ಲಿ ಪುರುಷೋತ್ತಮರಾಯನೇ ಮುಖ್ಯನು. ಪುರುಷೋತ್ತಮ ರಾಯನು ಭಾವೂನ ಪುರಸ್ಕೃತನಾದುದರಿಂದ ಆತನು ಪುರಂಧರಕ್ಕೆ ಆಗಾಗ್ಗೆ

ಹೋಗಿ ಬರುತ್ತಿದ್ದನು. ಸವಾಯಿಮಾಧವರಾಯರು ಪುರುಷೋತ್ತಮರಾಯನನ್ನು ಬಹು ಪ್ರೀತಿಸುತ್ತಿದ್ದರು. ಅದರಿಂದ ಭಾವೂನಲ್ಲಿ ಸಹ ಅವರು ನಿರ್ಮಲ ಪೂಜ್ಯಬುದ್ಧಿಯನ್ನಿಟ್ಟು ಹಿರಿಯರಂತೆ ಮನ್ನಿಸುತ್ತಿದ್ದರು. ಕಾರ್ಯಕುಶಲನಾದ ನಾನಾಫಡಣವೀಸನು ಇದೆಲ್ಲ ಮನದಂದು, ಭಾವುನನ್ನು ಶ್ರೀಮಂತರ ಜತೆಯಲ್ಲಿದ್ದು, ಮಹದಾಜಿಯ ಆಟವನ್ನು ನಿಲ್ಲಿಸುವ ಮಹತ್ಕಾರ್ಯಕ್ಕೆ ನೇಮಿಸಿರಬಹುದೆಂದು ತೋರುತ್ತದೆ. ಆಗಿನ ಪ್ರಸಂಗದಲ್ಲಿ ಭಾವು ನಾನಾನಿಗೆ ಬಹಳೇ ಉಪಯೋಗ ಬಿದ್ದು, ಆತನ ಇಷ್ಟಕಾರ್ಯವನ್ನು ಸಾಧಿಸಿಕೊಟ್ಟನು. ಸವಾಯಿಮಾಧವರಾಯರು ಭಾವೂನ ಸರಳ ಮತ್ತು ಗೌರವದ ಅಭಿಪ್ರಾಯಗಳಿಗೆ ಅನುಮೋದಿಸುತ್ತಿದ್ದರು; ಅವುಗಳ ವಿರುದ್ಧ ಆಚರಿಸುವದೆಂದರೆ ಅವರ ಜೀವದ ಸುತ್ತೇ ಬರುತ್ತಿತ್ತು. ಮರುಳಗಾರನಾದ ಮಹದಾಜಿಯಾದರೂ ತನ್ನ ಮೋಹಕ ಭಾಷಣಗಳಿಂದ ಶ್ರೀಮಂತರನ್ನು ಸಂಪೂರ್ಣ ವಶಮಾಡಿಕೊಂಡಿದ್ದನು. ಆದರೆ ಭಾವು ಶ್ರೀಮಂತರಿಗೆ ಬಗೆ ಬಗೆಯ ಸಮಯೋಚಿತ ಹಿತ-ವಚನಗಳನ್ನು ಹೇಳುತ್ತ ನಾನಾನ ವಿಷಯವಾಗಿ ಪೂಜ್ಯಬುದ್ಧಿಯನ್ನು ಅವರ ಮನಸ್ಸಿನಲ್ಲಿ ಹುಟ್ಟಿಸಿದ್ದರಿಂದ ಮಹದಾಜಿಯ ಇಷ್ಟಹೇತುವು ಸಾಧಿಸುವದು ದುಸ್ತರವೆನಿಸಿತು.

ಮಹದಾಜಿ ಶಿಂದೆ ಮತ್ತು ಪರಶುರಾಮಭಾವು ಈ ಉಭಯತರು ಬಳ್ಳೇ ಹೆಸರಾದ ಕಲಿಗಳು. ಅವರಿಬ್ಬರು ಯಾವಾಗಲೂ ಸವಾಯಿಮಾಧವರಾಯರ ಮೈನೆಳಲಿನಂತೆ ಅವರನ್ನು ಬಿಟ್ಟು ಇರುತ್ತಿದ್ದಿಲ್ಲ. ಆದರೆ ಅವರಿಬ್ಬರ ಅಂತಸ್ಥ-ಉದ್ದೇಶಗಳು ಮಾತ್ರ ಭಿನ್ನವಿದ್ದು ಪ್ರತಿಒಬ್ಬನು ತನ್ನ ಇಷ್ಟ ಕಾರ್ಯಸಾಧನದಲ್ಲಿ ಜಾಗೃತನಾಗಿದ್ದನು. ಒಬ್ಬನು ನಾನಾನ ವಿಷಯವಾಗಿ ಶ್ರೀಮಂತರ ಮನಸ್ಸನ್ನು ಕೆಡಿಸಬೇಕೆಂದು ಮತ್ತೊಬ್ಬನು ನಾನಾನ ಗೌರವವನ್ನು ಕಾಯಿದು ಆತನ ವಿಷಯವಾಗಿ ಅವರಲ್ಲಿ ಪೂಜ್ಯಬುದ್ಧಿಯನ್ನು ಹುಟ್ಟಿಸಬೇಕೆಂದು ಹೀಗೆ ಆ ಸರದಾರರ ಉದ್ದೇಶಗಳು ಭಿನ್ನವಾಗಿದ್ದವು.

ಮಹದಾಜಿಯು ಭಾವೂನ ಪೂರ್ವಪರಾಕ್ರಮಕೀರ್ತಿಯನ್ನು ಚನ್ನಾಗಿ ಬಲ್ಲನು; ಇತ್ತಿತ್ತ ಭಾವು ಘನಘೋರ ಸಂಗ್ರಾಮಗಳನ್ನು ಮಾಡಿ, ಅಜಿಂಕ್ಯರಾದ ಪ್ರಬಲ ವೈರಿಗಳನ್ನು ಗೆದ್ದು ರಾಜಸನ್ಮಾನ, ಜನಮೆಚ್ಚಿಕೆಗಳನ್ನು ಹೊಂದಿದ್ದನ್ನು ಆತನು ಕಿವಿಮುಟ್ಟ ಕೇಳಿದ್ದನು. ಅವರಿಬ್ಬರ ದೃಢಪರಿಚಯು

ವಾಗುತ್ತ ಹೋದಂತೆ, ಪರಸ್ಪರ ಸ್ವಭಾವ-ಪ್ರಚೀತಿಯು ವಿಶೇಷವಾಗಿ ಆಗ ಹತ್ತಿತು. ಮಹಾದಾಜಿಯು ಒಳ್ಳೇ ಸ್ವಾಭಿಮಾನಿಯು; ಆದರೂ ಆತನು ಭಾವು ತನಗೆ ಸರಿಯಾದ ಬಲಿಷ್ಠ ಸರದಾರನು ಇರುವನೆಂದು ತಿಳಿದು ಆತನನ್ನು ಮನಃಪೂರ್ವಕವಾಗಿ ಮನ್ನಿಸುತ್ತಿದ್ದನು. ಈ ಬಗ್ಗೆ ಆಗ್ಗೆ ವರ್ತಿಸಿದ ಒಂದು ಚಮತ್ಕಾರಿಕ ಆಖ್ಯಾಯಿಕೆಯನ್ನು ಇದರಡಿಯಲ್ಲಿ ಕೊಡುವೆವು:—

ಒಂದು ದಿವಸ ಶ್ರೀಮಂತ ಸವಾಯಿಮಾಧವರಾವ, ಮಹದಾಜಿ ಶಿಂದೆ, ನಾನಾಫಡಣವೀಸ ಮತ್ತು ಪರಶುರಾಮಭಾವು ಇತ್ಯಾದಿ ಜನರು ದೇವದರ್ಶನಕ್ಕೆಂದು ಪರ್ವತಿಗೆ ಹೋಗಿದ್ದರು. ದೇವದರ್ಶನ ಮಾಡಿಕೊಂಡು ಮರಳಿ ಬರುವಾಗ್ಗೆ, ಶ್ರೀಮಂತರಿಗೆ ಪರ್ವತಿಯ ಕೆರೆಯಲ್ಲಿ ನೌಕಾ-ವಿಹಾರವನ್ನು ಮಾಡಬೇಕೆಂಬ ಅಪೇಕ್ಷೆಯಾಯಿತು. ಕೂಡಲೆ ನೌಕೆಯು ಸಿದ್ಧವಾಯಿತು. ಅದರಲ್ಲಿ ಸವಾಯಿಮಾಧವರಾವ, ಭಾವು ಮತ್ತು ಶಿಂದೆ, ಈ ಮೂವರು ಕೂತುಕೊಂಡರು. ಮಿಕ್ಕ ಪರಿವಾರದ ಜನರು ಕೆರೆಯ ದಂಡೆಯ ಮೇಲೆ, ಆ ನೌಕಾ-ವಿಹಾರ-ಚಮತ್ಕಾರವನ್ನು ನೋಡುವ ಲವಲವಿಕೆಯಿಂದ ನಿಂತುಕೊಂಡರು. ಇನ್ನು ನೌಕಾ-ಕ್ರೀಡೆಯು ಪ್ರಾರಂಭವಾಗತಕ್ಕದ್ದು; ಅಷ್ಟರಲ್ಲಿ ನಾನಾಫಡಣವೀಸನು "ಮಹಾದಾಜಿ ಬಾಬಾ, ಶ್ರೀಮಂತರ ಅಂಗರಕ್ಷಣೆಗಾಗಿ ನೌಕೆಯಲ್ಲಿ ಇನ್ನೂ ಯಾರನ್ನಾದರೂ ಕೂಡ್ರಿಸಿಕೊಳ್ಳುವದಿಲ್ಲವೇನು? ಎಂದು" ವಿಚಾರಿಸಿದನು; ಅದಕ್ಕೆ ಆ ಚತುರಪುರುಷನು "ದಿವಾಣಸಾಹೇಬ, ಉತ್ತರದಲ್ಲಿ ಸೇವಕನಾದ ನಾನು, ದಕ್ಷಿಣದಲ್ಲಿ ಪರಮಪರಾಕ್ರಮಿಯಾದ ಪರಶುರಾಮಭಾವು, ಹೀಗೆ ನಾವಿಬ್ಬರು ಪ್ರಭುಸೇವೆಯಲ್ಲಿ ತತ್ಪರರಿರಲು ಶ್ರೀಮಂತರ ಕೂದಲಕ್ಕೆ ಸಹ ಕೈ ಹಚ್ಚುವ ಎದೆಯು ಯಾರಲ್ಲಿ ಇರುವದು? ಕಾರಣ ಈ ಬಗ್ಗೆ ಚಿಂತಿಸದೆ ಸ್ವಸ್ಥರಾಗಿರಬೇಕು" ಎಂದು ಸಮರ್ಪಕವಾದ ಉತ್ತರ ಕೊಟ್ಟನು.

ಮಹದಾಜಿಯ ದೀರ್ಘಪ್ರಯತ್ನ, ಮೋಹಕಭಾಷಣ, ಚಾತುರ್ಯಲಾಘವ, ಮುಂತಾದವುಗಳ ಯೋಗದಿಂದ ಶ್ರೀಮಂತರು ಅವನ ವಶರಾಗಿ ಅವನು ಹೇಳಿದಂತೆ ಕುಣಿಯತಕ್ಕವರೇ? ಆದರೆ ವ್ಯವಹಾರಕುಶಲನಾದ ಭಾವು ಬಳಿಯಲ್ಲಿರಲು ಶಿಂದೇನ ಇಷ್ಟಕಾರ್ಯವು ಹೇಗೆ ಕೈಗೂಡುವದು? ಹೀಗೆ ಮಹದಾಜಿಯ ಮಹತ್ವಾಕಾಂಕ್ಷೆಯು ಸಫಲವಾಗಲಿಲ್ಲ. ನಾನಾನ ಈ ಘಟನಕಾರ್ಯಭಾಗವನ್ನು ಆತನ ಪ್ರಾಣಸಖನಾದ ಭಾವು ನಿರ್ವಹಿಸಿ

ಕೊಟ್ಟು 'ಸಖರಿಂದುನ್ನತವಸ್ತುವೇ' ಎಂಬ ಕವಿವಚನಕ್ಕೆ ಉತ್ಕೃಷ್ಟ ದೃಷ್ಟಾಂತವಾಗಿರುವನು. ಆದ್ದರಿಂದ ನಾನಾಫಡಣವೀಸನ ರಾಜ್ಯಕಾರಭಾರ ಭಾರವು ತೊಂದರೆಯಿಲ್ಲದೆ ಸಾಗಲಾರಂಭಿಸಿತು.

ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಪರಶುರಾಮಭಾವು ಶಿಷ್ಟಾಯಿಯನ್ನು ಕೈಕೊಳ್ಳದಿದ್ದರೆ, ನಾನಾನ ಪ್ರಯತ್ನಗಳೆಲ್ಲ ನಿಷ್ಫಲವಾಗಿ, ಅವನು ಗುಡ ಚಾಪೆಕಟ್ಟಿಕೊಂಡು ತೀರ್ಥಯಾತ್ರೆಗೆ ಹೊರಡಬೇಕಾಗುತ್ತಿತ್ತು. ಭಾವೂ ಸಾಹೇಬನ ಸಮಯೋಚಿತ ಮತ್ತು ಸಮಂಜಸವಾದ ಸುಬೋಧಪರ ಉಪ ದೇಶಗಳ ಪ್ರಭಾವದಿಂದ ಶ್ರೀಮಂತರು ಬಾಲಬಡೆಯುವ ಸ್ವಭಾವದ ಶಿಂದೇ ನ ಬಿನ್ನಹವನ್ನು ನಿಷೇಧಿಸಿ "ಶಿಂದೆ ಕುಲದೀಪಕನೇ ನಿನ್ನ ಮನೋಭಿಪ್ರಾ ಯವು ತಿಳಿಯಿತು. ಅದರಂತೆ ಮಾಡುವದು ಸುರಕ್ಷಿತವೆನಿಸದು. ನಾನಾಫಡ ಣವೀಸನು ನನ್ನ ಬಲಗೈಯಂತಿರುವನು. ಅವನೇ ಪೇಶವೆ ರಾಜ್ಯಶಕಟವನ್ನು ನಡೆಸಲು ಯೋಗ್ಯನಾದ ಸಾರಥಿಯು. ನಿನ್ನಂಥ ಮತ್ತು ಭಾವೂನಂಥ ರಣ ಧುರೀಣರಾದ ಸರದಾರರೂ ನಾನಾನಂಥ ಕುಶಲ ಪ್ರಧಾನರೂ ಇರುವದ ರಿಂದಲೇ ನನಗೆ ರಾಜ್ಯಕಾರಭಾರದ ಚಿಂತೆಯು ಎಳ್ಳಷ್ಟಾದರೂ ಇಲ್ಲ. ಇನ್ನು ಮುಂದೆ ಈ ಮಾತು ತೆಗೆಯಬೇಡ" ಎಂದು ಹೇಳಿದರು. ಇಷ್ಟಕ್ಕೆ ಶಿಂದೆಯು ನಿರಾಶಿತನಾಗದೆ "कोकाले फलदायकः" ಎಂಬ ನ್ಯಾಯ ದಂತೆ ಇಂದಿಲ್ಲ ನಾಳೆ ತನ್ನ ಮನೋಬಯಕೆಯು ಈಡೇರುವದೆಂಬ ಭರ ವಸೆಯಿಂದ ದೀರ್ಘೋದ್ಯೋಗವನ್ನು ನಡೆಸಿದನು. ಆದರೆ ಮುಂದೆ ತುಸು ದಿವಸಗಳಲ್ಲಿ ಮಹದಾಜಿಯು ವನವಾಡಿಯಲ್ಲಿ ನವಜ್ವರದಿಂದ ಮಡಿದನು.* (ಶಕೆ ೧೭೧೫ ಮಾಘಶುದ್ಧ ೧೩). ಅದರಿಂದ ಅವನ ಮನೋರಥವು ನೆರ ವೇರಲಿಲ್ಲ. ಮಹದಾಜಿಯ ಕಾರಸ್ಥಾನ ತಂತ್ರ-ರೂಪ ಜಾಲಗಳೊಳಗಿಂದ ನಾನಾ ಮುಂತಾದವರು ಮುಕ್ತರಾಗಿ ಹರುಷಗೊಂಡರು. ಒಂದುವೇಳೆ ಶ್ರೀಮಂತರು ಶಿಂದೇನ ಅಂಕಿತರಾಗಿದ್ದರೆ ಪೇಶ್ವೆ ರಾಜ್ಯದ ಮತ್ತು ನಾನಾ ಮುಂತಾದ ಬ್ರಾಹ್ಮಣ ಮುತ್ಸದ್ದಿಗಳ ಅವಸ್ಥೆಯು ಏನು ಆಗುತ್ತಿತ್ತೋ ಎಂದು ಎಲ್ಲರು ಬಾಯಿಯಲ್ಲಿ ಅಕ್ಕೀಕಾಳು ಹಾಕಿಕೊಂಡು ಕೂತಿದ್ದರು. ಆದರೆ ದೇವರೇ ಆ ಅನಿಷ್ಟವನ್ನು ನಿವಾರಣಮಾಡಿದ್ದರಿಂದ ಅವರೆಲ್ಲರಿಗೆ ಸಂತೋಷವಾದದ್ದು ಸ್ವಾಭಾವಿಕವೇ ಸೈ.

*ಮಹದಾಜಿಯ ತರುವಾಯ ದೌಲತ್ತರಾಯನು ಶಿಂದೆಸಂಸ್ಥಾನದ ಒಡೆಯನಾದನು.

ಮಹದಾಜಿ ಶಿಂದೇನ ಅವತಾರವು ಸಮಾಪ್ತಿಯಾಗಿ ಪೇಶವಾಯಿಯಲ್ಲಿ ಸ್ವಸ್ಥತೆಯು ನೆಲಗೊಳ್ಳುವಷ್ಟರಲ್ಲಿ, ಪೇಶವೆಯರ ಬುನಾದಿಯ ಬಲಾಢ್ಯ ವೈರಿಯಾದ ನಿಜಾಮನು ಅವರ ಮೇಲೆ ಕಾರಣವಿಲ್ಲದೆ ಕೈ ಎತ್ತಿದನು. ಅದರಿಂದ ಇ. ಸ. ೧೭೯೫ ರಲ್ಲಿ ಪರಶುರಾಮಭಾವು ಪುನ: ಶಸ್ತ್ರಧಾರಿಯಾಗಿ ನಿಜಾಮನ ತೋಳತಿಂಡಿಯನ್ನು ಅಣಕಿಸುವ ಹೊತ್ತುಬಂತು. ಆ ದಂಡಯಾತ್ರೆಯ ವಿವರವೇನಂದರೆ:—

ಪೇಶವೆ-ನಿಜಾಮರು ಇತ್ತಿತ್ತ ಬಹಳ ದಿವಸಗಳಿಂದ ಸ್ನೇಹಭಾವದಿಂದ ಇದ್ದರು; ಆ ಸ್ನೇಹಭಾವವು ಇ. ಸ. ೧೭೯೫ ರಲ್ಲಿ ಒಮ್ಮಿಂದೊಮ್ಮೆ ಲೋಪವಾಗಿ ಅದರ ಸ್ಥಳದಲ್ಲಿ ವೈರಭಾವವು ಬಂದು ಕೂತಿತು. ನಿಜಾಮನು ಶ್ರೀಮಂತ ಸರಕಾರಕ್ಕೆ ಚವಥಾಯಿ, ಸರದೇಶಮುಖಿ ಇತ್ಯಾದಿ ಬಾಬುಗಳ ಬಾಕಿಯನ್ನು ಬಹಳ ಕೊಡತಕ್ಕದ್ದು ಇತ್ತು. ಅದರ ವ್ಯವಸ್ಥೆಯ ಬಗ್ಗೆ ಪೇಶವೆಯರ ವಕೀಲನು ಹೈದರಾಬಾದಕ್ಕೆ ಹೋದನು. ಆಗ ನಿಜಾಮನ ಉನ್ಮತ್ತ ದಿವಾಣನು ೨೦ ಕಲಮುಳ್ಳ ಹಾಳುರಗಳೆಯ ಒಂದು ಯಾದಿಯನ್ನು ಪುಣೆಯಿಂದ ಬಂದ ವಕೀಲನ ಮೈಮೇಲೆ ಬೀಸಾಡಿದನು. ಅದರಲ್ಲಿ ಅವನು ತನ್ನ ಮನಸ್ಸಿಗೆ ಬಂದ ನಿರಾಧಾರ ಕಾರಣಗಳನ್ನು ಹಚ್ಚಿ ಪೇಶವೆಯ ಬೇಡಿಕೆಯನ್ನು ನಿರಾಕರಿಸಿದ್ದನು. ಅದಕ್ಕೆ ನಾನಾನು ಪುನಃ ಬಹು ಚಾತುರ್ಯದಿಂದ ಸಮರ್ಪಕ ಉತ್ತರವನ್ನು ಬರೆದು ಕಳಸಿದನು. ಅದರಲ್ಲಿ ನಿಜಾಮಸರಕಾರದಿಂದ ಪೇಶವೆಸರಕಾರಕ್ಕೆ ಒಟ್ಟು ೨ ಕೋಟಿ, ೬೦ ಲಕ್ಷ ರುಪಾಯಿ ಬರತಕ್ಕದ್ದಿತ್ತೆಂಬ ಬಗ್ಗೆ ಉಲ್ಲೇಖವಾಗಿತ್ತು. ಆ ಯಾದಿಯ ವಿಷಯವಾಗಿ ನಿಜಾಮನ ದಿವಾಣನಾದ ಮಶೀರಉಲ್ಮುಲಕ, ಮತ್ತು ಪೇಶವೆಯರ ವಕೀಲ ಗಂಗಾಧರರಾವ ಕಾಳೆ, ಇವರಿಬ್ಬರ ನಡುವೆ ಬಹಳ ಚರ್ಚೆ ನಡೆದು ಕಡೆಗೆ ಪರಿಣಾಮವು ವಿಪರೀತವಾಯಿತು. ದಿವಾಣನು ವಕೀಲನಿಗೆ ಸ್ಪಷ್ಟವಾಗಿ ಹೇಳಿದ್ದೇನಂದರೆ:—"ನಿಮ್ಮ ಯಜಮಾನನಾದ ನಾನಾಫಡಣವೀಸನು ಜಮಾಖರ್ಚಿನ ಕೆಲಸದಲ್ಲಿ ಒಳ್ಳೇ ಕುಟಿಲನಿರುವನು. ಅವನ ಯಾದಿಯ ಅರ್ಥವು ಯಾರಿಗೂ ಆಗದು. ಅದರಿಂದ ಅವನೇ ಇಲ್ಲಿಗೆ ಬಂದು ಅದರ ಅರ್ಥವನ್ನು ತಿಳಿಸಿಕೊಡಲಿ." ಆ ಅಮರ್ಯಾದಿತ ಭಾಷಣವನ್ನು ಕೇಳಿ ಗಂಗಾಧರರಾಯನು ಅತ್ಯಂತ ಸಂತಪ್ತನಾದನು. ಆದರೂ ಅವನು ಅದನ್ನು ಹೊರಗೆಡವದೆ ಸಮಾಧಾನದಿಂದ ಅಂದದ್ದು:—"ನಾನಾಫಡಣವೀಸನ ಕೆಲಸಗಳು ಬಹಳ;

ಅವನು ಇಲ್ಲಿಗೆ ಬರಲು ಅವಕಾಶವಾಗದು." ಆಗ ಮುಶೀರಉಲ್ಮುಲಕನು ಸಿಟ್ಟಿಗೆದ್ದು ಆ ವಕೀಲನನ್ನು ಗದ್ದರಿಸಿ "ನಾನಾನನ್ನು ಇಲ್ಲಿಗೆ ಬರಮಾಡು ವದು ನಮಗೆ ಕಠಿಣವೆನಿಸದು." ಎಂದು ಸೊಕ್ಕಿನಿಂದ ಮಾತಾಡಿದನು. ಹೀಗೆ ಪ್ರತಿ ಒಂದು ಮಾತಿನ ಪರಿಣಾಮವು ವಿಪರೀತವಾಗುತ್ತ ಪ್ರಸಂಗವು ವಿಕೋಪಕ್ಕೆ ಬಂತು. *

ಶ್ರೀಮಂತ ಸವಾಯಿಮಾಧವರಾಯರ ಕಾಲಕಿರ್ದಿಯಲ್ಲಿ ಪೇಶವಾಯಿಯು ಸಂಪೂರ್ಣ ವೈಭವ ಮತ್ತು ಅಖಂಡ ಐಶ್ವರ್ಯಗಿರಿಯ ಶಿಖರವನ್ನು ಮುಟ್ಟಿ ಮುದ್ದುಕೊಡುತ್ತಿತ್ತು. ಪೇಶವೆಯರ ವರ್ಚಸ್ಸು ಉತ್ತರೋತ್ತರ ವಿಸ್ತೃತವನ್ನು ಹೊಂದುತ್ತ ನಡೆದಿರಲು, ಅವರ ಪ್ರತಾಪಕ್ಕೆ ಕಾಶಿಯಿಂದ ರಾಮೇಶ್ವರದವರೆಗೆ ಯಾವತ್ತು ರಾಜರು ಬೆದರಿ ಥರಥರನೆ ನಡುಗುತ್ತಿದ್ದರು. ಉತ್ತರದಲ್ಲಿ ಶಿಂದೆ-ಹೋಳಕರರ ಮತ್ತು ದಕ್ಷಿಣದಲ್ಲಿ ಭಾವು ಮುಂತಾದ ಪಟವರ್ಧನರ ಪರಾಕ್ರಮವು ಅಭಿವೃದ್ಧಿಯನ್ನು ಹೊಂದುತ್ತ ನಡೆದದರಿಂದ, ಪರಚಕ್ರ ಬಂಡಾಯ ಮುಂತಾದವುಗಳ ಭಯವು ಇದ್ದಿಲ್ಲ. ನಾನಾನು ಬುದ್ಧಿ ಚಾತುರ್ಯದಿಂದ ರಾಜ್ಯಶಕಟವನ್ನು ಸಾಗಿಸುತ್ತಿದ್ದದರಿಂದ ಪ್ರಜೆಗಳು ಸುಖ ಸಮಾಧಾನಗಳಿಂದ ಕಾಲಕಳೆಯುತ್ತಿದ್ದರು. ಇಂಥ ಅಪೂರ್ವ ಊರ್ಜಿತದೆಶೆಯ ಕಾಲದಲ್ಲಿ ನಿಜಾಮನ ವಜೀರನು ತುಂಬಿದ ಸಭೆಯಲ್ಲಿ ಮಾಡಿದ ಅಪಮಾನವನ್ನು ನಾನಾನು ಸೈರಿಸದೆ ಆ ಯವನಭೂಪತಿಯೊಡನೆ ಯುದ್ಧಮಾಡುವದನ್ನು ನಿಶ್ಚೈಸಿದನು; ಮತ್ತು ಆ ಉನ್ಮತ್ತ ವಜೀರನ ಮಾನಖಂಡನೆಯನ್ನು ಯಥಾಯೋಗ್ಯ ಮಾಡಿಬಿಡಬೇಕೆಂದು ಅವನು ಪ್ರತಿಜ್ಞೆಮಾಡಿದನು. ಇತ್ತ ನಿಜಾಮನಾದರೂ ಯುದ್ಧಸೌರಣೆಯನ್ನು ಮಾಡಹತ್ತಿದನು. ಈ ಮೇರೆಗೆ ಪೇಶವೆ-ನಿಜಾಮರ ನಡುವೆ ಒಮ್ಮಿಂದೊಮ್ಮೆ ಯುದ್ಧ-ಪ್ರಸಂಗವು ಉಪಸ್ಥಿತವಾಯಿತು.

---

* ಇದಲ್ಲದೆ ಹೈದರಾಬಾದದಲ್ಲಿ ಒಂದು ದಿವಸ ಅರಮನೆಯಲ್ಲಿ ನಾಟಕವು ನಡೆದಿರುವಾಗ್ಗೆ ನಡುವೆ ಸವಾಯಿಮಾಧವರಾವ, ನಾನಾಫಡಣವೀಸ ಇವರ ಸೋಗಗಳನ್ನು ತಂದು ಅಪಹಾಸ್ಯಮಾಡಿ ಅವರನ್ನು ಹೀಟಗಳೆದರೆಂಬುವದು ಈ ದಾಳಿಯು ಉತ್ಪನ್ನವಾಗಲು ಎರಡನೇ ಸಬಲಕಾರಣವೆಂದು ಕೆಲ ಇತಿಹಾಸಕಾರರ ಅಭಿಮತವಿರುವದು. ಇದಾದರೂ ನಿಜವಿರಬಹುದೆಂದು ತೋರುತ್ತದೆ.

ನಿಜಾಮಸರಕಾರದವರು ಆಹವ-ಸಾರಣೆಯನ್ನು ಬಹಳ ಜಾಗ್ರತೆಯಿಂದ ನಡೆಸಿದ್ದರಿಂದ ಒಂದು ಲಕ್ಷ ಹತ್ತುಸಾವಿರ ಸೈನ್ಯವು ಬೇದರದಲ್ಲಿ ಕೂಡಿತು. ಶಸ್ತ್ರಾಸ್ತ್ರ-ತೋಫುಖಾನೆ ಇತ್ಯಾದಿ ಯುದ್ಧೋಪಯೋಗದ ಸಾಮಾನುಗಳು ವಿಶೇಷವಾಗಿ ಸಂಗ್ರಹಿಸಲ್ಪಟ್ಟವು. ಆಗ ಅವನ ದಂಡಿನ ಜನರು "ಪೇಶವೆಸೈನ್ಯದ ಪಾಡು ಏನು? ಅರಗಳಿಗೆಯಲ್ಲಿ ಅದರ ಹಮ್ಮು ಮುರಿದು ಪುಣೆಯನ್ನು ಸುಟ್ಟು ಸೂರೆಮಾಡುವೆವು." ಎಂದು ಬಾಯಿಗೆ ಬಂದಂತೆ ಬೊಗಳತೊಡಗಿದರು. ಆದರೆ ನಿಜಾಮನ ಸೈನ್ಯದಲ್ಲಿ ಒಂದು ಮಹತ್ವಸಂಗತಿಯು ಕೊರತೆಯಿತ್ತು. ಅದೇನಂದರೆ:—ಹೈದರಾಬಾದದ ದರಬಾರದಲ್ಲಿ ಬಾಯಿಬಡಕರೇ ಬಹಳ; ಕಾಳಗದಲ್ಲಿ ಕಲಿತನದಿಂದ ಕಾದುವ ಎದೆಯು ಯಾರಿಗೂ ಇದ್ದಿಲ್ಲ. ಎಲ್ಲ ಸರದಾರರು ವಿಲಾಸಪ್ರಿಯರು. ಅವರು ತಮ್ಮ ಯಜಮಾನನಾದ ನಿಜಾಮನ ಮುಖಸ್ತುತಿಯನ್ನು ಮಾಡುವಲ್ಲಿ ಕಡು ಕುಶಲರು. ಎರಡೂ ಕೈಗಳನ್ನು ಜೋಡಿಸಿಕೊಂಡು 'ಖಾವಿಂದ, ಖುದಾವಿಂದ,' ಎಂದು ಬೊಗಳುವದೇ ಆ ಸರದಾರರ ವಾಡಿಕೆಯ ಕೆಲಸವಾಗಿತ್ತು. ಇದಲ್ಲದೆ ಶಿಪಾಯಿಜನರು ಸರದಾರರ ಕಟ್ಟಿನಲ್ಲಿದ್ದಿಲ್ಲ. ಪ್ರತಿಒಬ್ಬನು ತನ್ನಷ್ಟಕ್ಕೆ 'ರಾವ' 'ಖಾನ' ಎಂದು ತಿಳಿಯುವನು. ಈ ಅಹಂಭಾವವು ಬಡಸಿಪಾಯಿ ಮೊದಲ್ಗೊಂಡು ಮುಖ್ಯ ದಿವಾಣನವರೆಗೆ ಎಲ್ಲರಲ್ಲಿಯೂ ಸರಿಯಾಗಿ ಮನೆಮಾಡಿಕೊಂಡಿತ್ತು. ಆ ದಿವಾಣನ ಕಂಣುಗಳಿಗೆ ಪರಿಬಂದು ಆತನು ಮೈ ಮರತಿದ್ದನು. ಒಂದು ದಿವಸ ಭರದರಬಾರದಲ್ಲಿ ಆ ಮದಾಂಧನಾದ ದಿವಾಣನು ಅಂದದ್ದು. "ಏನೇ ಆಗಲಿ, ಮರಾಠಾ ಸರದಾರರ ಕಿಟಿವಿಟಿಯು ತಪ್ಪಿಹೋಯಿತು. ಇನ್ನು ನಾವು ವಿಜಾಪೂರ-ಖಾನದೇಶಪ್ರಾಂತಗಳನ್ನು ತಿರುಗಿ ತಕ್ಕೊಳ್ಳಬೇಕು. ಪೇಶವೆಯ ಸರ್ವಸ್ವವನ್ನು ಹರಣಮಾಡಿ ಆತನಿಗೆ ಹಾಕಿಕೊಳ್ಳಲಿಕ್ಕೆ ಒಂದು ಲಂಗೋಟಿಯನ್ನೂ ನೀರು ಕುಡಿಯಲಿಕ್ಕೆ ಒಂದು ತಂಬಿಗೆಯನ್ನೂ ಕೊಟ್ಟು, ಯಥೇಚ್ಛ ಸ್ನಾನ-ಸಂಧ್ಯಾವಂದನೆಯನ್ನು ಮಾಡಿಕೊಳ್ಳುವಗೋಸ್ಕರ ಅವನನ್ನು ಕಾಶಿಯ ಕಡೆಗೆ ಅಟ್ಟಿಕೊಡಬೇಕು. ಇಷ್ಟಾದಹೊರ್ತು ಒಪ್ಪಂದಕ್ಕೆ ಒಪ್ಪತಕ್ಕದ್ದಿಲ್ಲ." ಹೀಗೆ ನಿಜಾಮನ ಸೈನ್ಯದಲ್ಲಿ ಗರ್ವೋಕ್ತಿಗಳು ಅಳತೆಗೆಟ್ಟು ನಡೆದಿದ್ದವು. ಆದರೆ ಸ್ವಪರಬಲಗಳ ಸಾಮರ್ಥ್ಯವನ್ನು ಪರೀಕ್ಷಿಸಿ ತಿಳಕೊಳ್ಳುವ ಕಾಲೋಚಿತ ವಿವೇಕತನವು ಯಾರಲ್ಲಿಯೂ ಇದ್ದಿಲ್ಲ. ತಮ್ಮ ಶಕ್ತಿಯನ್ನು ತಿಳಿಯದೆ ಸಿಕ್ಕಂತೆ ಬೊಗಳುವದೇ

ಅವರ ಶೌರ್ಯವಾಗಿತ್ತು. " ಬೊಗಳುವನಾಯಿ ಕಚ್ಚದು " ಎಂಬ ರೂಢಿಯ ಮಾತಿನಂತೆ ಕೊನೆಯ ಪರಿಣಾಮವಾಗಿ ಅವರೆಲ್ಲರಿಗೆ ಬಹುದಿವಸ ನೆನಪುಳಿಯುವಂಥ ಪಾರುಪತ್ಯವು ಸಿಕ್ಕಿತು. ಹಗೆಗಳ ಆ ಗರ್ವೋಕ್ತಿಯ ವಾರ್ತೆಯು ಪೇಶವೆ ದರಬಾರಕ್ಕೆ ಮುಟ್ಟಿತು. ಅದನ್ನು ಕೇಳಿ ನಾನಾಫಡಣವೀಸನು ಅತ್ಯಂತ ಸಂತಪ್ತನಾದನು. ಅವನು ವೈರಿಗಳ ಸೊಕ್ಕನ್ನು ಚನ್ನಾಗಿ ಮುರಿಯಬೇಕೆಂದು ಸಂಕಲ್ಪಮಾಡಿದನು. ಹುಜೂರ ಸೈನ್ಯವು ಆ ಪ್ರಚಂಡದಾಳಿಯ ಕೂಡ ಹೊರಡಬೇಕೆಂದು ಆಜ್ಞಾಪಿಸಿದನು. ಚಿಕ್ಕದೊಡ್ಡ ಯಾವತ್ತು ಸರದಾರರಿಗೂ, ಸಂಸ್ಥಾನಿಕರಿಗೂ ತಮ್ಮ ತಮ್ಮ ಸೈನ್ಯದೊಂದಿಗೆ ಹೊರಟು ಬರಬೇಕೆಂದು ಆಜ್ಞಾಪತ್ರಗಳು ಕಳಿಸಲ್ಪಟ್ಟವು. ಆಗ್ಗೆ ದೌಲತ್ತರಾವ ಶಿಂದೆ, ತುಕೋಜಿರಾವ ಹೋಳಕರ, ಇವರಿಬ್ಬರು ಪುಣೆಯಲ್ಲಿಯೇ ದಂಡುಸಹಿತ ಇದ್ದರು. ಶಿಂದೆಯು, ವಯೋವೃದ್ಧನೂ, ಅನುಭವಿಕನೂ, ಸಂಗ್ರಾಮ-ವಿಕ್ರಮನೂ ಆದ ಜವುಬಾಬಕ್ಷಿ ಎಂಬ ತನ್ನ ಸೇನಾಪತಿಗೆ ಉತ್ತರ ಹಿಂದುಸ್ತಾನದಿಂದ ತೋಫಖಾನೆ ಸಹಿತ ಹೊರಟು ಬರಬೇಕೆಂದು ಪತ್ರಬರೆದನು. ಶ್ರೀಮಂತಸರಕಾರದ ರಾಯಸವನ್ನು ಶಿರಸಾವಹಿಸಿ ರಘೂಜಿಭೋಸಲೆ, ಪರಶುರಾಮ ಶ್ರೀನಿವಾಸಪಂತ ಪ್ರತಿನಿಧಿ, ಪಂತಸಚಿವ, ಫತ್ತೆಸಿಂಗ ಗಾಯಿಕವಾಡ, ಘೋರಪಡೆ, ದರೇಕರ, ಸರಲಷ್ಕರ, ನಾಯಿಕ ನಿಂಬಾಳಕರ, ಫಾಲಟಣಕರ, ಅಂಕಲೂಜಕರ, ದಹಿಗಾಂವಕರ, ಪಾಟಣಕರ, ಚವ್ಹಾಣ, ಧುಮಾಳ, ಭೋಪಕರ, ಪವಾರ, ಮೋಹಿತೆ, ರಣದಿವೆ, ಜಾಧವ, ಘಾಟಗೆ, ರಾಸ್ತೆ, ವಿಂಚೂರಕರ, ವಾಡೇಕರ, ಥಾಯಗುಡೆ, ಧುಳಪ, ಪಾನಸೆ, ಬೇಹರೆ, ಅಕ್ಕಲಕೋಟಕರ, ಶಿತೋಳೆ, ಥೊರಾತ, ರಾಜೇಬಹದ್ದೂರ, ಭೊಯಿತೆ ಇತ್ಯಾದಿ ಯಾವತ್ತು ಸರದಾರರು ತಮ್ಮ ತಮ್ಮ ದಂಡುಮಾರ್ಬಲದೊಡನೆ ಶೀಘ್ರಗತಿಯಿಂದ ರಾಜಧಾನಿಗೆ ಬಂದು ತಲ್ಪಿದರು. ಪಟವರ್ಧನ ಸರದಾರರಲ್ಲಿ ಕುರುಂದವಾಡಕರ ರಘುನಾಥರಾಯನು ಆಗ್ಗೆ ಪುಣೆಯಲ್ಲಿಯೇ ಇದ್ದನು. ಶ್ರೀಮಂತರ ಆಜ್ಞಾಪತ್ರವು ಬಂದ ಕೂಡಲೆ ಪರಶುರಾಮಭಾವು, ಚಿಂತಾಮಣರಾವ ಸಾಂಗಲೀಕರ ಈ ಉಭಯತರು ತಮ್ಮ ತಮ್ಮ ಸೈನ್ಯಸಹಿತ ಪುಣೆಗೆ ಬಂದು ಕೂಡಿದರು. ಅವರ ಹಿಂದಿನಿಂದ ಮಿಕ್ಕ ಸ್ವಾರರೊಡಗೊಂಡು ನಾರಾಯಣರಾವ ಮತ್ತು ಮಾಧವರಾವ ಮಿರಜಕರ ಇವರಿಬ್ಬರು ಹೊರಟು ಬಂದು ಭಾವೂನನ್ನು ಕೂಡಿಕೊಂಡರು. ನಿಜಾಮನು

ಮಹಾರಾಷ್ಟ್ರರ ಪುರಾತನ ವೈರಿಯು; ಮತ್ತು ಆತನ ಮೇಲೆ ಮಾಡುವ ದಾಳಿಯಲ್ಲಿ ಸಿಗುವ ಸುಲಿಗೆಯನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುವ ಪರಿಪಾಠವು ಮೊದಲಿನಿಂದ ನಡೆದುಬಂದದ್ದು. ಆದ್ದರಿಂದ ಯಾವತ್ತು ಸರದಾರರು ಮತ್ತು ಶಿಲೇದಾರರು ಪರಸ್ಪರರಲ್ಲಿರುವ ದ್ವೇಷಭಾವವನ್ನು ಮರೆತು ಆಗಿನ ದಾಳಿಗೆ ದಂಡಿನೊಡನೆ ಬಹಳ ಉತ್ಸುಕತೆಯಿಂದ ಬಂದು ಏಕತ್ರ ಕಲೆತರು.

ಹೀಗೆ ಕಾಳಗದ ಜೋಡಣೆಯು ಒತ್ತರದಿಂದ ಸಾಗಿ ಬರತಕ್ಕ ಸರದಾರರು, ಸಂಸ್ಥಾನಿಕರು, ಶಿಲೇದಾರರು, ಜಹಗೀರದಾರರು, ಮಾನಕರಿ ಇತ್ಯಾದಿ ರಣಧುರೀಣರಾದ ಯೋಧರು ಬಂದು ಕೂಡಿದರು. ಆಗ ಸೇನಾಧಿಪತ್ಯವನ್ನು ಯಾರಿಗೆ ಕೊಡಬೇಕೆಂಬುವ ಬಗ್ಗೆ ನಾನಾಫಡಣವೀಸನು ವಿಚಾರಿಸತೊಡಗಿದನು. ಶ್ರೀಮಂತ ಸವಾಯಿಮಾಧವರಾಯರ ಸ್ವಾರಿಯು ಹೊರಡುವದು ನಿರ್ಧರವಾಗಿತ್ತು. ಆದ್ದರಿಂದ ‘ಸೇನಾಪತಿ’ಯನ್ನು ಆರಿಸುವ ಮಹತ್ವದ ಕೆಲಸವನ್ನು ಬಹಳ ಎಚ್ಚರಿಕೆಯಿಂದ ಮತ್ತು ಇತರ ಸಂಗತಿಗಳ ಕಡೆಗೆ ತಕ್ಕಷ್ಟು ಲಕ್ಷ್ಯಕೊಟ್ಟು ಮಾಡಬೇಕಾಗಿತ್ತು. ಇದಲ್ಲದೆ, ನಿಜಾಮನು ಪುರಾತನ ವೈರಿಯು; ಆತನು ಪ್ರಬಲನು; ಪ್ರಚಂಡ ಸೇನಾ-ಸಮೇತನಾದವನು; ಇಷ್ಟೇ ಅಲ್ಲ, ಆತನ ಯುದ್ಧಸಿದ್ಧತೆಯೂ ಚನ್ನಾಗಿ ಆಗಿತ್ತು. ಆದ್ದರಿಂದ ಅಂಥ ಬುನಾದಿಯು ಬಲಾಢ್ಯವೈರಿಯನ್ನು ಎದುರಿಸಲು ಸಿದ್ಧವಾದ ಆ ವಿಸ್ತೃತ ಸೇನಾಸಮೂಹದ ದಂಡನಾಯಿಕನಾಗತಕ್ಕ ಪುರುಷನು ಯುದ್ಧವಿದ್ಯಾನಿಪುಣನೂ, ಧೈರ್ಯ-ಗಾಂಭೀರ್ಯಸಮಾನ್ವಿತನೂ, ಇದ್ದು ದೊಡ್ಡದೊಡ್ಡ ದೌಡುಗಳನ್ನು ಮಾಡುವ ಸಾಹಸವೂ, ಸಾಮರ್ಥ್ಯವೂ, ಸಮಯೋಚಿತ ಯುಕ್ತಿಯೂ ಇತ್ಯಾದಿ ಪೌರುಷ ಗುಣಗಳು ಅವನಲ್ಲಿ ಅತ್ಯವಶ್ಯವಾಗಿ ಇರಬೇಕು. ಸವಾಯಿಮಾಧವರಾಯರ ಕಾಲಕಿರ್ದಿಯಲ್ಲಿ, ಪೇಶವಾಯಿಯಲ್ಲಿ ಅನೇಕ ಮರಾಠಾಸರದಾರರು ಇದ್ದರು. ಅವರಲ್ಲಿ ತಮ್ಮ ಭುಜಬಲ ಪರಾಕ್ರಮದಿಂದ ದಿಗಂತರ ಕೀರ್ತಿಯನ್ನು ಹೊಂದಿದವರೆಂದರೆ,—ಮಹದಾಜಿ ಶಿಂದೆ, ಹರಿಪಂತ ಫಡಕೆ, ಮತ್ತು ಪರಶುರಾಮಪಂತ ಭಾವು ಪಟವರ್ಧನ, ಈ ಪ್ರಕಾರ ಮೂವರು. ಅವರಲ್ಲಿ ಶಿಂದೆ ಮತ್ತು ಫಡಕೆ ಇವರಿಬ್ಬರು ಇದಕ್ಕೂ ಮುಂಚೆ ಸ್ವಲ್ಪ ದಿವಸಗಳ ಹಿಂದೆ, ದೈವಾಧೀನರಾಗಿದ್ದರು. ಆಗ ಅರ್ಥಾತ್, ಆ ಸೇನಾ-ಸಮುದ್ರದ ಸರ್ವಾಧಿಪತ್ಯವು, ಇಡೀ ಆಯುಷ್ಯವನ್ನು

ರಣಭೂಮಿಯಲ್ಲಿ ಕಳೆದು ವೈರಿಗಳ ಪ್ರಖರವಾದ ಶಸ್ತ್ರಪ್ರಹಾರವನ್ನು ತಾಳಿಕೊಳ್ಳುವ ಸಾಮರ್ಥ್ಯವುಳ್ಳವನೂ, ನಾರಾಯಣರಾಯನ ಕೊಲೆಯಾದ ಬಳಿಕ ಶಡ್ಡು ಹೊಡೆದು ನಿಂತು ತನ್ನ ಬಾಹುಬಲಪರಾಕ್ರಮದಿಂದ ಮದಾಂಧರಾದ ಯವನರಾಜರನ್ನು ಹತವೀರ್ಯರನ್ನು ಮಾಡಿ ಪೇಶವೆ ಗಾದಿಯನ್ನು ಕಾಪಾಡಿದವನೂ, ಶಿಷ್ಟರಕ್ಷಣ, ಪ್ರಭುಸೇವೆ ಮುಂತಾದವುಗಳಿಗೋಸ್ಕರ ಅವತಾರವೆತ್ತಿದವನೂ ಮತ್ತು ಪಟವರ್ಧನಕುಲವಿಭೂಷಣನೂ ಆದ ಪ್ರೌಢಪ್ರತಾಪಿ ಪರಶುರಾಮಭಾವೂನ ಪಾಲಿಗೆ ಬರತಕ್ಕದ್ದೇ ವಾಸ್ತವ್ಯವೆಂದು ಜನರು ಅನ್ನಹತ್ತಿದರು; ಆ ಲೋಕಾಭಿಪ್ರಾಯಕ್ಕೆ ದರಬಾರದ ಸರದಾರರೆಲ್ಲರ ಒಪ್ಪಿಗೆಯೂ ಇತ್ತು. ಅದರಿಂದ ನಾನಾಫಡಣವೀಸನ ಲಕ್ಷ್ಯವು, ಹೀಗೆ ಸರ್ವಮಾನ್ಯನಾದ ಭಾವೂನಕಡೆಗೆ ತಿರುಗಿದ್ದು ಆಶ್ಚರ್ಯವಲ್ಲ.

ಸೇನಾಧಿಪತ್ಯವನ್ನು ಭಾವೂಗೆ ಒಪ್ಪಿಸುವದನ್ನು ನಿಶ್ಚೈಸಿ ನಾನಾನು ಆತನ ಅಭಿಪ್ರಾಯವನ್ನು ವಿಚಾರಿಸಿದನು. ನಾನಾನ ಯೋಜನೆಯ ವಿಚಾರವು ಭಾವೂಗೆ ಈ ಮೊದಲೆ ತಿಳಿದಿತ್ತು. ಆಗ "ನಾನಾನ ಅಭಿಪ್ರಾಯವನ್ನು ಮಾನ್ಯ ಮಾಡಬೇಕೇ ಹ್ಯಾಗೆ?" ಎಂಬ ಮಾತಿನ ವಿಚಾರ ಮಾಡಿ ತನ್ನ ಜನರ ಅಭಿಪ್ರಾಯವನ್ನು ತಿಳಕೊಳ್ಳುವ ಉದ್ದೇಶದಿಂದ ಭಾವು ತನ್ನ ಬಾಂಧವ ಸರದಾರರನ್ನೂ, ಮುತ್ಸದ್ದಿಗಳನ್ನೂ ಕರೆಸಿಕೊಂಡು ದರಬಾರ ಮಾಡಿದನು. ಆಗ ಅವರೆಲ್ಲರು "ನಿಜಾಮನ ಸೈನ್ಯವು ಅಸಂಖ್ಯವಿರುವದು; ಕಾಳಗಸೌರಣೆಯು ಉತ್ತಮರೀತಿಯಿಂದ ಮಾಡಲ್ಪಟ್ಟಿರುವದು; ಶ್ರೀಮಂತರ ಸೈನ್ಯವಾದರೂ ಅಪರಮಿತವಿರುವದೆಂಬುವದು ನಿಜವು; ಆದರೆ ಶಿಂದೆ, ಹೋಳಕರ, ಗಾಯಿಕವಾಡ ಇತ್ಯಾದಿ ನಾಮಾಂಕಿತ ಮರಾಠಾಸರದಾರರು ಒಮ್ಮನಸ್ಸಿನಿಂದಲೂ, ನಂಬಿಗೆಯಿಂದಲೂ ನಡೆದು ಕಾಲೋಚಿತ ಸಹಾಯ ಮಾಡುವರೋ ಇಲ್ಲವೋ ಇದರ ಅನುಮಾನವದೆ. ಬ್ರಾಹ್ಮಣಸರದಾರನು ಶ್ರೀಮಂತರ ಈ ಅದ್ಭುತ ಸೈನ್ಯ-ಸಾಗರದ ಸರ್ವಾಧಿಪತಿಯಾದದ್ದನ್ನು ನೋಡಿ ಅಭಿಮಾನಿಗಳಾದ ಆ ಮರಾಠಾಸರದಾರರಿಗೆ ಒಂದುವೇಳೆ ವಿಷಾಧವೆನಿಸಿ ಅವರು ಉದಾಶೀನರಾಗುವ ಸಂಭವವುಂಟು; ಹೀಗಾದ ಪಕ್ಷದಲ್ಲಿ ಪ್ರಸಂಗ ವಿಶೇಷದಲ್ಲಿ ನೀವು ಸಂಕಟದಲ್ಲಿ ಬಿದ್ದು ದುರ್ದಶೆಯನ್ನು ಹೊಂದುವ ಹೊತ್ತು ಬರುವದು; ಮತ್ತು ಇಲ್ಲಿಯುವರಿಗೆ ಸಂಪಾದಿಸಿದ ಕೀರ್ತಿಗೆ ಕಲಂಕವು ಹತ್ತದೆ ಹೋಗದು. ಆದಕಾರಣ ನೀವು ಈ ಮಹತ್ವದ ಕೆಲಸವನ್ನು

ಆದಷ್ಟು, ನಿರಾಕರಿಸುವದೇ ವಿಹಿತವು." ಎಂದು ಸರ್ವಾನುಮತದಿಂದ ಹೇಳಿದರು. ಸ್ವಕೀಯ ಜನರ ವಿಚಾರಪರಿಪ್ಲುತವಾದ ಅಭಿಪ್ರಾಯಕ್ಕೆ ಭಾವು ತಲೆದೂಗಿದನು. ಬಳಿಕ ಅವನು ನಾನಾ-ಶ್ರೀಮಂತರ ದರ್ಶನಕ್ಕೆ ಹೋದನು. ಅಲ್ಲಿ ರಾಜಶಿೀವಿಯಂತೆ, ಆಗತ-ಸ್ವಾಗತ ಸತ್ಕಾರವಾದ ಬಳಿಕ ಭಾವು ಉಚಿತಾಸನದಲ್ಲಿ ಕುಳಿತುಕೊಂಡನು. ದರಬಾರದ ಕೆಲವು ಮಾತುಕಥೆಗಳಾದ ತರುವಾಯ ನಾನಾಫಡಣವೀಸನು—'ಭಾವೂಸಾಹೇಬ, ಶ್ರೀಮಂತರು ನಿಜಾಮಅಲ್ಲಿಯಮೇಲೆ ದಾಳಿಯನ್ನು ಮಾಡುವದನ್ನು ನಿಶ್ಚೈಯಿಸಿರುವರು; ಆ ಸ್ವಾರಿಯ ಸರ್ವಾಧಿಪತ್ಯವನ್ನು ನೀವು ಸ್ವೀಕರಿಸಬೇಕೆಂದು ಸ್ವಾಮಿಯ ಆಜ್ಞೆಯಾಗಿರುವದು; ಆದದರಿಂದ ನೀವು ಪೇಶವೆಸೈನ್ಯದ ದಂಡನಾಯಕರಾಗಿ ಯಶಸ್ವಿಯಾಗಿ ಬರಬೇಕು'' ಎಂದು ಹೇಳಿದನು. ಅದಕ್ಕೆ ಭಾವು ಅತ್ಯಂತ ವಿನಯದಿಂದ—"ದಿವಾಣಸಾಹೇಬ, ನೀವನ್ನುವದು ನಿಜವು; ಸ್ವಾಮಿಯ ಆಜ್ಞೆಯು ಶಿರಸಾವಂದ್ಯವಾಗಿರುವದು. ಆದರೆ ಶ್ರೀಮಂತರ ಆಶ್ರಯದಲ್ಲಿ ನನಕಿಂತ ಶೂರರಾದ ಸರದಾರರು ಅನೇಕರುಂಟು. ಅವರ ಮುಂದೆ ನಾನು ಯ:ಕಚ್ಚಿತನು; ನನ್ನ ಅಪ್ಪಣೆಯನ್ನು ಆ ಸರದಾರವೀರರು ಹ್ಯಾಗೆ ಪಾಲಿಸುವರು? ಇದೆಲ್ಲವನ್ನು ಒಡೆಯರು ಮನದಂದು ವಿಚಾರ ಮಾಡಬೇಕೆಂದು ಬೇಡುವೆನು. ಸ್ವಾಮಿಯು ಆಜ್ಞಾಪಿಸುವ ಅನ್ಯ ಕಾರ್ಯಗಳನ್ನು ಮಾಡುವದಕ್ಕೆ ಸೇವಕನು ಸಿದ್ಧನಿರುವನು." ಎಂದು ವಿಜ್ಞಾಪಿಸಿದನು. ಹೀಗೆ ಭಾವು ಮೈಗೆ ಹಚಿಕೊಳ್ಳಲಿಲ್ಲ. ಆದರೆ ಕೆಲಸವು ಮಹತ್ವದ್ದು ಇದ್ದು ಅದನ್ನು ಉಳಿದವರ ಕಡಿಂದ ನಿರ್ವಹಿಸುವದು ಆಗುವದಿಲ್ಲೆಂಬುವದು ನಾನಾನ ಮನಸ್ಸಿನ ನಿಶ್ಚಯವು. ಆದ್ದರಿಂದ ಅವನು ಪುನ: ವಿಚಾರಮಾಡಿ "ಭಾವೂಸಾಹೇಬ, ನಿಮ್ಮ ಅಭಿಪ್ರಾಯವು ತಿಳಿಯಿತು. ನೀವು ಕೇವಲ ನಿಮ್ಮ ಕರ್ತವ್ಯಕರ್ಮದ ಮೇಲೆ ದೃಷ್ಟಿಯನ್ನಿಟ್ಟು, ಸ್ವಾಮಿಕಾರ್ಯವನ್ನು, ರಾಜನಿಷ್ಠೆಯಿಂದಲೂ, ದೃಢನಿಶ್ಚಯದಿಂದಲೂ, ಪ್ರಾಮಾಣಿಕತನದಿಂದಲೂ, ವಿಶ್ವಾಸದಿಂದಲೂ ಮಾಡುತ್ತಿರುವಿರೆಂಬ ಸಂಗತಿಯು ಶ್ರೀಮಂತರಿಗೆ ಸಂಪೂರ್ಣ ಗೊತ್ತು ಇರುತ್ತದೆ. ಅದರಿಂದಲೇ ನಿಮಗೆ ಪ್ರಸ್ತುತ ಸ್ವಾರಿಯ ಸರ್ವಾಧಿಪತ್ಯವು ಒಪ್ಪಿಸಲ್ಪಟ್ಟಿರುವದು. ನೀವೇ ಹೀಗೆ ಮೈದಗೆದರೆ, ಪೇಶವೆಯರ ಅಭಿಮಾನವನ್ನು ಯಾರು ಹಿಡಿಯಬೇಕು? ಕಾರಣ ನೀವು ಸ್ವಾಮಿಯ ಆಜ್ಞೆಯಂತೆ ಸರ್ವಾಧಿಪತ್ಯವನ್ನು ಅಂಗೀಕರಿಸರಿ. ನಿಮ್ಮ ಆಜ್ಞೆಯಂದರೆ

ಶ್ರೀಮಂತರ ಆಜ್ಞೆಯಿರುತ್ತದೆ; ಇದನ್ನು ಲಕ್ಷ್ಯದಲ್ಲಿಟ್ಟು ಎಲ್ಲರೂ ನಿಮ್ಮ ಹೇಳಿಕೆಯಂತೆ ನಡಿಯತಕ್ಕದ್ದು. ನಿಮ್ಮ ಆಜ್ಞೆಯನ್ನು ಉಲ್ಲಂಘನ ಮಾಡಿದವರನ್ನು ಯಥಾಯೋಗ್ಯ ಶಾಸನಮಾಡುವ ಸಂಪೂರ್ಣ ಅಧಿಕಾರವನ್ನು ಶ್ರೀಮಂತರು ನಿಮಗೆ ಕೊಟ್ಟಿರುವರು. ನಿಮಗೆ ಯಾವ ಮಾತಿನ ಕೊರತೆಯು ಬಾರದಂತೆ ನಾನು ನೋಡಿಕೊಳ್ಳುವೆನು. ಬಹಳ ಹೇಳುವದೇನು? ನೀವೇ ಈ ದಾಳಿಯ ದಂಡನಾಯಕರಾಗಿ ನಿಜಾಮನನ್ನು ಪರಾಭವಗೊಳಿಸಿ, ಸ್ವಾಮಿಯನ್ನು ಸಂತುಷ್ಟಗೊಳಿಸಬೇಕು. ಇದೇ ಶ್ರೀಮಂತರ ಕೊನೆಯ ಅಪ್ಪಣೆಯು." ಎಂದು ಮಾತಾಡಿದನು. ಹೀಗೆ ನಾನಾಫಡಣವೀಸನ ಚತುರ ಭಾಷಣವಾದ ಬಳಿಕ ಭಾವು ಸೇನಾಧಿಪತ್ಯವನ್ನು ವಹಿಸಲು ಒಪ್ಪಿದನು. ಕೂಡಲೆ ನಾನಾನು ಸಕಲ ಸರದಾರ, ಶಿಲೇದಾರ, ಮಾನಕರಿ ಮೊದಲಾದವರನ್ನು ಕೂಡಿಸಿ ದರಬಾರ ಮಾಡಿಸಿದನು. ಬಳಿಕ ಆತನು ಶ್ರೀಮಂತರ ಕಡೆಯಿಂದ ಭಾವೂಸಾಹೇಬನಿಗೆ ಸೇನಾಧಿಪತಿಯ ವಸ್ತ್ರ-ತಾಂಬೂಲಗಳನ್ನು ಕೊಡಿಸಿದನು. ಇಷ್ಟಾದ ಬಳಿಕ ನಾನಾಫಡಣವೀಸನು ಸರದಾರ, ಶಿಲೇದಾರ ಇತ್ಯಾದಿ ಸೇನಾ-ಪರಿವಾರದವರನ್ನು ಉದ್ದೇಶಿಸಿ "ಶೂರ ಸರದಾರ, ಶಿಲೇದಾರರೇ, ನೀವೆಲ್ಲರು ಶ್ರೀಮಂತರ ವಿಶ್ವಾಸದ ಸೇವಕರು. ಪೇಶವಾಯಿಯ ಉತ್ತರೋತ್ತರವು ನಿಮ್ಮೆಲ್ಲರ ಭುಜಬಲವನ್ನು ಅವಲಂಬಿಸಿರುತ್ತದೆ. ನೀವು ಒಮ್ಮನಿಸ್ಸಿನಿಂದಲೂ, ದೃಢನಿಶ್ಚಯದಿಂದಲೂ, ರಾಜನಿಷ್ಠೆಯಿಂದಲೂ ಪ್ರಭುಕಾರ್ಯವನ್ನು ಮಾಡಲುದ್ಯುಕ್ತರಾದರೆ, ನಿಮಗೆ ಸಾಧ್ಯವಾಗದಿದ್ದ ವಸ್ತುವೇ ಇಲ್ಲ. ಇಂಥ ನಿಜಾಮನು ಎಷ್ಟರವನು? ನಿಮ್ಮೆಲ್ಲರ ಭುಜಬಲಸಾಮರ್ಥ್ಯದಿಂದ ಪ್ರಸ್ತುತ ಕಾರ್ಯಭಾಗವು ಸಹಜವಾಗಿ ಕೊನೆಗಾಣುವದು. ಇದನ್ನು ಶ್ರೀಮಂತರು ಬಲ್ಲರು. ಆದರೂ ಯುದ್ಧದ ಕೆಲಸವು, ರಥಕ್ಕೆ ಸಾರಥಿಯು ಬೇಕಾಗುವಂತೆ, ಯುದ್ಧಕ್ಕೆ ಹೊರಡುವ ಸೇನಾ-ಸಮುದ್ರಕ್ಕೆ ದಳಪತಿಯು ಅವಶ್ಯವೇಬೇಕು. ಇದು ನಿಮಗೆ ಗೊತ್ತಿದ್ದ ಮಾತು. ಉತ್ತಮ ಸಾರಥಿಯಿಲ್ಲದ ರಥವು ಬಿದ್ದು ಪುಡಿಪುಡಿಯಾಗುವದು; ಹಾಗೆಯೇ ಉತ್ತಮ ದಂಡನಾಯಕನಿಲ್ಲದಿರಲು, ಪರಿಶ್ರಮದಿಂದ ಕೂಡಿಸಿದ ದಂಡು ನುಚ್ಚುನುರಿಯಾಗಿ ಹಾಳಾಗಿ ಹೋಗುವದು. ಇವೇ ಮೊದಲಾದ ಮಹತ್ವಸಂಗತಿಗಳ ಸಾರಾಸಾರ ವಿಚಾರಮಾಡಿ, ಸಾಂಪ್ರತ ಸ್ವಾರಿಯ ಸರ್ವಾಧಿಪತ್ಯವನ್ನು ಶ್ರೀಮಂತರು ನಾಮಾಂಕಿತ ಪಟವರ್ಧನ

ಸರದಾರವೀರನಾದ ಪರಶುರಾಮಪಂತಭಾವು ಇವರಿಗೆ ಒಪ್ಪಿಸಿರುವರು. ಭಾವುಸಾಹೇಬರ ಆಜ್ಞೆಯಂದರೆ ಪ್ರತ್ಯಕ್ಷ ಪ್ರಭುವಿನ ಆಜ್ಞೆಯಂದು ತಿಳಿದು, ಅದನ್ನು ಶಿರಸಾವಹಿಸಿ ಅದಕ್ಕನುಸರಿಸಿ ವರ್ತಿಸಿ ಸ್ವಾಮಿಕಾರ್ಯ ವನ್ನು ಸಾಂಗಗೊಳಿಸಿ ಅಪೂರ್ವವಿಜಯವನ್ನು ಸಂಪಾದಿಸಬೇಕು." ಎಂದು ಆಜ್ಞಾಪಿಸಿದನು.

ಈ ಪ್ರಸಂಗದಲ್ಲಿ ಇನ್ನೂ ಎರಡು ಸಂಗತಿಗಳು ಸಂಘಟಿಸಿದವು. ಭಾವು ಸೇನಾಧಿಪತ್ಯವನ್ನು ಸ್ವೀಕರಿಸಬೇಕೆಂದು ನಾನಾಫಡಣವೀಸನು ಬಹಳ ಆಗ್ರಹಮಾಡತೊಡಗಿದನು. ಆಗ್ಗೆ ಭಾವು ಹಿಂದಿನ ದಾಳಿಯ ವೆಚ್ಚ ವನ್ನು ಇನ್ನೂ ಸರಕಾರದವರು ಮಂಜೂರ ಮಾಡಿಲ್ಲ; ಕಾರಣ ಸಾಹು ಕಾರರು ತನ್ನ ಬೆನ್ನುಹತ್ತಿರುವರು; ಎಂದು ಗುಣುಗುಟ್ಟಿದನು. ಕೂಡಲೆ ಆ ಚತುರ ಸಚಿವನು ತನ್ನ ಕಿಶೆಯೊಳಗಿಂದ ಶ್ರೀಮಂತರ ಸಹಿ ಮತ್ತು ಮೋಹರ ಆದ ಒಂದು ಕಾಗದವನ್ನು ತೆಗೆದು, ಅದನ್ನು ಪರಶುರಾಮಭಾವುನ ಸ್ವಾಧೀನಮಾಡಿದನು; ಅದರಲ್ಲಿ ಹಿಂದಿನ ಸ್ವಾರಿಯ ವೆಚ್ಚವನ್ನು ಮಂಜೂರ ಮಾಡಿರುತ್ತದೆಂದು ಉಲ್ಲೇಖವಾಗಿತ್ತು; ಕೂಡಲೆ ನಾನಾನು ಆ ಸ್ವಾರಿಯ ಖರ್ಚಿನ ಎಲ್ಲ ಹಣವನ್ನು ಭಾವುಗೆ ಕೊಡಲಿಕ್ಕೆ ಖಜೀನದಾರನಿಗೆ ಆಜ್ಞಾಪಿಸಿದನು. ಈ ಚಿಕ್ಕ ಸಂಗತಿಯಿಂದ ನಾನಾನ ಧೂರ್ತತನವೂ, ಭಾವುಸಾಹೇಬನ ಕಾರ್ಯಸಾಧನ ಪ್ರಯತ್ನವೂ ವ್ಯಕ್ತವಾಗುತ್ತವೆ.

ಎರಡನೆ ಸಂಗತಿಯು ಯಾವದೆಂದರೆ—ಭಾವು ಸೇನಾಪತಿಯ ವಸ್ತ್ರ-ತಾಂಬೂಲಗಳನ್ನು ಸ್ವೀಕಾರಮಾಡಿದ ಬಳಿಕ ಆತನು ಶ್ರೀಮಂತರನ್ನು ವಿನಯದಿಂದ ನಮಸ್ಕರಿಸಿ ನಾನಾಫಡಣವೀಸನನ್ನು ಉದ್ದೇಶಿಸಿ "ದಿವಾಣ ಸಾಹೇಬ, ಸ್ವಾಮಿಯು ಪುಣ್ಯಪ್ರತಾಪಿಯು; ಯಶವು ನಿಶ್ಚಯವಾಗಿ ಲಭ್ಯ ವಾಗುವದು. ಆದರೂ ಯುದ್ಧದ ಪ್ರಸಂಗವು. ಎಲ್ಲಕಾಲವು ಒಂದೇ ಸಮ ನಿರುವದಿಲ್ಲ. ಆದದರಿಂದ ಒಳಿತು-ಕೇಡುಗಳ ವ್ಯವಸ್ಥೆಯನ್ನು ಮೊದಲೇ ಮಾಡಿಕೊಂಡಿರುವದು ಉಚಿತವು. ಸೈನ್ಯವಂತೂ ಅಸಂಖ್ಯವಾಗಿರುವದು. ನಿಜಾಮನ ಸರಹದ್ದಿಗೆ ಹೋದ ಬಳಿಕ ಅಲ್ಲಿ ಅನ್ನ-ಹುಲ್ಲುಗಳ ತಾಪತ್ರಯ ವಾಗುವ ಸಂಭವವುಂಟು. ಇವೆಲ್ಲವುಗಳ ಸಿದ್ಧತೆಯನ್ನು ಮುಂಚಿತವಾಗಿ ಮಾಡಿಕೊಳ್ಳುವದು ಒಳ್ಳೇದು. ಈ ಬಗ್ಗೆ ನೀವು ಏನು ವ್ಯವಸ್ಥೆಯನ್ನು ಮಾಡಿರುವಿರಿ" ಎಂದು ಕೇಳಿದನು. ಭಾವು ಇಷ್ಟು ಮಾತಾಡುವಷ್ಟರಲ್ಲಿ

ನಾನಾಫಡಣವೀಸನು ಒಬ್ಬ ಉದ್ಯೋಗಸ್ಥನಿಗೆ ಕೈಸನ್ನೆಮಾಡಿದನು. ಕೂಡಲೆ ಆತನು ಒಂದು ದಪ್ತರವನ್ನು ನಾನಾನ ಮುಂದೆ ತಂದು ಇರಿಸಿದನು. ಅದನ್ನು ಬಿಚ್ಚಿ ನಾನಾನು ಒಂದೊಂದೇ ಕಾಗದವನ್ನು ಭಾವೂಗೆ ಕ್ರಮದಿಂದ ತೋರಿಸಿದನು. ಅವುಗಳಲ್ಲಿ ಕಾಳಗದ ಸೌರಣೆಯು ಯಾವ ಪ್ರಕಾರ ಇರಬೇಕು; ತೋಫುಖಾನೆಯ ವ್ಯವಸ್ಥೆಯನ್ನು ಹ್ಯಾಗೆ ಮಾಡಿರಬೇಕು? ಸೈನ್ಯದ ಆಶ್ರಯದ ಸ್ಥಳಗಳು ಯಾವು? ಯುದ್ಧಕ್ಕೆ ಎದುರಾಗಿ ನಿಲ್ಲತಕ್ಕ ಆಯಮೆಟ್ಟಿನ ಜಾಗೆಗಳು ಯಾವು? ಶತ್ರುಸೈನ್ಯವು ಎಷ್ಟು? ಅವರ ಕೋಟೆಕೊತ್ತಳಗಳ ಬಲಾಬಲವು ಎಷ್ಟು? ಇತ್ಯಾದಿ ಯುದ್ಧೋಪಯುಕ್ತವಾದ ಮಹತ್ವದ ವಿಷಯಗಳು ಬರೆಯಲ್ಪಟ್ಟಿದ್ದವು. ಇದಲ್ಲದೆ, ನಿಜಾಮುಸರಕಾರದ ಸರಹದ್ದಿನ ೨೫ ಹರದಾರಿಯ ಅಂತರದೊಳಗಿರುವ ಪೇಶವೆಯರ ಮಾಂಡಲೀಕರಾದ ಎಲ್ಲ ಕಿಲ್ಲೇದಾರ, ಠಾಣೇದಾರ, ಪಾಳೇಗಾರ ಇತ್ಯಾದಿ ಚಿಕ್ಕದೊಡ್ಡ ಅಮಲದಾರರು, ಇಡೀ ದಂಡಿಗೆ ಒಂದು ವರ್ಷದವರೆಗೆ ಸಾಕಾಗುವಷ್ಟು ಅನ್ನ-ಹುಲ್ಲು ಮುಂತಾದ ಸಾಮಗ್ರಿಗಳನ್ನು ಪೂರೈಸಿ ಕೊಡುವೆವೆಂದು ಬರೆದ ಪತ್ರಗಳೂ ಆ ಗಂಟಿನಲ್ಲಿ ಇದ್ದವು. ಈ ಮಾತಿನ ಮೇಲಿಂದ ದಾಳಿಯ ಕೆಲಸದಲ್ಲಿ ಭಾವೂನ ದೂರದೃಷ್ಟಿಯೂ, ಹಾಗೂ ನಾನಾಫಡಣವೀಸನ ಧೋರಣವೂ, ಜಾಣತನವೂ ಗೊತ್ತಾಗುವವು.

ಮೇಲೆ ಹೇಳಿದಂತೆ ಆ ವಿಶಾಲ ಸೇನಾಸಾಗರದ ಸರ್ವಾಧಿಪತ್ಯವು ಪರಶುರಾಮಭಾವೂಗೆ ಕೊಡಲ್ಪಟ್ಟಿತು. ಶಿಂದೆ, ಹೋಳಕರ, ಗಾಯಿಕವಾಡ, ಭೋಸಲೆ ಮೊದಲಾದ ಮಹಾಮಹಾ ರಣಧುರೀಣ ಸರದಾರರು ಸೈನ್ಯಸಮೇತ ರಾಜಧಾನಿಯಲ್ಲಿಯೇ ಇರುತ್ತಿರಲು, ಅವರೆಲ್ಲರನ್ನು ಬದಿಗಿಟ್ಟು ಶ್ರೀಮಂತ ಸವಾಯಿಮಾಧವರಾಯರ ಕಡೆಯಿಂದ ನಾನಾನು ಆ ಅದ್ಭುತ ಸೇನಾಸಮುದ್ರದ ಸರ್ವಾಧಿಪತ್ಯವನ್ನು ಪರಶುರಾಮಭಾವೂನ ಕಡೆಗೆ ಒಪ್ಪಿಸಿಕೊಟ್ಟನು. ಇದರ ಮೇಲಿಂದ ಆಗ ಮರಾಠಾರಾಜ್ಯದಲ್ಲಿ ಪರಶುರಾಮಭಾವೂನ ಶೌರ್ಯ, ಸಾಹಸ, ಯುದ್ಧ-ಕೌಶಲ್ಯ ಮುಂತಾದವುಗಳು ಎಷ್ಟು ಹೆಚ್ಚಳವನ್ನು ಹೊಂದಿದ್ದವೆಂಬುದು ಸಹಜವಾಗಿ ವ್ಯಕ್ತವಾಗುತ್ತದೆ. ಸಕಲ ಸರದಾರರು ಆ ನರವೀರನ ಪರಾಕ್ರಮಕ್ಕೆ ತಲೆದೂಗುತ್ತಿದ್ದರು. ಹಾಗಿರದಿದ್ದರೆ ಸಂಪೂರ್ಣ ಮರಾಠಾ ಸೈನ್ಯ-ಸಾಗರದ ಸರ್ವಾಧಿಪತ್ಯವು ಆ ಬ್ರಾಹ್ಮಣ ವೀರಶಿರೋಮಣಿಗೆ ಸಿಗುವ ಬಗೆ ಹ್ಯಾಗೆ? ಮರಾಠಾ ಸರದಾರರು ಬಹಳೇ

ಅಭಿಮಾನವುಳ್ಳವರು; ಅಭಿಮಾನಕ್ಕೆ ಧಕ್ಕೆ ಬಂದರೆ ಅವರು ತಮ್ಮ ಜೀವವನ್ನು ಸಹ ಲೆಕ್ಕಿಸರು. ಅಂಥ ಮರಾಠಾ ಸರದಾರರು ಯಾವ ಪಕ್ಷದಲ್ಲಿ ಭಾವೂಸಾಹೇಬನ ಅಪ್ಪಣೆಯನ್ನು ಶಿರಸಾ ಮಾನ್ಯಮಾಡಿ ತದನುಸಾರ ನಡೆಯಲು ಒಪ್ಪಿಕೊಂಡರೋ ಆ ಪಕ್ಷದಲ್ಲಿ ಆ ವೀರಾಗ್ರಣಿಯ ಪರಾಕ್ರಮ, ಯುದ್ಧ-ಚಾತುರ್ಯಗಳು ತಮ್ಮೆಲ್ಲರಕಿಂತ ಶ್ರೇಷ್ಠವಾದವೆಂಬುದನ್ನು ಅವರು ತಾವಾಗಿಯೇ ಮಾನ್ಯ ಮಾಡಿದಂತಾಯಿತು. ಈ ಪ್ರಕಾರ ಆ ಸೇನಾನಾಯಿಕನಾದ ಬ್ರಾಹ್ಮಣಸರದಾರನ ಯೋಗ್ಯತೆಯು ಎಷ್ಟು ದೊಡ್ಡದು? ಹೋಳಕರ, ಜೀವುಬಾಬಕ್ಷಿ, ಬಾಬುರಾವ ಫಡಕೆ, ರಘೂಜಿ ಭೋಸಲೆ ಇತ್ಯಾದಿ ಮರಾಠಾ ಸರದಾರರ ಮೇಲೆಯೂ; ಡಿಬೊಯಿನ್ನ, ಪೇರಿನ ಇತ್ಯಾದಿ ಫ್ರೆಂಚ ಸರದಾರರ ಮೇಲೆಯೂ, ಆ ವೀರವರನು ತನ್ನ ಅಮಲು ನಡೆಸಬೇಕಾದರೆ ಆತನ ಶೌರ್ಯ-ಸಾಗರವು ಎಷ್ಟು ಆಳವಾದದ್ದು? ಮತ್ತು ಆತನ ರಣಪಾಂಡಿತ್ಯವು ಎಷ್ಟು ಲೋಕಮಾನ್ಯತೆಯನ್ನು ಹೊಂದಿತ್ತು? ಇವೇ ಮೊದಲಾದ ಪ್ರಶ್ನಗಳ ಉತ್ತರವನ್ನು ವಾಚಕರೇ ತಾಡಿಸಿ ನೋಡಿ ತಿಳಕೊಳ್ಳಬೇಕು.

ಈ ಮೇರೆಗೆ ಸಕಲ ಸಿದ್ಧತೆಯಾದ ಬಳಿಕ ಶ್ರೀಮಂತ ಸವಾಯಿಮಾಧವರಾವ ಪೇಶವೆ ಇವರ ಸ್ವಾರಿಯು ಡೇರೆಗೆ ಬಂದು ಕೂಡುವಗೋಸ್ಕರ ಶಕೆ ೧೭೧೬ ಮಾರ್ಗಶೀರ್ಷ* ಶುದ್ಧ ೮ ರವಿವಾರ ಮುಂಜಾನೆ ಸುಮುಹೂರ್ತವು ನಿಶ್ಚಯವಾಯಿತು. ರಾಜಧಾನಿಯ ಹೊರಗೆ ಗಾರಾಪೀರಾದ ಸಮೀಪದಲ್ಲಿ ಸುಶೋಭಿತವಾದ ಡೇರೆಯು ಸಿದ್ಧವಾಯಿತು. ಸುಮುಹೂರ್ತದಲ್ಲಿ ಶ್ರೀಮಂತರು ಡೇರೆಗೆ ಬಂದರು. ಬಳಿಕ ಅಲ್ಲಿ ದರಬಾರ ನೆರೆಯಿತು. ಪ್ರಧಾನ, ಸರದಾರ, ಶಿಲೇದಾರ, ಮಾನಕರಿ ಮುಂತಾದವರು ಶ್ರೀಮಂತರಿಗೆ ಕಾಣಿಕೆಗಳನ್ನು ಕೊಟ್ಟರು. ಗಾರಾಪೀರಾದಲ್ಲಿ ಶ್ರೀಮಂತರು ೮-೧೦ ದಿವಸ ನಿಂತುಕೊಂಡರು. ಬಳಿಕ ಶ್ರೀಮಂತರ ಸ್ವಾರಿಯು ಅಲ್ಲಿಂದ ಹೊರಟಿತು. ಮೊದಲ ಮಜಲು ಥೇವೂರ-ಕೋಳವಡಿ ಮಧ್ಯದಲ್ಲಿ ಆದ ಮುಳಾ-ಮುಠಾ ನದಿಯ ಸಂಗಮದ ಕಿನ್ನಾರದಲ್ಲಿ ಆಯಿತು. ಅಲ್ಲಿಯೇ ಮಕರಸಂಕ್ರಮಣದ ಹಬ್ಬವಾಯಿತು. ಸಂಗಡ ಇದ್ದ ಸೈನ್ಯವು ದೊಡ್ಡದು; ಅದರಿಂದ ಹಾದಿಯಲ್ಲಿ

* ಅನ್ಯತ್ರ 'ಪೌಷ್ಯಮಾಸ'ವೆಂದು ಬರಿಯಲ್ಪಟ್ಟಿರುವದು.

ಅನ್ನ-ನೀರು, ಹುಲ್ಲು ಮೊದಲಾದ ಪದಾರ್ಥಗಳು ಕೊರತೆಯಾಗಬಾರದೆಂದು ಸರ್ವಾಧಿಪತಿಯಾದ ಭಾವು ಆಲೋಚಿಸಿ, ದಂಡಿನಲ್ಲಿ ಬೇರೆ ಬೇರೆ ತಂಡಗಳನ್ನು ಮಾಡಿ ಅವು ಬೇರೆ ಬೇರೆ ಹಾದೀಹಿಡಿದು ಸಾಗಬೇಕೆಂತಲೂ, ಅಪ್ಪಣೆಯಾದ ಕೂಡಲೆ ಏಕತ್ರ ಕಲೆಯಬೇಕೆಂತಲೂ ನಿಯೋಜಿಸಿದನು. ತಾನು, ಹೋಳಕರ ಈ ಪ್ರಕಾರ ಇಬ್ಬರು ಸೈನ್ಯದೊಂದಿಗೆ ಮುಂದೆ ಹೋಗಬೇಕು; ಶ್ರೀಮಂತ ಸವಾಯಿಮಾಧವರಾವ, ನಾನಾಫಡಣವೀಸ ಮೊದಲಾದ ಪ್ರಧಾನರು, ಬಾಬುರಾವ ಫಡಕೆ ಇಂತಿಷ್ಟು ಜನರು ಹುಜೂರಸೈನ್ಯದೊಂದಿಗೆ ಒಂದು ಮಜಲು ಹಿಂದಿನಿಂದ ಬರಬೇಕು; ತೋಫಖಾನೆ ಮುಂತಾದ ಭಾರದ ಸಾಮಾನುಗಳು ಹಿಂದಿನಿಂದ ಬರಬೇಕು; ಹೀಗೆ ಪರಶುರಾಮ ಭಾವು ಕಾಲೋಚಿತ ವ್ಯವಸ್ಥೆಗೊಳಿಸಿದನು. ಥೇವೂರನಿಂದ ಹೊರಟು ಶ್ರೀಮಂತರ ಸ್ವಾರಿಯ ಮುಕ್ಕಾಮು ಮುಳಾ-ಮುಠಾ ನದಿಯ ದಂಡೆಯ ಮೇಲಿರುವ ದಹಿಠಣಬಾಮಗಾಂವ ಬಳಿಯಲ್ಲಿ ಆಯಿತು; ಅಲ್ಲಿಂದ ಪಾರಗಾಂವ ಮತ್ತು ಬಾಳಕಿಗ್ರಾಮಗಳ ನಡುವೆ ಶ್ರೀ ಭೀಮಾ-ಮುಳಾ-ಮುಠಾ ನದಿಗಳ ಸಂಗಮವಾಗಿದ್ದು ಅದರ ಸಮೀಪದಲ್ಲಿ ಶ್ರೀಮಂತರು ಪರಿವಾರದೊಡನೆ ಇಳಕೊಂಡರು; ಅಲ್ಲಿಂದ ಮುಂದಿನ ಮಜಲು ಮಾಂಡಣಗಾಂವದ ಮೇಲಿಂದ ಹಾಯ್ದು ಕಾಷ್ಟಿ ಮತ್ತು ತಾಂದಳಿ ಗ್ರಾಮಗಳ ನಡುವೆ ಘೋಡ ನದಿಯ ದಂಡೆಯ ಮೇಲೆ; ಅಲ್ಲಿಂದ ಆಡಳಗಾಂವದಲ್ಲಿ; ಮುಂದಿನ ಮುಕ್ಕಾಮ ಘೋಸಲೆಗಾಂವದ ಬಳಿಯಲ್ಲಿರುವ ಗುಡ್ಡದ ಕೊನ್ನಾರವನ್ನು ದಾಟಿ ಮಿರಜೆಯ ಮೇಲಿಂದ ಹಾಯ್ದು, ಪೂರ್ವಕ್ಕಿರುವ ನಾಗಲವಾಡಿ ಮತ್ತು ಸಾಂಗವಿ ಇವೆರಡರ ಮಧ್ಯದಲ್ಲಿ ಸೀನಾನದಿಯ ತಟಾಕದ ಮೇಲೆ ಆಯಿತು; ಅಲ್ಲಿಂದ ಫಕೀರಾಬಾದದಲ್ಲಿ ಆಯಿತು. ಹೀಗೆ ಮಜಲಿನ ಮೇಲೆ ಮಜಲು ಮಾಡುತ್ತ ಶ್ರೀಮಂತರು ಪರಿವಾರದೊಂದಿಗೆ ಪ್ರವಾಸಮಾಡತೊಡಗಿದರು.

ಇತ್ತ ಪರಶುರಾಮಭಾವು ಶತ್ರು-ಸೀಮೆಯಲ್ಲಿ ಪೇಶವೆಸರಕಾರದ ಅಮಲು ಕೂಡ್ರಿಸುವದಕ್ಕಾಗಿ ಬೇರೆ ಬೇರೆ ಸೇನಾಭಾಗಗಳನ್ನು ಕಳಿಸಿಕೊಟ್ಟನು; ಪ್ರತಿಪಕ್ಷದ ಜನರಿಗೆ ಅನ್ನಸಾಮಗ್ರಿಯು ದೊರಕದಂತೆ ವ್ಯವಸ್ಥೆಮಾಡುವದಕ್ಕೆ ಪೆಂಡಾರಿ ಜನರನ್ನು ಸ್ವಾರರೊಡನೆ ಮುಂದೆ ಕಳಿಸಿದ್ದನು; ಮತ್ತು ಹಿಂದಿನಿಂದ ಬರುವ ಸಾಮಾನಗಳ ವ್ಯವಸ್ಥೆಯನ್ನು ಚನ್ನಾಗಿ ಮಾಡಿ ತಾನು ಸೈನ್ಯಸಹಿತ ನಿಜಾಮನರಾಜ್ಯವನ್ನು ಒಳನುಗ್ಗಿದನು. ಫಕೀರಾಬಾದದ ಬಳಿ

ಯಲ್ಲಿ ಶಿಂದೇನ ವೃದ್ಧ, ಅನುಭವಿಕ ಮತ್ತು ಶೂರಸರದಾರನಾದ ಜೀವುಬಾಬ ಕ್ಷಿಯು, ಶಿಂದೇನ ಮಿಕ್ಕದಂಡು, ತೋಫಖಾನೆ, ಕಂಪೂ, ಪಲಟಣಗಳೊಡನೆ ಉತ್ತರ ಹಿಂದುಸ್ಥಾನದಿಂದ ಬಂದು ಕೂಡಿಕೊಂಡನು. ಅವನು ತನ್ನ ಸೈನ್ಯವನ್ನೂ, ತೋಫಖಾನೆ ಇತ್ಯಾದಿ ಯುದ್ಧೋಪಕರಣಗಳನ್ನೂ ಶ್ರೀಮಂತರಿಗೆ ತೋರಿಸಿದನು. ಕವುಡಗಾಂವದಲ್ಲಿ ಭೋಸಲೆಯು ಬಂದು ಕೂಡಿದನು.

ಈ ದಾಳಿಯ ಸಂಗಡ ಸರ್ವಾಧಿಪತಿಯಾದ ಪರಶುರಾಮಭಾವೂನ ಹೊರ್ತು, ದೌಲತ್ರಾವ ಶಿಂದೆ, ಆತನ ಶೂರಸೇನಾಧೀಶನಾದ ಜೀವುಬಾದಾದಾಬಕ್ಷಿ, ಫಡಕೆ ಹರಿಪಂತನ ಮಗನಾದ ಬಾಬುರಾವ (ಹುಜೂರಸೈನ್ಯಾಧಿಕಾರಿಯು), ತುಕೋಜಿರಾವ ಹೋಳಕರ, ರಘೂಜಿರಾವ ಭೋಸಲೆ, ಫತ್ತೇಸಿಂಗ ಗಾಯಿಕವಾಡ, ಜಾನರಾವನಾಯಿಕ ನಿಂಬಾಳಕರ ಮುಂತಾದ ನಾಮಾಂಕಿತ ಸರದಾರವೀರರು ಇದ್ದರು. ಇದಲ್ಲದೆ ಡಿಬಾಯಿನ ಮತ್ತು ಪೇರಿನ ಎಂಬ ಫ್ರೆಂಚಸರದಾರರು ತಿದ್ದಿ ತಯಾರಿಸಿದ ಶಿಂದೇನ ಶೂರಪಲಟಣ ಮತ್ತು ಸಜ್ಜಾಗೊಳಿಸಿದ ತೋಫಖಾನೆ, ದ್ರುದೇರಿಯು ಕೈಕೆಳಗೆ ಕವಾಯಿತ ಕಲಿತ ಭೋಸಲೆಯ ಹೆಸರಾದ ಪಲಟಣಗಳು ಹೊರಟು ಬಂದಿದ್ದವು. ಪಾನಸೆ ಮುಂತಾದ ಬ್ರಾಹ್ಮಣ ಸರದಾರರೂ, ಪ್ರತಿನಿಧಿ ಮೊದಲಾದ ಅಷ್ಟಪ್ರಧಾನರೂ, ಚಿಂತಾಮಣರಾವ ಸಾಂಗಲಿಕರ, ರಘುನಾಥರಾವ ಕುರುಂದವಾಡಕರ, ನಾರಾಯಣರಾವ ಮತ್ತು ಮಾಧವರಾವ ಮಿರಜಕರ ಇತ್ಯಾದಿ ಪಟವರ್ಧನ ಪ್ರಭೃತಿಗಳೂ ತಮ್ಮ ತಮ್ಮ ಸೇನಾಭಾಗದೊಂದಿಗೆ ಬಂದಿದ್ದರು. ಸರ್ವಾಧಿಪತಿಯ ಶೂರ ಮಕ್ಕಳಾದ ರಾಮಚಂದ್ರರಾವ ಅಪ್ಪಾಸಾಹೇಬ, ಹರಿಪಂತಬಾಬಾಸಾಹೇಬ ಇವರಿಬ್ಬರು ತಂದೆಯೊಡನೆ ಹೊರಟು ಬಂದಿದ್ದರು. ಹೀಗೆ ಏಕತ್ರ ಕಲೆತ ಆ ಸೈನ್ಯಸಂಖ್ಯೆಯು ಹೆಚ್ಚುಕಡಿಮೆ ಒಂದೂವರೆ ಲಕ್ಷವಿತ್ತು. ಇದರ ಹೊರ್ತು ಬಾಜಾರಬುಣಗು ಬೇರೆ; ಸಾರಾಂಶ ಹಿಂದೆ ಘನಘೋರ ಪಾನಿಪತ್ತದ ದಂಡಯಾತ್ರೆಗೆ ಹೊರಟ ಸೈನ್ಯಕ್ಕೆ ಈ ದಂಡು ಸರಿಯಾಗಿತ್ತು. ಇಂತಿಷ್ಟು ಶೂರಸರದಾರರಿಂದೊಡಗೂಡಿದ ಅದ್ಭುತಸೈನ್ಯಸಾಗರವು ಮುಂದೆ ಮರಾಠಾ ಸಾಮ್ರಾಜ್ಯದಲ್ಲಿ ಎಂದೂ ಏಕತ್ರ ಕಲೆಯಲಿಲ್ಲ.

ಇತ್ತ ನಿಜಾಮನು, ಮರಾಠಾಸೈನ್ಯವು ಪುಣೆಯನ್ನು ಬಿಟ್ಟು ಹೊರಟ ಮೊದಲೇ, ತನ್ನ ದಂಡಿನೊಡನೆ ಬೇದರ ಬಿಟ್ಟು ಹೊರಟಿದ್ದನು. ಪೇಶವೆಯರ ದಂಡು ಹೊರಟ ಸುದ್ದಿಯನ್ನು ಕೇಳಿದೊಡನೆ, ಆತನು ತನ್ನ ಸೈನ್ಯಸಮೇತ

ಮಾಂಜರಾನದಿಯ ದಂಡೆಗುಂಟ ಸಾಗಿ ಬಂದು ಪೇಶ್ವೆಸರಕಾರದ ಪ್ರದೇಶಗಳನ್ನು ಒಳನುಗ್ಗುವ ಪ್ರಯತ್ನದಲ್ಲಿದ್ದನು; ನಿಜಾಮನು ಖರ್ಡೆಯ ಕೋಟೆಗೆ ಬರುವ ಉದ್ದೇಶದಿಂದ ಮೋಹರಿಘಟ್ಟವನ್ನು ಇಳಿದು ಬಂದು ಖರನದಿಯ ತಟಾಕದ ಮೇಲಿರುವ ತಳಸಂಗಿಗೆ ಬಂದು ಬೀಡುಬಿಟ್ಟನು. ಅಷ್ಟರಲ್ಲಿ ಮರಾಠಾಸೈನ್ಯವೂ ಬಂದು ತಳವೂರಿತು. ಅವೆರಡು ದಂಡುಗಳ ನಡುವಿನ ಅಂತರವು ಸುಮಾರು ಮೂರೇ ಹರದಾರಿಯಿತ್ತು. ನಿಜಾಮನು ಸಾಗಿ ಬಂದ ವರ್ತಮಾನವು ಭಾವೂಗೆ ಹತ್ತಿತು. ಆಗ ಅತನು ದೌಲತ್ತರಾವ ಶಿಂದೆ, ಇನ್ನೂ ಕೆಲವು ಸರದಾರರನ್ನು ಅವರವರ ಸೈನ್ಯಸಹಿತ ಶ್ರೀಮಂತ ಸವಾಯಿ ಮಾಧವರಾಯರ ಮೈಗಾವಲಿಗೆ ನೇಮಿಸಿದನು. ಭಾವೂಸಾಹೇಬನು ತಾನು ಸ್ವತಃ ಟೊಂಕಕಟ್ಟಿ, ಬಾಬುರಾವ ಫಡಕೆ ಜೀವುಬಾದಾದಾ ಬಕ್ಷಿ, ತುಕೋಜಿರಾವ ಹೋಳಕರ, ರಘೂಜಿರಾವ ಭೋಸಲೆ, ಮತ್ತು ಚಿಂತಾಮಣರಾವ ಪಟವರ್ಧನ ಇತ್ಯಾದಿ ಶೂರ ಶಾರ್ದೂಲರನ್ನು ಕೂಡಿಕೊಂಡು, ಆರಿಸಿ ತೆಗೆದ ಸಹಾಯಕಸೈನ್ಯದೊಂದಿಗೆ ಫಾಲ್ಗುಣ ವದ್ಯ ಪ್ರತಿಪದೆಯ ದಿವಸ ನಿಜಾಮನ ಮೇಲೆ ಸಾಗಿ ನಡೆದನು. ಮರುದಿವಸವೇ ಪರಸ್ಪರ ಯುದ್ಧವು ಪ್ರಾರಂಭವಾಯಿತು. ಆಗ ಬಾಬೂರಾವ ಫಡಕೆ ಹುಜೂರಸೈನ್ಯದ ಮೇಲಾಧಿಕಾರಿಯು ಒಮ್ಮಿಂದೊಮ್ಮೆ ಶತ್ರುಗಳ ಮೇಲೆ ಸಾಹಸದಿಂದ ಏರಿಹೋದನು. ಆದರೆ ಆತನು ಶೂರನಿದ್ದರೂ ಕಾಳಗದಲ್ಲಿ ಅಷ್ಟೊಂದು ನುರತವನಲ್ಲ; ತೀರಾ ಹೊಸಬನು. ಇದಲ್ಲದೆ ಅವನು ಬಹು ಅವಸರ ಮಾಡಿದರಿಂದ ಅವನಿಗೆ ಜಯವಾಗದೆ ತಾನೇ ಹಿಂದಕ್ಕೆ ಸರಿಯಬೇಕಾಯಿತು. ಅಂದಿನ ಅಲ್ಪ ಜಯದಿಂದ ನಿಜಾಮನು ಹಿರಿಹಿರಿ ಹಿಗ್ಗಿದನು; ಮುಂದೆ ಯುದ್ಧದಲ್ಲಿ ಖಂಡಿತವಾಗಿ ತನಗೆ ಗೆಲವಾಗುವದೆಂದು ತಿಳಿದು ಆ ಯವನಭೂಪತಿಯು ದರಬಾರು ಕೂಡಿಸಿ ಆನಂದ-ಸೂಚಕ ಕಾಣಿಕೆಗಳನ್ನು ತಕ್ಕೊಂಡನು; ನೃತ್ಯಗಾಯನಗಳು ನಡೆದವು; ಎಲ್ಲ ಸರದಾರರು ನಾನಾಬಗೆಯ ವಿಲಾಸಲಹರಿಯಲ್ಲಿ ಮುಳುಗಿಹೋಗಿದ್ದರು. " ಪರಶುರಾಮಭಾವೂನಂಥ ಪ್ರಬಲವೈರಿಯು ಇನ್ನೂ ಹಿಂದೆ ಇರುವನು; ಆತನೊಡನೆ ಕಾದುವ ಪ್ರಸಂಗವು ಮುಂದೆ ಇರುವದು " ಇತ್ಯಾದಿ ವಿಚಾರವು ಆನಂದಮಗ್ನನಾದ ನಿಜಾಮನ ತಲೆಯಲ್ಲಿ ಬಾರದೆ ಆತನು ಮೈ ಮರೆತನು. ನಿಜಾಮನ ಸೈನ್ಯ-ಸಮೂಹದಲ್ಲಿ ಅಂದಿನ ದಿವಸ ಹರ್ಷ-ವಾಯು ಸಂಚರಿಸಹತ್ತಿತು.

ಇತ್ತ ಬಾಬುರಾಯನು ಸಾವರಿಸಿಕೊಂಡು ತಿರುಗಿ ಬಂದು ಉಳಿದ ಸರದಾರರನ್ನು ಕೂಡಿಕೊಂಡನು. ಅಂದಿನ ರಾತ್ರಿ ಜೀವುಬಾದಾದಾಬಕ್ಷಿಯು ಪಿಂಪಳಗಾಂವದಲ್ಲಿ; ಭಾವು, ಬಾಬುರಾವ ಮತ್ತು ಚಿಂತಾಮಣರಾವ ಈ ಮೂವರು ಘೋಡೆಗಾಂವದಲ್ಲಿ; ರಘುಜಿರಾವ ಭೋಸಲೆ, ತುಕೋಜಿರಾವ ಹೋಳಕರ ಮುಂತಾದವರು ವಾಘಗಾಂವದಲ್ಲಿ; ಈ ಪ್ರಕಾರ ಮರಾಠಾ ಸರದಾರರು ಆ ರಾತ್ರಿಯನ್ನು ಕಳೆದರು.

ತೃತಿಯಾ-ದಿವಸ ಉಭಯಪಕ್ಷದ ಜನರು ಯುದ್ಧದ ಗೊಡವಿಗೆ ಹೋಗದೆ ಸ್ವಸ್ಥ ಹೊತ್ತು ಕಳೆದರು; ಚತುರ್ಥಿಯ ದಿವಸ ನಿಜಾಮನು ತನ್ನ ಬೀಡು ಕಿತ್ತಿಕೊಂಡು ವಾಕಿಗಾಂವಕ್ಕೆ ಹೋದ ಸುದ್ದಿಯು ಮರಾಠಾಸರದಾರರಿಗೆ ಗೊತ್ತಾಯಿತು; ಅದರಿಂದ ಅವರು ತಮ್ಮ ಶಸ್ತ್ರಾಸ್ತ್ರ, ತೋಫು, ಮೊದಲಾದವುಗಳನ್ನು ಸಜ್ಜು ಮಾಡಿಕೊಂಡು ಕಾಳಗಕ್ಕೆ ಸಿದ್ಧರಾದರು. ಪೇಶವೆಸೈನಿಕರು ನಿಜಾಮನ ಬುಣಗಿನ ಮೇಲೆ ಗುಂಡು ಹೊಡೆಯಲಾರಂಭಿಸಿದರು; ಆದರೆ ಪ್ರತಿಪಕ್ಷದ ಜನರು ಚಪಲತನವನ್ನು ತೋರಿಸಿ ಜಾರಿಕೊಂಡರು. ಅಂದಿನ ರಾತ್ರಿಯನ್ನು ಮರಾಠಾಸರದಾರರು ಮಾಣಜಗಾಂವವೆಂಬಲ್ಲಿ ಕಳೆದರು. ರಂಗಪಂಚಮಿಯ ಹಬ್ಬವು ಅಲ್ಲಿಯೇ ಆಯಿತು. ಷಷ್ಠಿಯ ದಿವಸ ನಿಜಾಮನು ಸೈನ್ಯಸಹಿತ ಪರಾಂಡೆಯ ಹಾದೀ ಹಿಡಿದು ಪಯಣ ನಡೆಸಿರುವ ವರ್ತಮಾನವು ಹತ್ತಿತು. ಕೈಯಲ್ಲಿ ಸಿಕ್ಕ ಬೇಟೆಯು ಪಾರಾಗಿ ಹೋಗುವದೆಂದು ತಿಳಿದು ಸರ್ವಾಧಿಪತಿಯಾದ ಭಾವುಸಾಹೇಬನು ಅಂದೇ ಯುದ್ಧ ಮಾಡುವದನ್ನು ನಿಶ್ಚೈಸಿದನು. ಕೂಡಲೆ ಆತನು ಯಾವತ್ತು ಸರದಾರ, ಶಿಲೇದಾರರಿಗೆ ಯುದ್ಧಸನ್ನದ್ಧರಾಗಬೇಕೆಂದು ರಣಭೇರಿಯನ್ನು ಹೊಡೆಸಿದನು; ನೋಡಿದತ್ತೆಲ್ಲ ರಣ-ಜೋಡಣೆಯು ನಡೆದಿತ್ತು. ತಳಗಾಂವದ ಅಡವಿಯಲ್ಲಿ ಒಂದು ವಿಶಾಲ-ಬೈಲು ದಿಬ್ಬವಿರುವದು. ಅದೇ ಸ್ಥಳವು ಕಾಳಗಕ್ಕೆ ಅನುಕೂಲವಾದದ್ದೆಂದು ಸರ್ವಾಧಿಪತಿಯಾದ ಭಾವು ಆರಿಸಿ ಅತ್ತಿತ್ತ ಅಡ್ಡಾಡಿ ನೋಡಿ ಹಗೆಗಳನ್ನು ದೆಶೆಗೇಡು ಮಾಡಲಿಕ್ಕೆ ಬರುವಂಥ ಆಯಮೆಟ್ಟಿನ ಜಾಗೆಯಲ್ಲಿ ತೋಫುಖಾನೆಯನ್ನು ನಿಲ್ಲಿಸಬೇಕೆಂದು ಅಪ್ಪಣೆ ಮಾಡಿದನು. ಕೂಡಲೆ ತಕ್ಕ ಸ್ಥಳದಲ್ಲಿ ತೋಫುಖಾನೆಯನ್ನು ನಿಲ್ಲಿಸಿದರು; ಅದರ ಎಡಗಡೆ ಜರಿಪಟಕಾ ಸೈನ್ಯದ ಅಧಿಕಾರಿಯಾದ ಫಡಕೆ ಬಾಬುರಾಯನು ಹುಜೂರಸೈನ್ಯದೊಂದಿಗೆ ಸಜ್ಜಾಗಿ ನಿಂತುಕೊಂಡಿರಬೇಕು; ಅದರ ಆಚೆಗೆ ಜೀವುಬಾ ದಾದಾಬಕ್ಷಿಯು

ಶಿಂದೇನ ಸುರತಪಲಟಣ, ತೋಫುಖಾನೆಗಳೊಡನೆ ನಿಜಾಮನ ದಂಡನ್ನು ಎದುರಿಸಬೇಕು; ಆ ಬೈಲ ದಿಬ್ಬದ ದಕ್ಷಿಣಕ್ಕೆ ಚಿಂತಾಮಣರಾವ ಪಟವರ್ಧನ, ತುಕೋಜಿರಾವ ಹೋಳಕರ ಮತ್ತು ಅಕ್ಕಲಕೋಟಕರ ಈ ಮೂವರು ಕಾದುಕೊಂಡಿರಬೇಕು. ರಘೂಜಿ ಭೋಸಲೆಯು ತನ್ನ ದಂಡಿನೊಡನೆ ಮುಂದಿನಭಾಗದಲ್ಲಿ ಕಾಳಗಕ್ಕೆ ಅಣಿಯಾಗಿ ನಿಲ್ಲಬೇಕು. ಹೀಗೆ ಕಾಲೋಚಿತವಾದ ಭದ್ರವ್ಯೂಹವನ್ನು ರಚಿಸಿ, ಪರಶುರಾಮಭಾವು ತನ್ನ ಸ್ವಂತ ಸೇನಾಭಾಗವನ್ನು ಅಪ್ಪಾಸಾಹೇಬನಿಗೊಪ್ಪಿಸಿ ಅವನನ್ನು ಯೋಗ್ಯ ಸ್ಥಳದಲ್ಲಿ ನಿಲ್ಲಿಸಿದನು. ಆಗ್ಗೆ ಭಾವು ತೋರಿಸಿದ ಚಟುವಟಿಕೆ, ಯುದ್ಧಚಾತುರ್ಯ, ಸಮಯೋಚಿತ ಯುಕ್ತಿ, ತಾರತಮ್ಯಕ್ಕೆ ಸರಿಯಾದ ಕಾರ್ಯಕ್ರಮ ಮುಂತಾದವುಗಳನ್ನು ಎಷ್ಟು ಬಣ್ಣಿಸಿದರೂ ತೀರದು.

ಅತ್ತ ನಿಜಾಮನ ದಂಡಿನ ಮುಂದುಗಡೆಯಲ್ಲಿ ಅಸತಖಾನ, ರಾವರಂಭಾ, ಭಾರಮಲ್ಲಿ ಇತ್ಯಾದಿ ಶೂರರು, ಅವರ ಹಿಂದೆ ಬುಣಗು, ಅದರ ಹಿಂದೆ ನಿಜಾಮನ ಸ್ವಂತಸ್ವಾರಿಯು, ಹೀಗೆ ಅಟ್ಟಹಾಸದಿಂದ ಆ ಯವನ ಭೂಪತಿಯು ರಾಜವೈಭವದೊಡನೆ ಪರಾಂಡೆಯ ಕಡೆಗೆ ಸಾಗಿನಡೆದಿದ್ದನು. ಆಗ್ಗೆ ಎಡಗಡೆಗೆ ಇರುವ ಮರಾಠಾ ಸೈನ್ಯವು ವೈರಿಗಳ ದೃಷ್ಟಿಗೆ ಬಿತ್ತು. ಅದನ್ನು ಕಂಡು ನಿಜಾಮಅಲ್ಲಿಯು ಅಲ್ಲೇ ತನ್ನ ಆನೆಯನ್ನು ನಿಲ್ಲಿಸಿ, ಅಸತಖಾನನ ಕಡೆಗೆ ೧೨೦೦೦ ಪಲಟಣಕೊಟ್ಟು ಆತನಿಗೆ ಬಳಿಯಲ್ಲಿರುವ ಪೇಶವೆಯ ಸೈನ್ಯವನ್ನು ತಾತ್ಕಾಲ ಮುತ್ತಲು ಅಪ್ಪಣೆಕೊಟ್ಟು ಕಳುಹಿದನು. ಇತ್ತ ಭಾವು ಸರ್ವವ್ಯವಸ್ಥೆಯನ್ನು ಮಾಡಿ ದಿಬ್ಬವಿಳಿದು ಬಲಭಾಗಕ್ಕೆ ಇರುವ ತನ್ನ ದಂಡಿನ ಕಡೆಗೆ ಬಂದನು. ಅಷ್ಟರಲ್ಲಿ ಶತ್ರುವಿನ ಆಗಮನ-ಸಮಾಚಾರವು ಹತ್ತಿದರಿಂದ ಅವನು ಅವರ ಬರುವಿಕೆಯನ್ನು ನೋಡಬೇಕೆಂಬ ಲವಲವಿಕೆಯಿಂದ ಸ್ವಲ್ಪ ಮುಂದರೆದು ಬಂದನು. ಭಾವೂನು ಮುಂದೆ ಬಂದದ್ದನ್ನು ಕಂಡು ನಿಜಾಮನ ಕಡೆಯ ಲಾಲಖಾನನೆಂಬ ಪಠಾಣಸರದಾರನು ೨೦೦೦ ಪಲಟಣಸಹಿತ ಆತನ ಮೇಲೆ ವೇಗದಿಂದ ಸಾಗಿಬಂದನು. ಕೂಡಲೆ ಭಾವು-ಲಾಲಖಾನರ ಕಾಳಗವು ಪ್ರಾರಂಭವಾಯಿತು. ಖಾನನಾದರೂ ಘನಪರಾಕ್ರಮಿಯು. ಅವನು ಭಾವೂನ ಸೈನ್ಯವನ್ನು ಸಾಹಸದಿಂದ ಹೊಕ್ಕು ಕಾದಲಾರಂಭಿಸಿದನು. ಆತನು ಅನೇಕ ಮಹಾರಾಷ್ಟ್ರಜನರನ್ನು ಸದೆಬಡೆದನು. ಬಳಿಕ ಅವರಿಬ್ಬರ ಪರಸ್ಪರ ಕಾದಾಟವು ನಡೆಯಿತು. ಖಾನನು

ಭಾವೂಸಾಹೇಬನ ಕೆನ್ನೆಯ ಮೇಲೆ ಎರಡು ಸಾರೆ ಕತ್ತಿಯಿಂದ ಹೊಡೆದನು. ಅದರಿಂದ ಆತನು ಗಾಯಗೊಂಡು ಕುದುರೆಯ ಮೇಲಿಂದ ನೆಲಕ್ಕೆ ಬಿದ್ದನು. ಇಷ್ಟರಲ್ಲಿ ಎರಡನೆ ಕಡೆಗೆ ತೊಡಗಿದ ಪಟವರ್ಧನಬಾಂಧವ ಸರದಾರರು ಆ ನಿಕರ ಪ್ರಸಂಗವನ್ನು ಕಂಡು ಸಿಟ್ಟಿಗೆದ್ದ ಹುಲಿಯಂತೆ ಆರ್ಭಟಿಸುತ್ತ ಭಾವೂನ ಬೆಂಬಲಕ್ಕೆ ಬಂದರು. ಇನ್ನು ಲಾಲಖಾನನು ಮೂರನೆಸಾರೆ ಕತ್ತಿಯಿಂದ ಹೊಡೆಯತಕ್ಕವನು; ಅಷ್ಟರಲ್ಲಿ ಭಾವೂನ ಎರಡನೆ ಮಗನಾದ ಹರಿಪಂತ ಉರ್ಫ ಬಾಬಾಸಾಹೇಬನು ಹಾವಿನಂತೆ ಹರಿದು ಬಂದು, ತನ್ನ ಕತ್ತಿಯಿಂದ ಲಾಲಖಾನನ ಕತ್ತನ್ನು ಕತ್ತರಿಸಿ, ತನ್ನ ತಂದೆಯನ್ನು ಮೃತ್ಯುಮುಖದಿಂದ ಪಾರುಮಾಡಿದನು. ಇದೇ ಯಥಾರ್ಥ ಪುತ್ರಧರ್ಮವು. ಆಗಿನ ಕಾಳಗದಲ್ಲಿ ಭಾವೂನ ಬಾಂಧವ ಸರದಾರನಾದ ವಿಠ್ಠಲರಾವ ಪಟವರ್ಧನನು ಎದೆಗೆ ಗುಂಡು ಬಡಿದು ಆಕ್ಷಣವೇ ನೆಲಕ್ಕೆ ಬಿದ್ದು ಪ್ರಾಣದೊರೆದನು. ದಳಪತಿಯಾದ ಲಾಲಖಾನನು ಗತಪ್ರಾಣನಾದರೂ ಆತನ ಶೂರಪಠಾಣರು ಹಿಂಜರಿಯಲಿಲ್ಲ. ಅವರು ಹೆಚ್ಚು ಆವೇಶದಿಂದ ಕಾದಲನುವಾದರು. ಅವರು ಸಾಹಸದಿಂದ ಮರಾಠಾ ಸೈನ್ಯವನ್ನು ಹೊಕ್ಕು ಸಿಕ್ಕವರನ್ನು ಸವರಹತ್ತಿದರು. ಅವರೊಡನೆ ಕರ್ನೂಲ ನವಾಬನ ಮಗನೂ ಇಲಿಚಪೂರ ನವಾಬನ ಮಗನೂ ಇದ್ದರು. ಆ ಶೂರರಿಬ್ಬರು ಅಂದಿನ ದಿವಸ ತಮ್ಮ ಸಾಹಸಶಿಖರವನ್ನು ಪ್ರಕಟಗೊಳಿಸಿದರು. ಮರಾಠಾ ಸೈನ್ಯದವರಾದರೂ ಬಳ್ಳೇ ಧೈರ್ಯದಿಂದಲೂ, ಆವೇಶದಿಂದಲೂ ಹೋರಾಡುತ್ತಿದ್ದರು. ಸರ್ವಾಧಿಪತಿಯಾದ ಭಾವು ಗಾಯಹೊಂದಿ ವ್ಯಾಕುಲಿತನಾಗಿದ್ದನು; ಆದರೂ ಆ ನರವೀರನು ತನ್ನ ಶಾರೀರಿಕ ಶ್ರಮವನ್ನು ಕ್ಷಣಹೊತ್ತು ಮರೆತು, ಮುಂದೆ ಬಂದು ತನ್ನ ರಣ-ವಿಕ್ರಮರಾದ ಸರದಾರರಿಗೆ ಉತ್ತೇಜನ ಕೊಡುತ್ತಿದ್ದನು. ಆದರೂ ಪಠಾಣರ ಮುಂದೆ ಮರಾಠಾ ದಂಡಿನ ಜನರ ಆಟವು ಸಾಗಲಿಲ್ಲ. ಇಷ್ಟರಲ್ಲಿ ಪಠಾಣರ ಬೆಂಬಲಕ್ಕೆ ಮತ್ತೆ ಹೊಸ ದಂಡು ಬಂದು ಕೂಡಿತು. ಆಗಂತೂ ಅವರ ಉಬ್ಬನ್ನು ಹಿಡಿದವರಿಲ್ಲ. ಮರಾಠಾ-ಸೈನಿಕರು ಕಾಲು ಹಿಂದಿಡಲಾರಂಭಿಸಿದರು. ಆಗ ಫಡಕೆ ಬಾಬುರಾಯನು ಎದೆಗುಂದಿ ಹಿಂಜರಿದನು. ಜರಿಪಟಕಾ ನಿಶಾನೆಯ ಆನೆಯು ಶತ್ರುಗಳ ವಶವಾಯಿತು. ಬಾಬುರಾಯನು ಹಗೆಗಳಿಗೆ ಬೆನ್ನು ತೋರಿಸಿ ಓಡಲನುವಾದನು. ಅದನ್ನು ಕಂಡು ಶಿಂದೇನ ಶೂರ ಸೇನಾನಿಯಾದ ಜೀವುಬಾದಾದಾಬಕ್ಷಿಯು ಬಾಬುರಾಯ

ನನ್ನು ಹೀಯಾಳಿಸಿ " ಎಲೈ ಅಂಜುಬುರಕನೆ, ಇಂದು ನೀನು ಫಡಕೆಕುಲಕ್ಕೆ ಚಿರಕಾಲಿಕ ಕಲಂಕವನ್ನು ಹಚ್ಚುತ್ತಿರುವಿ. ಥೂ ನಿನ್ನ ಶೂರತನಕ್ಕೆ ಬೆಂಕೀ ಹಚ್ಚಲಿ. ಹೀಗೆ ಅಕ್ಕಾಬಾಯಿಯಂತೆ ಹೇಡಿತನವನ್ನು ತೋರಿಸುತ್ತ ಸಕಲ ಸೈನಿಕರನ್ನು ನಿರ್ವೀರ್ಯ, ನಿಃಶಕ್ತ ಮತ್ತು ನಿರುತ್ಸಾಹಿಗಳನ್ನು ಮಾಡಿಬಿಡ ಬೇಕೆಂದು ಇಚ್ಛಿಸುತ್ತಿಯಾ? ನೀನು ಹರಿಪಂತನ ಹೊಟ್ಟೆಯಿಂದ ಹುಟ್ಟಿದ್ದು ವ್ಯರ್ಥವಾಯಿತು. ನಿನ್ನ ಜೀವವನ್ನು ಉಳಿಸಿಕೊಳ್ಳುವ ಆಶೆಯಿದ್ದರೆ, ಶಿಂದೇನ ಶೂರಪಲಟಣದ ಆಶ್ರಯವನ್ನು ಹೊಂದ ಬಾ " ಎಂದು ನುಡಿದನು. ಬಳಿಕ ಬಾಬುರಾಯನು ತನ್ನ ತಂದೆಯ ಅತುಲಪ್ರತಾಪವನ್ನು ನೆನಿಸಿ, ನಾಚಿ ಕೊಂಡು ಅಲ್ಲೇ ಕಾಲೂರಿ ನಿಂತನು. ಇತ್ತ ಪರಶುರಾಮಭಾವು ಬಾಬುರಾ ಯನ ಅವಸ್ಥೆಯನ್ನು ನೋಡಿದ ಕೂಡಲೆ ತನ್ನ ಸೈನ್ಯದೊಂದಿಗೆ ಪಠಾಣ ರಾಹುತರ ಮೇಲೆ ಏರಿಹೋಗಿ ಅವರನ್ನು ಹಣಿದು ಹಿಂದಟ್ಟಿದನು; ಮತ್ತು ಜರಿಪಟಕಾ ನಿಶಾನೆಯ ಆನೆಯನ್ನು ಬಿಡಿಸಿಕೊಂಡು ಬಂದು ಹಗೆಗಳೊಡನೆ ಕಲಿತನದಿಂದ ಹೋರಾಡತೊಡಗಿದನು.

ಈ ಮೇರೆಗೆ ಮರಾಠಾ-ಪಠಾಣರ ಕಾಳಗವು ನಡೆದಿರಲು ಉಭಯ ಪಕ್ಷದ ಸರ್ವಸೈನ್ಯವು ಸಮರಾಂಗಣದಲ್ಲಿ ಬಂದು ಕೂಡಿತು. ಶಿಂದೇನ ಸೇನಾಪತಿಯಾದ ಜೀವುಬಾಬಕ್ಷಿಯು ಸಜ್ಜಾದ ತೋಫಖಾನೆ, ನುರತ ಪಲ ಟಣಗಳೊಂದಿಗೆ ಸಮರಭೂಮಿಗೆ ಪ್ರಾಪ್ತನಾದನು; ತರಡಗಾಂವದ ಅಡವಿ ಯಲ್ಲಿರುವ ಬೈಲುದಿಬ್ಬದ ಮೇಲೆ ಶತ್ರುಪಕ್ಷದ ಜನರು ಏಕತ್ರ ಕಲೆಯಲಾ ರಂಭಿಸಿದರು. ಅವರ ಸಂಖ್ಯೆಯು ಹೆಚ್ಚತೊಡಗಿತು. ಆಗ ಆಹವ-ಅನು ಭವಿಕನಾದ ಜೀವುಬಾದಾದಾಬಕ್ಷಿಯು ಅವರ ಮೇಲೆ ತೋಫಿನ ಹೊಡತ ವನ್ನು ಪ್ರಾರಂಭಿಸಿದನು. ಬಳಿಕ ಕೂಡಲೆ ಕಾಳಗವು ಒಳ್ಳೇ ನಿಕರಕ್ಕೆ ಬಂತು. ಮೊದಲು ನಿಜಾಮನ ಪಠಾಣಜನರು ಮರಾಠಾ ಸೈನ್ಯವನ್ನು ಚನ್ನಾ ಗಿ ಕವಿದು ಹಲ್ಲಾಮಾಡಿದರು. ಆದರೆ ಒಂದು ಕಡೆಯಿಂದ ರಘೂಜಿರಾವ ಭೋಸಲೆಯ ಕ್ರೂರವಾದ ಬಾಣಗಳ ಹೊಡತ, ಮತ್ತೊಂದು ಕಡೆಯಿಂದ ಶಿಂದೆಯ ಸುಧಾರಿಸಿದ ತೋಫುಗುಂಡುಗಳ ಹೊಡತ, ಎದುರಿನಿಂದ ಸರ್ವಾಧಿ ಪತಿಯಾದ ಪರಶುರಾಮಭಾವುವಿನ ಪ್ರಖರವಾದ ಶಸ್ತ್ರಾಸ್ತ್ರಗಳ ಪ್ರಹಾರ, ಮತ್ತು ಹಿಂದಿನಿಂದ ಹೋಳಕರ ಇತ್ಯಾದಿ ಮಿಕ್ಕ ಸರದಾರರ ಬಂದೂಕ-ಕತ್ತಿ-ಡಾಲುಗಳ ತೆರಪಿಲ್ಲದೆ ಹೊಡತ, ಈ ಪ್ರಕಾರ ಶಸ್ತ್ರಾಸ್ತ್ರಗಳ ಪ್ರಯೋ

ಗವು ಒಂದೇಕಾಲಕ್ಕೆ ಪ್ರಾರಂಭವಾದುದರಿಂದ ಪಠಾಣರು,ಹುತರು ಕಾದಿ ಕಂಗೆಟ್ಟರು. ಅವರು ‘ ತ್ರಾಹಿ ’ ‘ ತ್ರಾಹಿ ’ ಎಂದು ಕಾಲೂರಿ ನಿಲ್ಲದಾದರು. ಅಸಂಖ್ಯ ಜನರು ರಣದೇವತಿಗಾಹುತಿಯಾದರು. ಉಳಿದ ಜನರು “ ಯಾ ಅಲ್ಲಾ ! ಯಾ ಖುದಾ ! ತೋಬಾ ! ತೋಬಾ !! ಕೈಸಾ ವಖತಲಾಯಾ ” ಎಂದು ಒದರುತ್ತ ಸಮರಭೂಮಿಯಿಂದ ಕಾಲ್ಕಿಗೆದು ಓಡಹತ್ತಿದರು. ನಿಜಾಮನ ತೋಫುಖಾನೆಯ ಮೇಲೆ ಪಾನಸೆ ಸರದಾರನು ಎಡೆಬಿಡದೆ ತೋಫು ಗುಂಡುಗಳ ಮಳೆಗರಿಯಹತ್ತಿದರಿಂದ ಅದು ಇದ್ದೂ ಇಲ್ಲದಂತಾಯಿತು. ಬಳಿಕ ಕೇಳುವದೇನು? ಪೇಶವೆಸೈನಿಕರು ಹಗೆಗಳ ಬೆನ್ನುಹತ್ತಿ ಅವರನ್ನು ಪೂರಾ ಸೋಲಿಸಿದರು. ಅವರು ಕುರಿಗಳ ಗುಂಪನ್ನು ಹೊಕ್ಕ ಹುಲಿಯಂತೆ ಶತ್ರುಬಲವನ್ನು ಹೊಕ್ಕು ಕೈಗೆ ಸಿಕ್ಕವರನ್ನು ಸವರಿ ಚಲ್ಲಹತ್ತಿದರು. ಗೆಲವಾಗುತ್ತ ಹೋದಂತೆ ಮರಾಠಾ ದಂಡಿನ ಜನರಲ್ಲಿ ಹುರಪು ಹೆಚ್ಚಾಯಿತು. ಅವರ ಶೌರ್ಯ, ರಣೋತ್ಸಾಹಗಳ ಯೋಗದಿಂದ ವೈರಿಗಳ ಹೌಹಾರಿ, ಮಹಾರಾಷ್ಟ್ರರು ಮನುಷ್ಯರೋ ಪಿಶಾಚಿಗಳೋ ಎಂದು ಅಂಜಿಕೊಂಡರು. ಅವರು ಹಸಿದ ಹುಲಿಯಂತೆ ಹಗೆಗಳನ್ನು ಹರಕೊಂಡು ತಿನ್ನುವರೋ ಏನೋ ಎಂಬಂತೆ ಕಾಣತೊಡಗಿತು. ಪ್ರಸಂಗವು ಒಳ್ಳೇ ನಿಕರಕ್ಕೆ ಬಂತು. ಆಗ ನಿಜಾಮನ ಕಡೆಯ ರಾವರಂಭಾ, ಭಾರಮಲ್ಲ, ಸುಭಾನಖಾ ಮುಂತಾದ ಮಹಾಮಹಾ ರಣಧುರೀಣ ಸರದಾರರೂ, ರೇಮಂಡನ ಕೈಯೊಳಗೆ ಕವಾಯಿತ ಕಲಿತ ಕಾಲಾಳುಗಳೂ ಮುಂದೆ ಹೆಜ್ಜೆಯನ್ನು ಇಡದಂತಾದರು. ಅವರ ಪರಾಕ್ರಮಪರ್ವತವು ನೆಲಕ್ಕೆ ಕುಸಿಬಿದ್ದಿತು; ಧೈರ್ಯಸಾಗರವು ಬತ್ತಿತು. ಪರಶುರಾಮಭಾವುವಿನ ವೀರಗರ್ಜನೆಯಿಂದ ಅವರ ಎದೆಯೊಡೆದು ನೀರಾಯಿತು. ಹೀಗೆ ಎರಡು ತಾಸುಗಳವರೆಗೆ ಭಯಂಕರವಾದ ಕಾಳಗವೆಸಗಿತು. ಉಭಯ ದಳದ ಜನರು ತಮ್ಮ ಕಲಿತನದ ಕೊನೆಯನ್ನು ತೋರ್ಪಡಿಸಿದರು. ಅವರು ಜೀವದ ಹಂಗುದೊರೆದು ಒಬ್ಬರ ಮೇಲೊಬ್ಬರು ಏರಿಹೋಗಿ ತ್ವೇಷದಿಂದ ಕಾದಾಡಿದರು. ಆಕಾಶಕ್ಕೆ ಕೆಂಧೂಳು ಅಡರಿತು; ಹೊಗೆಯಿಂದ ಕತ್ತಲೆಯು ಮುಸುಕಿತು. ಪಟುಭಟರ ಸಿಂಹನಾದದಿಂದ ರಣಭೂಮಿಯು ಗದ್ದರಿಸಿತು. ದಂಡಿನ ಜನರಿಗೆ ಧೈರ್ಯಹೇಳುತ್ತ ಅತ್ತಿತ್ತ ಚಟುವಟಿಕೆಯಿಂದ ಓಡಾಡುತ್ತಿದ್ದ ಪರಶುರಾಮಭಾವು ಮಿಂಚಿನಂತೆ ಲಕಲಕನೆ ಹೊಳೆಯುತ್ತಿದ್ದನು. ಆತನ ರಣೋತ್ಸಾಹ, ಆಹವ-ಚಾತುರ್ಯ, ಚಪಲತ

ನಗಳನ್ನು ಕಂಡು ಶತ್ರು-ಪಕ್ಷದ ಜನರು ಬೆರಗಾದರು. ಪ್ರತಿಕಕ್ಷಿಗಳಾದರೂ ಸಾಮಾನ್ಯಕಲಿಗಳಲ್ಲಿ; ಅವರೂ ವೀರತನದಿಂದ ಕಾದಹತ್ತಿದರು. ಇಲ್ಲಿಯುವರೆಗೆ ಸರ್ವಾಧಿಪತಿ ಭಾವು, ಮಿಕ್ಕ ಪಟವರ್ಧನ ಸರದಾರರು, ಶಿಂದೆ, ಬಾಬುರಾವ ಫಡಕೆ ಇವರೆಲ್ಲರು ಕೈಕಾದಿದ್ದರು. ಅವರು ವೈರಿಗಳ ಹುರಪನ್ನು ಕಂಡು ಎಲ್ಲರೂ ಒಮ್ಮೆಲೆ ಈರ್ಷೆಯಿಂದ ಮುಂದರಿದು ಬಂದು ತಮ್ಮ ಸೈನ್ಯದಲ್ಲಿ ಆವೇಶವನ್ನು ಹುಟ್ಟಿಸಿ “ ಹರಹರ ಮಹಾದೇವ ” ಎಂದು ಗರ್ಜಿಸುತ್ತ ಹಗೆಗಳ ಮೇಲೆ ಸಾಗಿಹೋಗಿ ವೀರತನದಿಂದ ಹೋರಾಡತೊಡಗಿದರು. ಕೂಡಲೆ ಆಹವ-ಸ್ವರೂಪವು ಬದಲಾಯಿತು. ಆಗ ಪರಶುರಾಮಭಾವು ೨೦,೦೦೦ ಸೈನ್ಯದೊಡನೆ ರಣಗರ್ಜನೆಯನ್ನು ಮಾಡುತ್ತ ನಿಜಾಮನ ದಂಡನ್ನು ಒಳನುಗ್ಗಿದನು. ಸರೋವರವನ್ನು ಹೊಕ್ಕು ಅಲ್ಲಿರುವ ಕಮಲಗಳನ್ನು ಈಡ್ಯಾಡುವ ಆನೆಯಂತೆ, ಭಾವು ನಿಜಾಮನ ಕಡೆಯ ನೂರಾರು ಜನರ ಶಿರಕಮಲಗಳನ್ನು ತನ್ನ ಕತ್ತಿಯಿಂದ ತುಂಡರಿಸಿ ಚಲ್ಲಿದನು. ಪಟವರ್ಧನ ಪಟುಭಟರಲ್ಲಿ ಪ್ರೋತ್ಸಾಹವು ಹುಟ್ಟಿ ಅದು ಪ್ರಜ್ವಲಿಸುತ್ತ ಮೊಗಲರ ಅನೇಕ ವೀರಸೈನಿಕರನ್ನು ಆಹುತಿಗೊಂಡಿತು. ಕುರುಕುಲವಿಭೂಷಿತರಾದ ಮುದುಕ ಭೀಷ್ಮಾಚಾರ್ಯರಂತೆ, ಗತವಯಸ್ಕನಾದ ಭಾವು ಮೊಗಲರ ದಂಡನ್ನು ನುಚ್ಚು ನುಚ್ಚು ಮಾಡಿದನು. ಲಾಲಖಾನನ ಶಸ್ತ್ರ-ಪ್ರಹಾರದಿಂದ ರುಧಿರ-ಪ್ರವಾಹವು ಒಂದೇಸವನೆ ನಡೆದು ಆತನ ಸರ್ವಾಂಗವು ತೊಯ್ದುಹೋಗಿತ್ತು; ಮೈಯಲ್ಲ ರಕ್ತಮಯವಾಗಿ ಭಯಂಕರಸ್ವರೂಪವನ್ನು ಧರಿಸಿತ್ತು. ಆದರೂ ಲವಲೇಶ ವಿಶ್ರಾಂತಿಯನ್ನು ಬಯಸಗೆ ಮುದಕನಾದ ಭಾವು ವೈರಿಗಳೊಡನೆ ಪರಮ ಪರಾಕ್ರಮದಿಂದ ಕಾದುತ್ತಿರುವದನ್ನು ಕಂಡು, ಶೃಂಗರಿಸಿದ ಆನೆಯ ಮೇಲೆ ಕೂತು ಹಗೆಗಳ ಮೇಲೆ ಶರ-ವೃಷ್ಟಿಯನ್ನು ಸುರಿಸುತ್ತಿದ್ದ ಶ್ರೀಮಂತ ಸವಾಯಿಮಾಧವರಾಯರು ಅತ್ಯಂತ ಸಂತೋಷವನ್ನು ತಾಳಿ “ ಭಾವುಸಾಹೇಬ, ಶಹಾಬಾಸ ” ಎಂದು ಹೃದಯೋದ್ಗಾರವನ್ನು ಹೊರಗೆಡವಿದರು. ಹೀಗೆ ಎಲ್ಲ ಕಡೆಯಿಂದ ಮರಾಠಾ ಸರದಾರರು ನಿಜಾಮನ ದಂಡನ್ನು ಮುತ್ತಿ ಕೈಗೆ ಸಿಕ್ಕವರನ್ನು ಸವರಹತ್ತಲು, ಆತನ ಜನರು ಧೈರ್ಯಬಿಟ್ಟು ಹಿಂದಕ್ಕೆ ಕಾಲಿಡಲಾರಂಭಿಸಿದರು. ಮಹಾರಾಷ್ಟ್ರರೊಡನೆ ಕಾದಬೇಕೆಂಬ ಅವರ ಹುರುಪು ಇಲ್ಲದಂತಾಯಿತು. ಬಗೆಬಗೆಯ ಅಲಂಕಾರಗಳಿಂದ ಶೃಂಗಾರವಾದ ಪಟ್ಟದಾನೆಯ ಮೇಲೆ ಸುಶೋಭಿತವಾದ ಅಂಬಾರಿಯೊಳಗೆ ನಿಜಾ

ಮನು ಕೂತುಕೊಂಡು ಯುದ್ಧ-ಚಮತ್ಕಾರವನ್ನು ನೋಡುತ್ತಿದ್ದನು. ಆತನು ತನಗೆ ಸೋಲಿನ ಲಕ್ಷಣವು ಕಂಡ ಕೂಡಲೆ ಕಾಲಿಗೆ ಬುದ್ಧಿ ಹೇಳಿದನು. ಬಳಿಕ "यथा राजा तथा प्रजा" ಎಂಬ ನ್ಯಾಯದಂತೆ ಒಡೆಯನ ಕಿತ್ತಿಯನ್ನೇ ಆತನ ಸರ್ವ ಸರದಾರರೂ, ಸ್ವಾರರೂ ಕಾಲಾಳುಗಳೂ ತೀಡಿದರು. ನಿಜಾಮನು ಖರ್ಡೆಯ ಕಿಲ್ಲೆಯ ಹಾದೀಹಿಡಿದನು. ಅವನ ದಂಡಿನ ಎಷ್ಟೋ ಜನರು ಅತ್ತಕಡೆಗೆ ಓಡಿದರು. ಮರಾಠಾದಂಡಿನವರು ಕಡು ತವಕದಿಂದ ಅವರನ್ನು ಬೆನ್ನಟ್ಟಿದರು. ಆದರೆ ಅಷ್ಟರಲ್ಲಿ ಕತ್ತಲೆಯು ಕವಿಯಿತು. ಎರಡೂ ದಂಡಿನ ಜನರು ಕಾದಿ ದಣದಿದ್ದರು. ಅದರಿಂದ ಅವರು ಅಲ್ಲಲ್ಲಿಗೆ ಸ್ಥಳಗಳನ್ನು ಹುಡಕಿಕೊಂಡು ವಿಶ್ರಾಂತಿಗೋಸ್ಕರ ಇಳಕೊಂಡರು.

ಇಷ್ಟಕ್ಕೆ ನಿಜಾಮನು ಸಾವಧಾನ ಮಾಡಿಕೊಂಡಿದ್ದರೆ ಯುದ್ಧಪ್ರಸಂಗವು ಪರಿಸಮಾಪ್ತಿಯಾಗುತ್ತಿತ್ತು. ಆದರೆ ಆತನ ದುರ್ದೈವವು ಪೂರ್ಣ ಪಕ್ವವಾಗಿತ್ತು. ಅಂದಮೇಲೆ ಅದರ ಫಲಸ್ವಾದವನ್ನು ಅವನು ತಕ್ಕೊಳ್ಳದೆ ಹ್ಯಾಗೆ ಬಿಡುವನು?

ಮೇಲೆ ಹೇಳಿದಂತೆ ಸ್ವಲ್ಪಕಾಲ ಸಮಾಧಾನವು ನೆಲೆಗೊಂಡಿತು. ಆಗ ಕೆಲವು ಮರಾಠಾ-ರಾಹುತರು ತಮ್ಮ ಕುದುರೆಗಳಿಗೆ ನೀರು ಕುಡಿಸುವ ಸಲುವಾಗಿ ಹಳ್ಳವನ್ನು ಹುಡುಕುತ್ತ, ಅಕಸ್ಮಾತ್ ನಿಜಾಮನ ಒಂದು ಟೋಳಿಯ ಜನರು ಇಳಕೊಂಡ ಸ್ಥಳಕ್ಕೆ ಬಂದರು. ಕೂಡಲೆ ನಿಜಾಮನ ಜನರು ಅವರ ಮೇಲೆ ಬಂದೂಕಗಳನ್ನು ಹಾರಿಸಿದರು. ತರುವಾಯ ಆ ಗೊಂದಲವು ದೊಡ್ಡದಾಯಿತು. ಮಹಾರಾಷ್ಟ್ರಸೈನಿಕರು ಜಾಗರೂಕರಾಗಿ, ವೈರಿಜನರನ್ನು ಬೆನ್ನಟ್ಟಿ ಸದೆಬಡೆದರು. ನಿಜಾಮನ ದಂಡಾಳುಗಳ ಗೋಳಾಟವನ್ನು ಬಣ್ಣಿಸಲಾಸಲ್ಲ. ಚಂದ್ರೋದಯವಾದಮೇಲೆ ನಿಜಾಮುಅಲ್ಲಿಯು ತನ್ನ ದಂಡಿನ ಹಾಡನ್ನು ಕಂಡು ತೀರಾ ನಿರಾಶಿತನಾದನು. ಆಗ್ಗೆ ಅವನು ಮುಂಗಾಣದೆ ಖರ್ಡೆಯ ಕಿಲ್ಲೆಯನ್ನು ಹೊಕ್ಕು ಕೂತುಕೊಂಡನು. ರಣಭೂಮಿಯಿಂದ ಅವನ ಕಡೆಯ ಅಸಂಖ್ಯ ಜನರು ದಿಕ್ಕಾಪಾಲಾಗಿ ಓಡಿಹೋದರು. ಕಟ್ಟಕಡೆಗೆ ಅವನ ಅಪರಿಮಿತವಾದ ಮೂಲಸೈನ್ಯದ $\frac{೧}{೧೦}$ ಸೈನ್ಯವು ಮಾತ್ರ ಅವನೊಡನೆ ಉಳಿಯಿತು. ಆ ದಂಡು ಕಿಲ್ಲೆಯಬಳಿಗೆ ಬಂದು ಬೀಡುಬಿಟ್ಟಿತು.

ಅಂದಿನ ದಿವಸ ಪರಶುರಾಮಭಾವು ಅಶ್ರಾಂತ ಪರಿಶ್ರಮವನ್ನು ಮಾಡಿದ್ದನು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಆತನಿಗೆ ಒಂದು ಕ್ಷಣ ಮಾತ್ರವಾದರೂ ವಿಶ್ರಾಂತಿಯಿದ್ದಿಲ್ಲ. ಕಾಳಗದ ಆಯಾಸದಿಂದ ದಣಿದ ಅವನ ಮೈಯಲ್ಲ ಲಿಕಿಲಿಕಿ ಅನ್ನುತ್ತಿತ್ತು. ಕೆನ್ನೆಯಮೇಲೆ ಉಂಟಾದ ಘಾಯಗಳನ್ನು ಗಣಿಸದೆ ಅವನು ಹಗೆಗಳ ಕೂಡ ಕಲಿತನದಿಂದ ಕಾದಿದ್ದನು. ಹೀಗೆ ಅವನು ಬಹಳ ವ್ಯಾಕುಲಹೃದಯನಾಗಿ ನಿರ್ವಿಣ್ಣನಾಗಿದ್ದನು. ಕಡೆಗೆ ರಾತ್ರಿಯಾದಬಳಿಕ ಸ್ವಲ್ಪ ಸಮಾಧಾನವೆನಿಸಿತು. ಸಾಣಜಗಾಂವದಲ್ಲಿ ಮರಾಠಾ-ಬುಣಗಿನ ಪಾಳಯವಿತ್ತು. ಅಲ್ಲಿ ಅವನ ಸಲುವಾಗಿ ಡೇರೆಯು ಸಿದ್ಧವಾಗಿತ್ತು. ಅಲ್ಲಿಗೆ ಭಾವೂನ ಪರಿಚಾರಕರು ಆತನನ್ನು ಕರದೊಯ್ದರು. ತರುವಾಯ ಘಾಯಗಳಿಗೆ ಪಟ್ಟೀಕಟ್ಟಿದ್ದರಿಂದ ಆತನಿಗೆ ಸ್ವಲ್ಪ ವಿರಾಮವಾಯಿತು. “ ನಿಜಾಮನು ಪರಾಜಿತನಾದನು; ಅವನ ಹಾಡು ಮುಗಿಯಿತು; ದಾಳಿಯ ಕೆಲಸವು ತೀರಿತು ” ಎಂದು ತಿಳಿದು ಆತನ ಜನರು ಭಾವು ಅಲ್ಲಿಯೇ ಡೇರೆಯಲ್ಲಿರುವದು ವಿಹಿತವೆಂದು ಇಚ್ಛಿಸಿ ಅದರಂತೆ ಆತನಿಗೆ ಬಿನ್ನಹ ಮಾಡಿಕೊಂಡರು. ಆದರೆ ರಾಜ-ಕಾರ್ಯತತ್ಪರನಾದ ಆ ಶೂರನು ತನ್ನ ವಿಶ್ರಾಂತಿಯಗೋಸ್ಕರ ಸ್ವಾಮಿಕಾರ್ಯವನ್ನು ಮರೆತು ಕೂಡ್ರುವನೇ? ಅವನ ಮನಸ್ಸು ಕಾಳಗದ ವಿಚಾರದಲ್ಲಿಯೂ, ವೈರಿಯನ್ನು ಪೂರಾ ಪರಾಭವಗೊಳಿಸಬೇಕೆಂಬುವ ಆಲೋಚನೆಯಲ್ಲಿಯೂ ತಲ್ಲೀನವಾಗಿ ಹೋಗಿತ್ತು. ಅಂದಮೇಲೆ ತನ್ನ ಜನರ ಅಭಿಪ್ರಾಯವು ಪರಶುರಾಮಭಾವೂನ ಮನಸ್ಸಿಗೆ ಬರುವ ಬಗೆ ಹೇಗೆ? ಉಷಃಕಾಲವಾಗುವ ಮೊದಲು ಎಲ್ಲರಕಿಂತ ಮುಂಚೆ ಎದ್ದು ಆತನು ತನ್ನ ಸೈನ್ಯಕ್ಕೆ ಬಂದು ಕೂಡಿಕೊಂಡನು.

ಸೂರ್ಯೋದಯವಾದ ಬಳಿಕ ಪೇಶವೆಯರ ಸೇನಾ-ಸಾಗರವು ಮಾರ್ಗಕ್ರಮಣ ಮಾಡತೊಡಗಿತು; ಭಾವು ದಂಡಿನ ಮುಂದೆ ನಡೆಯುತ್ತಿದ್ದನು. ಸ್ವಲ್ಪ ದೂರ ಹೋದಬಳಿಕ ನಿಜಾಮನ ಲಷ್ಕರಿನ ಜನರು ಇಳಿದ ಸ್ಥಳದಲ್ಲಿ ತೋಫು ಮೊದಲಾದ ಯುದ್ಧ-ಸಾಹಿತ್ಯಗಳು ಆತನ ದೃಷ್ಟಿಗೆ ಬಿದ್ದವು. ಅವನ್ನು ಕಂಡು ಭಾವು ಕಡು ಕೌತುಕಗೊಂಡನು. ಹಗೆಗಳು ರಾತ್ರಿಯಲ್ಲಿಯೇ ಹೊರಟು ಹೋಗಿರಬಹುದೆಂದು ಆತನು ತರ್ಕಿಸಿದನು. ಭಾವು ಸೈನ್ಯಸಹಿತ ಖರ್ಡೆಯ ಸಮೀಪಕ್ಕೆ ಬಂದನು; ಅಲ್ಲಿ ನಿಜಾಮಲ್ಲಿಯ ಅಲ್ಪಸ್ವಲ್ಪ ಸೇನೆಯು ಆತನ ಕಣ್ಣಿಗೆ ಬಿತ್ತು. ಆಗ್ಗೆ ನಿಜಾಮನು ಆ ಕೋಟೆಯ

ಆಶ್ರಯಹೊಂದಿರುವನೆಂಬ ವರ್ತಮಾನವು ಭಾವೂಸಾಹೇಬಗೆ ಗೊತ್ತಾಯಿತು. ಆ ಸುದ್ದಿಯನ್ನು ಕೇಳಿದಕೂಡಲೆ ಭಾವುವಿಗೆ ಆದ ಆನಂದವು ಆತನ ಹೃದಯದಲ್ಲಿ ಹಿಡಿಸದಾಯಿತು. "ವೈರಿಯು ಕೈಯಲ್ಲಿ ಸಿಕ್ಕನು; ಆತನನ್ನು ಒಳ್ಳೇ ಜೇರಿಗೆ ತರಬೇಕು; ಮತ್ತು ಆತನ ಉದ್ದಾಮತನದ ವರ್ತನದ ಬಗ್ಗೆ ಆತನನ್ನು ಚನ್ನಾಗಿ ದಂಡಿಸಬೇಕು" ಎಂದು ಭಾವು ಮುಂತಾದ ಸುವೀರರಾದ ಸರದಾರರೂ ನಾನಾಫಡಣವೀಸ ಮೊದಲಾದ ಪ್ರಧಾನರೂ ಯೋಚಿಸಿದರು. ಕೂಡಲೆ ಭಾವು ಪೆಂಡಾರಿಜನರನ್ನು ಕರೆಸಿಕೊಂಡು, ಅವರಿಗೆ ರಾತ್ರಿಯಲ್ಲಿ 'य: पलायन सजीवते' ಎಂಬ ಮಂತ್ರವನ್ನು ಪಠಣ ಮಾಡಿದ ನಿಜಾಮನ ದಂಡಿನ ಜನರನ್ನು ಬೆನ್ನಟ್ಟಿ ಹೋಗುವಂತೆ ಆಜ್ಞಾಪಿಸಿದನು. ಆ ಪೆಂಡಾರಿಜನರು ಭಾವುವಿನ ಅಪ್ಪಣೆಯಂತೆ ನಿಜಾಮನ ದಂಡನ್ನು ಸುಲಿದು ಸಕಲ ವಸ್ತ್ರಾಲಂಕಾರಗಳನ್ನು ಹರಣಮಾಡಿದರು.

ಪುರಾತನ ಪ್ರಬಲವೈರಿಯಾದ ನಿಜಾಮನು ಅನಾಯಾಸವಾಗಿ ಖರ್ಡೆಯ ಕಿಲ್ಲೆಯಲ್ಲಿ ಸಿಕ್ಕಕಾರಣ, ಮರಾಠಾಸೈನಿಕರು ಆ ಕೋಟೆಯನ್ನು ಮುತ್ತಿದರು. ಆಗ ಜೀವುಬಾದಾದಾ ಘೋಡೆಗಾಂವದಲ್ಲಿ; ಭೋಸಲೆ-ಹೋಳಕರರು ಚಿಂಚಪುರದಲ್ಲಿ; ಪರಶುರಾಮಭಾವು-ಚಿಂತಾಮಣರಾವ, ಬಾಬುರಾವ ಫಡಕೆ ಇತ್ಯಾದಿ ಸಂಗ್ರಾಮ-ಕುಶಲರಾದ ಸರದಾರರು ಬೋರಲಗಾಂವದಲ್ಲಿ; ಹೀಗೆ ಅವರು ಎಡಬಲದ ಸಮೀಪದ ಗ್ರಾಮಗಳಲ್ಲಿ ತಳವೂರಿಕೊಂಡು ಮುಂದಿನ ಚಮತ್ಕಾರವನ್ನು ಎದುರು ನೋಡತೊಡಗಿದರು. ಶ್ರೀಮಂತ ಸವಾಯಿಮಾಧವರಾಯರು ರತ್ನಾಪುರದಲ್ಲಿದ್ದರು. ಶ್ರೀಮಂತ ಪೇಶವೆ-ನಾನಾ-ಜೀವುಬಾದಾದಾ ಇತ್ಯಾದಿ ಮಹನೀಯರು ಬೋರಲಗಾಂವಕ್ಕೆ ಭಾವೂಸಾಹೇಬನ ಸಮಾಚಾರಕ್ಕೆ ಬಂದು ಆತನನ್ನು ಮಾತಾಡಿಸಿಕೊಂಡು ಮರಳಿ ಹೋದರು.

ನಿಜಾಮನನ್ನು ಮುತ್ತಿ ಅಷ್ಟಕ್ಕೆ ಭಾವು ಇತ್ಯಾದಿ ಪೇಶವೆ ಸರದಾರರು ಸುಮ್ಮನೆ ಕೂಡ್ರದೆ, ಅವರು ಅವನನ್ನು ಹಣ್ಣಿಗೆ ತಂದು ಹೈರಾಣ ಮಾಡುವ ಎತ್ತುಗಡೆಯಲ್ಲಿದ್ದರು. ಅವರು ಅವನ ದಂಡಿಗೆ ಹುಲ್ಲು-ಧಾನ್ಯಗಳ ಪುರವಠೆಯನ್ನು ಕಟ್ಟುಮಾಡಿದರು. ಅವನ ಜನರು ನೀರು ತರುತ್ತಿದ್ದ ಊರಹೊರಗಿನ ಸ್ಥಳಗಳನ್ನು ಮರಾಠಾ ದಂಡಿನವರು ಆಕ್ರಮಿಸಿಕೊಂಡರು.

ಆದ್ದರಿಂದ ನೀರಿನ ತಾಪತ್ರಯವನ್ನು ಸಹಿಸುವದಸಾಧ್ಯವಾಯಿತು. ಮರಾಠಾ ಸರದಾರರು ಸರ್ವಾಧಿಪತಿಯ ಹೇಳಿಕೆಯಂತೆ ಕಿಲ್ಲೆಯ ಸುತ್ತುಮುತ್ತು ಅಲ್ಲಲ್ಲಿಗೆ ಬಲವಾದ ಮೋರ್ಚೆಗಳನ್ನು ನಿಲ್ಲಿಸಿ ತೋಫುಗುಂಡುಗಳ ಹೊಡತವನ್ನು ಪ್ರಾರಂಭಿಸಿದರು. ಈ ಪ್ರಕಾರ ನಿಜಾಮನ ಕೈಕಾಲುಗಳು ಬಿಗಿಯಲ್ಪಟ್ಟದರಿಂದ ಆತನ ನಾಡಿಗಳು ಆಕರ್ಷಣವಾಗಹತ್ತಿ ಆತನು ಬಹಳ ಹೈರಾಣನಾದನು. ಹೊರಗೆ ದುಸ್ಸಹವಾದ ಶಸ್ತ್ರಾಸ್ತ್ರಗಳ-ಪ್ರಹಾರ; ಒಳಗೆ ಹುಲ್ಲು-ಅನ್ನ-ನೀರುಗಳ ಅಭಾವ; ಇಂಥ ನಿಕೃಷ್ಟಸ್ಥಿತಿಯು. ಆಗ್ಗೆ ನಿಜಾಮನ ಸ್ಥಿತಿಯು "ಒಂದು ಕಡೆಗೆ ಭಾಂವಿ; ಮತ್ತೊಂದು ಕಡೆಗೆ ಕೆರೆಯು." ಎಂಬಂತೆ ಎಲ್ಲಿ ನೋಡಿದರೂ ಕಷ್ಟಮಯವಾಗಿತ್ತು. ಆವನು ಚಿತ್ತೂರ ಮುತ್ತಿಗೆ, ಶ್ರೀರಂಗಪಟ್ಟಣದ ಮುತ್ತಿಗೆ, ಬದಾಮಿ ಮುತ್ತಿಗೆ ಇತ್ಯಾದಿ ಇತಿಹಾಸಪ್ರಸಿದ್ಧ ಮುತ್ತಿಗೆಗಳನ್ನು ನೆನಿಸಿಕೊಳ್ಳುತ್ತ, ತನ್ನ ಪ್ರಸ್ತುತ ಸಂಕಟ ಸಮಯವನ್ನು ಕಂಡು ಕಡು ಮಿಡುಕಿದನು. ಇಂಥ ಶೋಚನೀಯ ಅವಸ್ಥೆಯನ್ನು ನಿಜಾಮನು ಎರಡು ದಿನಗಳವರೆಗೆ ಸೋಸಿ ಬೇಸತ್ತನು; ಆ ಎರಡು ದಿವಸಗಳು ಆ ಯವನರಾಜನಿಗೆ ಎರಡು ಯುಗಗಳಂತೆ ಭಾಸವಾದವು. ಮೂರನೆಯ ದಿವಸ ಆ ಪ್ರಾಣವಿಘಾತಕವಾದ ತೋಫುಗುಂಡುಗಳ ಹೊಡತವನ್ನು ಅವನೂ ಅವನ ಅನುಚರರೂ ತಾಳಿಕೊಳ್ಳುವದು ಅಶಕ್ಯವೆನಿಸಿತು. ಹೀಗೆ ನಿಜಾಮನು ಹಣ್ಣಿಗೆ ಬಂದು ಅವನು ಮತ್ತು ಅವನ ಕಂಠಮಣಿ ಮಶಿರಲುಲ್ಮುಲಕನು ಕಡು ಕಸವಿಸಿಗೊಂಡರು. ಕೈಯಲ್ಲಿ ತಂಬಿಗೆಯನ್ನು ಕೊಟ್ಟು ಪೇಶವೆಯನ್ನು ಕಾಶೀವಾಸಕ್ಕೆ ಅಟ್ಟಿ ಕೊಡುವೆನೆಂದು ಬಡಬಡಿಸುತ್ತಿದ್ದ ಆ ಸೊಕ್ಕಿನ ವಜೀರನು ಅಧೋಮುಖನಾಗಿ ಪೇಶವೆಯರ ವಶವಾಗುವ ಹೊತ್ತು ಬಂತು. ಆತನ ಸೊಕ್ಕು ಇಳಿದು ತಣ್ಣಗಾದನು. ನಿಜಾಮಅಲ್ಲಿಯು ಗತ್ಯಂತರ ಕಾಣದೆ "ಬೇಕಾದ ಕಿಲ್ಲೆಗಳನ್ನು ತಕ್ಕೊಳ್ಳಿರಿ, ಒಪ್ಪಂದಮಾಡಿಕೊಂಡು ದಯವಿಟ್ಟು ನನಗೆ ಬೇಗನೆ ಜೀವದಾನಕೊಡರಿ." ಎಂದು ದೈನ್ಯದಿಂದ ಹೇಳಿಕಳುಹಿ ರಾಜಾ ಸವಾಯಿಮಾಧವರಾಯರಿಗೆ ಶರಣುಬಂದನು. (೧೫ನೆಯ ಮಾರ್ಚ).

ಈ ಇತಿಹಾಸ-ಪ್ರಖ್ಯಾತವಾದ ಖರ್ಡೆಯ ಲಢಾಯಿಯನ್ನು ಕುರಿತು ಮರಾಠಾ ಕವಿಯೊಬ್ಬನು ವರ್ಣಿಸಿರುವದೇನಂದರೆ:—

केला हल्ला सवायिप्रभुनिजकटके, भाऊने मार दिल्ला ।
तेव्हां किल्ला परांडा जवळहि असतां जाहला दूर पल्ला ॥
नाहीं गल्ला न पाणि यवन तळमळी यासबी यारअल्ला ।
बोले सल्ला करोजि अबहिग, मको चाहि सो देव जिल्ला ॥ १ ॥

ನಿಜಾಮಅಲ್ಲಿಯನ್ನು ಸೆರೆಹಿಡಿದು ಖರ್ಡೆಯ ಕಿಲ್ಲೆಯನ್ನು ತೆಗೆದು ಕೊಳ್ಳಲಿಕ್ಕೆ ಮತ್ತು ಆತನ ಯಾವತ್ತೂ ರಾಜ್ಯವನ್ನು ಪೇಶವೆ ಸಾಮ್ರಾಜ್ಯಕ್ಕೆ ಸೇರಿಸುವ ಎತ್ತುಗಡೆಯನ್ನು ಮಾಡುವದಕ್ಕೆ ಆಗ್ಗೆ ಭಾವು ಇತ್ಯಾದಿ ಪೇಶ್ವೆ ಸರದಾರರಿಗೆ ಹೆಚ್ಚು ಶ್ರಮ ಬೀಳುವಂತಿದ್ದಿಲ್ಲ. ಆದರೂ ಅವರು ಉದಾರ ಬುದ್ಧಿಯಿಂದ ಆ ಮ್ಲೇಂಛ ಭೂಪತಿಯನ್ನು ಪೂರಾ ನಾಶಗೊಳಿಸಬೇಕೆಂಬ ಹವ್ಯಾಸಕ್ಕೆ ಹೋಗದೆ, ಮತ್ತು "ಶರಣಾಗತವತ್ಸಲರು" ಎಂಬ ತಮ್ಮ ಬಿರುದನ್ನು ಕಾಪಾಡಿಕೊಳ್ಳಬೇಕೆಂಬುವ ಸದುದ್ದೇಶದಿಂದ ಅವರು ನಿಜಾಮನ ಅನುಸಂಧಾನಕ್ಕೆ ಖುಕಾರಕೊಟ್ಟರು. ಅವರು ನಿಜಾಮನ ಸೊಕ್ಕು ಮುರಿದು ಅವನನ್ನು ಹತವೀರ್ಯನನ್ನು ಮಾಡಿ ಬಿಟ್ಟದ್ದರಿಂದ ಅವನು ಮರಾಠಾ ಸರದಾರರು ಹೇಳಿದಂತೆ ಕೇಳಲೊಪ್ಪಲು, ಅವರು ಕೆಳಗೆ ಬರೆದ ಒಪ್ಪಂದದ ಕಲಮುಗಳನ್ನು ಕಳಿಸಿದರುಃ—

೧. ಪೂರ್ವದಲ್ಲಿ ಪರಮಪರಾಕ್ರಮಿಶಾಲಿಯಾದ ಸದಾಶಿವರಾವಭಾವು ಯಾವ ಯಾವ ಪ್ರಾಂತಗಳನ್ನು ಗೆದ್ದುಕೊಂಡಿದ್ದನೋ ಅವೆಲ್ಲವುಗಳನ್ನು ನಿಜಾಮನು ಶ್ರೀಮಂತ ಸರಕಾರಕ್ಕೆ ಬಿಟ್ಟುಕೊಡಬೇಕು; ಮತ್ತು ಪರಾಂಡೆಯಿಂದ ತಾಪೀ ಹೊಳೆಯತನಕ ಹಬ್ಬಿರುವ ಉತ್ತರ-ದಕ್ಷಿಣ ಪ್ರಾಂತದಲ್ಲಿ ಕೆಲವು ಪ್ರದೇಶಗಳನ್ನೂ ಮತ್ತೂ ದೌಲತ್ತಾಬಾದ ಕಿಲ್ಲೆಯನ್ನೂ ಪೇಶವೆಯ ಸರಕಾರಕ್ಕೆ ಒಪ್ಪಿಸಬೇಕು.

೨. ಹಿಂದಿನ ೩ ಕೋಟಿ ರೂಪಾಯಿ ಬಾಕಿಯನ್ನೂ ಮತ್ತು ಕಾಳಗದ ವೆಚ್ಚವನ್ನೂ ಕೊಡಬೇಕು.

೩. ಭೋಸಲೆ ರಘೂಜಿರಾಯನಿಗೆ ಕೊಡಬೇಕಾದ ಬಾಕಿಯನ್ನು ತೀರಿಸಬೇಕು; ಮುಂದೆ ಭೋಸಲೆ-ನಿಜಾಮರಲ್ಲಿ ಜಗಳವು ಬರಬಾರದೆಂಬುವ ಸಲುವಾಗಿ ನಿಜಾಮನು ಗಂಗಥಡಿ ಪ್ರಾಂತದೊಳಗಿನ ೩ ಲಕ್ಷ ರೂಪಾಯಿ ಪ್ರಾಪ್ತಿಯ ಸೀಮೆಯನ್ನು ಭೋಸಲೆಯ ಸ್ವಾಧೀನ ಮಾಡಬೇಕು.

೪. ಯಾವ ವಜೀರನು ತುಂಬಿದ ಸಭೆಯಲ್ಲಿ ಪೇಶವೆಯರ ನಿಂದೆಯನ್ನು ಮಾಡಿ ಅಪಮಾನಕರವಾದ ಸಂಭಾಷಣಗಳನ್ನು ಮಾಡಿದ್ದನೋ ಆತನನ್ನು ನಿಜಾಮನು ಪೇಶವೆಯರ ವಶಕ್ಕೆ ಕೊಡಬೇಕು.

ನಿಜಾಮನು ಮೊದಲನೆಯ ಕಲಮನ್ನು ನೋಡಿ ಬಿಸುಸುಯ್ದನು; ೨-೩ನೆಯ ಕಲಮುಗಳನ್ನು ಕಂಡು ಕಡು ಮರುಗಿದನು; ನಾಲ್ಕನೆಯ ಕಲಮನ್ನು ನೋಡಿ ನೆರೆನಾಚಿ ಕಡು ಕನಲ್ದನು. ಆದರೂ ಅವನು ಸ್ವಲ್ಪ ವಿಚಾರಮಾಡಿ ಮೊದಲಿನ ೩ ಕಲಮುಗಳನ್ನು ಕೂಡಲೆ ಮಾನ್ಯಮಾಡಿದನು. ಚತುರ್ಥ ಶರ್ತಿನ ಬಗ್ಗೆ ಮಾತ್ರ ಅವನು ಗೂಢವಿಚಾರಮಾಡತೊಡಗಿದನು. ತನ್ನ ಪ್ರಾಣಪ್ರಿಯತಮನಾದ ವಜೀರಶ್ರೇಷ್ಠನನ್ನು ಶ್ರೀಮಂತಸರಕಾರದ ಸ್ವಾಧೀನ ಮಾಡುವದೆಂದರೆ ತನ್ನ ಮಾನಹಾನಿಯು ಕಳಸವಾಯಿತೆಂದು ಆ ಅಭಿಮಾನಿಯಾದ ನಿಜಾಮನು ಎಣಿಸಿದ್ದು ಸ್ವಾಭಾವಿಕವಿರುತ್ತದೆ. ಆ ಪ್ರಕಾರ ಮಾಡುವದೆಂದರೆ ಆತನ ಪ್ರಾಣದ ಸುತ್ತ ಬಂತು. ಅದೊಂದು ಬಿಟ್ಟು ಪೇಶವೆ ಸರದಾರರು ಬೇಡಿದ್ದನ್ನು ಕೊಡಲು ಅವನು ಸಿದ್ಧನಾದನು. ಆದರೆ ಆ ಸರದಾರರು ಆ ವಜೀರನ ಮದಾಂಧತನದ ಬಗ್ಗೆ ಆತನ ವಿಟಂಬನ ಮಾಡಬೇಕಾಗಿತ್ತು. ಅದರಿಂದ ಅವರು ಏನು ಹೇಳಿದರೂ ಕೇಳಲಿಲ್ಲ. "ಮೊದಲು ಮುಶೀರಉಲ್ಮುಲಕನನ್ನು ಒಪ್ಪಿಸರಿ, ಬಳಿಕ ಎರಡನೆಯ ಮಾತು ಆಡರಿ." ಎಂದು ಅವರು ಹಟಹಿಡಿದರು. ಆಗ್ಗೆ ಮಾತ್ರ ಆ ಯುವನರಾಜನಾದ ನಿಜಾಮನು ನಿರುಪಾಯನಾಗಿ ತನ್ನ ಹಣೆಯ ಮಾಣಿಕದ ಬೊಟ್ಟನಂತಿರುವ ವಜೀರಕಂಠೀರವನನ್ನು ಪೇಶವೆಯರ ಸ್ವಾಧೀನ ಮಾಡಲೊಡಂಬಟ್ಟನು.

ವಜೀರ ಮುಶೀರಉಲ್ಮುಲಕನು ಮರಾಠಾ ಶಿಬಿರವನ್ನು ಹೊಕ್ಕನು. ಆಗ್ಗೆ ಅವರಿಗಾದ ಆನಂದವನ್ನು ವಾಚಕರೇ ಊಹಿಸಬೇಕು. ಶ್ರೀಮಂತ ಸವಾಯಿಮಾಧವರಾವ ಪೇಶವೆ, ನಾನಾಫಡಣವೀಸ, ಸರ್ವಾಧಿಪತಿಯಾದ ಪರಶುರಾಮಭಾವು ಈ ಮೂವರಂತೂ ಸಂತೋಷಸಾಗರದಲ್ಲಿ ಮುಳಗಿ ಹೋದರು. ಆದರೂ ಅವರು ಆನಂದದ ಭರದಲ್ಲಿ ಶಿಷ್ಟತನವನ್ನು ಬಿಡಲಿಲ್ಲ. ಶ್ರೀಮಂತ, ಪೇಶವೆ ಮೊದಲಾದ ಮಹನೀಯರು ಆ ವಜೀರನ ಎದುರಿಗೆ ಹೋಗಿ ತಮ್ಮ ಬಿಡಾರಕ್ಕೆ ಕರಕೊಂಡು ಬಂದರು; ಅಲ್ಲಿ ಅವರು ಅವನನ್ನು ಯಥಾಯೋಗ್ಯ ಸತ್ಕರಿಸಿದರು. ಅವರು ಅವನು ಪೇಶವೆ ದರಬಾರದೊಳ

ಗಿನ ಒಬ್ಬ ದೊಡ್ಡ ಸರದಾರನೆಂದು ತಿಳಿದು ಅವನನ್ನು ಒಳ್ಳೇ ಮರ್ಯಾದೆಯಿಂದ ನಡೆಸಿಕೊಂಡರು. ವೈರಿಗಳ ವರ್ತನಕ್ಕೆ ತಕ್ಕ ನಾಚಿಕೆಯು ಹುಟ್ಟುವಂತೆ ಮಾಡುವ ಉತ್ತಮ ಸಾಧನವೆಂದರೆ ಅವರನ್ನು ಬಹುಮಾನಿಸುವದಿರುತ್ತದೆ. ಅದರಂತೆ ವ್ಯವಹಾರ-ನೀತಿ-ವಿಶಾರದರಾದ ನಾನಾ-ಭಾವು ಇವರಿಬ್ಬರು ಮಾಡಿ ಕೃತಕಾರ್ಯರಾದರು.

ಮೇಲೆ ಹೇಳಿದ ಪ್ರಕಾರ ಪೇಶವೆ-ನಿಜಾಮರ ನಡುವೆ ಒಪ್ಪಂದವಾದ ಬಳಿಕ ಶ್ರೀಮಂತ ಸವಾಯಿಮಾಧವರಾವ ಪೇಶವೆ, ನಾನಾಫಡಣವೀಸ ಮೊದಲಾದ ಸಚಿವ ಜನರು ಹಾಗೂ ಭಾವು ಮುಂತಾದ ಸರದಾರರು ಸೈನ್ಯಸಹಿತ ರಾಜಧಾನಿಯ ಹಾದೀ ಹಿಡಿದರು. ಸ್ವಾರಿಯು ಬರುವ ಮುಂದೆ ಮಾಡಿದ ವ್ಯವಸ್ಥೆಯನ್ನೇ ಹೋಗುವಾಗ್ಗೆ ಸಹ ಭಾವು ಏರ್ಪಡಿಸಿದ್ದನು. ಮಾರ್ಗದಲ್ಲಿ ಯಾವ ತೊಂದರೆಗಳು ಘಟಿಸಲಿಲ್ಲ. ಜಯಶೀಲರಾದ ಅವರೆಲ್ಲರು ವಿಜಯೋತ್ಸಾಹದಿಂದ ದಂಡುಮಾರ್ಬಲದೊಡನೆ ಪ್ರವಾಸಮಾಡುತ್ತ ಸುಖರೂಪವಾಗಿ ರಾಜಧಾನಿಗೆ ಬಂದು ಮುಟ್ಟಿದರು.

ಶ್ರೀಮಂತ ಸವಾಯಿಮಾಧವರಾಯರು ವಿಜಯಶಾಲಿಗಳಾಗಿ ತಿರುಗಿ ಬಂದರು; ಅವರು ಸಮಾರಂಭದಿಂದ ನಗರಪ್ರವೇಶವನ್ನು ಮಾಡುವದಕ್ಕೆ ವೈಶಾಖ ಶುದ್ಧ ೧೩ ಭೃಗುವಾರ ಪೂರ್ವರಾತ್ರಿಯಲ್ಲಿ ಸುಮುಹೂರ್ತವು ಗೊತ್ತುಮಾಡಲ್ಪಟ್ಟಿತು. ಅಂದಿನ ದಿವಸ ಪುಣೇ ರಾಜಧಾನಿಯು ಆನಂದ-ಸಮುದ್ರದಲ್ಲಿ ಮುಳಗಿ ಹೋಗಿತ್ತು. ಪಟ್ಟಣವೆಲ್ಲ ಅತ್ಯಂತ ಶೃಂಗಾರವಾಗಿತ್ತು. ಅಲ್ಲಲ್ಲಿ ಗುಡಿತೋರಣಗಳನ್ನು ಕಟ್ಟಿದ್ದರು; ನಗರದೊಳಗಿನ ಬೀದಿಗಳನ್ನು ಸ್ವಚ್ಛವಾಗಿ ಉಡುಗಿ ಪನ್ನೀರಿನ ಥಳಿಹಾಕಿ, ಚಂದನಕುಂಕುಮದ ಸಾರಣೆಗೈದು ಅದರ ಮೇಲೆ ಸುಶೋಭಿತ ಚಿತ್ರವಿಚಿತ್ರವಾದ ರಂಗವಲ್ಲಿಗಳನ್ನು ಬರೆದಿದ್ದರು. ಅಲ್ಲಲ್ಲಿಗೆ ಸೂರ್ಯಪ್ರಕಾಶಕ್ಕೆ ಸರಿಯಾದ ಥಳಥಳನೆ ಹೊಳೆಯುವ ದೀಪಗಳನ್ನು ಹಚ್ಚಿದ್ದರು. ಹೀಗೆ ಅಲಂಕೃತವಾದ ಪುಣೇ ಪಟ್ಟಣವು ಭೂಲೋಕಕ್ಕೆ ಇಳಿದು ಬಂದ ದೇವನಗರವೋ ಏನೋ ಎಂಬಂತೆ ಕಂಗೊಳಿಸುತ್ತ, ಕಣ್ಣನಗಳಿಗೆ ಮಂಗಳವನ್ನು ಉಂಟುಮಾಡುತ್ತಿತ್ತು. ಕಮಲನೇತ್ರಿಯರಾದ ಸುವಾಸಿನಿಯರು ದಿವ್ಯತರವಾದ ಉಡುಪುತೊಡಪ್ಪಗಳನ್ನು ಧರಿಸಿ, ಅಲಂಕೃತರಾಗಿ ಕೈಯ್ಯಲ್ಲಿ ಸುವರ್ಣಮಯ ಪಂಚಾರ್ತಿಗಳನ್ನು ಹಿಡಕೊಂಡು ಮೇಘಮಂಡಲದ ಒತ್ತಿನಲ್ಲಿ ಒಪ್ಪುತ್ತಿರುವ ಉಪ್ಪರಿಗೆಗಳ

ಮೇಲೆ ಸಾಲ್ಗೊಂಡು ನಿಂತಿದ್ದರು. ಆಬಾಲವೃದ್ಧರು ವಸ್ತ್ರಾಲಂಕಾರಗಳನ್ನು ಮಾಡಿಕೊಂಡು ಶ್ರೀಮಂತ ಸವಾಯಿಮಾಧವರಾಯರು ಸಚಿವ, ಸರದಾರ, ಸಾಮಂತ ಸಂಸ್ಥಾನಿಕರಿಂದೊಡಗೂಡಿ ಬರುವ ಸಂಭ್ರಮವನ್ನು ಕಣ್ಣಾಣಿಯೆ ನೋಡುವ ಅಭಿಲಾಷೆಯಿಂದ ಬೀದಿಗುಂಟ ಗುಂಪುಗುಂಪಾಗಿ ನೆರೆದಿದ್ದರು. ಜನರ ಗದ್ದಲವು ಆಗದಂತೆ ಅಲ್ಲಲ್ಲಿ ರಾಜಭಟರು ನಿಂತುಕೊಂಡು ಬೀದಿಯಲ್ಲಿ ಅಡ್ಡಾಡುವ ಜನರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದರು. ನಗರಪ್ರವೇಶಕ್ಕೆ ಗೊತ್ತುಪಡಿಸಿದ ಸುಲಗ್ನವು ಸಮೀಪಿಸಲು ಶ್ರೀಮಂತರು ಅಲಂಕೃತರಾಗಿ ಸಂಪೂರ್ಣ ರಾಜವೈಭವದೊಡನೆ ನಾನಾಫಡಣವೀಸ ಮುಂತಾದ ಪ್ರಧಾನಮಂಡಲದವರನ್ನೂ ಪರಶುರಾಮಪಂತಭಾವು ಇತ್ಯಾದಿ ಶೂರಸರದಾರರನ್ನೂ ಕೂಡಿಕೊಂಡು, ಪೇಶವಾಯಿಯೆಂಬ ಕಮಲಕ್ಕೆ ಕರ್ಣಿಕೆಯಂತೊಪ್ಪುವ ಪುಣೆಯ ಪಟ್ಟಣವನ್ನು ಭವ್ಯತರವಾದ ಭವಾನಿಪೇಟೆಯ ರಾಜಮಾರ್ಗದೊಳಗಿಂದ ಪ್ರವೇಶ ಮಾಡಿದರು. ಅವರು ರಾಜಗಜವಾದ ವಿನಾಯಕಗಜವನ್ನು ಏರಿದ್ದರು. ಅವರ ಹೊಂದಿಗೆ ಮಂತ್ರಿಶೇಖರನಾದ ನಾನಾನು ಸುಶೋಭಿತವಾದ ಆನೆಯ ಮೇಲೆ ಕೂತುಕೊಂಡಿದ್ದನು. ಅಲ್ಲಿಯೇ ಸಮೀಪದಲ್ಲಿ ನಾನಾಫಡಣವೀಸನ ಕೈಗನ್ನಡಿ, ಸವಾಯಿಮಾಧವರಾಯರ ಶಿರೋರತ್ನ, ಪೇಶವೆಸಾಮ್ರಾಜ್ಯದ ದಿಗ್ದಂತಿ, ಸರದಾರರ ಮುಕುಟಮಣಿ, ಪಟವರ್ಧನಕುಲ-ಸಾಗರ ರಾಕಾಸುಧಾಕರ ಎಂದೆನಿಸಿದ ಪರಮಪ್ರತಾಪಿ ಪರಶುರಾಮಭಾವು ಪರಿಶೋಭಿತವಾದ ದಿವ್ಯ ಗಜಾರೋಹಣನಾಗಿದ್ದನು. ಅವನ ಹಿಂದು ಮುಂದು ಸಾಮಂತಸರದಾರರು ತುರಗಾರೂಢರಾಗಿ ನಡೆದಿದ್ದರು. ಹೋಳಕರ, ಶಿಂದೆ, ಭೋಸಲೆ ಮೊದಲಾದ ಪ್ರತಿಷ್ಠಿತ ಸರದಾರರು ಉತ್ತಮವಾದ ಗಜಗಳನ್ನೇರಿಕೊಂಡು ಆ ಮಂಗಳಕಾರಕವಾದ ಮೆರವಣಿಗೆಯೊಂದಿಗೆ ಸಂಭ್ರಮದಿಂದ ಸಾಗಿಬರುತ್ತಿದ್ದರು. ವಾರನಾರಿಯರ ಮಂಜುಲತರವಾದ ಗಾಯನವು ಕಿವಿಗೆ ಇಂಪು ಮಾಡುತ್ತಿತ್ತು. ಭೇರಿ, ಮೃತಮ್ಮಟ, ಕಾಹಳೆ ಮೊದಲಾದ ವಾದ್ಯಧ್ವನಿಗಳು ದಿಕ್ತಟಗಳನ್ನು ತುಂಬಿಕೊಂಡವು. ಸಕಲ ಜನರ ಮುಖಕಮಲವು ವಿಜಯೋಲ್ಲಾಸದಿಂದ ಉಕ್ಕುತ್ತಿತ್ತು. ಹೀಗೆ ಶ್ರೀಮಂತರು ಅಖಿಲ ಪರಿಜನಪುರಜನಪರಿವೃತರಾಗಿ ಮುಂದಕ್ಕೆ ಸಾಗುತ್ತ, ಶುಕ್ರವಾರಪೇಟೆಯೊಳಗಿಂದ ಹಾಯ್ದು, ನಾನಾಫಡಣವೀಸನ ವಾಡೆಯನ್ನು ಎಡಕ್ಕೆ ಮಾಡಿಕೊಂಡು ಸಮಾರಂಭದಿಂದ ದಿಲ್ಲಿಯ ದರವಾಜ

ಕ್ಕೆ ಬಂದರು. ಬರುತ್ತ ಮಾರ್ಗದಲ್ಲಿ ಉಪ್ಪರಿಗೆಯ ಮೇಲೆ ನಿಂತುಕೊಂಡ ವಿಭೂಷಿತರಾದ ಯೋಷಿತೆಯರು ಶ್ರೀಮಂತರಿಗೆ ಪಂಚಾರ್ತಿಯನ್ನು ಬೆಳಗಿ ವಿಜಯಗೀತವನ್ನು ಪಾಡಿದರು; ಕೆಲವರು ಅವರಿಗೆ ದೃಷ್ಟಿಯನ್ನು ತೆಗೆದರು. ಕೆಲವರು ನಾನಾಫಡಣವೀಸನ ಬುದ್ಧಿಚಾತುರ್ಯ, ಸರ್ವಾಧಿಪತಿಯಾದ ಭಾವು ಮೊದಲಾದ ಪಟುಭಟರ ಪರಾಕ್ರಮಗಳನ್ನು ಶ್ಲಾಘಿಸಿದರು. ಮತ್ತೆ ಕೆಲವು ಪುರಜನರು ಅವರ ಮೇಲೆ ಸುವರ್ಣ-ರಜತ ಪುಷ್ಪವೃಷ್ಟಿಯನ್ನು ಕರೆದು, ರಾಜಭಕ್ತಿಯನ್ನು ಪ್ರಕಟಿಸಿದರು. ವೈತಾಳಿಕರ ಪರಾಕುಗಳ ಶಬ್ದಘೋಷದಿಂದ ಕಿವಿಗಳು ಗಡುಚಿಕ್ಕಿದವು. ಈ ಪ್ರಕಾರ ಆ ಮಂಗಳಕರ ವಾದ ಮೆರವಣಿಗೆಯು ಸಾಗುತ್ತಿರಲು, ಶ್ರೀಮಂತರು ಅರಮನೆಗೆ ಬಿಜ ಯಂಗೈದರು. ಆಗ್ಗೆ ಆನಂದ-ದರ್ಶಕ ತೋಫುಗಳು ಹಾರಿಸಲ್ಪಟ್ಟವು. ಬಳಿಕ ರಾಜಪದ್ಧತಿಯಂತೆ ಓಲಗವು ಕೂಡಿತು. ಸರದಾರ, ಶಿಲೇದಾರ, ಮಾನಕರಿ ಮುತ್ಸದ್ದಿ ಮುಂತಾದ ಜನರು ಕಾಣಿಕೆಗಳನ್ನು ಕೊಟ್ಟು ಶ್ರೀಮಂತರನ್ನು ಗೌರವಿಸಿದರು. ಹೀಗೆ ಆ ಅಪೂರ್ವ ಮತ್ತು ಅನುಪಮವಾದ ನಗರಪ್ರವೇಶ ಸಮಾರಂಭವು ಬಹಳ ಅಟ್ಟಹಾಸದಿಂದ ನೆರವೇರಿತು.

ಖರ್ಡೆಯ ಕಾಳಗಕ್ಕಾಗಿ ಒಟ್ಟುಗೂಡಿದ ಸೈನ್ಯಸಾಗರದಲ್ಲಿ ಮೊದಲಿನಿಂದ ಕಡೆತನಕ ಇದ್ದ ಸುವ್ಯವಸ್ಥೆಯು ಮತ್ತು ಅದರಲ್ಲಿ ದೊರಕಿದ ಅಲಭ್ಯ ವಾದ ವಿಜಯಲಾಭದ ಸರ್ವ ಶ್ರೇಯವು ನಮ್ಮ ಚರಿತ್ರನಾಯಕನದೇ ಇರುತ್ತದೆ. ಆಗಿನ ಪ್ರಸಂಗದಲ್ಲಿ ಪರಶುರಾಮಭಾವು ತನ್ನ ಪರಾಕ್ರಮ, ಯುದ್ಧ ಕುಶಲತೆ, ಸೈನ್ಯ-ವ್ಯವಸ್ಥೆ, ಜನಮನವಶೀಕರಣ, ಸಹನಶೀಲತೆ, ಕಾಲೋಚಿತಧೈರ್ಯ ಮುಂತಾದ ಪೌರುಷಗುಣಗಳ ಶಿಖರವನ್ನು ಪ್ರಕಟಗೊಳಿಸಿದ ನೆಂಬದರಲ್ಲಿ ಸಂದೇಹವಿಲ್ಲ. ಮರಾಠಾ ಸರದಾರರಲ್ಲಿ ಪರಸ್ಪರ ವಿರೋಧವು ಎಂದಿಗಾದರೂ ಇದ್ದದ್ದೆ. ಅದು ಯಾವಾಗ ಪ್ರಬಲವಾಗಿ ಅವರು ಅನ್ಯೋನ್ಯ ನಾಶಾರ್ಥ ಯಾವಾಗ ಪ್ರವರ್ತರಾಗುವರೆಂಬ ನೇಮವಿದ್ದಿಲ್ಲ. ಇಂಥ ಭಿನ್ನ ಮನಸ್ಸಿನ ಸರದಾರರು ಏಕನಿಷ್ಠೆಯಿಂದ ನಡೆಯುವಂತೆ ಮಾಡುವದೂ, ಅವರ ಕೈಯಿಂದಲೇ ಸ್ವಾಮಿಕಾರ್ಯವನ್ನು ಕಡೆಗಾಣಿಸುವದೂ ಪರಮ ಪ್ರಯಾಸದ ಕೆಲಸವು. ಅಂಥದರಲ್ಲಿಯೇ ಆಹವ-ನಿಪುಣನಾದ ನಮ್ಮ ಕಥೆಯೊಡೆಯನು ಸಂಪೂರ್ಣ ಯಶಸ್ವಿಯಾದನು. ಇದು ಆತನಿಗೆ ಭೂಷಣವೇ ಸೈ. ಕೇವಲ “ಸಮಶೇರಬಹದ್ದೂರ”ನಂಥ ಪರಾಕ್ರಮಿ ಪುರುಷರು ಮರಾ

ಶಾಸಾಮ್ರಾಜ್ಯದಲ್ಲಿ ಅನೇಕರು ಉದಯರಾದರು. ಆದರೆ ಅವರಲ್ಲಿ ಶೌರ್ಯ ಮೊದಲಾದ ಗುಣಗಳು ಅತ್ಯುತ್ತಮವಿದ್ದು, ನಿಜಪಕ್ಷಕ್ಕೆ ಜನರನ್ನು ಒಲಿಸಿ ಕೊಂಡು ಪ್ರಭುಕಾರ್ಯವನ್ನು ಸಾಧಿಸಿಕೊಳ್ಳುವ ಯುಕ್ತಿಯಿದ್ದ ಪುರುಷರು ತೀರಾ ವಿರಳ. ಇಂಥ ಮಹಾತ್ಮರಲ್ಲಿ ಪರಶುರಾಮಭಾವು ಅಗ್ರಗಣ್ಯನೆಂದು ಪ್ರಾಂಜಲಬುದ್ಧಿಯಿಂದ ಹೇಳಬಹುದು.

ಸುಪ್ರಸಿದ್ಧವಾದ ಖರ್ಡೆಯ ಕಾಳಗದ ಸರ್ವಾಧಿಪತಿಯಾದುದರಿಂದ ಭಾವುವಿನ ಖ್ಯಾತಿಯು ಮುಂಚಿಗಿಂತ ಹೆಚ್ಚಾಯಿತು. ಆ ದಾಳಿಯಲ್ಲಿ ಚಿಕ್ಕ ದೊಡ್ಡ ಎಲ್ಲ ಮರಾಠಾ ಸರದಾರರು, ಸಂಸ್ಥಾನಿಕರು, ಮಾನಕರಿ-ಮುತ್ಸದ್ದಿ ಗಳು, ಶಿಲೇದಾರರು ಕೂಡಿದ್ದರು; ಅದರಿಂದ ಅವರೆಲ್ಲರು ಭಾವೂನ ಅನುಪ ಮವಾದ ಆಹವ-ಚಾತುರ್ಯ, ಮೇರುಸದೃಶವಾದ ಧೈರ್ಯ, ನೆಲೆಯಿಲ್ಲದ ಶೌರ್ಯ ಮೊದಲಾದವುಗಳನ್ನು ಕಣ್ಣುಟ್ಟ ನೋಡಿ, ಆತನ ಪರಾಕ್ರಮ, ಸಹನಶೀಲತೆ, ಮುಂತಾದ ಸದ್ಗುಣಗಳ ಬಗ್ಗೆ ಆತನನ್ನು ಬಹಳ ಕೊಂಡಾಡಿ ದರು. ಅಸಂಖ್ಯ ದೊಡ್ಡ ದೊಡ್ಡ ಸರದಾರರು ಆತನ ಸಖ್ಯವನ್ನು ಮಾಡಿ ಕೊಂಡರು. ಮಹಾರಾಷ್ಟ್ರರು ನಿಜಾಮನಂಥ ಬಲಿಷ್ಠ ಮತ್ತು ಗರ್ವಿಷ್ಠ ವೈರಿಯೊಡನೆ ಸಮರಾಂಗಣದಲ್ಲಿ ಹೋರಾಡಿ, ಆತನನ್ನು ಪೂರಾ ಪರಾಭವ ಗೊಳಿಸಿ ಪೇಶವೆ ಸಾಮ್ರಾಜ್ಯದ ವಿಜಯಧ್ವಜವನ್ನು ಸ್ಥಾಪಿಸಿದ ಕೀರ್ತಿಯು ಪರಶುರಾಮಭಾವೂನ ಅಪ್ರತಿಮ ಪರಾಕ್ರಮದ ಬಲದಿಂದಲೇ ಎಂದು ಅವರೆಲ್ಲರು ಅನ್ನಲಾರಂಭಿಸಿದರು. ಆತನ ಸಮವಿಲ್ಲದ ಸಂಗ್ರಾಮಕುಶಲ ತೆಯನ್ನು ಬ್ರಾಹ್ಮಣ-ಮರಾಠಾ ಸರದಾರರು ಸರಿಯಾಗಿ ವಂಚನೆಯಿಲ್ಲದೆ ಮನ್ನಿಸತೊಡಗಿದರು. ಎಲ್ಲರ ಮೇಲೂ ಆತನ ದರ್ಪಕೂತಿತು. ರಾಜರ ಸಭೆಯಲ್ಲಿ, ಸರದಾರರ ಸಮೂಹದಲ್ಲಿ, ಶಿಲೇದಾರರ ಚಾವಡಿಯಲ್ಲಿ, ಮಾನ ಕರಿ ಜನರ ಮೇಳದಲ್ಲಿ, ಮುತ್ಸದ್ದಿಗಳ-ಮಂಡಲದಲ್ಲಿ ಮತ್ತು ಸಂಪೂರ್ಣ ಸೈನ್ಯ-ಸಂದೋಹದಲ್ಲಿ ಪರಶುರಾಮಭಾವೂನ ಸ್ತುತಿಸ್ತೋತ್ರವು ನಡೆಯಿತು, ಜಗತ್ತಿಗೆ ನೇತ್ರಸ್ವರೂಪನಾದ ಸೂರ್ಯನ ಪ್ರಕಾಶವು ಸರ್ವತ್ರಹಬ್ಬುವಂತೆ, ಪೇಶವಾಯಿಯ ಕಣ್ಣಿನಂತಿರುವ ಭಾವೂನ ಕೀರ್ತಿಪ್ರಭೆಯು ಎಲ್ಲ ಕಡೆಗೂ ಹರಡಿಕೊಂಡಿತು. ಎಲ್ಲರೂ ಆತನು ಧನ್ಯನೆಂದು ಅನ್ನತೊಡಗಿದರು. ಮ್ಲೇಂಛ ರಾಜರನ್ನು ಸೋಲಿಸಿ ಶ್ರೀ ಶಿವಛತ್ರಪತಿಯು, ನಿಜಾಮುಲ್ಮುಲಕನನ್ನು ಗೆದ್ದು ಹಿರೆಯ ಬಾಜೀರಾಯನು ಯವನರನ್ನು ಸದೆಬಡೆದು ರಜಪೂತ ದಳಪತಿ

ಯಾದ ಪ್ರಖ್ಯಾತ ರಾಣಾ ಭೀಮದೇವನು, ಜಯಜಯಕಾರವನ್ನು ಹೊಂದಿದಂತೆ ಪಟವರ್ಧನ ಕುಲಲಲಾಮನಾದ ಪರಶುರಾಮಭಾವು ಭಾಗಾನಗರಕಧಿಪತಿಯಾದ ನಿಜಾಮಅಲ್ಲಿಯನ್ನು ಜಯಿಸಿ ತಾದೃಶ ಜಯಜಯಕಾರವನ್ನು ಹೊಂದಿ ಕೃತಾರ್ಥನಾದನು.

ಶ್ರೀಮಂತರು ಪುಣೆಗೆ ಬಂದ ಬಳಿಕ ಆ ದಾಳಿಯಲ್ಲಿ ಪರಾಕ್ರಮ ಕೃತ್ಯಗಳನ್ನು ಮಾಡಿದ ಜನರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಸನ್ಮಾನಿಸುವ ಉದ್ದೇಶದಿಂದ ನಾನಾಫಡಣವೀಸನು ಸರದಾರ, ಶಿಲೇದಾರ, ಮಾನಕರಿ ಮುಂತಾದವರನ್ನು ಕರೆಯಿಸಿ ದರಬಾರು ಕೂಡಿಸಿದನು. ಶಿಂದೆ, ಹೋಳಕರ, ಭೋಸಲೆ, ಗಾಯಿಕವಾಡ ಇತ್ಯಾದಿ ರಣಧುರೀಣರಾದ ಸಕಲ ಸರದಾರರು ಬಂದಿದ್ದರು. ಆಗ ನಾನಾನು ಘನಘೋರ ಖರ್ಡೆಯ ಸಂಗ್ರಾಮದ ಪ್ರಸಂಗದಲ್ಲಿ ಸರದಾರರೆಲ್ಲರು ಮಾಡಿದ ಸಕಾಲ ಸಹಾಯದ ಬಗ್ಗೆ, ಎಲ್ಲರೂ ಏಕನಿಷ್ಠೆಯಿಂದ ವರ್ತಿಸಿದ ಬಗ್ಗೆ, ಮತ್ತು ಅವರವರ ಪರಾಕ್ರಮದ ಬಗ್ಗೆ ಅವರೆಲ್ಲರ ಗುಣಾನುವಾದವನ್ನು ಮಾಡಿ, ಖರ್ಡೆಯ ಕಾಳಗದ ಸರ್ವ ಯಶಶ್ರೇಯವು ಸರ್ವಾಧಿಪತಿಯಾದ ಪರಶುರಾಮಭಾವುವಿನ ಪಾಲಿನದೆಂದು ಸಾರಿಹೇಳಿ ಆತನ ಅಕ್ಷಯ ಶೌರ್ಯ, ವಿಲಕ್ಷಣ ಧೈರ್ಯ, ಅತರ್ಕ್ಯ ಪರಾಕ್ರಮ, ಅಸದೃಶ ಸ್ವಾಮಿಭಕ್ತಿ, ಕಾಲೋಚಿತ ಯುಕ್ತಿ, ಅನ್ಯತ್ರರಲ್ಲಿರದ ಕರ್ತೃತ್ವಶಕ್ತಿ, ತ್ರಿಕರ್ಣಪೂರ್ವಕವಾದ ಏಕನಿಷ್ಠೆ, ಕೈಕೆಳಗಿನ ಜನರ ಮೇಲೆ ಮಾಡುವ ಯಥೋಚಿತಪ್ರೀತಿ, ಜನಮನವಶೀಕರಣ, ಅಖಂಡ ಕ್ಷಮಾಗುಣ, ಅವರ್ಣನೀಯವಾದ ಆಹವ-ಚಾತುರ್ಯ ಮುಂತಾದ ಸಕಲ-ಸದ್ಗುಣಗಳ ಪ್ರಶಂಸೆಯನ್ನು ಅತ್ಯಧಿಕವಾಗಿ ಮಾಡಿದನು. ಅನಂತರ ಬಹುಬೆಲೆಯ ವಸ್ತ್ರಭೂಷಣಗಳನ್ನೂ ಮುತ್ತಿನ ಕಂಠಿಯನ್ನೂ, ಹಾರತುರಾಯಿಗಳನ್ನೂ ಶ್ರೀಮಂತರು ಪಟವರ್ಧನಕುಲಶೇಖರನಾದ ಪರಶುರಾಮಭಾವುವಿಗೆ ಉಚಿತಕೊಟ್ಟು ಸನ್ಮಾನಿಸಿದರು; ಇದಲ್ಲದೆ ನಗರಖಾನೆಯ ಸೇಮಣೂಕ ಹಚ್ಚಿಕೊಟ್ಟರು; ಆತನ ದಂಡಿನ ನಗದ ಸೇಮಣೂಕ ೩೦,೦೦೦ ರೂಪಾಯಿ ಇದ್ದದ್ದನ್ನು ೪೦,೦೦೦ ರೂಪಾಯಿ ಮಾಡಿದರು; ಭಾವುನ ಮೂಲಸೇನಾಸಂಖ್ಯೆಯು ೨೪೦೦ ಇದ್ದು ಇನ್ನು ಮುಂದೆ ಆತನು ೧೫೦೦ ಹೆಚ್ಚಿಗೆ ಸ್ವಾರರನ್ನು ಇಟ್ಟುಕೊಳ್ಳಬೇಕೆಂದು ಶ್ರೀಮಂತರು ಆಜ್ಞಾಪಿಸಿದರು. ಹೊಸ ದಂಡಿನ ವೆಚ್ಚಕ್ಕಾಗಿ ೪ ಲಕ್ಷ ೩ ಸಾವಿರ ರೂಪಾಯಿಯ ಉತ್ಪನ್ನಬರುವ

ನೂತನ ಸರಂಜಾಮು ಹಚ್ಚಿಕೊಡುವ ನಿರ್ಧರವಾಯಿತು. ಖರ್ಡೆಯ ದಾಳಿಗೆ ಭಾವೂವಿನ ಮಕ್ಕಳೂ ಇತರ ಪಟವರ್ಧನ ಬಾಂಧವಸರದಾರರೂ ಬಂದಿದ್ದರಷ್ಟೆ. ಅವರಿಗೂ ಯಥಾಯೋಗ್ಯ ಸನ್ಮಾನಗಳನ್ನು ಮಾಡಿ ಶ್ರೀಮಂತರು ಅವರೆಲ್ಲರನ್ನು ಸತ್ಕರಿಸಿದರು.* ಇತಿಹಾಸ ಪ್ರಸಿದ್ಧವಾದ ಖರ್ಡೆಯ ಕಾಳಗವೂ, ಅದರಲ್ಲಿ ದೊರೆತ ಅದ್ವಿತೀಯವಾದ ವಿಜಯಲಾಭವೂ, ಪೇಶವೆಸಾಮ್ರಾಜ್ಯದ ವೈಭವ ಮತ್ತು ಐಶ್ವರ್ಯದ ಕಳಸನೆಂದು ಹೇಳಬೇಕು. ಘನಘೋರ ಪಾಣಿಪತ್ತದ ಸಂಗ್ರಾಮಭೂಮಿಯಲ್ಲಿ ನಿಸ್ತೇಜನಾದ ಮರಾಠಾಸಾಮ್ರಾಜ್ಯದ ವೈಭವರೂಪಚಂದ್ರಮನು ಮತ್ತೆ ಉದಯನಾಗಿ, ರಾಜಕ್ರಾಂತಿ ಪರಚಕ್ರ ಇತ್ಯಾದಿ ಅಭ್ರಪಟಲಗಳು ಅಡ್ಡಬಂದರೂ, ಅವುಗಳೊಳಗಿಂದ ಪಾರುಬಿದ್ದು ಉತ್ತರೋತ್ತರ ಅಧಿಕಾಧಿಕವಾದ ತೇಜದಿಂದ ಪ್ರಕಾಶಿಸುತ್ತ, ಕಡೆಗೆ ಖರ್ಡೆಯ ಸಮರಾಂಗಣದಲ್ಲಿ ವಿಜಯರೂಪಚಂದ್ರಿಕೆಯೊಡನೆ ಸಂಪೂರ್ಣ ಪ್ರಕಾಶದಿಂದ ಪ್ರಜ್ವಲಿಸಿದನು. ಆ ವೈಭವರೂಪ ಪೌರ್ಣಿಮಾಚಂದ್ರನು ಅಭಿವೃದ್ಧಿಗೆ ಇಂಡದ್ದರಿಂದ, ಮಹಾರಾಷ್ಟ್ರರ ಭಾಗ್ಯಸಾಗರವು, ನವನಿಧಿಯನ್ನು ಕಂಡ ಹುಟ್ಟುಬಡವನಂತೆ, ಧನ್ವಂತರಿಯನ್ನು ಕಂಡ ರೋಗಿಯಂತೆ, ಹೊಸದಾಗಿ ಕಣ್ಣುಬಂದ ಕುರುಡನಂತೆ, ಅಗಲಿದ ಪತಿಯನ್ನು ನೋಡಿದ ಪತಿವ್ರತಾ ಸತಿಯಂತೆ, ಆನಂದೋಲ್ಲಾಸಗಳಿಂದ ಉಕ್ಕತೊಡಗಿತು. ಪೇಶವೆಯರ ಯಶಶ್ಚಂದ್ರಿಕೆಯು ದಶದಿಕ್ಕುಗಳನ್ನು ವ್ಯಾಪಿಸಿಕೊಂಡಿತು. ಅದರ ಸ್ವಚ್ಛವಾದ ಪ್ರಕಾಶಪುಂಜದಲ್ಲಿ ಪೇಶವೆಯರ ಪ್ರತಿಸ್ಪರ್ಧಿಗಳಾದ ನಿಜಾಮ, ಟೀಪು, ಕೊಲ್ಹಾಪೂರಕರ ಇತ್ಯಾದಿ ನಕ್ಷತ್ರಗಳ ತೇಜವು ಮಾಜಿ ಕಲಾದೀನವಾದಂತೆ ಭಾಸವಾಗಹತ್ತಿತು. ಇಂಥ ಅನುಪಮ, ಅಪೂರ್ವ ಮತ್ತು ಅವರ್ಣನೀಯವಾದ ವೈಭವವು ಹಿಂದೆ ಎಂದೂ ಇದ್ದಿಲ್ಲ; ಮತ್ತು ಮುಂದೆ ಎಂದೂ ಆಗಲಿಲ್ಲ. ಸಾರಾಂಶ, ಆಗಿನ ಕಾಲವು "न भूतो न भविष्यति" ಎಂಬಂತೆ ಆಗಿಹೋಯಿತು.

ಇದೇಕಾಲವು ನಮ್ಮ ಚರಿತ್ರನಾಯಕನಾದ ಪರಶುರಾಮಭಾವು ಮತ್ತು ನಾನಾಫಡಣವೀಸ ಇವರಿಬ್ಬರ ಪರಮೋನ್ನತಿಯ ಕಾಲವೆಂದು

---

* ಪರಶುರಾಮಭಾವೂನ ಮಕ್ಕಳಾದ ರಾಮಚಂದ್ರರಾವ ಅಪ್ಪಾಸಾಹೇಬ ಮತ್ತು ಹರಿಪಂತ ಬಾಬಾಸಾಹೇಬ ಇವರ ತೈನಾತಿ ಖರ್ಚು ಈ ಮೊದಲು ಪ್ರತಿವರ್ಷ ೫ ಸಾವಿರ ಇದ್ದು ಅದು ೧೦,೦೦೦ ಮಾಡಲ್ಪಟ್ಟಿತು.

ಹೇಳಬಹುದು. ಆ ಉಭಯತರು ಪೇಶವೆಯರ ರಾಜದರಬಾರವನ್ನು ಹೊಕ್ಕು ಮೇಲಾದ ಹೆಚ್ಚಳವನ್ನು ಪಡೆದರು. ಅವರ ವೈಭವವು ಕ್ರಮೇಣ ವೃದ್ಧಿಯಾಗುತ್ತ ನಡೆಯಿತು. ಅವರಿಬ್ಬರು ಪರಸ್ಪರ ಸಕಾಲಸಹಾಯಿಕ ಸ್ನೇಹಿತರು. ಅದರಿಂದ ಅವರೀರ್ವರ ಉತ್ಕರ್ಷವು ಬಾಲೇಂದುವಿನಂತೆ ಹೆಚ್ಚುತ್ತ ಅವರು ಒಳ್ಳೇ ಘನತೆಯನ್ನು ಹೊಂದಿದರು. ಅವರು ತಮ್ಮ ಎದುರಿಲ್ಲದ ಪರಾಕ್ರಮ, ಜೋಡಿಲ್ಲದ ಸಾಹಸ, ಸರಿಯಿಲ್ಲದ ಬುದ್ಧಿಕೌಶಲ್ಯಗಳ ಪ್ರಭಾವದಿಂದ ಮರಾಠಾಶತ್ರುಗಳನ್ನು ಒಬ್ಬರಹಿಂದೊಬ್ಬರನ್ನು ಸದೆಬಡೆದು ಇ. ಸ. ೧೭೯೫ ರಲ್ಲಿ, ಪೇಶ್ವೆಯರನ್ನು ಪ್ರತಿಬಂಧಿಸುವ ಪ್ರತಿಭಟರು (ಭರತಖಂಡದಲ್ಲಿ) ಇಲ್ಲದಂತೆ ಮಾಡಿಬಿಟ್ಟರು. ಬಲಾಢ್ಯರಾದ ಇಂಗ್ಲೀಷರು ಸ್ನೇಹಿತರು. ನಿಜಾಮನು ಪರಾಜಿತನಾಗಿ ಮೆತ್ತಗಾಗಿದ್ದನು. ಟೀಪುವಿನ ಹಾಡು ಮುಗಿದುಹೋಗಿತ್ತು. ಕರವೀರಕರನು ತಲೆ ಎತ್ತುವ ಹಾಗಿದ್ದಿಲ್ಲ. ದಿಲ್ಲೀಶ್ವರನು ಶಿಂದೇನ ಕೈಗೊಂಬೆಯು. ರಜಪೂತ ರಾಜರು ಮಾಂಡಲಿಕತ್ವವನ್ನು ವಹಿಸಿದ್ದರು. ಹೀಗೆ ಮಹಾರಾಷ್ಟ್ರರನ್ನು ಎದುರಿಸುವ ಎದೆಗಾರರು ಇಲ್ಲದಾದರು. ನಿಜಾಮನನ್ನು ಸೋಲಿಸಿದರಿಂದ ಮಹಾರಾಷ್ಟ್ರರಿಗೆ ದೊರೆತ ಅತುಲವಾದ ವಿಜಯಲಾಭದಿಂದ ಪೇಶವೆ ಸಾಮ್ರಾಜ್ಯದ ಪ್ರಮುಖತ್ವವು ಸ್ಥಾಪಿತವಾಯಿತು. ಎಲ್ಲರಲ್ಲಿಯೂ ಅವರ ವರ್ಚಸ್ಸು ಕಾಲೂರಿತು. ಈ ಪ್ರಕಾರ ಇಡೀ ಭಾರತಭೂಮಿಯಲ್ಲಿ ಪೇಶ್ವೆರಾಜ್ಯವು ಅಗ್ರಗಣ್ಯತೆಯನ್ನು ಹೊಂದಿತು. ಮರಾಠಾ ಸಾಮ್ರಾಜ್ಯಕ್ಕೆ ಇಂಥ ಅನುಪಮವಾದ ವೈಭವ, ದಿಗಂತಕೀರ್ತಿ ಮುಂತಾದವುಗಳು ಪ್ರಾಪ್ತವಾಗಲು, ನಾನಾಫಡಣವೀಸನ ಅಲೌಕಿಕ ಬುದ್ಧಿಚಾತುರ್ಯ, ಮತ್ತು ಪರಮಪ್ರತಾಪಿಯಾದ ಪರಶುರಾಮಭಾವೂನ ನಿಸ್ಸೀಮ ಪರಾಕ್ರಮ, ಅಪ್ರತಿಮ ಧೈರ್ಯ ಇತ್ಯಾದಿ ಗುಣಗಣವೇ ಕಾರಣೀಭೂತವೆಂದು ಜನರು ಅನ್ನಹತ್ತಿದರು. ಅವರಿಬ್ಬರ ಗುಣಾನುವಾದವನ್ನು ಆಬಾಲವೃದ್ಧರು ಬಗೆಬಗೆಯಿಂದ ಮಾಡಲಾರಂಭಿಸಿದರು. ಆ ಪುರುಷಶ್ರೇಷ್ಠರ ಕೀರ್ತಿಧ್ವಜವು ದೂರ ದೂರ ಪ್ರಾಂತಗಳಲ್ಲಿ ಮೆರೆಯತೊಡಗಿತು. ಸಾರಾಂಶ, ಆ ಕಾಲದಲ್ಲಿ ಮಹಾರಾಷ್ಟ್ರ ಸಾಮ್ರಾಜ್ಯರೂಪವಾದ ವಿಶಾಲ ಆಕಾಶಮಂಡಲದಲ್ಲಿ ಪಟವರ್ಧನಕುಲಮಣಿಯಾದ ಪರಶುರಾಮಭಾವು ಮತ್ತು ಮಂತ್ರಿಶೇಖರನಾದ ನಾನಾಫಡಣವೀಸ ಈ ಮಿತ್ರದ್ವಯರು ಸೂರ್ಯಚಂದ್ರರಂತೆ ಪ್ರಕಾಶಿಸತೊಡಗಿದರು.

# ೧೧ನೆಯ ಅಧ್ಯಾಯ.

## ಭಾವುಸಾಹೇಬನ ರಾಜ್ಯ-ಕಾರಭಾರವು.

ಖರ್ಡೆಯ ಕಾಳಗದಲ್ಲಿ ಗೆಲವಾದುದರಿಂದ ಯಾವತ್ತು ಮಹಾರಾಷ್ಟ್ರರಾಜ್ಯವು ಸಂತೋಷಸಾಗರದಲ್ಲಿ ಮುಳಗಿಹೋಯಿತು. ಜಯಶೀಲರಾದ ಸರದಾರರ ಮತ್ತು ಸಿಪ್ಪಾಯಿಜನರ ಪ್ರತಿಷ್ಠೆಯು ಎಲ್ಲ ಕಡೆಗೂ ಬೆಳೆಯುತ್ತ ನಡೆಯಿತು. ಪ್ರತಿಒಬ್ಬನ ಆಪ್ತ, ಇಷ್ಟ, ಮಿತ್ರ ಮುಂತಾದ ಸ್ವಕೀಯಜನರು ತಮ್ಮ ತಮ್ಮ ಪ್ರಿಯಸರದಾರರ ಪರಾಕ್ರಮವನ್ನು ವರ್ಣಿಸಹತ್ತಿದರು. ನಾಚುರಂಗ, ತಮಾಶಿ ಮೊದಲಾದ ವಿಲಾಸಗಳು ಎಲ್ಲಿ ನೋಡಿದರೂ ನಡೆದಿದ್ದವು. ಇದೆಲ್ಲ ಪರಶುರಾಮಭಾವುವಿನ ಪ್ರತಾಪಪ್ರಭಾವವೆಂದು ಆತನ ಮತ್ತು ಆತನ ಬಂಧುಸರದಾರರ ಆದರ-ಸತ್ಕಾರವು ತಾಸಗಾಂವಿಯಲ್ಲಿ ಒಳ್ಳೇ ಸಂಭ್ರಮದಿಂದ ನಡೆದಿತ್ತು. ಆ ನಗರ ನಿವಾಸಿಗಳು ನಿತ್ಯನೈಮಿತ್ತಿಕ ಕೆಲಸಬೊಗಸೆಗಳನ್ನು ಒತ್ತಟ್ಟಿಗಿಟ್ಟು, "ತಮ್ಮ ಪ್ರಿಯಕರ ಸರದಾರವೀರನಾದ ಪರಶುರಾಮಭಾವು ಸಂಪೂರ್ಣ ಮಹಾರಾಷ್ಟ್ರ ಸಾಮ್ರಾಜ್ಯದ ಪಕ್ಷ ಹಿಡಿದು ನಿಜಾಮನಂಥ ಬಲಿಷ್ಠ, ಗರ್ವಿಷ್ಠ, ಮತ್ತು ಧೈರ್ಯಿಷ್ಠ ವೈರಿಯನ್ನು ಧಾದಾಕ್ರಾಂತ ಮಾಡಿ ವಿಜಯಶಾಲಿಯಾಗಿರುವನು." ಎಂದು ಅವರೆಲ್ಲರು ಅಭಿಮಾನಪಡುವರು. ಇದಲ್ಲದೆ ಕಾಶಿಯಿಂದ ರಾಮೇಶ್ವರದವರೆಗೆ ತನ್ನ ಪರಾಕ್ರಮರವಿಯನ್ನು ಬೆಳಗಿಸುತ್ತಿದ್ದ ಆರ್ಯವೀರಮಣಿಯಾದ ಪರಶುರಾಮಭಾವು ತಮ್ಮ ಪಟ್ಟಣದಲ್ಲಿಯೇ ವಾಸಮಾಡಿರುವದು ತಮ್ಮ ಪುಣ್ಯೋದಯವೆಂದು ಭಾವಿಸಿ, ಅವರು ಭಾವೂನನ್ನು ಅತ್ಯಧಿಕ ಪ್ರತಿಷ್ಠೆಯಿಂದ ಗೌರವಿಸುತ್ತಿದ್ದರು. ಕೆಲವರು ಆ ಮಹಾರಾಷ್ಟ್ರವೀರಶಿರೋರತ್ನದ ಶೂರತ್ವ, ಸಹನಶೀಲತ್ವ, ದಯಾಳುತ್ವ ಮುಂತಾದ ಸದ್ಗುಣಗಳ ಮೇಲೆ ತರತರದ ಹಾಡುಕಟ್ಟಿ ಹರುಷದಿಂದ ಹಾಡತೊಡಗಿದರು. ಮಜಲುಗಳು, ಮೋಜಿನ ಆಟನೋಟಗಳು, ಮೇಜವಾನೆಗಳು ಇತ್ಯಾದಿ ಉತ್ಸವುಗಳಿಗಂತೂ ಮಿತಿಯೇ ಇಲ್ಲ. ಸರ್ವಮಾನ್ಯನಾದ ಭಾವುವಿನ ಸತ್ಕಾರವಂಗೈಯ್ಯಲು 'ನಾಮುಂದೆ ನೀಮುಂದೆ' ಎಂದು ಆ ಊರಜನರು ಹಾತೊರೆಯುತ್ತಿದ್ದರು.

ಒಂದಾನೊಂದು ದಿವಸ ವನಭೋಜನ ಸಮಾರಂಭವು ಆಗುವದು ಗೊತ್ತಾಯಿತು. ಅವನ ಭೋಜನಕ್ಕೆ ಸಕಲ ಆಶ್ರಿತರು, ವೈದಿಕರು, ಪಂಡಿತರು, ಸರದಾರರು, ಮಾನಕರಿಜನರು, ವತನದಾರರು ಮತ್ತು ಉಳಿದ ಸಭ್ಯಗೃಹಸ್ಥರು ಹೀಗೆ ಯಾವತ್ತರೂ ನಿಮಂತ್ರಿತರಾಗಿದ್ದರು. ಪಂಚಪಕ್ವಾನ್ನದ ಸಿದ್ಧತೆಯಿತ್ತು. ತಾಸಗಾಂವಿಯ ಬಳಿಯಲ್ಲಿ ಒಂದು ವಿಶಾಲವಾದ ತೆಂಗಿನ ಬನವಿರುವದು. ಅಲ್ಲಿ ಜಾಜಿಮಲ್ಲಿಗೆ ಮೊದಲಾದ ಹೂವಿನ ಗಿಡಗಳೂ ಇದ್ದವು. ಅದು ದಿವ್ಯ ಉಪವನದಂತೆ ರಾಜಿಸುತ್ತಿತ್ತು. ಅಲ್ಲಿ ಬೀಸುವ ತಂಗಾಳಿಯು ಶರೀರಪರಿಶ್ರಮವನ್ನು ಪರಿಹರಿಸುತ್ತಿತ್ತು. ಆ ಗಾಳಿಯ ಯೋಗದಿಂದ ಪುಷ್ಪಗುಚ್ಛಗಳೊಳಗಿಂದ ಉದುರಿರುವ ಪರಾಗಗಳಿಂದ ಪೂರಿತವಾದ ಆ ವನಭೂಮಿಯ ನೆಲವೆಲ್ಲ ಘಮಘಮಿಸುತ್ತಿತ್ತು. ಅಲ್ಲಲ್ಲಿ ಸ್ವರಗೈಯ್ಯುವ ಭೃಂಗಗಳು ಸಂಭ್ರಮದಿಂದ ಅತ್ತಿತ್ತ ಸಂಚರಿಸುತ್ತಿದ್ದವು. ಆನಂದದಿಂದ ಕೂಗುವ ಪಕ್ಷಿನಿಕರವು ಜನರನ್ನು ಊಟಕ್ಕೆ ಕರೆಯುತ್ತಿರುವಂತೆ ಒಪ್ಪುತ್ತಿತ್ತು. ಈ ಪ್ರಕಾರ ಮನೋಹರವಾದ ವನಮಧ್ಯದಲ್ಲಿಯೇ ಅಂದಿನ ಭೋಜನಸಮಾರಂಭವು ಆಗತಕ್ಕದ್ದೆಂದು ಗೊತ್ತಾಗಿತ್ತು. ಊಟದ ಹೊತ್ತಾಗಲು ಸಾವಿರಾರು ಜನರು ಬಂದು ಕೂಡಿದರು. ಸಾಲುಸಾಲಾಗಿ ಎಲೆಗಳನ್ನು ಹಾಕಿದರು. ಮೊದಲು ವೈದಿಕರ ಸಾಲು, ಕೆಳಗೆ ಶಾಸ್ತ್ರಜ್ಞರಾದ ಪಂಡಿತರ ಪಂಕ್ತಿ, ಅದರ ಕೆಳಗೆ ಪಟವರ್ಧನ ಬಾಂಧವರ ಸಾಲು, ಅದರಾಚೆಗೆ ಮಾನಕರಿ ಜನರ ಮೇಳವು, ಅದರ ಹೊಂದಿಗೆ ಮಿಕ್ಕ ಗೃಹಸ್ಥರ ಪಂಕ್ತಿ, ಈ ಪ್ರಕಾರ ತಾರತಮ್ಯಕ್ಕೆ ಸರಿಯಾಗಿ ವ್ಯವಸ್ಥೆಯಾಗಿರಲು, ಕೂಡಿದ ಜನರು ತಮ್ಮ ಯೋಗ್ಯತಾನುಸಾರವಾದ ಸ್ಥಳಗಳನ್ನು ಹಿಡಕೊಂಡು ಕೂತರು. ಭೋಜನಪದಾರ್ಥಗಳು ವಿಪುಲವಾಗಿದ್ದವು; ಅವನ್ನು ಬಡಿಸುವ ಕೆಲಸವು ಆರಂಭವಾಯಿತು. ಕೂಡಿದ ಕೆಲವು ಜನರಲ್ಲಿ ಖರ್ಡೆಯ ಕಾಳಗದ ಸುದ್ದಿಯು ನಡೆದಿತ್ತು. ಕೆಲವರು ಸ್ವಪರಾಕ್ರಮ-ಪ್ರಶಂಸೆಯನ್ನು ನಡೆಸಿದ್ದರು. ಅನೇಕರು ಭಾವೂಸಾಹೇಬನ ಗುಣಗಣವನ್ನು ಕೊಂಡಾಡುತ್ತಿದ್ದರು. ಹೀಗೆ ಆ ವನಭೋಜನ-ಸಮಾಜವು ಆನಂದದಲ್ಲಿ ಮಗ್ನವಾಗಿತ್ತು. ಇನ್ನು ಎಲ್ಲರೂ ಊಟಕ್ಕೆ ಕೂಡ್ರತಕ್ಕವರು; ಇಷ್ಟರಲ್ಲಿ ಪುಣೆಯ ಹಾದಿಯಿಂದ ಒಬ್ಬ ಸಾರಣಿ ಸವಾರನು ಲಗುಬಗೆಯಿಂದ ಬರುವದು ಎಲ್ಲರ ದೃಷ್ಟಿಗೆ ಬಿತ್ತು. ಅಂಥ ಅವಸರದ ಕೆಲಸವೇನಿರಬಹುದೆಂದು ಕೂಡಿದ ಜನರು ವಿಚಾರ

ಮಾಡತೊಡಗಿದರು. ಅಷ್ಟರಲ್ಲಿ ಆ ಸಾರಣಿಸವಾರನು ಆ ಸ್ಥಳಕ್ಕೆ ಬಂದನು. ಕೂಡಲೆ ಆತನು "ಪರಶುರಾಮಭಾವು ಪಟವರ್ಧನರಿಗೆ ನಾನು ಬಂದ ಸುದ್ದಿಯನ್ನು ತಿಳಿಸಬೇಕು" ಎಂದು ಹೇಳಿಕೊಂಡನು. ಸ್ವಾರನು ಬಂದ ಸುದ್ದಿಯು ಭಾವೂನ ಕಿವಿಗೆ ಬೀಳುತ್ತಲೆ, ಆ ಸ್ವಾಮಿಭಕ್ತನು ಸ್ವತಃ ಹೊರ ಟುಬಂದನು. ರಾಜಶೀವಿಯಂತೆ ಸ್ವಾರನು ಭಾವೂಸಾಹೇಬಗೆ ನಯಭಯ ದಿಂದ ಮುಜರೆಯನ್ನು ಮಾಡಿ ತಾನು ತಂದ ಪತ್ರವನ್ನು ಕೊಟ್ಟನು. ಅದು ನಾನಾಫಡಣವೀಸನು ಬರೆದ ಪತ್ರವು. ಅದನ್ನು ಭಾವು ಒದರಿ ಓದದೆ ಮನ ಸ್ಸಿನಲ್ಲಿಯೇ ಓದಿಕೊಂಡನು. ಓದುತ್ತ ಹೋದಂತೆ ಆತನ ಮುಖಮುದ್ರೆಯು ಉತ್ತೇಜಿತವಾಯಿತು. ಆನಂದದ ಸರ್ವ ಲಕ್ಷಣಗಳು ಲೋಪವಾದವು; ಉದಾಸೀನವು ತಲೆದೋರಿತು. ಆತನ ಮೋರೆಯು ಬಾಡಿತು. ಕಣ್ಣುಗಳಲ್ಲಿ ಅಶ್ರುಧಾರೆಯು ಅಂಕುರಿಸಿತು. ಕೊನೆಗೆ ಪತ್ರ ಓದುವದು ತೀರಿತು; ಆಗ ಭಾವೂನ ಬಾಯಿಂದ ದೀರ್ಘ ಸುಸ್ಕರವು ಹೊರಟಿತು. ಆತನು ಪುನಃ ಪುನಃ ಪತ್ರವನ್ನು ಓದುತ್ತ, ನಿಟ್ಟುಸಿರು ಬಿಡತೊಡಗಿದನು; ಮತ್ತು ತಲೆ ಕೆಳಗೆ ಮಾಡಿಕೊಂಡು ಖಿನ್ನನಾಗಿ ಕೂತನು. ಇದನ್ನೆಲ್ಲ ಕಂಡು ಬಿತ್ತಿನ ಲ್ಲಿದ್ದ ಜನರು ಏನೋ ವಿಪರೀತ ಪ್ರಸಂಗವು ಸಂಭವಿಸಿರಬೇಕೆಂದು ಊಹಿ ಸಿದರು. ಅವರಲ್ಲಿ ತೋರುತ್ತಿದ್ದ ಹರುಷವು ಇಲ್ಲದಾಯಿತು. ಅವರು ಹುಚ್ಚ ರಂತೆ ಗುಣಗುಟ್ಟಹತ್ತಿದರು. ತಥಾಪಿ ಪ್ರಸಂಗವಿಶೇಷವು ಏನಿರುವದೆಂದು ಕೇಳುವ ಧೈರ್ಯವು ಯಾರಿಗೂ ಆಗಲಿಲ್ಲ. ಭಾವೂನ ಊಳಿಗದಲ್ಲಿ ಗೋಪಾ ಳಪಂತಮಾಮಾ ಸೋಹನಿ ಎಂಬುವ ಒಬ್ಬ ದಿಟ್ಟ ಗೃಹಸ್ಥನಿದ್ದನು. ಆತನ ಮೇಲೆ ಭಾವೂನ ಪ್ರೇಮವು ಸಂಪೂರ್ಣವಿತ್ತು. ಕಟ್ಟಕಡೆಗೆ ಆ ಗೋಪಾಳ ಪಂತನು ಧೈರ್ಯ ತಾಳಿ ಭಾವುಸಾಹೇಬನನ್ನು ಕುರಿತು "ಏನು ಸುದ್ದಿ" ಎಂದು ಮೆಲ್ಲಗೆ ವಿಚಾರಿಸಿದನು. ಅದಕ್ಕೆ ಭಾವು ಉತ್ತರಕೊಡದೆ ನಾನಾಫಡ ಣವೀಸನ ಪತ್ರವನ್ನು ಆತನ ಮೈಮೇಲೆ ಬೀಸಾಡಿದನು. ಗೋಪಾಳಪಂತನು ಆ ಪತ್ರವನ್ನು ಓದಿದನು. ಅದರ ತಾತ್ಪರ್ಯವುಃ—ಆಶ್ವೀಜ ಶುದ್ಧ ಏಕಾದ ಶಿಯ ದಿವಸ ಶ್ರೀಮಂತ ಸವಾಯಿಮಾಧವರಾಯರು ಶನಿವಾರ ವಾಡೆಯ ಎರ ಡನೆಯ ಅಂತಸ್ಥಿನ ಮೇಲಿಂದ ಕೆಳಗೆ ಹಾರಿಕೊಂಡಿರುವರು. ಕಾರಂಜಿಯ ಮೇಲೆ ಬಿದ್ದುದರಿಂದ ಕಾಲಿಗೆ ಬಹಳ ಪೆಟ್ಟು ಹತ್ತಿರುವದು. ಮೈಮೇಲೆ ಎಚ್ಚ ರವಿಲ್ಲ. ಬಹಳವಾಡಿ ಉಳಿಯುವ ಆಶೆಯಿಲ್ಲ. ನಮ್ಮೆಲ್ಲರ ವಾಂಛಿತ

ಕಾರ್ಯವು ಕೆಡುವಂತೆ ತೋರುವದು. ದೇವರು ಇಟ್ಟಂತೆ ನಾವು ಇರತಕ್ಕದ್ದು. ಇಲ್ಲಿ ಏನೇನು ಸಂಭವಿಸಬಹುದೆಂಬದನ್ನು ಈಗ ಹೇಳಲಿಕ್ಕೆ ಬರುವಂತೆ ಇಲ್ಲ. ಕಾರಣ ನೀವು ಪತ್ರ ತಲ್ಪುತ್ತಲೆ, ಸೈನ್ಯಸಹವರ್ತಮಾನ ಹೊರಟು ಬರಬೇಕು. ತಡಮಾಡುವ ಹೊತ್ತು ಅಲ್ಲ. ಸಮಕ್ಷ ಭೆಟ್ಟಿಯಾದ ಬಳಿಕ ಎಲ್ಲ ಸಮಾಚಾರವು ತಿಳಿಯುವದು. ಗೋಪಾಳಪಂತನು ಪತ್ರ ಓದುತ್ತ ಹೋದಂತೆ ಆತನ ಮನೋವೃತ್ತಿಯು ಸ್ತಬ್ಧವಾಯಿತು. ನೆರೆದ ಜನರಿಗೆ ರಾಜಧಾನಿಯ ವೃತ್ತಾಂತವು ವಿದಿತವಾಯಿತು. ಎಲ್ಲರೂ ತಟಸ್ಥರಾದರು. ಬಳಿಕ ಎಲ್ಲಿಯ ಊಟ? ಯಾರಿಗೂ ಅನ್ನವು ಸವಿಹತ್ತಲಿಲ್ಲ. ವಿನೋದದ ಭಾಷಣವು ಓಡಿಹೋಯಿತು. ಎಲ್ಲರೂ ವಿಚಾರನಿಮಗ್ನರು. “ **मनसा-चिंतयेत्कार्यं । दैवमन्यत्र चिंतयेत् ॥** ” ಎಂಬಂತೆ ಆ ವನಭೋಜನ ಸಮಾರಂಭದ ಕೊನೆಯ ಪರಿಣಾಮವು ವಿಪರೀತವಾಯಿತು. ಜಗನ್ನಿಯಾಮಕನು ಯಾವಹೊತ್ತಿಗೆ ಏನು ಮಾಡುವನೆಂಬದರ ನೇಮವಿಲ್ಲ.

ನಾನಾನ ಆಜ್ಞಾಪತ್ರದಂತೆ ಭಾವು ಕೂಡಲೆ ಸೇನಾಸಮೇತನಾಗಿ ತಾಸಗಾಂವಿಯಿಂದ ಹೊರಟನು. ಆತನು ತ್ವರಿತಗತಿಯಿಂದ ಪಯಣ ಮಾಡುತ್ತ ಮರುದಿವಸವೇ ರಾಜಧಾನಿಗೆ ಬಂದು ತಲ್ಪಿದನು. ತಾಸಗಾಂವಿಯಿಂದ ಪುಣೆಯು ೬೦-೬೫ ಹರದಾರಿಯ ದೂರವಿರುವದು. ಹಾದಿಯಲ್ಲಿ ನಿದ್ರೆಯಿಲ್ಲ; ಅರ್ಧಕ್ಷಣವಾದರೂ ವಿಶ್ರಾಂತಿಯಿಲ್ಲ. ಒಂದೇಸವನೆ ಭಾವು ಮಾರ್ಗಕ್ರಮಣ ಮಾಡಿದನು. ಪುಣೆಯನ್ನು ಮುಟ್ಟಿ ಯಾವಾಗ ನಾನಾನ ಭೆಟ್ಟಿಯಾದೀತೆಂದು ಆತನು ಆತುರಗೊಂಡನು. ಪುಣೆಯನ್ನು ತಲ್ಪುವ ಮುಂಚೆ ನಡುವೇ ಹಾದಿಯಲ್ಲಿ ಶ್ರೀಮಂತ ಸವಾಯಿಮಾಧವರಾಯರು ಕೈಲಾಸವಾಸಿ * ಯಾದರೆಂಬ

* ಪಂತಪ್ರತಿನಿಧಿ ಸವಾಯಿಮಾಧವರಾಯರ ಅಕಾಲಮೃತ್ಯುವಿನ ವಿಷಯವಾಗಿ ಇತಿಹಾಸಕಾರರು ಬರೆದ ಈ ಸಂಗತಿಯು ಜನದೃಷ್ಟಿಯಿಂದ ಯುಕ್ತ ತೋರುತ್ತಿದ್ದರೂ, ಆ ಬಗ್ಗೆ ‘ ಸರಸ್ವತಿ-ವಿಲಾಸ ’ ಅಥವಾ ‘ ವಿಭುದೇತಿಹಾಸ ’ ಎಂಬ ಮಹಾರಾಷ್ಟ್ರ ಪುಸ್ತಕದಲ್ಲಿ ಉಲ್ಲೇಖವಾದ ಒಂದು ಅತ್ಯಂತ ಕೌತುಕದ ಸಂಗತಿಯನ್ನು ಇಲ್ಲಿ ಸಂಕ್ಷೇಪರೂಪದಿಂದ ವಿವರಿಸುವೆವು. ಈ ವಿಶ್ವಸನೀಯವಾದ ಸಂಗತಿಯು ತಮಗೆ ಒಬ್ಬ ವೃದ್ಧನ ವಿದ್ಯಮಾನ ತಿಳಿದಿದ್ದು ಅದು ನಿಜವಿರಬೇಕೆಂದು ಆ ಪುಸ್ತಕಕರ್ತರ ಅಭಿಮತವುಂಟು:—

ವಿಂಧ್ಯಪರ್ವತದಾಚೆಗೆ ಒಂದು ಗ್ರಾಮದಲ್ಲಿ ಒಬ್ಬ ಬಡಬ್ರಾಹ್ಮಣನಿದ್ದನು. ಆವನು ಮುಸಲ್ಮಾನ ಪುಂಡಜನರ ಹಾವಳಿಗೂ, ಬಡತನದ ಬಾಳ್ವೆಗೂ, ಬಲು ಬೇಸತ್ತು, ಪುಣೆಯ

ದುಃಖಾತೀತವಾದ ವರ್ತಮಾನವು ಭಾವ್ರೂಗೆ ಹತ್ತಿತು. ಆತನು ರಾಜಧಾನಿಗೆ ಬಂದಬಳಿಕ, ನಾನಾಫಡಣವೀಸನು, ಶಿಂದೆ, ಹೋಳಕರ ಮುಂತಾದ ಪ್ರಮುಖ ಸರದಾರರನ್ನೂ ಆಸ್ಥಾನದ ಮುತ್ಸದ್ದಿಜನರನ್ನೂ ಕೂಡಿಸಿ ದರಬಾರ ಮಾಡಿದನು. ಆಗ್ಗೆ ಪೇಶವೆಗಾದಿಯ ಮುಂದಿನ ವ್ಯವಸ್ಥೆಯ ಬಗ್ಗೆ ವಿಚಾರವು ಹೊರಟಿತು. ಆಗಿನ ಸ್ಥಿತಿಗತಿಯನ್ನು ನಾನಾನು ನೆರೆದ ಜನರಿಗೆಲ್ಲರಿಗೆ ಸಾದ್ಯಂತ ತಿಳಿಸಿದನು. ನಾನಾನ ಅಂದಿನ ಭಾಷಣವು ಅತ್ಯಂತ ಹೃದಯ ಛೇದಕವಿದ್ದು, ವಿಚಾರಪರಿಪ್ಲುತವಿತ್ತು. ಶಿಂದೆನ ಕಡೆಯ ಬಾಳೋಬಾ ತಾತ್ಯಾ ಎಂಬುವನು ರಘುನಾಥರಾಯನ ಮಗನಾದ ಬಾಜೀರಾಯನಿಗೆ ಪೇಶವೆ

---

ಶ್ರೀಮಂತರ ಬಳಿಗೆ ಹೋಗಿ ಏನಾದರೂ ಯಾಚಿಸಬೇಕೆಂದು ಯೋಚಿಸಿ, ಹೆಗಲಿಗೆ ಹಸಬಿಯನ್ನು ಹಾಕಿಕೊಂಡು ವಿಂಧ್ಯಗಿರಿಯನ್ನಿಳಿದು ಬಂದು ದಕ್ಷಿಣದಿಕ್ಕು ಹಿಡಿದು ಪ್ರವಾಸ ಮಾಡತೊಡಗಿದನು. ಹೀಗೆ ಅವನು ೧೨ ದಿವಸ ಹಾದೀ ನಡೆದು, ಕಡೆಗೆ ಒಂದು ವಿಶಾಲವಾದ ಪ್ರದೇಶಕ್ಕೆ ಬಂದು ಮುಟ್ಟಿದನು. ಅದು ನಿರ್ಜನಸ್ಥಳವು. ಸೃಷ್ಟಿಯ ಸೌಂದರ್ಯವು ಪರಮ ರಮಣೀಯವಾಗಿತ್ತು. ಮುನಿಜನರ ವಸತಿಸ್ಥಾನಕ್ಕೆ ತಕ್ಕದ್ದೆಂದು ತೋರುತ್ತಿತ್ತು. ಆ ವಿಪ್ರನು ಅಲ್ಲಿ ಬಳಿಯಲ್ಲಿರುವ ಸರೋವರದಲ್ಲಿ ಸ್ನಾನಸಂಧ್ಯಾವಂದನೆಯನ್ನು ತೀರಿಸಿಕೊಂಡು ಇನ್ನು ಫಲಾಹಾರ ತಿನ್ನಬೇಕೆಂದು ತನ್ನ ಹಸಿಬಿಯಲ್ಲಿ ಕೈಹಾಕುವಷ್ಟರಲ್ಲಿ ಆತನು ಮಾನವೀಪ್ರಾಣಿಯ ಶಬ್ದವನ್ನು ಕೇಳಿದನು. ಕೂಡಲೆ ಆತನಿಗೆ ಆನಂದವೂ, ಭೀತಿಯೂ, ದುಃಖವೂ ಆಯಿತು. ಆತನ ಹಸಿವೆಯು ಅಡಗಿತು. ಅವನು ಗಾಬರಿಗೊಂಡು ಎಡಬಲದಲ್ಲಿ ನೋಡುತ್ತಿರಲು, ಸಾಧುಪುರುಷರ ಒಂದು ಪರ್ಣಕುಟೀರವು ಆತನ ಕಣ್ಣಿಗೆ ಬಿತ್ತು. ಆಗ ಅವನು ಸ್ವಲ್ಪ ಧೈರ್ಯತಾಳಿ, ಆ ಸಾಧು-ನಿಲಯವನ್ನು ಹೊಕ್ಕು ಅಲ್ಲಿರುವ ಸಾಧುಶ್ರೇಷ್ಠರ ಚರಣಕಮಲಗಳಿಗೆ ವಿನೀತಭಾವದಿಂದ ಸಾಷ್ಟಾಂಗನಮಸ್ಕಾರವನ್ನು ಮಾಡಿದನು. ಆ ಸಾಧುಪುರುಷರು ಆತನನ್ನು ವಿಶುದ್ಧಭಾವದಿಂದ ಆಶೀರ್ವದಿಸಿದರು. ಅವರು ಆದೇ ಸಮಾಧಿಯೋಗವನ್ನು ವಿಸರ್ಜಿಸಿದಂತೆ ಕಾಣುತ್ತಿತ್ತು. ಅವರು ಆರುಜನರಿದ್ದರು; ಆದರೆ ಅಲ್ಲಿದ್ದ ಆಸನಗಳು ಮಾತ್ರ ಏಳು ಇದ್ದವು. ಅದನ್ನು ಕಂಡು ಆ ವಿಪ್ರನು ವಿಸ್ಮಯಗೊಂಡನು. ಬಳಿಕ ಆ ಸಾಧುವರ್ಯರು ಆತನನ್ನು ಚನ್ನಾಗಿ ಸತ್ಕರಿಸಿ ಆತನ ಪ್ರಯಾಣ-ಕಾರಣವನ್ನು ಕೇಳಲು, ಅವನು ತನ್ನ ಸಾದ್ಯಂತ ವೃತ್ತಾಂತವನ್ನು ವಿವರಿಸಿದನು. ಆಗ್ಗೆ ಆ ಸಜ್ಜನ ಲಲಾಮರು ಕನಿಕರಗೊಂಡು ಆತನನ್ನು ಹರಿಸುತ್ತ “ದ್ವಿಜೋತ್ತಮಾ, ನೀನು ಶ್ರೀಮಂತರ ಬಳಿಗೆ ಹೋಗು; ಅಲ್ಲಿ ನಿನ್ನ ಸನ್ಮಾನವಾಗಿ ನಿನಗೆ ವಿಪುಲ ಧನವು ಸಿಗುವದು; ನಿನ್ನ ಕಲ್ಯಾಣವು ವೃದ್ಧಿಂಗತವಾಗುವದು. ಆದರೆ ನಮ್ಮದೊಂದು ಗುಪ್ತ-ನಿರೂಪವಿರುವದು. ಅದನ್ನು ಶ್ರೀಮಂತ ಸವಾಯಿಮಾಧವರಾಯರ ಹೊರತು ಯಾರಿಗೂ ಹೇಳಕೂಡದು. ಅವರಿಗಾದರು ಗೌಪ್ಯವಾಗಿ ತಿಳಿಸಬೇಕು. ಒಂದುವೇಳೆ ನೀನು ಅದನ್ನು ಅನ್ಯರಲ್ಲಿ

ಪದವಿಯನ್ನು ಕೊಡಿಸಬೇಕೆಂದು ಅಭಿಪ್ರಾಯಕೊಟ್ಟನು. ಅದಕ್ಕೆ ಚತುರನಾದ ನಾನಾನು ಅಂದದ್ದು "ರಘುನಾಥರಾಯನು ನಮ್ಮೆಲ್ಲರ ಕಡುಹಗೆಯು; ಆತನ ವಂಶಜರಿಗೆ ಶರಣು ಹೊಡೆಯಬಾರದೆಂದು ನಮ್ಮ ಪ್ರಯತ್ನವು. ಇದೆಲ್ಲ ಆತನ ಮಗನಾದ ಬಾಜೀರಾಯನಿಗೆ ಗೊತ್ತುಂಟು. ಆತನ ತಾಯಿಯಾದ ಆನಂದಿಬಾಯಿಯು ಮರಾಠಾಸರದಾರರನ್ನು ನಾಶಗೊಳಿಸಬೇಕೆಂದು ಆತನಿಗೆ ಚಿಕ್ಕಂದಿನಿಂದ ಉಪದೇಶ ಮಾಡಿರುವಳು. ಆತನಿಗೆ ಪೇಶವೆ ಪದವು ಪ್ರಾಪ್ತವಾದಬಳಿಕ, ಪ್ರಧಾನರ ಮತ್ತು ಸರದಾರರ ಹಾಡು ಏನು ಆಗುವದೋ? ದೇವರೇ ಬಲ್ಲ. ಪೇಶವಾಯಿಯ ಸುಖಲಕ್ಷ್ಮಿಯು ಕಾಲೂರಿ ನಿಲ್ಲಳು. ಆ ಜಯಲಕ್ಷ್ಮಿಯು ಕೈಬಿಡಲು, ಪೇಶವೆಸಾಮ್ರಾಜ್ಯವು ಹಾಳುಸುಡುಗಾಡಿನ ಕಳೆಯನ್ನು ಧರಿಸುವದು. ರಾಘೋಬನು ಬಲಾಢ್ಯರಾದ ಇಂಗ್ಲೀಷರ ಸಖ್ಯವನ್ನು ಸಂಪಾದಿಸಿಕೊಂಡಿದ್ದು, ಅದನ್ನೇ ಬಾಜೀರಾಯನು ವೃದ್ಧಿ

---

ಪ್ರಕಟಮಾಡಿದರೆ ತತ್‌ಕ್ಷಣವೇ ನೀನು ಗತಪ್ರಾಣನಾಗುವಿ" ಎಂದು ಹೇಳಲು, ಆ ದ್ವಿಜನು ಆದರಂತೆ ವಚನವನ್ನು ಕೊಡಲು, ಆ ಸಾಧುರಾಜರು ಆತನನ್ನು ಕುರಿತು "ವಿಪ್ರೋತ್ತಮಾ, ಮಾಧವರಾಯರಿಗೆ ಹೇಳಬೇಕಾದುದೇನಂದರೆ:—ವಿಂಧ್ಯಾಚಲದ ದಕ್ಷಿಣಪ್ರದೇಶದಲ್ಲಿ, ಒಂದು ಗುಪ್ತ ಗುಹೆಯು ಇರುವದು. ಅಲ್ಲಿ ಆರುಜನ ಸಾಧುಗಳಿದ್ದು, ಒಂದು ಪೀಠವು ತೆರವು ಇರುವದು. ಅವರು ನಿಮ್ಮ ಮಾರ್ಗನಿರೀಕ್ಷಣ ಮಾಡುತ್ತಿರುವರು. ಇನ್ನು ನೀವು ರಾಜಧಾನಿಯಲ್ಲಿ ರಾಜವಿಲಾಸಗಳನ್ನು ಅನುಭವಿಸುತ್ತ ಕಾಲಕಳೆಯುವದು ಸರಿಯಲ್ಲ. ಆದಷ್ಟು ಬೇಗನೆ ಹೊರಟು ಬರಬೇಕು." ಎಂದು ಹೇಳತಕ್ಕದ್ದೆಂದು ನುಡಿಯಲು ಆ ಬ್ರಾಹ್ಮಣನು ಅವರ ಆನುಜ್ಞೆಯನ್ನು ಶಿರಸಾವಹಿಸಿ ಅಲ್ಲಿಂದ ಹೊರಟು ಮಾರ್ಗಕ್ರಮಣದಿಂದ ಪುಣೆಗೆ ಬಂದನು. ಅಲ್ಲಿ ಅವನು ಶ್ರೀಮಂತ ಸವಾಯಿಮಾಧವರಾಯರನ್ನು ಕಂಡುಕೊಂಡು, ಅವರಿಂದ ಯಥೋಚಿತ ಬಹುಮಾನವನ್ನು ಹೊಂದಿ ಅಗಣಿತ ಧನಸಹಾಯವನ್ನು ಪಡೆದು ಅವರಿಗೆ ಆ ಸಾಧುಪುರುಷರ ಸಂದೇಶವನ್ನು ತಿಳುಹಿ ಅವರ ನಿರೂಪ ತಕ್ಕೊಂಡು ತನ್ನ ಊರಿಗೆ ತಿರುಗಿದನು. ಅವನು ಹಾದಿಯಲ್ಲಿ ಆ ಸಾಧುಜನರ ಗುಪ್ತಗೃಹವನ್ನು ಹುಡುಕಿದನು. ಆದರೆ ಅದು ಸಿಗದ್ದರಿಂದ ಆತನು ಬಹಳ ಕಳವಳಗೊಂಡು ತನ್ನ ಮನೆಗೆ ಹೋದನು. ಇದು ಭಾದ್ರಪದ ಬಹುಳದಲ್ಲಿ ಸಂಭವಿಸಿತು. ಇತ್ತ ಸವಾಯಿಮಾಧವರಾಯರು, ಆ ಸಾಧುರಾಜರ ಆಜ್ಞೆಯನ್ನು ತಲೆಯಲ್ಲಾಂತು, ಅಶಾಶ್ವತವಾದ ಮಾನವಶರೀರದಿಂದ ಮುಕ್ತರಾಗುವ ಹಂಚಿಕೆಯನ್ನು ಹಾಕುತ್ತ, ಕಡೆಗೆ ಉಪ್ಪರಿಗೆಯ ಮೇಲಿಂದ ಹಾರಿಕೊಂಡು ಆ ಸಾಧುಶ್ರೇಷ್ಠರ ದರ್ಶನಕ್ಕೆ ಹೊರಟು ಹೋಗಿ, ಅವರೊಡನೆ ದಿವ್ಯಪೀಠವನ್ನು ಅಲಂಕರಿಸಿದರು. ಈ ದೃಷ್ಟಾಂತದಿಂದ ಸವಾಯಿಮಾಧವರಾಯರು ಅವತಾರಪುರುಷರೆಂದು ಭಾವಿಕಜನರ ಗ್ರಹಿಕೆಯುಂಟು.

ಗೊಳಿಸುತ್ತ ಅವರ ಆಶ್ರಯದಿಂದ ಸರದಾರಜನರು ತಲೆಯತ್ತದಂತೆ ಮಾಡಿ ಬಿಡುವನು. ಅಸಂಖ್ಯ ಜನರು ಯುದ್ಧಾಗ್ನಿಕುಂಡದಲ್ಲಿ ಪಟಪಟನೆ ಬಲಿ ಬಿದ್ದು ಪ್ರಾಣದೊರೆಯಬೇಕಾಗುವದು. ಇಷ್ಟೆಲ್ಲ ಆದರೂ ಪರಮಪ್ರಯಾಸದಿಂದ ಸಂಪಾದಿಸಿದ ಪೇಶವೆ ಸಾಮ್ರಾಜ್ಯವು ಬಾಜೀರಾಯನ ಕೈಯಲ್ಲಿ ಬಹು ದಿವಸ ನಿಲ್ಲದು. ಅವನು ಕಡು ಹೇಡಿಯು. ಉತ್ತರಕುಮಾರನಂತೆ ಮಾತಾಡಬಲ್ಲನಲ್ಲದೆ ಆತನಲ್ಲಿ ಪೌರುಷವೇ ಇಲ್ಲ. ಅವನು ನಂಬಿಗೆಯ ಗುರತನ್ನು ಸಹ ಅರಿಯನು. ಇದೆಲ್ಲದರ ವಿಹಿತಾವಿಹಿತ ವಿಚಾರವನ್ನು ಮೊದಲು ಮಾಡಬೇಕು. ರಾಜ್ಯಕಾರಭಾರದಲ್ಲಿ ದೂರದೃಷ್ಟಿಯು ಇರಬೇಕು. ಸಾರಾಸಾರ ವಿಚಾರಮಾಡಿ ಕಾರ್ಯವನ್ನು ನಿರ್ವಹಿಸುವದು ಈಗ ನಮ್ಮ ಕೈಯಲ್ಲಿ ಇರುವದು. ಒಮ್ಮೆ ನಮ್ಮ ಕೈಯಿಂದ ಕೆಲಸವಾಗಿ ಹೋಯಿತೆಂದರೆ ಅದನ್ನು ತಿರುಗಿಸುವದು ನಮ್ಮ ಸ್ವಾಧೀನವಲ್ಲ. ಪ್ರಯುಕ್ತ ಈ ಬಗ್ಗೆ ಮೊದಲೇ ದೀರ್ಘವಿಚಾರಗೈದು ಕೆಲಸವನ್ನು ಮಾಡುವದು ಅವಶ್ಯವೂ, ಅಪೇಕ್ಷಿತವೂ, ಅತಿ ಹಿತಕರವೂ ಆಗಿರುವದು. ”

ನಾನಾನ ವಿಚಾರಪೂರಿತವಾದ ಈ ಸುರಸ ಸಂಭಾಷಣಕ್ಕೆ ಹೋಳಕರನು ಒಪ್ಪಿಕೊಂಡನು. ಭಾವು ಮೊದಲ್ಗೊಂಡು ಪಟವರ್ಧನ ಸರದಾರರೆಲ್ಲರು ರಘುನಾಥರಾಯನನ್ನೂ ಆತನ ಕುಟುಂಬದ ಜನರನ್ನೂ ಎಂದೂ ಸೇರುತ್ತಿದ್ದಿಲ್ಲ. ಪರಸ್ಪರ ಬದ್ಧಕಟಾಕ್ಷವು ಎಂದಿಗಾದರು ಇದ್ದದ್ದೇ. ಅದರಿಂದ ಅವರೆಲ್ಲರು ನಾನಾನ ಅಭಿಪ್ರಾಯಕ್ಕೆ ಅನುಮೋದಿಸಿದರು. ನೆರೆದ ಜನರ ಮುಖಚರ್ಯದ ಮೇಲಿಂದ ಧೂರ್ತನಾದ ನಾನಾನು ತನ್ನ ವಿಚಾರಕ್ಕೆ ಎಲ್ಲರ ಸಮ್ಮತಿ ಇರುವದೆಂದು ತರ್ಕಿಸಿ ಮುಂದಿನ ವ್ಯವಸ್ಥೆಯ ಬಗ್ಗೆ ಮಾತನಾಡಿದನು. “ ಸಭಾಸದರೇ, ಈಗಿನ ಪ್ರಸಂಗದಲ್ಲಿ ಮುಂದೆ ಏನು ಮಾಡಬೇಕೆಂಬುವ ವಿಷಯದಲ್ಲಿ ನನಗೆ ಒಂದು ಹಂಚಿಕೆಯು ಹೊಳೆದಿರುವದು. ಅದೇನಂದರೆ:—ಕೈಲಾಸವಾಸಿ ಶ್ರೀಮಂತ ಸವಾಯಿಮಾಧವರಾಯರ ಧರ್ಮಪತ್ನಿಯಾದ ಯಶೋದಾಬಾಯಿಯವರಿಗೆ ಒಬ್ಬ ದತ್ತಕಮಗನನ್ನು ಮಾಡಿ ಮುಂಚಿನಂತೆ ಕಾರಭಾರ ಸಾಗಿಸಬೇಕು. ನೀವೆಲ್ಲರು ಪೇಶ್ವೆಯಿಯ ಹಿತಚಿಂತಕರು; ಹೋಳಕರ, ಪಟವರ್ಧನ ಇತ್ಯಾದಿ ಸರದಾರರು ಪೇಶವೆ ಸಾಮ್ರಾಜ್ಯದ ಆಧಾರಸ್ತಂಭರು. ಪೇಶವೆ ಗಾದಿಯನ್ನು ಕಾದುಕೊಳ್ಳುವ ಸಂಪೂರ್ಣ ಭಾರವು ನಿಮ್ಮ ತಲೆಯ ಮೇಲೆ ಇರುವದು. ಮರಾಠಾ

ಸಾಮ್ರಾಜ್ಯರೂಪಭವ್ಯಮಂದಿರವು ನಿಮ್ಮೆಲ್ಲರ ಪರಾಕ್ರಮ, ಸ್ವಾಮಿಭಕ್ತಿ, ದೇಶಾಭಿಮಾನಗಳನ್ನು ಅವಲಂಬಿಸಿರುವದು. ನಿಮ್ಮ ನೆರವಿನಿಂದ ಯಾವದೂ ಅಸಾಧ್ಯವೆನಿಸದೆ ಎಲ್ಲವೂ ಅನುಕೂಲವಾಗಿ ಪೇಶವೆ ರಾಜ್ಯ-ಶಕಟವು ಸುಯಂತ್ರಿತವಾಗಿ ಸಾಗುವದು." ನಾನಾಫಡಣವೀಸನ ಪ್ರೌಢ ಮತ್ತು ಸ್ಫೂರ್ತಿವರ್ಧಕ ಸಂಭಾಷಣವನ್ನು ಕೇಳಿ ಅಲ್ಲಿ ನೆರೆದ ಸರದಾರರೂ, ಮುತ್ಸದ್ದಿಗಳೂ ತೀರಾ ತಲ್ಲೀನರಾಗಿ ಹೋದರು. ನಾನಾನ ಅಭಿಪ್ರಾಯವು ಸರ್ವಸಮ್ಮತವಾಯಿತು. ಮುಂದಿನ ವ್ಯವಸ್ಥೆಯ ಬಗ್ಗೆ ಕಾಗದಪತ್ರಗಳನ್ನು ಮಾಡಿ ಎಲ್ಲರೂ ಆತನಿಗೆ ನೆರವಾದರು.

ಆ ಕಾಗದಪತ್ರಗಳಲ್ಲಿ ನಿರ್ದಿಷ್ಟವಾದ ಪ್ರಕಾರ ಮುಂದಿನ ವ್ಯವಸ್ಥೆಯು ಆಗಿ ಹೋಗಿದ್ದರೆ ಮರಾಠಾ ಸಾಮ್ರಾಜವು ನಿಷ್ಕಂಟಕವಾಗಿ ಸಾಗಿ ಬದುಕುತ್ತಿತ್ತು. ಪೇಶವೆರಾಜ್ಯವು ಚಿರಸ್ಥಾಯಿಯಾಗಿ ಅದರ ಗೌರವವು ಅಚ್ಚಳಿಯದೆ ಉಳದಿದ್ದರೆ ಪ್ರಜೆಗಳು ಸುಖದಿಂದ ಕಾಲಕಳೆಯುತ್ತಿದ್ದರು. ಆದರೆ ಅಸಂಖ್ಯ ಸಂಕಟಗಳನ್ನು ಅನುಭೋಗಿಸುವದು ಅವರ ಹಣೆಯಲ್ಲಿ ಬರೆದಿರುವದು. ಆ ವಿಧಿ-ಲೇಖವು ತಪ್ಪುವ ಬಗೆಯಾವದು? ಹಿಂದೂಸಾಮ್ರಾಜ್ಯದ ದುರ್ದೈವವು ಪರಿಪಕ್ವವಾಗಿರಲು, ಅದರ ಮುಂದೆ ಯಾರವಿಚಾರವು ನಡೆದೀತು? ಗೊತ್ತಾದ ಮುಸಲತ್ತಿನಲ್ಲಿ ಸೇರಿದ ಒಬ್ಬ ಪುರುಷನ ಬುದ್ಧಿಯು ಆ ದುರ್ದೈವದ-ಯೋಗದಿಂದ ಭ್ರಷ್ಟವಾಗಿ, ಒಂದು ಉಪ್ಪಿನ ಹರಳು ಕೊಡಹಾಲನ್ನು ಕೆಡಿಸುವಂತೆ, ಅವನೇ ಸರ್ವಸಮ್ಮತವಾದ ವಿಚಾರ-ವ್ಯೂಹವನ್ನು ಕೆಡಿಸಿಬಿಟ್ಟನು. ಬಳಿಕ ಉಪಸ್ಥಿತವಾದ ಕಾರಸ್ಥಾನದಿಂದ ಇಲ್ಲಿಯವರೆಗೆ ಭಾವು, ನಾನಾ ಇವರಿಬ್ಬರಲ್ಲಿದ್ದ ಅವ್ಯಾಹತ ದೃಢಸ್ನೇಹಭಾವವು ಭಗ್ನವಾಯಿತು. ಪರಸ್ಪರ ವಿಶ್ವಾಸವು ಹಾರಿತು. ಹೀಗಾದುದರಿಂದ ಪೇಶವಾಯಿಯ ಜಾಣತನ, ಲೌಕಿಕ ಮತ್ತು ಪ್ರತಿಷ್ಠೆ ಇವೆಲ್ಲವುಗಳು ಲಯ ಹೊಂದಿದವು. ಇವೇ ಮುಂತಾದ ಸಂಗತಿಗಳನ್ನು ಇಲ್ಲಿ ಸ್ವಲ್ಪದರಲ್ಲಿ ವರ್ಣಿಸುವೆವು.

ನಾನಾಫಡಣವೀಸನು ತನಗೆ ಪೇಶವೆ ಪದವಿಯು ಸಿಗಬಾರದೆಂದು ಮಾಡಿದ ವಿಚಾರವು ಬಾಜೀರಾಯನಿಗೆ ಗೊತ್ತಾಯಿತು. ಆಗ ಆತನು ಶಿಂಧೇನ ದಿವಾಣನಾದ ಬಾಳೋಬಾ ತಾತ್ಯಾನು ತನ್ನ ಪಕ್ಷದವನೆಂದು ತಿಳಿದು ಆತನೊಡನೆ ಪತ್ರವ್ಯವಹಾರವನ್ನು ನಡೆಸಿದನು. ಬಾಜೀರಾಯನು

ಬರಹದಲ್ಲಿ ಕಡು ಕುಶಲನು; ಮಾತಿನಲ್ಲಿ ಬಲು ಸವಿಗಾರನು. ಆತನ ಭಾಷಣ-ಬರಹಗಳಲ್ಲಿ ವಿಲಕ್ಷಣವಾದ ಮೋಹಕಗುಣವು ತುಂಬಿಕೊಂಡಿರು ವದು. ಹೀಗೆ ಮಾತಿನ ಹದಗಾರನಾದ ಬಾಜೀರಾಯನು ಒಂದೆರಡು ಪತ್ರ ಗಳನ್ನು ಬರೆದು ಬಾಳೋಬನನ್ನು ತನ್ನ ಕಡೆಗೆ ಮಾಡಿಕೊಂಡನು. ಬಳಿಕ ಬಾಳೋಬನ ತಂತ್ರದಿಂದ ಬಾಜೀರಾಯನು ಶಿಂದೆ ದೌಲತ್ತರಾಯನಿಗೆ "ನಿಮಗೆ ೪ ಲಕ್ಷ ಉತ್ಪನ್ನದ ಸೀಮೆಯನ್ನೂ ದಂಡಿನ ವೆಚ್ಚವನ್ನೂ ಕೊಡು ವೆನು. ನೀವು ನನಗೆ ಪೇಶವೆ ಪದವಿಯ ಪ್ರಾಪ್ತ್ಯರ್ಥ ಸಹಾಯಮಾಡಿರಿ." ಎಂದು ಹೇಳಿ ಕಳುಹಿಸಿದನು. ಆಗ್ಗೆ ದೌಲತ್ತರಾಯನು ಇನ್ನೂ ತರುಣನು. "ತಾರುಣ್ಯವೂ ಅನುಭವವೂ ಒಂದೇಕಡೆಯಲ್ಲಿ ಕೂಡಿ ಇರಲಾರವು." ಎಂಬ ನೀತಿಯಂತೆ ಆತನಿಗೆ ಅನುಭವವು ತೀರಾ ಕಡಿಮೆ ಇತ್ತು. ಸ್ವತಂತ್ರ ವಿಚಾರಶಕ್ತಿಯೇ ಇದ್ದಿಲ್ಲ. ಆತನು ದಿವಾಣ ಬಾಳೋಬನ ಕೈಯೊಳಗಿನ ಸೂತ್ರದ ಗೊಂಬೆಯು. ಆದುದರಿಂದ ಆತನು ನಾನಾಫಡಣವೀಸನೊಡನೆ ಮಾಡಿಕೊಂಡ ಕರಾರುಗಳನ್ನು ಮರೆತು ತನ್ನ ದಿವಾಣನ ಕೃಷ್ಣಕಾರಸ್ಥಾ ನಕ್ಕೆ ಒಪ್ಪಿಕೊಂಡನು. ತರುವಾಯ ಶಿಂದೆ-ಬಾಜೀರಾಯರ ನಡುವೆ ಗುಪ್ತ ಪತ್ರವ್ಯವಹಾರವು ನಡೆದು ಕೆಲವು ಕರಾರುಗಳು ಆದವು.

ನಾನಾಫಡಣವೀಸನಾದರೂ ಮಹಾ ಸಾಹಸಿಯು. ಆತನು ಗೌಪ್ಯ ವರ್ತಮಾನಗಳನ್ನು ತಿಳುಕೊಳ್ಳುವಲ್ಲಿ ಬಲು ಜಾಣನು. ಶಿಂದೆ-ಬಾಜೀರಾ ಯರ ಕರಾರುಗಳು ಇನ್ನೂ ಆಗಿದ್ದಿಲ್ಲ; ಅಷ್ಟರೊಳಗೆ ಅವರಿಬ್ಬರ ಅಂತಸ್ಥ ವ್ಯವಹಾರವೃತ್ತಾಂತವನ್ನು ಅವನು ತಿಳಕೊಂಡಿದ್ದನು. ಶಿಂದೆಯು ಬಾಜೀ ರಾಯನಿಗೆ ನೆರವಾದುದರಿಂದ ತನ್ನ ಮನೋದಯವು ಪೂರ್ಣವಾಗದೆಂದು ಬಗೆದು ನಾನಾನು ಭಯಭೀತನಾದನು. ಕೂಡಲೇ ಅವನು ಭಾವೂನನ್ನು ಕರೆಸಿಕೊಂಡನು. ಅವರಿಬ್ಬರು ಏಕಾಂತವಿಚಾರ ನಡೆಸಿದರು. ಕಡೆಗೆ ಅವರು "ಶಿಂದೆ ದೌಲತ್ತರಾಯನಂತೂ ಬಾಜೀರಾಯನ ಪಕ್ಷಕಟ್ಟಿ ಆತ ನನ್ನು ಪೇಶವೆ ಗಾದಿಯ ಮೇಲೆ ಕೂಡ್ರಿಸಬೇಕೆಂದು ಯತ್ನ ನಡೆಸಿರುವನು; ಅಂದಮೇಲೆ ನಾವೇ ಆತನನ್ನು ಪೇಶವೆಪದಕ್ಕೆ ಕೂಡ್ರಿಸಿ ಬಿಟ್ಟರೆ ತೀರಿತು." ಎಂದು ನಿರ್ಧರಮಾಡಿಕೊಂಡರು. ಕೂಡಲೆ ಭಾವು ಬಾಜೀರಾಯನನ್ನು ಕರೆತರಲು ಹೊರಟನು. ಅವನು ಕೆಲವು ಸ್ವಾರರೊಡಗೊಂಡು ಶಿವನೇರಿಗೆ ಬಂದು ಬಾಜೀರಾವ ಮತ್ತು ಅಮೃತರಾವ ಇವರಿಗೆ ಭೆಟ್ಟಿಯಾಗಿ ತನ್ನ

ಆಗಮನದ ಉದ್ದೇಶವನ್ನು ತಿಳಿಸಿದನು. ನಾನಾಫಡಣವೀಸನು ಇಷ್ಟು ತಮ್ಮ ಹಿತವನ್ನು ಚಿಂತಿಸಲಾರನೆಂಬುವದು ಅವರಿಗೆ ಪೂರಾ ಗೊತ್ತು. ಅದರಿಂದ ಅವರು ನಾನಾನು ತಮ್ಮನ್ನು ವಂಚಿಸುವ ಉದ್ದೇಶದಿಂದ ಈ ಯುಕ್ತಿಯನ್ನು ಕೈಕೊಂಡಿರಬಹುದೆಂದು ಅನುಮಾನಿಸಿದರು. ಕಡೆಗೆ ಆಣಿ-ಕ್ರಿಯಾದಿಗಳಾದ ಬಳಿಕ ಅಮೃತರಾಯನು ಬಾಜೀರಾವ ಮತ್ತು ಚಿಮಾಜಿ ಅಪ್ಪಾ ಇವರಿಬ್ಬರನ್ನು ಪರಶುರಾಮಭಾವೂನ ಸ್ವಾಧೀನಮಾಡಿದನು.

ಬಾಜೀರಾಯನು ಪುಣೆಗೆ ಬಂದನು. ನಾನಾ-ಬಾಜೀರಾಯರ ಭೆಟ್ಟಿಯಾಯಿತು. ಮುಂಚಿನ ವೈಮನಸ್ಸು ಮರೆತು, ನಿರ್ವಂಚನೆಯಿಂದ ರಾಜ್ಯ-ಶಕಟವನ್ನು ನಡೆಸಬೇಕೆಂದು ಪರಸ್ಪರರು ಬರಹಮೂಲಕ ಕರಾರ ಮಾಡಿಕೊಂಡರು. ಬಳಿಕ ಬಾಜೀರಾಯನಿಗೆ ಪೇಶವೆ ಪದವು ಪ್ರಾಪ್ತವಾಯಿತು. "ಇನ್ನು ರಾಜ್ಯ-ಕಾರಭಾರವು ಚನ್ನಾಗಿ ಸಾಗುವದು. ದೇಶದಲ್ಲಿ ಸುಖ-ಸಮಾಧಾನಗಳು ನೆಲೆಗೊಳ್ಳಬಹುದು" ಎಂದು ಅವರಿಬ್ಬರು ಮನಸಾ ಚಿಂತಿಸಿದರು. ಆದರೆ ದೈವಗತಿಯು ವಿಚಿತ್ರವಾದದ್ದು. "ಮನುಷ್ಯನು ಮಾಡುವದು ಒಂದು, ದೇವರು ಮಾಡುವದು ಮತ್ತೊಂದು" ಎಂಬಂತೆ ಆಗ್ಗೆ ಪ್ರಸಂಗವು ಸಂಘಟಿಸಿ ಎಲ್ಲವೂ ವಿಪರೀತವಾಯಿತು. ಅದು ಹ್ಯಾಗಂದರೆ:—

"ನಾನಾಫಡಪವೀಸನು ಬಾಜೀರಾಯನನ್ನು ಅನುಕೂಲಮಾಡಿಕೊಂಡು ಅವನನ್ನು ಪೇಶವೆ ಗಾದಿಯ ಮೇಲೆ ಕೂಡ್ರಿಸಿದನು; ಅದರಿಂದ ನಮ್ಮ ಸಕಲ ಪ್ರಯತ್ನಗಳು ಹೊಳೆಯೊಳಗೆ ಹುಣಸೀಹಣ್ಣು ತೊಳೆದಂತೆ ವ್ಯರ್ಥವಾದವು" ಎಂದು ಶಿಂದೇ-ಬಾಳೋಬರು ಚಿಂತಿಸಿ ಕಡು ವಿಷಾದಗೊಂಡರು. ನಾನಾನು ತನ್ನ ಜಾಣತನದ ಕೊನೆಯನ್ನು ತೋರಿಸಿಬಿಟ್ಟನು. ಆದ್ದರಿಂದ ತನ್ನ ಮನೋರಥವು ಈಡೇರದೆ ತಾನು ಜನರಲ್ಲಿ ಮಾತ್ರ ಹಾಸ್ಯಾಸ್ಪದನಾದೆನೆಂದು ಬಾಳೋಬನ ಮನಸ್ಸಿನಲ್ಲಿ ಚಟುಕ್ಕ ಹತ್ತಿತು. "ಬಾಜೀರಾಯನು ಪ್ರಥಮತ: ತನ್ನ ಕೂಡ ಸಂಧಾನ ನಡೆಸಿ ಕಡೆಗೆ ಶತ್ರುಗಳಿಗೆ ಅನುಕೂಲನಾದನು" ಎಂದು ಆತನು ಬಾಜೀರಾಯನ ಮೇಲೆ ಹಲ್ಲು ಕಡಿಯತೊಡಗಿದನು. ಆಗ್ಗೆ ಬಾಳೋಬನು ನಾನಾ-ಬಾಜೀರಾಯರನ್ನು ಪೂರಾ ಮೋಸಗೊಳಿಸಬೇಕೆಂದು ಕಪಟ-ಜಾಲವನ್ನು ರಚಿಸತೊಡಗಿದನು. ಆತನು ಅತ್ಯಂತ ಸ್ವಾಭಿಮಾನಿಯು. ಇದಲ್ಲದೆ ಸ್ವೀಕೃತಕಾರ್ಯವನ್ನು

ಸಿದ್ಧಿಗೊಯ್ಯುವಲ್ಲಿ ದೀರ್ಘಸಾಹಸಿಯೂ, ಪರಮ ಆಸಕ್ತನೂ ಆಗಿದ್ದನು. ದೌಲತ್ರಾಯನಂತೂ ಆತನ ಕೈಯೊಳಗಿನ ಆಡುವ ಗೊಂಬೆಯು. ಆತನು ತನ್ನ ದಿವಾಣನ ಮಾತನ್ನು ಉಗಳು ಹಾಕಿ ದಾಟುತ್ತಿದ್ದಿಲ್ಲ. ಮರಾಠಾ ಸಾಮ್ರಾಜ್ಯದಲ್ಲಿ ಶಿಂದೇನ ಸೈನ್ಯವು ದೊಡ್ಡದು. ಇವೆಲ್ಲ ಕಾರಣಗಳಿಂದ "कर्तुं, अकर्तुं, अन्यथा कर्तुं" ಎಂಬ ನ್ಯಾಯದಂತೆ ಆಗಿನ ಕಾಲಕ್ಕೆ ಬಾಳೋಬನಿಗೆ ಅಸದೃಶಸಾಮರ್ಥ್ಯವು ಉತ್ಪನ್ನವಾಯಿತು. ಇದಲ್ಲದೆ ನಾನಾನು ವಿಚಾರ-ಚತುರನಾದರೂ, ಬಲು ಪುಕ್ಕನೆಂಬುವದನ್ನು ಬಾಳೋಬನು ಮೊದಲಿನಿಂದ ಬಲ್ಲನು. ಆದುದರಿಂದ ಆತನ ಮುಸಲತ್ತು ಕೊನೆಗಾಣುವಲ್ಲಿ ವಿಶೇಷ ಆಯಾಸವೆನಿಸಲಿಲ್ಲ. ದೌಲತ್ರಾಯನು ದಂಡು ಸಹಿತ ಗೋದಾವರೀ ತೀರದಲ್ಲಿ ತಳವೂರಿಕೊಂಡು ನಿಂತಿದ್ದನು. ಬಾಳೋಬನು ಅವನನ್ನು ಪುಣೆಗೆ ಬರಮಾಡಿಕೊಂಡನು. ಅಷ್ಟರಲ್ಲಿ ಅವನ ಕೆಲಸವು ಕೈಗೂಡಿತು. ಶಿಂದೆಯು ಸೈನ್ಯದೊಡನೆ ಬರುವ ಸುದ್ದಿಯು ನಾನಾನಿಗೆ ಹತ್ತುತ್ತಲೆ ಪುಕ್ಕನಾದ ನಾನಾ ಫಡಣವೀಸನು ಗಾಬರಿಗೊಂಡು ಗಡಬಡಿಸಿದನು. ಆತನ ಕಾಲುಗಳು ಪುಣೆಯಲ್ಲಿ ನಿಲ್ಲದಾದವು. ಎಲ್ಲಿಗಾದರೂ ಓಡಿಹೋಗುವ ಹಂಚಿಕೆಯನ್ನು ಹಾಕಿದನು. ಹೀಗೆ ನಾನಾಫಡಣವೀಸನು ಬಾಳೋಬನಿಗೆ ಬೆದರಿ ಪುಣೆಯನ್ನು ಬಿಟ್ಟು ಹೊರಟು ಹೋಗಬೇಕೆಂದು ಮಾಡಿದ ವಿಚಾರವನ್ನು ತಿಳಿದು ಪರಶುರಾಮಭಾವು ಆತನ ಬಳಿಗೆ ಬಂದು ಆತನ ಸ್ವಾಭಾವಿಕವಾದ ಪುಕ್ಕತನವನ್ನು ನೆರೆಜರೆದು, ಗಾಂಭೀರ್ಯದಿಂದ ಅಂದದ್ದು:— 'ನಾನಾ, ನೀವು ಇದೇನು ಹೂಡಿರುವಿರಿ. ನಿಮ್ಮ ಬುದ್ಧಿಯು ಭ್ರಮಣವಾಗಿರುವದಿಲ್ಲಷ್ಟೇ? ತಾಸಗಾಂವಿಯಿಂದ ನನ್ನನ್ನು ಕರೆಸಿಕೊಂಡು ಬಾಜೀರಾಯನನ್ನು ಪೇಶವೆಗಾದಿಯ ಮೇಲೆ ಕೂಡ್ರಿಸಿದ್ದರ ಪರಿಣಾಮವು ಇದೇ ಏನು? ರಾಜ್ಯ-ಶಕಟ-ಚಾಲಕರಾದ ನೀವೇ ಹೀಗೆ ಧೈರ್ಯಗೆಟ್ಟರೆ ಉಳಿದವರ ಹಾಡು ಏನಾಗಬಹುದೆಂಬುದರ ವಿಚಾರವನ್ನಾದರೂ ಮಾಡಿರಿ. ನೀವು ಈ ಪ್ರಕಾರ ಪುಕ್ಕತನವನ್ನು ತೋರಿಸಿದರೆ ಜನರು ನಿಮಗೆ ಏನು ಅಂದಾರು? ಇದರ ವಿಚಾರವನ್ನು ಮೊದಲು ಮಾಡಿ ಕರ್ತವ್ಯ-ಕರ್ಮದಲ್ಲಿ ಮನಸ್ಸು ಹಾಕರಿ. ಈ ವಿಶಾಲವಾದ ಬ್ರಾಹ್ಮಣ-ಸಾಮ್ರಾಜ್ಯವು ನಿಮ್ಮ ಅಚುಂಬಿತ ಬುದ್ಧಿ-ಬಲವನ್ನು ಅವಲಂಬಿಸಿರಲು, ನೀವು ಹೀಗೆ ಹೋಳುದಗೆದರೆ ಅದು ಅವ್ಯವಸ್ಥೆಯನ್ನು ಹೊಂದಿ ಕಡೆಗೆ ಮಣ್ಣುಪಾಲಾಗುವದು. ಇದರ ಕಡೆಗಾದರೂ ದೃಷ್ಟಿಯು

ನ್ನಿಡಿರಿ. ಎಲ್ಲ ಕಡೆಗೂ ಗೊಂದಲವೇಳುವದು. ಅತ್ಯಾಚಾರಗಳು ನಡೆದು ಪ್ರಜೆಗಳು ಸುಖಕ್ಕೆ ಎರವಾಗುವರು. ಪರರಾಜರು ನಮ್ಮ ದೇಶದ ಮೇಲೆ ಕಣ್ಣು ಇಟ್ಟೇ ಇರುವರು. ಅವರಿಗೆ ಅನುಕೂಲಕಾಲವು ಸಿಕ್ಕರೆ ಸಾಕು; ಕೂಡಲೆ ಅವರು ಸ್ವಾರ್ಥಸಾಧಿಸಿಕೊಂಡು ಪೇಶವಾಯಿಯನ್ನು ಸೂರೆಗೊಳ್ಳಲು ಅನುಮಾನಿಸರು. ನಿಮ್ಮಂಥ ವಿಚಾರಶೀಲರಿಗೆ ಬುದ್ಧಿಯನ್ನು ಹೇಳುವ ಯೋಗ್ಯತೆಯು ನನ್ನದಲ್ಲ. ನಿಮ್ಮ ಬುದ್ಧಿಬಲವು ಅಗಾಧವಾದದ್ದು. ಹೀಗಿದ್ದರೂ ನೀವು ಈ ಬಿಕ್ಕಟ್ಟಿನ ಸಮಯದಲ್ಲಿ ಈ ಪ್ರಕಾರ ಕೈಕಾಲು ಬಿಟ್ಟದ್ದನ್ನು ನೋಡಿ ನನಗೆ ಕಡು ಕೆಡಕೆನಿಸುತ್ತದೆ. ಶ್ರೀಮಂತ ನಾರಾಯಣರ ಕೊಲೆಯಾದ ಬಳಿಕ, ಎಂಥೆಂಥ ಅನಿಷ್ಟ ಪ್ರಸಂಗಗಳು ಬಂದವು; ಎಂಥ ಅನಿವಾರವಾದ ಅನರ್ಥಗಳು ಉದ್ಭವಿಸಿದವು; ಆಗ್ಗೆ ನೀವು ಹ್ಯಾಗೆ ಯುಕ್ತಿ-ಪ್ರಯುಕ್ತಿಗಳಿಂದ ಬಂದ ಸಂಕಟಗಳನ್ನು ದಾಟಿಕೊಂಡು ಪೇಶವೆ ಗಾದಿಯನ್ನು ಕಾಪಾಡಿದರೆಂಬದನ್ನು ಮರೆತುಬಿಟ್ಟಿರಾ! ಪ್ರಕೃತ ಪ್ರಸಂಗವಾದರೂ ಅಂತಹ ಬಿಕ್ಕಟ್ಟಿನದಲ್ಲ. ಹೋಳಕರ, ಗಾಯಕವಾಡ ಇತ್ಯಾದಿ ಸರದಾರ ಪ್ರಭೃತಿಗಳು ಇಂದೇ ಅಸ್ತಂಗತರಾಗಿ ಹೋದರೇ? ಹರಿವಂಶಸಂಭೂತರಾದ ಪಟವರ್ಧನಪಟುಭಟರು ಅಬಲೆಯರಂತೆ ಕೈಯಲ್ಲಿ ಬಳೆಗಳನ್ನು ಇಟ್ಟುಕೊಂಡರೇ ಹ್ಯಾಗೆ? ನೀವು ಮಾತ್ರ ಧೈರ್ಯವನ್ನು ಬಿಡದೆ ಸಾವಧರಾದರೆ, ಈ ಪಟವರ್ಧನ ಬಹದ್ದುರನಾದ ಭಾವು ಒಬ್ಬನೇ ಸಾಕು. ಅರಕ್ಷಣದಲ್ಲಿ ಆ ಶಿಂದೇನ ಕಂಪೂದ ಸೊಕ್ಕು ಮುರಿದು ಬರುವನು. ಶಿಂದೆಯು ಯಾವ ಗಿಡದ ತೊಪ್ಪಲು! ನಾವಿಬ್ಬರು ಏಕತ್ರರಾಗಿ ಪೇಶವೆ ರಾಜ್ಯಶಕಟವನ್ನು ನಡಿಸಲಾರಂಭಿಸಿದರೆ, ದೌಲತ್ತರಾಯನಂಥ ಪಾಟೀಲರನ್ನೂ, (ಶಿಂದೇನಿಗೆ 'ಪಾಟೀಲ' ಅನ್ನುವ ರೂಢಿಯಿತ್ತು.) ಬಾಳೋಬನಂಥ ಸಹಸ್ರ ದಿವಾಣರನ್ನೂ ಬಗ್ಗುಬಡೆದು, ನೂರಾರು ಬಾಜೀರಾಯರನ್ನು ಗಾದಿಯ ಮೇಲೆ ಕೂಡ್ರಿಸಿ, ಬೇಕಾದ ಹೆಚ್ಚುಕಡಿಮೆಗಳನ್ನು ಮಾಡುತ್ತ, ದೇಶಹಿತಕ್ಕೆ ಕಾರಣೀಭೂತವಾದ ಬೇಕಾದ ರಾಜಕಾರಸ್ಥಾನಗಳನ್ನು ರಚಿಸಲು ಸಮರ್ಥರಾಗುವೆವು. ಆದರೆ ನಾನಾ! ನೀವು ಮಾತ್ರ ಧೈರ್ಯ ಬಿಡಬೇಡರಿ. ವಿಚಾರಮಾಡಿ ನೋಡಿದರೆ, ಶಿಂದೇನಿಗೆ ಇಷ್ಟು ಅಂಜುವದಾದರೂ ವ್ಯರ್ಥ; ಯಾಕಂದರೆ ಮಹದಾಜಿಯ ಕಾಲಕ್ಕಿದ್ದ ಸೈನ್ಯಬಲವು ಈಗ ಇರುವದಿಲ್ಲ. ದೌಲತ್ತರಾಯನಾದರೂ ಅಷ್ಟೊಂದು

ದೀರ್ಘಸಾಹಸಿಯೂ, ಅನುಭವಿಕನೂ ಅಲ್ಲ. ನೀವು ಹರಪ್ರಯತ್ನಮಾಡಿ
ಆತನ ಮನವಲಿಸಿಕೊಂಡು ಸಮಯ ಸಾಧಿಸಿದರೆ, ಆತನ ಕಣ್ಣು ತೆಗಿಸ
ಬಹುದು. ಅನಂತರ ಅವನನ್ನು ಹಾದಿಗೆ ತರಲಿಕ್ಕೆ ತಡಹತ್ತದು. ಧೈರ್ಯ,
ದೃಢನಿಶ್ಚಯಗಳಿಂದಲೇ ಕಾರ್ಯಸಿದ್ಧಿಯಾಗುವದೆಂಬ ನೈತಿಕತತ್ವವನ್ನು
ನೆರೆನಂಬಿ, ನಡೆಯಬೇಕಲ್ಲವೇ? ಕಾರ್ಯದಕ್ಷತೆ, ಮನೋನಿಶ್ಚಯ, ಪರೋ
ಪಕಾರ, ಸ್ವಜನಪ್ರೇಮ, ಸದಾಚಾರ, ಭೂತದಯೆ ಇವು ಸತ್ಕೀರ್ತಿಯ
ಸಾಧನಗಳು. ಇವುಗಳನ್ನು ಮರೆತು ಕರ್ತವ್ಯಪರಾಙ್ಮುಖರಾಗಿ ಹೇಡಿಗ
ಳಂತೆ ಹೆದರಿ ಹೀನರಾಗುವದು ಅಧಮಾಧಮರ ಮಾತು. ನಿಮ್ಮಂಥ ವಿಚಾರ
ಶೀಲರು ಇಂತಹ ಕುಹಕ-ವಿಚಾರಗಳಿಗೆ ಅನುವುಗೊಟ್ಟು ತದನುರೂಪ
ನಡೆದು ಈವರೆಗೆ ಸಂಪಾದಿಸಿದ ಕೀರ್ತಿಗೆ ಎರವಾಗಬಾರದು. ಕುಲಪರಂಪ
ರಾಗತವಾದ ಸ್ವಾಭಿಮಾನವನ್ನೂ, ಸ್ವಕುಲಾಭಿಮಾನವನ್ನೂ, ಪೇಶವೆ
ಗಾದಿಯ ಅಭಿಮಾನವನ್ನೂ, ಸಾರಾಂಶ ಹಿಂದೂಸಾಮ್ರಾಜ್ಯದ ಅಭಿಮಾನ
ವನ್ನೂ ಸ್ವಲ್ಪಾದರೂ ಬಿಡದೆ ನುಡಿಯಲ್ಲಿಯೂ ನಡೆಯಲ್ಲಿಯೂ ಒಂದೇಸಮ
ವಿದ್ದು ಪೇಶವೆ ಸಾಮ್ರಾಜ್ಯಶಕಟವನ್ನು ಸಾಗಿಸಬೇಕು. ನಿಮಗೆ ಬಾಜೀರಾ
ಯನು ಬೇಡಾಗಿದ್ದರೆ ಎರಡನೆಯ ಏನಾದರೂ ಉಪಾಯವನ್ನು ತೆಗೆಯಿರಿ.
ಬೇಕಬೇಕಾದ ಕಾರಸ್ಥಾನಗಳನ್ನು ಕೈಕೊಂಡು ನಾವಿಬ್ಬರು ಶಡ್ಡು ಹೊಡೆದು
ನಿಲ್ಲೋಣ. ಅಂದರೆ ಬಂದ ಗಂಡಾಂತರಗಳೊಳಗಿಂದ ಧೈರ್ಯದಿಂದ
ಪಾರಾಗಿ ಪೇಶವೆ ಪದವಿಯನ್ನು ಕಾಪಾಡಿ ಕೀರ್ತಿಯನ್ನು ಹೊಂದುವಾ.
ಆದರೆ ಹೀಗೆ ಹೆಂಗಸರಂತೆ ಧೈರ್ಯ ಬಿಟ್ಟು ಓಡಿಹೋಗುವದರಲ್ಲಿ ಯಾವ
ಪುರುಷಾರ್ಥವುಂಟು? ದಿವಾಣಸಾಹೇಬ! ಪೇಶವೆ ಗಾದಿಯ ಬಗ್ಗೆ ನನ್ನಲ್ಲಿ
ರುವ ಪೂಜ್ಯಬುದ್ಧಿ ಮತ್ತು ನಮ್ಮಿಬ್ಬರ ನಡುವೆ ಬಹುದಿವಸಗಳಿಂದ ನೆಲ
ಗೊಂಡ ನಿಷ್ಪಾಪಸ್ನೇಹಭಾವ ಇವುಗಳ ಯೋಗದಿಂದ ಮೇಲಿನ ಹೃದಯೋ
ದ್ಗಾರಗಳು ನನ್ನ ಬಾಯಿಂದ ಹೊರಬೀಳುತ್ತಿರುವವು. ಅದರಿಂದ ನಾನು
ಆವೇಶಭರದಿಂದ ಅಂದದ್ದಕ್ಕೆ ವಿಷಾದಗೊಳ್ಳದೆ, ನನ್ನ ಬಿನ್ನಹವನ್ನು ಮನ್ನಿಸಿ
ಇಲ್ಲಿಂದ ಹೊರಟು ಹೋಗುವ ವಿಚಾರವನ್ನು ಬಿಟ್ಟುಕೊಟ್ಟು, ನೀವು ಮೊದ
ಲಿನಂತೆ ಕಾರಭಾರವನ್ನು ಸಾಗಿಸರಿ. ಅಂದರೆ ಪರಶುರಾಮಭಾವೂನ ಹದ
ನವಾದ ಖಡ್ಗ ಮತ್ತು ಫಡಣವೀಸನ ಕುಶಲ ಲೇಖಣಿ ಇವೆರಡರ ಕರ್ತೃತ್ವ
ಶಕ್ತಿಯ ಅನುಭವವು ಮತ್ತೆ ಜಗತ್ತಿಗೆ ಆಗಿ ಹೋಗಲಿ."

ಪರಶುರಾಮಭಾವುನ ಈ ವೀರಶ್ರೀಜನಕ, ಆವೇಶಮಯ, ಸ್ಫೂರ್ತಿದಾಯಕ, ಸಮಯೋಚಿತ ಮತ್ತು ವಿಚಾರಪರಿಪ್ಲುತವಾದ ಸುರಸ ಸಂಭಾಷಣವನ್ನು ಕೇಳಿ ನಾನಾನ ಮನಸ್ಸು ಸ್ವಲ್ಪ ಸಮಾಧಾನಗೊಂಡಿತು. ಆದರೆ ಆತನು ಜಾತ್ಯಾ ಪುಕ್ಕನು. ಮೇಲಾಗಿ ೬೦ ವರುಷದ ಮುದುಕನು. ಶಿಂದೇನ ಅದ್ಭುತ ಸೈನ್ಯದ ಭೀತಿಯು ಆತನಿಗೆ ಸಂಪೂರ್ಣವಿತ್ತು. ಬಾಳೋಬನಂತೂ ಹಿಡಿದ ಕೆಲಸವನ್ನು ಬಿಡತಕ್ಕವನಲ್ಲ. "अर्थं वा साधयेत् । देहं वा पातयेत्" ಎಂಬಂತೆ ಸ್ವೀಕೃತಕಾರ್ಯವಾದರೂ ಕೊನೆಮುಟ್ಟಬೇಕು; ಇಲ್ಲವೆ ಈ ದೇಹವಾದರೂ ಪತನವಾಗಬೇಕು. ಇಂಥ ನಿಕಟಸ್ವಭಾವದ ಬಾಳೋಬನ ಸಂಗತಿಯು. ಇದು ಅಲ್ಲದೆ ಅವಿಶ್ವಾಸಿಯಾದ ಬಾಜೀರಾಯನ ಭರವಸೆಯು ಮೂಲತ: ಇದ್ದೇ ಇಲ್ಲ. ಹೀಗೆ ನಾನಾನು ಎರಡು ತೆರನಾಗಿ ಭಯಗೊಂಡಿದ್ದನು. ಇವೆಲ್ಲ ಕಾರಣಗಳಿಂದ 'ಕೋಣನ ಮುಂದೆ ಕಿನ್ನರಿಬಾರಿಸದಂತೆಯೂ' ಪ್ರಾಣವಾಯುಸಂಚಾರವಿಲ್ಲದ ಶರೀರಕ್ಕೆ ಔಷದೋಪಚಾರ ಮಾಡಿದಂತೆಯೂ, ಧೈರ್ಯವಾಯುಸಂಚಾರವಿಲ್ಲದ ನಾನಾನ ಮನಸ್ಸಿನ ಮೇಲೆ ಭಾವೂನ ಧೈರ್ಯಪರಭಾಷಣದಿಂದ ಏನೂ ಪರಿಣಾಮವಾಗದೆ, ಡಬ್ಬುಗೊಡದ ಮೇಲೆ ನೀರು ಸುರವಿದಂತೆ ವ್ಯರ್ಥವಾಯಿತು. ಆದ್ದರಿಂದ ನಾನಾನು ಭಾವೂನ ಸುಬೋಧಪರ ಸಂಭಾಷಣಕ್ಕೂ, ೩೦-೩೫ ವರುಷಗಳವರೆಗೆ ಆತನೊಡನೆ ತನಗಿದ್ದ ನಿರ್ಮಲಸ್ನೇಹಭಾವಕ್ಕೂ ತಿಲಾಂಜಲಿಯನ್ನು ಬಿಟ್ಟು ಸಾತಾರೆಗೆ ಹೊರಡುವದನ್ನು ನಿಶ್ಚೈಸಿದನು. ಈ ಪ್ರಕಾರ ಪುಣೆಯಲ್ಲಿ ಕಾಲೂರಿನಿಲ್ಲುವ ಎಡೆಯಾಗದೆ ನಾನಾಫಡಣವೀಸನು ಪೇಶವೆಯ ಬಳಿಗೆ ಬಂದು, "ಶಿಂದೇನ ಕಣ್ಣು ನನ್ನ ಕಡೆಗೆ ಇರುವದು. ಅಂದ ಮೇಲೆ ಈ ಬಳಜಗಳವನ್ನು ಬೆಳೆಸುವದರಲ್ಲಿ ಅರ್ಥವಿಲ್ಲ. ನಾನೇ ಇಲ್ಲಿಂದ ಹೊರಟು ಹೋಗಿಬಿಟ್ಟರೆ ಕಲಹದ ಮೂಲವೇ ಕಡಿದು ಹೋಗಿ ಬಹಳೇ ಉತ್ತಮವಾಗುವದು" ಎಂದು ಬಾಜೀರಾಯನಿಗೆ ಹೇಳಿ, ಆತನ ಅಂಗರಕ್ಷಣೆಯ ಭಾರವನ್ನು ಭಾವೂಗೆ ಒಪ್ಪಿಸಿ, ತಾನು ಸಾತಾರೆಗೆ ಹೊರಟು ಹೋದನು.

ಇತ್ತ ದೌಲತ್ತರಾಯನು ದಂಡಿನೊಡನೆ ಪುಣೆಗೆ ಬಂದನು. ಶಿಂದೇ-ಬಾಜೀರಾಯರು ಪರಸ್ಪರ ಸ್ನೇಹಭಾವದಿಂದ ಭೆಟ್ಟಿಯಾದರು. ಬಾಳೋಬನು ಸಹ ಬಹಿರಂಗದಲ್ಲಿ ಒಳ್ಳೇ ಸಖ್ಯಭಾವದಿಂದ ಶ್ರೀಮಂತ ಪೇಶವೆ

ಯನ್ನು ಕಂಡುಕೊಂಡನು; ಆದರೂ ಆತನ ಮನಸ್ಸಿನಲ್ಲಿ ಬಾಜೀರಾಯನು ತನ್ನ ಶತ್ರುಜನರಿಗೆ ಅನುಕೂಲಿಸಿದನೆಂಬ ಸಿಟ್ಟು ಕಟಿಯುತ್ತಿತ್ತು.

ಇಷ್ಟಾದ ಬಳಿಕ ಬಾಳೋಬನು ಬಾಜೀರಾಯನನ್ನು ಪೇಶವೆ ಗಾದಿಯಿಂದ ತಳ್ಳಿಬಿಡುವ ವಿಚಾರದಲ್ಲಿ ನಿಮಗ್ನನಾದನು. ಬಗೆಬಗೆಯ ವಿಚಾರಗಳು ತಲೆದೋರಿದವು. ಆದರೆ ಅವುಗಳಲ್ಲಿ ಒಂದಿಲ್ಲೊಂದು ಕುಂದು ತೋರಿಬರುವದು. ಕಡೆಗೆ "ಶ್ರೀಮಂತ ಸವಾಯಿಮಾಧವರಾಯರ ಹೆಂಡತಿಗೆ ಚಿಮಾಜಿ ಅಪ್ಪಾ ಈತನನ್ನು ದತ್ತಕಮಗನನ್ನು ಮಾಡಿ, ಆತನನ್ನು ಪೇಶವೆ ಪದದ ಮೇಲೆ ಸ್ಥಾಪಿಸಬೇಕು; ಬಾಜೀರಾಯನನ್ನು ಸೆರೆ ಹಿಡಿಯಬೇಕು. ಪರಶುರಾಮಭಾವು ರಾಜ್ಯಕಾರಭಾರ ಸಾಗಿಸಬೇಕು" ಎಂಬ ವಿಚಾರವು ಆತನಿಗೆ ಪ್ರಶಸ್ತವೆನಿಸಿತು. ಬಾಳೋಬನು ತನ್ನ ಈ ವಿಚಾರವನ್ನು ಮೋಹಂದಳೆ ಬಹಿರೋಪಂತನ ವಿದ್ಯಮಾನ ಪರಶುರಾಮಪಂತ ಪಟವರ್ಧನನಿಗೆ ತಿಳಿಸಿದನು.

ನಾನಾ-ಪರಶುರಾಮರು ಮೊದಲಿನಿಂದ ಪರಸ್ಪರ ಜೀವದ ಗೆಳೆಯರು; ಇತ್ತಿತ್ತ ಪೇಶವೆ ಸರಕಾರದ ಆಡಳತೆಯಲ್ಲಿ ಅವರಿಬ್ಬರು ಪ್ರಮುಖರಾಗಿದ್ದರು. ಪೇಶವಾಯಿಯ ಏರಿಳಿತವು ಅವರಿಬ್ಬರನ್ನು ಅವಲಂಬಿಸಿತ್ತು. ಅವರಿಬ್ಬರು ಅನ್ಯೋನ್ಯ ವಿಚಾರ-ಸಲಹೆಯಿಂದ ನಡೆಯುತ್ತಿದ್ದರು. ಆದಕಾರಣ ನಿಷ್ಕಪಟಿಯಾದ ಭಾವು ಬಾಳೋಬನ ಅಭಿಪ್ರಾಯವನ್ನು ನಾನಾಫಡಣೀಸನಿಗೆ ವಿದಿತಪಡಿಸಿದನು. ನಾನಾನಾದರೂ ಬಾಜೀರಾಯನನ್ನು ನಿರುಪಾಯನಾಗಿ ಪೇಶವೆ ಗಾದಿಯ ಮೇಲೆ ಕೂಡ್ರಿಸಿದ್ದನು. ಅಂದಬಳಿಕ ಆತನನ್ನು ಪದಚ್ಯುತ ಮಾಡಬೇಕೆಂಬುವ ವಿಚಾರದಿಂದ ಆತನಿಗೆ ಕೆಡಕೆನಿಸಿಲಿಲ್ಲ. ಆದ್ದರಿಂದ ಆತನು ಭಾವು-ಬಾಳೋಬರ ಅಭಿಪ್ರಾಯಕ್ಕೆ ಒಪ್ಪಿಕೊಂಡನು; ಮತ್ತು ಆತನು "ಬಾಜೀರಾಯನನ್ನು ನಿಮ್ಮ ಸ್ವಾಧೀನದಲ್ಲಿ ಬಹಳ ಭದ್ರತೆಯಿಂದ ಇಟ್ಟುಕೊಂಡು ಸದಾ ಜಾಗೃತರಾಗಿರಬೇಕು." ಎಂದು ಭಾವೂಗೆ ಸೂಚಿಸಿದನು. ತನ್ನ ವಿನಾಶ-ವಿಚಾರವು ಬಾಜೀರಾಯನಿಗೆ ಪ್ರಾಯಶಃ ಗೊತ್ತೇ ಇದ್ದಿಲ್ಲ. ಒಂದು ದಿವಸ ಆತನು ದೌಲತ್ತರಾಯನೊಡನೆ ಕೆಲವು ಮಾತುಗಳನ್ನಾಡಿ ಬರಬೇಕೆಂಬುವ ಉದ್ದೇಶದಿಂದ ಬಾಜೀರಾಯನು ಶಿಂದೇನ ಛಾವಣಿಗೆ ಹೋದನು. ಉಭಯತರ ಮಾತುಕಥೆಯು

ಇತ್ತ ಹರಿಪಂತನು ೪೦೦೦ ಸ್ವಾರರೊಂದಿಗೆ ವಾಯಿಯ ಹಾದಿಯು ಹಿಡಿದು ಬರುತ್ತಿರುವನೆಂಬ ಸುದ್ದಿಯು ನಾನಾಫಡಣವೀಸನಿಗೆ ತಿಳಿಯಿತು. ಇದಲ್ಲದೆ ತಾನು ಭಾವೂಗೆ ಬಾಜೀರಾಯನನ್ನು ತನ್ನ (ಭಾವೂನ) ಸ್ವಾಧೀನದಲ್ಲಿಟ್ಟಕೊಳ್ಳಬೇಕೆಂದು ಪತ್ರಬರೆದಿದ್ದರೂ, ಭಾವು ಬಾಜೀರಾಯನನ್ನು ಬಾಳೋಬನ ಅಂಕಿತದಲ್ಲಿರಗೊಟ್ಟಿರುವನೆಂಬ ವರ್ತಮಾನವೂ ಆತನಿಗೆ ಹತ್ತಿತು. ಇವೆಲ್ಲ ಕಾರಣಗಳಿಂದ ನಾನಾಫಡಣವೀಸನು ಪರಶುರಾಮಭಾವು ಬಾಳೋಬನು ಹೇಳಿದಂತೆ ಕುಣಿಯುತ್ತಿರುವನೆಂದು ಊಹಿಸಿದನು. ಆತನು ಅತ್ಯಂತ ಸಂಶಯಾತ್ಮಕ ಸ್ವಭಾವದವನು; ಮೇಲಾಗಿ ಬಲು ಪುಕ್ಕನು. ಆದ್ದರಿಂದ ಇಂತಹ ಕ್ಷುಲ್ಲಕ ಕಾರಣಗಳಗೋಸ್ಕರ, ಸರಳ ಸ್ವಭಾವದ ಪರಶುರಾಮಭಾವೂನ ನಡೆ-ನುಡಿಗಳ ಬಗ್ಗೆ ಇಲ್ಲದ ಅನುಮಾನವು ಆತನಲ್ಲಿ ಉತ್ಪನ್ನವಾಯಿತು. ಅದು ಬರುಬರುತ್ತ ದೃಢವಾಗಿ ಆತನ ಮನೋಭೂಮಿಯಲ್ಲಿಯೇ ಶಾಶ್ವತವಾಗಿ ವಾಸಮಾಡಿತು. ನಾನಾ-ಭಾವು ಸಾಹೇಬರು ಮೊದಲಿನಿಂದ ಜೀವದ ಗೆಳೆಯರಾದುದರಿಂದ ಪರಸ್ಪರ ಪ್ರಕೃತಿ ಸ್ವಭಾವವನ್ನು ಅವರು ಪೂರಾ ಬಲ್ಲರು. ಅನ್ಯೋನ್ಯ ಗುಣಾವಗುಣಗಳಾದರೂ ಅವರಿಗೆ ಸಂಪೂರ್ಣ ಅವಗತವಾಗಿದ್ದವು. ಹೀಗಿದ್ದರೂ ಒಮ್ಮಿಂದೊಮ್ಮೆ ಈ ಬಗೆಯ ವಿಪರೀತಸ್ಥಿತಿಯು ಉತ್ಪನ್ನವಾದದ್ದು ಕಡು ಸೋಜಿಗವೇ ಸೈ. ಚಿತ್ತವು ವ್ಯಗ್ರವಾಯಿತೆಂದರೆ ಅಲ್ಪ ಸ್ವಲ್ಪ ಕಾರಣಗಳಿಂದ ಸಹ ಜನರ ಸ್ವಭಾವವು ಭಿನ್ನವಾಗಿ ವಿಪರೀತ ಪರಿಣಾಮಗಳು ಘಟಿಸುವವೆಂದು ಬಲ್ಲವರು ಹೇಳುತ್ತಿರುವರು; ಆ ಮಾತಿಗೆ ಇದೊಂದು ಉದಾಹರಣೆಯಾಗಿರುವದು.

ಈ ಪ್ರಕಾರ ನಾನಾಫಡಣವೀಸನು ಕಾರಣವಿಲ್ಲದೆ ನಮ್ಮ ಚರಿತ್ರನಾಯಕನ ವಿಷಯವಾಗಿ ಸಾಶಂಕಮನಸ್ಕನಾಗಿ, ಆತನನ್ನು ಬಗೆಬಗೆಯ ಸಂಕಟಗಳಿಗೆ ಗುರಿಮಾಡಲು ಅಸಂಖ್ಯ ಕೃಷ್ಣಕಾರಸ್ಥಾನ ಉಪಾಯಗಳನ್ನು ಕೈಕೊಂಡನು. ಇವೆಲ್ಲದರ ಯಥಾರ್ಥ ವರ್ಣನೆಯು ಮುಂದಿನ ಅಧ್ಯಾಯದಲ್ಲಿ ಕೊಡಲ್ಪಟ್ಟಿರುವದು.

---

# ೧೨ನೆಯ ಅಧ್ಯಾಯವು.

## ನಾನಾಫಡಣವೀಸನ ಕೃಷ್ಣಕಾರಸ್ಥಾನವು.

ನಮ್ಮ ಚರಿತ್ರನಾಯಕನಲ್ಲಿ ಶ್ರೀಮಂತ ಪಂತಪ್ರಧಾನರ ಕಾರಭಾರಿಯಾಗಬೇಕೆಂಬುವ ಅಭಿಲಾಷೆಯು ಸ್ವಲ್ಪಾದರೂ ಇದ್ದಿಲ್ಲ. ಆದರೂ ಆತನು ನಿರ್ವಾಹವಿಲ್ಲದ್ದರಿಂದ ರಾಜ್ಯಕಾರಭಾರವನ್ನು ಸಾಗಿಸತೊಡಗಿದನು. ಇದೆಲ್ಲವು ಹಿಂದಿನ ಅಧ್ಯಾಯದಲ್ಲಿ ಹೇಳಲ್ಪಟ್ಟಿರುವದು. ಪರಶುರಾಮಭಾವು ಕಾರಭಾರವಮಾಡಲಾರಂಭಿಸಿದ ಬಳಿಕ, ಆತನು ಯಾವ ಯಾವ ಕಷ್ಟಗಳನ್ನು ಅನುಭೋಗಿಸಬೇಕಾಯಿತು; ಭಾವೂನನ್ನು ಪದಭ್ರಷ್ಟನನ್ನು ಮಾಡಿ ತಾನು ಪುನಃ ಪೇಶವೆಯ ದಿವಾಣನಾಗಬೇಕೆಂದು ನಾನಾನು ಯಾವ ಯಾವ ಗೌಪ್ಯ-ಕಾರಸ್ಥಾನ-ತಂತ್ರಗಳನ್ನು ಕೈಕೊಂಡನು. ಇತ್ಯಾದಿ ವೃತ್ತಾಂತವನ್ನು ನಾವು ಈ ಅಧ್ಯಾಯದಲ್ಲಿ ಕಥನಮಾಡುವೆವು. ಶಿಂದೇನ ಮುಖ್ಯ ದಿವಾಣನಾದ ಬಾಳೋಬನು ಚಿಮಾಜಿಯನ್ನು ಪೇಶವೆ ಗಾದಿಯಮೇಲೆ ಕೂಡ್ರಿಸುವ ಮಸಲತ್ತು ಮಾಡಿದನು. ಅದಕ್ಕೆ ಪರಶುರಾಮಭಾವು ನಾನಾನ ಸಮ್ಮತಿಯಿಂದ ಅನುಕೂಲಿಸಿದನು. ಈ ಮಸಲತ್ತು ಕಡೆಗಂಡಿತು. ಆಗ್ಗೆ ಭಾವು “ನೀವು ಮರಳಿ ಪುಣೆಗೆ ಬಂದು ಕಾರಭಾರ ಮಾಡರಿ, ನಾನು ದಂಡಿನ ಕೆಲಸವನ್ನು ನೋಡುವೆನು” ಎಂದು ನಾನಾಫಡಣವೀಸನಿಗೆ ಪತ್ರ ಬರೆದನು. ಇವೆರಡು ಸಂಗತಿಗಳ ಮೇಲಿಂದ ಪರಶುರಾಮಭಾವೂನ ಸರಳಸ್ವಭಾವ, ಮತ್ತು ನಾನಾನ ವಿಷಯವಾಗಿ ಆತನಲ್ಲಿದ್ದ ನಿಷ್ಕಲಂಕ ಪೂಜ್ಯಬುದ್ಧಿ ಇವೆರಡು ವ್ಯಕ್ತವಾಗುವವು. ಅಂದಬಳಿಕ ಭಾವೂ ತಾನಾಗಿಯೇ ನಾನಾನ ದ್ವೇಷವನ್ನು ಕಟ್ಟಿಕೊಳ್ಳಲು ಯತ್ನ ಮಾಡಿದನೆಂದು ಆತನನ್ನು ದೂಷಿಸುವದು ಪೂರಾ ತಪ್ಪು. ಇಷ್ಟಾದರೂ ಸಾಶಂಕ-ಮಾನಸನಾದ ನಾನಾನ ಮನಸ್ಸಿನಲ್ಲಿ ವಿಕಲ್ಪವು ಹುಟ್ಟದೆ ಬಿಡಲಿಲ್ಲ. ಆಗ್ಗೆ ನಾನಾಫಡಣವೀಸನು ಭಾವೂಸಾಹೇಬನ ಸೂಚನೆಯಮೇರೆಗೆ ಪುಣೆಗೆ ಬರದೆ ಮಹಾಡದಕಡೆಗೆ ನಡೆದನು. ಬಾಳೋಬನು ಶಿಂದೇನ ದಂಡನ್ನು ನಾನಾನ ಬೆನ್ನಹಿಂದೆ ಕಳುಹಿಸುವ ಆಲೋಚನೆ ಮಾಡಿದನು. ಆದರೆ ಭಾವು ಅದಕ್ಕೆ ಒಪ್ಪದೆ ಆತನ ವಿಚಾರವನ್ನು ನಿಷೇಧಿ

ಸಿದನು. ಇದರ ಮೇಲಿಂದಂತೂ ನಾನಾನ ವಿಷಯವಾಗಿ ಭಾವೂನ ಮನಸ್ಸಿನಲ್ಲಿ ತಿಲಾರ್ಧವಾದರೂ ವೈರಭಾವವಿದ್ದಿಲ್ಲವೆಂಬುವದು ಸ್ಪಷ್ಟವಾಗುತ್ತದೆ. ಇಷ್ಟಾದರೂ ನಾನಾನ ಮನಸ್ಸು ಶುದ್ಧವಾಗಲಿಲ್ಲ. ಭಾವುವಿನ ಮೇಲೆ ಇದ್ದ ಆತನ ನಂಬಿಗೆಯು ಹಾರಿತು; ಅದರಿಂದ ಆತನು ತನ್ನ ಪ್ರಾಣಪ್ರಿಯತಮನಾದ ಮಿತ್ರನೊಡನೆ ಶತ್ರುಭಾವದಿಂದ ನಡೆಯತೊಡಗಿದನು. ಈ ವೈಮನಸ್ಸಿನ ಯೋಗದಿಂದ ಆ ಉಭಯತರು ಅನೇಕ ಸಂಕಟಗಳಿಗೆ ಒಳಗಾಗಬೇಕಾಯಿತು.

ನಾನಾನು ಮರಳಿ ಪುಣೆಗೆ ಬರುವ ಲಕ್ಷಣವು ತೋರಲಿಲ್ಲ. ಅದರಿಂದ ಪರಶುರಾಮಪಂತನು ಸ್ವತ: ಕಾರಭಾರ ಸಾಗಿಸಬೇಕಾಯಿತು. ಆ ಕಾಲಕ್ಕೆ ರಾಜಧಾನಿಯಲ್ಲಿ ಶಿಂದೇನ ದರ್ಪು ಬಹಳವಿತ್ತು. ಪೇಶ್ವೆ-ಸಾಮ್ರಾಜ್ಯದ ಪ್ರಗತಿ ಪರಾಗತಿಯು ಆತನ ಇಚ್ಛೆಯನ್ನು ಅವಲಂಬಿಸಿತ್ತು. ಮೇಲಾಗಿ ಆತನ ಪ್ರಧಾನನಾದ ಬಾಳೋಬನು ಅಸಾಧಾರಣ ವ್ಯಕ್ತಿಯು. ಚಿಮಾಜಿಯು ಪೇಶವೆನಾದದ್ದು ಈ ಬಾಳೋಬನ ತಂತ್ರದಿಂದಲೇ. ಅಗ್ಗೆ ಆತನು ಮಾಡಿದ್ದೇ ಮುಟ್ಟ, ಕಟ್ಟಿದ್ದೇ ಪಟ್ಟವಾಗಿತ್ತು. ಆದದರಿಂದ ಪರಶುರಾಮಭಾವು ಮುಖ್ಯ ಕಾರಭಾರಿಯಾಗಿದ್ದರೂ, ಕೆಲಕೆಲವು ಅಪರಿಹಾರ್ಯ ಪ್ರಸಂಗಗಳಲ್ಲಿ ಆತನು ಬಾಳೋಬನ ಅಭಿಪ್ರಾಯ ಪ್ರಕಾರ ನಡೆಯಬೇಕಾಗುತ್ತಿತ್ತು. ಪೇಶವೆ ದರಬಾರದಲ್ಲಿ ತನ್ನ ಗೌರವವು ಇರಬೇಕೆಂದು ಬಾಳೋಬನ ಅಭಿಲಾಷೆಯು. ಅದು ಈಗ ಸಫಲವಾಯಿತು. ನಾನಾ-ಬಾಳೋಬರು ಪರಸ್ಪರ ಪ್ರತಿಸ್ಪರ್ಧಿಗಳು. ಆದ್ದರಿಂದ ನಾನಾನ ಮೇಲಿನ ಸೇಡು ತೀರಿಸಿಕೊಳ್ಳುವ ಅನುಕೂಲಕಾಲವು ಬಾಳೋಬನಿಗೆ ಈಗ ಮಾತ್ರ ಲಭ್ಯವಾಯಿತು. ಇವೆಲ್ಲ ತನ್ನ ಅಂತಸ್ಥ ಉದ್ದೇಶಗಳನ್ನು ಸಾಧಿಸಿಕೊಳ್ಳುವಲ್ಲಿ ಆತನು ಭಾವೂನ ಹೆಸರನ್ನು ಮುಂದೆ ಮಾಡುತ್ತಿದ್ದನು. ಇದನ್ನು ಪರಶುರಾಮಪಂತನು ಸೇರುತ್ತಿದ್ದಿಲ್ಲ. ಆದರೆ ಏನು ಮಾಡಿಯಾನು? ದರಬಾರದಲ್ಲಿ ಆತನ ಸಹಾಯಕರೇ ಇದ್ದಿಲ್ಲ. ಶ್ರೀಮಂತ ಚಿಮಾಜಿ ಪೇಶವೆಯು ಇನ್ನೂ ಚಿಕ್ಕವನು. ದೌಲತ್ತರಾಯನ ವರ್ಚಸ್ಸು ಬಹಳ ಬೆಳೆದಿತ್ತು. ಪ್ರಯುಕ್ತ ಆತನು ನಿರುಪಾಯನಾಗಿ ಕೆಲಕೆಲವು ಸಂದರ್ಭಗಳಲ್ಲಿ ಬಾಳೋಬನ ಆಲೋಚನೆಯಂತೆ ತನ್ನ ಮನಸ್ಸಿರದಿದ್ದರೂ ನಡೆಯಬೇಕಾಯಿತು.

ಮೇಲೆ ಹೇಳಿದಂತೆ ಭಾವು ಕಾರಭಾರನೋಡತೊಡಗಿದನು. ಆಗ್ಗೆ ಶಿಂದೇನ ಸೈನಿಕರಿಗೆ ಬಹಳ ದಿವಸದಿಂದ ಸಂಬಳಕೊಡುವದು ಉಳಿದಿತ್ತು. ದೌಲತ್ತರಾಯನು ತನ್ನ ಜನರ ಸಂಬಳದ ಬಗ್ಗೆ ಭಾವುಗೆ ಗಂಟುಬಿದ್ದನು. ಬೊಕ್ಕಸದಲ್ಲಿ ನೋಡಿದರೆ ಹಣವಿಲ್ಲ. ಖರ್ಡೆಯ ಕಾಳಗದ ವೆಚ್ಚಕ್ಕಾಗಿ ಎಲ್ಲವೂ ಬರಿದಾಗಿತ್ತು. ಅದರಿಂದ ಭಾವು ಒಳ್ಳೇ ಪೇಚಿನಲ್ಲಿ ಬಿದ್ದನು. ಜಗತ್ತಿನಲ್ಲಿ ಎಲ್ಲ ಸೋಗುಗಳು ಬರುವವು. ದುಡ್ಡಿನ ಸೋಗು ಬರುವದಿಲ್ಲ. ಕಡೆಗೆ ಖರ್ಡೆಯ ಕಾಳಗದಲ್ಲಿ ಒಪ್ಪಂದವಾದಂತೆ ನಿಜಾಮನ ಮುಖ್ಯ ವಜೀರನಾದ ಮಶೀರಉಲ್ಮಲಕನು ಪೇಶ್ವೆಯರ ಸ್ವಾಧೀನದಲ್ಲಿದ್ದನಷ್ಟೇ! ನಿಜಾಮನ ಕಡೆಯಿಂದ ಯುದ್ಧದ ವೆಚ್ಚದ ಬಗ್ಗೆ ೩ ಕೋಟಿ ರೂಪಾಯಿಗಳು ಬರತಕ್ಕವಿದ್ದವು. ಆ ಹಣದ ಪೈಕಿ ಕೆಲವು ರಕಮು ರೋಖತ ಕೊಂಡು ಮಶೀರಉಲ್ಮಲಕನನ್ನು ಬಂಧ-ಮುಕ್ತ ಮಾಡಬೇಕಾಯಿತು. ಭಾವು ಆ ಬಂದಹಣದಿಂದ ಶಿಂದೇನ ಜನರ ಸಂಬಳವನ್ನು ಕೊಟ್ಟುಬಿಟ್ಟನು. ನಿಜಾಮನ ಕಡೆಯಿಂದ ಬಾಕಿ ಉಳಿದ ಎಲ್ಲ ಹಣವು ಬರುವವರೆಗೆ ಆ ವಜೀರನು ಗಾರಾಪೀರದಲ್ಲಿ ಇರಬೇಕೆಂದು ಭಾವು ಗೊತ್ತುಪಡಿಸಿದನು. ಈ ಮೇರೆಗೆ ಪರಶುರಾಮಪಂತನು ಶಿಂದೇನನ್ನು ಅಲ್ಪ ಸ್ವಲ್ಪ ಸಮಾಧಾನಗೊಳಿಸಿ ಬಂದ ಗಂಡಾಂತರದಿಂದ ಪಾರುಬಿದ್ದನು.

ಇಷ್ಟರಲ್ಲಿ ಹೊಸವಿಪತ್ತು ಉದ್ಭವವಾಗುವ ಚಿನ್ಹವು ತೋರಿತು. ಇತ್ತ ನಾನಾಫಡಣವೀಸನು ಮಹಾಡದಲ್ಲಿ ಸುಮ್ಮನೇ ಕೂಡ್ರಲಿಲ್ಲ. ಆತನು ಹೊಸ ಮಂತ್ರಾಲೋಚನೆಯನ್ನು ನಡಿಸಿದನು. "ಭಾವು, ಬಾಳೋಬನ ತಂತ್ರಕ್ಕೆ ಸಿಕ್ಕು ನನ್ನನ್ನು ವಿದೇಶಕ್ಕಟ್ಟಿ ಕಾರಭಾರದಿಂದ ದೂರಮಾಡಿಬಿಟ್ಟನು" ಎಂಬ ಆಗ್ರಹದ ವಿಚಾರವು ನಾನಾನ ಮನಸ್ಸಿನಲ್ಲಿ ಕಟಿಯುತ್ತಿತ್ತು. ಆದ್ದರಿಂದ ಆತನು ಭಾವುನ ವಿನಾಶಕ್ಕಾಗಿಯೂ, ತನ್ನ ಗತಾಧಿಕಾರವನ್ನು ತಿರುಗಿ ಸಂಪಾದಿಸುವದಕ್ಕಾಗಿಯೂ, ಕಂಕಣಕಟ್ಟಿ ಅನೇಕ ಕಾರಸ್ಥಾನಗಳನ್ನು ರಚಿಸಿದನು. ಈ ಕೆಲಸದಲ್ಲಿ ನಾನಾನು ತನ್ನ ಅದ್ವಿತೀಯ ಪಾಂಡಿತ್ಯ, ಅಪೂರ್ವ-ಚಾತುರ್ಯಗಳನ್ನು ತೋರಿಸಿದನು. ಆತನ ಈ ಕಾರಸ್ಥಾನ-ಕೌಶಲ್ಯವನ್ನು ಪರಕೀಯರಾಷ್ಟ್ರದವರು ಕೂಡ ಹೊಗಳುತ್ತಾರೆ.

ಈ ಕಾಲಕ್ಕೆ ನಾನಾ-ಬಾಜೀರಾಯರಿಬ್ಬರು ಪದಭ್ರಷ್ಟರಾಗಿ ಅಜ್ಞಾತವಾಸವನ್ನು ಅನುಭವಿಸುತ್ತಿದ್ದರು. ಅವರಿಬ್ಬರು ಸಮದುಃಖಿಗಳು. ನಾನಾನ

ಪ್ರಧಾನಪದವಿಯು ಹೋಗಿತ್ತು. ಬಾಜೀರಾಯನ ಗಾದಿಯು ತಪ್ಪಿತ್ತು. ಅದರಿಂದ ಅವರಿಬ್ಬರಲ್ಲಿದ್ದ ಮೊದಲಿನ ವೈರಭಾವವು ಅಳಿದು ಹೋಗಿ ಪರಸ್ಪರ ಪತ್ರವ್ಯವಹಾರವು ಪ್ರಾರಂಭವಾಯಿತು. ಹೀಗೆ ನಾನಾ-ಬಾಜೀರಾಯರು ಭಾವು-ಬಾಳೋಬರ ಪಾರುಪತ್ಯವನ್ನು ಮಾಡಲು ಒಳಸಂಚು ನಡೆಸಿದರು. ಬಾಜೀರಾಯನ ಊಳಿಗದಲ್ಲಿ ಬಾಳಾಜಿ ಕುಂಜರನೆಂಬುವನೊಬ್ಬ ಕೀಳ ಸರದಾರನಿದ್ದನು. ಆತನ ಮಧ್ಯಸ್ಥಿಕೆಯಿಂದ ನಾನಾನು ಬಾಜೀರಾಯನ ಸಖ್ಯವನ್ನು ಸಾಧಿಸಿಕೊಂಡನು. ನಿರಾಧಾರನಾದ ನಾನಾನಿಗೆ ಯಾರದಾದರೂ ಆಧಾರವು ಅವಶ್ಯವೇವ ಬೇಕೇ ಆಗಿತ್ತು. ಬಾಜೀರಾಯನ ನೆರವು ಸಿಗುತ್ತಲೆ ಆತನು ಸರದಾರವರ್ಗವನ್ನು ವಶಮಾಡಿಕೊಳ್ಳುವ ಯತ್ನ ನಡಿಸಿದನು. ಸರದಾರರ ಸಮೂಹದಲ್ಲಿ ಆತನ ಗೌರವವು ಚನ್ನಾಗಿ ಇತ್ತು. ಇದಲ್ಲದೆ ಆತನು ಅವರ ಹಿತಾಹಿತಗಳನ್ನು ಬಲ್ಲನು. ಆದದರಿಂದ ಅವನ ಇಷ್ಟಕಾರ್ಯವು ಸುಲಭವಾಗಿ ಸಾಧಿಸಿತು. ಹೂಜೂರಸೈನ್ಯದ ಮೇಲಾಧಿಕಾರಿಯಾದ ಫಡಕೆ ಬಾಬುರಾಯನು ನಾನಾಫಡಣವೀಸನ ಪಕ್ಷವನ್ನು ವಹಿಸಲು ಸಿದ್ಧನಾದನು. ಹೋಳಕರ ತುಕೋಜಿರಾಯನಂತೂ ಆತನಿಗೆ ಪೂರಾ ಅಂಕಿತನಾಗಿದ್ದನು. ನಾನಾನ ಸೂಚನೆಯು ಬರುತ್ತಲೆ, ಆತನು ತನ್ನ ಸರ್ವ ಸೈನ್ಯಸಮೇತ ಹೊರಟು ಬರಲು ಸಿದ್ಧನಾಗಿದ್ದನು. ನಾನಾನು ನಾಗಪೂರಕರನನ್ನು ತನ್ನ ಕಡೆಗೆ ಮಾಡಿಕೊಂಡನು; ಆತನಿಗೆ ದಂಡಿನ ವೆಚ್ಚವೆಂದು ೧೫ ಲಕ್ಷ ರೂಪಾಯಿಗಳನ್ನು ನಗದು ಕೊಟ್ಟನು. ಕೈಹಿಡಿದ ಕೆಲಸವು ಕೊನೆಗಂಡ ಬಳಿಕ ಮಂಡಳ ಪ್ರಾಂತವನ್ನೂ, ಸೂರ್ಯಗಡದ ಕಿಲ್ಲೆಯನ್ನೂ, ಅದರ ಸುತ್ತುಮುತ್ತಿನ ಪ್ರದೇಶಗಳನ್ನೂ ಕೊಡುವೆನೆಂದು ಮಾತು ಕೊಟ್ಟನು. ನಾನಾನು ಭಾವೂನ ಜಹಗೀರನ ಪ್ರಾಂತಗಳಿಗೆ ಕೊಳ್ಳೆಯನ್ನಿಡಲು ಕೊಲ್ಹಾಪುರದ ಅರಸನಿಗೆ ಚುಚ್ಚಿಕೊಟ್ಟನು. ನಿಜಾಮನಿಂದ ಸಲ್ಲತಕ್ಕ ಚವಥಾಯಿ ಇತ್ಯಾದಿ ಹಕ್ಕುಗಳನ್ನು ಮಾಫುಮಾಡಿ ಆತನನ್ನು ತನ್ನ ಪಕ್ಷಕ್ಕೆ ಒಡಕೊಂಡನು. ಈಗ ನಾನಾಫಡಣವೀಸನು ದೌಲತ್ತರಾಯನೊಬ್ಬನನ್ನು ಒಲಿಸಿಕೊಳ್ಳುವದುಳಿಯಿತು. ಅದು ಪರಮ ಸಾಹಸದ ಕೆಲಸವು. ಶಿಂದೇನ ಪಿಲಗದಲ್ಲಿ ಬಾಳೋಬನ ಪ್ರಾಬಲ್ಯವು ವಿಶೇಷವಾಗಿತ್ತು. ದರಬಾರದ ಎಲ್ಲ ಅಧಿಕಾರಸ್ಥರೂ ಸ್ವತಃ ಶಿಂದೆಯು ಸಹ ಆತನ ಮಾತಿನಂತೆ ನಡೆಯುತ್ತಿದ್ದರು. ಅಂದಬಳಿಕ ದೌಲತ್ತರಾಯನನ್ನು ವಶಮಾಡಿಕೊಳ್ಳು

ವಡು ಪರಮ ಪ್ರಯಾಸವೆನಿಸಹತ್ತಿತು. ಆ ಬಗ್ಗೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದು ತೋಚದಂತಾಯಿತು. ಆದರೂ ನಾನಾಫಡಣವೀಸನು ಧೈರ್ಯಬಿಡಲಿಲ್ಲ. ಶಿಂದೇನ ಪದರಿನಲ್ಲಿ ರಾಯಾಜಿ ಪಾಟೀಲನೆಂಬುವ ಒಬ್ಬ ಗೃಹಸ್ಥನಿದ್ದನು. ಆತನು ಬಾಳೋಬನ ದ್ವೇಷಿಯು. ಆತನೊಡನೆ ನಾನಾನು ಸಂಧಾನಹಚ್ಚಿದನು. ಇದೆಲ್ಲರಲ್ಲಿ ಸಖಾರಾಮ ಘಾಟಿಗೆ ಎಂಬುವ ನೀಚನು ಮಧ್ಯಸ್ಥನಾಗಿದ್ದನು. ಈ ಸಖಾರಾಮನು ಮೊದಲು ನಾನಾನ ಆಶ್ರಯದಲ್ಲಿದ್ದನು. ಇತ್ತಿತ್ತ ಆತನು ಶಿಂದೇನ ಊಳಿಗದಲ್ಲಿ ಸೇರಿಕೊಂಡಿದ್ದನು. ಆತನಿಗೊಬ್ಬ ಮಗಳಿದ್ದಳು. ಅವಳು ಪರಮ ಸುಂದರಿಯು. ಅವಳು ಲಾವಣ್ಯದ ಖನಿಯಾಗಿದ್ದಳು. ಅವಳು ಮೃತ್ಯುಲೋಕದ ರತಿದೇವಿಯೋ, ಋಷಿಗಳ ಶಾಪದಿಂದ ನರಭೂಮಿಯಲ್ಲಿ ಅವತರಿಸಿದ ಅಪ್ಸರೆಯೋ ಏನೋ ಎಂಬಂತೆ ತನ್ನ ಮನಮೋಹನ ದಿವ್ಯಮೂರ್ತಿಯಿಂದ ಸಕಲರನ್ನು ಮೋಹಿಸುತ್ತಿದ್ದಳು. ಆ ಚಲ್ವಿಯ ಅನುಪಮ ಸೌಂದರ್ಯಕ್ಕೂ ಅಪ್ರತಿಮ ಲಾವಣ್ಯಕ್ಕೂ, ನೂತನ ತಾರುಣ್ಯಕ್ಕೂ ದೌಲತ್ತರಾಯನು ಪೂರಾ ಮರುಳಾಗಿದ್ದನು. ಆದ್ದರಿಂದ ಶಿಂದೆಯು ಸಖಾರಾಮನ ಮಾತುಗಳಿಗೆ ಕಿವಿ ಜೋಲುತ್ತಿದ್ದನು. ಹೆಣ್ಣಿನ ನಾದವು ಬಹಳ ಕೆಟ್ಟದು. ಅದರ ಯೋಗದಿಂದ ಮನುಷ್ಯನ ಚಿತ್ತವು ಅರಕ್ಷಣದಲ್ಲಿ ರೂಪಾಂತರವನ್ನು ಹೊಂದುವದು. ಜಗತ್ತಿನ ಈ ನೇಮಕ್ಕೆ ದೌಲತ್ತರಾಯನು ಅಪವಾದವಾಗಿರಲಿಲ್ಲ. ಇದೆಲ್ಲವನ್ನು ತಿಳಕೊಂಡು ನಾನಾಫಡಣವೀಸನು ಶಿಂದೇನನ್ನು ತನ್ನ ಕಡೆಗೆ ಒಡೆಸಿಕೊಳ್ಳುವ ಕೆಲಸದಲ್ಲಿ ಸಖಾರಾಮನನ್ನು ನಿಯೋಜಿಸಿದನು. ಆತನ ಮುಖದಿಂದ ನಾನಾನು ಒಂದೆರಡು ಸಾರೆ ಕೇಳಿಸಿ ನೋಡಿದನು; ಅಷ್ಟಕ್ಕೇ ಶಿಂದೆಯು ವಶವಾದನು. ತನ್ನ ಮುಖ್ಯ ಪ್ರಧಾನನಾದ ಬಾಳೋಬನಲ್ಲಿ ಶಿಂದೇನ ಸಂಪೂರ್ಣ ವಿಶ್ವಾಸವಿತ್ತು. ಆತನು ತನ್ನ ದಿವಾಣನ ವಚನ-ವಿರುದ್ಧವಾಗಿ ಎಂದೂ ನಡೆಯುತ್ತಿದ್ದಿಲ್ಲ. ಆದರೆ ಘಾಟಿಗೆ ಸಖಾರಾಮನ ಲೋಕಸುಂದರಿಯಾದ ಮಗಳ ಆಶಾಪಾಶಾಬದ್ಧನಾಗಿ, ಅದೆಲ್ಲವನ್ನು ಬದಿಗಿಟ್ಟು ನಾನಾನ ಓಲಗದಲ್ಲಿ ಸಿಗಬಿದ್ದನು. ವಾಚಕರೇ, ಸ್ತ್ರೀ-ವ್ಯಾಮೋಹವು ಎಷ್ಟು ಬಲವತ್ತರವಾದದ್ದು, ನೋಡಿರಿ.

ಈ ಮೇರೆಗೆ ನಾನಾಫಡಣವೀಸನು ಘಾಟಿಗೆ ಮತ್ತು ರಾಯಾಜಿ ಪಾಟೀಲರ ಮಧ್ಯಸ್ಥಿಕೆಯಿಂದ ದೌಲತ್ತರಾಯನನ್ನು ತನಗೆ ಅನುಕೂಲ

ಮಾಡಿಕೊಂಡನು. ಶಿಂದೆಯು ಭಾವು-ಬಾಳೋಬರನ್ನು ಸೆರೆಹಿಡಿದು ಬಾಜೀರಾಯನನ್ನು ಪುನಃ ಪೇಶವೆ ಪಟ್ಟಕ್ಕೆ ಕೂಡ್ರಿಸಿದರೆ, ಪರಶುರಾಮಪಂತ ಪಟವರ್ಧನನ ಯಾವತ್ತೂ ಜಹಗೀರು, ಅಹ್ಮದನಗರದ ಕಿಲ್ಲೆ ಹಾಗೂ ಅದರ ಕೆಳಗಿನ ೧೦ ಲಕ್ಷ ಪ್ರಾಪ್ತಿಯ ಪ್ರದೇಶ ಇಷ್ಟೆಲ್ಲವನ್ನು ನಾನಾನು ಶಿಂದೇನಿಗೆ ಕೊಡಲೊಪ್ಪಿಕೊಂಡನು. ಶಿಂದೆಯು ಈ ಕರಾರುಗಳಿಗೆ ಸಮ್ಮತಿಸಿ ಮುಂದಿನ ಉದ್ಯೋಗವನ್ನು ನಡಿಸಿದನು.

ನಾನಾಫಡಣವೀಸನು ಮಹಾ ಕುಟಿಲನು. ಅವನು ಕುಟಿಲನಿದ್ದಂತೆ ದೀರ್ಘಸಾಹಸಿಯೂ ಆಗಿದ್ದನು. ಆತನ ಕಪಟಜಾಲ ರಚನೆಯು ಬಹು ಗೌಪ್ಯದಿಂದ ನಡೆದಿತ್ತು. ಅದರ ವರ್ತಮಾನವು ಭಾವು-ಬಾಳೋಬರಿಗೆ ಗೊತ್ತೇ ಇದ್ದಿಲ್ಲ. ಬಾಜೀರಾಯನು ಶಿಂದೇನ ಛಾವಣಿಯಲ್ಲಿದ್ದನು. ಅತ್ತ ಕಡೆಗೆ ನಾನಾಫಡಣವೀಸನು ದ್ರವ್ಯವನ್ನು ಕಳಿಸಿಕೊಡಹತ್ತಿದನು. ಅದರ ಸಹಾಯದಿಂದ ಬಾಜೀರಾಯನು ಮಾನಾಜಿ ಎಂಬುವನ ಕಡೆಯಿಂದ ಹೊಸ ದಂಡು ಕೂಡಿಸುವ ಯತ್ನ ನಡಿಸಿದನು. ಆಗ ಬಾಳೋಬನಿಗೆ ಆ ಬಗ್ಗೆ ಅನುಮಾನವು ಬಂತು. ಆದರೂ ಅದರಲ್ಲಿ ನಾನಾನ ಅಂಗವಿರುವದೆಂದು ಆತನ ಬುದ್ಧಿಗೆ ತೋರಲಿಲ್ಲ. ಶಿಂದೇನ ವಿಷಯವಾಗಿ ಆತನಿಗೆ ಮೂಲತಃ ಸಂಶಯವೇ ಬರಲಿಲ್ಲ. ಆತನ ಮೇಲೆ ಶಿಂದೇನ ಅತ್ಯಂತ ಲೋಭವಿದ್ದುದರಿಂದ ತನ್ನ ನಾಶಾರ್ಥ ಆತನನ್ನು ಯಾರಾದರೂ ಒಡಿಸಿಕೊಂಡಿರಬಹುದೆಂಬ ಕಲ್ಪನೆಯು ಬಾಳೋಬನ ಮನಸ್ಸಿನಲ್ಲಿ ಹುಟ್ಟಲಿಲ್ಲ. ಘಾಟಿಗೆ ಸಖಾರಾಮನ ವಿಷಯವಾಗಿಯೂ ಆತನಿಗೆ ಸಂಶಯವು ತೋರಲಿಲ್ಲ. ಆತನು ಅತ್ಯಂತ ಧೂರ್ತನೂ, ಕಾರ್ಯಕುಶಲನೂ ಇದ್ದರೂ ಆಗ್ಗೆ ಮೋಸ ಹೋದನು.

ಮಾನಾಜಿಯ ಕೃತಿಯ ಬಗ್ಗೆ ಅನುಮಾನ ಬಂದಂದಿನಿಂದ ಬಾಳೋಬನು ಬಾಜೀರಾಯನ ಭದ್ರತೆಯ ವಿಷಯವಾಗಿ ವಿಶೇಷ ಲಕ್ಷ ಕೊಡಲಾರಂಭಿಸಿದನು. ಫಡಕೆ ಬಾಬುರಾಯನನ್ನು ಹಿಡಿದು ಚಾಕಣ ಕಿಲ್ಲೆಯಲ್ಲಿ ಒಯ್ದಿಟ್ಟನು. ಬಾಜೀರಾಯನ ಸುತ್ತುಮುತ್ತು ತನ್ನ ನಂಬಿಗೆಯ ಕಾವಲಗಾರರನ್ನು ನೇಮಿಸಿದನು. ಮಾನಾಜಿಯು ಕೂಡಿಸಿದ ದಂಡನ್ನು ತೆಗೆದು ಹಾಕಿದನು. ಬಾಜೀರಾಯನು ಪುಣೆಯೊಳಗಿದ್ದರೆ ಇಂಥ ಅನಿಷ್ಟಗಳು ಹುಟ್ಟುವವೆಂದು ಬಗೆದು ಆತನನ್ನು ಉತ್ತರಹಿಂದುಸ್ಥಾನಕ್ಕೆ ಕಳಿಸಿಕೊಡ

ಬೇಕೆಂದು ಯೋಚಿಸಿದನು. ಸಖಾರಾಮನ ಬಗ್ಗೆ ಏನೂ ಸಂಶಯವು ಇರದ್ದರಿಂದ ಆತನನ್ನೇ ಬಾಜೀರಾಯನ ಮುಖ್ಯ ಕಾವಲಿಗೆ ಯೋಜಿಸಿದನು. ಬಾಜೀರಾಯನಿಗೂ ಇದೇ ಬೇಕಾಗಿತ್ತು. ತಾನು ಉತ್ತರಹಿಂದುಸ್ತಾನಕ್ಕೆ ಹೋದರೆ ನಾನಾನು ಮತ್ತ್ಯಾರನ್ನಾದರೂ ಪೇಶವೆ ಪಟ್ಟಕ್ಕೆ ಕೂಡ್ರಿಸಬಹುದೆಂದು ಬಾಜೀರಾಯನು ಭೀತಿಗೊಂಡನು. ಆದ್ದರಿಂದ ಆತನು ಘಾಟಿಗೆ ಸಖಾರಾಮನ ಡುಬ್ಬಾ ಕಾಯತೊಡಗಿದನು. ಅವನು ಸಖಾರಾಮನಿಗೆ "ನೀನು ದೌಲತ್ತರಾಯನಿಗೆ ನಿನ್ನ ಮಗಳನ್ನು ಕೊಡು" ಎಂದು ಉಪದೇಶ ಮಾಡಲಾರಂಭಿಸಿದನು. ಬಾಜೀರಾಯನ ಆರ್ಜವ-ವೃತ್ತಿಯು ಹೆಚ್ಚುತ್ತ ಹೋದಂತೆ ಘಾಟಿಗೆಯು ಶಟಿಯತೊಡಗಿದನು. ಕಡೆಗೆ ಬಾಜೀರಾಯನು ಪೇಶವೆಪದವು ಪ್ರಾಪ್ತವಾದಬಳಿಕ ಶಿಂದೇನಿಗೆ ೨ ಕೋಟಿ ರೂಪಾಯಿ ಕೊಡಬೇಕು; ತನಗೆ ಆತನ ದಿವಾಣಗಿರಿಯನ್ನು ಕೊಡಿಸಿ ಕಾಗಲಗಾಂವ ಪ್ರಾಂತವನ್ನು ಇನಾಮು ಹಾಕಿಕೊಡಬೇಕು. ಹೀಗೆ ಕರಾರ ಮಾಡಿಕೊಂಡು ಸಖಾರಾಮನು ಬಾಜೀರಾಯನ ಬಿನ್ನಹವನ್ನು ಮಾನ್ಯಮಾಡಿದನು. ಆ ಮೇಲೆ ಬಾಜೀರಾಯನು ಜಡ್ಡಿನ ಸೋಗು ತೆಗೆದು, ನಾನಾಫಡಣವೀಸನ ಕೃಷ್ಣಕಾರಸ್ಥಾನವು ಕಡೆಗಾಣುವ ಮಾರ್ಗವನ್ನು ಎದುರುನೋಡುತ್ತ ಪೇರ ನದಿಯ ತಟಾಕದಲ್ಲಿ ಬಂದು ನಿಂತುಕೊಂಡನು.

ತಾನು ಕೂಡಿಸಿದ ದಂಡನ್ನು ಬಾಳೋಬನು ತೆಗೆದುಹಾಕಿದಕೂಡಲೇ ಮಾನಾಜಿಯು ಆ ಜನರನ್ನು ಕೂಡಿಕೊಂಡು ವಾಯಿಯಕಡೆಗೆ ಹೋದನು; ಅಲ್ಲಿ ಆತನು ಮತ್ತೆ ದಂಡು ಕೂಡಿಸುವ ಕ್ರಮವನ್ನು ನಡೆಸಿದನು. ಬಾಜೀರಾಯನ ಹಿತಚಿಂತಕರಾದ ಕೆಲವು ಸರದಾರರು ಆತನನ್ನು ಬಂದು ಕೂಡಿದರು. ಬೇಡಿದಷ್ಟು ಹಣವನ್ನು ನಾನಾನು ಕೊಡುತ್ತಿದ್ದನು. ಹೀಗಾಗಿ ಸ್ವಲ್ಪ ಕಾಲದಲ್ಲಿ ಹತ್ತುಸಾವಿರ ಸೈನ್ಯವು ಸಿದ್ಧವಾಯಿತು.

ಇಷ್ಟೆಲ್ಲ ಜೋಡಣೆಯಾದುದನ್ನು ಕಂಡು ನಾನಾಫಡಣವೀಸನು ಬಾಜೀರಾಯನಿಗೆ ಅನುಕೂಲನಾಗಿರುವನೆಂದು ಭಾವು-ಬಾಳೋಬರು ತಿಳಕೊಂಡರು. ತಾನು ನಾನಾನಿಗೆ ಬಗೆಬಗೆಯ ಆಶ್ವಾಸನವನ್ನು ಕೊಟ್ಟರೂ ಆತನ ಮನಸ್ಸಿನ ಸಂಶಯವು ದೂರವಾಗದಿರುವದನ್ನೂ, ತನ್ನನ್ನು ಈ ಪ್ರಕಾರ ಪೂರಾ ಮೋಸಗೊಳಿಸಿರುವದನ್ನೂ ಕಂಡು, ಭಾವುಸಾಹೇಬ

ನಿಗೆ ಬಹಳ ಕೆಡಕೆನಿಸಿತು. ಆದರೆ ಬಂದ ದುರ್ಘಟಪ್ರಸಂಗದೊಳಗಿಂದ ಪಾರಾಗುವದು ಅವಶ್ಯವೆಂದು ಬಗೆದು ಆತನು ಆ ಉದ್ಯೋಗಕ್ಕೆ ಹತ್ತಿದನು. ಆಗ್ಗೆ ಪಾಯಿಯು ಕಡೆಗೆ ಕೂಡುತ್ತಿರುವ ದಂಡನ್ನು ಮುರಿಯುವದು ಅಗತ್ಯವಾಗಿದ್ದು ಅದಕ್ಕೆ ಭಾವು ಸ್ವತಃ ಟೊಂಕ ಕಟ್ಟಿದ್ದರೆ ಬಳಿತಾಗುತ್ತಿತ್ತು. "ಕಾಲಕ್ಕೆ ಸರಿಯಾಗಿ ಬುದ್ಧಿಯು ಹರಿಯುವದು" ಎಂಬ ನ್ಯಾಯದಂತೆ ಆತನಿಗೆ ಅಂಥ ವಿಚಾರವು ಹೊಳೆಯಲಿಲ್ಲ. ಆತನು ಆ ಮಹತ್ವದ ಕಾರ್ಯಭಾಗವನ್ನು ಎರಡನೆಯವರ ಕಡೆಗೆ ಒಪ್ಪಿಸಿಕೊಟ್ಟನು. ಅವರು ನಾನಾನಿಗೆ ಅನುಕೂಲರಾದ ಜನರು. ಅದರಿಂದ ನಾನಾಫಡಣವೀಸನಿಗೆ ತನ್ನ ವಾಂಛಿತ ಕಾರ್ಯವನ್ನು ಸಾಧಿಸಿಕೊಳ್ಳಲು ಅತ್ಯಂತ ಸುಲಭ ಮಾರ್ಗವು ಅನಾಯಾಸವಾಗಿ ಅನುಕೂಲಿಸಿತು. ತನ್ನ ಕೈಕೆಳಗಿನ ಸರದಾರರನ್ನು ನಾನಾಫಡಣವೀಸನು ಒಡಸಿಕೊಂಡಿರುವನೆಂಬ ಸಂಗತಿಯು ಭಾವುಸಾಹೇಬನಿಗೆ ಗೊತ್ತೇ ಇದ್ದಿಲ್ಲ. ಆತನು ಸಿಕ್ಕ ಜನರಲ್ಲಿ ನಂಬಿಗೆಯನ್ನಿಟ್ಟನು. ಹೀಗಾದ್ದರಿಂದ ಆತನು ನಾನಾನ ಕಪಟಜಾಲದಲ್ಲಿ ತೊಡಕಿಕೊಂಡನು. ಆ ಕಾಲಕ್ಕೆ ಭಾವು-ಬಾಳೋಬರ ಹಿತಶತ್ರುಗಳಾದ ಶಿಂದೇ-ಹೋಳಕರರು ಮಾನಾಜಿಯು ಪಾಯಿಯ ಕಡೆಗೆ ಕೂಡಿಸಿದ ದಂಡನ್ನು ಮುರಿಯುವದಕ್ಕಾಗಿ ತಮ್ಮ ಸೈನ್ಯವನ್ನು ಕಳುಹಿಸುತ್ತೇವೆಂದು ಅವರಿಬ್ಬರಿಗೆ ಬಿನ್ನವಿಸಿದರು; ಮತ್ತು ಅದೇ ಕಾರಣದಿಂದ ಹೊಸ ದಂಡು ಕೂಡಿಸುತ್ತೇನೆಂದು ನಿಜಾಮನ ವಜೀರನಾದ ಮುಶಿರಲುಲ್ಮಲಕನು ಹೇಳಿ ಕಳುಹಿದನು. ಭಾವು-ಬಾಳೋಬರು ಆ ತ್ರಿವರ್ಗರ ಬಿನ್ನಹವನ್ನು ಕೂಡಲೆ ಮಾನ್ಯ ಮಾಡಿದರು. ಈ ಪ್ರಕಾರ "ಮಿಂಚುವದೆಲ್ಲ ಮಣಿ" ಎಂದು ನಂಬಿ ಅವರು ಕೆಟ್ಟರು.

ಈ ಮೇರೆಗೆ ಭಾವುವಿನ ಬಳಿಯಲ್ಲಿದ್ದ ಬಹ್ವಂಶ ಸೈನ್ಯವು ಪಾಯಿಯ ಕಡೆಗೆ ಹೋಯಿತು. ಆಗ್ಗೆ ನಾನಾನ ತಂತ್ರದಂತೆ ತಾರೀಖ ೨೭ ನೆಯ ಅಕ್ಟೋಬರ ದಿವಸ ಶಿಂದೆಯು ಬಾಳೋಬನನ್ನು ಸೆರೆಹಿಡಿದು, ತನ್ನ ಕಡೆಯ ಕೆಲವು ಜನರನ್ನೂ, ಮುಶೀರಲುಲ್ಮಲಕನ ಕಡೆಯ ಕೆಲವು ಜನರನ್ನೂ ನಾರೋಪಂತ ಚಕ್ರದೇವನ ಸ್ವಾಧೀನಮಾಡಿ ಆತನನ್ನು ಗಂಡುಗಲಿಯಾದ ಪರಶುರಾಮ ಪಟವರ್ಧನನನ್ನು ಹಿಡಿಯಲು ನೇಮಿಸಿದನು. ಈ ಗುಪ್ತ ಸುದ್ದಿಯು ಭಾವೂಗೆ ಬಹು ಚಮತ್ಕಾರಿಕರೀತಿಯಿಂದ ಗೊತ್ತಾಯಿತು. ಚಕ್ರದೇವ ನಾರೋಪಂತನಿಗೆ ಪರಶುರಾಮಪಂತ ವೈದ್ಯನೆಂಬುವನೊಬ್ಬ

ಗೆಳೆಯನಿದ್ದನು. ನಾರೋಪಂತನು ಆತನಿಗೆ ಸಾವ್ರಾಸಾಹೇಬನನ್ನು ಸೆರೆ ಹಿಡಿಯುವಬಗ್ಗೆ ಆದ ಒಳಸಂಚಿನ ಸುದ್ದಿಯ ಪತ್ರವನ್ನು ಬರೆದಿದ್ದನು. ಆ ಪತ್ರವನ್ನು ತಂದ ಜಾನಸೂದನು ಪರಶುರಾಮಪಂತ ವೈದ್ಯನಕಡೆಗೆ ಕೊಡುವದರ ಬದಲು ಅದನ್ನು ಪರಶುರಾಮಪಂತ ಪಟವರ್ಧನನ ಕೈಗೆ ಕೊಟ್ಟನು. ಪತ್ರವನ್ನು ನೋಡಿ ಭಾವು ಗಾಬರಿಯಾದನು. ಏನೋ ದುರ್ಘಟಪ್ರಸಂಗವಿರುವದೆಂದು ಆತನಿಗೆ ಭಾಸವಾಯಿತು. ಆಗ್ಗೆ ರಾತ್ರಿಯ ಸಮಯ. ನೋಡಿದತ್ತೆಲ್ಲ ಕಗ್ಗತ್ತಲೆಯು ಮುತ್ತಿಕೊಂಡಿತ್ತು. ಪತ್ರವಾಚನದಿಂದ ಖೇದರೂಪ ಗಾಢಾಂಧಕಾರವು ಆತನ ಹೃದಯಭೂಮಿಯನ್ನು ವ್ಯಾಪಿಸಿಕೊಂಡಿತು. ಆದರೂ ಆಲಸ್ಯ ಮಾಡುವದು ವಿಹಿತವಲ್ಲೆಂದು ಬಗೆದು, ಆತನು ಆ ದುರ್ಘಟಪ್ರಸಂಗದೊಳಗಿಂದ ಪಾರುಗಾಣುವ ಎತ್ತುಗಡೆಯನ್ನು ನಡೆಸಿದನು. ಕೂಡಲೆ ಆ ವೀರಮಣಿಯು ಮೈಯ್ಯಲ್ಲಿ ಚಿಲಕತ್ತು ತೊಟ್ಟು, ಕೈಯಲ್ಲಿ ಕತ್ತಿ–ಡಾಲುಗಳನ್ನು ಹಿಡಕೊಂಡು, ಕುದುರೆಯನ್ನೇರಿ, ಭಗವಂತನ ನಾಮಸ್ಮರಣೆಯನ್ನು ಮಾಡುತ್ತ, ತನ್ನ ವಾಡೆಯೊಳಗಿಂದ ಹೊರಬಿದ್ದನು. ಇದರಮೇಲಿಂದ ವಾಚಕರು, ಪರಶುರಾಮಭಾವು ಕೇವಲ ತನ್ನ ಜೀವವನ್ನು ಉಳಿಸಿಕೊಳ್ಳುವಸಲುವಾಗಿ, ಈ ಪ್ರಕಾರ ಪ್ರಯತ್ನ ಮಾಡಿರಬಹುದೆಂದು ಊಹಿಸಬಹುದು. ಈ ಊಹೆಯು ಸರ್ವಥಾ ತಕ್ಕುದಲ್ಲ. ಯಾಕಂದರೆ ಆ ರಣಧುರಂಧರ ಸ್ವಾಮಿಭಕ್ತನು ಸ್ವಾರ್ಥಲೋಲುಪನಾಗಿ, ಪ್ರಭುಕಾರ್ಯವಿಮುಖನಾಗುವ ಅಧಮಾಧಮನಲ್ಲ. ಪಟವರ್ಧನ ಸರದಾರರು ಸ್ವಾಮಿಕಾರ್ಯ-ದೇಶಕಲ್ಯಾಣಗಳಸಲುವಾಗಿ ತಮ್ಮ ಮೈಯೊಳಗಿನ ರಕ್ತವನ್ನು ಸಮರಭೂಮಿಯಲ್ಲಿ ಧಾರೆಯೆರೆದು, ರಣದೇವತೆಯನ್ನು ತೃಪ್ತಿಗೊಳಿಸಿ, ಅಚ್ಚಳಿಯದ ಬಿಳಿಯ ಕೀರ್ತಿಯನ್ನು ಹೊಂದಲು, ಅವತರಿಸಿರುವರೆಂದು ನಾವು ಹಿಂದೆ ಆಗಾಗ್ಗೆ ಹೇಳುತ್ತ ಬಂದಿರುವೆವು. ಇಂಥ ಪವಿತ್ರ ಪಟವರ್ಧನಕುಲಚೂಡಾಮಣಿಯಾದ ಪರಶುರಾಮಪಂತ ಭಾವು ತನ್ನ ಕುಲಾಭಿಮಾನವನ್ನು ಹಿಡಿದು ಶ್ರೀಸೀತಾಪತಿ ರಾಮಚಂದ್ರದೇವರಸಲುವಾಗಿ ಕಪಿರಾಜನಾದ ಮಾರುತಿಯು ಭಯಂಕರ ಸಂಕಟಗಳಿಗೆ ಎದೆಗೊಟ್ಟು ನಿಂತಂತೆಯೂ, ಮತ್ತು ಸಾಧುರಾಜರಾದ ರಾಮದಾಸ–ಜನಾರ್ದನ ಸ್ವಾಮಿಗಳಗೋಸ್ಕರ, ಅವರ ಶಿಷ್ಯಶ್ರೇಷ್ಠರಾದ ಕಲ್ಯಾಣ-ಏಕನಾಥರು ಪ್ರಸಂಗ ಬಂದರೆ ತಮ್ಮ ಶಿರಕಮಲಗಳನ್ನು ಕತ್ತರಿಸಿಕೊಡಲು ಸಿದ್ಧರಿರುವಂತೆಯೂ,

ಆಗಿನ ದುರ್ಧರಪ್ರಸಂಗದಲ್ಲಿ ಆತನು ತನ್ನ ಜೀವದಕಡೆಗೆ ನೋಡದೆ, ತನ್ನ ಸ್ವಾಮಿಯಾದ ಶ್ರೀಮಂತ ಚಿಮಣಾಜಿಅಪ್ಪಾ ಪೇಶವೆಯನ್ನು ಬದುಕಿಸಿಕೊಳ್ಳ ಬೇಕೆಂಬುವ ಸದುದ್ದೇಶದಿಂದ ಕುದುರೆಯನ್ನೋಡಿಸುತ್ತ ಶ್ರೀಮಂತರ ವಾಡೆಗೆ ಬಂದನು. ಬಳಿಕ ನಿದ್ರೆಹೋದ ಚಿಮಣಾಜಿಯನ್ನೂ ಮತ್ತು ಆತನ ಮೈಗಾವಲಿಗಾಗಿ ಮಲಗಿಕೊಂಡಿದ್ದ ತನ್ನ ಮಕ್ಕಳಾದ ಹರಿಪಂತ-ದಾಜಿಸಾಹೇಬರನ್ನೂ ಎಬ್ಬಿಸಿ ಭಾವು ಮುಂದಿನ ಪ್ರವಾಸಸಿದ್ಧತೆಯನ್ನು ಮಾಡಿಕೊಂಡನು. ನಾರೋಪಂತ ಚಕ್ರದೇವನು ಪರಶುರಾಮಪಂತ ನನ್ನು ಹಿಡಿಯುವಗೋಸ್ಕರ ದೊಡ್ಡ ದಂಡಿನೊಡನೆ ಪಟ್ಟಣವನ್ನು ಹೊಕ್ಕು ಬಂದನು. ಆ ದಂಡಿನ ಜನರ ಗದ್ದಲದಿಂದ ನಗರದಲ್ಲಿ ಗೊಂದಲವೆದ್ದು ಹಾಹಾಕಾರವುಂಟಾಯಿತು. ಆಗ ಪ್ರಭಾತಕಾಲವಿದ್ದು, ದಿಗ್ಮಂಡಲವನ್ನು ಆರ ಕ್ತಗೊಳಿಸುವ ಸೂರ್ಯನಾರಾಯಣನು ಆ ಹಾಹಾಕಾರವನ್ನೂ, ಆ ದಂಡಿನ ಜನರ ಅಟ್ಟಹಾಸವನ್ನೂ ಕಣ್ಣಾರೆ ನೋಡಬೇಕೆಂಬ ಇಚ್ಛೆಯಿಂದ ಎದ್ದು ಬಂದನೋ ಏನೋ ಅನ್ನುವಂತೆ ಪೂರ್ವದಿಕ್ಕಿನಲ್ಲಿ ಉದಿತನಾದನು. ಎಲ್ಲಿ ನೋಡಿದರೂ, 'ಹಿಡಿ', ಹೊಡೆ, ಕಡಿ, ಬಡಿ, ಎಂಬ ಶಬ್ದಗಳ ಸೊಲ್ಲು ಕೇಳುತ್ತಿತ್ತು. ಆದ್ದರಿಂದ ನಾಗರಿಕ ಸ್ತ್ರೀಜನರು ಅಂಜಿ ತಮ್ಮ ಕೆಲಸಬೊಗಸೆ ಗಳನ್ನು ಬಿಟ್ಟು ಅಡಗಿಕೊಂಡರು. ಶಾಲೆಗೆ ಹೋಗುವ ಹುಡುಗರು ತಮ್ಮ ಪುಸ್ತಕ-ಪಾಟಿಗಳನ್ನು ಬೀದಿಯಲ್ಲಿಯೇ ಚಲ್ಲಿಕೊಟ್ಟು ಓಡಿಹೋದರು. ಕೂಲಿಕಾರರು ಕೆಲಸವಿಲ್ಲದೆ ಕೂತರು. ವ್ಯಾಪಾರಸ್ಥರು ಅಂಗಡಿಗಳನ್ನು ಮುಚ್ಚಿಬಿಟ್ಟರು. ಒಕ್ಕಲಿಗರು ಭಯದಿಂದ ಬಾಗಿಲ ಹಾಕಿಕೊಂಡರು. ಸಾರಾಂಶ, ಜನರೆಲ್ಲರು ಹೌಹಾರಿ ದಿಗಿಲುಗೊಂಡರು. ಆ ದಂಡು ಶ್ರೀಮಂತರ ವಾಡೆಯ ಸಮೀಪಕ್ಕೆ ಬರುವಷ್ಟರಲ್ಲಿ ಭಾವು ಚಿಮಣಾಜಿಅಪ್ಪಾ, ಮತ್ತು ತನ್ನ ಇಬ್ಬರು ಮಕ್ಕಳೊಡಗೊಂಡು ಆ ವಾಡೆಯಿಂದ ಹೊರಬಿದ್ದನು. ಆಗ ಆತನ ಸ್ವಂತ ೫೦೦ ಜನ ಸ್ವಾರರು ಮಾತ್ರ ಆತನ ಸಂಗಡ ಇದ್ದರು. ಅವ ರೆಲ್ಲರು ಬುಧವಾರ ಪೇಟೆಯೊಳಗಿಂದ ಹಾಯ್ದು ಹೋಗುತ್ತಿದ್ದರು. ಭಾವು ಮತ್ತು ಆತನ ಜನರು ತುರಗಾರೂಢರಾಗಿದ್ದರು; ಅವರ ಕೈಯಲ್ಲಿ ಕತ್ತಿ-ಡಾಲು ಮೊದಲಾದ ಆಯುಧಗಳಿದ್ದವು. ಕೆಲವು ಸ್ವಾರರು ಮುಂದೆ; ಭಾವು ಚಿಮಣಾಜಿಅಪ್ಪಾ ಮೊದಲಾದವರು ನಡುವೆ; ಮಿಕ್ಕ ಸ್ವಾರಜನರು ಹಿಂದೆ; ಈ ಪ್ರಕಾರ ಅವರು ರಾಜಧಾನಿಯೊಳಗಿಂದ ಹೊರಟು ನಡೆದರು. ಹಗೆಗಳು

ಊರಲ್ಲಿ ಅವರಮೇಲೆ ಬೀಳಲಿಲ್ಲ. ಬಿದ್ದಿದ್ದರೆ ಅಲ್ಲಿಂದಲ್ಲೇ ಕಾಳಗವೆಸಗು ತ್ತಿತ್ತು. ಭಾವು ರಾಜಧಾನಿಯ ಹೊರಗೆ ಬಂದನು. ಅಲ್ಲಿ ಆತನ ಕಡೆಯ ಕೆಲವು ಜನರು ಬಂದು ಕೂಡಿದರು. ಒಟ್ಟು ೩ ಸಾವಿರ ಸೈನ್ಯವು ಕೂಡಿತು. ಆ ದಂಡಿನೊಡನೆ ಆತನು ಶಿವನೇರಿಯ ಹಾದೀ ಹಿಡಿದನು. ನಾರೋಪಂತನು ಭಾವೂನ ಬೆನ್ನುಹತ್ತಿ ನಡೆದಿದ್ದನು. ಹಾದಿಯಲ್ಲಿ ಕೆಲವರಿಗೆ ಅನ್ನವಿಲ್ಲ; ಕೆಲವರಿಗೆ ನೀರು ಇಲ್ಲ. ಇಂಥ ದುರ್ದಶೆಯು ಪ್ರಾಪ್ತವಾಯಿತು. ಒಂದು ದಿವಸ ಭಾವು ಚಕ್ರದೇವನ ಸೈನ್ಯದಮೇಲೆ ಬಿದ್ದು ಆತನ ಬುಣಗನ್ನು ಸುಲಿದನು. ಕಡೆಗೆ ಭಾವು ಸೈನ್ಯಸಹಿತ ಪಯಣಮಾಡುತ್ತ, ಶಿವನೇರಿಯ ಬಳಿಗೆ ಬಂದು ಬೀಡುಬಿಟ್ಟನು. ನಾರೋಪಂತನೂ ಹಿಂದಿನಿಂದ ಬಂದನು. ಆತನ ದಂಡು ೭೦೦೦ ಇತ್ತು. ಹೆಚ್ಚಿಗೆ ೭೦೦೦ ಜನರು ಬಂದು ಕೂಡಿದರು. ಹೀಗೆ ಆತನ ಬಲವು ಇಮ್ಮಡಿಯಾದುದರಿಂದ ಚಕ್ರದೇವನು ಉಬ್ಬಿದನು. ಕಿಲ್ಲೇದಾರನು ಸಹಾಯ ಮಾಡುವನೆಂಬ ನಂಬಿಗೆಯಿಂದ ಭಾವು ರಾತ್ರಿಯಲ್ಲಿ ಚಿಮಾಜಿಯೊಡನೆ ಕಿಲ್ಲೆಯನ್ನು ಹೊಕ್ಕನು. ಕಿಲ್ಲೇದಾರನು ಭಾವೂಗೆ ನೆರವಾಗಲು ಧೈರ್ಯಪಡಲಿಲ್ಲ. ಆಗ ಭಾವು ಚಕ್ರದೇವನಕೂಡ ಯುದ್ಧಮಾಡುವ ವಿಚಾರವನ್ನು ಬದಿಗಿಟ್ಟು, ಸಂಧಾನಪ್ರಸಕ್ತಿಯನ್ನು ಪ್ರಾರಂಭಿಸಿದನು. ರಾಸ್ತೆ ಆನಂದರಾಯನು ಅಭಯವಚನ ಕೊಟ್ಟದ್ದರಿಂದ ಭಾವುಸಾಹೇಬನು ಆತನ ಸ್ವಾಧೀನನಾದನು. ಆಗ ಆತನು ತನ್ನ ಜತೆಯ ಜನರಿಗೆ ಹಾದಿಯ ವೆಚ್ಚವೆಂದು ಪ್ರತಿಯೊಬ್ಬರಿಗೆ ಒಂದೊಂದು ರೂಪಾಯಿಯಂತೆ ಕೊಟ್ಟು, ತನ್ನ ಮಗನಾದ ಅಪ್ಪಾಸಾಹೇಬನ ಬಳಿಗೆ ಹೋಗಬೇಕೆಂದು ಅವರೆಲ್ಲರಿಗೆ ಅಪ್ಪಣೆಕೊಟ್ಟು ಕಳುಹಿದನು. ಚಿಮಾಜಿ ಪೇಶವೆಯು ನಾರೋಪಂತನ ಹಸ್ತಗತನಾದನು. ಬಳಿಕ ಆನಂದರಾಯನು ಭಾವೂನನ್ನು ಮಾಂಡವಗಣಕ್ಕೆ ಕಳಿಸಿಕೊಟ್ಟನು. ಅಲ್ಲಿ ಪೂರ್ವಸಂಕೇತದಂತೆ ಅವನು ಭದ್ರವಾದ ಕಾವಲಿನಲ್ಲಿಡಲ್ಪಟ್ಟನು.

ಅಹಹಾ! ದೈವಗತಿಯು ವಿಚಿತ್ರವಾದದ್ದು. ಯಾವನು ಸ್ವಲ್ಪ ಹೊತ್ತಿನ ಮುಂಚೆ ಪೇಶವೆಯ ಮುಖ್ಯ ಮಂತ್ರಿಯಾಗಿ ಅಪ್ರತಿಮ ವೈಭವ ಸಂಪನ್ನನಾಗಿದ್ದನೋ, ಮತ್ತು ಯಾವ ವೀರವರನಲ್ಲಿ ತನ್ನ ಅಲೌಕಿಕ, ಅತರ್ಕ್ಯ, ಅಪರಮಿತ ಪರಾಕ್ರಮದ ಬಲದಿಂದ ಇಡೀ ಪೇಶವೆ-ಸಾಮ್ರಾಜ್ಯವನ್ನು ಬುಡಮೇಲು ಮಾಡುವ ಅದ್ಭುತ ಸಾಮರ್ಥ್ಯವಿತ್ತೋ, ಆ ರಾಜನಿಷ್ಠ

ನೂ, ಪಟವರ್ಧನ ಕುಲಾವತಂಸನೂ ಆದ ಪರಶುರಾಮಭಾವು ಈಗ ಕಾರಾಗೃಹವಾಸವನ್ನು ಹೊಂದಿ ಪರತಂತ್ರನಾದನು.

ಈ ಪ್ರಕಾರ ನಾನಾಫಡಣವೀಸನ ಕೃಷ್ಣಕಾರಸ್ಥಾನವು ಕಡೆಗಂಡಿತು. ಕೈಕೈಯಿಯ ದುರ್ಬುದ್ಧಿಯಿಂದ ಶ್ರೀರಾಮ-ಲಕ್ಷ್ಮಣರಿಗೆ ವನವಾಸವು ಒದಗಿದಂತೆಯೂ, ಶಕುನಿಯ ಕಪಟತನದಿಂದ ಧರ್ಮಿಷ್ಠರಾದ ಪಾಂಡವರಿಗೆ ವನವಾಸ-ಅಜ್ಞಾತವಾಸಗಳು ಪ್ರಾಪ್ತವಾದಂತೆಯೂ ಮತ್ತು ಮೊಗಲ ಚಕ್ರೇಶ್ವರನಾದ ಔರಂಗಜೇಬನ ಕುಹಕತನದಿಂದ, ಶ್ರೀ ಶಿವಛತ್ರಪತಿಯು ಕಾರಾಗೃಹವಾಸವನ್ನು ಹೊಂದಿದಂತೆಯೂ ನಾನಾನ ಮೋಸಮಯ ಕೃತ್ಯಗಳಿಂದ ಶೂರಶಾರ್ದೂಲನೂ, ಸರಳ ಹೃದಯನೂ ಆದ ಪರಶುರಾಮಪಂತನು ಕಾರಾಗೃಹವಾಸವನ್ನು ಹೊಂದಿದನು. ಮಿತ್ರದ್ರೋಹಿಯಾದ ನಾನಾಫಡಣವೀಸನ ಕುಟಿಲಸ್ವಭಾವಕ್ಕೆ ಧಿಕ್ಕಾರವಿರಲಿ!

ಮುಂದಿನ ಅಧ್ಯಾಯದಲ್ಲಿ ಪರಶುರಾಮಭಾವುವಿನ ಬಂಧವಿಮೋಚನ ಕಥಾಭಾಗವನ್ನು ನಿವೇದನ ಮಾಡುವೆವು.

---

## ೧೩ ನೆಯ ಅಧ್ಯಾಯ.

### ಭಾವೂನ ಬಂಧ-ವಿಮೋಚನ ಮತ್ತು ಸಾತಾರೆಯ ಬಂಡಾಯ.

ಪಾಠಕ ಮಹನೀಯರೇ, ಇಲ್ಲಿಯತನಕ ಶ್ರೀವರ್ಧನಕುಲದೀಪಕರಾದ ಶ್ರೀಮಂತ ಬಾಜೀರಾವ ಬಲ್ಲಾಳ ಮೊದಲ್ಗೊಂಡು ಶ್ರೀಮಂತ ಸವಾಯಿಮಾಧವರಾಯರವರೆಗೆ ಆದ ಪೇಶವೆಯರ ಕಾರಕಿರ್ದಿಯ ಇತಿಹಾಸವನ್ನು ಬರೆದ ಕೈಯಿಂದಲೇ ಈಗ ನಾವು ಪೇಶವೆ ಕುಲಾಂಗಾರನಾದ ಕಡೆಯ ಬಾಜೀರಾಯನ ಕಾಲದ ವರ್ಣನೆಯನ್ನು ಬರೆಯಬೇಕಾಗಿರುವದರಿಂದ ನಮಗೆ ಬಹಳ ದುಃಖವಾಗುತ್ತದೆ. ಆದರೂ ನಮ್ಮ ಚರಿತ್ರನಾಯಕನು ಆ ಕುಲಕಂಟಕನಾದ ಬಾಜೀರಾಯನಿರದೆ, ಪ್ರೌಢಪ್ರತಾಪಿ ಪವಿತ್ರ ಪುರುಷ ಪರಶುರಾಮಪಂತಭಾವು ಪಟವರ್ಧನನು ಇರುವನೆಂಬುವದು

ದುಃಖದಲ್ಲಿ ಸುಖದ ಸಂಗತಿಯಾಗಿರುವದು. ಇದರಮೇಲೆ ದೃಷ್ಟಿಯನ್ನಿಟ್ಟು ಮುಂದಿನ ಕಥಾಭಾಗವನ್ನು ಯಥಾತಥ್ಯ ವರ್ಣಿಸುವೆವು.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ನಾನಾಫಡಣವೀಸನ ಕೃಷ್ಣಕಾರಸ್ಥಾನವು ಕಡೆಗಂಡು, ಬಾಜೀರಾಯನಿಗೆ ಪೇಶವೆಪದವು ಪುನಃ ಪ್ರಾಪ್ತವಾಯಿತು. ನಾನಾನು ಮತ್ತೆ ಕಾರಭಾರ ಮಾಡತೊಡಗಿದನು. ಆತನ ಪಕ್ಷದ ಜನರು ತಮ್ಮ ತಮ್ಮ ಕಾರ್ಯಕೆಲಸಗಳಲ್ಲಿ ತೊಡಕಿಕೊಂಡರು. ನಾನಾನು ಶಿಂದೆ-ಭೋಸಲೆ ಸರದಾರರಿಗೆ ಆಡಿ ಗೊತ್ತು ಮಾಡಿದ ಪ್ರಾಂತಗಳನ್ನು ಕೊಡಿಸಿದನು. ಈ ಪ್ರಕಾರ ಪೇಶವೆ ದರಬಾರದಲ್ಲಿ ಎದ್ದ ಗೊಂದಲವು ಶಾಂತವಾಯಿತು. ಆದರೆ ಇದು ಬಹಿರಂಗ ಶಾಂತತೆಯು. ಅಂತರಂಗದ ಸ್ಥಿತಿಯು ತೀರಾ ಭಿನ್ನವಿತ್ತು. ಬಾಜೀರಾಯನು ನಾನಾನ ಸ್ನೇಹವನ್ನು ಕೇವಲ ಸ್ವಾರ್ಥಸಾಧನೆಯ ಸಲುವಾಗಿ ಸಂಪಾದಿಸಿದ್ದನು. ಆತನು ತನ್ನ ಇಚ್ಛಿತ ಕಾರ್ಯವು ಕೈಗೂಡುತ್ತಲೇ, ನಾನಾನ ದ್ವೇಷಸಾಧಿಸಹತ್ತಿದನು. ಆತನು " ನಾನಾನು ಅಗಾಧ ವಿಚಾರ-ವ್ಯೂಹವನ್ನು ರಚಿಸಿ, ಸಕಲ ಸರದಾರರನ್ನು ಒಡಕೊಂಡು ಅವರ ಸಹಾಯದಿಂದ ನನಗೆ ಈ ಮಹತ್ವ ಪೇಶವೆಪದವಿಯನ್ನು ಕೊಡಿಸಿದನು. ಆದರೆ ಅವನು ಕೈಸಾಧಿಸಿದರೆ ಮುಂದೆ ನನ್ನನ್ನು ರಸಾತಳಕ್ಕೆ ಮುಟ್ಟದೆ ಬಿಡನು " ಎಂದು ಊಹಿಸಿತೊಡಗಿದನು. ನಾನಾನನ್ನು ಸಂಕಟದಲ್ಲಿ ಹಾಕಿ ತಾನು ಎಂದಿಗೆ ಸಂಪೂರ್ಣ ಸ್ವತಂತ್ರನಾಗುವ ಸಮಯವು ಪ್ರಾಪ್ತವಾದೀತೆಂಬ ಚಿಂತೆಯಲ್ಲಿ ಬಾಜೀರಾಯನು ಮುಣಗಿದನು. ಅಷ್ಟರಲ್ಲಿ ಅಂಥ ಅನುಕೂಲಯೋಗವೂ ಒದಗಿತು. ಭಾದ್ರಪದ ಶುದ್ಧ ಅಷ್ಟಮಿದಿವಸ ಹೋಳಕರ ತುಕೋಜಿರಾಯನು ಮರಣಹೊಂದಿದನು. ಆತನ ನಾಲ್ಕುಜನ ಮಕ್ಕಳು ಗಾದಿಯಗೋಸ್ಕರವಾಗಿ ಕಡಿದಾಡತೊಡಗಿದರು. ಅವರಲ್ಲಿ ಒಬ್ಬನಿಗೆ ಮಾತ್ರ ನಾನಾನ ಆಶ್ರಯವಿತ್ತು. ಮತ್ತೊಬ್ಬನು ಶಿಂದೇನ ಬೆನ್ನುಬಿದ್ದನು. ಶಿಂದೆಯು ತನ್ನ ಬೆನ್ನು ಬಿದ್ದವನನ್ನು ಗಾದಿಯ ಮೇಲೆ ಕೂಡ್ರಿಸಿದನು. ಹೀಗಾದದರಿಂದ ನಾನಾನು ನಿರಾಧಾರನಾದನು. ನೂತನ ಹೋಳಕರನಂತೂ ಶಿಂದೇನ ಅಂಕಿತನಾದನು. ದೌಲತ್ರಾಯನ ದವಲತ್ತು, ಮರವತ್ತುಗಳು ಮೊದಲಿಗಿಂತ ಹೆಚ್ಚಿದವು. ಶಿಂದೇನ ಗೌರವವು ಬೆಳೆಯುತ್ತ ಹೋದಂತೆ ನಾನಾನ ತೇಜವು ಮಾಜತೊಡಗಿತು. ಶಿಂದೆಯು ರಾಜಧಾನಿಯಲ್ಲಿ ತನ್ನ ಮನಬಂದತೆ ವರ್ತಿಸಲಾರಂಭಿಸಿದನು. ಬಾಜೀ

ರಾಯನಾದರೂ ಆತನ ಅನಸ್ಥಿತ ಮತ್ತು ಉದ್ಧಾಮತನದ ಕೃತ್ಯಗಳನ್ನು ಮನಸಾ ಸೇರುತ್ತಿದ್ದಿಲ್ಲ. ಆದರೆ ಹ್ಯಾಗಾದರೂ ಮಾಡಿ ನಾನಾನ ಏಳ್ಗೆಯನ್ನು ಕುಗ್ಗಿಸಬೇಕೆಂದು ಆತನ ದೃಢಸಂಕಲ್ಪವಿತ್ತು. ಹೀಗಾದದರಿಂದ ದೌಲತ್ತರಾಯನಿಗೆ ಪೇಶವೆಯ ಅಂತರಂಗದ ಪುಸಲತ್ತು ಸಿಕ್ಕಿತು. ವಿಚಾರಮಾಡಿದರೆ ಬಾಜೀರಾಯನು ಶಿಂದೇ ನಾನಾಫಡಣವೀಸರ ದ್ವೇಷಸಾಧನದಲ್ಲಿದ್ದನು. ಆದರೆ ಆ ಉಭಯತರ ವಿನಾಶಕಾರ್ಯವನ್ನು ಒಮ್ಮೆಲೆ ಪ್ರಾರಂಭಿಸಿದರೆ ಅವರಿಬ್ಬರು ಒಂದಾಗಿ ತನ್ನನ್ನೇ ನಾಶಗೊಳಿಸುವರೆಂದು ಬಗೆದು, ಬಾಜೀರಾಯನು ಮೊದಲು ನಾನಾ ಆ ಮೇಲೆ ಶಿಂದೆ, ಈ ಪ್ರಕಾರ ಕ್ರಮದಿಂದ ಅವರ ಬೆನ್ನುಹತ್ತಬೇಕೆಂದು ಆಲೋಚಿಸಿ, ಅದಕ್ಕೆ ತಕ್ಕ ಉಪಾಯಗಳನ್ನು ಕೈಕೊಂಡನು. ಶಿಂದೇ-ನಾನಾಫಡಣವೀಸರ ನಡುವೆ ವಿರೋಧಭಾವವಿರುವದನ್ನು ತಿಳಿದು, ಬಾಜೀರಾಯನು ಶಿಂದೇನ ಕಡೆಯಿಂದ ನಾನಾನನ್ನು ಸೆರೆಹಿಡಿಸಬೇಕೆಂದು ಯೋಚಿಸಿದನು. ಘಾಟಿಗೆ-ಬಾಜೀರಾಯರು ಈ ಮೊದಲೇ ಪರಸ್ಪರ ಸ್ನೇಹಿತರಾಗಿದ್ದರು. ಆಗ ಬಾಜೀರಾಯನು ಸಖಾರಾಮನಿಗೆ ಅಂದದ್ದು "ನಾನು ನಿನಗೆ ಮೊದಲೇ ಹೇಳಿದಂತೆ ಶಿಂದೇನ ದಿವಾಣಗಿರಿಯ ಪದವಿಯನ್ನು ಕೊಡಿಸಬೇಕೆಂದು ಮನಃಪೂರ್ವಕವಾಗಿ ಇಚ್ಛಿಸುತ್ತೇನೆ. ಆದರೆ ಏನು ಮಾಡಲಿ? ಅದಕ್ಕೆ ನಾನಾಫಡಣವೀಸನು ಅಡ್ಡಬರುವನು. ಆದ್ದರಿಂದ ಆತನ ವ್ಯವಸ್ಥೆಯನ್ನು ಮೊದಲು ಮಾಡಿಬಿಡಬೇಕು. ಅಂದರೆ ನೆಟ್ಟಗಾಗುವದು." ಸ್ವಭಾವತಃ ನೀಚನಾದ ಘಾಟಿಗೆಯು ಪೇಶವೆಯ ಈ ದುಷ್ಟ ಆಲೋಚನೆಗೆ ಒಪ್ಪಿಕೊಂಡನು. ಅವರಿಬ್ಬರು ನಾನಾಫಡಣವೀಸನನ್ನು ಸೆರೆಹಿಡಿಯಬೇಕೆಂದು ವಿಚಾರಮಾಡಿಕೊಂಡು ಅದರಂತೆ ಮಾಡಿತೋರಿಸಿದರು. ಮುಂದೆ ಪುಷ್ಯ ಶುದ್ಧ ೧೩ ದಿವಸ ಸಾಯಂಕಾಲಕ್ಕೆ ನಾನಾನು ದೌಲತ್ತರಾಯನ ಬಿನ್ನಹವನ್ನು ಮನ್ನಿಸಿ, ಆತನ ಪಾಳಯಕ್ಕೆ ಊಟಕ್ಕೆ ಹೋದನು. ಇದಕ್ಕೂ ೨-೩ ದಿನ ಮೊದಲೇ ಶಿಂದೇನ ಘಾತುಕ ವಿಚಾರವು ನಾನಾನಿಗೆ ಕರ್ಣಪರಂಪರೆಯಿಂದ ಗೊತ್ತಾಗಿತ್ತು. ಆದರೂ ಆತನು ಶಿಂದೇನ ಊಳಿಗದಲ್ಲಿದ್ದ ಕರ್ನಲ್ಲಫೆಲೋಸನೆಂಬುವ ಇಂಗ್ಲೀಷ ಸರದಾರನು ಕೊಟ್ಟ ಅಭಯವಚನವನ್ನು ನಂಬಿ, ಶಿಂದೇನ ಶಿಬಿರಕ್ಕೆ ಹೊರಟನು. ಅಲ್ಲಿಯೇ ಘಾಟಿಗೆ ಸಖಾರಾಮನು ಪೂರ್ವಸಂಕೇತದಂತೆ ಕರ್ನಲ್ಲಫೆಲೋಸನ ಸಹಾಯದಿಂದ ನಾನಾಫಡಣವೀಸನನ್ನು ಸೆರೆಹಿಡಿದನು. ತಾನಾ

ಗಿಯೇ ಬಿಟ್ಟ ಮಂತ್ರಿಪದವಿಯನ್ನು ತಿರುಗಿ ಸಂಪಾದಿಸುವ ಸಲುವಾಗಿ ಭಗೀರಥ ಪ್ರಯತ್ನಗಳನ್ನು ಮಾಡಿ, ಬಹು ದಿವಸದ ತನ್ನ ಜೀವದ ಗೆಳೆಯನಾದ ಪರಶುರಾಮುನನ್ನು ಕಾರಾಗೃಹವಾಸಕ್ಕೆ ಹಚ್ಚಿದ ನಾನಾಫಡಣವೀಸನ ಅವಸ್ಥೆಯು ಸ್ವಲ್ಪ ದಿನಗಳಲ್ಲಿಯೇ ಈ ಪ್ರಕಾರವಾಯಿತು. 'ಹರ' 'ಹರ' ಕಾಲಗತಿಯು ವಿಚಿತ್ರವಾದದ್ದು. ವಾಚಕರೇ, ವಿಚಾರಮಾಡಿ ನೋಡಿದರೆ ಕಾಲಗತಿಯನ್ನು ದೂಷಿಸುವದೂ ಸರಿಯಲ್ಲ; ಯಾಕಂದರೆ ಕುಟಿಲನಾದ ನಾನಾಫಡಣವೀಸನು ಸರಳಸ್ವಭಾವದ ತನ್ನ ಗೆಳೆಯನಿಗೆ ಕೇಡುಬಗೆದದರಿಂದ "ಕೃತಿಯಂತೆ ಗತಿ" ಎಂಬ ಗಾದಿಯಂತೆ, ಕೃತಕರ್ಮಪ್ರಾಯಶ್ಚಿತ್ತವು ಆ ಮಿತ್ರದ್ರೋಹಿಗೆ ಈ ಪರಿ ದೊರೆಯಿತು.

ನಾನಾಫಡಣವೀಸನಿಗೆ ಕಾರಾಗೃಹವಾಸವು ಯಾತರಿಂದ ಪ್ರಾಪ್ತವಾಯಿತೋ, ಅದರಲ್ಲಿಯೇ, ನಮ್ಮ ಚರಿತ್ರನಾಯಕನ ಬಂಧ-ವಿಮೋಚನದ ಬೀಜಾಂಕುರವು ಉತ್ಪನ್ನವಾದದ್ದು ಅತ್ಯಂತ ಕೌತುಕವೇ ಸರಿ. ಬಾಜೀರಾಯನು ನಾನಾನ ವಿನಾಶ-ವಿಚಾರ-ಜಾಲವನ್ನು ಹ್ಯಾಗೆ ರಚಿಸಿದನೆಂಬದನ್ನು ಮೇಲೆ ಹೇಳಿದ್ದೇವೆ. ಆತನ ಆ ಮಸಲತ್ತಿನಲ್ಲಿ ಸಾತಾರೆಯ ಅರಸನೂ ಕೂಡಿದ್ದನು. ಸಾತಾರೆಯಲ್ಲಿ ನಾನಾನ ಕಡೆಯ ಬಾಬುರಾವ ಕೃಷ್ಣನೆಂಬುವ ವಕೀಲನು ಇರುತ್ತಿದ್ದನು. ಆಗ ಬಾಜೀರಾಯನು ಅಲ್ಲಿಯ ಮಹಾರಾಜನಿಗೆ ಆ ವಕೀಲನನ್ನು ಸೆರೆಹಿಡಿದು ಕಿಲ್ಲೆಯನ್ನು ಹಸ್ತಗತಮಾಡಿಕೊಳ್ಳಬೇಕೆಂದು ಸೂಚಿಸಿದನು. "ನಾನಾನ ವಿನಾಶ-ವಿಚಾರವು ಸಾಧ್ಯವಾಯಿತೆಂದರೆ, ನಾನಾದರೂ ದೊಡ್ಡ ಬಾಜೀರಾಯರಂತೆ ಸಾತಾರೆಯ ಗಾದಿಯ ಅಭಿಮಾನವನ್ನು ಹಿಡಿದು ತಮ್ಮ ಸೇವೆಯನ್ನು ಮಾಡುವೆನು" ಎಂದು ಬಾಜೀರಾಯನು ಆ ಛತ್ರಪತಿಗೆ ವಚನಕೊಟ್ಟನು. ಅರಸನು ಅದಕ್ಕೆ ಒಪ್ಪಿಕೊಂಡು, ಬಾಜೀರಾಯನು ಹೇಳಿದಂತೆ ಮಾಡಿ ತನ್ನ ಮಾತಿಗೆ ಮುಟ್ಟಿದನು. ಆದರೆ ಬಾಜೀರಾಯನು ತನ್ನ ಇಷ್ಟಕಾರ್ಯವು ಸಾಧಿಸುತ್ತಲೆ, ತಾನು ಕೊಟ್ಟ ವಚನವನ್ನು ಮರೆತು ಕೃತಘ್ನತನವನ್ನು ತೋರಿಸಿದನು. ಆತನು ಶಿವರಾಮ ನಾರಾಯಣ ಥತ್ತೆ ಎಂಬುವ ಸರದಾರನನ್ನು ಅರಸನ ಕಡೆಯಿಂದ ಕಿಲ್ಲೆಯನ್ನು ಮರಳಿ ತಕ್ಕೊಳ್ಳುವ ಸಲುವಾಗಿ ಕಳುಹಿದನು. ಅರಸನು ಸಾಮೋಪಚಾರದಿಂದ ಕಿಲ್ಲೆಯನ್ನು ಬಿಡದೆ ಯುದ್ಧಕ್ಕೆ ಸಿದ್ಧನಾದನು. ಆಗ ಬಾಜೀರಾಯನು ತನ್ನ ಮಂತ್ರವು ತನಗೇ ತಿರುಗಿತೆಂದು ಭಯಭೀತನಾದನು. ಬಳಿಕ

ಆತನು ಮಾಧರಾವ ರಾಸ್ತೆ ಸರದಾರನೊಡನೆ ಸ್ವಲ್ಪ ಸೈನ್ಯ ಕೊಟ್ಟು ಕಳಿಸಿದನು. ಮಾಧವರಾಯನು ಅಲ್ಲಿಗೆ ಬಂದು ಕೋಟೆಯ ಬಗ್ಗೆ ಅರಸನನ್ನು ಕೇಳಿದನು. ಏನುಮಾಡಿದರೂ ಅರಸನು ಒಡಂಬಡಲಿಲ್ಲ; ಆತನು ಹೊಸ ದಂಡು ಕೂಡಿಸತೊಡಗಿದನು. ಶಿಂದೆಯು ಒಳಗಿಂದೊಳಗೆ ಛತ್ರಪತಿಗೆ ಅನುಕೂಲನಾದನು. ಕಡೆಗೆ ಮಾಧವರಾಯನು ಕಾಳಗದ ಜೋಡಣೆಯನ್ನು ಮಾಡಿಕೊಂಡು ಸಾತಾರೆಯ ಮಹಾರಾಜನ ಮೇಲೆ ಸಾಗಿಹೋದನು; ಅದಕ್ಕೆ ಅರಸನು ಬೆದರದೆ ಮಾಧವರಾಯನ ಸೈನ್ಯವನ್ನು ಚದುರಿಸಿ ಅವನನ್ನು ಹಿಂದಕ್ಕಟ್ಟಿಬಿಟ್ಟನು. ಹೀಗೆ ತನ್ನ ಸರದಾರನು ಪರಾಜಿತನಾದುದರಿಂದ ಬಾಜೀರಾಯನು ಸಾತಾರೆಯ ಬಂಡಾಯಕ್ಕೆ ಬಹಳ ಅಂಜಿದನು.

ಈ ಮೇರೆಗೆ ಪೇಶವೆ-ರಾಜ್ಯದಲ್ಲಿ ಒಮ್ಮಿಂದೊಮ್ಮೆ ದುರ್ನಿವಾರವಾದ ಸಂಕಟವು ಪ್ರಾಪ್ತವಾಯಿತು; ಆದರೆ ಬಾಜೀರಾಯನು ವಿಚಿತ್ರಸ್ವಭಾವದ ವ್ಯಕ್ತಿಯು; ಇದಲ್ಲದೆ ಸರ್ವತ್ರ ಯಾದವೀಕಲಹಗಳ ಪ್ರಾಬಲ್ಯವು. ಇಂಥ ಸ್ಥಿತಿಯಲ್ಲಿ ಸಾತಾರೆಯ ಬಂಡಾಯವನ್ನು ಮುರಿಯುವ ಧೈರ್ಯವು ಯಾವ ಸರದಾರನಿಗೂ ಆಗಲಿಲ್ಲ. ಆಗ ಅನುಭವಿಕರಾದ ವೃದ್ಧಜನರು "ಈಗಿನ ದುರ್ದಮನೀಯವಾದ ಪ್ರಸಂಗದೊಳಗಿಂದ ಪೇಶವಾಯಿಯನ್ನು ಪಾರು ಮಾಡುವ ಸಾಮರ್ಥ್ಯವು ಪೇಶವೆಸರದಾರಸಮೂಹದಲ್ಲಿ ಪ್ರತಿಭೀಷ್ಮಾಚಾರ್ಯಸ್ವರೂಪನಾದ ಪರಶುರಾಮಭಾವು ಒಬ್ಬನಲ್ಲಂಟು. ಆತನನ್ನು ಮುಕ್ತಮಾಡಿದರೆ ಅವನು ಛತ್ರಪತಿಯನ್ನು ಗೆದ್ದು ಬರುವನು." ಎಂದು ಅಭಿಪ್ರಾಯಕೊಟ್ಟರು. ಆ ಕಾಲಕ್ಕೆ ಭಾವು ವಾಯಿಯಲ್ಲಿದ್ದನು. ಆತನಿಗೆ ಈ ವೃತ್ತಾಂತವು ತಿಳಿಯಿತು. ಆಗ ಪೇಶವೆಸಾಮ್ರಾಜ್ಯದ ಸಂಪೂರ್ಣ ವೈಭವವನ್ನು ಕಣ್ಣುಟ್ಟ ನೋಡಿದ ಭಾವು ಸಾಂಪ್ರತದ ಹೀನಸ್ಥಿತಿಯನ್ನು ಕಂಡು ಕಡು ಮಿಡುಕಿದನು. ಆತನು ಹೆಸರಾದ ಕಲಿಯು; ಆತನ ಧೈರ್ಯವು ಅಚಲವಾದದ್ದು. ಆತನು ಸುಮಾರು ೭೦ ವರುಷದ ಮುದುಕನಾಗಿದ್ದನು. ಆದರೂ ಆತನ ವೀರಶ್ರೀಯ ತೇಜವು ಮಾಜಿರಲಿಲ್ಲ. ಆಗ್ಗೆ ಆ ರಣಧೀರನು ಶ್ರೀಮಂತರ ಆಜ್ಞೆಯಾದರೆ "ನಾನು ದಂಡಿನೊಡನೆ ಹೋಗಿ ದಂಗೆಯನ್ನು ಮುರಿದು ಬರುವೆನು." ಎಂದು ಕೂಡಲೆ ಬಾಜೀರಾವ ಪೇಶವೆಯಿಗೆ ರಾಸ್ತೆ ಸರದಾರನ ಮುಖಾಂತರ ಹೇಳಿಕಳುಹಿದನು.

ಬಾಜೀರಾಯನು ಭಾವೂಸಾಹೇಬನ ಸವಿನಯ, ಮತ್ತು ಪೌರುಷದ ಬಿನ್ನಹವನ್ನು ಕೂಡಲೆ ಗ್ರಾಹ್ಯವಾಡಿ ಆತನನ್ನು ಮುಕ್ತವಾಡಿದನು. « ಪರಾಕ್ರಮಿಪುರುಷರು ರಾಜ್ಯದ ಆಧಾರಸ್ತಂಭರು. ಅವರ ಬೆಂಬಲವಿಲ್ಲದೆ ಸಾಮ್ರಾಜ್ಯ-ಭವನವು ಸ್ಥಿರವಾಗಿ ನಿಲ್ಲದು " ಎಂದು ಬಲ್ಲವರು ಹೇಳುವ ನೀತಿಯ ಮಾತಿನ ಪ್ರತ್ಯಕ್ಷ ಅನುಭವವು ಬಾಜೀರಾಯನಿಗೆ ಸಿಕ್ಕಿತು. ಬಾಜೀರಾಯನ ಜನರು ಕೇವಲ ಸ್ವಾರ್ಥಪರಾಯಣರು. ಅವರು ಬಹು ಗರ್ವಿಷ್ಠರು. ಸ್ವಾರ್ಥಸಾಧನಕ್ಕಾಗಿ ಆರ್ಜವವೃತ್ತಿಯನ್ನು ಕೈಕೊಳ್ಳುವಲ್ಲಿ ಕಡು ಕುಶಲರು. ಆದರೆ ಶಸ್ತ್ರಾಸ್ತ್ರಪ್ರಯೋಗದ ದುರ್ಘಟಪ್ರಸಂಗವು ಬಂದಿತೆಂದರೆ ಅವರು ಮೈಗೆ ಹಚ್ಚಿಕೊಳ್ಳುತ್ತಿದ್ದಿಲ್ಲ. ಆದದರಿಂದ ಬಾಜೀರಾಯನು ಯಾವ ಶೂರಶಾರ್ದೂಲನನ್ನು ಮೊದಲು ನಾಶಗೊಳಿಸಿದ್ದನೋ, ಆತನ ಸಹಾಯವನ್ನೇ ಈಗ ಬಯಿಸಬೇಕಾಯಿತು. ರಣಧುರೀಣನೂ, ಸ್ವಂತ ಕರ್ತವ್ಯ ಕರ್ಮದ ಮರ್ಯಾದೆಯನ್ನು ತಿಳಿದವನೂ, ಆದ ಮನುಷ್ಯನು ತನಗೆ ಎಂಥ ವಿಪನ್ನಾವಸ್ಥೆಯು ಒದಗಿದರೂ ಆತನು ತನ್ನ ದೇಶದ ಕ್ಷೇಮ-ಸಮಾಚಾರ-ವಿಚಾರದಲ್ಲಿ ಉತ್ಸುಕತೆಯನ್ನು ತೋರಿಸದೆ ಬಿಡನು. ಅದರಂತೆ ನಮ್ಮ ಚರಿತ್ರನಾಯಕನು ಕಾರಾಗೃಹದಲ್ಲಿದ್ದರೂ ತನ್ನ ದೇಶದ ಹಿತವನ್ನು ಬಯಿಸಿದನು. ಆ ಪುರುಷಶ್ರೇಷ್ಠನು ಬಿಡುಗಡೆಯನ್ನು ಹೊಂದಿದ ತುಸು ದಿನಗಳಲ್ಲಿ ದೊಡ್ಡದಂಡು ಕೂಡಿಸಿದನು. ಆತನ ಪಕ್ಷದ ಅಸಂಖ್ಯ ಶೂರ ಸರದಾರರು ಆತನನ್ನು ಬಂದು ಕೂಡಿಕೊಂಡರು. ಅಜಮಾಸ ೧೦,೦೦೦ ಸೈನ್ಯವು ಸಿದ್ಧವಾಯಿತು. ಆಗ ಮಳೆಗಾಲವು; ಹೊಳೆ-ಹಳ್ಳಗಳು ತುಂಬಿ ಹರಿಯುತ್ತಿದ್ದವು. ಅದರಿಂದ ಸಾತಾರೆಯ ಅರಸನು ಶತ್ರು-ಭಯವಿಲ್ಲವೆಂದು ನಿರ್ಭೀತನಾಗಿದ್ದನು; ರಾಜಧಾನಿಯಲ್ಲಿ ಅಲ್ಲಲ್ಲಿ ನಗರರಕ್ಷಣೆಗಾಗಿ ಇಡಬೇಕಾದ ಚೌಕಿಗಳನ್ನು ಸಹ ಇಡದೆ, ತಕ್ಕ ಕಾವಲುಗಾರರನ್ನು ನೇಮಿಸಿದ್ದಿಲ್ಲ. ಇದು ಪರಶುರಾಮಭಾವುಗೆ ಗೊತ್ತಾಯಿತು. ಆಗ ಅವನು ವೇಣಾನದಿಯನ್ನು ದಾಟುವ ಹಂಚಿಕೆಯನ್ನು ಹುಡುಕಿತೆಗೆದು, ಆ ನದಿಯನ್ನು ದಂಡಿನೊಡನೆ ದಾಟಿ * ೧೦,೦೦೦ ಸೈನ್ಯಸಹವರ್ತಮಾನ ಸಾತಾರೆಯ

* ಆ ಕಾಲಕ್ಕೆ ವೇಣಾನದಿಯು ಹೊರಸೂಸಿ ಹರಿಯುತ್ತಿದ್ದು, ಅದು ಇಬ್ಭಾಗವಾಗಿ ಭಾವೂಸಾಹೇಬನಿಗೂ ಆತನ ದಂಡಿನ ಜನರಿಗೂ ಹಾದೀ ಕೊಟ್ಟಿತೆಂದು ದಂತಕಥೆಯುಂಟು. ( ಗ್ರಾಂಡಡಫ ).

ಸಮೀಪಕ್ಕೆ ಬಂದು ಬೀಡುಬಿಟ್ಟನು. ಹಗೆಗಳು ಅಕಸ್ಮಾತ್ ಬಂದುದನ್ನು ಕಂಡು ಅರಸನಕಡೆಯ ಜನರು ಅಂಜಿ ಸಿಕ್ಕಕಡೆಗೆ ಓಡತೊಡಗಿದರು. ಚತುರಸಿಂಗನು ಮಹಾರಾಜನ ಸೇನಾಪತಿಯು. ಆತನು, ಏಲಾಜಿ, ಸೇನಾ ಜಿಮೋಹಿತೆ, ಕುಶಾಬರಾಜ ಮತ್ತು ದುರ್ಗೋಜಿಮಹಡೀಕ ಇತ್ಯಾದಿ ಸರ ದಾರರು ಓಡುತ್ತಿರುವ ತಮ್ಮ ದಂಡಿನ ಜನರಿಗೆ ಧೈರ್ಯ ಹೇಳಿ ನಿಲ್ಲಿಸಿ ಕೊಂಡರು. ಅವರು ಕೂಡಲೆ ಕಾಳಗಕ್ಕೆ ಸಜ್ಜಾಗಿ ನಿಂತು ಭಾವುವಿನ ದಂಡಿ ನ ಜನರಮೇಲೆ ಮುಗಿಬಿದ್ದರು. ಪರಸ್ಪರ ಯುದ್ಧವು ಆರಂಭವಾಯಿತು. ಅರಸನಕಡೆಯ ಜನರು ಕಡುನಿಕರದಿಂದ ಕಾದಿದರು. ಆದರೆ ಭೀಮಪರಾ ಕ್ರಮಿಯಾದ ಭಾವೂನ ಭುಜಬಲದ ಮುಂದೆ ಅವರ ಆಟವು ನಡೆಯಲಿಲ್ಲ. ಭಾವು ಶತ್ರುಸೈನ್ಯವನ್ನು ಹೊಕ್ಕು ಕೈಗೆ ಸಿಕ್ಕವರನ್ನು ಸಂಹರಿಸಹತ್ತಿದನು. ಕುಶಾಬರಾಜ ಮತ್ತು ದುರ್ಗೋಜಿ ಇವರಿಬ್ಬರು ಗಾಯಹೊಂದಿದರು. ಮೋಹಿತೆ ಸರದಾರನು ವೈರಿಗೆ ಬೆನ್ನುತೋರಿಸಬಾರದೆಂದು ಜೀವದ ಹಂಗುದೊರೆದು ಸಾಹಸದಿಂದ ಕಾದಿದನು. ಆದರೆ ಆತನನ್ನು ಭಾವು ತುಂಡ ರಿಸಿ ಚಲ್ಲಿದನು. ಮಿಕ್ಕ ಜನರು ಪಲಾಯನ ಹೇಳಿದರು. ಅರಸನು ಮೊದಲೇ ಕಿಲ್ಲೆಯನ್ನು ಸೇರಿಕೊಂಡಿದ್ದನು.

ಈ ಪ್ರಕಾರ ಭಾವೂಸಾಹೇಬನು ವಿಜಯೋತ್ಸಾಹದಿಂದ ನಗರವನ್ನು ಹೊಕ್ಕನು. ಅವನ ಜನರು ರಾಜಧಾನಿಯನ್ನು ಸುಲಿದರು. ಕಿಲ್ಲೆಯೊಳಗೆ ಅನ್ನಸಾಮಗ್ರಿಯು ಪುರವತೆಯು ಇರದ್ದರಿಂದ, ಅರಸನು ಕೂಡಲೆ ಶರಣು ಬಂದನು. ಸೇನಾಪತಿಯಾದ ಚತುರಸಿಂಗನು ರಣಭೂಮಿಯಿಂದ ಓಡಿ ಹೋದನು. ಆತನು ಕೊಲ್ಹಾಪೂರಕರನ ಆಶ್ರಯವನ್ನು ಹೊಂದಬೇಕೆಂದು ಅತ್ತಕಡೆಯ ಹಾದೀ ಹಿಡಿದನು. ಭಾವು ಆತನ ಬೆನ್ನಹಿಂದೆ ಕೆಲವು ಜನ ರನ್ನು ಅಟ್ಟಿಕೊಟ್ಟನು. ಆದರೂ ಆತನು ಅವರ ಕೈಗೆ ಸಿಗದೆ ಪಾರಾದನು.

ಹೀಗೆ ಪರಶುರಾಮಭಾವು ಸಾತಾರೆಯ ಬಂಡಾಯವನ್ನು ಮುರಿದು ವಿಜಯಿಯಾದನು. ಅದರಿಂದ ಪೇಶವೆಯ ಮರ್ಯಾದೆಯು ಉಳಿಯಿತು. ಆದರೆ ಬಾಜೀರಾಯನು ಇದೆಲ್ಲವನ್ನು ಕೂಡಲೆ ಮರೆತು, ದಾಳಿಯ ಕೆಲ ಸವು ತೀರುತ್ತಲೆ, ಭಾವೂಗೆ ಆತನ ದಂಡಿನ ಜನರಿಗೆಲ್ಲರಿಗೆ ನಿರೋಪ ಕೊಡಬೇಕೆಂದು ಹೇಳಿಕಳುಹಿದನು. ಯಾವನು ತುರಂಗವಾಸವನ್ನು ಅನು

ಭವಿಸಿ, ಪೇಶವೆಯ ಪ್ರಾಣದಮೇಲೆ ಬಂದ ಸಂಕಟವನ್ನು ದೂರಮಾಡುವ ದಕ್ಕಾಗಿ ಬಾಂಧವಸರದಾರರನ್ನು ಕೂಡಿಕೊಂಡು, ಸಾತಾರೆಯನ್ನು ಮುತ್ತಿ, ಅಲ್ಲಿಯ ಛತ್ರಪತಿಯನ್ನು ಗೆದ್ದು, ಪೇಶ್ವೇನಿಗೆ ಜೀವದಾನವನ್ನು ಕೊಟ್ಟು, ಪೇಶವೆಸಾಮ್ರಾಜ್ಯವನ್ನು ಕಾಪಾಡಿದನೋ, ಆ ರಣದುರಂಧರನ ಅದ್ವಿತೀಯ ಪರಾಕ್ರಮಕ್ಕೆ ದೊರೆತ ಬಹುಮಾನವು ಇದೇ! ಧಿಕ್ಕಾರ! ಬಾಜೀರಾಯನ ಗುಣಪರೀಕ್ಷಾಬುದ್ಧಿಯು ಎಷ್ಟು ವಿಲಕ್ಷಣವಾದದ್ದು? ಇಂಥ ರಣ ಹೇಡಿ, ಕುಲನಾಶಕ, ಮತ್ತು ದೇಶಭ್ರಷ್ಟನು ಪೇಶವೆಮನೆತನದಲ್ಲಿ ಹುಟ್ಟಿ ದಿದ್ದರೆ, ಪೇಶವೆ ಸಾಮ್ರಾಜ್ಯವು ದಯಾಶೀಲರಾದ ಆಂಗ್ಲ-ಸಾರ್ವಭೌಮರ ವಿಶಾಲಛತ್ರವನ್ನು ಆಶ್ರಯಿಸಿಕೊಂಡು ಅಜರಾಮರವಾಗಿ ನಿಲ್ಲುತ್ತಿತ್ತು. ಪೌರುಷಹೀನನಾದ ಪುರುಷನ ಪದರಿನಲ್ಲಿ ಸುಗುಣಸಂಪನ್ನ ಲೋಕಸುಂದ ರಿಯಾದ ಸ್ತ್ರೀಯುಳಿದ್ದರೆ, ಆತನಲ್ಲಿ ಆಕೆಯ ರೂಪಲಾವಣ್ಯ ಮತ್ತು ಸದ್ಗುಣ ಗಳ ತೇಜವು ಹ್ಯಾಗೆ ಬೀಳದೋ, ಅದೇಪ್ರಕಾರ ವಿವೇಕಶೂನ್ಯನಾದ ರಾಜನ ಆಶ್ರಯದಲ್ಲಿರುವ ಪರಾಕ್ರಮಿ ಪುರುಷರ ಬೆಳಕು ಬೀಳುವದಿಲ್ಲ. ಅದರಿಂದ ಗುಣಪರೀಕ್ಷಾ-ವಿಚಾರವಿಲ್ಲದ ಯಜಮಾನನ್ನು ಸೇವಿಸುವದಕ್ಕಿಂತಲೂ, ಹೊಟ್ಟೆಯಲ್ಲಿ ಕಲ್ಲು ಮುಳ್ಳುಗಳನ್ನು ತುಂಬಿಕೊಳ್ಳುವದು ಲೇಸು ಎಂದು ಅನುಭವಿಕರು ಹೇಳುವ ಮಾತು ಸತ್ಯವಾದದ್ದು. ತನ್ನ ಅಸದೃಶಪರಾಕ್ರಮ ಗುಣಕ್ಕೆ ಪ್ರತಿಫಲವಾಗಿ ದೊರೆತ ಬಹುಮಾನದಿಂದ ಭಾವೂಸಾಹೇಬನ ಮನಸ್ಸಿಗೆ ಏನು ಅನಿಸಿತೆಂಬದನ್ನು ವಾಚಕರೇ ತರ್ಕಿಸಲಿ. ಆದರೂ ಆತನು “ಕಾಲಚಕ್ರವು ಬದಲಾಗಿರುವದು. ಹೊತ್ತು ಏರಿದಂತೆ ಕೊಡೆಹಿಡಿಯಬೇಕೆಂದು ನೀತಿಯಿರುವದು. ಕಾರಣ ಹೊತ್ತುಬಂದಂತೆ ನಡೆದರಾಯಿತು” ಎಂದು ತಾನೇ ಸಮಾಧಾನಮಾಡಿಕೊಂಡು ಬಾಜೀರಾಯನಿಗೆ “ಒಡೆಯರೇ, ನಾನು ಶ್ರೀಮಂತಸರಕಾರದ ವಿಶ್ವಾಸದ ಸೇವಕನು. ನನ್ನ ಮೇಲೆ ನನ್ನ ದಂಡಿನ ಜನರು ಮಹದುಪಕಾರಗಳನ್ನು ಮಾಡಿರುವರು. ಆದ್ದರಿಂದ ತಮ್ಮ ಅಪ್ಪಣೆಯಂತೆ ನಡೆಯಲು ಸಾಂಪ್ರತ ಅವಕಾಶವಿಲ್ಲ. ಇದರಮೇಲೆ ಸ್ವಾಮಿಯ ಚಿತ್ತ. ನನ್ನ ವಿಷಯವಾಗಿ ಪ್ರಭುಗಳು ಅನುಮಾನಪಡಕೂಡದು.” ಎಂದು ಬಿನ್ನಹಮಾಡಿಕೊಂಡನು.

# ೧೪ ನೆಯ ಅಧ್ಯಾಯ.

## ಭಾವೂನ ಅಂತ್ಯವು.

ನಾನಾಫಡಣವೀಸನಿಗೆ ತುರಂಗವಾಸವು ಹ್ಯಾಗೆ ಪ್ರಾಪ್ತವಾಯಿತೆಂಬದನ್ನು ಹಿಂದಿನ ಅಧ್ಯಾಯದಲ್ಲಿ ನಿರೂಪಿಸಿರುವೆವು. ನಾನಾನು ಅಹ್ಮದನಗರ ಕಿಲ್ಲೆಯಲ್ಲಿ ಒಯ್ದಿಡಲ್ಪಟ್ಟನು. ಬಾಜೀರಾಯನು ಶಿಂದೇನ ಸಹಾಯದಿಂದ ನಾನಾನ ವ್ಯವಸ್ಥೆಯನ್ನು ಮಾಡಿದಬಳಿಕ ಆತನ ಕಾಕದೃಷ್ಟಿಯು ದೌಲತ್ತರಾಯನ ಕಡೆಗೆ ತಿರುಗಿತು. “ ಶಿಂದೇನ ತೇಜದಮುಂದೆ ನನ್ನ ಬೆಳಕು ಬೀಳುವದಿಲ್ಲ. ನಾನಾನಂತೆ ಈತನನ್ನು ಗೊತ್ತಿಗೆ ಹಚ್ಚಿದರೆ ನನಗೆ ನಿಜವಾದ ಸ್ವಾತಂತ್ರ್ಯವು ಸಿಗುವದು ” ಇತ್ಯಾದಿ ಕುಹಕ-ವಿಚಾರಗಳು ಬಾಜೀರಾಯನ ಮನಸ್ಸಿನಲ್ಲಿ ಬರಹತ್ತಿದವು. ಆದದರಿಂದ ಆತನು ನಾನಾಫಡಣವೀಸನನ್ನು ಗೊತ್ತಿಗೆ ಹಚ್ಚುತ್ತಲೆ ಶಿಂದೇನ ವಿನಾಶಕ್ಕುಪಕ್ರಮಿಸಿದನು. ತನ್ನ ವಾಂಛಿತವನ್ನು ಸಿದ್ಧಿಗೊಯ್ಯುವ ಉದ್ದೇಶದಿಂದ ಬಾಜೀರಾಯನು ಟೀಪು-ನಿಜಾಮರೊಡನೆ ಒಳಸಂಚು ನಡೆಸಿದನು. ಇದೆಲ್ಲ ಸುದ್ದಿಯು ಶಿಂದೇನ ಕಿವಿವರೆಗೆ ಹೋಯಿತು. ಅದರಿಂದ ಅವನು ಜಾಗೃತನಾಗಿ ಸಾವಧಾನದಿಂದ ಇರಹತ್ತಿ, ತಾನೂ ಪೇಶವೆಯಂತೆ ಅಗಾಧಕಾಗಸ್ಥಾನವನ್ನು ರಚಿಸಿ, ಬಾಜೀರಾಯನ ಬೊಟ್ಟನ್ನು ಆತನ ಕಣ್ಣೊಳಗೇ ಚುಚ್ಚುವ ಉಪಾಯವನ್ನು ಮಾಡಿದನು. ಅದು ಹ್ಯಾಗಂದರೆ:—

ದೌಲತ್ತರಾಯನ ತಾಯಂದಿರು ಮೂರುಮಂದಿ. ಆತನು ಅವರನ್ನು ಚನ್ನಾಗಿ ನಡೆಸಿಕೊಳ್ಳುತ್ತಿದ್ದಿಲ್ಲ. ಆಗ ನಾನಾನು ಅವರಿಗೆ ಇಲ್ಲದ್ದೊಂದು ಚುಚಿಕೊಟ್ಟು, ಅವರಲ್ಲಿ ಕಲಹಾಗ್ನಿಯನ್ನು ಹೊತ್ತಿಸಿದನು. ಅದು ಪ್ರಖರವಾಗುತ್ತ ನಡೆಯಿತು. ಅಮೃತರಾವ ಮತ್ತು ಕಾಶಿರಾವ ಹೋಳಕರ ಇವರಿಬ್ಬರು ಆ ಮೂರುಮಂದಿ ಹೆಂಗಸರ ಬೆನ್ನುಕಟ್ಟಿದರು. ಆಗ ಶಿಂದೆಯು ಇದರ ಪ್ರತೀಕಾರವು ನಾನಾನ ಮಧ್ಯಸ್ಥಿಕೆಯಿಂದ ಆಗುವದೆಂತಲೂ, ಮತ್ತು ಆತನು ತನಗೆ ಅನುಕೂಲನಾದರೆ, ಬಾಜೀರಾಯನು ಬೆದರುವನೆಂತಲೂ

ವಿಚಾರಮಾಡಿ, ನಾನಾಫಡಣವೀಸನನ್ನು ಬಿಡುಗಡೆಮಾಡಿ ಪುಣೆಗೆ ಬರಮಾಡಿಕೊಂಡನು. ಈ ಸಂಗತಿಯು ಇತ್ತ ಪರಶುರಾಮಭಾವು ಸಾತಾರೆಯ ಬಂಡಾಯವನ್ನು ಮುರಿಯುವದಕ್ಕಾಗಿ ಹೊರಟುಹೋದಬಳಿಕ ಸ್ವಲ್ಪ ದಿವಸಗಳಲ್ಲಿಯೇ ವರ್ತಿಸಿತು. ತರುವಾಯ ನಾನಾನು ಮತ್ತೆ ಕಾರಭಾರ ಮಾಡಲಾರಂಭಿಸಿದನು. ಹೀಗೆ ನಾನಾಫಡಣವೀಸನೂ ದೌಲತ್ತರಾಯನೂ ಒಂದಾದದರಿಂದ ಬಾಜೀರಾಯನು ಹೆದರಿ ಅವರು ಹೇಳಿದಂತೆ ಕೇಳತೊಡಗಿದನು.

ನಾನಾಫಡಣವೀಸನು ಕಾರಾಗೃಹವಾಸದಿಂದ ಮುಕ್ತನಾಗಿ ಬಂದ ಬಳಿಕ ಆತನಿಗೆ ಬಹಳ ಪಶ್ಚಾತ್ತಾಪವೆನಿಸಿತು. “ಶಿಂದೆ, ಇತ್ಯಾದಿ ಸಕಲ ಸರದಾರರೊಡನೆ ನಾನು ಸ್ನೇಹಭಾವದಿಂದ ನಡೆದೆನು. ಆದರೆ ಅವರು ತಮ್ಮ ಸ್ವಾರ್ಥಸಾಧಿಸುವತನಕ ಮಾತ್ರ ನನ್ನ ಕೂಡ ಒಳ್ಳೇ ರೀತಿಯಿಂದ ನಡೆದರು; ಅದು ಸಾಧಿಸುತ್ತಲೆ ಅವರು ನನ್ನ ವಿನಾಶ-ಪ್ರವೃತ್ತರಾದರು.” ಎಂಬ ವಿಚಾರವು ನಾನಾನ ಮನಸ್ಸಿನಲ್ಲಿ ಕಟಿಯುತ್ತಿತ್ತು. ಸರಳಸ್ವಭಾವದ ಪರಶುರಾಮಭಾವು ಅನೇಕ ನಿಕಟಪ್ರಸಂಗಗಳಲ್ಲಿ ತನಗೆ ಮಾಡಿದ ಉಪಕಾರ, ತನ್ನ ವಿಷಯವಾಗಿ ಇದ್ದ ಆತನ ನಿರ್ಮಲವಾದ ಪ್ರೇಮ ಮತ್ತು ನಿಷ್ಪಾಪಸ್ನೇಹಭಾವ, ಹಾಗೂ ತನ್ನ ಮನೋದಯದಂತೆ ನಡೆಯಬೇಕೆಂಬ ಆತನ ಕುತೂಹಲ, ಇವೆಲ್ಲ ಸದ್ಗುಣಗಣವನ್ನು ತಾನು ಹ್ಯಾಗೆ ಮರೆತು ಕೃತಘ್ನನಾದೆನೆಂಬದನ್ನು ಮನದಂದು, ನಾನಾನು ಸಖೇದಾಶ್ಚರ್ಯವನ್ನು ಹೊಂದಿದನು. ಆ ಕಾಲದ ಪೇಶವೆದರಬಾರದ ಅಲ್ಲೋಲಕಲ್ಲೋಲ ಸ್ಥಿತಿಯಲ್ಲಿ ಭಾವುವಿನಂಥ ಅಪ್ರತಿಮಪುರುಷನ ಸಹಾಯವು ನಾನಾಫಡಣವೀಸನಿಗೆ ಅವಶ್ಯಮೇವ ಬೇಕೇ ಆಗಿತ್ತು. ಅದರಿಂದ ಆತನು ಪರಶುರಾಮಪಂತನ ಸಖ್ಯವನ್ನು ಮಾಡಿಕೊಳ್ಳಲು ಹವಣಿಸಿದನು. ಸುದೈವದಿಂದ ಅಂತಹ ಸುಯೋಗವೂ ಪ್ರಾಪ್ತವಾಯಿತು.

ಇಸವಿ ಸನ್ನ ೧೭೯೦ರಲ್ಲಿ ಪೇಶವೆ, ನಿಜಾಮ ಮತ್ತು ಇಂಗ್ಲೀಷ ಈ ತ್ರಿವರ್ಗರಾಷ್ಟ್ರದವರು ತಂತಮ್ಮೊಳಗೆ ಸ್ನೇಹಭಾವವನ್ನು ಬೆಳಿಸಿಕೊಂಡು, ಒಕ್ಕಟ್ಟಾಗಿ, ಟೀಪುವಿನಮೇಲೆ ದೌಡು ಮಾಡಿದರು. ಆಗ ಪೇಶವೆಸರಕಾರದ ಪ್ರಚಂಡ ಸೇನಾಸಾಗರದ ಸರ್ವಾಧಿಪತ್ಯವನ್ನು ನಮ್ಮ ಚರಿತ್ರನಾಯಕನೇ

ವಹಿಸಿದ್ದನೆಂಬುದು ವಾಚಕರ ನೆನಪಿನಲ್ಲಿರಬಹುದು. ಕಡೆಗೆ ಟೀಪುಸುಲ್ತಾನನು ಹಗೆಗಳಿಗೆ ಶರಣುಬಂದನು. ಆತನು ತನ್ನ ಅರ್ಧರಾಜ್ಯವನ್ನು ಕೊಟ್ಟು ಅವರೊಡನೆ ಒಪ್ಪಂದ ಮಾಡಿಕೊಂಡನು. ಆದರೆ ನೀಚಮನುಷ್ಯನಿಗೆ ತನಗಾದ ಶಾಸನದ ಸ್ಮರಣೆಯು ಬಹು ದಿವಸ ಉಳಿಯುವದಿಲ್ಲ. ಕಳ್ಳನು ತುರಂಗವಾಸವು ತೀರಿ ಮನೆಗೆ ಬಂದಬಳಿಕ, ಮತ್ತೆ ಕಳವು ಮಾಡಹತ್ತುವನು. ಅವನ ಮನಸ್ಸಿನ ಮೇಲೆ ಸತ್ಪರಿಣಾಮವು ಆಗುವದೇ ಇಲ್ಲ. ನಾಯಿಯ ಬಾಲದಂತೆ ಆತನ ಸ್ವಭಾವವು ತಿದ್ದಲಸಾಧ್ಯವಾಗಿರುವದು. ಯವನಭೂಪತಿಯಾದ ಟೀಪುಸುಲ್ತಾನನು ಇದೇ ಮಾದರಿಯ ಸ್ವಭಾವದ ಒಂದು ವ್ಯಕ್ತಿಯಾಗಿದ್ದನು. ಇಂಗ್ಲೀಷರು ಸಮಾಧಾನಪ್ರಿಯರು. ಅವರು ತಾವಾಗಿಯೇ ಯಾವ ಉಪದ್ವ್ಯಾಪವನ್ನೂ ಮಾಡರು. ದೇಶಸ್ವಸ್ಥತೆಯೇ, ಆ ಉದಾರಚರಿತರ ಸುಖವು; ಪರರಾಜರೊಡನೆ ಸ್ನೇಹಭಾವದಿಂದ ನಡೆಯುವದೇ ಆ ಮಹಾಮಹಿಮರ ಸಹಾನುಭೂತಿಯು. ಅದರಿಂದಲೇ ಅವರ ಸಾಮ್ರಾಜ್ಯಲಕ್ಷ್ಮಿಯು ಚಿರಾಯುಷ್ಯವನ್ನು ಹೊಂದಿರುವಳು. ಹೀಗೆ ಆಗಿನ ಕಾಲದಲ್ಲಿ ಇಂಗ್ಲೀಷರು ಶಾಂತತಾ-ಪ್ರಿಯರಾಗಿ, ತಮ್ಮ ರಾಜ-ಶಕಟವನ್ನು ನಡೆಸುತ್ತಿದ್ದದರಿಂದ, ಮತ್ತು ಪೇಶವೆ-ನಿಜಾಮರಲ್ಲಿ ಕಲಹವು ಹುಟ್ಟಿ ಒಬ್ಬರಿಗೊಬ್ಬರು ಕಡಿದಾಡತೊಡಗಿದರಿಂದ, ಟೀಪು ಉನ್ಮತ್ತನಾಗಿ ಮತ್ತೆ ತಲೆಯೆತ್ತಿದನು. ಅವನ ಉರವಣಿಗೆಯು ಹೆಚ್ಚಾಯಿತು. ಆಗ ಇಂಗ್ಲೀಷ-ನಿಜಾಮರು ಆತನನ್ನು ಚನ್ನಾಗಿ ದಂಡಿಸಬೇಕೆಂದು ಇಸವಿ ಸನ್ನ ೧೭೯೮ರಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡರು. ಆ ಕಾಲಕ್ಕೆ ಇಂಗ್ಲೀಷರ ವಕೀಲನು ಪುಣೆಯಲ್ಲಿ ಇದ್ದನು. ಆತನು ಆ ಸ್ವಾರಿಯ ವಿಚಾರದಲ್ಲಿ ಪೇಶವೆ ಸರಕಾರದವರು ಕೂಡಿಕೊಳ್ಳಬೇಕೆಂದು ಬಿನ್ನವಿಸಿದನು. ಅದೇ ಸುಮಾರಕ್ಕೆ ಬಲಾಢ್ಯನಾದ ಭಾವುಸಾಹೇಬನು ಸಾತಾರೆಯ ಬಂಡಾಯವನ್ನು ಮುರಿದು ಯಶಸ್ವಿಯಾಗಿ ಬಂದಿದ್ದನು; ನಾನಾಫಡಣವೀಸನ ಕಾರಭಾರಕ್ರಮವು ದರಬಾರದಲ್ಲಿ ಅದೇ ಪುನಃ ಪ್ರಾರಂಭವಾಗಿತ್ತು. ಶೂರಪುರುಷನನ್ನು ಅಪರಂಪಾರವಾದ ಸೈನ್ಯದೊಂದಿಗೆ ಯುದ್ಧಕ್ಕೆ ಕಳುಹಿಸಿಕೊಡುವದರಿಂದ ಆತನು ಸುಪ್ರಸನ್ನನಾಗುವನು. ಆತನ ಮುಖಮುದ್ರೆಯು ವಿಕಾಸಗೊಳ್ಳುವದು. ಆದ್ದರಿಂದ ಭಾವುವಿನ ಸ್ನೇಹವನ್ನು ಮೊದಲಿನಂತೆ ಸಂಪಾದಿಸುವ ಉದ್ದೇಶದಿಂದ ನಾನಾಫಡಣವೀಸನು ಆ ದಾಳಿಯ ದಂಡನಾಯಕತ್ವ

ವನ್ನು ಆ ಪಟವರ್ಧನ ವೀರಾಗ್ರಣಿಯ ಕಡೆಗೆ ಕೊಡಿಸಬೇಕೆಂದು ಯೋಚಿಸಿದನು. ಆದರೂ ಯಾರೊಡನೆ ತಾನು ನಡುವೆ ವೈರಭಾವದಿಂದ ನಡೆದನೋ, ಆತನೊಡನೆ ಒಮ್ಮಿಂದೊಮ್ಮೆ ಸ್ನೇಹವನ್ನು ಬೆಳೆಯಿಸುವ ಬಗೆ ಯಾವದೆಂದು ಅಭಿಮಾನಶಾಲಿಯಾದ ನಾನಾನು ವಿಚಾರನಿಮಗ್ನನಾದನು. ಮೊಟ್ಟ ಮೊದಲು ನಾನಾನು ಭಾವುಸಾಹೇಬನ ಹಿರೇ ಮಗನಾದ ಅಪ್ಪಾಸಾಹೇಬನ ಕಡೆಗೆ ಈ ಕೆಲಸವನ್ನು ಒಪ್ಪಿಸಬೇಕೆಂದು ಹಂಚಿಕೆ ಹಾಕಿದನು. ಆದರೆ ಅಪ್ಪಾಸಾಹೇಬನು ನಿಸ್ಸೀಮ ಪಿತೃಭಕ್ತನು; ಆತನು ಪಿತನ ಪ್ರಾಣಕ್ಕಾಗಿ ಸ್ವಂತ ಪ್ರಾಣವನ್ನು ಕೊಡಲು ಸರ್ವದಾ ಸಿದ್ಧನು; ಅಂದಬಳಿಕ ಆ ಪುತ್ರಶ್ರೇಷ್ಠನು ನಿಜ ಜನಕನ ಅವಮಾನವಂಗೈದು, ತಾನು ಆ ಸ್ವಾರಿಯ ಸರ್ವಾಧಿಪತ್ಯವನ್ನು ಸ್ವೀಕರಿಸುವ ಹವ್ಯಾಸಕ್ಕೆ ಹ್ಯಾಗೆ ಬೀಳುವನು? ಪರಶುರಾಮಭಾವುವಿಗೆ ನಾನಾನ ಅಂತಸ್ಥ ಉದ್ದೇಶವು ಅವಗತವಾಯಿತು; ಅವರಿಬ್ಬರು ಪೂರ್ಣ ಪ್ರೇಮದೊಡನೆ ಪರಸ್ಪರ ಭೆಟ್ಟಿಯಾದರು. ಗತಗೋಷ್ಠಿಯನ್ನು ಮರೆತು ಅವರಿಬ್ಬರು ಮುಂಚಿನಂತೆ ಜೀವದ ಗೆಳೆಯರಾದರು. “ಧಾರವಾಡದ ಕಿಲ್ಲೆಯನ್ನೂ, ಕರ್ನಾಟಕದೊಳಗಿನ ಇನ್ನೂ ಕೆಲವು ಜಹಗೀರಗಳನ್ನೂ ಕೊಡಿಸುವೆನು.” ಎಂದು ನಾನಾನು ವಚನ ಕೊಟ್ಟದ್ದರಿಂದ ಪರಶುರಾಮಪಂತನು ಆ ಕಾರ್ಯವನ್ನು ಸ್ವೀಕರಿಸಿದನು.

ಕಾಳಗದ ಜೋಡಣೆಯಾಯಿತು. ಸಕಲ ಸ್ವಾರರು, ಸರದಾರರು, ಶಿಲೇದಾರರು ಕೂಡಿದರು. ಶ್ರೀರಂಗಪಟ್ಟಣದ ಹಿಂದಿನ ದಾಳಿಯಲ್ಲಿ ಇಂಗ್ಲೀಷರ ಕಡೆಯ ಲಿಟಲ್ಲಸಾಹೇಬನು ಮರಾಠಾ-ದಂಡಿನ ಸಹಾಯಕ್ಕೆ ಬಂದಿದ್ದನು. ಈಗೂ ಅದೇ ಸಾಹೇಬನು ಇಂಗ್ಲೀಷ ಪಲಟಣಸಹಿತ ಭಾವುವಿನ ಬೆಂಬಲಕ್ಕೆ ಬಂದು ಕೂಡಿದನು. ಇನ್ನು ಶ್ರೀಮಂತರ ಆಜ್ಞೆಯಾಗುವದೊಂದೇ ತಡ; ಭಾವು ಸೈನ್ಯಸಹಿತ ಪುಣೆಯಿಂದ ಹೊರಡತಕ್ಕವನು. ಆದರೆ ಪೇಶವೆಯು ಅಪ್ಪಣೆಯನ್ನು ಬೇಗ ಕೊಡಲೊಲ್ಲನು. ಬಾಜೀರಾಯನು ಬಹಿರಂಗದಲ್ಲಿ ಇಂಗ್ಲೀಷರ ವಕೀಲರಿಗೆ “ನಾನು ನಿಮ್ಮ ಬೆಂಬಲಕ್ಕೆ ದಂಡು ಕಳುಹುವೆನು.” ಎಂದು ಹೇಳಿ, ‘ಆಡುವದೊಂದು, ಮಾಡುವದು ಮತ್ತೊಂದು’ ಎಂಬಂತೆ ಒಳಗಿಂದೊಳಗೆ ಟೀಪುವಿನ ವಕೀಲನೊಡನೆ ಒಳಸಂಚು ನಡಿಸಿದ್ದನು. ವಾಕ್ಪರಿಪಾಲನಾ-ಗುಣಹೀನನಾದ ಬಾಜೀರಾಯನ ದುಷ್ಟವಿಚಾರವು ಇಂಗ್ಲೀಷರಿಗೆ ತಿಳಿಯಿತು. ಅದರಿಂದ ಅವರು ಪೇಶವೆ

ಸೈನ್ಯದ ನೆರವಿನ ಆಶೆದೊರೆದು, ನಿಜಾಮನ ದಂಡಿನೊಡನೆ ಶ್ರೀರಂಗಪಟ್ಟಣದ ಮೇಲೆ ದೌಡುಮಾಡಿದರು. ಅತ್ತ ಟೀಪು-ಇಂಗ್ಲೀಷರ ನಡುವೆ ಭಯಂಕರ ಕಾಳಗವೆಸಗಿತು; ಅದರಲ್ಲಿ ಸುಲ್ತಾನನು ಸತ್ತನು. ಆತನ ರಾಜ್ಯವು ಇಂಗ್ಲೀಷರ ಸ್ವಾಧೀನವಾಯಿತು. ಇವೆಲ್ಲ ಕಾರಣಗಳಿಂದ ಟೀಪುವಿನ ಅಂತ್ಯವು ನಮ್ಮ ಕಥೆಯೊಡೆಯನ ಕೈಯ್ಯಿಂದ ಆಗಲಿಲ್ಲ.

ಹೀಗೆ ಶ್ರೀರಂಗಪಟ್ಟಣದ ದಾಳಿಯ ಕೆಲಸವು ಅಷ್ಟಕ್ಕೆ ನಿಂತಿತು, ಆಗ ನಾನಾಫಡಣವೀಸನು ಭಾವೂನನ್ನು ಮತ್ತೊಂದು ಮಹತ್ವಕಾರ್ಯಭಾಗಕ್ಕೆ ನಿಯೋಜಿಸಿದನು. ಕೊಲ್ಹಾಪುರಕರನು ಭಾವುವಿನ ಕಡು ಹಗೆಯು, ಪೇಶವೆಸರಕಾರದ ಪುರಾತನ ವೈರಿಯು. ಇಂಥ ಕೊಲ್ಹಾಪುರದ ಅರಸನ ಮೇಲೆ ಪರಶುರಾಮಭಾವು ಆ ದಾಳಿಯನ್ನು ಮಾಡಬೇಕಾಗಿತ್ತು. ಆಗ ದಕ್ಷಿಣಮಹಾರಾಷ್ಟ್ರದೇಶದಲ್ಲಿ ಕರವೀರಕರನು ಭಯಂಕರ ಪುಂಡಾಟವನ್ನು ನಡೆಸಿದ್ದನು. ಪೇಶವೆರಾಜ್ಯದ ದಕ್ಷಿಣದಿಕ್ಕಿನ ಪ್ರದೇಶವನ್ನು ತನ್ನ ಬಾಯಿಯಲ್ಲಿ ಹಾಕಿಕೊಳ್ಳಬೇಕೆಂದು ಆತನು ಬಕಪಕ್ಷಿಯಂತೆ ಬಹುದಿವಸದಿಂದ ಜಪಮಾಡುತ್ತಿದ್ದನು. ೧೭೯೩ನೆಯ ಇಸವಿಯಲ್ಲಿ ಪರಶುರಾಮಭಾವು ಆತನನ್ನು ಚನ್ನಾಗಿ ಮೆತ್ತಗೆ ಮಾಡಿದ್ದನು; ಆದ್ದರಿಂದ ಕೆಲವುಕಾಲ ಆತನ ಉಪಟಳವು ಕಡಿಮೆಯಾಗಿತ್ತು. ಆದರೆ ಮುಂದೆ ಭಾವು ಪುಣೆಗೆ ಹೋದನು. ಮರಾಠಾ ಸರದಾರರು ಖರ್ಡೆಯ ಕಾಳಗದಲ್ಲಿ ತೊಡಕಿಕೊಂಡರು. ಬಳಿಕ ತುಸುದಿನಗಳಲ್ಲಿ ಶ್ರೀಮಂತ ಸವಾಯಿಮಾಧವರಾಯರು ಕೈಲಾಸವಾಸಿಯಾಗಲು, ಸರದಾರರಲ್ಲಿಯೂ, ಪ್ರಧಾನರಲ್ಲಿಯೂ ಒಳಜಗಳವು ಬೆಳೆಯಿತು. ಆದದರಿಂದ ಕೊಲ್ಹಾಪುರಕರನಿಗೆ ಮತ್ತೆ ಹೊತ್ತುಸಾಧಿಸಿತು. ಆತನು ಪುನಃ ಪುಂಡಾಟಹೂಡಿದನು. ನಾನಾನು ಮಹಾಡದಲ್ಲಿದ್ದಾಗ್ಗೆ ಆತನು ಕೊಲ್ಹಾಪುರದ ಅರಸನಿಗೆ ಪಟವರ್ಧನ ಸರದಾರರ, ಮುಖ್ಯವಾಗಿ ಭಾವೂಸಾಹೇಬನ ಜಹಗೀರಗಳನ್ನು ಸುಲಿಯಲು ಚುಚ್ಚಿಕೊಟ್ಟಿದ್ದನು; ಇದನ್ನು ವಾಚಕರು ನೆನಪಿನಲ್ಲಿಟ್ಟಿರಬಹುದು. ನಾನಾನ ಕರ್ಣಮಂತ್ರೋಪದೇಶದಿಂದ ಅರಸನು ಮತ್ತಿಷ್ಟು ಉಬ್ಬಿದನು. ಆತನ ಹಾವಳಿಯು ಮುಂಚಿಗಿಂತ ಹೆಚ್ಚಾಯಿತು. ಬಹುದಿನದಿಂದ ಪಟವರ್ಧನ ಸರದಾರರ ಸ್ವಾಧೀನದಲ್ಲಿದ್ದ ಭುದರಗಡಕೋಟೆಯನ್ನು ಆತನು ಶಳಕೊಂಡನು; ಚಿಕ್ಕೋಡಿ, ಮನವಳ್ಳಿ ಇವೆರಡು ಪ್ರಾಂತಗಳು ಅವನ ಹಸ್ತಗತವಾದವು. ಆತನು ಹುಬ್ಬಳ್ಳಿ

ಇತ್ಯಾದಿ ಪಟ್ಟಣಗಳನ್ನು ಸುಲಿದು ಶರೆಸೂರಿಮಾಡಿದನು. ಮತ್ತು ವಲ್ಲಭಗಡ ಕಿಲ್ಲೆಯನ್ನು ಹಿಡಕೊಂಡು ಅಲ್ಲಿ ತನ್ನ ವಿಜಯದರ್ಶಕ ನಿಶಾನೆಯನ್ನು ನಿಲ್ಲಿಸಿದನು. ಪರಶುರಾಮಭಾವು ಮತ್ತು ಆತನ ಶೂರ ಮಕ್ಕಳು ಕೊಲ್ಹಾಪುರಕರನನ್ನು ಆಗಾಗ್ಗೆ ಬಳಿಕಾಗಿ ಹಣಿದು ಹಣ್ಣಿಗೆ ತಂದಿದ್ದರು. ಅದರಿಂದ ಆತನು ಅವರ ಮೇಲೆ ಹಲ್ಲುಕಡಿಯುತ್ತಿದ್ದನು. ಅವರ ಹೆಸರು ಎತ್ತಿದ ಮಾತ್ರದಿಂದ ಅವನ ಸರ್ವಾಂಗವು ಸಂತಪ್ತವಾಗುತ್ತಿತ್ತು. ಅವನ ಮೇಲಿನ ಸೇಡು ಯಾವಾಗ ತೀರಿಸಿಕೊಂಡೇನೆಂದು ಆತನು ಹವಣಿಸುತ್ತಿದ್ದನು. ಪರಶುರಾಮಭಾವೂಗೆ ಕಾರಣವಿಲ್ಲದೆ ಕಾರಾಗೃಹವಾಸವು ಪ್ರಾಪ್ತವಾಗಿ ಆತನು ಮಾಂಡಣಗಾಂವದಲ್ಲಿ ಸೆರೆಯಾಳಾಗಿದ್ದನು. ಆಗ್ಗೆ ಕರವೀರಕರನಿಗೆ ಆದ ಆನಂದವನ್ನು ಬಣ್ಣಿಸಲಳವಲ್ಲ. ಅವನು ಈ ಭೂತಲದಲ್ಲಿ ತನ್ನನ್ನು ಎದುರಿಸುವ ಪಟುಭಟರು ಯಾರೂ ಇಲ್ಲವೆಂದು ತಿಳಿದನು. ವಿಪತ್ತಿಗೆ ಗುರಿಯಾದ ತನ್ನ ಪ್ರಚಂಡವೈರಿಯ ಸೇಡುತೀರಿಸಿಕೊಳ್ಳಬೇಕೆಂದು ಟೊಂಕಕಟ್ಟಿದನು. ತಾಸಗಾಂವಿಯು ಭಾವುವಿನ ಅತ್ಯಂತ ಪ್ರೀತಿಯ ವಸತಿಸ್ಥಳವು. ಕೊಲ್ಹಾಪುರಕರನು ಆ ನಗರವನ್ನು ಹಲ್ಲಾಮಾಡಿ ಸುಲಿದುಬಿಟ್ಟನು. ಇಷ್ಟಕ್ಕೆ ಆತನ ಸಿಟ್ಟು ಇಳಿಯದೆ, ಆತನು ಭಾವೂಸಾಹೇಬನ ಅರಮನೆಯನ್ನು ಸುಡಿಸಿ ನೆಲಸಮಮಾಡಿಸಿದನು. ಸಂಬದಲಾಗ ಕಿಲ್ಲೆಯನ್ನು ಕೈವಶಮಾಡಿಕೊಂಡದ್ದಲ್ಲದೆ ಭಾವುಸಾಹೇಬಗಂಕಿತವಾದ ಗೋಕಾಕ ಮಹಾಲಿನ ಮೇಲೆ ಸ್ವಾರೀ ಮಾಡಿ ಒಂದು ಲಕ್ಷ ಇಪ್ಪತ್ತುಸಾವಿರ ರೂಪಾಯಿಗಳ ಕರಭಾರವನ್ನು ಎತ್ತಿದನು. ಈ ಪ್ರಕಾರ ಇಸವಿ ಸನ್ನ ೧೭೯೩ ರಲ್ಲಿ ಕರವೀರಕರನು ನಾನಾಬಗೆಯ ಉಪಟಳವನ್ನು ಒತ್ತರದಿಂದ ನಡೆಸಿದ್ದನು. ಆಗಿನ ಕಾಲಕ್ಕೆ ಪೇಶವೆ ಸರದಾರವೀರನಾದ ಧೊಂಡೋಪಂತ * ಗೋಖಲೆಯು ಕರ್ನಾಟಕದ ಸುಭೇದಾರನಾಗಿದ್ದನು. ಆತನು ಒಂದೆರಡು ಸಾರೆ ಕೊಲ್ಹಾಪುರಕರನ ಕೂಡ ಕಾದಿದನು. ಆದರೆ ಅವನ ಆಟವು ಸಾಗಲಿಲ್ಲ.

ಈ ಪ್ರಕಾರ ಕೊಲ್ಹಾಪುರದ ಅರಸನ ಪ್ರತಾಪಪ್ರಕಾಶವು ಕರ್ನಾಟಕ ಪ್ರಾಂತದಲ್ಲಿ ಪಸರಿಸಿತು; ಅವನು ತನ್ನ ಮನಬಂದಂತೆ ನಡೆಯತೊಡ

---

* ಈ ಬ್ರಾಹ್ಮಣ ಸರದಾರನನ್ನು ದುಂಡಜಿವಾಘನೆಂಬುವ ಪುಂಡನು ಕೊಂದನು; ಮುಂದೆ ಆ ವಾಘನನ್ನು ಬಾಪು ಗೋಖಲೆಯು ಕೊಂದು ಕಕ್ಕನನ್ನು ಸಂಹರಿಸಿದ ಸೇಡು ತೀರಿಸಿಕೊಂಡನು.

ಗಿದನು. ಆಗ ಪೇಶವೆಯರ ಕೆಲವು ದ್ವೇಷಿಕ ಜನರು ಅವನನ್ನು ಬಂದು ಕೂಡಿದರು.

ಪರಶುರಾಮಭಾವು ಸಾತಾರೆಯ ಬಂಡಾಯವನ್ನು ಮುರಿಯಲು, ಅಲ್ಲಿಯ ಸೇನಾಪತಿಯಾದ ಚತುರಸಿಂಗನು ರಣಾಂಗಣದಿಂದ ಓಡಿಬಂದು ಕೊಲ್ಹಾಪುರದ ಮಹಾರಾಜನನ್ನು ಕೂಡಿಕೊಂಡಿದ್ದನು. ಆತನು ಮಹಾರಾಜನ ಆಶ್ರಯದಿಂದ ರಾಸ್ತೆ, ಪ್ರತಿನಿಧಿ ಇತ್ಯಾದಿ ಪೇಶವೆಸರದಾರರಿಗೆ ಗಂಟುಬಿದ್ದಿದ್ದನು. ಅವನು ಅವರ ಮೇಲೆ ಒಮ್ಮಿಂದೊಮ್ಮೆ ಮುಗಿಬಿದ್ದು ಅವರ ಕಡೆಯ ಅಸಂಖ್ಯ ಜನರನ್ನು ರಣದೇವತೆಗಾಹುತಿಕೊಟ್ಟು ಅವರನ್ನು ಜರ್ಜರವಮಾಡಿದ್ದನು.

ಈ ಪ್ರಕಾರ ಬುನಾದಿಯ ಬಲಾಢ್ಯವೈರಿಯಾದ ಕೊಲ್ಹಾಪುರಕರನ ಹಾವಳಿಯು ಅಬಾಧಿತವಾಗಿ ಸಾಗುತ್ತಿರಲು, ಆ ಬಗ್ಗೆ ಪೇಶವೆ ಸರಕಾರದವರು ವಿಚಾರಮಾಡುವದು ಅತ್ಯಗತ್ಯವೆನಿಸಿತು. ಅವರು ಆ ದಾಳಿಯ ದಂಡನಾಯಕತ್ವವನ್ನು ಪರಶುರಾಮಭಾವುವಿನ ಕಡೆಗೆ ಒಪ್ಪಿಸಿಕೊಟ್ಟರು. ಶಿಂದೇ, ಹೋಳಕರ ಮೊದಲಾದ ಸರದಾರರು ೩೦ ಸಾವಿರ ಸ್ವಾರರನ್ನೂ ೬ ಸಾವಿರ ಪಾಯದಳವನ್ನೂ ಕೂಡಿಕೊಂಡು ಭಾವೂನ ಬೆಂಬಲಕ್ಕೆ ಬರಬೇಕೆಂದು ನಿರ್ಧರವಾಯಿತು. ಹೀಗೆ ಆ ಸ್ವಾರಿಯ ವಿಚಾರವು ನಿರ್ಣಯವಾದಾಗ್ಗೆ ಮಳೆಗಾಲವಿತ್ತು. ಆದ್ದರಿಂದ ಪರ್ಜನ್ಯದಿವಸಗಳು ಮುಗಿಯುವ ಪೂರ್ವದಲ್ಲಿ ಶಿಂದೆ, ಹೋಳಕರರ ಸಹಾಯಿಕ ಸೈನ್ಯವು ಬರಲಿಕ್ಕೆ ಕೆಲವು ಅನಾನುಕೂಲತೆಗಳಿದ್ದವು. ಪ್ರಯುಕ್ತ "ಪರಶುರಾಮಭಾವು ಕೊಲ್ಹಾಪುರಕರನ ಮೇಲೆ ಸಾಗಿ ಮಾತ್ರ ಹೋಗಬೇಕು; ಆದರೆ ಇತರ ಸರದಾರರ ನೆರವು ಬಾರದಲೆ ಯುದ್ಧವನ್ನು ಪ್ರಾರಂಭಿಸುವ ಪ್ರಸಂಗವನ್ನು ತಂದುಕೊಳ್ಳದೆ, ಕೊಲ್ಹಾಪುರಕರನ ಹಾವಳಿಯನ್ನು ಆದಷ್ಟು ತಗ್ಗಿಸುತ್ತ ನಡೆಯಬೇಕು" ಎಂದು ಶ್ರೀಮಂತ ಸರಕಾರದವರು ಆ ಸ್ವಾರಿಯ ಸೇನಾನಿಯಾದ ಭಾವೂಗೆ ಆಜ್ಞಾಪಿಸಿ ಆತನನ್ನು ಮುಂದೆ ಕಳುಹಿಸಿಕೊಟ್ಟರು.

ಕೊಲ್ಹಾಪುರಕರನು ಪರಶುರಾಮಭಾವೂಗೆ ಅನೇಕ ಕಷ್ಟಗಳನ್ನುಂಟುಮಾಡಿದ್ದನು; ಇದಲ್ಲದೆ ಪೇಶವೆ ಸರಕಾರದ ವಿರುದ್ಧ ಅನಂತ ಅಪ

ರಾಧಗಳನ್ನು ಮಾಡಿದ್ದನು. ಆದದರಿಂದ ಭಾವು ಆತನ ಮೇಲೆ ಸಿಟ್ಟುಬೆಂಕಿಯಾಗಿದ್ದನು. ಇಂಥ ಪುರಾತನ ಪ್ರಬಲವೈರಿಗೆ ಚಿರಸ್ಮರಣೀಯವಾದ ಶಾಸನವನ್ನು ಮಾಡುವ ಯೋಗವು ಯಾವಾಗ ಪ್ರಾಪ್ತವಾದೀತೆಂದು ಆತನು ಹವಣಿಸುತ್ತಿದ್ದನು. ಶ್ರೀಮಂತರ ಅನುಜ್ಞೆಯಾಗುತ್ತಲೆ, ಆತನು ಅತ್ಯಂತ ಆನಂದವನ್ನು ಹೊಂದಿದನು. ಸಮರಾಂಗಣದಲ್ಲಿ ವೈರಿಯನ್ನು ಯಾವಾಗ ಎದುರಿಸುವೆನೆಂಬ ಕುತೂಹಲವು ಆತನಲ್ಲಿ ಉತ್ಪನ್ನವಾಯಿತು. ಆದರಿಂದ ಅವನು ಕೂಡಲೆ ದಂಡಿನೊಡನೆ ಪುಣೆಯಿಂದ ಹೊರಟು, ಇತರ ಮರಾಠಾ ಸರದಾರರ ನೆರವಿನ ಮಾರ್ಗನೋಡದೆ ಕರವೀರಕರರ ರಾಜ್ಯದ ಸರಹದ್ದಿಗೆ ಬಂದು ತಲ್ಪಿದನು. ಹಸಿದು ತಳಮಳಿಸುವ ಹುಲಿಯು, ದನಕರು, ಚಿಗರಿ, ಮೊಲ ಮುಂತಾದವುಗಳಿರುವ ಆಯಮೆಟ್ಟಿನ ಸ್ಥಳಕ್ಕೆ ಬಂದಬಳಿಕ ಅದು ಸಮಾಧಾನಗೊಳ್ಳದೆ, ಅವು ಇರತಕ್ಕ ಮೇಳೆ, ಹೊದರುಗಳನ್ನು ಹ್ಯಾಗೆ ಮುರಿದು ಬಿಡುವದೋ ಅದರಂತೆ ಕೊಲ್ಹಾಪುರಕರರ ಸೀಮಾಂತರಕ್ಕೆ ಬಂದ ಕೂಡಲೆ, ಕ್ರೋಧಾನಲಸಂತಪ್ತನಾದ ಪರಶುರಾಮಭಾವು, ಸಹಾಯಕ ಸೈನ್ಯವು ಬಂದವಿನಃ ಕಾಳಗಪ್ರಸಂಗವನ್ನು ತಂದುಕೊಳ್ಳಕೂಡದೆಂದು ಶ್ರೀಮಂತ ಸರಕಾರದವರಿತ್ತ ಸಾವಧತನದ ಸೂಚನೆಯ ಕಡೆಗೆ ವಿಶೇಷ ಲಕ್ಷ್ಯಕೊಡದೆ ರಿಪುಸಂಹಾರವನ್ನೇ ಪ್ರಾರಂಭಿಸಿದನು. ಅವನು ಒತ್ತಟ್ಟಿಗೆ ಸಮಾಧಾನದಿಂದ ಕೂಡ್ರನು. ಚಳಿ-ಮಳಿ-ಗಾಳಿಗಳ ಪರಿವೆಯಿಲ್ಲದೆ, ಕರವೀರಕರರ ಎಲ್ಲೆಯ ಕಿಲ್ಲೆಗಳನ್ನು ಹಿಡಕೊಳ್ಳಲಾರಂಭಿಸಿದನು. ಘಟಪ್ರಭಾ-ಮಲಪ್ರಭಾ ಹೊಳೆಗಳ ನಡುವಿನ ಯಾವತ್ತೂ ಕೋಟೆಗಳು ಪುನಃ ಆತನ ಕೈವಶವಾದವು. ಸುರಪುರ, ಎಲಬುರ್ಗಿ ಪ್ರಾಂತಗಳಲ್ಲಿ ಯೋಗ್ಯ ಅಮಲು ಕೂಡ್ರಿಸಿ, ಆತನು ಗೋಕಾಕದ ಮೇಲಿಂದ ಹಾಯ್ದು ಚಿಕ್ಕೋಡಿಯ ಬಳಿಯಲ್ಲಿ ಪಾಳಯ ಊರಿದನು. ಅನೇಕ ಸ್ಥಳಗಳಲ್ಲಿ ಕೊಲ್ಹಾಪುರಕರರನು ಪರಾಜಿತನಾದನು. ಆಗ ಅವನು ಸೋತು ಮುಂಗಾಣದೆ, ರಾಜಧಾನಿಯ ಹಾದೀ ಹಿಡಿದನು. ಆದರೂ ಆತನು ಪೂರಾ ನಿರಾಶಿತನಾಗಿದ್ದಿಲ್ಲ. ಮಹಾರಾಜನು ತನ್ನ ಶೂರ ದಿವಾಣನಾದ ರತ್ನಾಕರಪಂತನ ಸಹಾಯದಿಂದ ಮತ್ತೆ ಹೊಸದಂಡು ಕೂಡಿಸಿದನು. ಚತುರಸಿಂಗನು ನೂತನ ಸೈನಿಕರಿಗೆ ಯುದ್ಧ ವಿದ್ಯೆಯನ್ನು ಕಲಿಸಿದನು. ಹೀಗೆ ಅಲ್ಪಕಾಲದಲ್ಲಿ ಆಹವನಿಪುಣರಾದ ೧೬,೦೦೦ ಜನರ ಸೈನ್ಯವು ಸಿದ್ಧವಾಯಿತು. ಆಗ ಅರಸನು “ಪರಶುರಾಮ

ಭಾವೂನ ನೆರವಿಗೆ ಇತರ ಮರಾಠಾ ಸರದಾರರು ಬಂದು ಕೂಡಿದರೆಂದರೆ ಅವನು ನಮಗೆ ಹಣಿಯನು." ಎಂದು ಬಗೆದು ನಡುಮಳೆಗಾಲದಲ್ಲಿಯೇ ಆತನಿಗೆ ಗಂಟುಬೀಳಬೇಕೆಂದು ಯೋಚಿಸಿದನು. ಆ ಪ್ರಕಾರ ಕೊಲ್ಹಾಪುರಕರನು ರತ್ನಾಕರಪಂತ ದಿವಾಣ, ಚತುರಶಿಂಗ ಇತ್ಯಾದಿ ಶೂರ ಸರದಾರರೊಡಗೊಂಡು, ಹೊಸದಾಗಿ ತಿದ್ದಿ ತಯಾರಾದ ದಂಡಿನೊಡನೆ ರಾಜಧಾನಿಯಿಂದ ಹೊರಟನು. ಆ ದಂಡು ವೇದಗಂಗಾ, ದೂದಗಂಗಾ ನದಿಗಳನ್ನು ದಾಟಿ ಹವಿೂಪವಾಡದ ಬಳಿಗೆ ಬಂತು. ಅಲ್ಲಿಂದ ಮೂರು ನಾಲ್ಕು ಹರದಾರಿಯ ಮೇಲೆ ಪರಶುರಾಮಭಾವು ತನ್ನ ಸೈನ್ಯದೊಂದಿಗೆ ಇಳಕೊಂಡಿದ್ದನು. ಕೊಲ್ಹಾಪುರಕರನು ಯುದ್ಧದ ಮುಸಲತ್ತು ಕೆಡಬಾರದೆಂದು ಭಾವೂನಕಡೆಯ ಪಾಂಢರೆ ಮೊದಲಾದ ಶಿಲೇದಾರರನ್ನು ಮೊದಲೆ ಒಡಕೊಂಡಿದ್ದನು.

ಸರ್ವಸಿದ್ಧತೆಯಾದಬಳಿಕ ಕರವೀರಕರನ ಪ್ರಚಂಡಸೈನ್ಯವು ಭಾವೂನ ದಂಡಿನಮೇಲೆ ಸಾಗಿಬರಲು ಹೊರಟಿತು. ಆ ಸುದ್ದಿಯು ಭಾವುವಿಗೆ ಹತ್ತಿದಕೂಡಲೆ, ಆತನು ಕಾಳಗಕ್ಕೆ ಸಜ್ಜಾದನು. ಕೊಲ್ಹಾಪುರಕರನು ತನ್ನ ಪಾಳ್ಯ ಬಿಟ್ಟು ಹೊರಡತಕ್ಕವನು; ಅಷ್ಟರಲ್ಲಿ ಕೆಲವು ಅಪಶಕುನಗಳಾದುದರಿಂದ, ಆತನು ಅಂದಿನದಿವಸ ಹೊರಡಲಿಲ್ಲ; ಇದರಂತೆ ಮತ್ತೊಮ್ಮೆ ಆಯಿತು. ಹೀಗೆ ಎರಡುಸಾರೆ ಆದದರಿಂದ ಪರಶುರಾಮಭಾವುಗೆ ಕೊಲ್ಹಾಪುರಕರನ ಇಂಗಿತವು ತಿಳಿಯಲಿಲ್ಲ. ತನಗೆ ಭಯವನ್ನು ತೋರಿಸುವದಕ್ಕೆಂದು ಆತನು ಹೀಗೆ ಮಾಡುತ್ತಿರಬಹುದೆಂದು ಗ್ರಹಿಸಿ, ಭಾವು ಸ್ವಲ್ಪ ಮೈಮರೆತನು. ತರುವಾಯ ಮಹಾರಾಜನು ಭಾದ್ರಪದ ವಧ ತೃತೀಯಾ ದಿವಸ ದರಬಾರ ಕರೆದನು. ಸರದಾರ, ಮಾನಕರಿ ಇತ್ಯಾದಿ ಜನರು ಬಂದು ಕೂಡಿದರು. ಆಗ ಪ್ರಾತಃಕಾಲಕ್ಕೆ ಯುದ್ಧವನ್ನು ಪ್ರಾರಂಭಿಸಬೇಕೆಂದು ನಿರ್ಣಯವಾಯಿತು. ಪರಶುರಾಮಪಂತಗೆ ಈ ವಿಚಾರಸಮಾಚಾರವಾದರೂ ಗೊತ್ತಾಯಿತು; ಆದರೆ ಅವನು ಅದು ಮುಂಚಿನಂತೆ ಹುಸಿ ಮುಸಲತ್ತು ಇರಬೇಕೆಂದು ನೆನಿಸಿ, ಆ ಬಗ್ಗೆ ಸಾಕಷ್ಟು ಲಕ್ಷ್ಯಕೊಡಲಿಲ್ಲ. ಪ್ರಾತಃಕಾಲವಾದ ಬಳಿಕ ಮಹಾರಾಜನು ದಂಡಿನೊಡನೆ ತನ್ನ ಪಾಳ್ಯಬಿಟ್ಟು ಹೊರಡತಕ್ಕವನೆಂಬುವ ಸುದ್ದಿಯು ಭಾವುಸಾಹೇಬಗೆ ಹತ್ತಿತ್ತು. ಆಗ್ಗೆ ನಮ್ಮ ಧಿರೋದಾತ್ತ

ವೀರಶಿರೋಮಣಿಯಾದ ಪರಶುರಾಮಭಾವು ದಾಜಿಬಾ † ಲಿಮಯೇ ಎಂಬುವನ ಸಂಗಡ ಚದುರಂಗವಾಡುತ್ತಿದ್ದನು. ಶಿಲೇದಾರಜನರು ಹಿಂದಿನ ಪಗಾರದ ಬಾಕಿಯ ಬಗ್ಗೆ ಗಂಟುಬಿದ್ದಿದ್ದರು; ತೋಫುಖಾನೆಯ ಎತ್ತುಗಳು ಹುಲ್ಲು ಮೇಯಲಿಕ್ಕೆ ಹೋಗಿದ್ದವು. ಹಗೆಗಳು ಹೊರಟು ಬರುವ ಸುದ್ದಿಯು ಹತ್ತುತ್ತಲೆ, ಮರಾಠಾಸೈನಿಕರು ಯುದ್ಧಸಿದ್ಧತೆಯನ್ನು ಬಳ್ಳೇ ಬತ್ತರದಿಂದ ಮಾಡಿಕೊಂಡರು. ಬುದ್ಧಿ-ಬಲದ ಸುಳ್ಳುಕಾಳಗವನ್ನು ಅಷ್ಟಕ್ಕೆ ಬಿಟ್ಟು, ಪರಶುರಾಮಭಾವು ನಿಜವಾದ ರಣಕಂದನಕ್ಕೆ ಸಿದ್ಧನಾದನು. ಆತನು ಶಿಲೇದಾರಜನರಿಗೆ ತಿಳಿಹೇಳಿ ಅವರನ್ನು ಸಂತವಿಸಿದನು; ತೋಫುಖಾನೆಯ ಎತ್ತುಗಳನ್ನು ಬೇಗನೆ ತರಿಸಿಕೊಂಡು, ತೋಫುಖಾನೆಯನ್ನು ಸಜ್ಜುಗೊಳಿಸಿದನು. ಇಷ್ಟೆಲ್ಲವಾಗಲು ಎರಡು ಪ್ರಹರಗಳ ಹೊತ್ತು ಏರಿತು. ಜಗತ್ತಿಗೆ ನೇತ್ರಸ್ವರೂಪಿಯಾಧ ಸೂರ್ಯನಾರಾಯಣನು ಸಂಪೂರ್ಣ ಪ್ರಕಾಶದಿಂದ ವಿರಾಜಿಸಲಾರಂಭಿಸಿದನು. ಅತ್ತ ಕೊಲ್ಹಾಪೂರಕರನು ಸೈನ್ಯದೊಡನೆ ನಿಪ್ಪಾಣಿಯ ಸಮೀಪಕ್ಕೆ ಬಂದು ಅಲ್ಲಿಯೇ ಬಂದುಕ್ಷಣ ವಿಶ್ರಾಂತಿಯನ್ನು ತಕ್ಕೊಂಡು ಮುಂದೆ ಅರ್ಧ ಹರದಾರಿಯ ಹಾದೀ ಬಂದು, ಪಟ್ಟಣಕುಡಿಯ ಹತ್ತರ ಕಾಳಗಕ್ಕೆ ಅಣಿಯಾಗಿ ನಿಂತುಕೊಂಡನು.

ಇತ್ತ ಪರಶುರಾಮಭಾವು ತನ್ನ ಸೈನ್ಯದ ವ್ಯವಸ್ಥೆಯನ್ನು ಮಾಡಿಕೊಂಡು, ತನ್ನ ಮಕ್ಕಳಾದ ಅಪ್ಪಾಸಾಹೇಬ, ದಾಜೀಸಾಹೇಬರಕಡೆಗೆ ಬಂದೊಂದು ಟೋಳಿಯನ್ನು ಕೊಟ್ಟು ಅವರನ್ನು ದಂಡಿನ ಎರಡೂ ಪಕ್ಕರಕ್ಷಣೆಗೆ ನೇಮಿಸಿದನು. ಮುಂದೆ ಬಂದು ಕೊಳ್ಳವಿತ್ತು. ಅಲ್ಲಿ ಕೆಲವು ಕಾಲಾಳುಗಳನ್ನು ಇಟ್ಟು ಭಾವೂಸಾಹೇಬನು ಕಾಳಗಕ್ಕಣಿಯಾದನು. ಮೊದಲು ಎರಡೂ ಧಂಡಿನಜನರು ತೋಫುಗಳನ್ನು ಹಾರಿಸತೊಡಗಿದರು. ಕೊಲ್ಹಾಪೂರಕರನು ಕೊಳ್ಳದಲ್ಲಿ ನಿಂತುಕೊಂಡ ಪರಶುರಾಮಪಂತನಮೇಲೆ ಗುರಿಯಿಟ್ಟು ಹಲ್ಲಾಮಾಡಿದನು. ಆಗ ತುಮುಲಯುದ್ಧವು ಪ್ರಾರಂಭವಾಯಿತು.

---

† ಈತನು ಭಾವೂನ ನಂಬಿಗೆಯ ಕಾರಕೂನನು; ಈತನು ಭಾವೂನ ಸಂಗಡ ಯಾವಾಗಲೂ ಇರುತ್ತಿದ್ದನು. ಇವನು ಪರಶುರಾಮಭಾವು ಮಾಡಿದ ಎಲ್ಲ ಕಾಳಗಗಳ ಸಾದ್ಯಂತವರ್ಣನೆಯನ್ನು ಬರೆದ ಬಂದು ಬಖರ (ಇತಿಹಾಸ) ವಿರುವದು. ಅದು ಇತಿಹಾಸಕಾರರಿಗೆ ಬಹಳೇ ಪ್ರಯೋಜನಕರವಾದದ್ದು.

ಕರವೀರಕರನ ಜನರು ಹಿಮ್ಮೋಡಾದರು. ಆತನ ಕಡೆಯು ೩೦-೪೦ ಜನರು ಭೂಮಿಗೊರಗಿ ಅಸುದೊರೆದರು. ಅಸಂಖ್ಯ ಜನರು ಗಾಯಹೊಂದಿ ಹತ ವೀರ್ಯರಾದರು.

ಇಷ್ಟರಲ್ಲಿ ಭಾವೂನ ಹಿರೇಮಗನಾದ ಅಪ್ಪಾಸಾಹೇಬನು ತನ್ನ ಪಥಕದೊಂದಿಗೆ ವೈರಿಗಳ ಮೇಲೆ ಏರಿಬಂದು ಅವರನ್ನು ಸದೆಬಡೆಯಹತ್ತಿದನು. ಆತನನ್ನು ಎದುರಿಸಲು ಅರಸನು ದಿವಾಣ ರತ್ನಾಕರಪಂತ ಮತ್ತು ಹೈಬತರಾವ ಗಾಯಿಕವಾಡ ಇತ್ಯಾದಿ ಶೂರಸರದಾರರನ್ನು ನೇಮಿಸಿದನು. ಅವರೆಲ್ಲರು ಆವೇಶದಿಂದ ಮುಂದರಿದು ಬಂದರು. ಕೂಡಲೆ ಭಯಂಕರ ರಣಕಂದನವು ಪ್ರಾರಂಭವಾಯಿತು. ಅಪ್ಪಾಸಾಹೇಬನು ಕೊಲ್ಹಾಪುರಕರನ ಮೇಲೆ ಬಳ್ಳೇ ಸಾಹಸದಿಂದ ಮುಗಿಬಿದ್ದನು. ಬಳಿಕ ಸ್ವಲ್ಪ ಹೊತ್ತು ಉಭಯದಳದ ಜನರು ಕಡು ನಿಕರದಿಂದ ಕಾದಿದರು. ಶತ್ರುಪಕ್ಷದ ಧುಲೋಜಿ ಘಾಂಡರೆ ಎಂಬುವ ಸರದಾರನು ಸಮರಭೂಮಿಯಲ್ಲಿ ಬಿದ್ದು ಹತನಾದನು, ರಾಮಜಿ ಜಾಧವನು ಕೈಸೆರೆಯಾದನು. ಅಪ್ಪಾಸಾಹೇಬನು ಅತ್ಯಂತ ತ್ವೇಷದಿಂದ ಕಾದತೊಡಗಿದರಿಂದ ವೈರಿಜನರು ಕಾಲೂರಿ ನಿಲ್ಲದಂತಾದರು. ಅವರು ಮೆಲ್ಲ ಮೆಲ್ಲಗೆ ಹಿಂದಕ್ಕೆ ಸರಿಯಲಾರಂಭಿಸಿದರು. ಅವರ ಆನೆ-ನಿಶಾನಿಗಳು ಅಪ್ಪಾಸಾಹೇಬನ ಕೈವಶವಾದವು. ತನ್ನ ತುಂಗವಿಕ್ರಮನಾದ ಮಗನು ಸ್ವಪರಾಕ್ರಮದಿಂದ ಯಶಸ್ವಿಯಾಗಲು ತುಂಬಾ ಸಮರ್ಥನಿರುವನೆಂದು ಬಗೆದು, ಪರಶುರಾಮಭಾವು ಕೊಳ್ಳದಲ್ಲಿದ್ದ ತನ್ನ ಜನರ ಕಡೆಗೆ ಹೋದನು. ಕರವೀರಕರನ ಜನರು ಗಡಬಡಿಸತೊಡಗಿದರು. ಆಗ ಮಹಾರಾಜನು ಅಲ್ಲಿಯೇ ಬಳಿಯಲ್ಲಿದ್ದನು. ಆತನ ಸಂಗಡ ತಿದ್ದಿಶಯಾರಾದ ೩ ಸಾವಿರ ಜನರು ಇದ್ದರು. ನಿಕರದ ಪ್ರಸಂಗವು ಬಂದದರಿಂದ ಅರಸನು ಸ್ವತಃ ಮುಂದೆ ಬಂದು, ತನ್ನ ಜನರಲ್ಲಿ ಉತ್ತೇಜನವನ್ನು ಹುಟ್ಟಿಸಿದನು. ಅದರಿಂದ ಆತನ ದಂಡಿನವರಿಗೆ ಹೊಸ ಹುರುಪು ಬಂತು. ಅವರೆಲ್ಲರು ಸಾವರಿಸಿಕೊಂಡು ಬಹಳ ಆವೇಶದಿಂದ ಅಪ್ಪಾಸಾಹೇಬನ ಮೇಲೆ ಸಾಗಿಬಂದರು. ಆಗ ಕೂಡಲೆ ಕಿಡಿಕಿಡಿಯಾದ ಕಾಳಗವು ಆರಂಭವಾಯಿತು. ಅದರಲ್ಲಿ ಅಪ್ಪಾಸಾಹೇಬನ ಅನೇಕ ಜನರು ರಣಭೂಮಿಯಲ್ಲಿ ಬಿದ್ದು ಪ್ರಾಣದೊರೆದರು. ಕೆಲವರು ಗಾಯಹೊಂದಿದರು. ಸ್ವತಃ ಅಪ್ಪಾಸಾಹೇಬನ ಎಡಭುಜದ ಮೇಲೆ ಬಂದು ಗುಂಡು ತಗಲಿ ಗಾಯವಾಯಿತು. ಆದರೆ ತಾನು ಹಿಂದೆ ಸರಿ

ದರೆ ತನ್ನ ಜನರು ಧೈರ್ಯಬಿಟ್ಟಾರೆಂದು ತಿಳಿದು, ಆ ಶೂರಶಿರೋಮಣಿಯು ಅಭಿಮಾನದಿಂದ ಸಾವರಿಸಿಕೊಂಡು ನಿಂತಲ್ಲೆ ನಿಂತುಕೊಂಡನು.

ಬಳಿಕ ಮಹಾರಾಜನ ಸೈನ್ಯದ ಜನರು ದಾಜೀಸಾಹೇಬನ ಕಡೆಗೆ ತಿರುಗಿದರು. ಅಲ್ಲಿಯು ಕೆಲವು ಜನರು ಮೊದಲೇ ಫಿತೂರಾಗಿದ್ದರು. ಆದ್ದರಿಂದ ಯುದ್ಧವು ಪ್ರಾರಂಭವಾಗುತ್ತಲೇ ದಂಡಿನ ಜನರು ಕೈಕಾಲು ಬಿಟ್ಟರು. ಇಷ್ಟಾಗುವಷ್ಟರಲ್ಲಿ ಕೊಲ್ಹಾಪುರಕರನ ಎರಡೂ ಟೋಳಿಯ ಜನರು ಏಕತ್ರ ಕಲೆತರು. ಆಗಂತೂ ಅವರ ಬಲವು ಇಮ್ಮಡಿಯಾದುದರಿಂದ ಅವರು ಬಳ್ಳೇ ಉಬ್ಬಿನಿಂದ ಅಪ್ಪಾಸಾಹೇಬನ ಮೇಲೆ ಏರಿಬಂದರು. ಆ ಅದ್ಭುತ ಸೈನ್ಯವನ್ನೂ, ಅದರ ಹುರಪನ್ನೂ ನೋಡಿ ಅಪ್ಪಾಸಾಹೇಬನು ತನ್ನ ದಂಡಿನೊಡನೆ ಜಾಗೃತೆಯಿಂದ ಮೆಲ್ಲಮೆಲ್ಲನೆ ಹಿಂದಕ್ಕೆ ಸರಕೊಂಡನು; ಆತನು ಸಮೀಪದಲ್ಲಿದ್ದ ಅಮಲಝರಿಯೆಂಬಲ್ಲಿಗೆ ಹೋಗಿ ಆ ಗ್ರಾಮದ ಆಶ್ರಯ ಹಿಡಿದು ನಿಂತುಕೊಂಡನು. ಶತ್ರುಸೈನ್ಯವು ಆತನ ಹಿಂದೇ ಇತ್ತು. ಅದೂ ಆ ಹಳ್ಳಿಯ ಬಳಿಗೆ ಬಂದು ಬೀಡುಬಿಟ್ಟಿತು. ಮುಂದೆ ಅತ್ತಕಡೆಯ ಕಾಳಗ ಪ್ರಸಂಗವು ಶಾಂತವಾಯಿತು.

ತರುವಾಯ ರತ್ನಾಕರಪಂತನು ಅಪ್ಪಾಸಾಹೇಬನ ಬೆನ್ನು ಬಿಟ್ಟು, ಪರಶುರಾಮಭಾವು ತುಸು ಜನರೊಂದಿಗೆ ಕೊಳ್ಳದಲ್ಲಿಯೇ ಇರುವನೆಂದು ತಿಳಿದು, ತನ್ನ ದಂಡನ್ನು ಅತ್ತಕಡೆಗೆ ತಿರುವಿದನು. ಆಗ ಹೊರಗೆ ಮೂರು ಗಳಿಗೆ ಹೊತ್ತು ಇತ್ತು. ಪರಶುರಾಮಭಾವೂನ ಸಂಗಡ ಇದ್ದ ಜನರು ತೀರಾ ತುಸು; ಅವರಲ್ಲಿ ಕೆಲವರು ಆತನ ಶೂರರಾದ ಬಾಂಧವ ಸರದಾರರೂ, ಕೆಲವರು ಶಿಲೇದಾರರೂ ಇಂತಿಷ್ಟು ಜನರು ಮಾತ್ರ ಇದ್ದರು. ಅವನ ಮಕ್ಕಳಾದ ಅಪ್ಪಾಸಾಹೇಬ-ದಾಜೀಸಾಹೇಬರ ಕಡೆಗೆ ಎರಡು ದಂಡಿನ ತಂಡುಗಳಿದ್ದವು. ಅಂದಿನ ದಿವಸ ಅವರು ತಂದೆಯ ಬೆಂಬಲಕ್ಕೆ ಬಾರದೇ ಇದ್ದದ್ದು ಆತನ ದುರ್ದೈವವೇ ಸರಿ. ದಾಜೀಸಾಹೇಬನ ಜನರಲ್ಲಿ ಕೆಲವರು ಒಡೆದದರಿಂದ ಆತನ ಸೈನ್ಯವು ಛಿನ್ನವಿಚ್ಛಿನ್ನವಾಗಿ ಹೋಗಿತ್ತು; ಅಪ್ಪಾಸಾಹೇಬನು ಗಾಯಹೊಂದಿ ಅಮಲಝರಿಗೆ ಹೋಗಿ ನಿಂತುಕೊಂಡಿದ್ದನು. ಆತನು ತನ್ನ ತಂದೆಯು ಇನ್ನೂ ಕೊಳ್ಳದಲ್ಲಿಯೇ ಇರಲಿಕ್ಕಿಲ್ಲವೆಂದು ತಿಳಿದು ಪಠಭಾರೆ ಅತ್ತಕಡೆಗೆ ಹೋಗಿಬಿಟ್ಟನು. ಹೀಗಾದದರಿಂದ ಕಾಳ

ಗದ ಸ್ವರೂಪವು ಬದಲಾಗಿ ಭಾವೂಸಾಹೇಬನ ಮೇಲೆ ದುರ್ಧರಪ್ರಸಂಗವು ಬಂದೊದಗಿತು. ತಥಾಪಿ ಧೈರ್ಯಶಾಲಿ, ಶೌರ್ಯಶಾಲಿ, ಗಾಂಭೀರ್ಯಶಾಲಿ ಮತ್ತು ಔದಾರ್ಯಶಾಲಿಯಾದ ಪರಶುರಾಮಪಂತನು ಕಡ್ಡಿಯಷ್ಟಾದರೂ ಗಡಿಬಡಿಸಲಿಲ್ಲ. ಶತ್ರುಸೇನೆಯು ಆತನಿದ್ದೆಡೆಗೆ ಬರತೊಡಗಿತು. ಆಗ್ಗೆ ಆತನು ಅಲ್ಲಿಂದ ಜಾರಿಕೊಂಡಿದ್ದರೆ ಸಾಧಿಸುವಂತೆ ಇತ್ತು. ಆದರೆ ಹಗೆಗಳಿಗೆ ಬೆನ್ನು ತೋರಿಸುವ ಪುಕ್ಕ-ವಿಚಾರವು ಆ ರಣಧುರೀಣನ ಮನಸ್ಸಿನಲ್ಲಿ ಬರಲೇ ಇಲ್ಲ. ಸಂಗಡ ಇದ್ದ ಸರ್ವ ಸೈನ್ಯವು ಇಲ್ಲದಾಯಿತು; ಆದರೂ ಜೀವಕ್ಕೆ ಜೀವಕೊಡುವ ಅನೇಕ ಬಂಧುಸರದಾರರನ್ನೂ ಮಿಕ್ಕ ಕೆಲವು ಶಿಲೇದಾರರನ್ನೂ ಕೂಡಿಕೊಂಡು ಆ ನರವೀರನು ತುರಗಾರೂಢನಾಗಿ ಕೊಲ್ಹಾಪುರಕರನ ಭಯಂಕರ ಸೈನ್ಯವನ್ನು ಎದುರಿಸಲು ಸಿದ್ಧನಾದನು. ಹಗೆಗಳು ತೀರಾ ಹತ್ತರಬಂದು ಗಂಟುಬಿದ್ದರು. ಅವರು ಆ ಕೊಳ್ಳವನ್ನು ನಾಲ್ಕು ಕಡೆಯಿಂದ ಮುತ್ತಿ ಬಳನುಗ್ಗಿದರು. ಶತ್ರುಪಕ್ಷದ ಅಸಂಖ್ಯ ಜನರ ಕೂಡ ಪರಶುರಾಮಭಾವುವಿನ ೧೦೦-೧೫೦ ಜನರು ಜೀವದ ಮೇಲೆ ಉದಾರರಾಗಿ ಕಲಿತನದಿಂದ ಕಾದಲನುವಾದರು. ಕತ್ತಿ-ಡಾಲುಗಳ ಹೊಡತವು ಪ್ರಾರಂಭವಾಯಿತು. ಯುದ್ಧದ ಭರದಲ್ಲಿ ವೀರಾಗ್ರಣಿಯಾದ ಭಾವು ವಿದ್ಯುತ್ತಿನಂತೆ ಥಳಥಳನೆ ಹೊಳೆಯುತ್ತಿದ್ದನು. ಆತನು ನಿಂತಲ್ಲೆ ನಿಲ್ಲನು. ಅತ್ಯಂತ ತ್ವೇಷದಿಂದ ಶತ್ರುಸೈನ್ಯವನ್ನು ಹೊಕ್ಕು ಕೈಗೆ ಸಿಕ್ಕವರನ್ನು ತುಂಡರಿಸಿ ಚಲ್ಲುತ್ತ ನಡೆದನು. ಆತನ ಹದನವಾದ ಖಡ್ಗವು ವೀರಭಟರ ರುಧಿರತೀರ್ಥದಲ್ಲಿ ಸ್ನಾನಮಾಡಿದಂತೆ ಒಪ್ಪುತ್ತಿತ್ತು. ಹೀಗೆ ಆತನ ಪ್ರಖರ-ಶಸ್ತ್ರಾಸ್ತ್ರಗಳ ಪ್ರಹಾರವು ಸಹಿಸಲಸದಳವಾಯಿತು. ಅದನ್ನು ಕಂಡು ಕೊಲ್ಹಾಪುರಕರನು (ಶಿವಾಜಿ) ಸ್ವತಃ ಯುದ್ಧಕ್ಕೆ ಎದುರಾದನು. ಹಿಂದೆ ತ್ರೈತಾಯುಗದಲ್ಲಿ ಪರಶುರಾಮ-ದಶರಥರಾಮರು ಮತ್ತು ಕುರುಕ್ಷೇತ್ರದಲ್ಲಿ ಭೀಷ್ಮಾರ್ಜುನರು ಯುದ್ಧಮಾಡಿದಂತೆ, ಅವರಿಬ್ಬರು ಅಂದಿನ ದಿವಸ ಬಳ್ಳೇ ಕಲಿತನದಿಂದ ಕಾದತೊಡಗಿದರು. ಉಭಯ ಸೈನ್ಯದ ಜನರು ಮಾಡುವ ಸಿಂಹನಾದದಿಂದ ಆಕಾಶವೆಲ್ಲ ಪ್ರತಿಧ್ವನಿತವಾಯಿತು. ಭಾವೂನ ಕಡೆಗೆ ಸ್ವಲ್ಪ ಜನರಿದ್ದು ಅವರು ಒಬ್ಬರಹಿಂದೊಬ್ಬರು ಪತನವಾಗಹತ್ತಿದರು. ಆದರೂ ಆಹವ ಅನುಭವಿಕನಾದ ಪರಶುರಾಮಭಾವೂನ ಪರಾಕ್ರಮದ ಮುಂದೆ ಕರವೀರಕರನು ಹಿಮ್ಮೋಡು ಆಗುವಂತೆ ತೋರಿತು. ಆಗ ಹೈಬತರಾವ

ಗಾಯಿಕವಾಡನೆಂಬುವ ಸರದಾರನು* ಓಡಿಬಂದವನೇ ಭಾವೂನ ಕುತ್ತಿಗೆಯ ಮೇಲೆ ಜೋರಿನಿಂದ ಹೊಡೆದನು. ಅಷ್ಟರಲ್ಲಿ ದಿವಾಣ ರತ್ನಾಕರಪಂತ, ಸೇನಾಪತಿ ಚತುರಸಿಂಗ, ನಾರಾಯಣರಾವ ಗಾಯಕವಾಡ ಮತ್ತು ವಿಶ್ವಾಸರಾವ ಗಾಯಕವಾಡ ಇತ್ಯಾದಿ ಸರದಾರಪ್ರಭೃತಿಗಳು ತಮ್ಮ ಅರಸನ ಬೆಂಬಲಕ್ಕೆ ಬಂದರು. ಅವರೆಲ್ಲರು ಏಕಕಾಲಕ್ಕೆ ಭಯಂಕರವಾದ ಶರವೃಷ್ಟಿಯನ್ನು ಮಾಡತೊಡಗಿದರು. ಹೈಬತರಾಯನ ಹೊಡತದಿಂದ ಭಾವೂಸಾಹೇಬಗೆ ವಿಶೇಷ ಗಾಯವಾಯಿತು. ಆದರೂ ಆತನು ಎಳ್ಳಷ್ಟಾದರೂ ಭಯದ ಚಿನ್ಹವನ್ನು ತೋರಿಸದೆ, ವೈರಿಜನರಿಗೆ ತನ್ನ ಕೈಚಳಕವನ್ನು ತೋರಿಸುತ್ತ, ಕೈಖಡ್ಗದಿಂದ ಅವರ ಕಡೆಯ ೫-೬ ಪ್ರಮುಖ ಸರದಾರರನ್ನು ಹೊಡೆದು ಕೆಡವಿ ಯಮನಗರಿಗಟ್ಟಿಬಿಟ್ಟನು. ಅರಸನ ಬೆಂಬಲಕ್ಕೆ ಬಂದು ಕೂಡಿದ ಎಲ್ಲ ಸರದಾರರು ಭಾವೂಸಾಹೇಬನ ಮೇಲೆ ಒಮ್ಮೆಲೆ ಸಾಗಿಬಂದು ಆತನನ್ನು ಸುತ್ತುಗಟ್ಟಿದರು. ಶತ್ರುಪಕ್ಷದ ನೂರಾರು ಶೂರಸರದಾರರೊಡನೆ ಭೀಷ್ಮಪರಾಕ್ರಮಿಯೂ, ಮೇರುಸದೃಶ ಧೈರ್ಯಶಾಲಿಯೂ, ಪಟವರ್ಧನ ಕುಲಕಂಠೀರವನೂ ಆದ ಪರಶುರಾಮಪಂತನು ಒಬ್ಬನೇ ಯುದ್ಧಮಾಡ ತೊಡಗಿದನು. ಒಂದು ಕೈಯೊಳಗಿನ ಆತನ ಕಡು ಹದನವಾದ ಖಡ್ಗವೂ, ಮತ್ತೊಂದು ಕೈಯೊಳಗಿನ ತೀಕ್ಷ್ಣವಾದ ಕತ್ತಿಯೂ ಇವೆರಡೂ ಒಂದೇ ಸಮನೇ ಶತ್ರು-ಸಂಹಾರವನ್ನು ಮಾಡಹತ್ತಿದವು. ಹೀಗೆ ಭಾವು ಸವ್ಯಸಾಚಿಯಾಗಿ ಅಪೂರ್ವ ಕಲಿತನದಿಂದ ಕಾದುವದನ್ನು ಕಂಡು, ಪ್ರತಿಪಕ್ಷದ ಕಲಿಗಳು ನಾಚಿಕೊಂಡರು. ಕೆಲವರು ಭಾವೂಸಾಹೇಬನ ಆಗಿನ ನೃಸಿಂಹ ಸ್ವರೂಪವನ್ನೂ ಯುದ್ಧಮಾಡುವ ಹದನವನ್ನೂ ಕಂಡು ಬೆದರಿದರು. ಆದರೆ ನೂರಾರು ಆನೆಗಳು ವೃದ್ಧಮೃಗರಾಜನನ್ನು ಮುತ್ತಿದಂತೆ, ನೂರಾರು ಶೂರಸರದಾರರು ಗತವಯಸ್ಕನೂ, ಸರದಾರರ ರಾಜನೂ, ಪಟವರ್ಧನ ಕುಲಲಲಾಮನೂ ಆದ ಪರಶುರಾಮಭಾವೂನನ್ನು ಬಲವಾಗಿ ಮುತ್ತಿದ್ದರಿಂದ, ಸಾವಿರಾರು ತೋಳುಗಳ ಮುಂದೆ ಆತನ ಎರಡು ತೋಳುಗಳ ಆಟವು ಸಾಗದಂತಾಯಿತು. ವೈರಿಸರದಾಗರಾದರೂ ಒಳ್ಳೇ ಶೂರರು. ಅವರೂ ಶೌರ್ಯದಿಂದ ಕಾದಿ ತಮ್ಮ ಕಲಿತನದ ಕಳಸವನ್ನು ಪ್ರಕಟಿಸಿದರು. ಶತ್ರು-ಸಂಖ್ಯೆಯು ಹೆಚ್ಚಾದುದರಿಂದಲೂ, ಆತನ ಮೈಗಾವಲಿನ ಜನರು ಬಳಿಯಲ್ಲಿ

* ಈ ಹೈಬತರಾಯನು ಮೊದಲು ಭಾವೂಸಾಹೇಬನ ಆಶ್ರಯದಲ್ಲಿದ್ದನು.

ಯಾರೂ ಇಲ್ಲದ್ದರಿಂದಲೂ, ಆ ದಾರುಣವಾದ ಕಾಳಗಪ್ರಸಂಗದಲ್ಲಿ, ಭಾವೂಸಾಹೇಬನ ಎರಡೂ ಕಿವಿಯ ಹತ್ತರ ಮತ್ತೆ ಎರಡು ಪೆಟ್ಟುಗಳು ತಗಲಿದವು. ಆ ವೇಧನೆಯಿಂದ ಪರಶುರಾಮಭಾವು ಕುದುರೆಯ ಮೇಲಿಂದ ಭೂಮಿಗೊರಗಿದನು; ಕೂಡಲೆ ಆತನು ಭಯಂಕರ ಮೂರ್ಛೆಯನ್ನು ಹೊಂದಿದನು. ಅದರಲ್ಲಿಯೇ ಪೇಶವಾಯಿಯ ಕಂಠಮಣಿ, ನಾನಾಫಡಣವೀಸನ ಬಲಗೈ, ಶೂರಸರದಾರರ ಶಿರೋಮಣಿ, ಸ್ವಕೀಯ ಜನರ ಪುರಸ್ಕರ್ತ, ಆಪದ್ಬಾಂಧವ, ಶರಣಾಗತವತ್ಸಲ, ಸ್ವಧರ್ಮಸಂವರ್ಧಕ, ಗೋಬ್ರಾಹ್ಮಣಪ್ರತಿಪಾಲಕ ಎಂದು ಹೆಸರುಗೊಂಡ ನಾಮಾಂಕಿತ ಪಟವರ್ಧನ ಪಟುಭಟನಾದ ಪರಶುರಾಮಪಂತನದೇ ಹಾವಸಾನವಾಯಿತು ಹೀಗೆ ಶಕೆ ೧೭೨೧ ನೆಯ ಭಾದ್ರಪದ ವದ್ಯ ಚತುರ್ಥಿ ಮಂಗಳವಾರ ದಿವಸ, ಸೂರ್ಯಾಸ್ತ ಸಮಯಕ್ಕೆ ಸರಿಯಾಗಿ ಪೇಶವಾಯಿಯ ಪ್ರತಾಪರವಿಯಾದ ಪರಶುರಾಮಭಾವು ರುಧಿರಸಾಗರದಲ್ಲಿ ಅಸ್ತಮಯಿಸಿದನು.

ಈ ಮೇರೆಗೆ ಶೂರನೂ, ಧೀರನೂ, ಪರಾಕ್ರಮಿಯೂ ಆದ ನಮ್ಮ ಚರಿತ್ರನಾಯಕನು ೬೫ ವರುಷದ ಮುದುಕನಾಗಿ ದೈವಾಧೀನನಾದನು. ಆತನು ಆಮರಣ ಪವಿತ್ರ ಕ್ಷಾತ್ರಧರ್ಮವನ್ನು ಏಕನಿಷ್ಠೆಯಿಂದ ಪರಿಪಾಲಿಸಿ, ವಿಘ್ನವಿಪತ್ತುಗಳಿಗೆ ತಲೆಗೊಟ್ಟು, ಪೇಶವೆಸಾಮ್ರಾಜ್ಯದ ಸೇವೆಯನ್ನು ಮನಮುಟ್ಟಿ ಮಾಡಿದನು; ಕಡೆಗೆ ದೇಹಶಕ್ತಿಯು ಕುಗ್ಗಿ ಮುದುಕನಾಗಿದ್ದರೂ, ಸ್ವಾಮಿಕಾರ್ಯಾರ್ಥ, ಮಹಾವೀರರಿಗೆ ಅನುರೂಪವಾದ ಧಾರಾತೀರ್ಥದಲ್ಲಿ ಆತನು ಸರ್ವೋತ್ತಮವಾದ ಮೃತ್ಯುವನ್ನು ಹೊಂದಿದನು. ರಣಾಂಗಣದಲ್ಲಿ ಹಗೆಗಳೊಡನೆ ಕಾದುತ್ತ ಮರಣಹೊಂದುವ ಸುದೈವವು ಸ್ವಲ್ಪ ಜನರಿಗೆ ಮಾತ್ರ ಲಭ್ಯವಾಗುವದು. ಯಾಕಂದರೆ ‘ द्वा विमौ पुरुषौ लोके । सूर्यमंडलभोदिनौ ॥ परिव्राडयोगयुक्ताश्च रणे चाभिमुखोहत: ॥ ’ ಎಂಬಂತೆ ಸಮರಾಂಗಣದಲ್ಲಿ ಸಾಯುವ ಶೂರನು ಸೂರ್ಯಮಂಡಲವನ್ನು ಭೇದಿಸಿ ಸ್ವರ್ಗಲೋಕವನ್ನು ಸೇರುವನು. ಇದರ ಹೊರ್ತು ಇನ್ನೊಂದು ವಿಶೇಷ ಸಂಗತಿಯೇನಂದರೆ:—ಶ್ರೀಗಣಪತಿಯು ಪರಶುರಾಮಭಾವುವಿನ ಆರಾಧ್ಯದೇವರು; ಆತನು ಶ್ರೀಗಜಾನನ ನಿಸ್ಸೀಮಭಕ್ತನು. ಅಂದಿನ ದಿವಸ ಅಂಗಾರಿಕ ಚತುರ್ಥಿಯು ಸುಲಗ್ನವಿದ್ದು, ಸೃಷ್ಟಿಯ ಸಕಲ ಉಪಕ್ರಮಗಳನ್ನು ಮುಗಿಸಿಕೊಂಡು, ಶ್ರೀಗಣರಾಜನ ಸನ್ನಿಧಾನ

ದಲ್ಲಿ ಶಾಶ್ವತವಾದ ಮತ್ತು ನಿರ್ಮಲವಾದ ಸುಖವನ್ನು ಅನುಭವಿಸಲು ಹೊರಟು ಹೋಗುವ ಸುಯೋಗವು ನಮ್ಮ ಚರಿತ್ರನಾಯಕನಿಗೆ ಮರಣ ಕಾಲದಲ್ಲಿ ಅನಾಯಾಸವಾಗಿ ಸಾಧಿಸಿತು. ಇದು ಆತನ ಪುಣ್ಯಕರ್ಮದ ಸತ್ಫಲವೇ ಸೈ.

ಇತ್ತ ಕೊಲ್ಹಾಪುರಕರನ ದಂಡಿನಲ್ಲಿ ಪಟವರ್ಧನಕುಲಮಣಿಯಾದ ಪರಶುರಾಮಭಾವು ಮಡಿದ ಸುದ್ದಿಯು ಕೂಡಲೇ ಪಸರಿಸಿತು. ಆಗ ಅವರಿಗಾದ ಆನಂದವನ್ನು ಹೇಳಲಳವಲ್ಲ. ಭಾವು ಕರವೀರಕರನ ನಿಕರದ ವೈರಿಯು. ಅರಸನು ಆ ರಣಸಿಂಹನಿಗೆ ಹೆದರುವಷ್ಟು ಪೇಶವೆಯ ಅನ್ಯ ಸರದಾರರಿಗೆ ಅಂಜುತ್ತಿದ್ದಿಲ್ಲ. ಪರಶುರಾಮಭಾವು ಮಹಾರಾಜನನ್ನು ಅನೇಕ ಸ್ಥಳಗಳಲ್ಲಿ ಅನೇಕ ಸಾರೆ ಸೋಲಿಸಿ ಜರ್ಜರವಮಾಡಿದ್ದನು. ಗಂಡುಗಲಿಯಾದ ಭಾವೂನ ಹೆಸರು ಕೇಳಿದ ಮಾತ್ರವೇ ಅರಸನು ಗದಗುಟ್ಟಿ ನಡಗುತ್ತಿದ್ದನು. ಇಂತಹ ಪ್ರಬಲಶತ್ರುವಿನ ಮೃತ್ಯುವಾರ್ತೆಯನ್ನು ಕೇಳಿ ಆತನಿಗೂ ಆತನ ಜನರಿಗೂ ಆನಂದವಾದದ್ದು ಸಹಜವದೆ. ಕೊಲ್ಹಾಪುರಕರನ ಜನರು ಭಾವೂನ ಪ್ರೇತವನ್ನು ಶೋಧಿಸಲಾರಂಭಿಸಿದರು. ಗಾಯಿಕವಾಡ ಹೈಬತರಾಯನು ಸಮರಭೂಮಿಯಿಂದ ಆ ನರವೀರನ ಶವವನ್ನು ಎತ್ತಿ ತಂದು, ಒಬ್ಬ ಬಾರಗೀರನ ಕೂಡ ಮಹಾರಾಜನ ಅವಲೋಕನಾರ್ಥ ಕಳಿಸಿಕೊಟ್ಟನು. ಹಾದಿಯಲ್ಲಿ ಘಾಟಗೆ ಸರದಾರನು ಅದನ್ನು ಆ ಬಾರಗೀರನ ಕಡೆಯಿಂದ ಇಸುಕೊಂಡು ತನ್ನ ಕುದುರೆಯ ಮೇಲೆ ಇಟ್ಟುಕೊಂಡು, ತಾನೇ ಆ ಪರಾಕ್ರಮಿಪುರುಷನನ್ನು ಹೊಡೆದು ಕೆಡವಿದನೆಂದು ಶುಷ್ಕ-ಆತ್ಮ-ಸ್ತುತಿಯನ್ನು ಮಾಡಿಕೊಳ್ಳುತ್ತ, ಮಹಾರಾಜನ ಬಳಿಗೆ ಬಂದನು. ಆಗ ಅರಸನು ತನ್ನ ಶಿಬಿರದಲ್ಲಿದ್ದನು. ಘಾಟಗೆಯು ಆತನ ಮುಂದೆ ಹೋಗಿ ನಿಂತು ಆದ ಸಂಗತಿಯನ್ನು ವಿಜ್ಞಾಪಿಸಿದನು. ತನ್ನೆದುರಿಗೆ ಇದ್ದ ಶವವು, ತನ್ನ ಪುರಾತನ ಪ್ರಚಂಡವೈರಿಯೂ, ಅಕ್ಷಯಪರಾಕ್ರಮಿಯೂ, ಪಟವರ್ಧನಕುಲಶೇಖರನೂ ಆದ ಪರಶುರಾಮಭಾವುವಿನದು ಇರುತ್ತದೆಂದು ಗೊತ್ತಾಗುತ್ತಲೆ, ಆತನಿಗೆ ಪರಮ ಹರ್ಷವಾಯಿತು. ಅರಸನು ತನ್ನ ದಂಡಿನ ಜನರಲ್ಲಿ ಸಕ್ಕರೆಯನ್ನು ಹಂಚಿದನು. ಅಸಾಧಾರಣವಾದ ವಿಜಯವು ಪ್ರಾಪ್ತವಾಯಿತೆಂದು ಜಯಸೂಚಕ ತೋಫುಗಳು ಹಾರಿಸಲ್ಪಟ್ಟವು. ನೋಡಿದತ್ತೆಲ್ಲ ವಿಜಯೋಲ್ಲಾಸವು ನಡೆದಿತ್ತು. ಇಲ್ಲಿಯವರೆಗೆ ಆದದ್ದೆಲ್ಲ ಒಳಿತೇ ಆಯಿತು. ಆದರೆ ಮುಂದೆ ಆ

ಹರ್ಷಯೋಗದಿಂದ ಮಹಾರಾಜನ ದೇಹಭಾನವು ತಪ್ಪಿತು; ಅದರಿಂದ ಆತನು ಅಗದೀ ಅನುಚಿತ, ಅಸಹ್ಯ ಮತ್ತು ಅವಾಚ್ಯಕೃತ್ಯವನ್ನು ಮಾಡಿ, ತನ್ನ ಹೆಸರಿಗೆ ಎಂದೂ ಮಾಜದ ಕಪ್ಪು ಹಚ್ಚಿಕೊಂಡನು. ಪರಶುರಾಮಭಾವೂನಂಥ ಪೇಶವೆ ಸರಕಾರದ ಅಪ್ರತಿಮ ಪರಾಕ್ರಮಿಯಾದ ಸರದಾರಸಿಂಹನು ಸಮರಭೂಮಿಯಲ್ಲಿ ಪ್ರಾಣದೊರೆದು ಬಿದ್ದಿರಲು, ಆತನ ಜಡದೇಹದಲ್ಲಿ ಜೀವವು ಅದೆಯೋ ಇಲ್ಲವೋ ಎಂಬದರ ವಿಚಾರಮಾಡದೆ, ಕೊಲ್ಹಾಪುರಕರನು ಮನಸ್ಸಿನಲ್ಲಿ ವೈರಭಾವವನ್ನು ತಾಳಿ, ಭಾವೂಸಾಹೇಬನ ಪ್ರೇತವನ್ನು ಕುದುರೆಯ ಕಾಲಿನಿಂದ ತುಳಸಿಬಿಡಬೇಕೆಂದು ಘೋರ್ಪಡೆ ಸರದಾರನಿಗೆ ಆಜ್ಞಾಪಿಸಿದನು. ಮತ್ತು ಖಾಸ ಬಾರದಾರರಿಗೆ ಆ ಶವವನ್ನು ಚೂರು ಚೂರು ಮಾಡಿ ಬಿಡಬೇಕೆಂದು ಅಪ್ಪಣೆಕೊಟ್ಟನು.

ಭೀಮಬಲಾಢ್ಯನಾದ ಭಾವು ಸಂಗ್ರಾಮಭೂಮಿಯಲ್ಲಿ ಗತಪ್ರಾಣನಾಗಿರಲು, ಆತನ ನಾಲ್ಕುಮಂದಿ ಮಕ್ಕಳಲ್ಲಿಯೂ, ಅನೇಕ ಬಾಂಧವರಲ್ಲಿಯೂ ಯಾರೂ ಆತನ ಬಳಿಯಲ್ಲಿದ್ದಿಲ್ಲ. ಆತನ ಜೀವಕ್ಕೆ ಜೀವಕೊಡುವ ಶೂರ ಸರದಾರರು ಆತನಕಿಂತ ಮುಂಚೆಯೇ ಸಮರಾಂಗಣದಲ್ಲಿ ಕಾದಿ ಕಡೆಗೆ ಕಾಲವಾಗಿದ್ದರು; ಕೆಲವರು ತಪ್ಪು ತಿಳುವಳಿಕೆಯಿಂದಲೂ, ಕೆಲವರು ಜೀವದ ಭಯದಿಂದಲೂ, ರಣರಂಗಣದಿಂದ ಓಡಿಹೋಗಿದ್ದರು. ಇಂಥ ಸ್ಥಿತಿಯಲ್ಲಿ ನಮ್ಮ ಕಥಾನಾಯಕನ ಪ್ರೇತಸಂಸ್ಕಾರವು ಹಾಗೇ ನಿಂತುಹೋಗತಕ್ಕದ್ದೇ ಸರಿ. ಆದರೆ ಪರಶುರಾಮಭಾವುವಿನ ಪುಣ್ಯವು ಸಬಲವಾದದ್ದು. ಆತನ ದಹನಕಾರ್ಯವನ್ನು ಸಾಂಗಗೊಳಿಸುವನೆಂದು ಒಬ್ಬ ಗೃಹಸ್ಥನು ತಾನಾಗಿಯೇ ಸಿದ್ಧನಾದನು. ಮಿರಜಕರ ಗಂಗಾಧರರಾವ ಉರ್ಫ ಬಾಳಾಸಾಹೇಬನ ವತಿಯಿಂದ ನಾರೋಹರಿ ಕರಂದಿಕರನೆಂಬುವ ವಕೀಲನು ಮಹಾರಾಜನ ದರಬಾರದಲ್ಲಿರುತ್ತಿದ್ದನು. ಆತನು ಪ್ರಸ್ತುತ ದಾಳಿಯ ಸಂಗಡ ಹೊರಟು ಬಂದಿದ್ದನು. ಭಾವುಸಾಹೇಬ-ಬಾಳಾಸಾಹೇಬ ಇವರಿಬ್ಬರು ಕಕ್ಕನ ಮಕ್ಕಳು. ಆದರೂ ಅವರಿಬ್ಬರಲ್ಲಿದ್ದ ಸಹೋದರಪ್ರೀತಿಯು ಅಸಾಧಾರಣವಾದದ್ದು. ಅದರಿಂದ ನಾರೋಹರಿಯು ಭಾವೂನನ್ನು ತನ್ನ ಧನಿಯಂತೆ ಭಾವಿಸಿ, ಆತನೊಡನೆ ಬಹು ನಯಭಯದಿಂದ ನಡಕೊಳ್ಳುತ್ತಿದ್ದನು. ಪರಶುರಾಮಭಾವುವಿನಂಥ ಪುಣ್ಯಶಾಲಿಯೂ, ಪ್ರತಾಪಶಾಲಿಯೂ, ಆದ ಪುರುಷಶ್ರೇಷ್ಠನ ಉತ್ತರಕಾರ್ಯವನ್ನು ಮಾಡುವ ಸುಯೋಗವು ಜನ್ಮಜನ್ಮಾಂತರ

ದಲ್ಲಿ ಸಹ ಒದಗದೆಂತಲೂ, ಅದು ದೈವಯೋಗದಿಂದ ತನ್ನ ಪಾಲಿಗೆ ಬಂದಿರುವದೆಂತಲೂ ಮತ್ತು ಅದು ತನ್ನ ಮಹತ್ಪೂರ್ವಸುಕೃತದ ಪ್ರತಿಫಲವೆಂತಲೂ ನಾರೋಹರಿಯು ವಿಚಾರಮಾಡಿ, ಆತನು ಆ ಬಗ್ಗೆ ಭಗೀರಥಪ್ರಯತ್ನಗಳನ್ನು ಮಾಡಿದನು. ಪ್ರೇತವು ಛಿನ್ನವಿಚ್ಛಿನ್ನವಾಗಿತ್ತು. ಆತನು ಮೊದಲು ಅದರ ಚೂರುಚೂರುಗಳನ್ನು ಒತ್ತಟ್ಟಿಗೆ ಕೂಡಿಸಿ, ಅದರ ಕಾವಲಿಗೆ ಇಬ್ಬರು ಮನುಷ್ಯರನ್ನು ನಿಯಮಿಸಿ, ತಾನು ದಹನಕಾರ್ಯಕ್ಕೆ ಅಪ್ಪಣೆಯನ್ನು ಪಡೆಯಬೇಕೆಂದು ಮಹಾರಾಜನ ರಾಹುಟಿಯ ಕಡೆಗೆ ಹೋದನು. ಆಗ್ಗೆ ಅರಸನು ಸುಖನಿದ್ರೆಯಲ್ಲಿದ್ದನು. ಕರವೀರಕರ-ಭಾವು ಇವರಿಬ್ಬರು ಪರಸ್ಪರ ನಿಕರದ ವೈರಿಗಳಾದುದರಿಂದ, ನಾರೋಹರಿಯು ಬಗೆಬಗೆಯಿಂದ ಬೇಡಿಕೊಂಡರೂ, ಮಹಾರಾಜನಬಳಿಗೆ ಹೋಗಿ ಅಪ್ಪಣೆಯನ್ನು ಕೇಳಿಕೊಳ್ಳುವ ಎದೆಯು ಯಾರಿಗೂ ಆಗಲಿಲ್ಲ. ಎಲ್ಲರೂ ಕಿವಿಗೆ ಕೈವೈದು ತಮ್ಮ ಕೈಯಿಂದಾಗದೆಂದು ಹೇಳಿದರು. ಕಡೆಗೆ ನಾರೋಹರಿಯು ಅರಸನ ಗುರುವಿನಕಡೆಗೆ ಹೋಗಿ, ಆತನಿಗೆ ಬಹಳ ಹೇಳಿಕೊಂಡು, ಆತನ ಮುಖಾಂತರ ಮಹಾರಾಜನ ಭೆಟ್ಟಿಯಾದನು. ಬಳಿಕ ಆ ಗುರುವು ಮಹಾರಾಜನಿಗೆ ಅನೇಕ ಸಾಮೋಪಚಾರದ ಮತ್ತು ಬುದ್ಧಿವಾದದ ಮಾತುಗಳನ್ನು ಹೇಳಿ, ಆತನ ನೆತ್ತಿಗೇರಿದ ಸಿಟ್ಟನ್ನು ಇಳಿಸಿ, ನಾರೋಹರಿಗೆ ಆಜ್ಞೆಯನ್ನು ಕೊಡಿಸಿದನು. ಆಮೇಲೆ ಒಳ್ಳೇ ಸಾಹಸದಿಂದ ಸಕಲ ಸಾಮುಗ್ರಿಗಳ ಸಿದ್ಧತೆಯನ್ನು ಮಾಡಿಕೊಂಡು ನಾರೋಹರಿಯು ಹಮೀಪವಾಡದ ಬಳಿಯಲ್ಲಿ ಪಟವರ್ಧನ ಕುಲತಿಲಕನಾದ ಪರಶುರಾಮಭಾವೂವಿನ ಪವಿತ್ರಪ್ರೇತದ ದಹನವಿಧಿಯನ್ನು ಯಥಾಸಾಂಗಮಾಡಿ ಕೃತಕೃತ್ಯನಾದನು. ಅಂತ್ಯಸಮಯದಲ್ಲಿ ಅಸದೃಶ ಸೇವೆಯನ್ನು ಮಾಡಿದ ಈ ನಾರೋಹರಿಯು ಭಾವೂಸಾಹೇಬನ ಐದನೇ ಮಗನೆಂದು ತಿಳಿಯಬೇಕು. ಮುಂದೆ ಭಾವೂನ ಮಕ್ಕಳು ಆತನನ್ನು ಚನ್ನಾಗಿ ಸತ್ಕರಿಸಿದರು.

ಪರಶುರಾಮಭಾವುಗೆ ನಾಲ್ಕು ಮಂದಿ ಗಂಡಸಮಕ್ಕಳು; ಇದಲ್ಲದೆ ಆತನ ಸಂಗಡ ಯಾವಾಗಲೂ ನೂರಾರು ಜನರು ಕೈಕಟ್ಟಿಕೊಂಡು ಇದ್ದೇ ಇರುತ್ತಿದ್ದರು; ಆದರೆ ಆತನ ಅಂತ್ಯಕಾಲದಲ್ಲಿ ಒಬ್ಬರೂ ಕೂಡ ಆತನ ಬಳಿಯಲ್ಲಿರಬಾರದೆಂಬುವದು ವಿಚಿತ್ರ ದೈವಯೋಗವೆಂದು ತಿಳಿಯಬೇಕಲ್ಲದೆ ಬೇರೆ ಏನೂ ಅಲ್ಲ. ಕೂತಾಗ, ನಿಂತಾಗ, ಮಲಗಿದಾಗ ಯಾವ ನರವೀ

ರನ ಕೂಡ ಅಸಂಖ್ಯ ಜನರ ಗದ್ದಲವಿರುತ್ತಿತ್ತೋ, ಅಂಥ ಅಪ್ರತಿಮ ಪುರುಷನ ದಹನಕ್ರಿಯೆಯನ್ನು ಮಾಡಲು ಒಬ್ಬನೂ ಅವನ ಹತ್ತರ ಇರಬಾರದೇ! ಶಿವ! ಶಿವ! ಇದೆಂಥ ದುಃಖಮಯಸ್ಥಿತಿಯು! ಸಾಕ್ಷಾತ್ ಭಗವಂತನೇ ಅವತಾರವಾಗಿ, ರಾಮ, ಲಕ್ಷ್ಮಣ, ಭರತಶತ್ರುಘ್ನರೆಂಬ ಹೆಸರಿನಿಂದ ಬೆಳೆದು, ತನ್ನ ಮಕ್ಕಳೆನಿಸಿಕೊಂಡಿದ್ದರೂ, ಕಡೆಗೆ ಮರಣಕಾಲಕ್ಕೆ ದಶರಥರಾಯನ ಬಳಿಯಲ್ಲಿ ಯಾರೂ ಇರಲಿಲ್ಲವಲ್ಲ? ಅಸಂಖ್ಯ ಪುತ್ರ, ಮಿತ್ರ, ಕಳತ್ರರಿಂದೊಡಗೂಡಿದ ಭಗವಾನ್ ಶ್ರೀಕೃಷ್ಣನ ಅವತಾರಪರಿಸಮಾಪ್ತಿಯ ಸಮಯದಲ್ಲಿ, ಆ ಪರಮಾತ್ಮನ ಬಳಿಯಲ್ಲಿ ಸಹ ಯಾರೂ ಇರಲಿಲ್ಲ. ಇದೇ ಪ್ರಕಾರ ವೀರೇಂದ್ರವೀರನಾದ ನಮ್ಮ ಚರಿತ್ರನಾಯಕನ ಅಂತ್ಯವಾಯಿತು. ಈ ಜಗತ್ತಿನಲ್ಲಿ ಇಂಥ ಉದಾಹರಣೆಗಳು ಆಗಾಗ್ಗೆ ಜನರ ಅನುಭವಕ್ಕೆ ಬರುತ್ತಿದ್ದರೂ, 'ನಾನು ನಿನ್ನವನು, ನೀನು ನನ್ನವನು, ಇವರು ನನ್ನ ಹೆಂಡರು ಮಕ್ಕಳು' ಎಂಬ ವ್ಯರ್ಥವಾದ ಮಾಯಾ-ಮೋಹವು ಸ್ವಲ್ಪಾದರೂ ಕಡಿಮೆಯಾಗಿರುವದೇ ಹ್ಯಾಗೆ? ಇರಲಿ.

ಪ್ರತಾಪದಲ್ಲಿ ಸೂರ್ಯನಿಗೆ ಸರಿಯಾದವನೂ, ಸರದಾರರ ಸಮೂಹದಲ್ಲಿ ಚಂದ್ರನಂತೆ ಪ್ರಕಾಶಿಸುವವನೂ, ಹರಿವಂಶೋದ್ಧಾರಕನೂ ಆದ ಪರಮಪರಾಕ್ರಮಿ ಪರಶುರಾಮಭಾವುವಿನ ದುಃಖಾತೀತವಾದ ಮರಣವಾರ್ತೆಯನ್ನು ಕೇಳಿ, ಸಂಪೂರ್ಣ ಮಹಾರಾಷ್ಟ್ರದೇಶವು ಹಳಹಳಿಸಿ ಕಣ್ಣೀರಿನಿಂದ ಕೈತೊಳೆಯಿತು. ಸೂರ್ಯಾಸ್ತದಿಂದ ಕಮಲಗಳ ಕಾಂತಿಯು ಕರಗುವಂತೆ, ಈ ಸರದಾರಪ್ರಭಾಕರನು ಅಸ್ತಂಗತನಾದುದರಿಂದ ಎಲ್ಲ ಜನರ ಉಲ್ಲಾಸವು ಕರಗಿ ಅವರ ಮೋರೆಯು ಹುಚ್ಚಿಟ್ಟಿತು. ಇತಿಹಾಸಖ್ಯಾತವಾದ ಖರ್ಡೆಯ ಕಾಳಗದಲ್ಲಿ ಯಶಸ್ವಿಯಾಗಿ ನಿಜಾಮನಂಥ ಪ್ರಬಲ ಮತ್ತು ಗರ್ವಿಷ್ಠ ವೈರಿಯ ಸೊಕ್ಕನ್ನು ಸೂರೆಗೊಂಡು ಬಂದಂದಿನಿಂದ, ಭಾವು ಯಾವತ್ತು ಮರಾಠಾ ಜನರ ಸಂಪೂರ್ಣ ಪ್ರೇಮಕ್ಕೆ ಪಾತ್ರನಾಗಿದ್ದನು. ಇಂಥ ಅದ್ವಿತೀಯ ಶೂರನೂ ವೀರನೂ ಆದ ಸರದಾರಶೇಖರನು ತಮ್ಮ ದೇಶದಲ್ಲಿ ಇರುವನೆಂದು ಅವರು ಒಳ್ಳೇ ಅಭಿಮಾನಪಡುತ್ತಿದ್ದರು. ಮತ್ತು ಇಂಥ ತುಂಗವಿಕ್ರಮನು ತಮ್ಮ ರಾಷ್ಟ್ರದ ದಂಡನಾಯಕನಾಗಿರುವವರೆಗೆ ಮರಾಠಾಜನರನ್ನು ಪೀಡಿಸುವ ಎದೆಯು ಯಾರಿಗೂ ಇಲ್ಲವೆಂದು ಅವರು ಮನಗಂಡಿದ್ದರು. ಇಂಥ ಅಮೌಲ್ಯ, ಅವರ್ಣನೀಯ ಮತ್ತು

ತೇಜೋಮಯ ಶೂರರತ್ನವು ಒಮ್ಮಿಂದೊಮ್ಮೆ ಇಲ್ಲದಾಗಲು, ನೋಡಿದ ತ್ತೆಲ್ಲ ಹಾಹಾಕಾರವೆದ್ದಿತು. ಕುಟುಂಬದ ಮುಖ್ಯ ಮನುಷ್ಯನು ತೀರಿ ಕೊಂಡರೆ, ಆ ಕುಂಟುಬದ ಜನರು ಶೋಕಾಕುಲರಾಗಿ ದುಃಖಪಡುವಂತೆ ಎಲ್ಲ ಜನರು ಅತ್ತತ್ತು ಹಂಬಲಿಸಿದರು. ಇಂಥ ನರವೀರನು ಮುಂದೆ ಎಂದೂ ಹುಟ್ಟನೆಂದು ಎಲ್ಲರೂ ಅನ್ನಲಾರಂಭಿಸಿದರು. ಅವರ ಆ ಭವಿಷ್ಯ-ವಚನವು ಇಲ್ಲಿಯವರೆಗಂತೂ ಸತ್ಯವಾಗಿರುವದು. ಮುಂದಿನದನ್ನು ಯಾರು ಕಂಡಿರುವರು? ಬಾಜೀರಾಯನು ಭಾವೂನ ದ್ವೇಷಿಯು. ಆದರೂ ಆತನು ಕೂಡ ಆ ವೀರಮಣಿಯ ಪರಾಕ್ರಮಗುಣಗಣವನ್ನು ಕೊಂಡಾಡಿ "ಶೂರಾಗ್ರೇಸರನಾದ ಪರಶುರಾಮಭಾವು ಸ್ವಾಮಿಕಾರ್ಯಾರ್ಥ ಆಜನ್ಮ ತನ್ನ ಜಡ ದೇಹವನ್ನು ಸವಿಸಿ, ಕಡೆಗೆ ಆ ಸತ್ಕೃತ್ಯಕ್ಕಾಗಿಯೇ ತನ್ನ ಮೌಲಿಕವಾದ ಶರೀರವನ್ನು ಸಮರಾಗ್ನಿಕುಂಡದಲ್ಲಿ ಸಮರ್ಪಿಸಿದನು," ಎಂದು ನೆನೆಸಿ ಕಡು ಮಿಡುಕಿದನು. ಯಾರು ಭಾವುವಿನ ಜತೆಯಲ್ಲಿದ್ದು, ಅಸಂಖ್ಯ ದಾರುಣವಾದ ಯುದ್ಧಪ್ರಸಂಗಗಳಲ್ಲಿ ಕಲಿತನದಿಂದ ಕಾದಿ, ಕಾಳಗದ ಗೆಲವಿನಲ್ಲಿಯೂ, ಒದಗಿದ ವಿಘ್ನ-ವಿಪತ್ತುಗಳಲ್ಲಿಯೂ, ಆತನ ಪಾಲುಗಾರರಾಗಿದ್ದರೋ ಅವರೆಲ್ಲರು ಆ ಮಹಾನುಭಾವನ ಮರಣ-ಸಮಾಚಾರವನ್ನು ಕೇಳಿ ಕಂಬನಿಗಳನ್ನು ಸುರಿಸಿ ನೆಲಕ್ಕೆ ಬಿದ್ದರು. ಅವರ ಅಳವು ಏನು ಮಾಡಿದರೂ ನಿಲ್ಲದು. ಇಂಥ ರಣಪಂಡಿತ ಸೇನಾಪತಿಯು ಮುಂದೆ ತಮಗೆ ದೊರಕನೆಂದು ಮೇಲಿಂದ ಮೇಲೆ ಉಸುರ್ಗರೆಯುತ್ತ ಅವರು ಶೋಕಸಾಗರದಲ್ಲಿ ಮುಳುಗಿದರು. ಎಲ್ಲರಕಿಂತ ನಾನಾಫಡಣವೀಸನಿಗೆ ಅತ್ಯಂತ ದುಃಖವಾಯಿತು. ಯಾವನ ಪರಾಕ್ರಮದ ಬಲದಿಂದ ತಾನು ಅನೇಕ ಅಗಾಧ ಕಾರಸ್ಥಾನಗಳನ್ನು ರಚಿಸಿ ಅವುಗಳನ್ನು ನೆರವೇರಿಸಿದನೋ, ಯಾವನ ಭುಜಬಲದ ಸಹಾಯದಿಂದ ತಾನು ಹೈದರ-ಟೀಪು-ನಿಜಾಮ-ಕೊಲ್ಹಾಪುರಕರ ಇತ್ಯಾದಿ ಪ್ರಚಂಡ ವೈರಿಗಳ ಮಗ್ಗಲೆಲವು ಮುರಿದು ಮೆತ್ತಗೆ ಮಾಡಿದನೊ, ಯಾವನ ಶೌರ್ಯ-ಸಾಹಸಗಳ ಬೆಂಬಲದಿಂದ ತಾನು ದೊಡ್ಡ ದೊಡ್ಡ ದೇಶಕೋಶಗಳನ್ನು ಪಾದಾಕ್ರಾಂತ ಮಾಡಿಕೊಂಡನೋ ಮತ್ತು ಯಾವನ ಅಪ್ರತಿಮ ಪ್ರತಾಪ ಪ್ರಭಾವದಿಂದ ಇಡೀ ಭಾರತವರ್ಷದಲ್ಲಿ ಪೇಶವೆಸಾಮ್ರಾಜ್ಯದ ಕೀರ್ತಿಧ್ವಜವನ್ನು ದೃಢವಾಗಿ ನಿಲ್ಲಿಸಿದನೋ ಆ ಭೀಮಬಲನಾದ ಭಾವು ತನ್ನ ಜೀವದ ಗೆಳೆಯನು. ತನ್ನನ್ನು ಹಿಂದೆ ಬಿಟ್ಟು ಪರಲೋಕಕ್ಕೆ ತೆರಳಿದನೆಂದು ನಾನಾ

ಫಡಣವೀಸನು ಹಲವು ಪ್ರಕಾರ ಹಂಬಲಿಸಿ ದುಃಖಿಸಿದನು. ನಾನಾಬಗೆಯ ವಿಚಾರತರಂಗಗಳು ಆತನ ಹೃದಯಭೂಮಿಯನ್ನು ಆಕ್ರಮಿಸಿದವು; ಆವನು ಭಾವುಸಾಹೇಬನ ಗುಣಗಣವನ್ನು ಬಗೆಬಗೆಯಿಂದ ಕೊಂಡಾಡಿ, ಅತ್ತತ್ತು ಶೋಕವಿಹ್ವಲನಾದನು; ಆತನ ಅಳವು ಏನು ಮಾಡಿದರೂ ನಿಲ್ಲದು. ಪ್ರಾಣಸಖನಾದ ಭಾವೂನ ಕೂಡ ತಾನು ನಡುವೆ ಕೃತಘ್ನತನದಿಂದ ನಡೆದುದರಿಂದ ಆತನು ಸಿಟ್ಟಾಗಿ ತನ್ನನ್ನು ತ್ಯಾಗಮಾಡಿರಲಿಕ್ಕಿಲ್ಲವಷ್ಟೇ ಎಂದು ನಾನಾನ ಮನಸ್ಸಿನಲ್ಲಿ ಚುಚ್ಚ ಹತ್ತಿತು. ಪರಶುರಾಮಪಂತನು ಮಾಡಿದ ಅನಂತಾನಂತ ಉಪಕಾರಗಳು ಆತನಿಗೆ ಒಮ್ಮೆಂದೊಮ್ಮೆ ನೆನಪಾಗಿ ಆತನ ಸದ್ಗುಣಗಣವು ಮೂರ್ತಿಮತ್ತಾಗಿ ಅವನೆದುರಿಗೆ ನಿಂತಿತು. ಭಾವೂನ ದಿವ್ಯ ಸ್ವರೂಪವಂತೂ ನಾನಾನ ಕಣ್ಣಿಗೆ ಕಟ್ಟಿದಂತಾಯಿತು. ಒಬ್ಬ ಪರಶುರಾಮಭಾವು ಇಲ್ಲದರಿಂದ ಸರ್ವ ಮರಾಠಾರಾಜ್ಯವು ಸ್ಮಶಾನಾವತ್ ಭಾಸವಾಯಿತು. ಇನ್ನು ತನ್ನ ತಾರಕರು ಯಾರೂ ಉಳಿಯಲಿಲ್ಲವೆಂದು ನಾನಾನು ನೆರೆ ಚಿಂತಿಸಿ ತೀರಾ ಉದಾಸನಾದನು; ಅವನ ವಿಚಾರಶಕ್ತಿಯು ಅಳಿದು ಹೋಗಿ ಅವನಿಗೆ ಏನೂ ತೋಚದಾಯಿತು; ಆತನ ಮನೋಧೈರ್ಯವು ಪೂರಾ ಲೋಪವಾಯಿತು. ಮುಂದೆ ಆ ಮಂತ್ರಿಸೂರ್ಯನು ಐದಾರು ತಿಂಗಳುಗಳಲ್ಲಿಯೇ ಅಸ್ತಂಗತನಾದನು. ( ಶಕೆ ೧೭೨೧ ಫಾಲ್ಗುಣ ವದ್ಯ ೩ ಗುರುವಾರ ).

ತಾಸಗಾಂವಿಯಲ್ಲಿ ಪರಶುರಾಮಭಾವೂನ ಅರಮನೆಯಲ್ಲಿ ಆದ ಅನರ್ಥ, ಆತನ ಕುಟುಂಬದ ಜನರು ಮಾಡಿದ ಪ್ರಳಾಪ ಮೊದಲಾದವುಗಳ ಕಷ್ಟತಮ ವರ್ಣನೆಯನ್ನು ಯಾರು ಮಾಡಬೇಕು? ಭಾವೂನ ಶೂರ ಮಕ್ಕಳು ರಣಭೂಮಿಯಿಂದ ಮರಳಿ ಬಂದು ತಮ್ಮ ಜನ್ಮದಾತನ ಹಾದೀ ನೋಡುತ್ತಿದ್ದರು. ಆದರೆ ಭಾವು ತಿರುಗಿ ಬರಲೇ ಇಲ್ಲ. ಅವನು ಸ್ವರ್ಗಸೋಪಾನವನ್ನೇ ಅಡರಿದನು. ಅವರು ಈ ವಿಪರೀತವಾರ್ತೆಯನ್ನು ಕೇಳಿ ನೆಲಕ್ಕೆ ಬಿದ್ದರು. ಆಗ ಅವರ ಮೇಲೆ ದುಃಖದ ಬೆಟ್ಟವೇ ಕಡಕೊಂಡು ಬಿದ್ದಂತಾಯಿತು. ತಮ್ಮ ಮೇಲೆ ಭಾವೂಸಾಹೇಬನ ಪ್ರೀತಿಯು ಎಷ್ಟು? ಆತನು ತಮ್ಮ ಲಾಲನೆ-ಪಾಲನೆಗಳನ್ನು ಎಷ್ಟು ವಾತ್ಸಲ್ಯದಿಂದ ಮಾಡಿದನು? ತಮ್ಮ ಸಲುವಾಗಿ ಆತನು ಆಗಾಗ್ಗೆ ಒದಗಿದ ಸಂಕಟಗಳಿಗೆ ತಲೆಕೊಟ್ಟು ತನ್ನ ದೇಹವನ್ನು ಹ್ಯಾಗೆ ಸವಿಸಿದನು? ಇದಲ್ಲದೆ ತಮ್ಮ ಮೇಲೆ ಆತನು

ಎಂಥೆಂಥ ಮಹದುಪಕಾರಗಳನ್ನು ಮಾಡಿರುವನು? ಇವೆಲ್ಲವುಗಳನ್ನು ಅವರು ನೆನಪು ಮಾಡಿಕೊಂಡು ಸದ್ಗದಿತಕಂಠದಿಂದ ಅಳತೊಡಗಿದರು. ಒಂದೊಂದನ್ನು ನೆನಿಸಿ ಅಳುವರು; ನಡುವೆ ಸ್ವಲ್ಪ ಸುಮ್ಮಗಾಗುವರು; ಮತ್ತೊಂದು ನೆನಪಾಗುತ್ತಲೆ ಮತ್ತೆ ಶೋಕಿಸುವರು. ಹೀಗೆ ಅವರ ಹಾಡು ಆಯಿತು. ಅವರೆಲ್ಲರು ಮಹಾ ಧೈರ್ಯಶಾಲಿಗಳು. ಆದರೆ ಆ ವಿಷಮ ಸಮಯದಲ್ಲಿ "ಶೋಕೋ ನಾಶಯತೆ ಧೈರ್ಯ" ಎಂಬಂತೆ ಅವರ ಧೈರ್ಯಸಾಗರವು ಬತ್ತಿ, ಅವರ ಶೋಕಕ್ಕೆ ಪಾರಾವಾರವಿಲ್ಲದಂತಾಯಿತು. ಭಾವೂಸಾಹೇಬನೊಬ್ಬನನ್ನೇ ತಾವು ಹಿಂದೆ ಬಿಟ್ಟು ಬಂದದ್ದು ಕೇವಲ ತಮ್ಮ ಕೃತ್ನಘ್ನತನದ ಕೆಲಸವಾಯಿತೆಂದು ಬಗೆದು ಕಳವಳಗೊಂಡರು. ಅಶ್ರುಧಾರೆಯು ಎಡೆಬಿಡದೆ ನಡೆದುದರಿಂದ ಅವರ ಸರ್ವಾಂಗವು ತೊಯ್ದು ಹೋಯಿತು. ತಾಸಗಾಂವಿಯು ಪರಶುರಾಮಭಾವುವಿನ ಆಪ್ತೇಷ್ಟರಿಂದಲೂ, ಆಶ್ರಿತ ಜನರಿಂದಲೂ, ಮಿತ್ರವರ್ಗದಿಂದಲೂ ತುಂಬಿಕೊಂಡಿತ್ತು. ಅವರೆಲ್ಲರು ಕೊನೆಮೊದಲಿಲ್ಲದ ದುಃಖ-ಸಮುದ್ರದಲ್ಲಿ ಮುಳಗಿ ಹೋದರು. ಎಲ್ಲಿ ನೋಡಿದರೂ ಉದಾಸವೃತ್ತಿಯು; ಅಳುವಧ್ವನಿಯು ಪ್ರಚಂಡ ನದಿಯ ಪ್ರವಾಹದ ಸಪ್ಪಳದಂತೆ ಕೇಳಿಸುತ್ತಿತ್ತು. ಸೂರ್ಯನಿಲ್ಲದ ಆಕಾಶದಂತೆಯೂ, ತನಯರಿಲ್ಲದ ಕುಟುಂಬದಂತೆಯೂ, ನೀರಿಲ್ಲದ ಸರೋವರದಂತೆಯೂ, ಧರ್ಮದರಸಿಲ್ಲದ ದೇಶದಂತೆಯೂ, ಮೂಗಿಲ್ಲದ ಮೊಗದಂತೆಯೂ, ಪ್ರಾಣವಿಲ್ಲದ ದೇಹದಂತೆಯೂ, ದೇವರಿಲ್ಲದ ದೇವಾಲಯದಂತೆಯೂ, ಪಟವರ್ಧನ ಕುಲೋತ್ತಮನೂ, ತನ್ನ ಜೀವನಸ್ವರೂಪನೂ ಆದ ಪರಶುರಾಮಭಾವು ಇಲ್ಲದಾದುದರಿಂದ ಆ ಪಟ್ಟಣವು ಹಾಳುಸುಡಗಾಡಿನ ಕಳೆಯನ್ನು ಧರಿಸಿತು. ತಾತ್ಪರ್ಯ, ಕುಂಕುಮ-ಮಾಂಗಲ್ಯಕಾರಣನಾದ ಪತಿರಾಯನು ಗತಿಸಲು ಆತನ ಸತಿಯು ಶೋಕಮಾಡುವಂತೆ ಆ ನಗರರೂಪಸ್ತ್ರೀಯು ಗೋಳಿಟ್ಟು ಅಳುತ್ತಿರುವಂತೆ ಕಂಗೊಳಿಸಿತು.

ಪರಶುರಾಮಭಾವು ಪರಲೋಕವಾಸಿಯಾದುದರಿಂದ ಪಟವರ್ಧನ ಬಾಂಧವ ಸರದಾರರೆಲ್ಲರಿಗೆ ಅತ್ಯಂತ ದುಃಖವೆನಿಸಿತು. ಗೋಪಾಳರಾಯನ ತರುವಾಯ ಅವರಲ್ಲಿ ಭಾವೂನೇ ಪ್ರಮುಖನಾಗಿದ್ದನು; ಆತನ ಪರಾಕ್ರಮದ ಬಲದಿಂದ ಉಳಿದವರ ಉಚ್ಛ್ರಾಯವು ಆಗುತ್ತ ನಡೆದಿತ್ತು. ಆತನೇ ಅಂತ್ಯ

ವಾದುದರಿಂದ ಪಟವರ್ಧನರು ಬೇರಿಲ್ಲದ ಗಿಡದಂತೆ ನಿರಾಧಾರರಾದರು. ಮಿರಜಕರ ಬಾಳಾಸಾಹೇಬನ ಒಂದು ಪತ್ರವಿರುವದು; ಅದರಲ್ಲಿ ಅವನು " ಪಟವರ್ಧನಕುಲತಾರಕರಾದ ಗೋಪಾಳರಾಯರು ತೀರಿದರು; ಅವರ ಪಶ್ಚಾತ್ ಪಟವರ್ಧನ ಸರದಾರರ ಮುಕುಟಮಣಿಯೂ, ಸರ್ವರ ಆಶ್ರಯಭೂತರೂ ಆದ ಪರಶುರಾಮಪಂತರೂ ನಮ್ಮ ಕೈ ಬಿಟ್ಟರು; ಈಗ ನಮಗೆ ಯಾರ ಆಧಾರವು ಉಳಿಯಲಿಲ್ಲ, " ಎಂದು ದುಃಖೋದ್ಗಾರವನ್ನು ಮಾಡಿರುವನು.

ಬಾವೂಸಾಹೇಬನ ಹಿರೇಮಗನಾದ ರಾಮಚಂದ್ರರಾಯನಿಗೆ ಶ್ರೀಮಂತ ಸರಕಾರದಿಂದ ದು:ಖಪ್ರದರ್ಶಿತ ಪತ್ರವೂ, ವಸ್ತ್ರಗಳೂ ಬಂದವು. ಆ ಪತ್ರದಲ್ಲಿ ಪರಾಕ್ರಮಶಾಲಿಯಾದ ಪರಶುರಾಮಭಾವೂನ ಅನಂತ ಗುಣಗಳು ಯಥೋಚಿತ ವರ್ಣಿಸಲ್ಪಟ್ಟದಲ್ಲದೆ, ಆತನ ಮರಣದಿಂದ ಪೇಶವೆ ಸರಕಾರಕ್ಕೆ ಎಂದೂ ತುಂಬಿಬಾರದ ಹಾನಿಯಾಯಿತೆಂದು ಉಲ್ಲೇಖವಾಗಿತ್ತು. ನಾನಾಫಡಣವೀಸ ಮೊದಲಾದ ರಾಜಪ್ರಧಾನರೂ, ಶಿಂದೇ ಹೋಳಕರ ಮುಂತಾದ ಸರದಾರರೂ ದುಃಖಸೂಚಕ ಪತ್ರಗಳನ್ನು ಕಳುಹಿ, ಅಪ್ಪಾಸಾಹೇಬನ ದುಃಖವನ್ನು ಉಪಶಮನ ಮಾಡಿದರು. ಶ್ರೀರಂಗಪಟ್ಟಣದ ದಾಳಿಯ ಯೋಗದಿಂದ ಬಲಾಢ್ಯರಾದ ಇಂಗ್ಲೀಷರಿಗೂ ಭಾವೂಗೂ ವಿಶೇಷ ಗೆಳೆತನವಾಗಿತ್ತು. ಆತನ ಮೃತ್ಯು-ವಾರ್ತೆಯನ್ನು ಕೇಳಿ ಭೂತದಯಾಪರರಾದ ಇಂಗ್ಲೀಷರು ಕಡುಮಿಡುಕಿ, ದು:ಖಪ್ರದರ್ಶನ ಮಾಡಿದರು. ಧನ್ಯ-ಧನ್ಯ ಹೀಗೆ ಸ್ವಕೀಯ ಮತ್ತು ಪರಕೀಯ ಜನರ ನಿರ್ಮಲವಾದ ಆದರಕ್ಕೆ ಪಾತ್ರನಾದ ನಮ್ಮ ಚರಿತ್ರನಾಯಕನೇ ಪರಮ ಧನ್ಯನು.

# ೧೫ನೆಯ ಅಧ್ಯಾಯವು.

## ಪರಶುರಾಮಭಾವೂನ ಗೃಹಸ್ಥಿತಿಯೂ, ಆತನು ಮಾಡಿದ ಧರ್ಮಕೃತ್ಯಗಳೂ.

ಗೃಹಸ್ಥಾಶ್ರಮಿಯಾದ ಪುರುಷನಿಗೆ ಪ್ರಪಂಚವು ಸುಖದಾಯಕವಾಗಲು, ಎಷ್ಟೋ ಮಾತುಗಳ ಅನುಕೂಲತೆಯು ಇರಬೇಕಾಗುವದು ಸಂಸಾರವೆಂಬುವದೊಂದು ದೊಡ್ಡ ಯಂತ್ರವು. ಯಂತ್ರದೊಳಗಿನ ಯಾವದೇ ಒಂದು ಸಣ್ಣ ಪದಾರ್ಥವು ಮುರಿದರೆ, ಅಥವಾ ಯಾವದಾದರೊಂದು ಸೂಕ್ಷ್ಮವಾದ ಆಯುಧದ ಕೊರತೆಯು ಉತ್ಪನ್ನವಾದರೆ, ಆ ಯಂತ್ರವೇ ನಿರುಪಯೋಗಿಯಾಗಿ ಮೂಲಿಗೆ ಬೀಳುವದು; ಅದರಂತೆ ಈ ವ್ಯವಹಾರರೂಪವಾದ ಸಂಸಾರದಲ್ಲಿ ಮನುಷ್ಯನಿಗೆ ಯಾವ ಯಾವ ವಸ್ತುಗಳ ನಿಕಟಸಂಬಂಧವಿರುವದೋ, ಅವುಗಳಲ್ಲಿ ಯಾವದಾದರೊಂದು ಮಾತಿನ ಅಭಾವವಾಯಿತೆಂದರೆ ಸರ್ವ ಸಂಸಾರಸುಖವು ಮಣ್ಣುಕೂಡುವದು. ಪುರುಷನು ಗುಣಿಯಿದ್ದು, ಸ್ತ್ರೀಯು ದುರ್ಗುಣಿಯಿದ್ದರೆ, ಅಥವಾ ಸ್ತ್ರೀಯು ಪರಮ ಪತಿನಿಷ್ಠೆಯುಳ್ಳವಳಿದ್ದು ಆಕೆಯ ಪತಿಯು ದುರಾಚಾರಿಯಿದ್ದರೆ, ಅವರಿಬ್ಬರ ಅನ್ಯೋನ್ಯ ಸಂಸಾರಸುಖವು ನೀರಿನಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುವದು. ಇನ್ನು ತಂದೆತಾಯಿಗಳು ಸದಾಚಾರಸಂಪನ್ನರಿದ್ದು ಅವರ ಮಕ್ಕಳು ದುಷ್ಟರಿದ್ದರೆ, ಆ ಕುಟುಂಬದ ಪ್ರಪಂಚವು ಅಂದಗೆಟ್ಟು, ಅದರ ಸುಖವೂ, ಪ್ರತಿಷ್ಠೆಯೂ, ಕೀರ್ತಿಯೂ ನಿರ್ನಾಮವಾಗುವವು; ಇವೆಲ್ಲ ಮಾತುಗಳ ಅನುಭವವು ಸರ್ವರಿಗೂ ಅವಗತವಾದದ್ದೇ. ಸದ್ಗುಣಿಯಾದ ಸ್ತ್ರೀಯು, ಆಜ್ಞಾಧಾರಕರಾದ ಪುತ್ರರು, ವಿಧೇಯ ಸೇವಕರು ಇತ್ಯಾದಿ ಸಂಸಾರಸುಖಕ್ಕೆ ಕಾರಣೀಭೂತವಾದ ಸಮಸ್ತ ಸಾಧನ-ಸಂಪತ್ತುಗಳ ಅನುಕೂಲತೆಯು ಈ ಜಗತ್ತಿನಲ್ಲಿ ಸ್ವಲ್ಪಜನರಿಗೆ ಮಾತ್ರ ಲಭಿಸುವದು. ಇಂಥ ಜನರು ಮೃತ್ಯುಲೋಕದಲ್ಲಿದ್ದುಕೊಂಡು, ಸ್ವರ್ಗಲೋಕದ ದಿವ್ಯಸೌಖ್ಯವನ್ನು ಅನುಭೋಗಿಸುತ್ತಿರುವರೆಂದು ಬಲ್ಲವರು ಹೇಳುವದು ಯಥಾರ್ಥವಾದದ್ದು. ಇಂಥ ಪುರುಷರ ಜೀವಿತವು ನಿಜವಾಗಿ ಧನ್ಯವೇ ಸೈ. ಯಾಕಂದರೆ—

ಚಂಪಕಮಾಲಾ.

ಬಿರುಮಡಿಯಾಡದಾ ಸತಿಯು, ಕೋವಿದ ಪುತ್ರರನೂನಸಂಪದಂ ।
ಪುರಹರ ಪೂಜೆ, ಸಜ್ಜನ ಸಮಾಗಮ. ಸತ್ಸಖಾಷ್ಟ್ಯಭೋಜನಂ ॥
ನಿರುತ ಸ್ವಕೀಯ ಕಾಂತೆಯೊಳು ಪ್ರೀತ್ಯಭಿವಂದಿಪತಂದೆತಾಯ್ಗಳಾ ।
ದರವು, ವಿಧೇಯ ಸೇವಕ ಸಮೋಪಿತ ಸಂಸ್ಕೃತಿ ಯೇನು ಧನ್ಯವೋ? ॥೧॥

ಎಂಬದಾಗಿ ಒಬ್ಬ ಪ್ರಪಂಚದ ಅನುಭವಿಕ ಕವಿಯು ಘಂಟಾಘೋಷ ಮಾಡಿರುವನು. ಇವೆಲ್ಲ ವಿಚಾರಗಳನ್ನು ಮನದಂದು ಪರಶುರಾಮಭಾವೂನ ಗೃಹಸ್ಥಿತಿಯ ವಿಷಯವಾಗಿ ಈ ಭಾಗದಲ್ಲಿ ನಾಲ್ಕು ಸಾಲು ಬರೆದು ವಾಚಕರ ಮುಂದಿಡುವೆವು.

ಅರ್ವಾಚೀನ ಆರ್ಯವೀರವರನಾದ ಭಾವೂಸಾಹೇಬನ ವೀರಮಾತೆಯ ಹೆಸರು ಜಾನಕಿಬಾಯಿಯು. ಆಕೆಯು ಪುಣೆಯ ಖಾಸಗಿವಾಲೆ ಎಂಬ ಪ್ರತಿಷ್ಠಿತ ಮನೆತನದ ಹೆಣ್ಣುಮಗಳು. ಆ ಮನೆತನದ ಸ್ತ್ರೀಪುರುಷರು ಪರಮ ಕುಲಶೀಲಸಂಪನ್ನರೆಂದು ಖ್ಯಾತಿಗೊಂಡಿದ್ದರು; ಜಾನಕಿಬಾಯಿಯಾದರೂ ಕುಲೀನೆಯೂ, ಭಕ್ತಿಪರಾಯಣಳೂ, ಸಚ್ಛೀಲದಿಂದ ಕೂಡಿದವಳೂ ಆಗಿದ್ದಳು. ಬಾಲ ವಯವು ಭಾವೀ ಉತ್ಕರ್ಷಕಾಲದ ಅಸ್ತಿವಾರದಂತಿದ್ದು, ಆಗ್ಗೆ ಮಕ್ಕಳಿಗೆ ತಾಯಿಯ ಸಂಬಂಧವು ಅತಿ ನಿಕಟವಾಗಿರುತ್ತದೆ. ಆದ್ದರಿಂದ ತಾಯಿಯ ಸ್ವಭಾವದ ಪ್ರತಿಬಿಂಬವು ಹುಡುಗರ ಮನಸ್ಸಿನಲ್ಲಿ ತಾತ್ಕಾಲ ಮೂಡುವದು. ಇದು ಸೃಷ್ಟಿಯ ಸರ್ವ ಸಾಮಾನ್ಯವಾದ ನಿಯಮವು. ಇದಕ್ಕನುಸರಿಸಿ ಜಾನಕಿಬಾಯಿಯ ಕ್ಷಮೆ, ಸಹನಶೀಲತ್ವ, ದಯಾಳುತ್ವ ಇತ್ಯಾದಿ ಸಾತ್ವಿಕಗುಣಗಳು ಭಾವುನಲ್ಲಿ ಸಂಪೂರ್ಣ ಅಂತರ್ಭೂತವಾಗಿದ್ದವು. ಆತನ ತಂದೆಯು ಅವನು ಚಿಕ್ಕವನಿರುವಾಗಲೇ ತೀರಿಕೊಂಡದರಿಂದ, ಪರಶುರಾಮಪಂತನಿಗೆ ವಿದ್ಯೆಬುದ್ಧಿಯನ್ನು ಕಲಿಸಿ ಆತನನ್ನು ಸನ್ಮಾರ್ಗಕ್ಕೆ ಹಚ್ಚುವ ಎಲ್ಲ ಭಾರವು ಆತನ ತಾಯಿಯಾದ ಜಾನಕಿಬಾಯಿಯ ಮೇಲೆಯೇ ಬಿದ್ದಿತು. ಆಕೆಯು ಆ ಮಹತ್ವಕಾರ್ಯವನ್ನು ಪುರುಷೋತ್ತಮರಾಯನ ಸಹಾಯದಿಂದ ಉತ್ಕೃಷ್ಟರೀತಿಯಿಂದ ಸಾಂಗಗೊಳಿಸಿದಳು. ಎಲ್ಲರೊಡನೆ ಸರಳತನದಿಂದ ನಡೆಯೋಣ, ಸೇವಕ ಪರಿಚಾರಕರನ್ನು ಸರಿಯಾಗಿ ಪ್ರೀತಿಸೋಣ, ಏಕನಿಷ್ಠೆಯಿಂದ ನಡೆದು ಪ್ರಭುಚಿತ್ತನ್ನು ಪ್ರಸನ್ನ ಮಾಡಿಕೊ

ಳ್ಳೋಣ, ಮುಂತಾದವುಗಳ ಬಗ್ಗೆ ಆ ಸಾಧ್ವಿಯು ಪರಶುರಾಮಭಾವೂನಿಗೆ ಆಗಾಗ್ಗೆ ಉಪದೇಶ ಮಾಡುತ್ತ, ತನ್ನ ವೀರಪತಿಯ ಶೌರ್ಯ-ಸಾಹಸಗಳ ಯಥಾರ್ಥವರ್ಣನೆಯನ್ನು ತನ್ನ ವೀರಬಾಲಕನ ಮುಂದೆ ಮೇಲಿಂದಮೇಲೆ ಮಾಡುತ್ತ ಆತನ ನೈಸರ್ಗಿಕ ಶೌರ್ಯ, ಧೈರ್ಯ, ಗಾಂಭೀರ್ಯ, ಬುದ್ಧಿ ಚಾತುರ್ಯಗಳನ್ನು ವೃದ್ಧಿಂಗತ ಮಾಡಿ ಕೃತಾರ್ಥಳಾದಳು. ಜಾನಕಿಬಾಯಿಗೆ ಜೀವುಬಾಯಿ ಎಂಬೊಬ್ಬ ಮಗಳಿದ್ದಳು. ಅವಳು ಭಾವುಸಾಹೇಬನ ತಂಗಿಯು. ಆಕೆಯನ್ನು ಪೇಣದ ಲಕ್ಷ್ಮಣರಾವ ಕೊಲ್ಹಾಪುರಕರನಿಗೆ ಕೊಟ್ಟಿತ್ತು; ಅವರ ವಂಶೀಯರು ಇನ್ನೂ ಪೇಣದಲ್ಲಿರುವರೆಂದು ತಿಳಿಯುತ್ತದೆ.

ಭಾವೂಸಾಹೇಬನ ಧರ್ಮಪತ್ನಿಯ ಹೆಸರು ರಾಧಾಬಾಯಿಯು. ಆ ಕುಲವಧುವು ತಾಸಗಾಂವಿಯ ಸುಪ್ರಸಿದ್ಧ ಸಾಹುಕಾರರಾದ ಜೋಗ ಮನೆತನದ ಮೂಲಪುರುಷ ವಿಶ್ವನಾಥಪಂತ ಜೋಗ ಇವರ ಮಗಳು. ಈ ರಾಧಾ-ಪರಶುರಾಮರ ಲಗ್ನವು ಇಸವಿ ಸನ್ನ ೧೭೫೩ ಸುಮಾರಕ್ಕೆ ಪುಣೆಯಲ್ಲಿ ಆಯಿತು. ‹ ಜೋಗ › ಮನೆತನವು ಒಳ್ಳೇ ಮಾನ್ಯತೆಯನ್ನು ಹೊಂದಿದ ಮನೆತನವು; ರಾಧಾಬಾಯಿಯು ಅತಿ ರೂಪವತಿಯು. ಅವಳು ಪತಿಸೇವೆಯಲ್ಲಿ ನಿರತಳೂ, ಸದಾಚಾರಸಂಪನ್ನಳೂ, ಇದ್ದಳು. ಉತ್ತಮ ಗೃಹಿಣಿಯು ಪ್ರಪಂಚದಲ್ಲಿ ಪುರುಷನ ಅರ್ಧಭಾರವನ್ನು ಹೊರುವಳು. ಅಂಥ ಸ್ತ್ರೀಯು ಇರುವದರಿಂದ, ಪುರುಷನು ಯಾವದೇ ಗಹನ ವಿವೇಚನೆಯಲ್ಲಿರಲಿ, ಇಲ್ಲವೇ ದುಃಖದಲ್ಲಿರಲಿ, ಯಾವ ಸ್ಥಿತಿಯಲ್ಲಿದ್ದರೂ ಆ ಸತ್ಸತಿಯ ಮಧುರ ಮತ್ತು ಪ್ರೇಮರಸಿತ ಭಾಷಣದ ಯೋಗದಿಂದ ಅವನ ವಿವೇಚನೆಯೂ, ದುಃಖವೂ ಮರೆತು ಹೋಗುವವು; ಮತ್ತು ಸಂಸಾರದಲ್ಲಿ ಆಗಾಗ್ಗೆ ಒದಗುವ ನಾನಾಬಗೆಯ ಎಡರುಗಳನ್ನು ಅವನು ಸಹಿಸಲು ಸಮರ್ಥನಾಗುವನು. ಈ ಪ್ರಕಾರ ಉತ್ತಮ ಸ್ತ್ರೀಯರ ಯೋಗದಿಂದ ಕುಟುಂಬಗೌರವವು ಹೆಚ್ಚುವದಲ್ಲದೆ, ಎಲ್ಲ ಬಗೆಯಿಂದ ಸಂಸಾರವು ಸುಖಮಯವಾಗುವದು. ಇಂಥ ಸುಸ್ತ್ರೀಯರೇ ಸಾಧ್ವಿಯರೆಂಬ ಹೆಸರಿಗೆ ಪಾತ್ರರು; ಅವರೇ ಕುಲೀನ ಗೃಹಿಣಿಯರು. ನಮ್ಮ ಚರಿತ್ರನಾಯಕನ ಅರ್ಧಾಂಗಿಯಾದ ರಾಧಾಬಾಯಿಯು ಇದೇ ಮಾದರಿಯ ಸುಸ್ತ್ರೀಯು. ಅವರಿಬ್ಬರಲ್ಲಿ ಪರಸ್ಪರ ನಿಸ್ಸೀಮ ಪ್ರೇಮವಿತ್ತು. ಪರಶುರಾಮಭಾವು ಆಗಾಗ್ಗೆ ದಾಳಿಯೊಡನೆ ಹೋಗುತ್ತಿ

ದ್ದನು. ಆದ್ದರಿಂದ ಆ ದಂಪತಿಗಳ ವಿಯೋಗವು ಮೇಲಿಂದ ಮೇಲೆ ಆಗುತ್ತಿತ್ತು. ಆದರೂ ಅವರೀರ್ವರ ಮನಸ್ಸು ಪರಸ್ಪರರಲ್ಲಿ ತಲ್ಲೀನವಾಗಿರುತ್ತಿತ್ತು; ಮತ್ತು ಪರಸ್ಪರ ಪ್ರೇಮವು ಹೆಚ್ಚು ದೃಢಗೊಂಡು ಅನ್ಯೋನ್ಯರ ದರ್ಶನಲಾಭವನ್ನು ಅವರು ಬಹಳ ಕುತೂಹಲದಿಂದ ಎದುರು ನೋಡುತ್ತಿದ್ದರು. ನಾನಾಬಗೆಯ ಕಷ್ಟನಷ್ಟಗಳನ್ನು ಸೋಸುತ್ತ, ಭಾವು ಯುದ್ಧದ ಕೆಲಸವನ್ನು ತೀರಿಸಿಕೊಂಡು, ಮರಳಿ ಬಂದ ಬಳಿಕ ತನ್ನ ಧರ್ಮಪತ್ನಿಯ ನಾಲ್ಕು ಮೃದು ಮಧುರವಾದ ಮಾತುಗಳನ್ನು ಕೇಳಿದೊಡನೆ, ಆತನ ವ್ಯಸನವೂ, ಕಷ್ಟವೂ, ಶ್ರಮವೂ, ಇವೆಲ್ಲ ಪರಿಹಾರವಾಗುತ್ತಿದ್ದವು. ಶ್ರೀಮಂತ ಪೇಶವೆ, ನಾನಾಫಡಣವೀಸ ಇತ್ಯಾದಿ ಪ್ರಧಾನಮಂಡಲದವರು, ವೀರಸರದಾರರು ಮತ್ತು ಸಂಪೂರ್ಣ ಮಹಾರಾಷ್ಟ್ರದೇಶದ ಪ್ರಜಾಜನರು ತನ್ನ ಪರಾಕ್ರಮವನ್ನು ಕೊಂಡಾಡುವದರಿಂದ ಆಗುವ ಆನಂದದ ಶತಗುಣಿತಾಧಿಕವಾದ ಆನಂದವನ್ನು ಭಾವು ಪ್ರಿಯಪತ್ನಿಯ ಸವಿನುಡಿಗಳಿಂದಲೂ, ಬೋಧಪರ ಸಂಭಾಷಣದಿಂದಲೂ, ಹೊಂದುತ್ತಿದ್ದನು; ಮತ್ತು ಆ ಸಾಧ್ವಿಯ ನಿಷ್ಕಲಂಕ ವರ್ತನದಿಂದಲೂ, ಸುಖಮಯ ಸಹವಾಸದಿಂದಲೂ, ಆತನ ಚಿತ್ತವೃತ್ತಿಯು ಉಲ್ಲಾಸಗೊಳ್ಳುತ್ತಿತ್ತು. ತನ್ನ ಮನೋರಮೆಯು ತನ್ನ ವೀರಗುಣವನ್ನು ಶ್ಲಾಘಿಸುವದನ್ನು ಕೇಳಿ, ದೊಡ್ಡ ದೊಡ್ಡ ಪರಾಕ್ರಮದ ಮತ್ತು ಸಾಹಸದ ಕೃತ್ಯಗಳನ್ನು ಮಾಡಬೇಕೆಂಬ ನವೀನ ಉತ್ಸಾಹವು ಆತನಲ್ಲಿ ಉತ್ಪನ್ನವಾಗುತ್ತಿತ್ತು. ರಾಧಾಬಾಯಿಯು ಅತ್ತೆ ಹೇಳಿದಂತೆ ಕೇಳುತ್ತಿದ್ದಳು. ಅತ್ತೆಯ ದೊಡ್ಡಿಸ್ತನವನ್ನೂ, ಮಾನಮರ್ಯಾದೆಗಳನ್ನೂ ಕಾಪಾಡುವಲ್ಲಿ ಅವಳು ತುಂಬಾ ಎಚ್ಚರಪಡುತ್ತಿದ್ದಳು. ಅತ್ತೆಯನ್ನು ಹಡೆದ ತಾಯಿಯಂತೆ ಭಾವಿಸುತ್ತಿದ್ದಳು. ಹೀಗೆ ಸದ್ಗುಣಸಂಪನ್ನಳಾದ ಸುಸ್ತ್ರೀಯು ದೊರಕುವದು ಪೂರ್ವಜನ್ಮದಲ್ಲಿ ಮಾಡಿದ ಸುಕೃತದ ಫಲವು. ರಾಧಾಬಾಯಿಗೆ 'ತಾಯಿಸಾಹೇಬ' ಎಂದು ಜನರು ಕರೆಯುತ್ತಿದ್ದರು. ಈ ತಾಯೀಸಾಹೇಬಳು ತನ್ನ ಕೈ ಕೆಳಗಿನ ಜನರನ್ನೂ ಸೇವಕ ಪರಿಚಾರಕರನ್ನೂ ತಾಯಿಯಂತೆ ನೋಡುತ್ತಿದ್ದಳು. ಆ ಸತಿತಿಲಕಳ ಗುಣಾನುವಾದವು ಕಾಲಪರಂಪರೆಯಿಂದ ನಡೆದು ಬಂದುದರಿಂದ, ಎಷ್ಟೋ ಜನರು ಆ ಸಾಧ್ವಿಯ ಆ ಸದ್ಗುಣಗಣವನ್ನು ಇನ್ನೂ ಬಣ್ಣಿಸುತ್ತಿರುವರು. ರಾಧಾಬಾಯಿಯು ಪರಶುರಾಮಭಾವೂನಕಿಂತ ಮೊದಲೇ ಕೆಲವು ವರ್ಷಗಳ ಹಿಂದೆ ಮರಣಹೊಂದಿದ್ದಳು.

ಆಜನ್ಮ ಪತಿಸೇವೆಗೆ ತಪ್ಪದೆ, ಸುಮಂಗಲೆಯಾಗಿ ಪರಲೋಕವಾಸಿಯಾದ ಈ ರಾಧಾಬಾಯಿಯು ಪರಮ ಧನ್ಯಳು. ಆಕೆಯಂತೆ ನಮ್ಮ ಆರ್ಯಭಗಿನಿಯರು ಮಧುರವಚನಿಗಳೂ, ಪತಿಸೇವಾನಿಷ್ಠರೂ, ಅತ್ತೆಯ ಆಜ್ಞಾಧಾರಕರೂ ಆಗಲಿಕ್ಕೆ ಯತ್ನಮಾಡಬೇಕೆಂದು ನಾವು ಆಗ್ರಹದಿಂದ ಹೇಳುವೆವು.

ಈ ದಂಪತಿಗಳ ಹೊಟ್ಟೆಯಲ್ಲಿ ೫ ಮಂದಿ ಗಂಡುಮಕ್ಕಳೂ, ನಾಲ್ಕು ಮಂದಿ ಹೆಣ್ಣುಮಕ್ಕಳೂ ಇದ್ದರು. ಅವರಲ್ಲಿ ರಾಮಚಂದ್ರರಾಯನೇ ಜೇಷ್ಠಪುತ್ರನು. ಆತನು ಶಕೆ ೧೬೮೩ ರಲ್ಲಿ ಜನ್ಮಹೊಂದಿದನು. ಅವನು ತಂದೆಯಂತೆ ಮಹಾಶೂರನು. ಆತನಾದರೂ ಚಿಕ್ಕಂದಿನಲ್ಲಿಯೇ ಸರದಾರನ ಉದ್ಯೋಗವನ್ನು ಅಂಗೀಕರಿಸಿ ಅಸಂಖ್ಯ ಕಾಳಗಗಳನ್ನು ಮಾಡಿದನು. ಪರಶುರಾಮಭಾವೂನ ಪಶ್ಚಾತ್ತ ಪೇಶವಾಯಿಯಲ್ಲಿ ಉಳಿದ ವೀರರಲ್ಲಿ ಅಪ್ಪಾಸಾಹೇಬನೇ ಅಗ್ರಗಣ್ಯನು. ವಿಖ್ಯಾತ ರಣಧುರೀಣನಾದ ಬಾಪು ಗೋಖಲೆ ಸರದಾರನಿಗೆ ಒಂದಾನೊಂದು ದಿವಸ ಒಬ್ಬ ವ್ಯಕ್ತಿಯು "ಪೇಶವೆ ಸರದಾರ ಮಂಡಲದಲ್ಲಿ ಈಗ ನೀವೇ ಅಗ್ರೇಸರರು" ಎಂದು ಅಂದನು. ಅದಕ್ಕೆ ಗೋಖಲೆಯು ಕೂಡಲೆ "ಈ ಮಾನವು ರಾಮಚಂದ್ರ ಪರಶುರಾಮ ಜಮಖಂಡೀಕರ ಇವರಿಗೆ ಚನ್ನಾಗಿ ಒಪ್ಪುವದು; ಆ ವೀರಶಿರೋಮಣಿಯ ಮುಂದೆ ನಾವೆಲ್ಲರು ಕಃಪದಾರ್ಥ" ಎಂದು ಉತ್ತರ ಕೊಟ್ಟನು. ವಾಯಿಕರ ವಾಸುದೇವಪಂತ ರಾಸ್ತೆ ಈತನ ಮಗಳು ಲಕ್ಷ್ಮೀಬಾಯಿಯು ಈ ಅಪ್ಪಾಸಾಹೇಬನ ಹೆಂಡತಿಯು. ಆತನು ಶಕೆ ೧೭೩೫ ರಲ್ಲಿ ಮರಣಹೊಂದಿದನು.

ಪರಶುರಾಮಭಾವೂನ ದ್ವಿತೀಯ ಪುತ್ರನು ಹರಿಪಂತನು. ಆತನು ಶಕೆ ೧೬೯೧ ರಲ್ಲಿ ಹುಟ್ಟಿದನು. ಅವನಿಗೆ ಬಾಬಾಸಾಹೇಬನೆಂದು ಸಹ ಕರೆಯುತ್ತಿದ್ದರು. ಆತನಾದರೂ ಹೆಸರಾದ ಶೂರನು. ತಂದೆಯೊಡನಿದ್ದು ಅನೇಕ ದಾಳಿಗಳನ್ನು ಮಾಡಿದನು. ಸುಪ್ರಸಿದ್ಧ ಖರ್ಡೆಯ ಕಾಳಗದಲ್ಲಿ ಲಾಲಖಾನನ ಕತ್ತಿಯ ಹೊಡತಕ್ಕೆ ಗುರಿಯಾದ ತನ್ನ ತಂದೆಯನ್ನು ಉಳಿಸಿಕೊಂಡು ಪುತ್ರಧರ್ಮವನ್ನು ತೋರಿಸಿದವನು ಇವನೇ. ಆತನಿಗೆ ಆನಂದರಾವ ರಾಸ್ತೆ ತಾಳಿಕೋಟಿಕರ ಈತನ ಮಗಳಾದ ರಮಾಬಾಯಿಯನ್ನು ಕೊಟ್ಟಿತ್ತು. ಬಾಬಾಸಾಹೇಬನು ಶಕೆ ೧೭೩೨ರಲ್ಲಿ ಮೃತಪಟ್ಟನು; ಆಗ ಅವನ ಧರ್ಮಪತ್ನಿಯು ಸತೀ ಹೋದಳು. ಹರಿಪಂತನಿಗೆ ಪುತ್ರಸಂತತಿಯಿದ್ದಿಲ್ಲ.

ಮಾಧವರಾವ ಉರ್ಫ ದಾಜೀಸಾಹೇಬನು ಭಾವೂನ ಮೂರನೆಯ ಮಗನು. ಅವನು ಶಕೆ ೧೭೦೧ರಲ್ಲಿ ಜನಿಸಿದನು. ಆತನು ಭಾವೂನ ಸಂಗಡ ಅನೇಕ ದಾಳಿಗಳ ಕೂಡ ಹೋಗಿದ್ದನು. ಭಾವು ಮೊಂಡಣಗಾಂವದಲ್ಲಿ ಪ್ರತಿಬಂಧನದಲ್ಲಿದ್ದಾಗ್ಗೆ, ಮಾಧವರಾಯನು ತಂದೆಯ ಸಂಗಡ ಇದ್ದನು. ಆತನು ಕೋಲಾಟಕರ ಭಾಸ್ಕರರಾಯನ ಮಗಳಾದ ಪಾರ್ವತಿಬಾಯಿಯನ್ನು ಮದುವೆಯಾಗಿದ್ದನು. ಮಾಧವರಾಯನು ಶಕೆ ೧೭೪೦ ಚೈತ್ರ ವದ್ಯ ಸಪ್ತಮಿ ದಿವಸ ಕಾಲವಾದನು. ಆಗ ಅವನ ಸತಿಯು ಸಹಗಮನ ಮಾಡಿದಳು. ಅವರ ಹೊಟ್ಟೆಯಲ್ಲಿ ಗೋವಿಂದರಾವ ಉರ್ಫ ನಾನಾಸಾಹೇಬನೆಂಬುವನೊಬ್ಬ ಮಗನಿದ್ದನು.

ಭಾವುಸಾಹೇಬನ ನಾಲ್ಕನೆಯ ಮಗನಾದ ಗಣಪತರಾವ ಉರ್ಫ ಬಾಪುಸಾಹೇಬನು ತಾಸಗಾಂವಿಯಲ್ಲಿ ಶಕೆ ೧೭೦೭ರಲ್ಲಿ ಜನ್ಮಹೊಂದಿದನು. ತಂದೆಯು ತೀರಿಕೊಂಡಾಗ್ಗೆ ಗಣಪತರಾಯನು ೧೪ ವರ್ಷದವನಿದ್ದನು. ಆತನ ಹೆಂಡರು ಮೂವರು. ಪ್ರಥಮಪತ್ನಿಯಾದ ಜಾನಕಿಬಾಯಿಯು ಮಹದಾಜಿಪಂತ ಗಾಡಗೀಳನ ಮಗಳು. ದ್ವಿತೀಯಪತ್ನಿಯು ಸಂಗಮೇಶ್ವರ ಕೇಳಕರನ ಮಗಳು; ಆಕೆಯು ಲಗ್ನವಾದ ತುಸು ದಿವಸಗಳಲ್ಲಿಯೇ ತೀರಿದಳು. ಮೂರನೆಯ ಹೆಂಡತಿಯ ಹೆಸರು ಸಾವಿತ್ರಿಬಾಯಿಯು. ಅವಳು ಪರಶುರಾಮಪಂತ ಸೋಮಣ್ಣ ಎಂಬವರ ಮಗಳು. ಬಾಪುಸಾಹೇಬನು ಶಕೆ ೧೭೪೧ರಲ್ಲಿ ಸ್ವರ್ಗಸ್ಥನಾದನು. ಆತನಿಗೆ ಸಂತಾನವಿಲ್ಲದ್ದರಿಂದ ಪರಶುರಾಮಪಂತನೆಂಬ ಹುಡುಗನನ್ನು ದತ್ತಕ ತೆಗೆದುಕೊಂಡಿದ್ದನು.

ವಿನಾಯಕರಾಯನೆಂಬುವನು ಭಾವೂಸಾಹೇಬನ ಕನಿಷ್ಠ ಪುತ್ರನು. ಅವನು ಚಿಕ್ಕವನಿರುವಾಗಲೇ ಸತ್ತುಹೋದನು.

ಪರಶುರಾಮಭಾವೂನ ಜೇಷ್ಠ ಪುತ್ರಿಯಾದ ಬಯಾಬಾಯಿಯನ್ನು ಬಾರಾಮತಿಕರ ಜೋಶಿ ಇವರ ಮನೆಗೆ ಕೊಟ್ಟಿತ್ತು. ಲಗ್ನವಾದ ೧೫ ದಿವಸಗಳಲ್ಲಿಯೇ ಆಕೆಯ ಪತಿಯು ಪರಲೋಕವಾಸಿಯಾದನು. ಆಗ್ಗೆ ಬಯಾಬಾಯಿಯು ೭-೮ ವರುಷದ ಚಿಕ್ಕ ಬಾಲಿಕೆಯು. ಭಾವು ಪುಣೆಯ ಪ್ರಸಿದ್ಧ ಪಂಡಿತನಾದ ರಾಮಶಾಸ್ತ್ರಿಯನ್ನು ಕರಿಸಿಕೊಂಡು, ಅಲ್ಪವಯಸ್ಕಳಾದ ತನ್ನ ಮಗಳ ಸ್ಥಿತಿಯನ್ನು ಆತನಿಗೆ ತಿಳಿಸಿದನು. ಆ ಶಾಸ್ತ್ರಿಯ ಅಂತಃಕರಣವು

ಕರಗಿ ನೀರಾಯಿತು. ಆತನು ಚನ್ನಾಗಿ ಪರಿಶೋಧಿಸಿ, ಆ ಬಾಲಿಕೆಯ ಪುನರ್ವಿವಾಹವನ್ನು ಮಾಡಲಿಕ್ಕೆ ಏನೂ ಪ್ರತ್ಯವಾಯವಿಲ್ಲವೆಂದು ಹೇಳಿದನು. ಬಳಿಕ ಭಾವು ಶ್ರೀಕಾಶೀಕ್ಷೇತ್ರದಿಂದ ಶಾಸ್ತ್ರಾಧಾರಗಳನ್ನು ತರಿಸಿಕೊಂಡನು. ಅವುಗಳಲ್ಲಿ ಎಲ್ಲರೂ ವಿತಂತು-ವಿವಾಹವು ಶಾಸ್ತ್ರಸಮ್ಮತವೆಂದು ಅಭಿಪ್ರಾಯ ಕೊಟ್ಟಿದ್ದರು. ಆದರೂ ಬಹುದಿವಸದಿಂದ ಪ್ರಚಾರದಲ್ಲಿರದಿದ್ದ ಪರಿಪಾಠವನ್ನು ತಾನೇ ಪ್ರಾರಂಭಮಾಡಿ, ಜನರ ಮನಸ್ಸನ್ನು ನೋಯಿಸುವದು ಪ್ರಶಸ್ತವಲ್ಲವೆಂದು ಎಷ್ಟೋ ಜನರು ಹೇಳಿದ್ದರಿಂದ ಪರಶುರಾಮಭಾವು ತನ್ನ ಮಗಳ ಪುನರ್ವಿವಾಹವದ ವಿಚಾರವನ್ನು ಬಿಟ್ಟುಕೊಟ್ಟನು.

ಎರಡನೆಯ ಮಗಳಾದ ದ್ವಾರಕಾಬಾಯಿಯನ್ನು ಕಾಯಗಾಂವಕರ ದೀಕ್ಷಿತ ಇವರ ಮನೆಗೆ ಕೊಟ್ಟಿತ್ತು. ಈ ದೀಕ್ಷಿತನು ಪೇಶವೆಯರ ಕುಲಗುರುವು; ಆಗಿನ ಕಾಲಕ್ಕೆ ಆತನು ಬಹಳ ಮಾನಾರ್ಹನಾದ ಪುರುಷನೆನಿಸಿದ್ದನು.

ಮಣಿಕರ್ಣಿಕಾಬಾಯಿಯು ಭಾವೂನ ಮೂರನೆಯ ಮಗಳು. ವಾಯಿಕರ ರಘುನಾಥರಾವ ವೈದ್ಯನೆಂಬುವಾತನು ಆಕೆಯ ಗಂಡನು. ಇವರ ವಂಶೀಯರು ಇನ್ನೂ ಜಮಖಂಡಿಯಲ್ಲಿ ಇರುವರು.

ನಾಲ್ಕನೆಯ ಮಗಳಾದ ಟಮಾಬಾಯಿಯನ್ನು 'ನವಕೋಟಿ ನಾರಾಯಣ' ಎಂದು ಹೆಸರು ಹೊಂದಿದ ಸಾಹುಕಾರ ಹುಪರೀಕರ ಜೋಶಿ ಇವರ ಮನೆಗೆ ಕೊಟ್ಟಿತ್ತು.

ಪರಶುರಾಮಭಾವುವಿನ ಸಕಲ ಪುತ್ರರು ನಿಸ್ಸೀಮ ಪಿತೃಭಕ್ತಿಪರಾಯಣರಿದ್ದರು; ಅವರು ತಂದೆಯ ಅರ್ಧವಚನದಲ್ಲಿರುತ್ತಿದ್ದರು. ಅವರು ತಂದೆಯ ಅಭಿಮಾನವನ್ನು ಕಾಪಾಡುವಲ್ಲಿ ತುಂಬಾ ದಕ್ಷರು; ಆತನ ಸಲುವಾಗಿ ಅವರು ತಮ್ಮ ಜೀವವನ್ನು ಕೊಡಲಿಕ್ಕೆ ಸಹ ಸಿದ್ಧರಿರುತ್ತಿದ್ದರು. ಪಿತಸೇವೆಯೇ ಪರಮಧರ್ಮವೆಂದು ತಿಳಿದು, ಅವರು ಆತನ ಸೇವೆಗಾಗಿ ತಮ್ಮ ಜಡದೇಹವನ್ನು ಯಾವಾಗಲೂ ಸವಿಸಲುದ್ಯುಕ್ತರಾಗುತ್ತಿದ್ದರು, ಅವರೆಲ್ಲರನ್ನು ಸಮದರ್ಶಿಯಾದ ಭಾವು ಒಂದೇ ಸರಿಯಾಗಿ ಪ್ರೀತಿಸುತ್ತಿದ್ದನು. ಕುಟುಂಬದಲ್ಲಿ ಸದ್ಗುಣಸಂಪನ್ನಳಾದ ಸ್ತ್ರೀಯು, ಆಜ್ಞಾಧಾರಕರೂ, ಅದ್ವಿತೀಯ ಪರಾಕ್ರಮಿಗಳೂ, ದಿಗಂತ ಕೀರ್ತಿಶಾಲಿಗಳೂ ಆದ ಮಕ್ಕಳು ಇದ್ದದರಿಂದ ಪರ

ಶುರಾಮಭಾವುವಿನ ಪ್ರಪಂಚವು ಸುಖಮಯವೂ, ಆನಂದಮಯವೂ ಕೀರ್ತಿ ಮಯವೂ ಆಗಿತ್ತು.

ಪ್ರಪಂಚವು ಸುಖದುಃಖಗಳ ಆಗರವು. ಕೆಲವು ದಿವಸಗಳು ಸುಖದ ಲ್ಲಿಯೂ ಕೆಲವು ದು:ಖದಲ್ಲಿಯೂ ಹೋಗುವವು. ಸಂಸಾರಿಕ ಸಂಕಟಗಳ ನ್ನು ಸಹಿಸಿಕೊಂಡು, ಅದರಲ್ಲಿಯೇ ಸಮಾಧಾನವನ್ನು ಹೊಂದಬೇಕಾದರೆ, ಧರ್ಮನಿಷ್ಠೆಯು ಅವಶ್ಯವಾದದ್ದು. ಯಾವನಲ್ಲಿ ಧರ್ಮಬುದ್ಧಿಯಿಲ್ಲವೋ ಆತನು ವಿಪತ್ಕಾಲದ ಸಕ್ಕೃದ್ದರ್ಶನಕ್ಕೆ ಉದಾಸೀನನಾಗುವನಲ್ಲದೆ ನಿರಾಶಿತ ನಾಗುವನು. ಆತನ ಮನಸ್ಸು ಸದಾ ತಳಮಳಗೊಳ್ಳುವದು. ಸಮಾಧಾನ ಮಾಡಿಕೊಳ್ಳುವ ಉಪಾಯವು ಆತನಿಗೆ ತೋಚದಾಗುವದು. ಭಾವು ಅತ್ಯಂತ ಸ್ವಧರ್ಮಾಸಕ್ತನು. ಆತನು ಯಾವಾಗಲೂ ಕಾಳಗಗಳಲ್ಲಿ ತೊಡಗಿರುತ್ತಿ ದ್ದನು. ಆದರೂ ಅವನು ಸ್ನಾನಸಂಧ್ಯಾ, ಜಪತಪ, ಇತ್ಯಾದಿ ಧಾರ್ಮಿಕ ಕೃತ್ಯ ಗಳನ್ನು ತಪ್ಪದೇ ಮಾಡುತ್ತಿದ್ದನು. ಅತಿಥಿ, ಅಭ್ಯಾಗತ, ವೈದಿಕ, ಪೌರಾ ಣಿಕ ಮುಂತಾದವನ್ನು ಅವನು ಯಥಾಯೋಗ್ಯ ಸತ್ಕರಿಸುತ್ತಿದ್ದನು. ಸಾಧು-ಸಂತರನ್ನು ಅವನು ಬಹಳ ಪ್ರೀತಿಸುತ್ತಿದ್ದನು. ವಿದ್ವಾಂಸರಿಗೂ, ಪೂಜ್ಯರಾದ ಶಾಸ್ತ್ರಿಗಳಿಗೂ, ವೇದಜ್ಞರಾದ ವೈದಿಕರಿಗೂ ಅವನು ತನ್ನ ಸಂಸ್ಥಾನದಲ್ಲಿ ನಾನಾ ಪ್ರಕಾರದ ಇನಾಮು, ವರ್ಷಾಶನ, ಮುಂತಾದವುಗಳನ್ನು ಹಚ್ಚಿ ಕೊಟ್ಟನು. ಅವುಗಳನ್ನು ಅವರ ವಂಶಜರು ಇನ್ನೂ ಉಪಭೋಗಿಸುತ್ತಿರು ವರು. ಪರಶುರಾಮಪಂತನ ಧಾರ್ಮಿಕತನವನ್ನೂ ಅವನ ಪರೋಪಕಾರ ಬುದ್ಧಿಯನ್ನೂ ವರ್ಣಿಸಲಸಾಧ್ಯವು. ಆತನು 'परोपकाराय इदं शरीरम्' ಎಂಬ ನೈತಿಕತತ್ವವನ್ನು ನಂಬಿ, ಪರೋಪಕಾರದ ಮತ್ತು ಲೋಕೋಪ ಯುಕ್ತವಾದ ಅನೇಕ ಸತ್ಕೃತ್ಯಗಳನ್ನು ಅನೇಕ ಸ್ಥಳಗಳಲ್ಲಿ ಮಾಡಿಸಿದ್ದು ಅವೆಲ್ಲ ಆ ಮಹಾನುಭಾವುನ ಸದ್ಗುಣಗಣದ ಪ್ರತ್ಯಕ್ಷ ಸಾಕ್ಷಿಯಾಗಿರುವವು. ಬಹಳ ದಿವಸಗಳಾಗಿರುವದರಿಂದ ಅವೆಲ್ಲವುಗಳ ಸಾದ್ಯಂತ ವರ್ಣನೆಯನ್ನು ಮಾಡಲು ಸಾಧ್ಯವಿಲ್ಲ. ಕಾರಣ ಅವುಗಳಲ್ಲಿ ಮುಖ್ಯಮುಖ್ಯ ಸಂಗತಿಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇವೆ.

ಶ್ರೀ ಕಾಶೀಕ್ಷೇತ್ರದಲ್ಲಿ ಪರಶುರಾಮಭಾವು ಒಂದು ಶಿವಾಲಯವನ್ನು ಕಟ್ಟಿಸಿ, ಅಲ್ಲಿ ಒಂದು ಲಕ್ಷ ಜನ ಬ್ರಾಹ್ಮಣರಿಗೆ ಇಚ್ಛಾಭೋಜನವನ್ನು

ಮಾಡಿಸಿದನು. ಎಲ್ಲ ದಾನಗಳಲ್ಲಿ ಅನ್ನದಾನವೇ ಶ್ರೇಷ್ಠವಾದುದರಿಂದ, ಭಾವು ಮಾಡಿಸಿದ ಈ ಅಪೂರ್ವ ಅನ್ನಸಂತರ್ಪಣೆಯ ಯೋಗದಿಂದ ಆತನ ಖ್ಯಾತಿಯು ನಾಲ್ಕೂ ಕಡೆಗೂ ಪಸರಿಸಿತು. ಈ ಕೆಲಸಕ್ಕೆ ಅಗಣಿತ ಧನವು ವೆಚ್ಚವಾಯಿತು. ಕಾಶಿಯಲ್ಲಿ ಹೀಗೆ ಅನ್ನಸಂತರ್ಪಣೆಯನ್ನು ಯಾರೂ ಮಾಡಿಸಿದ್ದಿಲ್ಲ. ಭಾವು ಈ ಮಹತ್ಕಾರ್ಯನ್ನು ಧೊಂಡೊ–ವಿಶ್ವನಾಥ ಜೋಗ ಇವರಿಗೆ ಒಪ್ಪಿಸಿದ್ದನು. ಇದಲ್ಲದೆ ಪರಶುರಾಮಭಾವು ಕಾಶಿಯಲ್ಲಿ ಒಂದು ವಾಡೆಯನ್ನು ಕಟ್ಟಿಸಿ, ಅಲ್ಲಿ ಅತಿಥಿ ಅಭ್ಯಾಗತ ಮೊದಲಾದವರ ಆದರಸತ್ಕಾರವು ಯೋಗ್ಯರೀತಿಯಿಂದ ಆಗುವಂತೆ ವ್ಯವಸ್ಥೆಯನ್ನು ಮಾಡಿಸಿದನು. ಅದೂ ಇನ್ನೂ ನಡೆದಿರುವದು.

ಶ್ರೀಕ್ಷೇತ್ರ ಪಂಢರಪುರದಲ್ಲಿ ಶ್ರೀಪಾಂಡುರಂಗದೇವರ ಸಭಾಮಂಟಪವನ್ನೂ, ಶ್ರೀಮಾರುತಿಯ ದೇವಾಲಯವನ್ನೂ, ನಗರಖಾನೆಯ ಕಮಾನಗಳನ್ನೂ ಪರಶುರಾಮಭಾವು ಬಹಳ ಹಣ ವೆಚ್ಚಮಾಡಿ ಕಟ್ಟಿಸಿದನು; ಇದಲ್ಲದೆ ಶ್ರೀ ಅಮೃತೇಶ್ವರ ದೇವರ ಗುಡಿಯ ಜೀರ್ಣೋದ್ಧಾರವನ್ನು ಮಾಡಿಸಿದನು; ಮತ್ತು ಶ್ರೀ ವಿಠ್ಠಲದೇವಾಲಯದ ಸಮೀಪದಲ್ಲಿ ಒಂದು ದೊಡ್ಡ ಮನೆಯನ್ನು ಕಟ್ಟಿಸಿ, ಅಲ್ಲಿ ಬಂದ ಅತಿಥಿ ಅಭ್ಯಾಗತರ ಹಾಗೂ ಸನ್ಯಾಸಿಗಳ ಭೋಜನದ ಸಲುವಾಗಿಯೂ, ಶ್ರೀ ಪಾಂಡುರಂಗ ದೇವರ ನೇವೇದ್ಯದ ಅನುಕೂಲತೆಯ ಸಲುವಾಗಿಯೂ ಒಂದು ಅನ್ನಛತ್ರವನ್ನು ಇಡಸಿದನು. ಅದು ಇನ್ನೂ ಸಾಗಿರುವದು.

ಶ್ರೀಕ್ಷೇತ್ರ ಪ್ರಣತಾಂಬೆಯಲ್ಲಿ ಗೋದಾವರಿಯ ದಂಡೆಯ ಮೇಲೆ ಒಂದು ಭವ್ಯ ಶಿವಾಲಯವನ್ನೂ, ನದಿಗೆ ಘಾಟನ್ನೂ, ಒಂದು ವಾಡೆಯನ್ನೂ ಕಟ್ಟಿಸಿದನು; ಮತ್ತು ಊರೊಳಗೆ ನಳಗಳನ್ನು ತರಿಸಿ ನೀರಿನ ಸೌಕರ್ಯವನ್ನು ಮಾಡಿಸಿಕೊಟ್ಟನು.

ತನ್ನ ಪ್ರೀತಿಯ ವಸತಿಸ್ಥಾನವಾದ ತಾಸಗಾಂವಿಯಲ್ಲಿ ಶ್ರೀಗಣಪತಿಯ ಗುಡಿಯನ್ನು ಕಟ್ಟಿಸಿದನು. ಗಣಪತಿಯು ತನ್ನ ಆರಾಧ್ಯದೇವರಾದ್ದರಿಂದ ಭಾವು ಆ ದೇವಾಲಯವು ಸುಶೋಭಿತವೂ, ಸುಂದರವೂ, ಬಹು ಭವ್ಯವೂ ಆಗಬೇಕೆಂಬ ಉದ್ದೇಶದಿಂದ ಆತನು ದೂರದೂರ ಕೈಗಾರಿಕೆಯ ಜನರನ್ನು ತರಿಸಿದ್ದನು. ಆತನು ಕರ್ನಾಟಕದ ಅತಿ ಮಹತ್ತರವಾದ ದಾಳಿಯ ಕೆಲಸ

ವನ್ನು ಮುಗಿಸಿಕೊಂಡು ಬಂದಬಳಿಕ, ಶಕೆ ೧೭೦೧ ಫಾಲ್ಗುಣಶುದ್ಧ ದ್ವಿತಿಯಾದಿವಸ ಸುಮೂಹರ್ತದಲ್ಲಿ ಪರಮ ಸಂಭ್ರಮದಿಂದ ಆ ದೇವಾಲಯದಲ್ಲಿ ಶ್ರೀಗಜಾನನ-ಪಂಚಾಯತಮೂರ್ತಿಯನ್ನು ಸ್ಥಾಪನ ಮಾಡಿಸಿದನು. ಪೇಶವೆ ದರಬಾರದಲ್ಲಿ ಹರಪ್ರಯತ್ನ ಮಾಡಿ ಆ ದೇವಸ್ಥಾನದ ಬಗ್ಗೆ ೨೦೦೦ ರೂಪಾಯಿಗಳ ಪ್ರಾಪ್ತಿಯ ಹೊಲಗಳನ್ನೂ, ೨೦೦೦ ರೂಪಾಯಿ ವರ್ಷಾಶನವನ್ನೂ ಪಡೆದು ಅವು ನಿರಂತರ ನಡೆಯುವಂತೆ ವ್ಯವಸ್ಥೆ ಮಾಡಿದನು. ತಾಸಗಾಂವಿಯಲ್ಲಿ ಹಟಕೇಶ್ವರ ಎಂಬ ಅನಬುನಾದಿಯ ಸ್ಥಾನವಿರುವದು. ಭಾವು ಆ ದೇವಾಲಯದ ಜೀರ್ಣೋದ್ಧಾರ ಮಾಡಿಸಿದನು.

ಚಿಂಚಣಿಯಲ್ಲಿ ಶ್ರೀಪರಶುರಾಮದೇವರ ಗುಡಿಯನ್ನು ಕಟ್ಟಿಸಿದನು; ಭಿಲವಡಿಯಲ್ಲಿ ಶ್ರೀಕೃಷ್ಣಾನದಿಗೆ ಒಂದು ದೊಡ್ಡ ಘಾಟ ಕಟ್ಟಿಸಿದನು. ಇದರ ಕಟ್ಟಡವು ಅತ್ಯಂತ ರಮಣೀಯವಾಗಿರುವದು. ಅದನ್ನು ಕಟ್ಟಿದ ಕಾರಾಗೀರರ ಅನುಪಮ ಕೌಶಲ್ಯವನ್ನು ಜನರು ಬಹಳ ಹೊಗಳುತ್ತಿರುವರು.

ಪುಣೆಯ ತುಳಸಿ ಬಾಗದಲ್ಲಿರುವ ಶ್ರೀರಾಮದೇವರಿಗೋಸ್ಕರ ಪರಶುರಾಮಭಾವು ಭೋಕಾರ ಗ್ರಾಮವನ್ನು ಇನಾಮು ಹಾಕಿ ಕೊಟ್ಟನು; ಇದಲ್ಲದೆ ಕಾಯಗಾಂವ ದೀಕ್ಷಿತರಿಗೆ ನೇವಾಸಗ್ರಾಮವನ್ನು ಅನ್ನಛತ್ರದ ಸಲುವಾಗಿ ಉಂಬಳಿ ಹಾಕಿ ಕೊಟ್ಟನು. ಜಮಖಂಡಿಯ ಬಳಿಯಲ್ಲಿರುವ ಶ್ರೀಕ್ಷೇತ್ರ ಅಸಂಗಿಯಲ್ಲಿ ಭಾವೂನ ಕಕ್ಕನ ಮಗನಾದ ವಿಷ್ಣು ದೀಕ್ಷಿತನು ಶ್ರೀವೇಣುಮಾಧವ ದೇವಾಲಯವನ್ನು ಕಟ್ಟಿಸಿದ್ದನು. ಆ ದೇವಸ್ಥಾನದ ಪೂಜಾವಿನಿಯೋಗವು ನಿರಂತರ ನಡೆಯಬೇಕೆಂದು, ಅಸಂಗಿಗ್ರಾಮವನ್ನು ಇನಾಮು ಹಚ್ಚಿಸಿಕೊಟ್ಟನು.

ಪ್ರತಿವರ್ಷ ಶ್ರೀವಾಳಕೇಶ್ವರ (ಗಣೇಶವಾಡಿ) ಶ್ರೀರಾಮೇಶ್ವರ (ರಾಮತೀರ್ಥ) ಶ್ರೀಕುಸಮೇಶ್ವರ (ಕೊತವಡೆ) ಶ್ರೀಹಟಕೇಶ್ವರ (ತಾಸಗಾಂವಿ) ಇತ್ಯಾದಿ ಹನ್ನೊಂದು ದೊಡ್ಡ ದೊಡ್ಡ ಶಿವಾಲಯಗಳಲ್ಲಿ ಭಾವು ಮಹಾರುದ್ರಾಭಿಷೇಕವು ಯಥಾನುವಿಧಿಯಾಗಿ ಸಾಗುವಂತೆ ಸಕಲ ವ್ಯವಸ್ಥೆಯನ್ನು ಮಾಡಿಸಿದ್ದನು.

ದರವರುಷ ಕೊಂಕಣದ ಕಡೆಯಿಂದ ಸಾವಿರಾರು ಬಡಬ್ರಾಹ್ಮಣ ಬಿಕ್ಷುಕರು ಘಟ್ಟದ ಮೇಲೆ ಬಂದೇ ಬರುತ್ತಿದ್ದರು. ಅವರ ಊಟ ಉಪ

ಚಾರಗಳ ಅನುಕೂಲತೆಗಾಗಿ ಅಂಬೆಘಾಟ ಮತ್ತು ಅಣುಕರಣಿ ಘಾಟಗಳ ಮೇಲೆ ಪರಶುರಾಮಭಾವು ಅನ್ನಛತ್ರಗಳನ್ನು ಇಡಿಸಿದ್ದನು.

ಇವುಗಳ ಹೊರ್ತು ಪರಶುರಾಮಭಾವು ಮಾಡಿದ ಮಹತ್ಕೃತ್ಯಗಳೆಂದರೆ, ಚಿಂಚಣಿಯ ಬಳಿಯಲ್ಲಿ ಒಂದು ದೊಡ್ಡ ಕಾಲುವೆಯನ್ನೂ, ಜಮಖಂಡಿಯಲ್ಲಿ ಒಳ್ಳೇ ಬಲವುಳ್ಳ ಕಿಲ್ಲೆಯನ್ನೂ ಕಟ್ಟಿಸಿದನು. ಚಿಂಚಣಿಯ ಕಾಲುವೆಯಿಂದ ತೋಟಪಟ್ಟಿಗಳಿಗೆ ಬಹಳೇ ಉಪಯೋಗವಾಗುತ್ತಿರುವದು.

ವಾಚಕರೇ, ಈ ಮೇರೆಗೆ ಅಸಂಖ್ಯ ಧರ್ಮಕೃತ್ಯಗಳನ್ನೂ, ಲೋಕೋಪಕಾರದ ಕೆಲಸಗಳನ್ನೂ ಮಾಡಿದ ಪರಶುರಾಮಭಾವು 'ಎಂದು ಮರೆಯಲಾರದ' ವಿಜಯನಗರದ ಸಾಮ್ರಾಜ್ಯದ ರಾಜಾಧಿರಾಜನಾದ ಕೃಷ್ಣದೇವರಾಯನಿಗೂ, ಮೈಸೂರ ಸಂಸ್ಥಾನದ ರಾಜರಲ್ಲಿ ಶ್ರೇಷ್ಠರೂ, ಯಾದವಕುಲಚಂದ್ರರೂ ಆದ ಚಿಕ್ಕ ದೇವರಾಜ ಒಡೆಯರವರಿಗೂ, ಸರಿಯಾದವನೆಂದು ಹೇಳಿದರೆ ಅತ್ಯುಕ್ತಿಯ ದೋಷವು ಬಾರದೆಂದು ಎಣಿಸುತ್ತೇವೆ. ಈ ಉದಾರಚರಿತನ ಈ ಕಲ್ಯಾಣಗುಣಗಳನ್ನು ಎಷ್ಟು ಹೊಗಳಿದರೂ ತೀರದು. ಆತನು ಮಾಡಿದ ಲೋಕೋಪಯುಕ್ತ ಕೃತ್ಯಗಳಲ್ಲಿ ಕೆಲವು ಚಿರಾಯುಷ್ಯವನ್ನು ಹೊಂದಿರುವದರಿಂದ ಅವುಗಳ ಉಪಯೋಗವು ಇನ್ನೂ ನಮ್ಮ ದೇಶಬಾಂಧವರಿಗೆ ಆಗುತ್ತಿರುವದು; ಅವು ಆತನ ನಿಸ್ಸೀಮ ಸ್ವಧರ್ಮಾಭಿಮಾನ, ನಿಷ್ಕಲಂಕ ಪರೋಪಕಾರಬುದ್ಧಿ ಮೊದಲಾದವುಗಳ ದ್ಯೋತಕಗಳಾಗಿರುವವು.

# ೧೬ನೆಯ ಅಧ್ಯಾಯ.

## ಉಪಸಂಹಾರ.

ಹಿಂದಿನ ೧೫ ಅಧ್ಯಾಯಗಳಲ್ಲಿ ಪರಮಪ್ರತಾಪಿ ಪರಶುರಾಮಪಂತ ಪಟವರ್ಧನನ ಪವಿತ್ರ ಚರಿತ್ರೆಯ ಕಥಾಭಾಗವು ಸಂಪೂರ್ಣವಾಯಿತು. ಪ್ರಿಯ ವಾಚಕರೇ, ಈ ಜಗತ್ತಿನಲ್ಲಿ ನೀತಿಪಥಾವಲಂಬನವೇ ಶ್ರೇಷ್ಠತಮ ಪ್ರತಿಷ್ಠೆಯ ಮಾರ್ಗವು. ಕೇವಲ ಅಧಿಕಾರ, ಐಶ್ವರ್ಯ, ಪರಾಕ್ರಮ, ಬಹುಮಾನ, ಪಾಂಡಿತ್ಯ ಮೊದಲಾದವುಗಳು ನಿಜವಾದ ಪ್ರತಿಷ್ಠೆಯ ಮಾರ್ಗಗಳಲ್ಲ. ಯಾಕಂದರೆ, ಮನುಷ್ಯನಲ್ಲಿ ಇಂತಿಷ್ಟು ಗುಣಗಳಿದ್ದು ಆತನಲ್ಲಿ ಸದಾಚಾರವಿರದಿದ್ದರೆ, ಅವನ ಬಗ್ಗೆ ಜನರಲ್ಲಿ ಪೂಜ್ಯಬುದ್ಧಿಯೂ, ಪ್ರೇಮವೂ ಹುಟ್ಟುವದಿಲ್ಲ. ಕೇವಲ ವಿಜಯಲಕ್ಷ್ಮಿಯ ಯೋಗದಿಂದ ಸಕಲ ಪುರುಷಾರ್ಥಗಳು ಕೈಗೂಡುವವೆಂದು ತಿಳಿಯುವದು ತೀರಾ ತಪ್ಪು. ಆದರೆ ತಮ್ಮ ಅತರ್ಕ್ಯ ಪರಾಕ್ರಮ-ಪ್ರಭಾವದಿಂದ ಅಲಭ್ಯ ವಿಜಯಲಾಭವನ್ನು ಪಡೆಯುವ ಮಾನವಸಿಂಹರಲ್ಲಿರುವ ಪೌರುಷಗುಣಮಾಲಿಕೆಯೊಳಗೆ ಸದಾಚಾರಪ್ರೇಮರೂಪವಾದ ಸ್ಫಟಿಕಮಣಿಯಿದ್ದರೆ ಮಾತ್ರ ಅಂಥ ಮಹನೀಯರ ಜೀವಿತವು ಹೆಚ್ಚು ಅಂದವಾಗಿ ಒಪ್ಪುವದು. ಅದೇ, ಮನುಷ್ಯನು ಸದಾಚಾರಬಾಹ್ಯನಾಗಿ ನೀತಿ-ಪಥವನ್ನು ಅತಿಕ್ರಮಿಸಿದರೆ, ಅದರಿಂದ ಜನಿಸುವ ಅಪಕೀರ್ತಿಯು ಆತನ ಹೆಸರಿಗೆ ಚಿರಕಾಲಿಕ ಕಲಂಕವನ್ನು ಹಚ್ಚದೆ ಬಿಡದು. ಅದರಿಂದಲೇ ನೀತಿಯೇ ಮೇಲಾದ ವಸ್ತುವೆಂದು ನೀತಿಶಾಸ್ತ್ರಜ್ಞರು ಸಾರಿರುವರು. ಕಾರಣ ಸೂಜ್ಞರಾದವರು "ನೀತಿಪಥವನುಳಿಯಂ ಧೀರಂ" ಎಂಬ ಭರ್ತೃಹರಿಯ ವಚನದಂತೆ, ನೀತಿಯಿಂದ ನಡೆದು, ಪೌರುಷ, ಪ್ರತಿಷ್ಠೆ, ಕೀರ್ತಿಗಳನ್ನು ಪಡೆಯುವರು. ಇವೇ ಮುಂತಾದ ನೈತಿಕತತ್ವಗಳನ್ನು ಮುಂದಿಟ್ಟುಕೊಂಡು, ನಮ್ಮ ಚರಿತ್ರನಾಯಕನು ಕೇವಲ ಪರಾಕ್ರಮಮೂರ್ತಿಯೋ, ಅಥವಾ ಆತನಲ್ಲಿ ಆ ಪರಾಕ್ರಮದೊಂದಿಗೆ, ಸದಾಚಾರಪ್ರೇಮ, ಪರೋಪಕಾರ, ದಾನ, ಬಂಧುಪ್ರೀತಿ, ಭೂತದಯಾ, ಸಭ್ಯಸ್ವಭಾವ, ಸ್ವಧರ್ಮಾಭಿಮಾನ ಇತ್ಯಾದಿ ಮಾನವಪ್ರಗತಿಗವಶ್ಯವಾದ ಸದ್ಗುಣಗಳುಂಟೋ

ಹ್ಯಾಗೆ? ಎಂಬದರ ವಿಷಯವಾಗಿಯೂ, ಆ ಮಹಾಮಹಿಮನ ಚರಿತ್ರಾವಲೋಕನದಿಂದಾಗುವ ಫಲನಿಷ್ಪತ್ತಿ ಮುಂತಾದವುಗಳ ವಿಷಯವಾಗಿಯೂ ಈ ಅಧ್ಯಾಯದಲ್ಲಿ ನಾಲ್ಕು ಶಬ್ದಗಳನ್ನು ಬರೆದು ಗ್ರಂಥಸಮಾಪ್ತಿಯನ್ನು ಮಾಡುತ್ತೇವೆ.

ಮಹಾರಾಷ್ಟ್ರದೇಶದಲ್ಲಿ ಇಲ್ಲಿಯವರೆಗೆ ಆಗಿ ಹೋದ ಮಹಾ ಪರಾಕ್ರಮಿ ಪುರುಷಶ್ರೇಷ್ಠರಲ್ಲಿ ನಮ್ಮ ಚರಿತ್ರನಾಯಕನೊಬ್ಬನಾಗಿರುವನು. **शौर्यं तेजोधृतिर्दाक्ष्यं युद्धे चाप्यपलायनं। दानमीश्वरभावश्च क्षात्रं कर्मस्वभाजं॥** ಎಂಬಂತೆ, ಶೌರ್ಯ, ಧೈರ್ಯ, ಸಾಹಸ, ಪರೋಪಕಾರ, ದಾನ, ಈಶ್ವರಭಕ್ತಿ ಇತ್ಯಾದಿ ಸದ್ಗುಣಗಳು ಆ ನರವೀರನ ಹುಟ್ಟುಗುಣಗಳಾಗಿದ್ದವು. ಭೀತಿಯು ಆತನ ಮನಸ್ಸನ್ನು ಎಂದೂ ಸ್ಪರ್ಶಮಾಡಲಿಲ್ಲ. ಎಂಥ ಪ್ರಬಲವೈರಿಯಿದ್ದರೂ, ಆತನೊಡನೆ ದಂಡಧಾರಿಯಾಗಿ ಯುದ್ಧಮಾಡಲು ಭಾವು ಸದಾ ಸಿದ್ಧನಿರುತ್ತಿದ್ದನು. ಹಗೆಗಳಿಗೆ ಬೆನ್ನು ತೋರಿಸುವದೆಂದರೆ ಆತನು ಪ್ರತ್ಯಕ್ಷ ಮರಣಕ್ಕಿಂತಲೂ ಹೆಚ್ಚಿನದೆಂದು ತಿಳಿಯುತ್ತಿದ್ದನು. "ಅಡಿಯ ಮುಂದಿಡೆ ಸ್ವರ್ಗ। ಅಡಿಯ ಹಿಂದಿಡೆ ನರಕ। ಅಡಿಗಡಿಗೆ ಮೃಷ್ಟಮೋಧಫಲ ಸ್ವಾಮಿಕಾರ್ಯಕ್ಕೆ ಮಡಿಯಲೇಬೇಕು ಸರ್ವಜ್ಞ॥ ಎಂಬ ಸರ್ವಜ್ಞನ ಸರ್ವಮಾನ್ಯವಚನ-ಮರ್ಮವನ್ನು ಆ ತುಂಗವಿಕ್ರಮನು ತುಂಬಾ ತಿಳುಕೊಂಡು, ತದನುಸಾರವಾಗಿ ಆಜನ್ಮ ನಡೆದನು. ಹದಿನಾಲ್ಕು ವರುಷದವನಾಗುತ್ತಲೇ, ಆ ವೀರಮಣಿಯು ಯುದ್ಧಕ್ರಮವನ್ನು ಆರಂಭಿಸಿ, ಅದನ್ನು ಆಮರಣ, ಅಖಂಡ ಮತ್ತು ಅಬಾಧಿತವಾಗಿ ಸಾಗಿಸಿ, ಅರ್ವಾಚೀನ ವೀರವರರಲ್ಲಿ ಮುಕುಟಮಣಿಯೆನಿಸಿದನು. ಕೊಲ್ಹಾಪುರಕರ, ಹೈದರ, ಟೀಪು, ನಿಜಾಮ ಇತ್ಯಾದಿ ಮಹಾ ರಣಧುರೀಣರೂ, ಬಲಾಢ್ಯರೂ ಆದ ಶತ್ರುಗಳೊಡನೆ ಅನೇಕ ಸ್ಥಳಗಳಲ್ಲಿ ಬ್ರಾಹ್ಮಣಸರದಾರ ಶಿರೋಮಣಿಯಾದ ಪರಶುರಾಮಭಾವು ಕಲಿತನದಿಂದ ಕಾದಿದನು. ಆದರೆ ಅವನು ಎಲ್ಲ ಕಾಳಗಗಳಲ್ಲಿ ವಿಜಯಶಾಲಿಯಾದನಲ್ಲದೆ, ಒಂದುಕಡೆಗಾದರೂ ಆ ರಣಧುರಂಧರನು ಪರಾಜಿತನಾಗಿ ಸಮರಭೂಮಿಂದ ಕಾಲ್ದೆಗೆಯಲಿಲ್ಲ. ಕಡೆಗೆ ಸ್ವಾಮಿಕಾರ್ಯಕ್ಕಾಗಿ ಪವಿತ್ರಧಾರಾತೀರ್ಥದಲ್ಲಿ ರಣದೇವತೆಗೆ ತನ್ನ ಜಡದೇಹವನ್ನು ಸಮರ್ಪಿಸಿ, ನಿಸ್ಸೀಮ ಪ್ರಭುಭಕ್ತಿ, ಅಪರಿಮಿತ ಸಾಹಸ, ದಿಗಂತಕೀರ್ತಿ, ಮುಂತಾದವುಗಳನ್ನು ಪ್ರಕಟಿಸಲುದ್ಯುಕ್ತನಾದನಲ್ಲದೆ ವೈರಿಗೆ ವಿಮುಖನಾಗಬೇಕೆಂಬುವ ಪುಕ್ಕವಿ

ಚಾರಕ್ಕೆ ಧೀರನೂ, ಶೂರನೂ, ವೀರನೂ ಆದ ಪರಶುರಾಮಭಾವು ಎಂದೂ ಇಂಬುಗೊಡಲಿಲ್ಲ. ಸಕಲ ಮರಾಠಾ ಸರದಾರರ ಮೇಲೆ ಆತನು ತನ್ನ ಶೌರ್ಯದ ದರ್ಪ ಕೂಡ್ರಿಸಿ, ಸರ್ವರಲ್ಲಿ ಶ್ರೇಷ್ಠತ್ವವನ್ನು ಹೊಂದಿದನು. ಆತನ ಅತುಲ ಪರಾಕ್ರಮ, ಅದ್ವಿತೀಯ ಸಾಹಸ, ಅನುಪಮಧೈರ್ಯ, ಅಪ್ರತಿಮ ಶೌರ್ಯ, ಅವಿನಾಶಿಯಾದ ಗಾಂಭೀರ್ಯ, ಅಪೂರ್ವ ರಣೋತ್ಸಾಹಗಳನ್ನು ಕಂಡು ಪ್ರತ್ಯಕ್ಷ ' ಪರಶುರಾಮನು ' ಯವನಭೂಪತಿಗಳ ಬಲಗರ್ವವನ್ನು ಹರಣಮಾಡಲು, ಪುನಃ ಭೂಮಿಯಲ್ಲಿ ಅವತರಿಸಿರುವನೆಂದು ಜನರು ಅನ್ನತೊಡಗಿದರು. ಕರ್ನಾಟಕದ ಅರಸರು ಆತನ ಹೆಸರು ಕೇಳಿದೊಡನೆ ಗಡಗುಟ್ಟಿ ನಡಗುತ್ತಿದ್ದರು. ಅಲ್ಲಿಯ ಜನರು ಹೈದರ, ಟೀಪುಸುಲ್ತಾನರ ಅಳತೆಗೆಟ್ಟ ಹಾವಳಿಗೆ ಗುರಿಯಾಗಿ ಅನೇಕ ಕಷ್ಟಗಳನ್ನು ಅನುಭವಿಸುತ್ತಿರಲು, ಅವರನ್ನು ಆ ಸಂಕಟಸಮಯದಿಂದ ಮುಕ್ತಮಾಡಿ ಆ ಪ್ರಾಂತದಲ್ಲಿ ಪೇಶವೆಸರಕಾರದ ವರ್ಚಸ್ಸನ್ನು ನೆಲೆಗೊಳಿಸಿದ ಬಹ್ವಂಶ ಶ್ರೇಯವು ಪರಶುರಾಮಭಾವುವಿನದಿರುತ್ತದೆ.

ಆತನು ಪರರಿಗೆ ಕೇಡುಮಾಡದೆ, ಸದಾಚಾರವನ್ನು ಬಿಡದೆ, ಆಮರಣ ಪ್ರಭುಸೇವೆಗೈದು, ಬ್ರಾಹ್ಮಣ ಸರದಾರರು ಎಷ್ಟು ಶೂರರು, ಅವರ ಕರ್ತೃತ್ವಶಕ್ತಿಯು ಎಷ್ಟು ಗಹನವಾದದ್ದು ಇತ್ಯಾದಿ ವಿಷಯಗಳ ಉತ್ಕೃಷ್ಟ-ದೃಷ್ಟಾಂತವನ್ನು ತನ್ನ ದೇಶಬಾಂಧವರ ಮುಂದೆ ಇಟ್ಟಿರುವನು. ನೂರಾರು ವರುಷಗಳ ಹಿಂದೆ ಆಗಿಹೋದ ನಮ್ಮ ಚರಿತ್ರನಾಯಕನಾದ ಪರಶುರಾಮಭಾವು, ಹರಿಪಂತ ಫಡಕೆ, ಬಾಪು ಗೋಖಲೆ, ಶ್ರೀಮಂತ ಸದಾಶಿವರಾವಭಾವು, ಶ್ರೀಮಂತ ಮಾಧವರಾವ ಬಲ್ಲಾಳ, ಶ್ರೀಮಂತ ಬಾಜೀರಾವ ಬಲ್ಲಾಳ ಇತ್ಯಾದಿ ವೀರವರರ ಚರಿತ್ರೆಯನ್ನು ಓದಿದರೆ ನಮ್ಮ ದೇಶದ ಆಗಿನ ಜನರು ಅತ್ಯಂತ ಪರಾಕ್ರಮಿಗಳೂ, ತೇಜಃಪುಂಜರೂ, ಸದಾಚಾರಸಂಪನ್ನರೂ, ಯಶೋವಂತರೂ ಆಗಿದ್ದರೆಂಬುದು ಗೊತ್ತಾಗುವದು.

ಭೂತದಯೆಯು ಈಶ್ವರದತ್ತವಾದ ನೈತಿಕ, ಸಾತ್ವಿಕ ಮತ್ತು ದೈವಿಕ ಸದ್ಗುಣವು. ಈ ಗುಣವು ನಮ್ಮ ಕಥೆಯೊಡೆಯನ ಪವಿತ್ರ ಹೃದಯಮಂದಿರದಲ್ಲಿ ಸದಾ ವಾಸವಾಗಿತ್ತು. ಆತನ ಬಳಿಗೆ ಬಂದ ಯಾಚಕಜನರು ರಿಕ್ತಹಸ್ತದಿಂದ ತಿರುಗಿ ಹೋದರು, ಹೀಗೆ ಎಂದೂ ಆಗಲಿಲ್ಲ. ಆತನು ಕೊಡು

ವಲ್ಲಿ ಕೊಡಗೈ ಧೊರೆಯು. ಅತಿಥಿ ಅಭ್ಯಾಗತರ ಅನುಕೂಲತೆಗಾಗಿ ಆತನು ಬಹಳ ಹಣ ವೆಚ್ಚಮಾಡಿ ಅನೇಕ ಸ್ಥಳಗಳಲ್ಲಿ ಅಸಂಖ್ಯ ಅನ್ನಛತ್ರಗಳನ್ನು ಇಡಿಸಿದ್ದನೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ಹೇಳಿರುವೆವು. ಎಷ್ಟೋ ಬಡ ಬಗ್ಗರಿಗೆ ಮತ್ತು ಕುಟುಂಬವತ್ಸಲರಿಗೆ ಅವನು ತಾಸಗಾಂವಿಯಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟು, ಅವರವರ ಕುಟುಂಬಚರಿತಾರ್ಥಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟನು. ಪರರ ದುಃಖವನ್ನು ನೋಡಿ ಆತನು ಬಹಳ ಹಳಹಳಿಸಿ, ಅವರಿಗೊದಗಿದ ಎಡರುಗಳನ್ನು ದೂರಮಾಡಲು ತನ್ನ ತನು-ಮನ-ಧನದಿಂದ ಪ್ರಯತ್ನಮಾಡುತ್ತಿದ್ದನು. ಕಾಳಗನಿಮಿತ್ತ್ಯದಿಂದ ದಂಡುಮಾರ್ಬಲದೊಡನೆ ಮಾರ್ಗಕ್ರಮಣ ಮಾಡುತ್ತಿರಲು, ಮಾರ್ಗದಲ್ಲಿ ಯಾರಾದರೂ ದಿಕ್ಕಿಲ್ಲದ ಕುರುಡ, ಕುಂಟರು ಅಥವಾ ಹಸಿದವರು ಎದುರಿಗೆ ಬಂದರೆ ಅವನು ಅವರ ಯಥಾಯೋಗ್ಯ ಸಮಾಚಾರವನ್ನು ತಕ್ಕೊಳ್ಳದೆ, ಮುಂದೆ ಹೆಜ್ಜೆಯನ್ನಿಡುತ್ತಿದ್ದಿಲ್ಲ. ಇದು ಆತನ ಆಜನ್ಮ ಪರಿಪಾಠವಾಗಿತ್ತು. ಈ ಸದ್ಗುಣಕ್ಕಾಗಿ ಜನರು ಆತನನ್ನು ಹಾಡಿ ಹರಿಸುತ್ತಿದ್ದರು. ಪರೋಪಕಾರ, ದಾನ, ಭೂತದಯ ಮೊದಲಾದ ಸ್ತುತ್ಯಗುಣಗಳಲ್ಲಿ ಅವನು ದೊಡ್ಡ ಬಾಜೀರಾಯನಿಗೆ ಸರಿಯಾದವನೆಂದು ವೃದ್ಧಜನರು ಅವನನ್ನು ಹೊಗಳುತ್ತಿದ್ದರು. ಬಡಬಗ್ಗರ ಪ್ರಯೋಜನಕ್ಕೆಂದು ಆ ಪರೋಪಕಾರಿಯು ಕೆಲಕೆಲ ವೆಡೆಗಳಲ್ಲಿ ಕಟ್ಟಿಸಿದ ಕೆರೆಬಾವಿಗಳು ಇನ್ನೂ ನಮ್ಮ ದೃಷ್ಟಿಗೆ ಬೀಳುತ್ತಿರುವವು. ಆತನು ತಾನು ಗೆದ್ದ ದೇಶದ ಜನರನ್ನು ಎಂದೂ ಪೀಡಿಸನು. ಸೆರೆಸಿಕ್ಕವರನ್ನು ಗೋಳಾಡಿಸುವದು ಅವನಿಗೆ ಕನಸುಮನಸಿನಲ್ಲಿ ಕೂಡ ಗೊತ್ತು ಇದ್ದಿಲ್ಲ. ಶ್ರೀ ಶಿವಛತ್ರಪತಿಯಂತೆ ಪರಶುರಾಮಭಾವು ಯಾವಾಗಲೂ ಸದಯಮಾನಸನಾಗಿ ತನ್ನ ಜನರನ್ನೂ, ಸೋತು ಶರಣುಬಂದ ವೈರಿಗಳನ್ನೂ, ತಾನು ಗೆದ್ದ ಪ್ರಾಂತದ ಪ್ರಜೆಗಳನ್ನೂ ಸಪ್ರೇಮದೃಷ್ಟಿಯಿಂದ ನೋಡಿಕೊಳ್ಳುತ್ತಿದ್ದನು. ಕ್ರೌರ್ಯ, ಬಲಾತ್ಕಾರ, ದುರಾಗ್ರಹ ಮುಂತಾದ ಗರ್ಹಣೀಯ ಗುಣಗಳು ಅವನನ್ನು ಎಂದೂ ಸ್ಪರ್ಶಮಾಡಲಿಲ್ಲ. ನಿರಾಶ್ರಿತರಾದ ಹುಡುಗರನ್ನೂ, ಮುದುಕರನ್ನೂ, ಹೆಂಗಸರನ್ನೂ, ಆತನು ಬಹಳ ಪ್ರೀತಿಯಿಂದ ಸತ್ಕರಿಸಿ ಅವರವರ ಬಂಧುಬಳಗದವರ ಬಳಿಗೆ ಕಳುಹಿಸಿ ಕೊಡುತ್ತಿದ್ದನು. ಯಾವನು ಸಂಗ್ರಾಮ-ಸಮಯದಲ್ಲಿ ಹಗೆಗಳ ಹರಣವನ್ನು ಹರಣಮಾಡಲು ಸಾಹಸದಿಂದ ಆವರನ್ನು ಕವಿದು ಮುತ್ತುತ್ತಿದ್ದನೋ

ಅವನೇ ಅತ್ಯಂತ ದಯಾಶೀಲ ಪುರುಷನಕಿಂತಲೂ ಅಧಿಕಾಧಿಕ ಭೂತದಯೆಯನ್ನು ಪ್ರಕಟಿಸುತ್ತಿದ್ದನೆಂಬುವದು ಕಡು ಕೌತುಕದ ಸಂಗತಿಯಾಗಿರುವದು. ಮನುಷ್ಯನ ಸ್ವಭಾವ-ಘಟನೆಯು ಬಹು ಚಮತ್ಕಾರಿಕವಾಗಿರುವದು. ಪ್ರಖ್ಯಾತ ಇಂಗ್ಲೀಷ ಸರದಾರನಾದ ಡ್ಯೂಕ ಆಫ ವೆಲಿಂಗಟನ್ನನು ಇದೇ ಮಾದರಿಯ ಸ್ವಭಾವದವನಾಗಿದ್ದನು.

ಕೆಲವರು ಭಾವೂನನ್ನು ಈ ಡ್ಯೂಕ ಆಫ ವೆಲಿಂಗಟನ್ನನಿಗೆ ಹೋಲಿಸುವರು. ಆದರೆ ಅವರಿಬ್ಬರ ಚರಿತ್ರೆಯನ್ನು ಹೋಲಿಸಿ ನೋಡಿದರೆ, ಅವರಿಬ್ಬರ ಸ್ವಭಾವ, ಸ್ಥಿತಿಗತಿ, ಆಯುಷ್ಯಕ್ರಮ, ಪರಾಕ್ರಮ ಮುಂತಾದವುಗಳ ಹೋಲಿಕೆಯೂ ಹೆಚ್ಚುಕಡಿಮೆಯೂ ಗೊತ್ತಾಗುವದು.

ಭಾವು-ಡ್ಯೂಕರು ೧೮ನೇ ಶತಮಾನದಲ್ಲಿ ಜನ್ಮಹೊಂದಿದರು. ಅವರ ತಂದೆಗಳು ಚಿಕ್ಕಂದಿನಲ್ಲಿಯೇ ತೀರಿಕೊಂಡರು. ಅವರ ಜನನಿಯರು ಮಹಾಸಾಧ್ವಿಯರು. ಅವರ ಶಿಕ್ಷಣಕ್ರಮವನ್ನು ಅವರ ತಾಯಿಂದರೇ ಸಾಗಿಸಿದರು. ಡ್ಯೂಕನಿಗೆ ಆತನ ಒಡಹುಟ್ಟಿದ ಲಾರ್ಡ * ಮಾರ್ನಿಂಗಟನ್ನನ ಸಹಾಯುವಿದ್ದಂತೆ, ಭಾವುವಿಗೆ ಆತನ ಕಕ್ಕನಾದ ಗೋವಿಂದಹರಿಯ ಆಶ್ರಯವಿತ್ತು. ವೆಲಿಂಗಟನ್ನನು ಆಂಗ್ಲಸಾಮ್ರಾಜ್ಯದ ಸೇವೆಯನ್ನು ಕೈಕೊಂಡಂತೆ, ಭಾವು ಪೇಶವಾಯಿಯ ಸೇವೆಯನ್ನು ಸ್ವೀಕರಿಸಿದನು. ಉಭಯತರು ಪರಮ ಪರಾಕ್ರಮಿಗಳು. ಅವರಿಬ್ಬರು ಅನೇಕಸಾರೆ ಅಪರಿಮಿತ ಸೈನ್ಯದ ಸರ್ವಾಧಿಪತ್ಯವನ್ನು ಸ್ವೀಕರಿಸಿ, ತಮ್ಮ ಅಸದೃಶ ಶೌರ್ಯ-ಸಾಹಸಗಳನ್ನು ಪ್ರಕಟಗೊಳಿಸಿದರು. ನೇಪೋಲಿಯನ್ನನು ಡ್ಯೂಕನ ಕಡು ಹಗೆಯು. ಆದರಂತೆ ನಿಜಾಮ-ಕೊಲ್ಹಾಪುರಕರರು ಭಾವುವಿನ ನಿಕರದ ವೈರಿಗಳು. ವೆಲಿಂಗಟನ್ನನು ಪ್ರಖ್ಯಾತ ವಾಟರ್ಲೂ ಕಾಳಗದಲ್ಲಿ ವಿಜಯಿಯಾದಂತೆ, ಪರಶುರಾಮಭಾವು ಇತಿಹಾಸಪ್ರಸಿದ್ಧವಾದ ಖರ್ಡೆಯ ಕಾಳಗದಲ್ಲಿ ಜಯಶೀಲನಾಗಿ ದ್ವೀಪಾಂತರ ಕೀರ್ತಿಯನ್ನು ಪಡೆದನು. ವಾಟರ್ಲೂ ಕಾಳಗದ ಗೆಲವಿನಿಂದ ಡ್ಯೂಕನ ತೇಜವು ಹೆಚ್ಚಿ, ಆಂಗ್ಲಸಾಮ್ರಾಜ್ಯವು ಘನತೆಯನ್ನು ಹೊಂದಿದಂತೆ, ಖರ್ಡೆಯ ಕಾಳಗದಲ್ಲಿ ದೊರೆತ ಅಪೂರ್ವ ವಿಜಯದಿಂದ ಭಾವೂನ ಪ್ರತಾಪವು ಹೆಚ್ಚಿ,

* ಈತನೇ 'ಮಾರ್ಕ್ವಿಸ ಆಫ ವೆಲಸ್ಲಿ' ಎಂದು ಹೆಸರುಗೊಂಡ ಗವ್ಹರ್ನರಜನರಲ್ಲನು. ಇವನೇ ಆಂಗ್ಲಸಾಮ್ರಾಜ್ಯವನ್ನು ಹಬ್ಬಿಸಿದವನು.

ಪೇಶವೆ ಸಾಮ್ರಾಜ್ಯವು ಬಹಳೇ ಊರ್ಜಿತಾವಸ್ಥೆಯನ್ನು ಹೊಂದಿ ವೈಭವದ ಶಿಖರವನ್ನು ಮುಟ್ಟಿತು. ಇಬ್ಬರೂ ಸ್ವಾಮಿಕಾರ್ಯತತ್ಪರರು. ಸ್ವದೇಶ ಹಿತ-ವಿಚಾರವು ಅವರೀರ್ವರ ನಿತ್ಯ ಜಪತಪವಾಗಿತ್ತು. ಅವರು ಪರೋಪಕಾರದ ಮುಂದೆ ಸ್ವಾರ್ಥವನ್ನು ತೃಣೀಕರಿಸುತ್ತಿದ್ದರು. ವೆಲಿಂಗಟನ್ನನು ಕೆಲಷ್ಟುಕಾಲ ಆಂಗ್ಲಸಾಮ್ರಾಜ್ಯದ ಮಂತ್ರಿಯ ಕೆಲಸವನ್ನು ನೋಡಿದಂತೆ, ಭಾವು ಸ್ವಲ್ಪ ದಿವಸ ಪೇಶವೆ ಸರಕಾರದ ಮುಖ್ಯ ಕಾರಭಾರಿಯಾಗಿದ್ದನು. ಒಂದಾನೊಂದು ಕಾಲದಲ್ಲಿ ರಾಜಕೀಯ ಕಾರಣಗಳಗೋಸ್ಕರ ಡ್ಯೂಕನು ಜನರ ಅಪ್ರೀತಿಗೆ ಪಾತ್ರನಾದನು; ಅದೇ ಮೇರೆಗೆ ಪರಶುರಾಮಭಾವು ನಾನಾ ಮೊದಲಾದವರ ಅಪ್ರೀತಿಗೆ ಗುರಿಯಾಗಿ, ನಾನಾಬಗೆಯ ಸಂಕಟಗಳನ್ನು ಸೋಸಿದನು. ವೆಲಿಂಗಟನ್ನನು ಆಂಗ್ಲ ಸಾಮ್ರಾಜ್ಯದ ಸೇನಾನಿಯು. ಭಾವು ಪೇಶವಾಯಿಯ ಸೇನಾನಿಯು. ಅವರಿಬ್ಬರ ಅಂತಃಕರಣವು ಬಹಳ ಸರಳ. ಧೈರ್ಯ, ಸಾಹಸ, ದೃಢನಿಶ್ಚಯ, ಪರೋಪಕಾರ, ಸಹನಶೀಲತ್ವ, ಭೂತದಯ, ಸ್ವಧರ್ಮಪ್ರೀತಿ ಇತ್ಯಾದಿ ಸದ್ಗುಣಗಳು ಅವರ ಸ್ವಭಾವಜನ್ಯ ಗುಣಗಳು. ಡ್ಯೂಕನಿಗೆ ಪೋಲನು ಗೆಳೆಯನು; ಭಾವುವಿಗೆ ನಾನಾಫಡಣವೀಸನು ಸ್ನೇಹಿತನಾಗಿದ್ದನು. ಶರಣಾಗತರನ್ನೂ ಕೈಗೆ ಸಿಕ್ಕವರನ್ನೂ ಅವರು ಎಂದೂ ಪೀಡಿಸಲಿಲ್ಲ. ವೆಲಿಂಗಟನ್ನನು ಆಂಗ್ಲಸಾಮ್ರಾಜ್ಯದ ಆಧಾರಸ್ತಂಭ, ಕೆಚ್ಚೆದೆಯ ಡ್ಯೂಕ, ಜನಾಂಗದ ಕಲಿ ಎಂಬ ನಾಮಾಂಕಿತ ಬಿರುದುಗಳನ್ನು ಹೊಂದಿದಂತೆ, ಪರಶುರಾಮಭಾವು " ಪೇಶವೆ ಸಾಮ್ರಾಜ್ಯದ ಆಧಾರಸ್ತಂಭ, ಅಭಿನವ ಅಭಿಮನ್ಯು, ಶೂರವೀರ, ಪ್ರತ್ಯಕ್ಷ ಪರಶುರಾಮಾವತಾರ " ಎಂಬ ಬಹು ಗೌರವದ ಶ್ಲಾಘನೆಗಳನ್ನು ಹೊಂದಿದನು. ಡ್ಯೂಕನು ಒಮ್ಮೆ ಪರಾಜಿತನಾದನು; ಆದರೆ ಭೀಮಬಲಾಢ್ಯನಾದ ಭಾವುಸಾಹೇಬನು ಎಂದೂ ಸೋಲಲಿಲ್ಲ. " ಸೋಲು " ಎಂಬ ಸೊಲ್ಲು ಆತನ ಕಿವಿಗೆ ಎಂದೂ ಬೀಳಲಿಲ್ಲ. ಆತನು ಆಜನ್ಮ ಪವಿತ್ರ ಕ್ಷಾತ್ರಧರ್ಮವನ್ನು ಪರಿಪಾಲಿಸಿ, ಕಡೆಗೆ ಪುಣ್ಯಕರವಾದ ಧಾರಾತೀರ್ಥದಲ್ಲಿ ತನ್ನ ನಶ್ವರವಾದ ಮಾನುಷಶರೀರವನ್ನು ವಿಸರ್ಜಿಸಿದನು. ಆದರೆ ಇಂಥ ಸುಯೋಗವು ಡ್ಯೂಕನಿಗೆ ಸಾಧಿಸಲಿಲ್ಲ. ಇದು ಅಲ್ಲದೆ ಪರಶುರಾಮಭಾವು ಆಮರಣ ಏಕಪತ್ನೀವ್ರತವನ್ನು ಪರಿಪಾಲಿಸಿ " ಪರನಾರಿ ಸಹೋದರ " ಎಂದೆಂಬುವ ಆರ್ಯೋಕ್ತಿಗೆ ಉತ್ತಮ ಉದಾಹರಣನಾಗಿ ಮೆರೆದನು.

ತನ್ನ ಪದರಿನಲ್ಲಿರುವ ಮಾನಕರಿ, ಆಶ್ರಿತರು ಇತ್ಯಾದಿ ಪರಿಜನರ ಮೇಲೆ ಭಾವೂನ ಲೋಭವು ಬಹಳ. ಅವನು ತನ್ನ ಕುಟುಂಬದ ಜನರೆಂದು ಭಾವಿಸಿ ಆತನು ಅವರನ್ನು ಹೊಟ್ಟೆಯ ಮಕ್ಕಳಂತೆ ಜೋಪಾನ ಮಾಡುತ್ತಿದ್ದನು. ದಾಳಿಯ ಕೆಲಸದಲ್ಲಿ ತೊಡಕಿರಲಿ, ದೇಶಾಂತರದಲ್ಲಿರಲಿ ಅಥವಾ ಎಲ್ಲೇ ಇರಲಿ ಅವನು ಸ್ವಕೀಯ ಜನರ ಹಿತ-ವಿಚಾರದಲ್ಲಿ ಮಗ್ನನಾಗಿರುತ್ತಿದ್ದನು. ಅವನು ಒಮ್ಮೆ ಯಾರನ್ನಾದರೂ ತನ್ನವನೆಂದು ಹಚ್ಚಿಕೊಂಡನೆಂದರೆ ಅವನನ್ನು ಎಂದೂ ಕೈಬಿಡನು. ಪೇಶವೆ ದರಬಾರದಲ್ಲಿ ಪರಶುರಾಮಭಾವೂನ ಗೌರವವು ಬೆಳದಂದಿನಿಂದ ಅನೇಕ ಮಹಾತ್ಮರು ಆತನ ಉದಾರ ಆಶ್ರಯಕ್ಕೆ ಬರಲಾರಂಭಿಸಿದರು. ಅವನು ಅವರನ್ನು ಯಥಾಯೋಗ್ಯ ಸತ್ಕರಿಸುತ್ತಿದ್ದನು. ಎಷ್ಟೋ ಜನರಿಗೆ ವರ್ಷಾಶನ, ನೇಮಣೂಕ ಮೊದಲಾದವುಗಳನ್ನು ಹಚ್ಚಿಕೊಟ್ಟನು. ಅವರ ವಂಶಜರು ಅವುಗಳ ಉಪಭೋಗವನ್ನು ಇನ್ನೂ ಮಾಡುತ್ತಿರುವರು. ಸ್ವಕೀಯ ಜನರ ಅಭಿಮಾನವು ಆತನಲ್ಲಿ ಸಂಪೂರ್ಣವಿತ್ತು; ತನ್ನ ಜನರ ಉತ್ಕರ್ಷವನ್ನು ನೋಡಿ ಆತನು ಹಿರಿ ಹಿರಿ ಹಿಗ್ಗುವನು. ಕೆಲಕೆಲವರನ್ನು ಭಾವು ಒಳ್ಳೇ ಉನ್ನತಸ್ಥಿತಿಗೆ ತಂದನು; ಕೆಲವರಿಗೆ ಗ್ರಾಮಗಳನ್ನು ಇನಾಮು ಹಚ್ಚಿಸಿಕೊಟ್ಟನು. ಕೆಲಕೆಲವರಿಗೆ ಹೊಲಗಳನ್ನು ಉಂಬಳಿ ಹಾಕಿಕೊಟ್ಟನು. ಕೆಲಕೆಲವರಿಗೆ ಪೇಶವೆ ಸರಕಾರದ ಸುಭೆ ಕೆಲಸಗಳನ್ನು ಕೊಡಿಸಿದನು. ಹೀಗೆ ಬಡವರ ಭಾಗ್ಯಲಕ್ಷ್ಮಿಯಾದ ಪರಶುರಾಮಪಂತ ಪಟವರ್ಧನನ ಮಹದಾಶ್ರಯದಿಂದ ಅಸಂಖ್ಯ ಜನರು ಉನ್ನತಿಯನ್ನು ಹೊಂದಿದರು. ಈ ಪ್ರಕಾರ ಸರ್ವರಿಗೂ ಆಶ್ರಯಭೂತನಾದ ಭಾವೂನ ಮೇಲೆ ಆತನ ಪರಿವಾರದ ಜನರ ಅಪ್ರತಿಮ ಮತ್ತು ದೃಢತರ ಪ್ರೇಮವಿದ್ದದ್ದು ಸೋಜಿಗವಲ್ಲ. ಅವರೆಲ್ಲರು ಆತನನ್ನು ತಂದೆಯಂತೆ ಭಾವಿಸುತ್ತಿದ್ದರು. ಆತನ ಸಲುವಾಗಿ ಅವರು ತಮ್ಮ ಸರ್ವಸ್ವವನ್ನು ವೆಚ್ಚಮಾಡಲು ಸಿದ್ಧರು. ಮಾಂಡಣಗಾಂವದಲ್ಲಿ ಪರಶುರಾಮಪಂತನು ಪ್ರತಿಬಂಧನದಲ್ಲಿದ್ದಾಗ್ಗೆ, ಆತನ ಸೇವಕರು, ಆಶ್ರಿತರು ಇತ್ಯಾದಿ ಪರಿವಾರದ ಜನರು ಆತನ ಮುಕ್ತತೆಯ ಬಗ್ಗೆ ನಾನಾಬಗೆಯ ಪರಿಶ್ರಮ ಮಾಡಿದರು. ನಾನಾಫಡಣವೀಸನು ಭಾವೂನನ್ನು ವಿದೇಶಕ್ಕೆ ಕಳುಹಿ ಹದ್ದು

ಪಾರುಮಾಡುವ ಯೋಚನೆಯಲ್ಲಿದ್ದನು. ಭಾವೂನ ಜನರು ಭಗೀರಥ ಪ್ರಯತ್ನ ಮಾಡಿ ನಾನಾನ ಆ ಕುಹಕ ವಿಚಾರಕ್ಕೆ ಅರದಾಳ ಹಚ್ಚಿದರು. ಭಾವೂನ ಸುತ್ತು ಮುತ್ತು ಯಾವಾಗಲು ಕಟ್ಟುಗಾವಲವಿರುತ್ತಿತ್ತು. ಆದರೂ ಅವರಲ್ಲಿ ಕೆಲವರು ಭೈರಾಗಿ, ಕೆಲವರು ಗೋಸಾವಿ ಹೀಗೆ ನಾನಾ ವೇಷಗಳನ್ನು ಧರಿಸಿ ಭಾವೂನ ಭೆಟ್ಟಿಯಾಗುತ್ತಿದ್ದರು. ಇನ್ನೂ ಕೆಲವರು ಶಿಂದೇನ ಪ್ರೀತಿಪಾತ್ರ "ಕೇಸರಾ" ಎಂಬುವ ವೇಶ್ಯೆಯ ಮುಖಾಂತರ ಆತನನ್ನು ಒಲಿಸಿಕೊಂಡು, ಭಾವೂನ ಬಂಧ-ವಿಮೋಚನದ ವಿಚಾರನಿಮಗ್ನರಾಗಿ ಆ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡಿದ್ದರು; ಇದಲ್ಲದೆ ಎಷ್ಟೋ ಶೂರ ಜನರು ಜೀವದ ಹಂಗುದೊರೆದು ಕಾವಲಗಾರರನ್ನು ತುಂಡರಿಸಿ ಚಲ್ಲಿ, ಆತನನ್ನು ಬಿಡುಗಡೆ ಮಾಡಲುದ್ಯುಕ್ತರಾಗಿದ್ದರು, ಈ ಮೇರೆಗೆ ಭಾವೂನ ಸೇವಕ-ಪರಿಚಾರಕರು ಪರಮ ನಿಷ್ಠರಿದ್ದರು. ಉಳಿದ ಜನರು ಉತ್ತಮರಾಗುವದು ಪ್ರಾಯಶಃ ಯಜಮಾನನ ಕೈಯೊಳಗಿರುವದೆಂದು ಬಲ್ಲವರು ಹೇಳುವ ಮಾತು ಯಥಾಸತ್ಯವಿರುತ್ತದೆ.

ಪರಶುರಾಮಪಂತನು ಆಜನ್ಮ ಪರಿಪಾಲಿಸಿದ ಪವಿತ್ರ ಏಕಪತ್ನೀವ್ರತವು ಅತ್ಯಂತ ಶ್ಲಾಘನೀಯವಿದ್ದು, ಅದು ಆತನಲ್ಲಿದ್ದ ಸದ್ಗುಣಮಾಲಿಕೆಯಲ್ಲಿ ಸುವರ್ಣದ ಪದಕದಂತೊಪ್ಪುವದು. ಅಖಂಡ ಶ್ರೀಮಂತನ, ನೂತನ ತಾರುಣ್ಯ, ಅನುಪಮ ಸಾಮರ್ಥ್ಯ, ಅಕಲ್ಪಿತ ಸೌಂದರ್ಯ ಇವುಗಳಲ್ಲಿ ಮನುಷ್ಯರಿಗೆ ಒಂದು ಇದ್ದರೆ ಸಾಕು; ಅದರಿಂದ ಪುರುಷನು ಎಂಥ ಸುಶೀಕ್ಷಿತನೂ, ನೀತಿವಿಶಾರದನೂ ಇದ್ದರೂ, ಆತನು ನೀತಿಭ್ರಷ್ಟನಾಗುವ ಸಂಭವವುಂಟು. ಆದರೆ ಪೂರ್ವ ವಯದಲ್ಲಿ (ತಾರುಣ್ಯದಲ್ಲಿ) ಸಂಪೂರ್ಣ ಐಶ್ವರ್ಯವು ಪ್ರಾಪ್ತವಾಗಿ ವಿಷಯೋಪಭೋಗದ ಸರ್ವ ಸಾಧನಸಾಹಿತ್ಯಗಳು ಅನುಕೂಲವಾಗಿದ್ದರೂ, ನಮ್ಮ ಕಥಾನಾಯಕನು ಸದಾಚಾರವನ್ನು ಬಿಡದೆ, ವಿಷಯವಾಸನೆಗೊಳಗಾಗದೆ ಆಮರಣ ಉತ್ತಮೋತ್ತಮವಾದ ಏಕಪತ್ನೀವ್ರತವನ್ನು ಏಕನಿಷ್ಠೆಯಿಂದ ಪರಿಪಾಲಿಸಿದನು. ಈ ಬಗ್ಗೆ ಆತನನ್ನು ಎಷ್ಟು ಹೊಗಳಿದರೂ ಸ್ವಲ್ಪೇ. ಮಹಾರಾಷ್ಟ್ರದೇಶದ ಇತಿಹಾಸರೂಪ ತಕ್ಕಡಿಯಲ್ಲಿ ಇಂಥ ಅಸಾಧಾರಣ ಸದ್ಗುಣಸಮನ್ವಿತನಾದ ಪವಿತ್ರ ಪುರುಷ ಪರಶುರಾಮಪಂತ ಪಟವರ್ಧನನ ಜೋಡಿಗೆ ಕೂತುಕೊಂಡು ತೂಗಿಸಿಕೊಳ್ಳುವ ಪುರುಷರು ದೊರಕುವದು ದುರ್ಲಭವೇ ಸರಿ.

ಭಾವೂನ ಅಂತಃಕರಣವು ಬಲು ಸರಳ. ಅವನು ಸರ್ವದಾ ನಿಷ್ಕಪಟಿಯು. ಒಳಗೊಂದು, ಹೊರಗೊಂದು ವಿಚಾರವನ್ನು ಅವನು ಕನಸ್ಸು ಮನಸ್ಸಿನಲ್ಲಿ ಸಹ ಅರಿಯನು. ಆದರೆ ಕಲಿಮಹಿಮೆಯಿಂದ ಜಗತ್ತು ಕಪಟಮಯವಾಗಿರುವದು. ಕಾರಣ ಈ ಜಗತ್ತಿನಲ್ಲಿ ಸರಳತನದ ನಡೆನುಡಿಗಳಿಂದ ವಿಶೇಷ ಪರಿಣಾಮವಾಗುವದಿಲ್ಲ. ಇದರ ಸತ್ಯತೆಯು ನಮ್ಮ ಚರಿತ್ರನಾಯಕನಿಗೆ ಅನೇಕಸಾರೆ ದಿಗ್ದರ್ಶನವಾಯಿತು; ಇಷ್ಟೇ ಅಲ್ಲ. ಅವನು ಅದರ ಫಲಗಳನ್ನು ಅನುಭವಿಸಬೇಕಾಯಿತು. ನಾನಾ-ಬಾಳೋಬರ ನಡುವೆ ಪೇಶವೆ ಸರಕಾರದ ಮುಖ್ಯ ಕಾರಭಾರಿಯ ಪದವಿಯ ಸಲುವಾಗಿ ವೈಮನಸ್ಸ ಉತ್ಪನ್ನವಾಯಿತು. ಆಗ್ಗೆ ಅವರು ಭಾವೂಸಾಹೇಬನನ್ನು ತಮ್ಮಿಬ್ಬರ ನಡುವೆ ತಕ್ಕೊಂಡು, ಆತನ ಹೆಸರನ್ನೇ ಮುಂದೆಮಾಡಿ, ಸ್ವಾರ್ಥವನ್ನು ಸಾಧಿಸಿಕೊಂಡರು. ಇದಲ್ಲದೆ ಅವರ ಕೃಷ್ಣಕಾರಸ್ಥಾನ ಪ್ರಭಾವದಿಂದಲೇ ಪರಶುರಾಮಭಾವು ಮಹತ್ಸಂಕಟಕ್ಕೊಳಗಾದನು. ಇದರ ಮೇಲಿಂದ ನೋಡಲು, ವ್ಯವಹಾರದಲ್ಲಿ ನಿರ್ಗಮಸ್ವಭಾವವು ( ಸರಳ ) ಸರ್ವದಾ ಹಿತಕರವಾಗುವದೆಂಬ ನಿಯಮವಿಲ್ಲ; ನಿದಾನ ಕಪಟಪಟುಮನುಷ್ಯರ ಕೂಡಂತೂ ಸರಳತನದ ವರ್ತನವು ಉಪಯೋಗಿಸಲಾರದೆಂಬುವದು ಸತ್ಯವೆಂದು ತೋರುತ್ತದೆ. ಠಕ್ಕರಿಗೆ ಮಹಾ ಠಕ್ಕರು ಕೂಡಿದರೆ ಮಾತ್ರ ವ್ಯವಹಾರವು ಸಾಗುವದು. ಆದರೂ "ಸರಳಸ್ವಭಾವ, ಸತ್ಯತೆ, ಪ್ರಾಮಾಣಿಕತನಗಳು ಉತ್ತಮೋತ್ತಮ ಗುಣಗಳು; ಅವುಗಳ ಯೋಗದಿಂದ ಕ್ಷಣಭಂಗುರ ನಿರಾಶೆ, ಕಷ್ಟಗಳು ಪ್ರಾಪ್ತವಾದರೂ, ಮನುಷ್ಯನು ಕಾಲಾಂತರದಲ್ಲಿ ಅಖಂಡ ವಿಜಯವನ್ನು ಹೊಂದಿ ಮೇಲಾದ ಹೆಚ್ಚಳವನ್ನು ಪಡೆಯುವನು. ಆತನ ಕೀರ್ತಿಯು ಆಚಂದ್ರಾರ್ಕ ನಿಲ್ಲುವದು." ಎಂಬ ಉದಾತ್ತ ನೀತಿತತ್ವವನ್ನು ಮರೆಯುವದು ಒಳಿತಲ್ಲ. ಬೂದಿಯನ್ನು ಕನ್ನಡಿಗೆ ಹಚ್ಚಿ ತಿಕ್ಕುತ್ತ ಹೋದಂತೆ; ಅದರ ಪ್ರಕಾಶವು ಹೆಚ್ಚುತ್ತ ಹೋಗುವದು. ಅದರಂತೆ ನಾನಾ ಫಡಣವೀಸನ ಕೃಷ್ಣಕಾರಸ್ಥಾನದ ಯೋಗದಿಂದ ಭಾವೂನ ಸರಳಸ್ವಭಾವವು ಬೆಳಕಿಗೆ ಬಂದು, ಅದರ ಕೀರ್ತಿಯು ಅವನ ಪಶ್ಚಾತ್ತ ಅಜರಾಮರವಾಗಿರುವದು.

ಪರಶುರಾಮಭಾವುವಿನಲ್ಲಿದ್ದ ಸ್ವಾಮಿಕಾರ್ಯತತ್ಪರತೆಯ ಗುಣವು ಅವರ್ಣನೀಯವಾದದ್ದು. ಪೇಶವೆ ಸರಕಾರದ ಸಣ್ಣ ದೊಡ್ಡ ಕೆಲಸಗಳು

ಬಂದರೆ ಅವುಗಳನ್ನು ಕಡೆಗಾಣಿಸಲು ತನಗೆ ಆಜ್ಞೆಯಾಗುತ್ತಲೆ ಅವನು ಸಿದ್ಧನಾಗುತ್ತಿದ್ದನು. ಒಂದು ದಾಳಿಯ ಕೆಲಸವನ್ನು ಕಡೆಹಾಯಿಸಿ ಯಶಸ್ವಿಯಾಗಿ ಬರುವಷ್ಟರಲ್ಲಿ, ಮತ್ತೊಂದು ಸ್ವಾರಿಯ ಬಗ್ಗೆ ಅಪ್ಪಣೆಯಾಗುವದು. ಇದರಂತೆ ಒಂದೇಸವನೇ ಕ್ರಮವು ನಡೆದಿತ್ತು. ಆದರೂ ಆತನು ಯುದ್ಧಕ್ಕೆ ಬೇಸತ್ತು ಪೇಶವೆ ಸರಕಾರದವರ ಆಜ್ಞೆಯನ್ನು ಎಂದೂ ನಿಷೇಧಿಸಲಿಲ್ಲ; ಇಷ್ಟೇ ಅಲ್ಲ, ಕೈಕೊಂಡ ಕಾರ್ಯಕೆಲಸಗಳನ್ನು ಕೊನೆಗಾಣಿಸುವದರಲ್ಲಿ ಅವನು ಲವಲೇಶ ಆಲಸ್ಯವನ್ನು ಮಾಡಲಿಲ್ಲ. ಪರಶುರಾಮಭಾವುವಿನ ಕಾಲಕೀರ್ದಿಯಲ್ಲಿ ಬಾಳಾಜಿಬಾಜೀರಾವ ಉರ್ಫ ನಾನಾಸಾಹೇಬ ಮೊದಲು ಮಾಡಿಕೊಂಡು, ಕಡೆಯ ಬಾಜೀರಾಯನ ವರೆಗೆ ಆರುಮಂದಿ ಪೇಶವೆಯರು ಆದರು. ಅವರೆಲ್ಲರೊಡನೆ ಅವನು ಏಕನಿಷ್ಠೆಯಿಂದ ನಡಕೊಂಡು ಪ್ರತಿಒಂದು ಕೆಲಸದಲ್ಲಿ ಪ್ರಭುಭಕ್ತಿಯನ್ನು ಪ್ರಕಟಿಸಿದನು. ಹೀಗೆ ಸ್ವಾಮಿಕಾರ್ಯನಿಷ್ಠರಾದ ಪುರುಷೋತ್ತಮರು ಸಿಗುವದು ವಿರಳ. ಲೋಕವಿಖ್ಯಾತ ನೌಕಾಧಿಪತಿಯಾದ ನೆಲಸನ್ನನಂತೆ ನಮ್ಮ ಚರಿತ್ರನಾಯಕನು ಸ್ವಾಮಿಕಾರ್ಯ, ದೇಶೋದ್ಧಾರಗಳ ಸಲುವಾಗಿ ಸ್ವಸುಖವನ್ನು ತುಚ್ಛೀಕರಿಸುತ್ತಿದ್ದನು. ವಿಚಾರಮಾಡಿ ನೋಡಿದರೆ ಮನುಷ್ಯನು ಸ್ವಸುಖಾಭಿಲಾಷಿಯು. ಜೀವವು ಬೆಲ್ಲದಕಿಂತ ಸವಿಯು. ಪ್ರಾಣರಕ್ಷಣೆ-ಸೌಖ್ಯಸಂಪಾದನೆಗಳ ಸಲುವಾಗಿ ಮನುಷ್ಯನು ಬೇಕಾದ್ದು ಮಾಡಲು ಸಿದ್ಧನಾಗುವನು. ಆದರೆ ಸಾರಾಸಾರ ವಿಚಾರಶಕ್ತಿಯುಳ್ಳ ಮನುಷ್ಯನ ಮಾತೇ ಬೇರೆ. ಅವನು ಸ್ವಹಿತದಿಂದ ಯಾವ ಪುರುಷಾರ್ಥವೂ ಸಾಧಿಸದೆಂದು ತನ್ನ ಪದರಿಗೆ ಗಂಟು ಹಾ ಕೊಂಡು, ಕೇವಲ ಪರೋಪಕಾರವೆಂಬ ಪುಣ್ಯಾಕರ ತೀರ್ಥದಲ್ಲಿಯೇ ಮುಳಗಿ ಏಳುವನು. ಇವೇ ಮೊದಲಾದ ಉದಾತ್ತತತ್ವಗಳನ್ನು ಮೇಲುಪಂಕ್ತಿಯಾಗಿಟ್ಟುಕೊಂಡು, ಯಾವನು ಸ್ವಸುಖದ ಹಂಗುದೊರೆದು, ಸ್ವಾರ್ಥತ್ಯಾಗಮಾಡಿ ಕೇವಲ ಸ್ವಾಮಿಕಾರ್ಯ, ಸ್ವಜನರುನ್ನತಿ ಮುಂತಾದ ಮಹತ್ಕೃತ್ಯಗಳ ಸಲುವಾಗಿ ತನ್ನ ಜಡದೇಹವನ್ನು ಹಗಲಿರುಳು ಸವಿಸುವನೋ ಮತ್ತು ಆ ಪ್ರಕಾರ ಮಾಡುವದು ಪ್ರತಿಒಬ್ಬ ವ್ಯಕ್ತಿಯ ಕರ್ತವ್ಯಕರ್ಮವೆಂದು ಬಗೆದು, ಆ ಕರ್ತವ್ಯಕರ್ಮವನ್ನು ಮನಮುಟ್ಟಿ ಮಾಡಿ ಕೃತಾರ್ಥನೆನಿಸುವದೇ ಮೇಲಾದ ಅಲಂಕಾರವೆಂದು ತಿಳಿಯುವನೋ,

ಅವನೇ ನಿಜವಾದ ಯೋಗ್ಯತೆಯ ಪುರುಷನು. ಆತನೇ ಮಾನಾರ್ಹನಾದ ಮಾನವನು. ಆತನೇ ಧನ್ಯನು.

ಒಮ್ಮೆ ಪರಶುರಾಮಭಾವು ಶ್ರೀರಂಗಪಟ್ಟಣದ ದಾಳಿಯ ಕೆಲಸದಲ್ಲಿ ಇಂಗ್ಲೀಷರ ಸಹಾಯಾರ್ಥ ದಂಡಿನೊಡನೆ ಹೋದಾಗ್ಗೆ ಆತನು ಅಖಂಡ ಎರಡು ವರ್ಷ ಅತ್ತಕಡೆಗೆ ನಿಲ್ಲಬೇಕಾಯಿತು. ಆಗ ಆತನ ಜತೆಯ ಜನರು ಮಾರ್ಗಾಯಾಸದಿಂದಲೂ, ಮೇಲಿಂದಮೇಲೆ ಆಗುವ ಯುದ್ಧಗಳಿಂದಲೂ ತೊಳಲಿ ಬಳಲಿ ಬೇಸತ್ತರು. ಅವರಲ್ಲಿ ನಲಗೆ ಎಂಬ ಅಡ್ಡಹೆಸರಿನ ಒಬ್ಬ ಧಿಟ್ಟ ಶಿಲೇದಾರನಿದ್ದನು. ಅವನು ಒಂದು ದಿವಸ ಭಾವೂನ ಬಳಿಗೆ ಬಂದು "ಒಡೆಯರೇ, ತಮ್ಮ ಸಮಾಗಮದ ಯೋಗದಿಂದ ನಾವೆಲ್ಲರು ನೂರಾರು ಕಾಳಗಗಳನ್ನು ಮಾಡಿ ಯಶಸ್ವಿಯಾಗಿರುವೆವು. ಇನ್ನು ಚಾಕರಿಯು ಸಾಕು. ಇನ್ನೂ ಎಷ್ಟು ದಿವಸ ನಾವು ದುಡಿಯಬೇಕು. ಮನೆಯಲ್ಲಿ ತಾಯಿತಂದೆ, ಹೆಂಡರುಮಕ್ಕಳು ಮುಂತಾದ ಜನರು ನಮ್ಮ ವಿಷಯವಾಗಿ ಚಿಂತಿಸಬೇಕು, ಇಲ್ಲಿ ನಾವು ಸ್ವಕೀಯ ಜನರ ಬಗ್ಗೆ ಚಿಂತೆಮಾಡುತ್ತ ಕೂಡ್ರಬೇಕು. ಈಗ ನಮಗೆ ದೈಮಾಡಿ ಅಪ್ಪಣೆಕೊಡರಿ. ನಾವು ಬೇಸತ್ತಿರುವೆವು." ಎಂದು ಗಂಟುಬಿದ್ದನು. ಆಗ್ಗೆ ಪರಶುರಾಮಭಾವು ಆ ಶಿಲೇದಾರರನ್ನು ಸಮುದಾಯಿಸಿ ಅಂದದ್ದು "ಅಪ್ಪಾ, ನೀವು ಅನ್ನುವದು ನಿಜವು. ಪ್ರಸ್ತುತ ದಾಳಿಯ ಕೆಲಸವು ದೀರ್ಘಕಾಲ ನಡೆದಿರುವದರಿಂದ ನಿಮಗೆ ಸ್ವಕೀಯ ಜನರ ನೆನಪಾದದ್ದು ಯಾವ ದೊಡ್ಡ ಮಾತು? ಆದರೆ ನೀವು ನಿಮ್ಮ ಕರ್ತವ್ಯಕರ್ಮವನ್ನು ಮರೆಯಬಾರದು. ಶೂರರಾದ ನೀವೆಲ್ಲರು ಪೇಶವೆ ಸರಕಾರದ ಸೇವೆಗಾಗಿ ನಿಮ್ಮ ದೇಹವನ್ನು ಅರ್ಪಿಸಿ ಬಿಟ್ಟಿರುವಿರಿ. ಸ್ವಾಮಿಕಾರ್ಯವನ್ನು ಏಕನಿಷ್ಠೆಯಿಂದ ಕಡೆಗಾಣಿಸುವದೇ ನಿಮ್ಮ ಆದ್ಯಕರ್ತವ್ಯವು; ಶ್ರೀಮಂತರ ವಿಜಯವೇ ನಿಮ್ಮ ಸುಖವು; ಲೋಕಕಲ್ಯಾಣವೇ ನಿಮ್ಮ ಆನಂದವು. ಯುದ್ಧ, ದಯಾ, ಪರೋಪಕಾರ, ಸರ್ವಭೂತಸಹಾನುಭೂತಿ, ಸ್ವಧರ್ಮಪ್ರೀತಿ, ದಾನ ಇವೆಲ್ಲ ಅಕ್ಷಯವಾದ ಕೀರ್ತಿಯ ಪ್ರಮುಖ ಸಾಧನಗಳು. ಇವುಗಳನ್ನು ಮರೆತು ಅಜ್ಜ ಆರು ತಲೆ, ಮುತ್ಯಾ ಮೂರು ತಲೆಯಿಂದ ನಡೆದುಬಂದ ಅಚ್ಚಳಿಯದ ಕೀರ್ತಿಗೆ ಕಪ್ಪು ಹಚ್ಚಕೂಡದು; ವಂಶಾನುಗತವಾದ ಸ್ವಧರ್ಮ, ಸ್ವಕುಲ ಮತ್ತು ಸ್ವಕೀಯ ಜನರ ಅಭಿಮಾನವನ್ನು ಬಿಡತಕ್ಕದ್ದಲ್ಲ. ನಡೆನುಡಿಗಳಲ್ಲಿ ಒಂದೇಸಮವಾಗಿದ್ದು, ಪ್ರಭುಸೇವೆಯನ್ನು

ಮಾಡುತ್ತ ದೇಶಹಿತವನ್ನು ಸಾಧಿಸಬೇಕು. ಪ್ರಭು-ಕಾರ್ಯನಿರ್ವಾಹದಲ್ಲಿ ಪ್ರತಿಒಬ್ಬ ವ್ಯಕ್ತಿಯು ಒಂದಿಲ್ಲೊಂದು ಬಗೆಯ ಉದ್ಯೋಗವನ್ನು ಮಾಡಲೇಬೇಕು. ಅದರಂತೆ ನಿಮ್ಮ ಪಾಲಿಗೆ ಈ ದಾಳಿಯ ಕಾರ್ಯಭಾಗವು ಬಂದಿರುವದು. ನಿಮ್ಮೆಲ್ಲರ ಅಪ್ರತಿಮ ಪರಾಕ್ರಮದ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು, ಶ್ರೀಮಂತ ಸರಕಾರದವರು ಇಂತಹ ಮಹತ್ವದಾಳಿಯ ಕೆಲಸವನ್ನು ನಿಮಗೆ ಒಪ್ಪಿಸಿ ಕೊಟ್ಟಿರುವರು. ಆದ್ದರಿಂದ ನೀವು ನಿಮ್ಮ ಸಾವಿರಾರು ಸಂಕಟಗಳನ್ನು ಬದಿಗಿಟ್ಟು, ಸ್ವಾಮಿಕಾರ್ಯವನ್ನು ಸಿದ್ಧಿಗೊಯ್ದು ಕೃತಾರ್ಥರಾಗಬೇಕು. ನೀವೇ ಈಗ ಆಲಸ್ಯಮಾಡಿ ಸ್ವೀಕೃತಕಾರ್ಯ-ವಿಮುಖರಾದರೆ, ಪೇಶವೆ ಸರಕಾರದ ಪಕ್ಷವನ್ನು ಯಾರು ಕಟ್ಟಬೇಕು? ಮತ್ತು ಆ ಪೇಶವೆ ಸಾಮ್ರಾಜ್ಯದ ಉತ್ಕರ್ಷವು ಆಗುವ ಬಗೆಯಾವದು? ಆದ್ದರಿಂದ ನೀವು ಕೈಕೊಂಡ ಕಾರ್ಯವನ್ನು ತನು-ಮನ-ವಚನದಿಂದ ಮಾಡಿ ತೀರಬೇಕು; ಹಾಗೆ ಮಾಡದಿದ್ದರೆ ನೀವು ರಾಜದ್ರೋಹಿಗಳೂ, ದೇಶದ್ರೋಹಿಗಳೂ ಆಗುವದಿಲ್ಲವೇ ಹ್ಯಾಗೆ?

'ಸೇನಾನಾಯಕ' ಈ ಸಂಬಂಧದಿಂದ ವಿಚಾರಮಾಡಿದರೆ ಅರ್ವಾಚೀನ ವೀರಾಗ್ರೇಸರರಲ್ಲಿ ಪರಶುರಾಮಭಾವು ಅಗ್ರಸ್ಥಾನವನ್ನು ಅಲಂಕರಿಸುವನೆಂದು ಸ್ಪಷ್ಟವಾಗುವದು. ದಂಡನಾಯಕನಲ್ಲಿರಬೇಕಾದ ಸರ್ವಗುಣಗಳು ಆತನಲ್ಲಿ ವಾಸ್ತವ್ಯವಾಗಿದ್ದವು. ಪ್ರಖ್ಯಾತ ಪೇಶವೆಯಾದ ಬಾಜೀರಾವ ಬಲ್ಲಾಳನಂತೆ ಆತನು ಶಿಲೇದಾರ, ಸ್ವಾರ ಮತ್ತು ಸಿಪಾಯಿಜನರ ದುಃಖದಲ್ಲಿ ಪಾಲುಗಾರನಾಗುವನು. ತನ್ನ ಸುಖದಕಿಂತ ಅವರ ಸುಖಾನುಕೂಲತೆಗಳ ಕಡೆಗೆ ಆತನು ಹೆಚ್ಚು ಲಕ್ಷ್ಯಕೊಡುವನು; ಮಧುರಭಾಷಣದಿಂದ ಅವರಲ್ಲಿ ತಲೆದೋರಿದ ಉದಾಸೀನತೆಯನ್ನು ಕಳೆದು ಅವರನ್ನು ಸುಪ್ರಸನ್ನರಾಗಿ ಮಾಡುವನು; ಅವರವರ ಪರಾಕ್ರಮಕ್ಕೆ ಸರಿಯಾಗಿ ತಕ್ಕ ಉಚಿತಗಳನ್ನು ಕೊಡುವನು. ಅವರಲ್ಲಿ ಉಲ್ಲಾಸವು ಹೆಚ್ಚಬೇಕೆಂದು ಒಮ್ಮೊಮ್ಮೆ ಆತನು ಅವರೊಡನೆ ಮೋಜಿನ ಆಟವಾಡುವನು; ಹಬ್ಬ ಹುಣ್ಣಿವೆಗಳು ಬಂದರೆ ಅವರಿಗೆ ತರತರದ ಪಕ್ವಾನ್ನಸಮೇತವಾದ ಭೋಜನಸಮಾರಂಭವನ್ನು ಮಾಡಿಸುಣಿಸುವನು. ಇವೆಲ್ಲವುಗಳಲ್ಲಿ ಆತನಿಗೆ ಬಹು ಹೌಸು ಇತ್ತು. ದಂಡಿನ ಜನರು ಒಂದು ಕಡೆಗೆ ತಳವೂರಿದರೆಂದರೆ, ಎಲ್ಲ ಜನರ ಅನ್ನ-

ನೀರು ಮೊದಲಾದವುಗಳ ವ್ಯವಸ್ಥೆಯನ್ನು ಮೊದಲು ಮಾಡಿಸಿಕೊಟ್ಟು ಹಿಂದಿನಿಂದ ತನ್ನ ವ್ಯವಸ್ಥೆಯನ್ನು ನೋಡಿಕೊಳ್ಳುವನು. ಇದು ಆತನ ನಿತ್ಯ ಪರಿಪಾಠವಾಗಿತ್ತು. ಸೈನ್ಯದಲ್ಲಿ ಯಾರಾದರೂ ಜಡ್ಡು ಬಿದ್ದರೆ ಅವರ ಔಷಧ ಪಥ್ಯಗಳ ಬಗ್ಗೆ ತತ್ಕಾಲ ಯೋಗ್ಯ ವ್ಯವಸ್ಥೆಯನ್ನು ಮಾಡುವನು. ಕಾದಿ ದಣಿದವರಿಗೆ ನೆರವಾಗುವನು; ಶೋಕಾಕುಲರನ್ನು ಸಂತವಿಸುವನು. ಇವೆಲ್ಲ ಕೆಲಸಗಳಲ್ಲಿ ಆತನು ಬಹಳೇ ದಕ್ಷನಿದ್ದನು. ಆದದರಿಂದ ಆತನು ದಂಡಿನ ಎಲ್ಲ ಜನರ ಪ್ರೀತಿಪಾತ್ರನಾಗಿದ್ದನು. ಪ್ರತಿ ಒಬ್ಬನಿಗೆ ತನ್ನ ಪ್ರಾಣವು ಪ್ರಿಯವಾದದ್ದು. ಆದರೂ ಭಾವೂನ ಜನರು ಆತನ ಸಲುವಾಗಿ ತಮ್ಮ ಬೆಲೆಯಿಲ್ಲದ ಜೀವವನ್ನು ವೆಚ್ಚ ಮಾಡಲಿಕ್ಕೆ ಎಂದೂ ಅನುಮಾನ ಮಾಡುತ್ತಿದ್ದಿಲ್ಲ. ತಮ್ಮೊಡೆಯನ ಉಪಯೋಗಕ್ಕೆ ಬೀಳಲು ‘ ನಾ ಮುಂದೆ, ನೀ ಮುಂದೆ ’ ಎಂದು ಹಾತೊರೆಯುತ್ತಿದ್ದರು. ಅವನ ಸೂಚನೆಯು ಬಂದ ಕೂಡಲೆ ಅವರು ಬೇಕಾದ ಕೆಲಸವನ್ನು ಕೈಕೊಳ್ಳಲಿಕ್ಕೆ ಸಿದ್ಧರಾಗುತ್ತಿದ್ದರು. ಪ್ರಖ್ಯಾತ ವೀರನಾಯಕನಾದ ನೆಪೋಲಿಯನ್ನ ಬೋನಾಪಾರ್ಟನ ಶಿಪಾಯಿ ಜನರು ಆತನೊಡನೆ ಬೇಕಾದ ಸ್ವಾರಿಯ ಸಂಗಡ ಹ್ಯಾಗೆ ಹೊರಡುತ್ತಿದ್ದರೋ, ಹಾಗೆಯೇ ಪರಶುರಾಮಭಾವೂನ ಸಿಪಾಯಿಜನರು ಬೇಕಬೇಕಾದ ಸ್ಥಳಗಳಿಗೆ ಆತನೊಡನೆ ಹೊರಡುತ್ತಿದ್ದರು. ಬೋನಾಪಾರ್ಟನು ಎಲ್ಬಾ ನಡುಗಡ್ಡೆಯಲ್ಲಿ ಪ್ರತಿ-ಬಂಧನದಲ್ಲಿದ್ದನು; ಅಲ್ಲಿಂದ ಅವನು ಗೌಪ್ಯವಾಗಿ ತಪ್ಪಿಸಿಕೊಂಡು ಫ್ರಾನ್ಸದೇಶದಲ್ಲಿ ಕಾಲಿಟ್ಟ ಉತ್ತರಕ್ಷಣದಲ್ಲಿ, ಆತನ ಪುರಾತನ ವೀರಸರದಾರರೂ, ನೂರಾರು ಸಿಪಾಯರೂ ಆತನನ್ನು ಕೂಡಿಕೊಂಡರು. ಅದೇ ಪ್ರಕಾರ ಸಾತಾರೆಯ ಪ್ರಚಂಡ ಬಂಡಾಯವನ್ನು ಮುರಿಯುವದಕ್ಕಾಗಿ ಭಾವೂನ ಬಂಧ-ವಿಮೋಚನವಾದ ಕೂಡಲೇ, ಆತನ ಕಡೆಯ ಪೂರ್ವದ ಸಾವಿರಾರು ವೀರಸರದಾರರು ಆತನನ್ನು ಬಂದು ಕೂಡಿದರು. ಸೈನ್ಯಸಾಗರದೊಂದಿಗೆ ಬೋನಾಪಾರ್ಟನು ಮಜಲಿನ ಮೇಲೆ ಮಜಲುಮಾಡಿ ಹ್ಯಾಗೆ ದೊಡ್ಡ ದೊಡ್ಡ ಕಾಳಗಗಳನ್ನು ಮಾಡಿದನೋ, ಅದರಂತೆ ಪರಶುರಾಮಪಂತ ಪಟವರ್ಧನನು ಅಸಂಖ್ಯ ಸೇನಾಸಮೂಹ ಸಮೇತನಾಗಿ ಲೆಕ್ಕವಿಲ್ಲದ ಕಾಳಗಗಳನ್ನು ಮಾಡಿ ಯಶಸ್ವಿಯಾದನು. ಲೋಕೈಕವೀರನಾದ ನೇಪೋಲಿಯನ್ನನಲ್ಲಿದ್ದ ಯಾವತ್ತು ಸರ್ವಮಾನ್ಯ ಗುಣಗಳು ಬ್ರಾಹ್ಮಣ ವೀರಶಿರೋಮಣಿಯಾದ ಭಾವುವಿನಲ್ಲಿ ಮೂರ್ತಿಮತ್ತವಾಗಿದ್ದವು. ಆದರೆ ಬೋನಾಪಾರ್ಟನು ಕೆಲವೆಡೆ

ಗಳಲ್ಲಿ ಸೋತನು; ಆತನು ಕಡೆಗೆ ಹಗೆಗಳಿಗೆ ಶರಣುಬಂದನು; ಆತನಲ್ಲಿ ತಾನೇ ಏಕಚಕ್ರೇಶ್ವರನಾಗಬೇಕೆಂಬುವ ಮಹತ್ವಾಕಾಂಕ್ಷೆಯಿತ್ತು. ಆದರೆ ಸಂಗ್ರಾಮಸಿಂಹನಾದ ಪರಶುರಾಮಭಾವು ಎಲ್ಲಿಯೂ ಸೋಲದೆ, ಕಡೆಗೆ ಪುಣ್ಯಕರವಾದ ಧಾರಾತೀರ್ಥದಲ್ಲಿ ತನ್ನ ಪವಿತ್ರ ಶರೀರವನ್ನು ವಿಸರ್ಜಿಸಿದನು. ಇದಲ್ಲದೆ ಆತನಲ್ಲಿ ಸ್ವಾಮಿಕಾರ್ಯವನ್ನು ಏಕನಿಷ್ಠೆಯಿಂದ ಮಾಡಬೇಕೆಂಬುವ ಸರ್ವಸಮ್ಮತವಾದ ಸದುದ್ದೇಶವಿತ್ತಲ್ಲದೆ, ರಾಜ್ಯಸಂಪಾದನೆಯ ದುರಹಂಕಾರವು ಮೂಲತಃ ಇದ್ದೇ ಇದ್ದಿಲ್ಲ.

ಯಾರು ದೊಡ್ಡ ದೊಡ್ಡ ದೌಡುಗಳನ್ನು ಮಾಡಿ ದೇಶಕೋಶಗಳನ್ನು ಗೆದೆಯಬೇಕಾಗುವದೋ, ಅವರಲ್ಲಿ ಸೈನ್ಯದ ಜನರನ್ನು ತಮ್ಮ ಸಂಪೂರ್ಣ ಅಂಕಿತದಲ್ಲಿಟ್ಟುಕೊಳ್ಳುವ ಗುಣವಿರುವದು ಅತ್ಯಗತ್ಯವಾದದ್ದು. ದಂಡನಾಯಕನು ಮಹಾವೀರನಿದ್ದು ಆತನ ದಂಡಿನ ಜನರು ಅವನಿಗೆ ಅನುಕೂಲರಾಗಿರದಿದ್ದರೆ, ಅವನಿಂದ ಯಾವ ಮಹತ್ಕೃತ್ಯವೂ ಜರಗದು; ಇಷ್ಟೇ ಅಲ್ಲ. ಪ್ರಸಂಗವಿಶೇಷದಲ್ಲಿ ಆತನೇ ಗಂಡಾಂತರಕ್ಕೆ ಗುರಿಯಾಗಿ ಪೇಚಾಡುವನು. ಆದದರಿಂದ ಸೈನ್ಯದ ಜನರನ್ನು ತನಗೆ ಅನುಕೂಲರಾಗಿರುವಂತೆ ಮಾಡಿಕೊಳ್ಳುವದು ಅತ್ಯವಶ್ಯಕವಾದದ್ದು. ಆದರೆ ಹಾಗೆ ಮಾಡುವದಾದರೂ ಪರಮಪ್ರಯಾಸದ ಕೆಲಸವು. ಒಂದು ಕುಟುಂಬದಲ್ಲಿ ೧೦.೧೨ ಜನರು ಇರುವರು. ಅವರು ಅನ್ಯೋನ್ಯ ಅನುಬಂಧಕರು, ಅವರೆಲ್ಲರು ಒಂದೇ ಮನಿಯಲ್ಲಿ ಕೂಡಿ ಉಣ್ಣುವರು; ಮಲಗುವರು; ಮಾತಾಡುವರು. ಹೀಗೆ ಕುಟುಂಬದ ಜನರಲ್ಲಿ ಅತಿನಿಕಟ ಸಂಬಂಧವು ಇರುತ್ತಿದ್ದರೂ, ಅವರೆಲ್ಲರು ಸಂತುಷ್ಟರಾಗುವಂತೆ ಮಾಡಿ ಸಂಸಾರರೂಪ ಹಡಗವನ್ನು ಸಾಗಿಸುವದು ಕಡು ಕಷ್ಟವೆನಿಸುತ್ತದೆ. ಅಂದ ಬಳಿಕ ಅನೇಕ ಜಾತಿಯ ಅನೇಕ ಧರ್ಮದ, ಮತ್ತು ಅನೇಕ ಸ್ಥಳದ ಜನರು ಸೈನ್ಯದಲ್ಲಿ ಕೂಡಿರುವರು. ಒಬ್ಬನು ಪೂರ್ವವೆಂದರೆ, ಮತ್ತೊಬ್ಬನು ಪಶ್ಚಿಮವೆನ್ನುವನು. ಒಬ್ಬನ ಉತ್ಕರ್ಷವು ಮತ್ತೊಬ್ಬನಿಗೆ ಸೈರಿಸದು. ಇಂಥ ಜನಮಿಶ್ರಿತವಾದ ಸೈನ್ಯವನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ತಕ್ಕೊಂಡು ಹೋಗುವದೂ, ಅವರ ಪರಾಕ್ರಮವನ್ನು ಅವಲಂಬಿಸಿ ಅವರನ್ನು ತನ್ನಂತೆ ಮಾಡಿಕೊಂಡು ಅವರ ಕೈಯಿಂದ ಪರರಾಷ್ಟ್ರಗಳ ಕೂಡ ತುಮುಲಯುದ್ಧಗಳನ್ನು ಮಾಡಿಸುವದೂ, ಮತ್ತು ಸ್ವೀಕೃತಕಾರ್ಯವನ್ನು ಕಡೆಗಾಣಿಸಿ ವಿಜಯವನ್ನು ಸಂಪಾದಿಸು

ವದೂ ಎಷ್ಟು ಜಾಣತನದ ಮತ್ತು ಧೂರ್ತತನದ ಕೆಲಸವಿರುವದೆಂಬದನ್ನು ವಾಚಕರೇ ತರ್ಕಿಸಲಿ. ಇದೆಲ್ಲರಲ್ಲಿ ನಮ್ಮ ಚರಿತ್ರನಾಯಕನು ಒಳ್ಳೇ ನಿಷ್ಣಾತನಿದ್ದನು. ಆತನಲ್ಲಿದ್ದ ಜನಮನವಶೀಕರಣ ಬುದ್ಧಿಯು ಹೊಗಳತಕ್ಕಂಥಾದ್ದಿತ್ತು.

ಹಿಡಿದ ಕೆಲಸವನ್ನು ದೃಢನಿಶ್ಚಯ, ದೀರ್ಘಸಾಹಸ ಮತ್ತು ಸತತ ಪ್ರಯತ್ನಗಳಿಂದ ನೆರವೇರಿಸಿ ಬಿಡಬೇಕೆಂಬ ಸದ್ಗುಣವು ಪರಶುರಾಮಭಾವುವಿನಲ್ಲಿ ಸಂಪೂರ್ಣ ಅಂತರ್ಭೂತವಾಗಿತ್ತು. ಆತನು ಮಾಡಿದ ಎಲ್ಲ ಕಾಳಗಗಳಲ್ಲಿ ಮೊಟ್ಟಮೊದಲು ಗೆಲವು ದೊರಕಿತು; ಹೀಗೇನು ಇಲ್ಲ. ಆದರೆ ಆತನು ತನಗೆ ಅಪಜಯದ ಲಕ್ಷಣಗಳು ತೋರಿದರೂ, ಸ್ವಲ್ಪಾದರೂ ನಿರಾಶಿತನಾಗದೆ ಯಶ ಸಂಪಾದಿಸುವದಕ್ಕಾಗಿ ಅಧಿಕ ದೃಢನಿಶ್ಚಯದಿಂದ ಉದ್ಯೋಗ ನಡೆಸುತ್ತಿದ್ದನು. ಅದರಿಂದ ಆತನ ಮನೋರಥಗಳು ಸಫಲವಾಗಿ ವಿಜಯಲಕ್ಷ್ಮಿಯು ಆತನನ್ನು ಪ್ರೇಮಾತಿರೇಕದಿಂದ ಆಲಂಗಿಸುತ್ತಿದ್ದಳು. "उद्योगिनं पुरुषसिंहमुपैति लक्ष्मी:" ಎಂಬ ಭರ್ತೃಹರಿಯ ಉಕ್ತಿಯು ಪರಶುರಾಮಭಾವುವಿನಂಥ ಸತತಉದ್ಯೋಗಪರಾಯಣನಾದ ಪುರುಷಸಿಂಹನ ಆಯುಷ್ಯಕ್ರಮದಲ್ಲಿ ಸಾರ್ಥಕಗೊಳ್ಳದಿದ್ದರೆ, ಆ ಉಕ್ತಿಗೆ ಉಕ್ತಸ್ಥಳವು ಮತ್ತೆಲ್ಲಿ ದೊರಕುವದು? ಕಾದುವ ಇಲ್ಲವೆ ಹಲ್ಲಾಮಾಡುವ ವಿಚಾರವು ನಿರ್ಧರವಾಯಿತೆಂದರೆ, ಆತನು ಅತ್ಯಂತ ಕ್ಷುಲ್ಲಕ ಮತ್ತು ಅತಿ ಮಹತ್ವ ವಿಷಯಗಳ ಕಡೆಗೆ ಪೂರ್ಣ ಲಕ್ಷ್ಯ ಕೊಡುತ್ತಿದ್ದನು. ಸಾರಾಸಾರ ವಿಚಾರಮಾಡದೆ ಆ ವಿಚಾರಶೀಲನು ಯಾವ ಕೆಲಸವನ್ನು ಕೈಕೊಳ್ಳುತ್ತಿದ್ದಿಲ್ಲ; ಕೈಕೊಂಡ ಬಳಿಕ ಅದನ್ನು ಕೊನೆಗಾಣಿಸಿದ ಹೊರ್ತು ಅವನಿಗೆ ನಿದ್ರೆ ಸಹ ಹತ್ತುತ್ತಿದ್ದಿಲ್ಲ. ಸತತಉದ್ಯೋಗ, ದೃಢನಿಶ್ಚಯ, ಸ್ವಾವಲಂಬನ ಇವು ಮೂರು ಕಾರ್ಯಸಿದ್ಧಿಯ ಪ್ರಮುಖ ಮಾರ್ಗಗಳೆಂದು ನೀತಿವಿಶಾರದರು ಹೇಳುತ್ತಿರುವ ಮಾತು ಯಥಾ ಸತ್ಯವಾದದ್ದು.

ಯಾವದೇ ಸಣ್ಣ ದೊಡ್ಡ ಕೆಲಸಗಳಲ್ಲಿ ತಾನು ಮನಸ್ಸು ಹಾಕಿದ ಹೊರ್ತು, ಮತ್ತು ಆ ವಿಷಯವಾಗಿ ಸ್ವತಃ ಶಾರೀರಕಪರಿಶ್ರಮ ಮಾಡಿದ ಹೊರ್ತು, ಆ ಆ ಕೆಲಸಗಳ ಅಗತ್ಯವೂ, ಮಹತ್ವವೂ, ಗೊತ್ತಾಗದೆಂಬುವದನ್ನು ಭಾವು ಚನ್ನಾಗಿ ಬಲ್ಲನು. ಅವನು ತಾನು ಕೈಕೊಂಡ ಕಾರ್ಯ

ಕೆಲಸಗಳನ್ನು ಕಡೆಗಾಣಿಸಲು, ಮೊದಲು ತಾನೇ ಟೊಂಕ ಕಟ್ಟುತ್ತಿದ್ದನು. ತನ್ನ ದಂಡಿನ ಜನರು ಜೀವಿತದಾಶೆದೊರೆದು ರಣಭೂಮಿಯಲ್ಲಿ ಕಾದಬೇಕು; ತಾನು ಮಾತ್ರ ಸ್ವಸ್ಥ ಮೋಜು ನೋಡುತ್ತ ಹಿಂದೆ ಉಳಿಯಬೇಕು ಎಂಬುದು ಆತನಿಗೆ ಸೇರುತ್ತಿದ್ದಿಲ್ಲ. ಶ್ರೀ ಶಿವಛತ್ರಪತಿ, ಶ್ರೀಮಂತ ಬಾಜೀರಾವ ಬಲ್ಲಾಳ, ದಿಲ್ಲೀಶ್ವರನಾದ ಅಕಬರ ಮೊದಲಾದ ವೀರವರರಂತೆ ಆತನು ತಾನೇ ಯುದ್ಧಕ್ಕೆ ಮುಂದರಿದು ಬಂದು ಅರಿಗಳೊಡನೆ ಹೋರಾಡಿ, ತನ್ನ ಜತೆಯ ಜನರಿಗೆ ಕಾಳಗದ ಹದವನ್ನು ಕಲಿಸುತ್ತಿದ್ದನು. ಆತನು ಯಾವಾಗಲೂ ದಂಡಿನ ಮುಂಭಾಗದಲ್ಲಿ ನಿಂತುಕೊಂಡು ಸ್ವತಃ ಪರಾಕ್ರಮವನ್ನು ಪ್ರಕಟಗೊಳಿಸುವದರಿಂದಲೂ, ಉತ್ಸಾಹಜನಕ ಸಮಯೋಚಿತ ಸುರಸ ಸಂಭಾಷಣದಿಂದಲೂ, ತನ್ನ ಸೈನಿಕರಿಗೆ ಉತ್ತೇಜನವನ್ನು ಕೊಡುತ್ತಿದ್ದನು. ಆದ್ದರಿಂದ ಆತನ ಶೂರ ದಂಡಾಳುಗಳಲ್ಲಿ ಒಳ್ಳೇ ಹುರುಪು ಹುಟ್ಟುತ್ತಿತ್ತು. ಅದರ ಯೋಗದಿಂದ ಅವರು ಆವೇಶಭರದಿಂದ ವೈರಿಗಳೊಡನೆ ಕಾದುತ್ತಿರುವಾಗ್ಗೆ ಅವರಿಗೆ ಜೀವದ ಎಚ್ಚರವೇ ಇರುತ್ತಿದ್ದಿಲ್ಲ. ಯುದ್ಧಕ್ಕೆ ಹೊರಡುವ ಮೊದಲು ಪರಶುರಾಮಭಾವು ತನ್ನ ದಂಡಿನ ಜನರನ್ನುದ್ದೇಶಿಸಿ, "ಶೂರರೇ, ನಾನು ನಿಮ್ಮೆಲ್ಲರ ಸರದಾರನೆಂಬುವದು ನಿಜವು. ಆದರೆ ನನ್ನ ಮಾನವನ್ನು ಕಾಯುವದು ಸರ್ವಸ್ವಿ ನಿಮ್ಮ ಕೈಯಲ್ಲುಂಟು. ನಾನು ಒಂದು ಹಿಡಿ ಅನ್ನದ ಮಾಲಿಕನು; ಸರ್ವ ಭೂಷಣವು ನಿಮ್ಮದು. ಯುದ್ಧದಲ್ಲಿ ಮರಣ ಹೊಂದಿದರೆ ದಿವ್ಯತರವಾದ ಸ್ವರ್ಗಸುಖವು ದೊರಕುವದು; ಇಲ್ಲವೆ ವಿಜಯಲಾಭವಾದರೆ, ಇಹಲೋಕದಲ್ಲಿ ಅಖಂಡ ಕೀರ್ತಿಯು ಲಭ್ಯವಾಗಿ, ಪ್ರಭುಕಾರ್ಯ, ದೇಶಕಲ್ಯಾಣಗಳನ್ನು ಸಾಧಿಸಿದಂತಾಗುವದು. ನಮ್ಮ ಪೂರ್ವಜರಾದ ಆರ್ಯವೀರರ ಪರಾಕ್ರಮವನ್ನು ನೆನೆದು ಅವರಂತೆ ಯಶ ಸಂಪಾದಿಸರಿ; ಸೋಲಿಗೆ ಮಾತ್ರ ಗುರಿಯಾಗಬೇಡಿರಿ. ವೀರರೇ, ನೀವೆಲ್ಲರು ಸ್ವಾಮಿಕಾರ್ಯಾರ್ಥ ನಿಮ್ಮ ದೇಹವನ್ನು ಸಮರ್ಪಿಸಿ ದಾಳಿಯ ಕೆಲಸವನ್ನು ಅಂಗೀಕರಿಸಿರುವಿರಿ. ಅಂದ ಬಳಿಕ ಎರಡನೆಯ ವಿಚಾರಗಳಿಗೆ ನುವುಕೊಡದೆ, ಮತ್ತು ಜನರ ನಿಂದೆಗೂ ಸ್ತುತಿಗೂ ಲಕ್ಷ್ಯಗೊಡದೆ ಕರ್ತವ್ಯತತ್ಪರರಾಗರಿ. ವೈರಿಗಳು ಕತ್ತಿಯಿಂದ ಇರಿದರೂ, ಬರ್ಚಿಯಿಂದ ತಿವಿದರೂ, ಅಥವಾ ಸಮರಭೂಮಿಯಲ್ಲಿಯೇ ಶತ್ರುಗಳ ಶಸ್ತ್ರಘಾತಿಗೆ ಗುರಿಯಾಗಿ ಪತನವಾದರೂ ಚಿಂತೆಯಿಲ್ಲ; ರಾಜಕಾರ್ಯ-ದೇಶಹಿತಗಳನ್ನು

ಸಾಧಿಸುವ ಪವಿತ್ರ ಕರ್ತವ್ಯಕ್ಕೆ ವಿಮುಖರಾಗಬೇಡರಿ. ಬಹಳ ಹೇಳುವದೇನು? ನಮ್ಮ ಪೇಶವೆಸರಕಾರದ ಮತ್ತು ವಿಶಾಲ ಮರಾಠಾ ಸಾಮ್ರಾಜ್ಯದ ಸಂಪೂರ್ಣ ವೈಭವ, ಸತ್ಕೀರ್ತಿ, ಐಶ್ವರ್ಯ ಮೊದಲಾದವುಗಳು ನಿಮ್ಮ ಪರಾಕ್ರಮ, ಕಾರ್ಯಕ್ರಮ, ದೃಢನಿಶ್ಚಯ, ಪ್ರಭುಭಕ್ತಿ ಮುಂತಾದ ಉಜ್ವಲ ಗುಣಗಳನ್ನು ಪೂರ್ಣವಾಗಿ ಅವಲಂಬಿಸಿರುವವು. ಪಟುಭಟರೇ ವೀರರಿಗೆ ತಕ್ಕ ವೀರಾವೇಶದಿಂದ ಕಾದಿ, ವೈರಿಗಳನ್ನು ಗೆದ್ದು, ಪೇಶವೆಯರ ವಿಜಯ ಧ್ವಜವನ್ನು ಸ್ವದೇಶ-ಪರದೇಶಗಳಲ್ಲಿ ಮೆರೆಸಿ, ಆರ್ಯಕುಲದ ನಿಷ್ಕಲಂಕ ಕೀರ್ತಿಯನ್ನು ಕಾಪಾಡಿಕೊಂಡು ಧನ್ಯರಾಗಬೇಕಲ್ಲಗೆ, ಹಗೆಗಳ ಅಟ್ಟಹಾಸಕ್ಕೂ, ಅವರ ಪರಾಕ್ರಮಕ್ಕೂ ಬೆದರಿ ಅವರಿಗೆ ಸೊಪ್ಪು ಹಾಕಬಾರದು. ಸಾರಾಂಶ ‘ ಕೊಲ್ಲಬೇಕು ’ ಇಲ್ಲವೆ ‘ ಸಾಯಬೇಕು ’ ಎಂಬ ದೃಢಮನಸ್ಸಿನಿಂದ ಯುದ್ಧ ಮಾಡಿದರೆ, ಜಯವಾದರೂ ಸಿಗುವದು; ಅಥವಾ ಸ್ವರ್ಗವಾದರೂ ದೊರಕುವದು. ಎಂದಿದ್ದರೊಂದು ದಿವಸ ಹೋಗುವ ಈ ಜಡದೇಹಕ್ಕೆ ಸ್ವಲ್ಪಾದರೂ ಮೋಹಗೊಳ್ಳದೆ, ಪ್ರಭುಕಾರ್ಯಕ್ಕಾಗಿ ಅದನ್ನು ಸವಿಸಿ, ಕೃತಾರ್ಥರಾಗುವವರೇ ಧನ್ಯರು, ಅವರೇ ರಾಜಭಕ್ತರು, ಎಂಬ ಹೆಸರಿಗೆ ಪಾತ್ರರು ” ಎಂದು ಸಾರಿ ಹೇಳುತ್ತಿದ್ದನು. ಈ ಪ್ರಕಾರದ ಪ್ರೋತ್ಸಾಹಜನಕ, ಆವೇಶಮಯ ಅಸ್ಖಲಿತ ಮತ್ತು ವೀರರಸ ಪ್ರಧಾನವಾದ ಸಂಭಾಷಣವನ್ನು ಕೇಳಿದೊಡನೆ, ಭಾವೂನ ದಂಡಿನ ಜನರೆಲ್ಲರೂ ಒಳ್ಳೇ ಆವೇಶಗೊಳ್ಳುತ್ತಿದ್ದರು. ಶೂರಸರದಾರರು ಎದೆಯುಬ್ಬಿಸಿ, ಶಸ್ತ್ರಗಳನ್ನು ಝಳಪಿಸುತ್ತ ಸಿಂಹನಾದಮಾಡುತ್ತ ಯುದ್ಧಕ್ಕೆಸಿದ್ಧರಾಗುತ್ತಿದ್ದರು. ಸಿಪಾಯಿಜನರು ಸಿಟ್ಟಿನಿಂದ ಸಂತಪ್ತರಾಗಿ, ಹುಬ್ಬು ಹಾರಿಸುತ್ತ, ಕೊನೆಮೀಸೆಗಳನ್ನು ಕುಣಿಯಿಸುತ್ತಿದ್ದರು. ಹೀಗೆ ಅವರಲ್ಲಿ ವಿಲಕ್ಷಣ ವೀರಶ್ರೀಯು ಹುಟ್ಟಿ, ಅದರ ಯೋಗದಿಂದ ಅವರು ವೈರಿಗಳನ್ನು ಹೊಡೆಯಲೊ, ಬಡಿಯಲೊ, ಕಡೆಯಲೊ, ಎಂದು ಕರಕರನೆ ಹಲ್ಲು ಮಸೆಯುತ್ತ, ಒಮ್ಮೆ ನಮ್ಮ ಸರದಾರ ಶಿರೋಮಣಿಯಾದ ಪರಶುರಾಮಪಂತನು ಮುಂದೆ ನಡೆದನೆಂದರೆ, ಅನ್ಯ ವಿಚಾರಕ್ಕೆಂಬು ಕೊಡದೆ, ಯುದ್ಧವನ್ನೇ ಧ್ಯೇಯವಾಗಿಟ್ಟುಕೊಂಡು ಅವರೆಲ್ಲರು ಅವನನ್ನು ಹಿಂಬಾಲಿಸಿ, ರಂಗಭೂಮಿಯಲ್ಲಿ ಆಯುಧಪಾಣಿಗಳಾಗಿ ಶಡ್ಡು ಹೊಡೆದು ನಿಂತು, ರಿಪುಗಳೊಡನೆ ಕಲಿತನದಿಂದ ಕಾದುತ್ತ, ಸಾಕ್ಷಾತ್ ಯಮಸ್ವರೂಪದಿಂದ ಶತ್ರುದಳದಲ್ಲಿ ತಾಂಡವವನ್ನು ನಡೆಸುತ್ತಿದ್ದರು.

ವಾಚಕರೇ, ಇಲ್ಲಿಯವರೆಗೆ ಪರಶುರಾಮಪಂತ ಪಟವರ್ಧನನ ಗುಣಾನುವಾದವನ್ನು ಮಾಡಿದೆವು; ಇಷ್ಟರಮೇಲಿಂದ ಆತನಲ್ಲಿ ದೋಷಗಳನ್ನು ಹುಡುಕಹತ್ತಿದರೆ, ಯಾವ ದೋಷವೂ ಹೊರಡಲಾರದೆಂದು ನಮ್ಮ ಅಭಿಮತವಲ್ಲ. ಯಾಕಂದರೆ ಆತನು ಮಾನವನು. ಅಂದಬಳಿಕ "ಪ್ರತಿಬಬ್ಬನಲ್ಲಿ ಒಂದಿಲ್ಲೊಂದು ಬಗೆಯ ವ್ಯಂಗಗಳು ಇರುವವು" ಎಂಬ ಜಗತ್ತಿನ ನಿಯಮಕ್ಕೆ ಆತನು ಅಪವಾದವಾಗಿರುವ ಬಗೆ ಯಾವದು? ಮನುಷ್ಯನು ಪರಿಪೂರ್ಣನಲ್ಲ. ಅವನು ಎಂಥ ಘನವಿದ್ವಾಂಸನೂ, ನೀತಿವಿಶಾರದನೂ ಇದ್ದರೂ ಆತನಲ್ಲಿ ಕೆಲವೊಂದು ದೋಷವು ಇದ್ದೇ ಇರುವದು. ಕೇವಲ ದಿವ್ಯಶಕ್ತಿಸಮನ್ವಿತರಾದ ಇಂದ್ರ-ಚಂದ್ರ-ಸೂರ್ಯ ಮೊದಲಾದ ದೇವಾನುದೇವತೆಗಳಲ್ಲಿ ಸಹ ಒಂದೊಂದು ಕುಂದು ಇದ್ದೇ ಇರುವದು. ಸರ್ವವ್ಯಾಪಕನೂ, ಸರ್ವಶಕ್ತನೂ, ಸೃಷ್ಟಿ-ಸ್ಥಿತಿ-ಲಯಕರ್ತನೂ, ಮಾಯಾಮೋಹಗಳಿಲ್ಲದವನೂ ಆದ ಶ್ರೀವೈಕುಂಠಪತಿಯು ಮಾತ್ರ ಸಕಲ ಸದ್ಗುಣಸಂಪೂರ್ಣನು. ಪರಶುರಾಮಭಾವು ಜುನ್ನರದಿಂದ ಬಾಜೀರಾಯನನ್ನು ಕರಕೊಂಡು ಬಂದನು; ಆಗ್ಗೆ ಅವನು ಶಪಥಕ್ರಿಯೆಗಳನ್ನು ಮಾಡಿ ಬಾಜೀರಾಯನಿಗೆ ಅಭಯವಚನವನ್ನು ಕೊಟ್ಟಿದ್ದನು; ಆದರೆ ಭಾವು ಅದನ್ನು ಪಾಲಿಸಲಿಲ್ಲ; ಇಷ್ಟೇ ಅಲ್ಲ, ಆತನು ಬಾಜೀರಾಯನ ವಿನಾಶಕ್ಕುಪಕ್ರಮಿಸಿದನು. ಇದೆಲ್ಲ ನಾನಾಫಡಣವೀಸನ ಕುಹಕತನದ ಪರಿಣಾಮವೆಂಬುವದು ನಿಜವು. ಆದರೂ ಭಾವೂನ ಕೈಯಿಂದ ಇದೊಂದು ದೊಡ್ಡ ಪ್ರಮಾದವು ಘಟಿಸಿತು. ಹಿಂದೆ ೧೧ ನೆಯ ಅಧ್ಯಾಯದಲ್ಲಿ ಹೇಳಿದಂತೆ ಪರಶುರಾಮಪಂತನು ಕೆಲವುಕಾಲ ಪೇಶವೆಸರಕಾರದ ಮುಖ್ಯ ಕಾರಭಾರಿಯಾಗಿದ್ದನು. ಅದರಲ್ಲಿ ಆತನ ಬೆಳಕು ಚನ್ನಾಗಿ ಬೀಳಲಿಲ್ಲ. ಆತನಿಗೆ ಶೂರತ್ವಗುಣವು ಹೆಚ್ಚು ಒಪ್ಪುತ್ತಿತ್ತು. ಆದರೆ ಆತನು ರಾಜಕಾರಣದಲ್ಲಿ ಅಷ್ಟೊಂದು ಕುಶಲನಲ್ಲದರಿಂದ ಮಂತ್ರಿಪದವು ಆತನಿಗೆ ಶೋಭಿಸುತ್ತಿದ್ದಿಲ್ಲ. ಆದರೆ ಈ ಅಲ್ಪಸ್ವಲ್ಪ ದೋಷಗಳು ಚಂದ್ರನ ಕಲಂಕವು ಆತನ ಸಾತ್ವಿಕಗುಣದ ರಾಶಿಯಲ್ಲಿ ಅಡಗುವಂತೆ, ಪರಶುರಾಮಪಂತನ ಅಪ್ರತಿಮ ಪ್ರತಾಪ, ಅಸದೃಶ ಔದಾರ್ಯ, ಅಚಲ ಧೈರ್ಯ, ಅಕ್ಷಯ ಶೌರ್ಯ, ಅಚ್ಚಳಿಯದ ಗಾಂಭೀರ್ಯ, ...ಮಿಲ್ಲದ ಸಹನಶೀಲತ್ವ, ಸರ್ವೋತ್ತಮವಾದ ಏಕಪತ್ನಿವ್ರತ, ನೈಸ...ರೋಪಕಾರಬುದ್ಧಿ ಇತ್ಯಾದಿ ಸದ್ಗುಣಗಳ ಸಮೂಹದಲ್ಲಿ ಅಡಗಿ...ರಲಾರವೆಂದು ಪ್ರಾಂಜಲಬುದ್ಧಿಯಿಂದ ಒಪ್ಪಬೇಕಾಗುವದು.

ಗುಣ-ದೋಷವಿಚಾರ ಮಾಡತೊಡಗಿದರೆ ನಮ್ಮ ಚರಿತ್ರನಾಯಕನಲ್ಲಿ ಗುಣಗಳ ಪ್ರಮಾಣವೇ ಹೆಚ್ಚು ಇತ್ತೆಂಬದು ನಿರ್ವಿವಾದವಾದದ್ದೆಂದು ಪೂರ್ವೋಕ್ತ ಕಥಾನಕದಿಂದ ವ್ಯಕ್ತವಾಗುತ್ತದೆ. ಅದರಿಂದ ಆತನಲ್ಲಿದ್ದ ಅಲ್ಪಸ್ವಲ್ಪ ದೋಷಗಳ ಮೇಲೆ ದೃಷ್ಟಿಯಿಡದೆ, ಆ ಮಹಾಭಾಗನು ಮಾಡಿದ ಸಕಲ ಸತ್ಕೃತ್ಯಗಳ ಕಡೆಗೆ ವಾಚಕ ಮಹಾಶಯರು ಗಮನಕೊಡಬೇಕೆಂದು ನಾವು ಬಿನ್ನವಿಸುತ್ತೇವೆ. ಯಾವನು ತನ್ನ ನೆಲೆಯಿಲ್ಲದ ಪರಾಕ್ರಮದ ಬಲದಿಂದ ಆಸೇತು-ಹಿಮಾಚಲ ಪ್ರಖ್ಯಾತಿಯನ್ನು ಹೊಂದಿ, ತನ್ನ ಪ್ರತಾಪರವಿಯನ್ನು ಬೆಳಗಿಸಿದನೋ, ಯಾವನು ಮರಾಠಾ ಸಾಮ್ರಾಜ್ಯದ ಸಂಪೂರ್ಣ ಅಭಿಮಾನ ಹಿಡಿದು, ಲೆಕ್ಕವಿಲ್ಲದ ಕಾಳಗಗಳನ್ನು ಮಾಡಿ, ವೈರಿಗಳನ್ನು ಗೆದ್ದು ಸದಾ ಯಶಸ್ವಿಯೆನಿಸಿದನೋ, ಯಾವನು ಶಿಂದೆ, ಹೋಳಕರ ಮುಂತಾದ ಮಹಾ ಮಾಹಾ ವೀರರನ್ನು ಮೂಲಿಗೊತ್ತಿ, ಐಶ್ವರ್ಯಗಿರಿಯ ಶಿಖರವನ್ನು ಏರಿದನೋ, ಯಾವನು ತನ್ನ ಅತುಲ ಪ್ರತಾಪಪ್ರಭಾವದಿಂದ ಮರಾಠಾ ಸಾಮ್ರಾಜ್ಯದ ಮತ್ತು ಪೇಶವೆಸರದಾರರ ಮುಖ್ಯವಾಗಿ ಬ್ರಾಹ್ಮಣ ವೀರರ ಯಶೋದುಂದುಭಿಯನ್ನು ಆರ್ಯಾವರ್ತದಲ್ಲಿಯೂ, ಅದರಾಚೆಯ ದೇಶಗಳಲ್ಲಿಯೂ, ಅವ್ಯಾಹತವಾಗಿ ಮೊಳಗಿಸದನೋ, ಯಾವನ ಅಕ್ಷಯ ಶೌರ್ಯಸಾಹಸಗಳನ್ನು ಪ್ರತ್ಯಕ್ಷ ಕಂಡು ಸ್ವಪಕ್ಷ-ಪರಪಕ್ಷದವರು ಸರಿಯಾಗಿ ಕೊಂಡಾಡಿದರೋ, ಯಾವನ ರಣಪಾಂಡಿತ್ಯವನ್ನು ದೇಶೀಯರೂ, ವಿದೇಶೀಯರೂ ಹೊಗಳಿದರೋ, ಯಾವನು ತನ್ನ ಕರ್ತವ್ಯ-ಕರ್ಮದ ಮೇಲೆ ದೃಷ್ಟಿಯನ್ನಿಟ್ಟು, ಸ್ವಂತ ಲಾಭಾಲಾಭಗಳನ್ನು ನೋಡದೆ, ಕುಹಕವಿಚಾರಕ್ಕೊಳಗಾಗದೆ, ಸ್ವಾಮಿಕಾರ್ಯತತ್ಪರನಾಗಿ ಅರ್ವಾಚೀನ ಇತಿಹಾಸದಲ್ಲಿ ರಾಜಭಕ್ತನೂ, ದೇಶವತ್ಸಲನೂ ಎಂದು ಚಿರಸ್ಮರಣೀಯನಾಗಿರುವನೋ ಮತ್ತು ಯಾವನು ಅಜರಾಮರವಾದ ಕೀರ್ತಿಯನ್ನು ತನ್ನ ಹಿಂದೆ ಬಿಟ್ಟು, ಕಡೆಗೆ ಪವಿತ್ರ ಧಾರಾತೀರ್ಥದಲ್ಲಿ ತನ್ನ ವಿನಶ್ವರವಾದ ದೇಹವನ್ನು ವಿಸರ್ಜಿಸಿದನೋ ಆ ಪ್ರೌಢಪ್ರತಾಪಿ ಪುಣ್ಯಶಾಲಿಯಾದ ಪಟವರ್ಧನ ಪುರುಷಶ್ರೇಷ್ಠ ಪರಶುರಾಮಪಂತಭಾವು ಎಷ್ಟು ದೊಡ್ಡವನು, ಎಷ್ಟು ಮಾನ್ಯನು ವ[illegible] ಎಂಥ ಘನಪರಾಕ್ರಮಿಯು ಎಂಬದನ್ನು ವಾಚಕ-ಮಹಾನುಭಾವರೇ[illegible] ರಮಾಡಿ ತಿಳಕೊಳ್ಳಲಿ. ಈ ಪ್ರಕಾರ ಮಹಾಮಹಿಮನಾದ ಪ[illegible] ಪಂತಭಾವು ಪಟವರ್ಧನನು ಸಮಸ್ತ ಮಹಾರಾಷ್ಟ್ರ ಮತ್ತು [illegible] ಜನರಿಗೆ ಅತ್ಯಂತ ಪೂಜ್ಯನಾಗಿರುವನು.

ಸಾರಾಂಶ—ನೈತಿಕ, ಧಾರ್ಮಿಕ ಮತ್ತು ಪರಾಕ್ರಮಗುಣಗಳ ಖನಿಯಂತಿರುವ ಪರಶುರಾಮಪಂತ ಪಟವರ್ಧನನ ಚರಿತ್ರೆಯಿಂದ ನಾವು ಈಶ್ವರಭಕ್ತಿ, ಅತಿಥಿಭಕ್ತಿ, ಪಿತೃಭಕ್ತಿ, ರಾಜಭಕ್ತಿ, ಸಹನಶೀಲತ್ವ, ಸರ್ವಭೂತಸಹಾನುಭೂತಿ, ಏಕಪತ್ನೀವ್ರತ, ದಾತೃತ್ವ, ಪರೋಪಕಾರ, ಸ್ವಕುಲಾಭಿಮಾನ, ಸದಾಚಾರಪ್ರೀತಿ, ಸ್ವಜನಪ್ರೇಮ, ಸ್ವಾವಲಂಬನ ಇತ್ಯಾದಿ ಸದ್ಗುಣಗಳನ್ನು ಸ್ವೀಕರಿಸುವ ಸಾಧನವಿಡಬೇಕು. ಆತನು ಎಂಥ ಸಂಕಟಗಳು ಬಂದರೂ ರಾಜನಿಷ್ಠೆಯನ್ನು ಬಿಡಲಿಲ್ಲ. ಅದರಂತೆ ನಾವು ಕೃಪಾಘನರಾದ ಆಂಗ್ಲ ಸಾರ್ವಭೌಮರಾಜರೊಡನೆ ನಿಷ್ಠೆಯಿಂದ ನಡೆದು ಆಂಗ್ಲಪ್ರಭುತ್ವದ ಹಾಗೂ ನಮ್ಮ ಭಾರತಭೂಮಿಯ ಉತ್ತರೋತ್ತರವನ್ನು ಸಾಧಿಸಿಕೊಳ್ಳಬೇಕು.

ನಮ್ಮ ಆರ್ಯಭಗಿನಿಯರು ಪರಶುರಾಮಭಾವೂನ ತಾಯಿಯ ಮತ್ತು ಆತನ ಧರ್ಮಪತ್ನಿಯ ಅನುಕರಣೆಯನ್ನು ಮಾಡಿ, ಅವರಂತೆ ಹೆಚ್ಚಳವನ್ನು ಹೊಂದಲಿಕ್ಕೆ ಯತ್ನ ಮಾಡಬೇಕು. ಒಟ್ಟಿನಮೇಲೆ ಕೆಳಗೆ ಬರೆದ ಕವಿವಚನವು ಯಥಾ ಸತ್ಯವಾಗಲೆಂದು ಜಗನ್ನಿಯಾಮಕ ದಯಾಘನನಾದ ಶ್ರೀಸೀತಾಪತಿ ರಾಮಚಂದ್ರಪ್ರಭುವಿನ ಪಾದಾರವಿಂದಗಳನ್ನು ಅನನ್ಯಭಾವದಿಂದ ಸ್ಮರಿಸಿ ಈ ಚರಿತ್ರೆಯನ್ನು ಮುಗಿಸುತ್ತೇವೆ.

ಚಂಪಕಮಾಲಾ.

ಬೆಳೆಯಲಿ ಭಾರತೀಯರೊಳು ಕಲ್ಪತರೂಪಮವಿದ್ಯೆದೇಳ್ಗೆಯುಂ ।
ತಿಳಿದು ಸ್ವಧರ್ಮತತ್ವವನು ವರ್ತಿಸಲಾರ್ಯಜನಂ ಸುಮಾರ್ಗದಿಂ ॥
ಬಲಿಯಲಿ, ದೇಶಸಂಪದವು, ಸೇವಿಸಲೆಲ್ಲರು ಜಾರ್ಜಭೂಪರಂ ।
ಕಲಿಗಳು ಹುಟ್ಟಿ ರಾಜಿಸಲಿ, ಪೆರ್ಚಲಿ ಕನ್ನಡನಾಡಭಾಷೆಯುಂ ॥ ೧ ॥

ಶ್ರೀಕೃಷ್ಣಾರ್ಪಣಮಸ್ತು.

ಸಂಪೂರ್ಣಂ.

